ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ನ ಭೇತಿರೇ ಫೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ಗರಳ ಮಥಿಸಲು ಸುರರಿಗದರಿಂ । ಹರುಷವಾಯಿತೆ' ಮತ್ತೆ ವಿಶ್ವದ ಸುಡುತ ಬರುತಿರುವ ॥
ಸುಧೆಯನು । ಮರೆತು ಕ್ಷುದ್ರರ ತೆರದಿ ಕೀಳತೆರೆ । ತೆರಳ ಬಲ್ಲರೆ ಕೆರೆದು ಧೀರರು ನಿಶ್ಚಿತಾರ್ಥವನ । ೧ ।

ಮಂಗಳೂರು ತಾ ೧೩ನೇ ಶುಕ್ರವಾರ ಒಕ್ಟೋಬರ ೧೯೩೩ (13 10 '33) ಸಂಚಿಕೆ ೬೦

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—Coondapoor, Mangalore, Shimoga & Madras

ಹೆಡ್ ಆಫೀಸು:—ಉಡುಪಿ. ಶಾಖೆ—ಕುಂದಾಪುರ ಮಂಗಳೂರು ಶಿವಮೊಗ್ಗ ಮದ್ರಾಸು

Authorised Capital Rs 3,50,000- Rs 2,25,000-

ನಿಯಮಿತ ಮೂಲಧನ ರೂ 3,50,000- ಶೇರು ಕೊಟ್ಟು ವಸೂಲಾದ ಮೂಲಧನ ರೂ 2,25,000

STATEMENT OF ASSETS & LIABILITIES AS ON 30TH SEPTEMBER 1933

Capital and Liabilities		Property and Assets	
1 **Paid up Capital**	Rs. 2,25,000-0 0	1 Bank Premises Buildings Furniture etc Rs	86 9
2 **Reserve and other funds**	„ 2,35,000 0-0	2 Investment	0 65 6
3 **Deposits**	22 02 425 12 9	3 Authorised Investments	2
4 **Due to Bankers**	„ 18 722- 6 4	4 Bills for collection	
5 **Sundries**	„ 92,674 3 8	5 Sundries	120
6 **Bills for collection per contra**	13 385 8 6	6 Cash on hand & with bankers	
Total	27,87,207 15 3	Total	[illegible]

UDIPI. 3-10-'33.

N. ANANDA RAO
Secretary & Manager

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಟ್ಟಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಹಲ್ಲುನೋವು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ ಎಲ್ಲಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು—ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲಹಚ್ಚುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ, ಡಜನಿಗೆ ರೂ. 3—8—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸದೃಢರೂ ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೇ. ಟಿ. ಡೋಂಗರೆ ಕಂಪೆನಿ
ಕಂಪೆನಿ

ಓದಲಿಕ್ಕೂ, ಜಾಹೀರಾತು ಕೊಡಲಿಕ್ಕೂ
ಮಕ್ಕಳಿಗೂ, ದೊಡ್ಡವರಿಗೂ ಹಳ್ಳಿಯವರಿಗೂ, ಪೇಟೆಯವರಿಗೂ, ವಿದ್ಯೆ
ಇದ್ದವರಿಗೂ ಇಲ್ಲದವರಿಗೂ
ಬೇಕಾದ,
ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ
ಪತ್ರಿಕೆ

'ಸ್ವದೇಶಾಭಿಮಾನಿ'

27 ವರ್ಷಗಳ ನವತರುಣ!



ಪ್ರತಿದಿನವೂ ತಾಯಿಗೂ

ಓವಲ್ಟಿನ ಅತ್ಯಗತ್ಯ

ಮಗು ಹುಟ್ಟುವ ಮೊದಲೂ ಹುಟ್ಟಿದ ನಂತರವೂ ತಾಯಿಯು ದಿನಂಪ್ರತಿ 'ಓವಲ್ಟಿನ'ನ್ನು ಕುಡಿಯಬೇಕು ಇದರಲ್ಲಿ ಪರಿಪೋಷಣೆಯ ಸಾರವಿದ್ದು ಸುಖವೂ ಆರೋಗ್ಯವೂ ಶೀಘ್ರವಾಗಿಯೇ ಲಭಿಸುತ್ತದೆ ಓವಲ್ಟಿನ್ ಸೇವನೆಯಿಂದ ಎದೆ ಹಾಲು ಹೆಚ್ಚುತ್ತದೆ ಇದು ರುಚಿಕರವಾದ ಪಾನೀಯ ಮಗು ಸಾಕುವ ಮತ್ತು ತುಂಬಿದ ತಾಯಿಗಳಿಗೆ ಉಪಯೋಗಕಾರಿ

'ಓವಲ್ಟಿನ್' ಅಮೋಘವಾಗಿದ್ದ ಪ್ರ್ಯಕಿಸವಾನ ನಾ ದಿಂದಲೂ ಬೆಳೆ ಒಳ್ಳೆ ಮೋಲ್ಟ್, ದನದ ಕೆನೆ ಹಾಲ ಮತ್ತು ಕೋಳಿಮೊಟ್ಟೆಗಳಿಂದ ತುಂಬಿದೆ ತಯಾರಿಯಲ್ಲಿ ಇದಕ್ಕೆ ಹಸ್ತಸ್ಪರ್ಶವಾಗುವುದಿಲ್ಲ

OVALTINE
TONIC FOOD BEVERAGE

ತಾಯಿಗಳು ಮಕ್ಕಳಿಗೆ ಎದೆಹಾಲು ಕೊಟ್ಟು ಸಲಹಲು ಸಹಕಾರಿ

ಎಲ್ಲಾ ಕೆಮಿಸ್ಟ್ ಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ
ಏಜಂಟರು ಜೇಮ್ಸ್ ರೈಟ್ ೯ ಎ ರಸೆಲ್ ಸ್ಟ್ರೀಟ್ ಕಲ್ಕತ್ತಾ
ದಕ್ಕ ಬೊಂಬಾಯಿ ಮದ್ರಾಸು ರಂಗೂನುಗಳಲ್ಲಿ

OL 176

1—9—33

ಪಂಡಿತ ಬಿ ಆರ್. ಗೋವಿಂದ ರಾಜುಲು ನಾಯುಡುಯವರ

ಮೋಹ ಸಂಜೀವಿನಿ ಎಣ್ಣೆ.

ಪತಿವ್ರತೆಯಾದ ತನ್ನ ಹೆಂಡತಿಯಲ್ಲಿಯೇ ಅತಿಸಂಭೋಗ ಮಾಡುವುದರಿಂದ ಅನರ್ಥಕರವಾದ ಅನೇಕ ರೋಗಗಳು ಬರುತ್ತಿರುವಲ್ಲಿ ದುಷ್ಟ ಸ್ತ್ರೀಯರಲ್ಲಿ ತಮ್ಮ ಆಯುವೆಂಬ ಅಮೋಘ ವಸ್ತುವನ್ನು ಧಾರೆಯೆರೆದು ಹಾಳುಮಾಡಿಕೊಂಡು ಮೇಹವ್ರಣ, ಬಿಳುಪು ಭಗಂದರ ತೊಡೆವಾಳ, ಟಾಕಿ ಮುಸುಕು ಪರಮ ಪವಿತ್ರ ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ನಿರಂತರವೂ ಬಾಧೆ ಪಡುತ್ತಿರುವ ನಮ್ಮ ದೇಶೀಯರಾದ ಯುವಜನಕ್ಕಾಗಿ ಈ ಔಷಧವು ಅಮೃತಕಲಶದಂತೆ ನವಜೀವನವನ್ನೇ ಕಲ್ಪಿಸತಕ್ಕದ್ದಾಗಿರುವುದು ...

[illegible]

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು ... [illegible]

[illegible]

ಸರ್ಕಾರದ ಟೇಬಲ್‌ಗಳ ಏಡು ಸಮುದ್ರಗಳನ್ನು ದಾಟಿದ ... ಸ್ವಾಮಿಯವರು ... ಪುನಃ ... ಶ್ವೇತಪತ್ರ ... ನನಗೆ ಬೇಡವೆಂದೇ ಅವರ ಹೇಳಿಕೆ ... ಅಂಗಗಳು ಮಾತ್ರ,

ಶ್ವೇತಪತ್ರ ಬರಲಿ,
ಶ್ವೇತ ಜನರು ಇರಲಿ,
ಜನರೆಲ್ಲ ಹೋರಲಿ,
ಸತ್ತು ಬಿದ್ದು ಬಳಲಿ,
ಬುದ್ಧಿಯೊಂದು ಬರಲಿ,

ಎಂದು ತುತ್ತೂರಿ ಊದುತ್ತಾರೆ ರಾಷ್ಟ್ರಬಂಧುವಿನ ವಾಚಕರಲ್ಲೊಬ್ಬನ ತುತ್ತೂರಿಗಿಂತಲೂ ಮೇಲಾದುದು ಇದು! ಎರಡು ತುತ್ತೂರಿಗಳ ಪೋಟಿಗಳೂ ಬೆಳೆಯಲಿ!

× × × ×

ಬ್ರಿಟಿಷರ ವಿನಾ ಹಿಂದೀಯರಿಗೆ ಮೋಕ್ಷವಿಲ್ಲೆಂದೇ ಆಂಗ್ಲರ ಮಾತು! ನಿಜ! ನಿಜ! ಅದಕ್ಕಾಗಿಯೇ ಅವರು ಬ್ರಿಟಿಷ ತರುಣಿಯನ್ನು ೧೮ ವರ್ಷಗಳ "ವೈಧವ್ಯ"ವನ್ನನುಭವಿಸಿದ ನಂತರ ವಿವಾಹವಾದುದು!

× × × ×

ಚರ್ಚಿಲ್ಲರಿಗೆ ಮೂವತ್ತು ವರ್ಷದ ಮಗನಿದ್ದಾನೆ, ಅವನೂ ಹೇಳುವುದು ಶೌಕತಾಲಿಯವರಂತೆಯೇ 'ನಾವಿಲ್ಲದಿದ್ದರೆ ಹಿಂದೀಯರು ಶಾಜಾ ಶೀಪ್ (ಕುರಿಗಳು) ಆಗುತ್ತಿದ್ದರು' ಎಂದು ಅವನ ಮಾತು.

× × × ×

ಪಾಪ! ಈ ಬ್ರಿಟಿಷರು ಹಿಂದೀಯರಿಗೆ ಬುದ್ಧಿ ಕಲಿಸಿ ಕಲಿಸಿ ಬಳಲಿದರು! ತಂದೆಯಂತೆ ನಮ್ಮನ್ನು ನೋಡಿದರು! "ಮಕ್ಕಳಿಗೆ ತಂದೆ ಬಾಲ್ಯದೊಳಕ್ಕೆ ವಿದ್ಯೆಗಳ ಕಲಿಸದಿರ್ದೊಡೆ ಕೊಂದಂ" ಎಂಬುದನ್ನು ಸ್ಮರಣೆಯಲ್ಲಿಟ್ಟು ಇವರು ನಮ್ಮನ್ನು ಸಾಕಿದರು ಪಾಪ ಇವರಿಗೆ ಈಗ ವಿಶ್ರಾಂತಿಯು ಅಗತ್ಯ

× × × ×

ದೇಶದಲ್ಲಿ ಜಾತಿ ಮತ ಭೇದಗಳು ತೊಲಗದೇಕಂತೆ! ಅಂದರೆ ಮಾತ್ರ ದೇಶಕ್ಕೆ ಮುಕ್ತಿಯೆಂದು ಆಂಗ್ಲರ ಉಪದೇಶ ಈ ಮಾತು ವಟಿಕನಲ್ಲಿ ಮಾತ್ರ ಆಂಗ್ಲರು ಅಮೇರಿಕಕ್ಕೆ ತೆರಳುವ ಸಮಯದಲ್ಲಿ ನಡೆದ ಅಖಿಲ ಪಕ್ಷೀಯ ಪಂಕ್ತಿಗೆ ಮಾತ್ರ ಇವರಿಲ್ಲ! ಒಳ್ಳೆಯ ಮಾತು!

× × × ×

ಹಿಂದೂದೇಶದಲ್ಲಿ ಮತಭೇದವು ಹೋಗುವುದಂತಿರಲಿ, ಒಂದೊಂದು ಜಾತಿಯಲ್ಲಿರುವ ಅಂತರ್ಭೇದವು ಕೂಡಾ ಮಾಯವಾಗಲು ಸಾಧ್ಯವೇ ಇಲ್ಲ ಮತಭೇದವೆಂಬುದು ಹಿಂದೂಗಳ ರಕ್ತದಲ್ಲಿ ಸೇರಿಕೊಂಡಿದೆ ಹಾಗಿರುವಾಗ "ಮತಭೇದವು ತೊಲಗಲಿ!" ಎಂಬ ಮಾತಿನ ಅರ್ಥವು "ಆಕಾಶವು ಕೆಳಗೆ ಬರಲಿ! ಮನುಷ್ಯನಿಗೆ ರೆಕ್ಕೆ ಬರಲಿ!" ಎಂಬಂತೆಯೇ ಆಗಿದೆ!

× × × ×

"ಹಿಂದೂಸ್ಥಾನವು ಸುಖದ ಪದವೀಗೇರಬೇಕೆಂಬಾಪೇಕ್ಷೆ ಈ ಭೇದಗಳು ಹೋಗಬೇಕೆಂಬುದಿಲ್ಲ ಎಲ್ಲಕ್ಕಿಂತಲೂ ಪ್ರಾಮುಖ್ಯವಾಗಿ, ಜನರ ಆರ್ಥಿಕ ಸ್ಥಿತಿಯು ಉತ್ತಮವಾಗಬೇಕು!

× × × ×

ಹೀಗೆಂದು ಹೇಳುವವರು ಯುವಕರಲ್ಲಿ ... "ಮುದುಕರಲ್ಲಿ" ಗಾಂಧೀಜಿಯವರು! ... ಹನ್ನೊಂದೆಂದು "ಗೋವಿಂದಾ" ಎನ್ನುವವರು!

× × × ×

[illegible]

Canara Bank Limited.

Established 1906

Authorised Capital	10,00,000 - 0 - 0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office—Bunder Mangalore   Local Office—City & Bunder

BRANCHES— Bombay, Cochin, Calicut, Ernaculam, Alleppey, Chikmagalur, Ganguli, Coondapoor, Udipi Karkal Puttur, Kasaragod, & Buntwal Out agency

Interest is allowed on Current Fixed and Saving Bank Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

ಮಂಗಳೂರು, 12—7—33

A Madhava Pai,
Secretary

East & West Insurance Company Ltd.,

(Incorporated in India 1913)

Head Office—EAST & WEST BUILDINGS, FORT, BOMBAY.

Eastern Company with striking features
Attractive plans
Sympathetic & Liberal
Treatment to Policy Holders
&
Wide popularity
Economic Management
Sound investment
That is why you should select "East & West"
Ere you invest in the rest

Interim Bonus Declared Rs 15 Per 1000 On whole life & Endowment Policies

For particulars and Agency terms apply to —
H S Nayak, *Organiser Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾ

1000 ಬಹುಮಾನ.

ಸಾಬೂನು ಪಡೆಯುವಾಗ ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನರಿಗೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ ಕೊಚ್ಚಿಯ ಮಹಾ ರಾಜರ ಪೆಟ್ರೋನೇಜ್ ಪೂರ್ಣ ಪ್ರಶಂಸೆ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಿಯತೆಯು ಎಷ್ಟೆಂದು ತಿಳಿಯುವುದು

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ತೆಳುವಾದ ಚರ್ಮವೂ ಬಾಧಕ ಹೊಂದುವುದಿಲ್ಲ ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡಿಯ ಪ್ಯಾತಿಯ ಸೇಟ್ ಸ್ಟೋರ್‌ಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4—8—0, 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ 5 ಇಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಸೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಸೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಸಾಲಿಗ್ರಾಮ ಶ್ಯಾಮಿಗೆ ಮಿಶ್ರನ್, ಮಡಿ ಧೋತಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬೆನಾರಿಸ್ (ಕಾಶಿ)

— ಗಡಿಯಾಳ ಪ್ರಕಟಣೆ —

ದದ್ದು ವಿನಾಶಕ ಮುಲಾಮು —ಗಜಕರ್ಣ, ಕಜ್ಜಿ, ಇಸಬು, ನಾಯಟಿ ಮುಂತಾದ ಎಲ್ಲಾ ಚರ್ಮರೋಗದ ಮೇಲೆ ಒಂದೇ ರಾಮಬಾಣ ಔಷಧಿ, ೨೪ ತಾಸಿನಲ್ಲಿ ಗುಣಬರುತ್ತದೆ ಸಾವಿರಾರು ಜನರು ಶಿಫಾರಸು ಮಾಡಿರುತ್ತಾರೆ ಕಿಮ್ಮತ್ತು ಡಬ್ಬಿ ೧ರ ಆಣೆ ೦—೪—೦ ೧೨ರ ಮೇಲೆ ಟ್ರೈಂಫೀಸು ೧೮ರ ಮೇಲೆ ಅಲಾರ್ಮ ಟೈಂಪೀಸು, ೨೪ರ ಮೇಲೆ ರಿಸ್ಟ್ವಾಚ್ ೩೬ರ ಮೇಲೆ ರಿಸ್ಟ್‌ವಾಚ್ ಪ್ರಕಟಿಸಿಗುವುದು ಕೂಡಲೇ ಬರೆಯಿರಿ ಪತ್ರವ್ಯವಹಾರ ಮರಾಠಿ ಯಾ ಇಂಗ್ಲಿಷಿನಲ್ಲಿ

King George Coronation,
BOBMAY 4

16—6—33   (Head Office—Kotah Rajputana)

(11—8)

ಡಾಕ್ಟರರು   ಹಕೀಮರು   ವೈದ್ಯರು

ಇವರೆಲ್ಲ ಏಕಕಂಠದಿಂದ

French Barqi Water

"ಫ್ರೆಂಚ್ ಬಾರ್ಕಿ ವಾಟರ್‌ನಿಂದಾಗಿ"

80 ವರ್ಷ ಪ್ರಾಯದಲ್ಲೂ ವಿವಾಹವಾಗಲು ಸಾಧ್ಯವೆಂದು ಹೇಳುವರು, ಎಲ್ಲಾ ಸ್ತ್ರೀ ಪುರುಷರ ವೀರ್ಯ ದೋಷಗಳಿಗೆ ಇದು ಪರಮಾಶ್ಚರ್ಯಕರ ಔಷಧಿ ಈ ಔಷಧಿಯು ಫ್ರೆಂಚ್ ಡಾಕ್ಟರನೊಬ್ಬನಿಂದ ಕಂಡುಹಿಡಿಯಲ್ಪಟ್ಟಿತು. ಆದುದರಿಂದ 'ಫ್ರೆಂಚ್ ಬಾರ್ಕಿ ವಾಟರ್' ಎಂದು ಲೋಕ ಪ್ರಸಿದ್ಧಿಯಾಯಿತು ತಾರುಣ್ಯದ ದುರಭ್ಯಾಸಗಳಿಂದ ಪುರುಷತ್ವವನ್ನು ಕಳೆದುಕೊಂಡಿರುವವರಿಗೆ ಇದು ಸ್ವರ್ಗದ ವರವಾಗಿರುತ್ತದೆಂಬುದು ಖಾತ್ರಿ

ಫ್ರೆಂಚ್ ಬಾರ್ಕಿ ವಾಟರ್—ಮುದುಕರನ್ನು ತರುಣರನ್ನಾಗಿ ಮಾಡುತ್ತೆ
ಫ್ರೆಂಚ್ ಬಾರ್ಕಿ ವಾಟರ್—ಹೋದ ಶಕ್ತಿಯನ್ನು ೨೪ ಗಂಟೆಗಳೊಳಗೆ ತಂದುಕೊಡುತ್ತದೆ.
ಫ್ರೆಂಚ್ ಬಾರ್ಕಿ ವಾಟರ್—ಸ್ತ್ರೀ ಪುರುಷರಿಗೆ ಸಂತತಿಯುತ್ಪನ್ನ ಶಕ್ತಿಯನ್ನೀಯುತ್ತದೆ

ಹಾಳಾದ ಪುರುಷತ್ವವನ್ನು ವೃದ್ಧಿಸುವ ದಿವ್ಯ ಮದ್ದು ಇದರ ಒಂದು ತಟಕು ಸೇರಿದರೆ ದೇಹಕ್ಕೆ ೧೦ ತಟಕು ರಕ್ತ ದೊರೆತಂತೆ. ಸ್ತ್ರೀಯರಲ್ಲಿ ಸಂತತಿಯುತ್ಪನ್ನಗೊಳಿಸುತ್ತೆ ಔಷಧಿಯೊಡನೆ ಉಪಯೋಗದ ಅನುಪಾನ ಕಳುಹಿಸುತ್ತೆ ಒಂದು ಬಾಟ್ಲಿಗೆ ರೂ 3—8—0 ನಾಲ್ಕು ಬಾಟ್ಲಿಗಳನ್ನು ಪಡೆದವರಿಗೆ ಒಂದು ಬಾಟ್ಲಿ ಧರ್ಮಾರ್ಥ ಅಂಚೆ ಹಾಸಲು ಆಣೆ 8. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಿರಿ

Bargi Depot,
Kothe No 44 Kushak St. MUTTRA.

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.

Jubilee year! Jubilee year!

The Bombay Life Assurance Co. Ltd.,

Bombay—Established 1908.

Chairman:—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply. Right opportunity to those who desire independant and respectable vocation.

Applications should reach the undersigned by 25th September 1933, giving full qualifications and whether they can guarantee business

Apply to:— **KOCHIKAR BROTHERS,**
Madras Branch Secretaries.

Vishveshwarapuram Circle, *Bangalore City.* or Udipi, *South India.* or Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Malabar) who will be touring.

(25-8-33.)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8—0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1—4—0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0 ಚವನಪ್ರಾಶಲೇಹ ೧ ರಾತ್ಲಿಗೆ ರೂ. 2-8-0. ಅಭಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮುಖ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0—5—0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0—4—0. ಕೃಷ್ಣಾಂಕ ೧ ಔನ್ಸಿಗೆ ರೂ. 0-6—0. ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0. ಮಹಾ ಚಿತ್ರಕ ತೊಲೆ ೧ಕ್ಕೆ ರೂ, 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1—0—0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 3—8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲ್‌ಬೈಲ್. ಬೈಂದೂರು—ಕೆ. ಪುತ್ತು ಶಾನುಭೋಗ. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ. ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮೆಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ವಿ. ವಿ. ಶೆಣೈ. ಕಾಪು—ಡಾಕ್ಟರ್ ಬಿ. ಕೆ. ಬೇಕಲ ಡಿಸ್ಪೆನ್ಸರಿ. ಬಟ್ಕಳ—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ, ಬ್ರಹ್ಮಾವರ. ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI**

Branches: Mangalore, Payyanur, Brahmavar, Kumta, Karwar, Hubli. Honnavar, Bangalore & Cannanore.

Authorised Capital Rs. 1,00,000. Subscribed Capital Rs. 1,00,000. Paid up Capital Rs. 20,000

STATEMENT OF AFFAIRS OF THE SYNDICATE AS ON 31ST September 1933.

LIABILITIES.		ASSETS.	
Paid up Capital	Rs. 20,000—0—0.	Loans on Land mortgage	Rs. 2,75,298—12—6.
Reserve & other funds	,, 20,250—0—0.	Loans on Valuable Securities	,, 2,23,792—13—5
Deposits	,, 10,54,933—10—11.	Loans on Bills of Exchange, Hundis and Promissory Notes	4,59,985—8—4.
Due to Bankers	,, 48,335—7—6.	Investment on Shares of other Companies	,, 43,575—0—0.
		On Deposits with other Bankers	,, 1,15,000—0—0.
Bills for Collection	,, 22,631—3—7.	Bills for collection (per contra)	,, 22,631—3—7
Sundries	,, 1,22,321—13—5.	Sundries	,, 1,14,721—4—9.
		Cash in hand & with Bankers	,, 33,467—8—10.
Total Rs.	12,88,472-3-5	Total Rs.	12,88,472-3-5

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 7-10-1933.

P. A. Pai Bros.,
Managing Agents.

DUO-TREAD TIRES.

Seiberling's Novel Features.

1. Air Cooled.
2. Duo Tread.
3. Twice the Mileage. FOR
4. Only 20 per cent extra Money

A TIRE UN-IMITATED & EXCLUSIVE.

Dealers Earn Profits. *Users Save Money.*

The Canara Public Conveyance Co., Ltd.

MANGALORE.

ಸ್ಫುಟವಿಚಾರಗಳು:—

ಬೂಟಾಟಿಕೆ, ಮುಕ್ಕಾಲು ಮಣೆ, ನಾಲ್ಕು ತಿಂಗಳ ಹಿಂದೆ, ಮಾರೀ ಪೂಜೆ, ಮಾದರಿ ರಾಜಕೀಯ ಪಕ್ಷ, ಶತಂಜೀವಿಗಳು, ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರು, ಮಂಗಳೂರು ಭುಜಂಗ ರಾಯರು, ನೋಟಗಳು.

ಬೂಟಾಟಿಕೆ ಎರಡೂ ಕಡೆ ನಡೆಯುತ್ತಲೇ ಇದೆ. ವ್ಯಾಪಾರದ ಕರಾರು ಇಲ್ಲಿ, ಶಾಸ್ತ್ರಾಂಗರಚನೆ ಅಲ್ಲಿ: ಇಲ್ಲಿನ ವಿಷಯ ನೋಡಿದರೆ, ಬೋದೆಲಿನ ಸಂಧಾನಗಳೆಲ್ಲ ಸವಿಮಾತುಗಳಲ್ಲೇ ಮುಗಿದುವು. ಇವರ ನಮಸ್ಕಾರಕ್ಕೆ ಅವ ಸಲಾಮು ಅಷ್ಟೆ. ಜಾಪಾನಿನವರಾಗಲಿ, ಲಂಕೇಶಯರಿನವರಾಗಲಿ ಭಾರತೋದ್ಧಾರಕ್ಕೆ ಅಲ್ಲದೆ ಬೇರೆ ಆಸೆಯಿಂದ ಇತ್ತ ಬಂದವರೇ ಅಲ್ಲ. ಭಾರತವಾಸಿಗಳಿಗೆ ಮಾತ್ರ ತಮ್ಮ ಉದ್ಧಾರ ಮಾಡಿಕೊಳ್ಳುವ ಬಗೆ ಗೊತ್ತಿದೆಯೋ ಇಲ್ಲವೋ ಎಂದು ಅವರಿಗೆಲ್ಲಿ ಗೊತ್ತು? ಜವಿೂನಾಯಿತು, ಸಾಗುವಳಿಯಾಯಿತು, ಅತ್ತ ಕಡೆ, ಇತ್ತ ಸಾಲ ಎಂದು ಬೇಸಾಯ ಮಾಡಿ ನಂಳ, ಎರಡು ಹೊತ್ತಿಗೆ ಬಂದೂಟದ ಸಂಪನ್ನತೆ ಇರುವವರಿಗೆ ಕರಾರು, ತಕರಾರುಗಳ ಮಾತು ತಿಳಿದೀತೆ?

ಮುಕ್ಕಾಲು ಮಣೆ ಯಂತೆ ಮಾಡಿ, ಲಂಕೇಶಯರು ಜಾಪಾನು ಹಿಂದೀ ಗಿರಣಿಗಾರರು ಈ ಕರಾರು ಮಾಡಿಕೊಳ್ಳಲು ಕೂತಿರುವರಲ್ಲ! ಇಲ್ಲಿ ಹುಟ್ಟುವ ಹತ್ತಿಯಲ್ಲಿ ನೂರಕ್ಕೆ ೮೦ ಅಂಶ ಇಲ್ಲೇ ಬಳಸಬರುವುದು, ನಮ್ಮವರೆಂಬ ಗಿರಣಿಗಾರರಿಗೆ ಇನ್ನೂ ಹೆಚ್ಚು ಬಳಸಬರುದಿಲ್ಲವಂತೆ. ಉಳಿದುದನ್ನು ಜಾಪಾನು ಕೊಂಡುಕೊಳ್ಳಲು ಯಾವಾಗಲು ಸಿದ್ಧವೆ, ಆದರೆ, ಅಲ್ಲಿಂದ ಇದೇ ಹತ್ತಿಯ ಸಾಮಾನನ್ನು ಇತ್ತ ಇಲ್ಲಿನ ಬಟ್ಟೆಯ ಕೊಳು ಕ್ರಯಕ್ಕೆ ತಂದು ಮಾರುವಾಗ, ಗಿರಣಿಗಾರರ ಬಾಯಿಗೆ, ಸೇರು ಎಷ್ಟರ ನಷ್ಟ ನುಂಗಲು ಸಿಗುವುದು? ಆದಕ್ಕಾಗಿ ಜಾಪಾನಿನ ಸರಕಿಗೆ ಬೆಲೆ ಏರಿಸುವ ಹಾಗೆ ಸುಂಕವೇರಿಸಲಾಗಿದೆ. ಇಷ್ಟು ಸುಂಕವಿದ್ದರೂ ಲಂಕೇಶಯರ ಬಟ್ಟೆಗೆ ಗಿರಾಕಿಗಳಿಲ್ಲದೆ, ಅಲ್ಲಿನ ಕೆಲಸಗಾರರು ಹರಾರಿ ಗಿರಣಿಗಳು ದಿವಾಳಿ ಹೇಗಾಗಿ ನಮ್ಮ ಗಿರಣಿಗಾರರೂ ಲಂಕೇಶಯರೂ ಸೇರಿ ಪರದೇಶಗಳಲ್ಲಿ ಈಗ ಮಾರಲಾಗುವ ಹಿಂದೀ ಬಟ್ಟೆಯನ್ನು ಹಂಚಿಕೊಳ್ಳುವ ಹಂಚಿಕೆಯಾಗವುದಂತೆ ಕೇಳಿದಿರಾ ಕಾಂಗ್ರೆಸು ಸತ್ತಿರಬಹುದು, ಆದರೆ, ಅದು ಕೊಟ್ಟ ಬೋಧೆಯ ಸ್ವದೇಶೀ ಮಂತ್ರವು ಸತ್ತಿಲ್ಲವೆಂದು ಲಂಕೇಶಯರು ತಿಳಿಯಿತೆ? ಇವರೆಲ್ಲರ ನಡುವೆ, ಹತ್ತಿ ಬೆಳೆಸುವವನ ಗತಿಯೇನು? ಅವನ ಕೊರಳಿಗೆ ಕತ್ತಿಯೆ?

ನಾಲ್ಕು ತಿಂಗಳ ಹಿಂದೆ ಹೂಂಕರಿಸಿ ಲಂಕೇಶಯರು ಎದ್ದು ನಿಂತು,—ನಮ್ಮ ಬಟ್ಟೆಯನ್ನು ಸರಾಗ ಇಂಡಿಯದಲ್ಲಿ ಮಾರಲಾಗುವ ಹಾಗೆ ಮಾಡಲಾರಿರಾದರೆ, ಅವರಿಗೆ ಎಂತಹ ಸುಧಾರಣೆಗಳನ್ನು ಕೊಡಲೂ ನಾವು ತಡೆ ಹಾಕುವೆವು ಎಂದು ಧಿಂಗಾಣ ಹಾಕಿಲ್ಲವೆ? ಅದೇನು? ಇದೇನು? ದಬ್ಬೆ ಮೇಲೆ ಬಡೆದುದೇ ಲಾಭವಾಯಿತಲ್ಲದೆ, ಒರೇ ಸದ್ದು ಮಾತ್ರ ಎದ್ದಿಲ್ಲದೆ ಚಿಕ್ಕಾಸಿನ ಪ್ರಯೋಜನವಾಯಿತೆ? ಈಗ, ನಿಮ್ಮುದ್ಧಾರಕ್ಕೆ ನಾವು, ಬೇಗ ಆಲೋಚಿಸಿ, ಎನ್ನುವುದೇಕೆ? ಕರಾರಿಗೆ ಬಂದವರು ಬೇಗ ಮುಗಿಸಿ ಎನ್ನುವುದೇಕೆ? ಚೆನ್ನಾಗಿ ವಿಮರ್ಶಿಸಬೇಡವೆ? ಅದೇ ಜಾಪಾನು,—ನಿಮ್ಮ ಹಿತವು ಹೇಗೆ ಸಾಧಿತವಾಗುವುದೋ ಅದನ್ನು ವಿಚಾರಿಸಿ ನೋಡಿರಿ ಎನ್ನುವುದಲ್ಲ, ಅದಕ್ಕೇನೂ ಅವಸರವಾಗುವುದಿಲ್ಲವೆ?

ಮಾರೀಪೂಜೆ ಯಂತೆ, ಹಿಂದುಸ್ಥಾನದ ವಿಷಯವಾದ ಎಲ್ಲ ಹಿತಕಾರ್ಯಗಳನ್ನು ಒಂದೊಂದಾಗಿ ಕಡಿದು ಹಾಕಲು ಕನ್ಸರ್ವೇಟಿವರು ಬರ್ಮಿಂಗ್ಹ್ಯಾಮಿನಲ್ಲಿ ನೆರೆದರು. ಹಿಂದೂಸ್ಥಾನವು ಬಲಿಬೀಳಲಿಲ್ಲ. ಪೂಜಾರಿ ಲಾಯ್ಡರೂ ಚರ್ಚಿಲ್ಲರೂ ಮೌನ, ಇವರ ಭೂತಗಣಗಳು ಬಾಯುವಾದುವು. ಮುಖ್ಯತ—ಸಿಗಲಿರುವ ಕಿಂಚಿತ್ತೂ ಸಿಗಬಾರದೆಂದು ಸೂಚನೆ ಇಲ್ಲಿಂದ ಉಪ್ಪನ್ನ ತಿಂದು ಮರಳಿದವರೆಲ್ಲರೂ ಈ ಅನ್ನಕ್ಕೆ ದ್ರೋಹ ಮಾಡುವವರ ಹಾಗೆ ಎದುರು ಎದ್ದು ಗಲಭೆ ಮಾಡಿದರು. ಕೊಡಲಿರುವಷ್ಟನ್ನು ಕೊಡದಿದ್ದರೆ, ಇಂಡಿಯವು ಕಾಂಗ್ರೆಸ್ ವಶವಾದೀತು ಎಂದು ತಿಳಿದ ಕೂಡಲೆ ಸಾವಿರದಲ್ಲಿ ೬೦೦ ವೋಟು ಮಂತ್ರಿಗಳ ಕಡೆಗೆ. ಸೋತವರು ಸುಮ್ಮನಾಗಿಲ್ಲ ನಾವೂ ಗೆಲ್ಲುವವರೆ, ೩೦೦ ಆದರೂ ಇದ್ದೇವಲ್ಲ ಪಾರ್ಲಿಮೆಂಟಿನಲ್ಲಿ ನೋಡುವ ಎಂದು ಜಭುಭೇರಿ ಬಡೆದರು

ಮಾದರಿ ರಾಜಕೀಯ ಪಕ್ಷ ಕನ್ಸರ್ವೇಟಿವರದೇ? ಮೊನ್ನಿನ ಸಭೆಗೆ ಬರುವವರು "ಇಂಡಿಯಾ ಡಿಫೆನ್ಸ ಲೀಗ್" ಎಂಬ ಭಯಂಕರ ಡಾಯರ್ ಹಾರ್ಡರುಗಳ ಸಂಘಕ್ಕೆ ವೋಟು ಕೊಡಬೇಕೆಂದೂ ಬಾರದವರು ಒಂದಂಶವಾಗಬೇಕೆಂದೂ ಮೊದಲಾಗಿ ನಾನಾ ಪ್ರವೃತ್ತಿಗಳನ್ನು ಡಾಯರ್‌ಹಾರ್ಡರುಗಳು ಮಾಡಿದುದನ್ನು, ಪಾರ್ಲಿಮೆಂಟಿನ ಕನ್ಸರ್ವೇಟಿವ ಇಂಡಿಯಾ ಕಮಿಟಿಯ ಸೆಕ್ರೆಟರಿಯವರು ದೂರಿರುವರು. ಇವರು 'ಗರೀಬು ಕೆಲಸ' ಮಾಡುವವರು ಎಂಬ ಅರ್ಥದಲ್ಲಿ ಅವರ ಶಿಫಾರಸು ಇದೆ. ಪಕ್ಷದಲ್ಲಿ ಎರಡು ರೆಕ್ಕೆಗಳಾಗಿವೆ. ಎರಡರೊಳಗೆ ಕದನ. ಯುದ್ಧದಲ್ಲಿ ಚಾತುರ್ಯವೆಂಬುದಿದೆ, ಅದರ ಅರ್ಥವು ಹೀಗೆ ಒಬ್ಬರು ಮತ್ತೊಬ್ಬರ ಮೇಲಾಟಕ್ಕೆ ಪ್ರಯತ್ನಿಸುವುದು. ಮುಖ್ಯ ಹಿಂದೀ ಜನತೆಗೆ ಬೇಕಾದುದೇನೆಂದು ಹಿಂದೀಯರಿಗೇ ಗೊತ್ತಿಲ್ಲವೆಂಬ ತತ್ತ್ವವನ್ನು ಉಂಟುಮಾಡಿದ ಡಾಯ್‌ಹಾರ್ಡರು ತಮ್ಮ ನಡತೆಯೇ ಹೇಗಿರಬೇಕೆಂಬುದನ್ನು ತಾವೇ ತಿಳಿಯದಿರುವರಲ್ಲ! ಬ್ರಿಟನ್ನು ಬ್ರಿಟಿಷ ಸಾಮ್ರಾಜ್ಯ, ಇಂಡಿಯಾ, ಇವೆಲ್ಲವುಗಳ ಬಗ್ಗೆ ತಾವೇ ಜವಾಬ್ದಾರರು ಎನ್ನುವ ಇವರ ಸ್ಥಿತಿಯೇ ಇಷ್ಟು ಕೃತ್ರಿಮವಾಗಿ ಶೋಚನೀಯವಾಗಿದೆ ಎಂಬುದು ನಿಜವಾದರೆ, ಸಾಮ್ರಾಜ್ಯವನ್ನು ಕಾಪಾಡುವವರು ಯಾರು?

ಶತಂಜೀವಿಗಳು ನಮ್ಮ ಕೌನ್ಸಿಲುಗಳು. ಮೆಲ್ಲನೆ ಇನ್ನೊಂದು ವರ್ಷದ ವರೆಗೆ ಅವುಗಳ ಆಯುರ್ವೃದ್ಧಿಯಾಗುವುದಾಗಿ ವರ್ತಮಾನ ಕಾರಣವೇನು? ಸದ್ಯದಲ್ಲೇ ಹೊಸ ಸುಧಾರಣೆಗಳು ಚುನಾವಣೆಗೆ ಸಂಬಂಧಪಟ್ಟವಾಗಿ ಹೊರಬೀಳಲಿವೆಯಾದ ಕಾರಣ, ಅದುವರೆಗೆ ಇವೇ ಕೌನ್ಸಿಲುಗಳು ಅವಧಿ ಕಳೆದರೂ ಜೀವ ಹಿಡಿದಿರಬಹುದಾಗಿ ಆಶ್ವಾಸನೆ ವಿಚಿತ್ರವೆಂದರೆ, ಸದ್ಯದಲ್ಲಾಗಲಿರುವ ಸುಧಾರಣೆಗಳ ಗಾಳಿ ಬೀಸುವುದಕ್ಕಾದರೂ ೧೯೩೩ನೇ ಇಸವಿಯ ವರೆಗೆ ಅನುಕೂಲ ಮುಹೂರ್ತವಿ ಇಲ್ಲವಾಗಿ ತಿಳಿದು ಬಂದಿದೆ ಹಾಗಿರುವಲ್ಲಿ ಕ್ರಮೇಣ ೧೯೩೪, ೧೯೩೫, ೧೯೩೬ ಎಂದೇ ಇವುಗಳಲ್ಲಿ,—ಜರಾಗ್ರಸ್ತವಾಗಿರುವ ಜೀವನ್ಮೃತಾವಸ್ಥೆಯಲ್ಲಿರುವ ಇವೇ ಕೌನ್ಸಿಲುಗಳಲ್ಲಿ—ಹೊಸ ಜೀವವನ್ನು ತುಂಬುವುದೇ, ಸದ್ಯದ ಸುಧಾರಣೆಗಳು ಬರುವ ತನಕವೂ ಸರಕಾರಕ್ಕೊಂದು ಉದ್ಯೋಗವೆ? ಪಂಜಾಬು ಗವರ್ನರರು ತಮ್ಮ ಕೌನ್ಸಿಲಿಗೆ ದೀರ್ಘ ಜೀವನದ ಉಂಬಳಿ ಕೊಟ್ಟು ಮುಗಿಯಿತು ಇನ್ನು ಮದ್ರಾಸು ಹಿಂದೆ ಬಿದ್ದರೆ, ನಿಜವಾಗಿಯೂ ಹಿಂದೇ ಉಳಿದ ಮದ್ರಾಸು ಎನ್ನರೇ? ನಮ್ಮ ಮದ್ರಾಸು ಕೌನ್ಸಿಲು, ಜಸ್ಟಿಸ್ ಸಂಗಡದ್ದೂ ಅಲ್ಲ, ಜನತೆಯ ಕಾಂಗ್ರೆಸ್ ಪ್ರಾತಿನಿಧ್ಯವುಳ್ಳದೂ ಅಲ್ಲ, ಅಧಿಪಕ್ಷದ ಮನೋಭಾವವನ್ನೆಂತೂ ಸೂಚಿಸುತ್ತಿಲ್ಲ ಪ್ರಾಣಿಗಳಿಗೆ ಹೀಗೆಯೆ ಜೀವಾವಧಿಯನ್ನು ಹೆಚ್ಚಿಸುವರೆ ಯಾವುದೊಂದು ನಿಯಮವನ್ನೂ ಸ್ವರ್ಗದಲ್ಲಿಯೂ ಮಾಡಲಾರರೆಂದ ಬಳಿಕ, ಗವರ್ನರರು ಕೌನ್ಸಿಲು ಮೆಂಬರರ ಸ್ಥಾನಮಾನವನ್ನು ಮಾತ್ರ ಹೆಚ್ಚಿನ ಅವಧಿಗೆ ಊರ್ಜಿತ ಇರಿಸುವುದು ನ್ಯಾಯವೆ?

ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರು ಮೈಸೂರಿನ ಕಾಯದೆ ಮಂಡಲದಲ್ಲಿ ಭಾಷಣ ಮಾಡುತ್ತಾ ಮಹಾತ್ಮಾಜೀಯವರನ್ನು ಕುರಿತಾಗಿ ಉದ್ಗಾರಗೈಯುತ್ತಿರುವರು 'ಗಾಂಧಿಯವರೇ ನಮ್ಮನ್ನು ಇಂದಿನ ಅಡಚಣೆಗಳಿಂದ ಉದ್ಧರಿಸಬಲ್ಲವರಲ್ಲಿ ಅಗ್ರಗಣ್ಯರು ದೇಶದಲ್ಲಿರುವ ನಾನಾ ಪಕ್ಷಗಳೊಳಗೆ ಐಕ್ಯಮತ್ಯವನ್ನುಂಟುಮಾಡಿ ಎಲ್ಲವೂ ಒಂದೇ ಕಡೆಗೆ ನಡೆವಂತೆ ಮಾಡಲು ಶಕ್ತರು ಅವರೊಬ್ಬರೋ' ರಾಜಕಾರಣದಿಂದ ಸನ್ಯಾಸವನ್ನು ಸ್ವೀಕರಿಸಬೇಕೆಂದು ಮಹಾತ್ಮರಿಗೆ ನಾನೆನ್ನುವವನಲ್ಲ. ವಿಚಿತ್ರವೆಂದರೆ,—ಮೈಸೂರು ದಿವಾನ ಸಾಹೆಬರು ಗಾಂಧೀ ಭಕ್ತರಲ್ಲಿ ಸತ್ಯಾಗ್ರಹ ಮಾಡಿಲ್ಲ, ಸಬರಮತೀ ಆಶ್ರಮವಾಸಿಗಳಾಗಿರಲಿಲ್ಲ; ಹಾಗೆಂದು ಅವರ ನಸುಬಿಳಿ ತುಸು ಕೆಂಪು ಪಕ್ಷಗಳಲ್ಲಿಯೂ ಸೇರಿಲ್ಲ. ಆದರೆ, ರಾಜಕಾರಣವೆಂದರೇನೆಂದು ಅವರು ಪ್ರತ್ಯಕ್ಷ ಅನುಭವದಿಂದ ಬಲ್ಲವರು ಇವರ ಈ ಮಾತುಗಳನ್ನು ಕೇಸರಿ, ಕ್ರಾನಿಕಲ್, ಟೈಮ್ಸ್, ಹಿಂದೂ ಮುಂತಾದ ಪತ್ರಿಕೆಗಳೂ, ಹೊಸ ಪಕ್ಷವನ್ನು ಸ್ಥಾಪಿಸ ಹೊರಟವರೂ ಇತರ ನಿಷ್ಕ್ರಿಯಾ ಯೋಗದವರೂ ಎತ್ತಿಕೊಂಡಿರುವರಾದರೂ, ಅವೇ ಮಾತುಗಳನ್ನು ಸರಿಯಾಗಿ ತೂಗಿ ನೋಡಲಿ.

ಮಂಗಳೂರು ಭುಜಂಗ ರಾಯರು ನಮ್ಮ ಊರಿನ ಪುರಾತನ ಶ್ರೀಮಂತ ಮನೆತನಗಳಲ್ಲಿ ಒಂದಾದ ಗೌಡ ಸಾರಸ್ವತರ ಪೈ ಕುಟುಂಬದವರಲ್ಲಿ ರಾವ್ ಸಾಹೆಬ್ ಎಂ ಗೋಪಾಲ ರಾವ್‌ರವರು ಇಲ್ಲಿಂದ ಕೊಡಗಿಗೆ ತೆರಳಿ ಅಲ್ಲಿ ಶ್ರೇಷ್ಠತಮ ಹುದ್ದೆಯನ್ನು ಅಲಂಕರಿಸಿ ನಿವೃತ್ತರಾದ ಬಳಿಕ, ಅವರ ಹಿರೇ ಮಗೆಂದಿರಾದ ಶ್ರೀ ಭುಜಂಗ ರಾಯರು ಇಲ್ಲಿಯೆ ಮೊದಲ ವಿದ್ಯಾಭ್ಯಾಸವನ್ನು ಕೆನರಾ ಹೈಸ್ಕೂಲಿನಲ್ಲಿ ಮುಗಿಸಿ ನಂತರ ಕ್ರಮವಾಗಿ ಬಿ ಎ ಬಿ ಎಲ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಕೊಡಗಿನಲ್ಲೇ ಗವರ್ನಮೆಂಟ್ ಪ್ಲೀಡರ್, ಪಬ್ಲಿಕ್ ಪ್ರಾಸಿಕ್ಯೂಟರ್ ಮ್ಯುನಿಸಿಪಲ್ ಚೆಯರ್‌ಮನ್ ವಗೈರೆ ಉತ್ತಮ ಪದವಿಗಳಲ್ಲಿದ್ದು ಕಳೆದ ಮೀಟಿಂಗಳಲ್ಲಿ ಸಬ್‌ಜಡ್ಜರಾಗಿದ್ದರು. ಕೆಲವೇ ದಿನಗಳ ಕಾಯಿಲೆಯಿಂದ ತಮ್ಮ ೫೦ನೇ ವಯಸ್ಸಿನಲ್ಲಿ ಕಳೆದವಾರ ದಿವಂಗತರಾದರು ಕೊಡಗಿನವರಾಗಿಯೆ ಕೊಡಗು ಎಂತಿರುವ ಈ ಕಾಲದಲ್ಲಿ, ಇವರು ಇಲ್ಲಿಯವರಾದರೂ ಕೊಡಗಿನವರಾಗಿಯೇ ಅಲ್ಲಿದ್ದು, ಜನತೆಗೂ ಸರಕಾರಕ್ಕೂ ಮೆಚ್ಚುವಂತೆ, ತಮಗೆ ದೊರೆತ ನಾನಾ ಅಧಿಕಾರಗಳನ್ನು ಶ್ರದ್ಧೆಯಿಂದ ವಹಿಸಿರುವುದು ಅವರ ಮನೆತನಕ್ಕೂ ಈ ಜಿಲ್ಲೆಗೂ ಕೀರ್ತಿಕರವಾದುದು. ಅವರ ಅಕಾಲ ನಿಧನದಿಂದ ಅವರ ಕುಟುಂಬದ ಸಮಸ್ತರಿಗೂ ಅಪಾರ ಮಿತ್ರ ಮಂಡಲಿಗೂ ಉಂಟಾಗಿರುವ ಸಂತಾಪದಲ್ಲಿ ನಾವು ತುಂಬ ಸಹಸಂತಾಪವನ್ನು ಸೂಚಿಸುತ್ತೇವೆ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೂ, ಅವರ ಬಂಧುಬಾಂಧವರಿಗೆ ಸಮಾಧಾನವನ್ನೂ ಕೊಡುವನಾಗಲಿ.

NOTES..
ನೋಟಗಳು.

ಲೈನಿನ ಮೇಜಿನ ಎದುರು ಕ್ಲಾಸಿನ ಮೇಜು ಎಲ್ಲಿ ನಿಂತೀತು? 'ಇಟ್ಸೆಲ್ಫ್ ಡಿಫೀಟ್' ಆಗೋದೇ ಉದಾಹರಣೆ: ಶಾಲೆಗೆ ರಜೆ ಇಲ್ಲ, ಕ್ಲಾಸಿನಲ್ಲಿ ಮಕ್ಕಳಿಲ್ಲ.

* * * *

'ಆಡುವಾಗ ಆಟ ಓದುವಾಗ ಪಾಠ' ಎಂಬುದು ಹಳೆಯ ಗಾದೆ ಹೀಗಿದ್ದರೂ ವಿದ್ಯಾಶಾಲೆಯವರು ಈ ಆಟಗಳ ಕಾಲದಲ್ಲಿ ಪಾಠಗಳು ಬೇಡವೆಂದು ರೂಲ್ಸ್ ಮಾಡದಿದ್ದರೆ ಹೇಗಾದೀತು?

* * * *

ಕಾಲೇಜಿನ ಬಹುಮಾನವಿತರಣ ಸಂಭ್ರಮವು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಬಲು ಚೆನ್ನಾಗಿ ಜರುಗಿತು, ಕಾಲೇಜಿನ ಅಧಿಕಾರಿಗಳಿಗೆ ಗೊತ್ತಿಲ್ಲದ ಒಂದು ವಿಶೇಷ ಸಂಗತಿಯನ್ನು ಕಲೆಕ್ಟರರು ಅಧಿಕಾರವಾಣಿಯಿಂದ ಹೇಳಿದುದೂ ಈ ಸಂಭ್ರಮದಲ್ಲಿ ವಿಶೇಷ

* * * *

"ಗಾಂಧಿಟೊಪ್ಪಿಯು ರಾಜಕೀಯ ಸಂಬಂಧವನ್ನು ಕಳೆದುಕೊಂಡು ಎಷ್ಟೋ ದಿನಗಳಾದುವು ಈಗ, ಅದು ಕೇವಲ ಅಗ್ಗವಾದ ಶಿರೋಭೂಷಣವಾಗಿದೆ ಎಂದು ಕಲೆಕ್ಟರ ಸಾಹೆಬರು ಎಂದರು. ಹಿಂದೆ ಗವರ್ನರರು ಕಾಲೇಜಿಗೆ ಬಂದಾಗ, ಶಿರೋಭೂಷಣದ ಮೇಲೆ ಕಾಲೇಜಿನ ವಿದ್ಯಾರ್ಥಿಗಳಿಗೆ ಶಾಸನವಾಗಿದ್ದಿತಲ್ಲ! ಅದಾದ ಬಳಿಕ ನೇತ್ರಾವತಿ ಸಂಕದ ಅಡಿಯಲ್ಲಿ ಎಷ್ಟೋ ನೆರೆನೀರು ಹರಿದಿದೆ

* * * *

ಹಾಗೆಂದು, ಈ ಅಗ್ಗ ಶಿರೋಭೂಷಣವೇ ಲಿಂಗರಾಜ ಕಾಲೇಜಿನ (ಬೆಳಗಾಂವಿ) ವಿದ್ಯಾರ್ಥಿಗಳಿಗೆ, ಮೊನ್ನೆ ಬೊಂಬಾಯಿಯ ಗವರ್ನರರು ಕಾಲೇಜನ್ನು ತೆರೆವ ಸಮಾರಂಭಕ್ಕೆ ಬಂದಾಗ, ಹಗ್ಗದಂತಾಯಿತು "ಇಲ್ಲವೆ ಹೊರಗೆ ನಡಿಯಿರಿ, ಅಥವಾ ನಿಮನ್ನತ್ತ ಹೊರಗೆ ಇಡುತ್ತೇವೆ ಎಂದು ತಲೆ ಸಿಡಿತದ ಬಾಧೆಗೊಳಗಾದ ಪೋಲೀಸರು ಅಲ್ಲಿನ ವಿದ್ಯಾರ್ಥಿಗಳನ್ನು ಜರೆದರು

* * * *

ವಿದ್ಯಾರ್ಥಿಗಳು ಮರ್ಯಾದೆಯಿಂದ ಹೊರಕ್ಕೆ ನಡೆದರು. ಪೋಲೀಸರ ಶಿರೋವೇದನೆ ಮುಗಿಯಿತು ಕಾಲೇಜನ್ನು ಗವರ್ನರರು ತೆರೆದರು. ವಿದ್ಯಾರ್ಥಿಗಳು ಅವೇ ಅಗ್ಗ ಶಿರೋಭೂಷಣಗಳಿಂದ ಈಗ ಅಲ್ಲಿ ಓದುತ್ತಿರುವರು

* * * *

ಕಾಲೇಜ್ ಕಟ್ಟಡಕ್ಕೇನೂ ಗಾಂಧೀ ಟೋಪಿ ಬೇಕಾಗಿಲ್ಲ. ಅದು ವಿದ್ಯಾರ್ಥಿಗಳಿಗೆ ಬೇಕಂತೆ ಅವರೇ ಆ ಕಟ್ಟಡದಲ್ಲಿ ಓದುತ್ತಿದ್ದರೆ ಅದು ಕಾಲೇಜಾಯಿತು, ಇಲ್ಲದಿದ್ದರೆ ದಾಸಸಾಲೆ!

* * * *

ಹುಚ್ಚನ ಹುಚ್ಚು ಉಚ್ಚಾಟನ ಮಾಡಲು ಹೋದವನಿಗೇ ಹುಚ್ಚು ಹಿಡಿಯುವಂತಾದರೆ, ಪರಿಣಾಮವು ಹೇಗೆ? ಎಲ್ಲ ರಾಷ್ಟ್ರಗಳೂ ಯುದ್ಧ ಸನ್ನಾಹವನ್ನು ತ್ಯಜಿಸಬೇಕಾಗಿ ಬೋಧಿಸುವಾಗ, ಬೋಧಿಸುವವನ ರಾಷ್ಟ್ರದಲ್ಲಿ ಯುದ್ಧದ ಹತ್ಯಾರುಗಳು ಹಗಲೂ ರಾತ್ರಿಯೂ ತಯಾರಾಗುತ್ತವೆಂತಾದರೆ, ಅದೇ ಪರಿಣಾಮವಾಗದೆ?

* * * *

ಹಳೆಯ ಐ ಸಿ. ಎಸ್ ವಾಲರು ಪಾರ್ಲಿಮೆಂಟರಿ ಕಮಿಟಿಯ ಮುಂದೆ ಸಾಕ್ಷಿ ಹೇಳುವಾಗ, "ಗಾಂಧಿಯವರ ಮೇಲೆ ಕೈಹಾಕಬಾರದೆಂದು ವರಿಷ್ಠ ಸರಕಾರವು ಕಲೆಕ್ಟರರುಗಳಿಗೆ ಹಿಂದೆ ತಿಳಿಸಿದ್ದಿತೆಂದು" ಹೊರಬಿತ್ತು ಹೀಗಾಗಿ, ಮಹಾ ಮಹಾ ತಿಮಿಂಗಿಲಗಳನ್ನು ಹಾಗೆಯೇ ಬಿಟ್ಟು, ಒರೇ ಚಿಕ್ಕ ಮೀನು ಮರಿಗಳ ಮೇಲೆಯೇ ಆಗ ಬಲೆ ಬೀಸಲಾಯಿತಂತೆ.

If you want FULL VALUE for your money insist on Swastik Products.

ನಿಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ ಸಾಮಾನುಗಳನ್ನೇ ಕೊಂಡುಕೊಳ್ಳಿರಿ.

Swastik 777 Bar soap & Swastik Cake & Cube Soaps best in washing Soaps.

ಕಸ, ಕೊಳೆ, ಕಲ್ಮಶ, ಮೊದಲಾದ ಕಶ್ಮಲಗಳು ಕಿಂಚಿತ್ತಾದರೂ ಉಳಿಯಬಾರದು—ಅಗ ಕಾನೇ ಲೋಕಶ್ರೇಷ್ಠವು. 777 ಇದರಿಂದಾಗಿ ಪ್ರಸನ್ನತೆ. ನಂಬರಿನ ಸ್ವಸ್ತಿಕಾ ಅತ್ಯುತ್ತಮ ಸಾಬೂನು ಸ್ವದೇಶಿಗಳಲ್ಲಿ ಅಗ್ರಗಣ್ಯ, ಬಟ್ಟೆಗಳಿಗೆ, ಇತರ ಸಾಬೂನುಗಳಿಗೆ ಮೇಲ್ಪಂಗಿ, ಶುಭ್ರತರವಾಗಿ ಒಗೆಯುವುದು. ಹೆಚ್ಚು ಕಾಲ ಬಾಳುವುದು. ಯೋಗ್ಯತೆ ಮಿಗಿಲಾಗಿ ಬೆಲೆ ಕಡಿಮೆ—ವಿಲಾಯತಿಗೆ ಸಾಬೂನಿಗೆ ಪ್ರತಿಸ್ಪರ್ಧಿಯಾಗಿದೆ.

Swastik Double boiled & Raw Linseed

SWASTIK

THE MARK OF QUALITY

available in 5 gallon drums, 1 gallon tin.

ಪೈಂಟ್ ಬಗ್ಗೆ ಸ್ವಸ್ತಿಕಾ ಬೇಯಿಸಿದ ಅತೀ ಉತ್ತಮವಾದ ಲೀನ್ ಸೀಡ್ ಎಣ್ಣೆ ೫ ಗೆಲನ್ ಡ್ರಮುಗಳಲ್ಲೂ, ಗೆಲನ್ ಟಿನ್ನುಗಳಲ್ಲೂ ದೊರೆಯುವುವು.

ಕಾಫಿ ಗಿಡಗಳ ಮೇಲೆ ಕ್ರಿಮಿ ಹಿಡಿಯದಂತೆ ಚೆಲ್ಲುವ ಸ್ವಸ್ತಿಕಾ ಹಸಿ ಲಿನ್ ಸೀಡ್ ಎಣ್ಣೆ ೫ ಗೆಲನ್ ಡ್ರಮುಗಳಲ್ಲಿ ದೊರೆಯುವುದು.

ವಿಲಾಯಿತಿ ಎಣ್ಣೆಗಿಂತಲೂ ಸೇಕಡಾ 50ರಷ್ಟು ಹೆಚ್ಚಿನ ಫಲ ಪ್ರಯೋಜನ ಕೊಡುವುದಾಗಿ ಲಂಡನ್ ಜ್ಯೂರಿಚ್ ಲೆಬೋರೇಟೋರಿಯವರು ಸರ್ಟಿಫಿಕೇಟು ಕೊಟ್ಟಿದ್ದಾರೆ.

Swastik CASTOR OIL (medicinal)
(Cold drawn)
Packed in gallon tins & 4 oz, 8 oz, 1 lb bottles

ಸ್ವಸ್ತಿಕಾ ಹರಳೆಣ್ಣೆ 4 ಔನ್ಸ್, 8 ಔನ್ಸ್, 1 ರಾತಲ ಬಾಟ್ಲಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವುದು.

ಶಾಸ್ತ್ರೀಯ ರೀತಿಯಲ್ಲಿ ಸಿದ್ಧಗೊಳಿಸಿರುವ ಶುದ್ಧವಾದ ಈ ಹರಳೆಣ್ಣೆಯು ವಾಸನೆ ಇಲ್ಲದ್ದು ರುಚಿರಹಿತವಾದದ್ದು.

ಹರಳೆಣ್ಣೆಯಿಂದಾಗುವ ಯಾವತ್ತೂ ಉಪಯೋಗಗಳು ನಾಲಗೆಗೂ, ಮನಸ್ಸಿಗೂ ಬೇಸರವಾವುದೂ ಇಲ್ಲದೆ ಈ ಸ್ವಸ್ತಿಕಾ ಹರಳೆಣ್ಣೆಯಿಂದ ದೊರೆಯುವುವು. ಇವಲ್ಲದೆ—

ಸ್ವಸ್ತಿಕಾ ಕಡ್ಲೆಂಡೆ, ಎಳ್ಳೆಂಡೆ, ವಾರ್ನಿಸು, ಧೈರ್ಯಗೆ ಹಾಕುವ ಸಾಬೂನು ವಗೈರೆ ಇವೆ.

Swastik Oil Mills Ltd, Bombay.
Chairman–Seth Ambalal Sarabhai,
Directors–Sir Purushothamdas Thakurdas.
„ Mr. F. E. Dinshaw.
„ Mr. C. S. Patel, & others.

ಮಲಬಾರ್ ಮತ್ತು ಕನ್ನಡ ಜಿಲ್ಲೆಗೆ ಏಜಂಟರು:—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು.

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು
ಭಂಗಾರದ ಮೆಡಲು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುಪು ಬೀಳೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಘೋಳೀಕೆ ಬರೋಣ, ಶೌಚಕ್ಕೆ ಸಾಫು ಆಗದೇ ಇರೋಣ, ದುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦, ೩ ಬಾಟ್ಲಿಗೆ ೩—೮—೦, ಡಝನ ಬಾಟ್ಲಿಗೆ ೧೩ ರೂಪಾಯಿ. ಟಪ್ಪಾಲ ಖರ್ಚು ಪೋಸ್ಟೇಜ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.
ಮ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)
ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಕೆಮಿಸ್ಟ್. ಉಡುಪಿ—ಶ್ರೀ ಫಾರ್ಮೆಸಿ, ತೆಂಕಪೇಟೆ. ಕಾರ್ಕಳ— ಎ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮೆಸಿ. ಕಾಸರಗೋಡು— ಕೆ. ರಾಮ ನಾಯ್ಕ, ಕೋರ್ಟ ರಸ್ತೆ. ಬಂಟವಾಳ—ದಿ ಕೆನರಾ ಫೋಟೋ ಫಾರ್ಮೆಸಿ.
2–6–'38

Seventyseven Years!

Two generations of approved service enables us to pick and choose what is cheap lasting & good to suit the pockets & the tastes of our longstanding wide circle of



CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzesh etc

Shrinivas Ranga Pai,
Sawkar Mahal,
Car Street, MANGALORE.

For neat and nice Printing
Please call at
THE SHARADA PRESS,
Car Street, MANGALORE.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. E. A. No. 102/1933.

ಮರುದೇವಿ ಹೆಂಗ್ಸು—ಅರ್ಜಿದಾರಳು.

ಮತ್ತು

1. ಕೇಶವಭಟ್ಟ. 2. ಲಕ್ಷ್ಮೀನಾರಾಯಣಭಟ್ಟ—ಎದ್ರಿರು.

ಇವರೊಳಗೆ

ಅರ್ಜಿದಾರಳಿಗೆ ಎದ್ರಿರ ಸಹೋದರ ಹಾಲಿ ಮೃತಪಟ್ಟಿರುವ ದುರ್ಗ ಗ್ರಾಮದ ಕೊಂಬೆಟ್ಟು ಎಂಬಲ್ಲಿ ಇರುತ್ತಿದ್ದ ನೀಲಕಂಠ ಭಟ್ಟರು ಬರಕೊಟ್ಟ ಡಿ. ಪ್ರೋ. ನೋಟಿನ ಲೆಖ್ಖಾಚಾರವನ್ನು ವಸೂಲು ಮಾಡುವರೆ ಅವರ ವಾರೀಸುದಾರಳಾಗಿದ್ದ ಅವರ ವಿಧವೆ ವೇಣು ಯಾನೆ ಗೌರಿ ಬಾಯಿಯ ಮೇಲೆ ಅರ್ಜಿದಾರಳು ಈ ಕೋರ್ಟು ಸ್ಮಾಲ ನಂಬ್ರ 71/1988ನೇಗೆ ದಾವಾ ದಾಖಲು ಮಾಡಿ ಡಿಕ್ರಿ ಪಡೆದ ನಂತರ ಸದ್ರಿ ವೇಣು ಯಾನೆ ಗೌರಿ ಬಾಯಿಯು ಕಡಿದಾ ಸಂತತಿ ಇಲ್ಲದೆ ಮೃತಪಟ್ಟಿರುವುದರಿಂದ ಈಗ ಸದ್ರಿ ನೀಲಕಂಠ ಭಟ್ಟರ ಸೊತ್ತುಗಳಿಗೆ ಎದ್ರಿರು ಸಹೋದರರಾಗಿ ವಾರೀಸುದಾರರಾಗಿರುವುದರಿಂದ ಅವರನ್ನು ಕಕ್ಷಿ ಮಾಡಿ ಸದ್ರಿ ಡಿಕ್ರಿಯನ್ನು ಕ್ರಮ ಸ್ಯಾಡಿಗೆ ಟ್ರನ್ಸ್‌ಫರ ಮಾಡಿಸಬೇಕಾಗಿ ಅರ್ಜಿದಾರಳು ಮಾಡಿದ ಸದ್ರಿ ಅಮಲಜಾರಿಯು ತಾ. 31—10—1933ಕ್ಕೆ ತನಿಖೆಗೆ ಇಟ್ಟಿರುತ್ತದೆ. 2ನೇ ಎದ್ರಿ ಲಕ್ಷ್ಮೀನಾರಾಯಣ ಭಟ್ಟರು ಸದ್ರಿ ದಿವಸ ಕೋರ್ಟು ಮುಂದೆ ಹಾಜರಾಗಿ ಅವರ ಆಕ್ಷೇಪಗಳನ್ನು ಜಾಹೀರು ಮಾಡತಕ್ಕದ್ದು.

ಕಾರ್ಕಳ
9—10—1933.

D. Venkatesh Bhat.
ಅರ್ಜಿದಾರಳ ಕಡೆ ವಕೀಲ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 586/1933.

ಯು. ವೆಂಕಟೇಶ ಭಟ್ಟ—ವಾದಿ

ಮತ್ತು

ತೋನ್ಸೆ ಗೋಪಾಲ ಕೃಷ್ಣ ಶೆಣೈ—ಪ್ರತಿವಾದಿ.

ನೀವು ವಾದಿಯು ಸರಾಫ ಕಟ್ಟೆಯಲ್ಲಿ ನಡೆಸಿದ ಚಿನ್ನ ಬೆಳ್ಳಿ ಆಭರಣಗಳ ಲೇವಾದೇವಿ ಬಾಬ್ತು ನಿಮ್ಮಿಂದ ಅಸಲು ಬಡ್ಡಿಯಿಂದ ಬರತಕ್ಕ ರೂ. 214-8-0ನ್ನು ಕೇಳಿ ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 17-11-1933ಕ್ಕೆ ಅಖೈರು ತನಿಖೆಗೆ ಇಟ್ಟಿರುವುದರಿಂದ, ಸದ್ರಿ ತಾರೀಕು ಹಗಲು ಘಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ತಿಳಿಸಬೇಕಾಗಿಯೂ, ತಪ್ಪಿದರೆ ನಿಮ್ಮನ್ನು ಏಕಪಕ್ಷ ಮಾಡಿ, ದಾವೆಯನ್ನು ತೀರ್ಮಾನಿಸಲಾದೀತೆಂದೂ ಈ ಮೂಲಕ ತಿಳಿಸಲಾಗುತ್ತದೆ.

Udipi
8—10—1933

K. Vittal Nayak,
Pleader for Plaintiff.

ಅನುಕ್ರಮಣಿಕೆ.

ಅಗ್ರಲೇಖ
ಕಾಂಗ್ರೆಸ್ಸಿನೊಳಗಿನ ಗೊಂದಲ. . . . [illegible]
ಸ್ಫುಟಲೇಖನಗಳು . . . [illegible]
ಟಿಪ್ಪಣಿಗಳು . . . [illegible]
ವರ್ತಮಾನ ಸಂಗ್ರಹಗಳು
[illegible] . . . [illegible]
ಒಳದೇಶ ವರ್ತಮಾನ, ವಿದೇಶ ವರ್ತಮಾನ, . . . [illegible]
ವಿವಿಧ ಸಮಾಚಾರಗಳು . . . ೧೧
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಬಂಟ್ವಾಳ, ಪುತ್ತೂರು,
ಕಾಸರಗೋಡು, [illegible]. . . . [illegible]
ಜಗತ್ತೇ ಅಡ್ಡ ಬಿದ್ದರೂ ಕಠಿಣ ಬೇಡವಾಗಲು ಕಾರಣವೇನು? . . . ೧೦
ಪತ್ರವ್ಯವಹಾರ . . . ೧೩
ಮಹಾತ್ಮಾ ಗಾಂಧಿಯವರು ಪ್ರಾಣಕ್ಕೆ ಮೋಸ!!! . . . ೧೪
ನಾಶಪಡುವ ಯುದ್ಧಗಾನವು . . . B

ಸ್ವದೇಶಾಭಿಮಾನಿ.

ತಾ. ೧೩ನೇ ಶುಕ್ರವಾರ ಒಕ್ಟೋಬರ ೧೯೩೩.

ಕಾಂಗ್ರೆಸ್ಸಿನೊಳಗಿನ ಗೊಂದಲ.

ಪಂಡಿತ ಜವಾಹರಲಾಲ ನೆಹರೂರವರು ಜೈಲಿನಿಂದ ಬಿಡುಗಡೆ ಹೊಂದಿದ ಮೇಲೆ ಅವರಾದರೂ ದೇಶಕ್ಕೆ ಸರಿಯಾದ ಧುರೀಣತ್ವವನ್ನು ತೋರಿಸಬಹುದಾಗಿ ನಿರೀಕ್ಷಿಸಲಾಗಿತ್ತು. ಅವರು ಬಿಡುಗಡೆ ಹೊಂದಿದ ಮೇಲೆ ಅವರು ಪ್ರಕಟಪಡಿಸುತ್ತಿದ್ದ ಅಭಿಪ್ರಾಯಗಳೂ ಈ ನಿರೀಕ್ಷಣೆಯನ್ನು ಬಲಗೊಳಿಸಿದ್ದುವು. ಮಹಾತ್ಮಾ ಗಾಂಧಿಯವರೊಡನೆ ಅವರು ಆ ಮೇಲೆ ಮಾತುಗಳನ್ನು ಬೆಳೆಸಿದ್ದ ಕ್ರಮವೂ, ಆ ಬಗ್ಗೆ ಅವರು ತೆಗೆದ ಸಮಯವೂ ನೋಡಿದ್ದಲ್ಲಿ ನಿಜವಾಗಿಯೂ ಶ್ರೀ. ನೆಹರೂರವರು ನೂತನ ಪಥವನ್ನು ಉಪದೇಶಿಸಲು ಬರುವಂತಾಗಿ ಆಶಿಸಲ್ಪಟ್ಟಿದ್ದಿತು. ಆದರೆ ಈ ನಿರೀಕ್ಷಣೆಯೆಲ್ಲವೂ ವ್ಯರ್ಥವಾಯಿತೆಂದು ಬಹಳ ದುಃಖದಿಂದ ಒಪ್ಪಬೇಕಾಗಿದೆ.

ಜವಾಹರಲಾಲರಿಗೂ ಮಹಾತ್ಮಾಜೀಯವರಿಗೂ ಮಾತುಕತೆಗಳು ಹಲವು ದಿನಗಳ ವರೆಗೆ ನಡೆದುವು ಎಂಬುದೇ ಅವರೊಳಗೆ ಮತಭೇದಗಳು ಬಹಳವಿದ್ದುವು ಎಂಬುದಕ್ಕೆ ಸಾಕಷ್ಟು ಸಾಕ್ಷಿಯಾಗಿದೆ. ಆ ಮೇಲೆ ಅವರು ಒಟ್ಟಾಗಿ ಆಗಲೀ ಪ್ರತ್ಯೇಕವಾಗಿಯಾಗಲೀ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವ ಬದಲು ಶ್ರೀ. ನೆಹರೂಗಳು ಮಹಾತ್ಮಾಜೀಯವರಿಗೂ ಮಹಾತ್ಮಾಜೀಯವರು ನೆಹರೂರವರಿಗೂ ಪತ್ರ ಬದಲಾವಣೆಗಳನ್ನು ಮಾಡುವುದರ ಮೂಲಕ ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸಿದ್ದು ನೋಡಿದರೂ ಅವರೊಳಗಿನ ಮತಭೇದಗಳು ಸಾಕಷ್ಟು ತೀಕ್ಷ್ಣವಿದ್ದುವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹಾಗೆಯೇ ನೆಹರೂರವರ ಪತ್ರಗಳಲ್ಲಿ ವಿಚಾರಕ್ರಾಂತಿಯನ್ನುಂಟುಮಾಡಬಲ್ಲ ಅಭಿಪ್ರಾಯಗಳೂ ಅವರ ನಿಜವಾದ ಆಲೋಚನೆಗಳ ಗತಿಯನ್ನು ತೋರಿಸುತ್ತವೆ. ಹಾಗಾದರೂ ಶ್ರೀ. ಜವಾಹರಲಾಲ ನೆಹರೂರವರು ತಮ್ಮ ಸ್ವತಂತ್ರವಾದ ಧೋರಣವನ್ನು ಕೊಡುವ ಬದಲು ಗಾಂಧಿಜೀಯವರ ತೀರ್ಮಾನಗಳಿಗೇನೇ ತಲೆ ತಗ್ಗಿಸಿದುದನ್ನು ನೋಡಿದರೆ ನೆಹರೂರವರು ಇನ್ನೂ ಸ್ವತಂತ್ರ ಧುರೀಣತ್ವಕ್ಕೆ ಮೇಲೇಳಲು ತಯಾರಿಲ್ಲವೆಂದೂ, ಮಹಾತ್ಮಾಜೀಯವರ ಕೀರ್ತಿ ವಿಶೇಷಕ್ಕೆ ಬಲಿಯಾಗಿರುವರೆಂದೂ ನಾವು ಊಹಿಸಬೇಕಾಗುತ್ತದೆ.

ಹೀಗಾಗಿ ಸವಿನಯ ಕಾಯಿದೆಭಂಗ (Civil disobedience) ವೇ ಈಗಿನ ಕಾಂಗ್ರೆಸಿನ ಪ್ರಮುಖ ಕಾರ್ಯಕ್ರಮವಾಗಿ ಉಳಿದದೆ—ಮಾತ್ರ ಕಾರ್ಯದಲ್ಲಿ ಮಾತ್ರ ಅದು ಇಲ್ಲ. ಆದರೆ ಈಗಿನ ಕಾಂಗ್ರೆಸ್ಸಿನಲ್ಲಿ ತತ್ವಗಳನ್ನಲ್ಲದೆ ಕಾರ್ಯಗಳನ್ನು ಮಾನಿಸುವ ಧುರೀಣರೆಲ್ಲಿ? ಈ ತತ್ವಗಳ ಮೋಹದಿಂದ ಎಂದಿನ ವರೆಗೆ ಧುರೀಣರು ಮೇಲೇಳುವುದಿಲ್ಲವೊ, ಎಂದಿನ ವರೆಗೆ ಕಾರ್ಯಶಕ್ತಿಯುಳ್ಳ, ತತ್ವ ತಿರಸ್ಕಾರವುಳ್ಳ ಧುರೀಣರು ಹಿಂದುಸ್ಥಾನದಲ್ಲಿ ಉಂಟಾಗುವುದಿಲ್ಲವೊ ಅಂದಿನ ವರೆಗೆ ನಮ್ಮ ದೇಶವು ಸ್ವರಾಜ್ಯವನ್ನು ಸ್ವಪ್ನದಲ್ಲಿ ಕೂಡ ನಿರೀಕ್ಷಿಸಬೇಕಾಗಿಲ್ಲ.

ಇಂಗ್ಲೆಂಡಿನಲ್ಲಿ ಯಾವ ರೀತಿಯಲ್ಲಿ ಪರಿಸ್ಥಿತಿಯು ಬದಲಾಯಿಸುತ್ತಾ ಬರುತ್ತಿದೆಯೆಂದು ನೋಡಿದರೆ ತಿಳಿಯುತ್ತದೆ. ಈ ಮೊದಲು ಸರಕಾರಕ್ಕೆ ಕಾಂಗ್ರೆಸನ್ನು ತ್ಯಾಗ ತೃಪ್ತಿಗೊಳಿಸುವುದೇ [illegible] ಎಂಬ [illegible] ಯೋಚನೆಯು ಅವರಿಗೆ ಉಂಟಾಗುತ್ತದೆ. ಹಿಂದೂಸ್ಥಾನದ ಸರಕಾರದ ಬದಲಾವಣೆಗಳನ್ನು ಸೂಚಿಸಿ ಅವರು (White paper) ಶ್ವೇತಪತ್ರವನ್ನು ಪ್ರಕಟಿಸಿದಾಗ ಹಿಂದೀಯರು ಅದನ್ನು ನಿರಾಕರಿಸುವರೇನೋ ಎಂಬ ಹೆದರಿಕೆಯು ಅವರಿಗೆ ಇತ್ತು. ಈಗ ಅದು ಕೂಟದಲ್ಲಿ ಕನ್ಸರ್ವೇಟಿವ್ ಪಕ್ಷವು ನಿರೋಧಿಸುವುದೆಂಬ ಹೆದರಿಕೆಯು ಅವರಿಗಿದೆ. ಹೀಗೆ, ಮೊದಲು ಸರಕಾರದ ಲಕ್ಷ್ಯದಲ್ಲಿ ಹಿಂದೂಸ್ಥಾನವಿತ್ತು. ಈಗ ಹಿಂದೂಸ್ಥಾನದ ಜನತೆಯ ಯಾವ ಯೋಚನೆಯೂ ಅವರಿಗಿರುವುದಿಲ್ಲ. ಈಗ ಅವರ ಮುಂದೆ ಕನ್ಸರ್ವೇಟಿವ್ ಪಕ್ಷವೇ ಇದೆ.

ಇಂತಹ ಸಂದರ್ಭದಲ್ಲಿ ತತ್ವಗಳನ್ನೇ ಎತ್ತಿಕೊಂಡು ಧುರೀಣರು ಕಾರ್ಯವನ್ನು ತಿರಸ್ಕರಿಸುವುದು ಅತ್ಯಂತ ದುಃಖದ ಸಂಗತಿ. ಯಾವ ಜನವಾಗಲಿ, ಯಾವ ಮತವಾಗಲಿ, ಯಾವ ತತ್ವಗಳೇ ಆಗಲಿ ಉದ್ದೇಶಕ್ಕೆ ಪ್ರಥಮ ಪ್ರಾಧಾನ್ಯವನ್ನು ಕೊಡುತ್ತವೆ. ಉದ್ದೇಶಗಳನ್ನು ಹೊಂದುವ ಬಗ್ಗೆ ಅವಲಂಬಿಸಬೇಕಾದ ಉಪಾಯಗಳು ಕೇವಲ ಸಾಮಾನ್ಯವಿದ್ದುವು. ಆದರೆ ಮಹಾತ್ಮಾಜೀಯವರ ಮತದಲ್ಲಿ ಉದ್ದೇಶವು ಉಪಾಯಗಳ ಬಗ್ಗೆಯಲ್ಲದೆ ಉಪಾಯಗಳು ಉದ್ದೇಶದ ಬಗ್ಗೆ ಆಗಿರುವುದಿಲ್ಲ. ಅವರ ಚಳುವಳಿವು ಪರಾಜಯ ಹೊಂದಲಿಕ್ಕೆ ಇದೇ ಕಾರಣವಾಗಿರುತ್ತದೆಂಬುದಕ್ಕೆ ಸಂದೇಹವಿಲ್ಲ. ಪಂಡಿತ ನೆಹರೂರವರಿಗೆ ಇದರ ಅನುಭವವು ಚೆನ್ನಾಗಿ ಇರುವುದು. ಆದರೆ ಹಾಗೆ ಅನ್ನಲಿಕ್ಕೆ ಅವರು ಹಿಂಜರಿಯುತ್ತಾರೆ.

ಜಮ್ನಾದಾಸ ಮೆಹತಾರವರು ಅನ್ನುವಂತೆ ರಾಜಕೀಯ ಧುರೀಣತ್ವಕ್ಕೆ ಇನ್ನು ನಮಗೆ ಮಹಾತ್ಮಾಜೀಯವರು ಬೇಕಾಗಿಲ್ಲ. ತಾತ್ವಿಕ ರೂಪದಲ್ಲಿ ಮಹಾತ್ಮಾಜೀಯವರು ಗದ್ದಿರಬಹುದು. ಆದರೆ ವ್ಯವಹಾರಿಕ ಜೀವನದಲ್ಲಿ ದೃಶ್ಯ ಜಯ ಪರಾಜಯಗಳೇ ವ್ಯಕ್ತಿಯ ಅವಶ್ಯಕತೆ ಅನಾವಶ್ಯಕತೆಗಳನ್ನು ಸೂಚಿಸುತ್ತವೆ. ಕಾಂಗ್ರೆಸ್ಸು ಒಂದು ತತ್ವವಲ್ಲ; ಅದು ಜನಾಂಗದ ವ್ಯಾವಹಾರಿಕ ಜೀವನ.

ಗಾಂಧಿಜೀಯವರಿಗೆ ಈಗಿನ ಕಠಿಣ ಸಂದರ್ಭದಲ್ಲಿ ಧುರೀಣತೆ ತೋರಿಸಲಿಕ್ಕೆ ಏನೂ ಇಲ್ಲವೆಂಬುವುದು ಅವರ ಈಗಿನ ವರ್ತನದಿಂದಲೇ ತಿಳಿಯುವುದು. ಅವರಾಗಿಯೇ ತಾನು ಇನ್ನು ಒಂದು ವರ್ಷದ ವರೆಗೆ ರಾಜಕೀಯ ವಾತಾವರಣದಲ್ಲಿ ಬರುವುದಿಲ್ಲವೆಂದೂ ಬರೇ ಹರಿಜನ ಕೆಲಸವನ್ನೇ ನಡೆಸುವೆನೆಂದೂ ಹೇಳಿದ್ದಾರೆ. ಕಾಂಗ್ರೆಸ್ಸಿನ ಹಿತದ ದೃಷ್ಟಿಯಲ್ಲಿ ಇದು ಒಳ್ಳೇದೇ ಆಯಿತು. ಉಳಿದ ಧುರೀಣರಾದರೂ ಧೈರ್ಯದಿಂದ ನೂತನ ಕಾರ್ಯಕ್ರಮವನ್ನು ಕಾಂಗ್ರೆಸ್ಸಿನ ಬಗ್ಗೆ ರಚಿಸಿದ್ದರೆ ಉತ್ತಮವಿತ್ತು.

++ ++

Latest News.

ಲಾಹೋರಿನ ಸೆಂಟ್ರಲ್ ಜೈಲಿನಲ್ಲಿ ಸುಮಾರು ೩೦೦ ಜನ ಸಿಖ್ಖ ಕೈದಿಗಳು ಉಪವಾಸ ವ್ರತವನ್ನು ಕೈಕೊಂಡಿರುವರಾಗಿ ತಿಳಿದುಬಂದಿದೆ. ಕಾರಣ, ಈಗ ಅವರಿಗೆ ಒದಗಿಸುವ ಊಟದ ಸಾಮಾಗ್ರಿಗಳು ಸರಿಯಾಗಿಲ್ಲವೆಂದೂ ಮತ್ತು ಕೈದಿಗಳನ್ನು ಕಾಣಲು ಇರುವ ಈಗಿನ ಕ್ರಮಗಳನ್ನು ಬದಲಾಯಿಸಿದುದರಿಂದಲೂ ತಮ್ಮ ಸಂಕಷ್ಟಗಳನ್ನು ಅಧಿಕಾರಿಗಳು ಕೇಳದ, ಲಕ್ಷ್ಯ ಕೊಡದಿರುವುದರಿಂದಲೂ ಕೈದಿಗಳು ಉಪವಾಸವನ್ನು ಆಚರಿಸುತ್ತಿರುವರು.

ಬ್ರಿಟಿಷ ದಿನ ಪತ್ರಿಕೆಯಾದ "ಒಬ್ಸರ್ವರ್" ಜರ್ಮನಿಯೊಳಕ್ಕೆ ಬರಕೂಡದೆಂದು ಆಜ್ಞೆಯಾಗಿದೆ.

ಬೆಲ್ಜಿಯಂನ ವಿದ್ಯಾರ್ಥಿಯೊಬ್ಬನು ಫಯರ್ ಪ್ರೂಫ್ ವಿಮಾನವನ್ನು ಕಂಡು ಹಿಡಿದಿರುವನು. ಇದಕ್ಕೆ ಬೆಂಕಿಯು ತಗಲಲಾರದು.

ಅಲ್ಲಹಾಬಾದಿನಲ್ಲಿ ಪಂಡಿತ ಜವಾಹರಲಾಲರೇ ಮೊದಲಾದವರೂ ಕೂಡಿ ಕಾಂಗ್ರೆಸ್ಸಿನವರ ಒಂದು ಮಹಾ ಸಭೆಯು ಜರಗಿ ರಾಜಕೀಯ ಹೆಜ್ಜೆಯ ಕುರಿತು ಆಲೋಚಿಸಿಕೊಳ್ಳಲಾಯಿತು.

ಚೈನೀಸ್ ರೈಲ್ವೆಯನ್ನು ಜಾಪಾನು ಕೈವಶಪಡಿಸಿಕೊಳ್ಳಲು ಯತ್ನಿಸುತ್ತಿದೆಯಾಗಿ ರಷ್ಯದ ಸರಕಾರವು ಪ್ರಕಟಿಸಿರುವುದರಿಂದ ಅಲ್ಲಿ ವೃಷವನ್ನು? ಎಡೆ ದೊರೆತಿದೆ.

ಟಿನ್ನವೆಲ್ಲಿಯಲ್ಲಿ ಕನ್ನೆ ೬ ವರ್ಷದ ಮಗಳನ್ನು ದೇವಸ್ಥಾನದ ಕೆರೆಯಲ್ಲಿ ಮುಳುಗಿಸಿ ಕೊಂದು, ೪೫ ವರ್ಷದ ಒಬ್ಬಳು ಸ್ತ್ರೀಯೂ ಕೆರೆಯಲ್ಲಿ ಹಾರಿ ಆತ್ಮಹತ್ಯ ಮಾಡಿಕೊಂಡಿರುವಳು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಬೇಗನೇ ಸಭೆ ಸೇರಿ ರಾಜಕೀಯವನ್ನು ಸಮಾಲೋಚಿಸುವುದು ಯೋಗ್ಯವೆಂದು ಮಾಲವೀಯರು ಅಭಿಪ್ರಾಯಗೊಂಡಿರುವರು.

ಒಳದೇಶ ವರ್ತಮಾನ

ಬಂಗಾಲದಲ್ಲಿ ಸರಕಾರವು ಒಂದಿಂದ ಹನ್ನೆರಡನ್ನು ಭಾಷಣ [illegible] ಕೊಂಡಿದ್ದ ಕಣೇ ದರ್ಜೆಯ ಕೈದಿಗಳಿಗೆ [illegible] ಶಿಕ್ಷೆಯಾಗಿದೆ.

ಅನಧಿಕೃತ ಮದ್ದುಗುಂಡುಗಳನ್ನು ಇಟ್ಟುಕೊಂಡವರಿಗೆ ೮೦ ತಿಂಗಳ? ಶಿಕ್ಷೆ ಕೊಡಬೇಕೆಂದು ಮದ್ರಾಸಿನ ಯುರೋಪಿಯನರ ಆಗ್ರಹ.

ನಾಸಿಕ ಜೈಲಿನಿಂದ ಬಿಡುಗಡೆಮಾಡಲ್ಪಟ್ಟು ಕರಾಚಿಗೆ ಹೋದ ಶ್ರೀ ನಾರಾಯಣದಾಸ್ ಅನಂದಜೀ ಬೆಚಾರ್ ಎಂ. ಎಲ್. ಎ. ಗಳವರು ರಾಜಕೀಯದಲ್ಲಿ ಭಾಗವಹಿಸಬಾರದಾಗಿ ಅಧಿಕಾರಿಗಳ ನೋಟೀಸು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ಡಾ। ಹರ್ಡೀಕರ್ ಮತ್ತು ಸೋಫಿಯಾ ಸೋಮ್ಜಿಯವರು ವಾರ್ಧಕ್ಕೆ ತೆರಳಿದ್ದು, ಗಾಂಧಿಜೀಯವರೊಡನೆ ಮಾತುಕತೆ ನಡೆಸುತ್ತಿರುವರು.

ಮಹಾತ್ಮಾ ಗಾಂಧಿಯವರು ವಾರ್ಧಾದಲ್ಲಿ ನವಂಬರ ೭ರ ತನಕ ಇರುವರು. ಅವರು ೧೦೩ ಪೌಂಡು ತೂಕವಿರುತ್ತಾರೆ. ಆರೋಗ್ಯವು ನೆಟ್ಟಗಿದೆ.

ಗಾಂಧಿಜೀಯವರು ೧೯೩೪ರ ಆಗೋಸ್ತು ತಿಂಗಳ ೪ರ ತನಕ ಹರಿಜನ ಸೇವೆಯಲ್ಲೇ ನಿರತರಾಗುವರೆಂದು ಅವರು ವಾರ್ಧಾದಲ್ಲಿ ಓದಿ ಹೇಳಿಸಿದ ಭಾಷಣದಿಂದ ತಿಳಿಯಲಾಗುತ್ತದೆ.

ಕ್ರಾಂತಿಕಾರ ಸಂಗಡದ ದಿನೇಶ ಮುಜುಂದಾರ, ಜಗದಾನಂದ ಮುಖರ್ಜಿ ಮತ್ತು ನಳಿನದಾಸ ಎಂಬ ಮೂವರು ಯುವಕರಿಗೆ ಕಲ್ಕತ್ತದಲ್ಲಿ ಮರಣಾಂತಿಕ ಮತ್ತು ಗಡಿಪಾರು ಶಿಕ್ಷೆಗಳಾಗಿವೆ.

ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರು ಬೇಗನೇ ಇಂಗ್ಲೆಂಡಿಗೆ ಹೋಗುವರೆಂದು ತಿಳಿದುಬಂದಿದೆ.

ಬಾಬೂ ರಾಜೇಂದ್ರ ಪ್ರಸಾದರು ಪಾಟ್ನಾದಲ್ಲಿ ಅತಿರೇಕ ಅಸ್ವಸ್ಥದಲ್ಲಿರುವರು.

ಮುಂಬಾಯಿಯಲ್ಲಿ ವಿಶೇಷ ಬಿರುಗಾಳಿಯೆದ್ದು ೧೩ ಮಂದಿಗಳು ಇದ್ದ ಒಂದು ದೋಣಿಯು ನದಿಯಲ್ಲಿ ಕವಚಿ ಬಿದ್ದು ೧೨ ಮಂದಿಗಳು ಈಜಿ ರಕ್ಷಿತರಾದರು, ೧ ಮಂದಿಗಳು ಮುಳುಗಿದರು.

ಪೂನೆಯಲ್ಲಿ ಕಳೆದ ವಾರ ೩೮ ಜನರಿಗೆ ಪ್ಲೇಗು ರೋಗವು ತಗಲಿ ೧೭ ಜನರು ಮೃತರಾದರು.

ಬನ್ನುವಿನಲ್ಲಿ ೩೦ ಮಂದಿಗಳು ಕುಳಿತಿದ್ದ ಒಂದು ಲೋರಿಯು ಕವಚಿ ಬಿದ್ದು ಹಲವರು ಜಖಂಗೊಂಡರು.

ಅಮೃತಸರದ ಮೋಚಿ ಹಳ್ಳಿಯಲ್ಲಿ ಮದುವೆಯ ಊಟವಾಗಿ ಎದ್ದೊಡನೆ ವರನ ತಂದೆಯೂ ಇನ್ನಿತರ ೧೯ ಮಂದಿಗಳೂ ಮೃತರಾದರು. ವಿಷ ಮಿಶ್ರಿತ ಅನ್ನದ ದೆಸೆಯಿಂದೆಂದು ತಿಳಿಯಲಾಗಿದೆ.

ಮಿಡ್ನಾಪುರದಲ್ಲಿ ಎಲ್ಲಾ ಹಿಂದೂ ವಿದ್ಯಾರ್ಥಿಗಳು ಕತ್ತಲಾದ ಮೇಲೂ ಮುಂಜಾನೆಯ ಮೊದಲೂ ತಮ್ಮ ಮನೆಗಳಿಂದ ಹೊರಗಿಳಿಬಾರದೆಂದೂ ಸೈಕಲ್‌ಗಳನ್ನುಪಯೋಗಿಸಬಾರದೆಂದೂ ಸರಕಾರವಾಗಿ ನಿರ್ಬಂಧಿಸಿರುವರು.

ಪೇಶಾವರದ ಶಹಬ್ಬಾಜ್ ಎಂಬ ವಾರ ಪತ್ರಿಕೆಯ ಸಂಪಾದಕರು ಒಂದು ಸಂಚಿಕೆಯಲ್ಲಿ ಮುದ್ರಕ ಪ್ರಕಾಶಕರ ಹೆಸರುಗಳನ್ನು ಪ್ರಕಟಿಸದಿದ್ದುದಕ್ಕೆ ೩೦೦ ರೂಪಾಯಿ ಜುಲುಮಾನೆ.

ಸಕಲೇಶಪುರದ ವಾರ್ತೆ— ಕೆಲವು ದಿವಸಗಳಿಂದ ಮಳೆಯು ವಿಪರೀತವಾಗಿ ಬರುತ್ತಿದ್ದು ಕಲ್ಲಿನ ರಸ್ತೆಗಳೂ, ಯಾಲಕ್ಕಿ, ಕಾಫಿ, ರಾಗಿ, ಇತ್ಯಾದಿ ಬೆಳೆಗಳಿಗೂ ತೊಂದರೆಯಾಗಿದೆ. ಮೋರಿಗಳಂತೂ ಮಳೆಗಾಲದಲ್ಲಿ ಧ್ವಂಸವಾಗಿವೆ.

ಸ್ಥಳೀಯ ಹಂಗಾಮಿ ಅಮಲ್ದಾರರಾಗಿರುವ ರಾ। ಡಬ್ಲ್ಯು. ಪಿನ್. ಇವರಿಗೆ ಇತ್ತೀಚೆಗೆ ಖಾಯಂ ಆಗಿರುತ್ತದಾಗಿಯೂ, ಸದ್ಯದಲ್ಲೇ ಪೋಲೀಸ್ ಸುಪರಿಂಟೆಂಡೆಂಟರರಾಗಿ ನೇಮಕ ಹೊಂದಲಿರುವರಾಗಿಯೂ ಕೇಳುತ್ತೇವೆ. ಸದರಿಯವರು ಗವರ್ನಮೆಂಟಿಗೂ, ಪಬ್ಲಿಕಿಗೂ ಅನುಗುಣವಾಗಿ ತಮ್ಮ ಕರ್ತವ್ಯವನ್ನು ಮಾಡುತ್ತಿದ್ದು ಜನಾದರಕ್ಕೂ, ಮೇಲಾಧಿಕಾರಿಗಳ ಪ್ರೀತಿಗೂ ಪಾತ್ರರಾಗಿರುತ್ತಾರೆ.

ಸ್ಥಳೀಯ ಪ್ರೊಸಿಕ್ಯೂಟಿವ್ ಇನ್ಸ್‌ಪೆಕ್ಟರರಾದ ರಾ। ಕೆ. ಸದಾಶಿವ ರಾವ್ ಇವರನ್ನು ಚಿಂತಾಮಣಿಗೆ ಪೋಲಿಸ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆಂಗಿ ಕೇಳುತ್ತೇವೆ.

ಸ್ವೀಕಾರ

ಜೀವನ ಸಂಗೀತ—ಜಯಕರ್ನಾಟಕ ಗ್ರಂಥಮಾಲೆಯಿಂದ [illegible] ಸಂಗ್ರಹವಿದು. ಸಂಗ್ರಾಹಕರು: ಸಿಂಪಿ ಲಿಂಗಣ್ಣ ಮತ್ತು [illegible] ಬೆಲೆ ಹನ್ನೆರಡಾಣೆ?

ವೈಧಿಕ ಅಗ್ನಿ ಹೋತ್ರ ವಿಧಿ ಮತ್ತು ವೈದಿಕ ಸಂಧ್ಯಾವಂದನವು ಅದರ ವ್ಯಾಖ್ಯಾನವೂ (ಕರ್ನಾಟಕ ಮತ್ತು ಹಿಂದೀ ಅಕ್ಷರ [illegible] ಸಹಿತ) ಸಂಗ್ರಹಿಸಿದುದು—[illegible] ಎರಡಾಣೆ. ಮುಂಬಾಯಿಯ [illegible] ಪ್ರಕಟವಾಯಿತು.

ದಕ್ಷಿಣ ಕನ್ನಡ.

ಮಂಗಳೂರು: ಬರುವ ನವಂಬರ ತಿಂಗಳ ತಾ. ೫ನೇ ಆದಿತ್ಯವಾರ ಬೆಳಿಗ್ಗೆ ೯ ಗಂಟೆಗೆ ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲ್, ಕೋಡಿಯಾಲಬೈಲಿನಲ್ಲಿ ದ. ಕ. ಜಿಲ್ಲಾ ಹಿಂದೀಪ್ರಚಾರಕ ಸಂಘದ ವಿಶೇಷ ಅಧಿವೇಶನವು ಜರಗುವುದು. ಕಾರ್ಯಕ್ರಮ:— (೧) ಸಂಘದ ನಿಯಮಾವಳಿಗಳ ಮಂಜೂರಾತಿ, (೨) ಮುಂದಿನ ವರ್ಷದ ಕಾರ್ಯಕ್ರಮ, (೩) ಇತರ ವಿಷಯಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೀ ಕೆಲಸ ಮಾಡುವ ಮಹಾಶಯರೆಲ್ಲರೂ ಸಭೆಗೆ ದಯಮಾಡಿಸಬೇಕಾಗಿ ಪ್ರಾರ್ಥನೆ ಎಂದು ಶ್ರೀಗಳಾದ ಕೆ ರಾಘವಾಚಾರ್, ಬಿಜೂರ್ ವಿಶ್ವೇಶ್ವರರಾವ್, ಜೊತೆಕಾರ್ಯದರ್ಶಿಗಳು ತಿಳಿಸುತ್ತಾರೆ.

ಕೋರ್ಟುವಾರ್ಡ I. S. No. ೪—೧೪ ಮಿ ಪಿಂಟೋರವರ ಬೇಳರಿಯ ಎದುರು ವಾಸಿಸುವ ಶ್ರೀಮತಿ ಅಂಬಾಬಾಯಿ ಎಂಬ ಮಿಡ್‌ವೈಫ್ ಮದ್ರಾಸಿನ ಪರೀಕ್ಷೆಯಲ್ಲಿ ಪಾಸಾಗಿರುವರು. ಅವರನ್ನು ರಿಜರ್ವ ಮಿಡ್‌ವೈಫ್ ಆಗಿ ವರ್ಗಾಯಿಸಲ್ಪಟ್ಟ ಶ್ರೀಮತಿ ಪ್ರಿಸಿಲ್ ಮಸ್ಕರೇಂಞಸ್‌ರವರ ಸ್ಥಾನದಲ್ಲಿ ತಾರೀಕು ೨೩—೯—೩೬ರಿಂದ ನೇಮಿಸಲಾಗಿದೆಯೆಂದು ಮುನಿಸಿಪಲ್ ಹೆಲ್ತ್ ಆಫೀಸರರು ತಿಳಿಸುತ್ತಾರೆ.

ತಾ. ೨೦—೯—೩೬ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೧೯ ಮರಣಗಳೂ, ೫೬ ಜನನಗಳೂ ಆಗಿವೆ.

ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ಒಂದು ಸಾಮಾನ್ಯ ಸಭೆಯು ತಾ. ೨೪ನೇ ದಿನ ಅಪರಾಹ್ನ ೩—೩೦ಕ್ಕೆ ಜರಗಿ, ೧೯೩೫—೩೬ರ ಜಿಲ್ಲಾ ಲೋಕಲ್ ಬೋರ್ಡುಗಳ ಆಡಳಿತ ರಿಪೋರ್ಟು ಸಮಾಲೋಚಿಸಲ್ಪಡುವುದು.

ಪೂನಮಾಲಿ, ಮದ್ರಾಸು ಇಲ್ಲಿಯ ಕುರುಡರ ಶಾಲೆಯಲ್ಲಿ ೫೩ ಬಾಲಕರು ವಿದ್ಯೆಯನ್ನು ಪಡೆಯುತ್ತಿರುವರು. ೧೦ ವರ್ಷಗಳೊಳಗಿನ ಅನೇಕ ಕುರುಡ ಬಾಲಕರಿಗೆ ಇನ್ನೂ ಸ್ಥಳವಿದೆ. ತಿಂಗಳಿಗೆ ೫ ರೂಪಾಯಿ ಮಾತ್ರ ಕೊಡಬೇಕಿದೆ. ಇದರಿಂದ ಬಾಲಕನಿಗೆ ಅನ್ನ ವಸ್ತ್ರ, ಮನೆ, ವಿದ್ಯೆ, ಅಗತ್ಯವಿದ್ದರೆ ಚಿಕಿತ್ಸೆ ನಡೆಸಿ ಸಾಕಲಾಗುತ್ತದೆ. ಕೈಗಾರಿಕೆಗಳನ್ನು ಕಲಿಸಲಾಗುತ್ತದೆ. ಕುರುಡ ಮಕ್ಕಳಿರುವ ಹೆತ್ತವರು ಈ ಸಂಸ್ಥೆಯ ಸದುಪಯೋಗವನ್ನು ಮಾಡಿಕೊಳ್ಳಬೇಕಾಗಿ ಡಿ. ಬೊ. ಪ್ರೆಸಿಡೆಂಟರಾದ ರಾ॥ ಎ. ಬಿ. ಶೆಟ್ಟಿಯವರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನವರ ೧೯೩೬ರ ವರದಿಯು ನಮ್ಮ ಹಸ್ತಗತವಾಗಿದೆ. ಈ ಸಂಸ್ಥೆಯು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವುದು ಅಭಿನಂದನೀಯವಾಗಿದೆ.

ಬೆಂಗಳೂರಿನ ಸರಸ್ವತಿ ಪತ್ರಿಕೆಯ ಸಂಪಾದಕಿ ಶ್ರೀ ಆರ್. ಕಲ್ಯಾಣಮ್ಮನವರು ಇಲ್ಲಿಗೆ ಬಂದಿದ್ದರು. ತಾ. ೯ನೇ ಮಧ್ಯಾಹ್ನ ೩ ಗಂಟೆಗೆ ಟ್ರೈನಿಂಗ್ ಶಾಲೆಯಲ್ಲಿ ಸಾಹಿತ್ಯ ಸಂಘದ ಸಭೆಯಾಯಿತು. ಆರಂಭದಲ್ಲಿ ಶ್ರೀ. ನಂಜುಂಡ ಸ್ವಾಮಿಗಳು ಅತಿಥಿಗಳ ಪರಿಚಯವನ್ನು ಹೇಳಿದ ಮೇಲೆ, ಶ್ರೀಮತಿಯವರು ಸಾಹಿತ್ಯದ ವಿಚಾರವಾಗಿ ಮನೋಹರವಾಗಿ ಭಾಷಣಮಾಡಿದರು. ಕೊನೆಗೆ ಶ್ರೀ ಎಚ್. ರಾಮರಾವ್, ಎಮ್. ಎ. ಎಲ್. ಟಿ., ಯವರು ಧನ್ಯವಾದಗಳನ್ನರ್ಪಿಸಲು ಸಭಾವಸಾನವಾಯಿತು.

ಅದೇ ದಿನ ಸಾಯಂಕಾಲ ೪॥ ಗಂಟೆಗೆ ಗವರ್ನಮೆಂಟ್ ಕಾಲೇಜಿನ ಕರ್ನಾಟಕ ಸಂಘದಲ್ಲಿಯೂ ಒಂದು ಸಭೆಯಾಯಿತು. ಶ್ರೀ. ಪಡುಕೋಣೆ ರಮಾದೇವಿಯವರು ಅಧ್ಯಕ್ಷೆಯರು. ಅಧ್ಯಕ್ಷೆಯರ ಅಪೇಕ್ಷೆಯಂತೆ ಶ್ರೀ ಶ್ರೀನಾರಾಯಣ ಪುಣಿಂಚತ್ತಾಯರು ಭಾಷಣಕರ್ತರ ಪರಿಚಯವನ್ನು ಹೇಳಿದ ಮೇಲೆ, ಶ್ರೀಮತಿ ಕಲ್ಯಾಣಮ್ಮನವರು ವಾಙ್ಮಯ ವಿಚಾರವಾಗಿ ಭಾಷಣಮಾಡಿದರು. ಕೊನೆಗೆ ಅಧ್ಯಕ್ಷೆಯರ ಭಾಷಣವೂ ಆಗಿ, ಕಾರ್ಯದರ್ಶಿ ಶ್ರೀ ಟಿ. ಅಪ್ಪಯ್ಯನವರು ಕೃತಜ್ಞತೆಗಳನ್ನರ್ಪಿಸಲು ಸಭೆಯು ಮುಕ್ತಾಯವಾಯಿತು.

ಮಂಗಳೂರಿನ ಸುಪ್ರಸಿದ್ಧ ವ್ಯಕ್ತಿಗಳೂ, ಅನೇಕ ಸಂಸ್ಥೆಗಳ ಪ್ರಮುಖರೂ, ದ. ಕ. ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರೂ ಆದ ಮಾ॥ ರಾ॥ ಸಯಂಪಳ್ಳಿ ಸುಬ್ಬರಾಯರು ನಿನ್ನೆ ಬೆಳಿಗ್ಗೆ ಮದ್ರಾಸಿನಲ್ಲಿ ಕಾಲವಾದರೆಂದು ತಿಳಿಸುವುದಕ್ಕೆ ಬಹಳ ವಿಷಾದಿಸುತ್ತೇವೆ.

ಇಲ್ಲಿಯ ಉರ್ವ ಆಗರ್ಜಿಯಲ್ಲಿ ಪ್ರತಿ ವರ್ಷವೂ ನಡೆಯುವ ಪೊಂಪೈ ಮರಿಯಮ್ಮನವರ ಹಬ್ಬವು ಈ ವರ್ಷವೂ ತಾ. ೮—೧೦—೧೯೩೬ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಸಾಯಂಕಾಲಕ್ಕೆ ಮದ್ದು ಸುಡೋಣವಾಯಿತು.

ಶ್ರೀ ಕೃಷ್ಣಸಿನೆಮ ಮಂದಿರದಲ್ಲಿ ತಾ. ೧೨ರಿಂದ "ಭಾರತಮಾತಾ". ತಾ. ೧೫ರಿಂದ ಯುನೈಟೆಡ್ ಆರ್ಟಿಸ್ಟ್‌ರ "ಎರೋಸ್ಮಿತ್" ತಾ. ೧೭ರಿಂದ ಸಾಗರ ಮೂವಿಟೋನ್ ಕಂಪೆನಿಯವರ "ಕೌರವ ಪಾಂಡವ" ಎಂಬ ಮಾತಾಡುವ ಚಿತ್ರಗಳನ್ನು ಪ್ರದರ್ಶಿಸಲಾಗುವುದು. ಮೂರು ಮಂದಿ ನರ್ತಕಿಯರು ಅತಿ ಬೇಗನೆ ಬರುತ್ತಾರೆ, ಇವರೊಡನೆ ಪ್ರಚಂಡ ಪ್ರಹಸನಗಾರನೊಬ್ಬನಿರುವನು.

ಇದೇ ತಿಂಗಳ ತಾರೀಕು ೧೮—೧೦—೩೬ನೇ ಆದಿತ್ಯವಾರ ರಾತ್ರಿ ೯ ಗಂಟೆಗೆ ಮಂಗಳೂರು ತೇರುಬೀದಿ, ಶ್ರೀ ವೆಂಕಟ್ರಮಣ ದೇವಸ್ಥಾನದ ಬಳಿಯಲ್ಲಿರುವ "ಶ್ರೀ ಚಾಮುಂಡೇಶ್ವರಿ" ಸಭೆಯ ಆಶ್ರಯದಲ್ಲಿ, ಗ್ರಾಮೊಫೋನ್ ಖ್ಯಾತಿಯ ಮಾಸ್ಟರ್ ಎಚ್. ನಾರಾಯಣರಾಯರವರ ಸಂಗೀತ ಕಚೇರಿಯು ಜರಗುವುದು. ಸಂಗೀತಾಭಿಮಾನಿಗಳೆಲ್ಲರಿಗೂ ಸ್ವಾಗತವಿದೆ ಎಂದು ಸದರಿ ಸಭೆಯ ವ್ಯವಸ್ಥಾಪಕರಾದ ಶ್ರೀ ಎಮ್. ಗೋಪಾಲರಾಯರು ತಿಳಿಸುತ್ತಾರೆ.

ಬಂಟ್ವಾಳ— ಇಲ್ಲಿಯ ಬಹಳ ಪುರಾತನ ದೇವಸ್ಥಾನವಾದ ಮಹಾಲಿಂಗೇಶ್ವರ ದೇವಸ್ಥಾನದ ಉದ್ಧಾರಕ್ಕಾಗಿ ಒಂದು ಪಂಚಾಯತಿ ಸಭೆಯನ್ನು ಸ್ಥಾಪಿಸುವುದಕ್ಕಾಗಿ ಬಂಟವಾಳ, ಅಮಟಾಡಿ, ಮೂಡ, ಕಳ್ಳಿಗೆ, ತುಂಬೆ, ಕುರಿಯಾಳ ಗ್ರಾಮದ ಬ್ರಾಹ್ಮಣ ಬ್ರಾಹ್ಮಣೇತರ ಮಹನೀಯರ ಒಂದು ಮಹಾಸಭೆಯು ಅದೇ ದೇವಸ್ಥಾನದಲ್ಲಿ ತಾ. ೯ನೇ ಶನಿವಾರ ಕೂಡಿ ಬಂದು ಪಂಚಾಯತು ಸ್ಥಾಪನೆಯಾಗಿ ಮೆಂಬರರನ್ನು ಚುನಾಯಿಸಲಾಯಿತು. ರಾತ್ರಿ ಯಕ್ಷಗಾನವಿತ್ತು, ಅಮುಣಂಜೆ ಸುಬ್ರಾಯರು ಭಾಗವತರು, ವಿದ್ವಾಂಸರಾದ ಅರ್ಥಗಾರರೂ ಬಂದಿದ್ದರು.

ಮಂಗಳೂರು ತಾಲೂಕು ಬೋರ್ಡಿನವರು ಖರ್ಚು ಕಡಿಮೆ ಮಾಡುವುದಕ್ಕಾಗಿ ಬಂಟವಾಳ ಬೋರ್ಡುಶಾಲೆ ಮತ್ತು ಬಿಜೈ ಶಾಲೆಗಳನ್ನು ಮುಚ್ಚುವ ಆಲೋಚನೆ ಮಾಡಿ ತನಿಖೆ ನಡೆಸುವುದಕ್ಕಾಗಿ ಮಂಗಳೂರು ರೇಂಜ್ ಡಿಪ್ಯುಟಿ ಇನ್ಸ್‌ಪೆಕ್ಟರರು ಬಂಟವಾಳಕ್ಕೆ ಬಂದಿದ್ದರು. ರಾ॥ ಅಡಿಗರ ಕಾಲದಲ್ಲಿ ಉತ್ತಮವಾದ ಮೂಲ್ಕಿ ಬೋರ್ಡುಶಾಲೆ ಮುಚ್ಚುವ ಆಲೋಚನೆಯಾಯಿತು. ಈಗ ಗೊನ್‌ಸಾಲ್ವಿಸರ ಕಾಲದಲ್ಲಿ ಉತ್ತಮವಾದ ಮತ್ತು ಹುಡುಗರಿಂದ ತುಂಬಿರುವ ಬಂಟವಾಳ ಮತ್ತು ಬಿಜೈ ಶಾಲೆಗಳನ್ನು ಮುಚ್ಚುತ್ತಾರಂತೆ, ನಮ್ಮ ಮೆಂಬರರು ಎಚ್ಚರಿಕೆಯಿಂದಿರುವುದು ಒಳ್ಳೇದು.

ಪಾಣೆಮಂಗಳೂರು— ತಾರೀಕು ೨೮—೯—೩೬ರಲ್ಲು ಇಲ್ಲಿಯ ಎಸ್. ಎ. ಎಸ್. ಶಾಲಾವರ್ಧಂತಿಯ ಸಮಯ ಅಧ್ಯಕ್ಷಸ್ಥಾನಕ್ಕೆ ನಿಯಮಿಸಲ್ಪಟ್ಟ ಮಂಗಳೂರು ರೇಂಜ್ ಶಾಲಾ ಇನ್ಸ್‌ಪೆಕ್ಟರ್ ಕೊಗ್ಗನವರು ಪ್ರಕೃತ ಸನ್ನಾಸಂಗ ಯೋಗ್ಯವಾಗಿರುವ ಈ ಶಾಲೆಗೆ ಯೋಗ್ಯವಾದ ಕಟ್ಟಡವಿಲ್ಲದಿರುವ ಕೊರತೆಯನ್ನು ನೆರೆದ ಸಭಿಕರಿಗೆ ಮಂದಟ್ಟಾಗುವಂತೆ ವಿವರಿಸಿದ್ದರು. ಆ ಕುರಿತು ಆಲೋಚಿಸುವರೆ ತಾ. ೨೭—೯—೩೬ರಲ್ಲು ನೆರೆದ ಊರವರ ಸಭೆಯಲ್ಲಿ ಶಾಲಾ ಕಟ್ಟಡಕ್ಕೆ ಯೋಗ್ಯವೂ ಅನುಕೂಲವೂ ಆದ ಒಂದು ಸ್ಥಳವನ್ನು ಚುನಾಯಿಸಿ, ಅದರಲ್ಲಿ ಸಾಧಾರಣ ಎರಡು ಸಾವಿರ ರೂಪಾಯಿ ಖರ್ಚಿನಿಂದ ಬೇರೆ ಕಟ್ಟಡವನ್ನು ಕಟ್ಟಿಸುವರೆ ಒಂದು ಕಾರ್ಯಕಾರಿ ಸಮಿತಿಯನ್ನೇರ್ಪಡಿಸಿದ್ದಲ್ಲದೆ, ಆರಿಸೋಣಾದ ಸ್ಥಳದ ಮಂಜೂರಾತಿಯ ಬಗ್ಗೆ ಶಾಲಾ ಇನ್ಸ್‌ಪೆಕ್ಟರರವರ ಪ್ರಮುಖ ಜಿಲ್ಲಾ ಎಜುಕೇಶನಲ್ ಕೌನ್ಸಿಲಿನವರಿಗೆ ಬರಕೊಂಡಿರುತ್ತದೆ. ಈ ಭಾವಿನ ಹುಕುಂ ಕೈಸೇರಿದೊಡನೆ ಕಟ್ಟಡದ ಕಾಮಗಾರಿಗಳನ್ನು ಕೈಕೊಳ್ಳುವ ಅಗತ್ಯವಿರುವುದರಿಂದ ಪ್ರಯಾಣದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಹುಕುಂ ನಿರೀಕ್ಷೆಯಲ್ಲಿರುವರು.

ಪುತ್ತೂರು— ತಾ ೩—೧೦—೧೯೩೬ನೇ ದಿವಸ ರಾತ್ರಿ ಸದರಿ ಶಾಲಾ ಮುಖ್ಯ ಉಪಾಧ್ಯಾಯರಿಂದ ರಚಿಸಲ್ಪಟ್ಟ "ಸಾಕವ್ವ" ಎಂಬ ನಾಟಕವನ್ನು ಶಾಲಾ ಬಾಲಕರು ಹಾಗೂ ಬಾಲಕಿಯರೂ ಕೂಡಿ ಆಡಿ ತೋರಿಸಿದರು. ಈ ಬಗ್ಗೆ ಪರದೆಗಳನ್ನು ಒದಗಿಸಿಕೊಟ್ಟ ಕಡಬ ಕುಂಬಾಟಿ ಕೃಷ್ಣಯ್ಯನವರ ಉಪಕಾರವು ಸ್ಮರಣೀಯವಾಗಿದೆ.

ಸುರತ್ಕಲ್— ಕಳೆದ ಶನಿವಾರ ಇಡ್ಯ ವಿದ್ಯಾದಾಯಿನಿ ಹ್ಯಾಯರ್ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಶ್ರೀ ದಾಮೋದರ ರಾಯರ ಮತ್ತು ಶ್ರೀ ತಿಮ್ಮಪ್ಪಬಂಗೇರರ ಪ್ರೋತ್ಸಾಹದಿಂದ ಪ್ರೊ. ಡಿ. ಟಿ. ಸುವರ್ಣ ಮತ್ತು ಅವರ ವಿದ್ಯಾರ್ಥಿಗಳ ನವನವೀನ ಶಕ್ತಿಪ್ರದರ್ಶನದ ಆಟಗಳು ಯಶಸ್ವಿಯಾಗಿ ತೋರಿಸಲ್ಪಟ್ಟಿತು. ಇವರ ವಿದ್ಯಾರ್ಥಿಗಳು ಪ್ರೇಮಪುರಸ್ಕರವಾಗಿ ಒಂದು ಸುವರ್ಣಪದಕವನ್ನು ಅರ್ಪಿಸಿದರು.

ಉಡುಪಿ— ಟೂರ್ನಾಮೆಂಟ್ ಟೀಮುಗಳಲ್ಲಿ ಉಡುಪಿ ಕ್ರಿಕೆಟ್ ಕ್ಲಬ್ಬಿನವರು ಕಂಬ್ಯಾಂಡ್ ಶಾಲಾ ಟೀಮಿನೊಡನೆಯೂ, ಉಡುಪಿಯ ವೈ. ಎಮ್. ಎಸ್. ಕ್ಲಬ್ಬಿನವರು ಕಂದಾಪುರ ಟೀಮಿನೊಡನೆಯೂ ಗೆದ್ದು, ಎರಡೂ ಟೀಮುಗಳೊಳಗೆ ಪಂದ್ಯಾಟವು ನಡೆದಲ್ಲಿ, ಉಡುಪಿ ಕ್ರಿಕೆಟ್ ಕ್ಲಬ್ಬಿನವರ ಆಕ್ಷೇಪಕರ ವರ್ತನೆಯ ದೆಸೆಯಿಂದ ವೈ. ಎಮ್. ಎಸ್. ಕ್ಲಬ್ಬಿನವರೇ ಗೆದ್ದವರೆಂದು ಅಂಪಾಯರರು ನಿಶ್ಚಯಿಸಿರುತ್ತಾರೆ. ಒಟ್ಟಾರೆ ಮೇಲೆ ಕ್ರಿಕೆಟ್ ಆಟದಲ್ಲಿ ಶಾಲಾ ವಿದ್ಯಾರ್ಥಿಗಳಲ್ಲದೆ ಇತರ ತರುಣರೂ ಹೆಚ್ಚಿನ ಉತ್ಸಾಹಗೊಂಡಿರುತ್ತಾರಲ್ಲದೆ, ಆಟದ ಮೈದಾನಿನಲ್ಲೂ ನೆರೆದುಬರುವ ವೃಂದವೂ ಹೆಚ್ಚಾಗುತ್ತಲಿದ್ದು, ಪ್ರೇಕ್ಷಕರಲ್ಲಿ ಹಲವು ಮಂದಿ ಅಸಭ್ಯತನದ ರೀತಿಯಲ್ಲಿ ಬೊಬ್ಬಿಟ್ಟು ಹೀಯಾಳಿಸುವ ಪದ್ಧತಿಯೂ ಬೇರೂರಿರುತ್ತದೆ.

ಹತ್ತು ದಿನಗಳಿಂದಲೂ ಅಕಾಲವೃಷ್ಟಿಯಿಂದ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬಂತೆ ಕಷ್ಟವೊದಗಿರುತ್ತದೆ; ಅಕ್ಕಿಯ ಧಾರಣೆಯೂ ಏರಿರುತ್ತದೆ.

ತಾರೀಕು ೭ನೇ ಶನಿವಾರ ಸಾಯಂಕಾಲ ೪ ಗಂಟೆಗೆ ಸ್ಥಳೀಯ ಮಿತ್ರಮಂಡಳಿಯ ಕಡೆಯಿಂದ ಬೋರ್ಡ್ ಎಲಿಮೆಂಟರಿ ಮೈನ್ ಶಾಲೆಯಲ್ಲಿ ಶ್ರೀ ಸುರತ್ಕಲ್ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ "ಸರಸ್ವತಿ" ಪತ್ರಿಕೆಯ ಸಂಪಾದಕಿಯರಾದ ಶ್ರೀಮತಿ ಕಲ್ಯಾಣಮ್ಮನವರು "ಕನ್ನಡ ಸಾಹಿತ್ಯ"ದ ಕುರಿತು ಭಾಷಣಮಾಡಿದರು.

ನೋಟೀಸು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:—

ನಮ್ಮ ಆಫೀಸಿನಲ್ಲಿ ಕಳೆದ ಐದು ವರ್ಷಗಳಿಂದ ಕ್ಲಾರ್ಕ ಕೆಲಸದಲ್ಲಿದ್ದ ಶ್ರೀ ಕಾಪು ವಾಮನ ಶೆಣೈ ಇವರು ಇದೇ ಅಗೋಸ್ತು ತಾ. ೧೪ರಲ್ಲಿ ನಮ್ಮ ಆಫೀಸಿನ ಕೆಲಸದಲ್ಲಿ ನಿವೃತ್ತಿ ಹೊಂದಿರುವರು. ಆ ತಾರೀಕು ಮೊದಲುಗೊಂಡು ಅವರಿಗೆ ದಿ. ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ಶಾರದಾ ಛಾಪಖಾನೆ, ಯಾ ಸ್ವದೇಶಾಭಿಮಾನಿಯ ಯಾವ ವ್ಯವಹಾರಗಳಲ್ಲೂ ಯಾವ ಹಕ್ಕೂ ಇರುವುದಿಲ್ಲವಾದುದರಿಂದ ಮುಂದಕ್ಕೆ ಅವರು ಈ ಮೂರು ಸಂಸ್ಥೆಗಳಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ನಡೆಸಿದರೆ ನಾವು ಜವಾಬ್ದಾರರಲ್ಲ ಎಂದು ಈ ಮೂಲಕ ತಿಳಿಸಲಾಗುತ್ತದೆ.

V. K. KAMATH,
The Manager,
Mangalore Trading Association,
Ltd., Mangalore.

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ).

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಥುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಿಂಟೈನ್, ಇಂಕ್ಸ್,
ಚ್ಯವನಪ್ರಾಶ, ಸ್ನೋ, ಸೋಪ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

Managing Director:—**Venkatraya Annappa Baliga**

ಜಗತ್ತೇ ಅಲ್ಲೋಲ ಕಲ್ಲೋಲವಾಗಲು ಕಾರಣವೇನು?

ಹಿಂದೂಸ್ಥಾನ, ಚೀನ, ಅಯರ್ಲೆಂಡ್‌ಗಳ ಗತಿ!

ಅವಿಶ್ವಾಸ ವಂಚನೆಗಳೇ ಕಾರಣ.

ಹಿಂದೂಸ್ಥಾನ

ಒಂದಲ್ಲ ಒಂದು ದಿನ ಪ್ರತಿಯೊಂದು ರಾಷ್ಟ್ರವೂ ಕ್ರಾಂತಿಯ ಬೆಂಕಿಯಲ್ಲಿ ಬೀಳಲೇ ಬೇಕಾಗುತ್ತದೆ. ನಾಲ್ಕು ಶತಮಾನಗಳ ಮೊದಲು ಈ ಕ್ರಾಂತಿಯು ಅನ್ಯ ದೇಶಗಳಲ್ಲೇ ಇತ್ತು. ಈಗ ಅದು ತನ್ನ ವಿಶ್ವವ್ಯಾಪಕತೆಯನ್ನು ಪ್ರದರ್ಶಿಸುತ್ತಲಿದೆ. ಹಿಂದೂ ದೇಶವಂತೂ ನವೀನ ರೀತಿಯ ಅಹಿಂಸಾಮಯ ಅಸಹಕಾರಮಯ ಕ್ರಾಂತಿಗೆ ಬಲಿಯಾಗಿದೆ. ಅಂದು ಶ್ರೇಷ್ಠತಮವೆಂದು ಭಾವಿಸಲ್ಪಟ್ಟಿದ್ದ ಬ್ರಾಹ್ಮಣ್ಯವು ಇಂದು ಪಂಚಾಂಗ ಪರಿವಾರವಾಗಿ ಅಲುಗಾಡಲುಪಕ್ರಮಿಸಿರುತ್ತದೆ. ಅಂತು ಅಸಹ್ಯವೆಂದು ತಿಳಿಯಲ್ಪಟ್ಟ ಅಸ್ಪೃಶ್ಯತೆಯು ಇದು ಪ್ರೀತಿಯ ಸಹ್ಯವಿಚಾರವಾಗಿದೆ. ಒಮ್ಮೆ ಪ್ರೇಮದ ವಸ್ತುವಾದ ಧರ್ಮ ಕರ್ಮಾಚರಣೆಗಳು ಇಂದು ದ್ರವ್ಯದ ಬೆಂಕಿಯೆದುರು ಕರಗುತ್ತಿವೆ. ಕಣ್ಣಿಲ್ಲದ ಹಿಂದೀಯರು ಇಂದು ದೃಢದೇಹಿಗಳಾಗಿ ಮುಂದೆ ನಡೆಯಲು ಟೊಂಕ ಕಟ್ಟಿರುವರು. ಒಂದು ಕಾಲದಲ್ಲಿ ಘೋಷಾ ಪದ್ಧತಿಯ ಅಬ್ಬರಕ್ಕೆ ಹೆದರಿ ಹಿಂದಿದ್ದ ಸ್ತ್ರೀಯರು ಇಂದು ಎದೆಯೊಡ್ಡಿ ರಾಷ್ಟ್ರ ಸೇವೆಗಿಳಿದಿರುತ್ತಾರೆ. ಸ್ವಾತಂತ್ರ್ಯ ಕ್ರಾಂತಿಯು ತಲೆದೋರಿ ಇಡೀ ಭಾರತವರ್ಷವೇ ಕಲಿಯುಗದ ಬಂಟರಾದ ಗಾಂಧಿಜೀಯವರ ಕೈಕೆಳಗಿದೆ.

ಅಯರ್ಲೆಂಡ್

ಹಿಂದೂಸ್ಥಾನದ ಸ್ಥಿತಿಯೇ ಅಯರ್ಲೆಂಡಿಗೂ ಬಂದಿತ್ತು. ಸ್ವಾರ್ಥಿಗಳು ದೇಶದ ಗೌರವವನ್ನು ಬಲಿಗೊಟ್ಟು ಸ್ವೋನ್ನತಿಗಾಗಿ ಬಾಳಿದರು. ಬ್ರಿಟಿಷ ನೊಗಕ್ಕೆ ಕಟ್ಟಲ್ಪಟ್ಟ ಅಯರ್ಲೆಂಡ್ ಎತ್ತು ಬಾಡಿ ಬೆಂಡಾಯಿತು. ಅಲ್ಲಿಯೂ ಕ್ರಾಂತಿಯು ಪಸರಿಸಿತು. ಬಡತನವನ್ನು ಪಾರುಗೊಳಿಸಬೇಕೆಂದು ರಾಷ್ಟ್ರ ಪಕ್ಷವು ಒಂದಾಗಿ ದುಡಿಯುತ್ತಿದೆ. ಅದರ ಸತ್ರವು ದುಡಿಮೆಯು ಇಂದು ಡಿವೆಲರನ ಹಸ್ತವನ್ನು ಬಲಗೊಳಿಸಿರುತ್ತದೆ. ಡಿವೆಲರನ ಸಿಂಹವು ಬ್ರಿಟಿಷ ಮಾವಳಿನ ಚಾಟಿಗೆ ಬಗ್ಗುವಂತಿಲ್ಲ. ಬಡತನವು ಹೋಗಲಿ—ಆ ಮೇಲೆ ಭಕ್ತಿಯನ್ನಿತ್ತಿದ್ದಾನೆ ಅವನು.

ರಷ್ಯ

ಝಾರನ ಅತಿಕ್ರಮಗಳಿಂದ ಬಗ್ಗಿ ಬಾಡಿದ ರಷ್ಯವು ಅವನ ಕೊಲೆಯ ನಂತರ ಕ್ರಾಂತಿಮಯವಾಯಿತು. ಜನತಾ ವಂದಿತ ಸರಕಾರವು ಜನ ಸೇವೆಯೇ ಜನಾರ್ದನನ ಸೇವೆಯೆಂದು ಕೆಲಸ ಮಾಡುತ್ತಿದೆ. ಅಲ್ಲಿ ಕ್ರಾಂತಿಯು ಬಲವಾಗಿ ಹೋಗಿ ಆಳುವ ಜನರು ಹೇಳಿದ ಕೆಲಸವು ನೆರವೇರುತ್ತಿದೆ. ನ್ಯಾಯ ಅಳಿಯುಗಳಿಗೆ ಕಿವಿಗೊಡುವ ಲನಿನ್ ದೊರೆಯು ತೀಕ್ಷ್ಣವಾಗಿ ರಾಜ್ಯಾಡಳಿತವನ್ನು ನಡೆಸುತ್ತಿರುವನು. ನಾಡಿನ ಉದ್ಧಾರಕ್ಕೆ ಇಂದು ಬೇಕೆಂದು ಅರಿಸಲ್ಪಟ್ಟ ಸಮಸ್ಯೆಯು ನಾಳೆ ಪರಿಪೂರ್ಣವಾಗಿ ಪರಿಷ್ಕಾರವಾಗುತ್ತಿದೆ. ಕೈಗಾರಿಕೆಯು ಶಿಖರವನ್ನೇರಿದೆ. ಕ್ರಾಂತಿಯ ಮಹಾನ್ ಶಕ್ತಿಯು ರಷ್ಯವನ್ನು ಆದರ್ಶಪ್ರಾಯವನ್ನಾಗಿ ಮಾಡಿದೆ.

ಜರ್ಮನಿ

ಜರ್ಮನಿಯು ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ಮಹಾ ಪ್ರಖ್ಯಾತವಾಗಿತ್ತು. ಕೈಸರನ ಶಕ್ತಿಯು ಅನ್ಯಾಯ ಮಾರ್ಗವನ್ನು ಹಿಡಿದೊಡನೆ ಅಲ್ಲಿಯೂ ಕ್ರಾಂತಿಗಾರಂಭವಾಯಿತು. ಕೈಸರನ ಮುಕುಟವು ಕೆಳಗುರುಳಿತು. ಮಹಾಯುದ್ಧದ ಪರಿಣಾಮವಾಗಿ,—ಜನರ ನಿರ್ಬಲತೆಯ ಕಾರಣವಾಗಿ, ಇಡೀ ರಾಷ್ಟ್ರವೇ ತಳಮಳಿಸಿತು. ಆಗ ಹರ್ ಹಿಟ್ಲರನಂತಹ ತುಂಡು ಮೀಸೆಯ ಗಂಡುಗಲಿಯು ರಂಗಕ್ಕಿಳಿದನು. ಅವನ ಕಣ್ಣೇ ರಾಷ್ಟ್ರದ ಮೇಲೆ. ಅವನ ಬಾಳವನ್ನೇ ಉತ್ಕ್ರಾಂತಿ ಪ್ರಸಾರ, ರಾಷ್ಟ್ರೀಯತೆಯ ಪ್ರಚಾರ. ಅಲ್ಲಿಯೂ ಕ್ರಾಂತಿಯು ಬಲವಾಗುತ್ತಿದೆ. ಬ್ರಿಟಿಷ ಮುಷ್ಟಿಯಿಂದ ಹೊರಗಾಗಬೇಕೆಂದು ಯತ್ನವಾಗುತ್ತಲಿದೆ.

ಇಟಲಿ.

ಘೋರ ಯುದ್ಧದ ಫಲವಾಗಿ ಇಟಲಿಯೂ ಕ್ರಾಂತಿಯಲ್ಲಿ ಈಜಾಡಬೇಕಾಯಿತು. ಒಂದು ದಿನದಲ್ಲಿ ಐಶ್ವರ್ಯ ಭೋಗಾದಿಗಳಿಂದ ಮೆರೆಯುತ್ತಿದ್ದ ಇಟಲಿ ದೇಶವು ದೊಣ್ಣೆ ಹಿಡಿದು ನಡೆಯುವ ವೃದ್ಧನಂತಾಯಿತು. ಆಗ ಅಲ್ಲಿಗೆ ಮುಸೋಲಿನಿಯಂತಹ ಧೀರರ ಬಿಕಾರಿಯ ಆಗಮನವಾಯಿತು. ಇದರಿಂದ ಅವನು ಪ್ರಜೆಗಳನ್ನು ಅಂಕಿತದಲ್ಲಿರಿಸಿರುವನು. ಸೀನಿಯರ್ ಮುಸೋಲಿನಿಯೆಂದರೆ ಕ್ರಾಂತಿಯೇ ಎಂಬ ಅರ್ಥವಾಗುವಂತಿದೆ.

ಫ್ರಾನ್ಸ್

ಕ್ರಾಂತಿಯ ಶಕ್ತಿಯುತ ಕೈಯು ಅಲ್ಲಿ ನಿಲ್ಲಲಿಲ್ಲ. ಅದು ಫ್ರಾನ್ಸಿಗೂ ಹರಡಿತು. ವಿಲಾಸಿಗಳಾದ ಫ್ರೆಂಚರು ರಾಜಕೀಯದಲ್ಲಿ ಮಾರ್ಪಾಟನ್ನುಂಟು ಮಾಡುವರೆಂದು ಯಾರೂ ಭಾವಿಸಿದ್ದಿಲ್ಲ. ಆದರೆ ಜಾಮೋರನೆಂಬ ಧೀರಾಳುವು ಭೋಗಮಗ್ನನಾದ ಕಿಂಗ್ ಅಲ್ಫೋನ್ಸನನ್ನು ಕೆಳಗಿಳಿಸಿದನು. ಅಧರ್ಮ ರಾಜ್ಯವು ಕೊನೆಗೊಂಡು ಪ್ರಜಾಸತ್ತಾತ್ಮಕ ರಾಜ್ಯಭಾರವು ತಲೆದೋರಿತು. ಜನರಿಗಾಗಿ ಇಲ್ಲದ ರಾಜನು ರಾಜನಾಗಿ ಉಳಿಯಲಾರದಾದನು. ರಾಜನಿಗಾಗಿ ಬದುಕಬೇಕೆಂಬ ಜನರು ಹೆಚ್ಚಿದರು. ಅಲ್ಲಿ ಸಮಾಧಾನವಾಗುತ್ತಲಿದೆ.

ಚೀನ

ಚೀನವೊಂದು ಮಾತ್ರ ಹಿಂದೂಸ್ಥಾನದಂತೆ ವಿಪನ್ನಾವಸ್ಥೆಗೆ ಮುಟ್ಟಿದೆ. ಡಾ। ಸನ್ಯತ್ ಎಂಬವನ ಪ್ರತಿಭೆಗೊಳಗಾದ ರಾಜಸತ್ತೆಯು ನೆಟ್ಟಗೆ ನಿಲ್ಲಲುಪಕ್ರಮಿಸುತ್ತಿದೆ. ಆದರೆ ಜಪಾನೀಯರ ಗದೆಯು ಮೇಲಾಗುತ್ತಿದೆ. ಚೀನದಲ್ಲಿ ಕ್ರಾಂತಿಯುಂಟಾದರೂ ಅದು ರೂಪುಗೊಂಡಿರುವುದಿಲ್ಲ. ಸ್ವ[illegible] ಪಕತೆಯನ್ನು ನೋಡುವ ಮೊದಲು ಅನ್ಯರ ಹಾವಳಿಯು ಜತನವನ್ನು ಅದು ತೆಗೆದುಕೊಳ್ಳಬೇಕಾಗಿದೆ. ಆದರೆ ಸನ್ಯತನಿಗಿಂತ ಬಲವಾದ ಮುಖಂಡನನ್ನು ಜನತೆಯು ನಿರೀಕ್ಷಿಸುತ್ತಲಿದೆ. ಮುಕ್ತಿಯ ಹಾದಿಯನ್ನು ನೋಡುತ್ತಿದೆ.

ಜಪಾನ

ಜಪಾನ ದೇಶವು ಉನ್ನತ ಕ್ರಾಂತಿಗೊಳಗಾಗಿ, ಬೆಂದು, ಈಗ ಕೈಗಾರಿಕೆಯಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿದೆ. ಬ್ರಿಟಿಷ್ ಕೈಗಾರಿಕೆಯ ತಲೆಯೊಡೆದು ತಾನು ಹಿಂದೂಸ್ಥಾನವನ್ನು ಮುತ್ತಿಕೊಳ್ಳಬೇಕೆಂದು ಅಲ್ಲಿಯ ಸರಕಾರವು ನಿರ್ಧರಿಸಿಕೊಂಡಿದೆ. ಅಲ್ಲಿ ಇರುವುದು ಕೈಗಾರಿಕೆಯ ಕ್ರಾಂತಿ (Industrial Revolution) ಅವರಿಗೆ ಬೇಕಾದುದು ದೇಶ, ಹಣ. ಅವರು ಅಧಿಕಾರವನ್ನು ಬಯಸುವುದಿಲ್ಲ. ಬ್ರಿಟಿಷರಿಗೆ ಮಿಗಿಲಾಗಿ ತಾವಾಗಬೇಕೆಂದೇ ಅವರ ಹವಣಿಕೆ.

ಅಮೇರಿಕಾ

ಇನ್ನು ಅಮೇರಿಕಾದಲ್ಲಿನ ಕ್ರಾಂತಿ. ಪ್ರೆಸಿಡೆಂಟ್ ಹೂವರ ಆಡಳಿತವು ನಿಂತು ಈಗ ಪ್ರೆಸಿಡೆಂಟ ರೂಜವೆಲ್ಟರ ಅಧಿಕಾರ ಪ್ರಾರಂಭವಾಗಿದೆ. ಎಲ್ಲ ಕ್ರಾಂತಿಗಳಿಗೂ ಒಳಗಾಗದ ಅಮೆರಿಕವು ತನ್ನ ಕುಬೇರ ಪದವಿಯನ್ನುಳಿಕೊಳ್ಳುವುದಕ್ಕಾಗಿ ಆರ್ಥಿಕ ಕ್ರಾಂತಿ (Financial Revolution) ಪ್ರಾರಂಭಿಸಿರುತ್ತದೆ. ರೂಜವೆಲ್ಟರು ನಿರುದ್ಯೋಗವನ್ನು ಹೋಗಲಾಡಿಸಿ ಬಡತನವನ್ನು ಮೂಲೆ ಪಾಲಾಗಿಸಬೇಕೆಂದು ಟೊಂಕ ಕಟ್ಟಿರುವರು. ೮ ಗಂಟೆಗಳ ಕೆಲಸವನ್ನು ೬ ಗಂಟೆಗಿಳಿಸಿ, ೧೦ ಜನರ ಕೆಲಸಕ್ಕೆ ೨೦ ಜನರನ್ನು ನೇಮಿಸಿ ಬಡತನಕ್ಕೆ ಒದೆತವನ್ನಿಡುತ್ತಿರುವರು.

ವಿಶ್ವಕ್ರಾಂತಿ

ವಿಶ್ವಕ್ರಾಂತಿ— ಸಮರವನ್ನು ನಿವಾರಿಸುವುದಕ್ಕಾಗಿ ಶಕ್ತ ಪಥ ಯತ್ನವು ಅಮೆರಿಕಾ, ಇಂಗ್ಲಾಂಡ್, ಜಪಾನ್, ಚೈನಾ, ಇಟಲಿ, ಫ್ರಾನ್ಸ್, ಅಯರ್ಲೆಂಡ್ ರಷ್ಯಗಳಿಂದ ನಡೆಯುತ್ತಿದೆ. ಜಿನೀವಾದಿಂದ ಬರುತ್ತಿರುವ ದಿನ ದಿನ ವಾರ್ತೆಯು ಮುಂದಿರುವ ಯುದ್ಧವನ್ನೇ ಬೆರಳೆತ್ತಿ ತೋರಿಸುತ್ತಿದೆ. ಒಂದೊಂದು ರಾಷ್ಟ್ರವು ಒಂದೊಂದು ಆಶೆಯಿಂದ ವರ್ತಿಸುತ್ತಿದೆ. ಹಾಗೂ, ಶಸ್ತ್ರ ಸನ್ಯಾಸ ವ್ರತವು ಯಾರಿಂದಲೂ ಆಚರಿಸಲ್ಪಡಲಾರದೆಂದು ಹೇಳಬಹುದಾಗುತ್ತದೆ. ಶಸ್ತ್ರ ಕರಾರುಗಳನ್ನು ಯಾರೂ ಕೆಳಗಿಡುವಂತಿಲ್ಲ.

ಇದಕ್ಕೆಲ್ಲ ಕಾರಣ ಮನುಷ್ಯನ ನೈತಿಕ ವಿಚಾರದ ದಿವಾಳಿತನ. ಅದನ್ನೇ ಈಗ ಗಾಂಧಿಜೀಯವರು ಸಾಧಿಸುತ್ತಿರುವದೆಂದರೆ ಅವರೇನು ಆಕಾಶಗೋಪುರವನ್ನು ಕಟ್ಟುವದಿಲ್ಲ. ಅವರು ಕಟ್ಟುತ್ತಿರುವುದು ಪಂಚಾಂಗ ಸ್ವರೂಪವಾದ ರಾಷ್ಟ್ರವನ್ನು ನವಭಾರತವನ್ನು! (ಮ. ಶಾ.)

ಸ್ಥಳೀಕ ಸೋಟಿಗಳ ಬಾಣ!

ಹೆಡ್ ಪೋಸ್ಟಾಫೀಸಿನಲ್ಲಿ ಸಾರ್ವಜನಿಕರ ಅನುಕೂಲದೃಷ್ಟಿಯಿಂದ ಸ್ಟ್ಯಾಂಪುಗಳನ್ನು ವಿಕ್ರಯಿಸುವುದಿಲ್ಲ ಎಂಬಂತಿದೆ. ಮೊನ್ನೆ ಎಂಟಾಣೆ ಸ್ಟ್ಯಾಂಪು ತರಬೇಕೆಂದು ಮೂರು ಸಲ ಹೆಡ್ ಪೋಸ್ಟಾಫೀಸಿಗೆ ಹೋದರೂ ವೆಂಡರನಿಲ್ಲ. ಈ ಕೆಲಸಕ್ಕೆ ಇಬ್ಬರನ್ನು ನೇಮಿಸಿ ಜನರಿಗಾಗುತ್ತಿರುವ ಅನಾನುಕೂಲತೆಗಳನ್ನು ಸಂಬಂಧಪಟ್ಟವರು ಏಕೆ ನಿವಾರಿಸಬಾರದು?

† † † †

ಈಗೀಗಿನ ಪಂಪೂರ ಪೋಸ್ಟ್‌ಮನ್ನರು ಬಹಳ ಜಾಗ್ರತೆಯಾದ ಕರ್ತವ್ಯಗಳನ್ನು ನೆರವೇರಿಸುವಂತಿದೆ. ಕೊಡಗು ಅತ್ತಲಾಗಿಂದ ಹಿಂದೆ ಬಂದ ಒಂದು ವಿ ಪಿ ಯ ಮೇಲೆ ಪೋಸ್ಟ್‌ಮನನು "ಹೊಳೆ ದಾಟಲು ಆಗದಿರುವುದರಿಂದ ವಿ ಪಿ ವಾಪಾಸ್!" ಎಂದು ಸುಲಭದಿಂದ ಬರೆದಿರುವನು. ಕಾಲಿಗೆ ಬೂಟುಸು ಇಲ್ಲದಿರುವುದರಿಂದ ವಿ ಪಿ ವಾಪಾಸು ಎಂದು ವಿ ಪಿ ಗಳು ಹಿಂದೆ ಬರದಿದ್ದರೆ ಪುಣ್ಯ!

† † † †

ಚಳಿಗಾಲವು ಇನ್ನೂ ಸಮೀಪಿಸಿಲ್ಲ. ಆದರೆ ನಮ್ಮ ಟೆಲಿಗ್ರಾಫ್ ಆಫೀಸಿನಿಂದ ಬರುವ ಕೆಲವು ತಂತಿಗಳು ಅಕಾರಣವಾಗಿ ತಡವಾಗಿಯೇ ಬರುತ್ತವೆ. ಮಧ್ಯಾಹ್ನ ಒಂದುವರೆ ಗಂಟೆಗೆ ಬಂದ ತಂತಿಯೊಂದು ಕತ್ತಲಾದರೂ ಸಿಗಲಿಲ್ಲ. ಕೃಷ್ಣಪ್ರಭಾವ!

† † † †

ಪುಷ್ಪ ಮತ್ತು ತರಕಾರಿ ಪ್ರದರ್ಶನವೊಂದು ಜರಗಲಿರುವುದೆಂಬ 'ವಂದಿ'ಯನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಪ್ರಯಾಸಪೂರ್ವಕವಾಗಿ ಭಾಷಾಂತರಿಸಿ ಸಹಾಯ ಗೈದ ಪತ್ರಿಕೆಗಳಿಗೆ ಅದರ ಆಡಳಿತದಾರರು ಒಂದೊಂದು ಕೊಂಪ್ಲಿಮೆಂಟರಿ ಪಾಸನ್ನಾದರೂ ರವಾನಿಸಲು (ಕಾರ್ಯ ಬಾಹುಳ್ಯ)ದಿಂದ ಮರೆತುದು ಶ್ರೇಯಸ್ಸೇ ಆಯಿತು.

† † † †

ಕ್ರಿಕೆಟ್ ಕಪ್‌ಮೇಚುಗಳು ಜರಗುತ್ತಿವೆ. ಮೊನ್ನೆ ಹಿಂದೂ ಕ್ರಿಕೆಟ್ ಟೀಮಿನವರಿಗೂ, ಎಂ ಸಿ ಸಿ ಎ ಟೀಮಿಗೂ ಮೇಚು ನಡೆಯಿತು.

† † † †

ಕೊಂಗ್ರೆಸ್ಸಿನ ದೆಸೆಯಿಂದ (?) ಒಮ್ಮೆ "ಅಸ್ತಗತ"ವಾಗಿದ್ದ ಹಿಂದೂ ಟೀಮಿನವರಿಗೆ ಇನ್ನಿಂಗ್ಸ್ ರೌಟ್ ಎಂಬ ಎದುರು ಪಕ್ಷದ ಮುಖಂಡರೇ ಭವಿಷ್ಯ ಹೇಳಿದ್ದರು! ಆದರೆ!

ಆ ದ ರೆ.. !

† † † †

'ಇಲ್ ಲಕ್'ನಿಂದಾಗಿ ಎಂ. ಸಿ. ಸಿ ಯವರ ವಿಕೆಟುಗಳೆಲ್ಲ ಕಂಡಕಂಡಂತೆ ಬಿದ್ದುವು. ಮಿಡ್ಲ್ ವಿಕೇಟ್ ಕೂಡಾ ಹಾರಿ ಹೋದುದಿದೆ!

† † † †

ಐರಾವಣ ಮೈರಾವಣರಂತೆ ಅಡಿಸೆಂಚುರಿಗಳನ್ನು ನೋಡಿ ನೋಡದಂತೆ ಹಾಕುತ್ತಿದ್ದವರ ವಿಕೇಟುಗಳೂ ಟಮ್ಮನೆ ಬಿದ್ದುವು. ಅರಳಿದ ಮೋರೆ ಬಾಡಿತು. ಎಂ. ಸಿ. ಸಿ ಯವರಿಗೆ ಕಾಫಿಯೂ ಬೇಡವೆಂದಾಯಿತು!

† † † †

ಎಂ. ಸಿ. ಸಿ ಯವರ ಹತ್ತು ವಿಕೇಟುಗಳು ಬೀಳುವಾಗಲೂ ಅವರ ಕೆಪ್ಟನರು ಡೇರೆಯೊಳಗಿದ್ದರು. ಹನ್ನೊಂದನೆ ವಿಕೇಟು ಬೀಳಲಿದ್ದು ಎಂ ಸಿ ಸಿ ಯವರಿಗೆ ಸೋಲು ಸಿಗುತ್ತದೆಂದಾಗ, ಅವರು ಪೆಂಟ್‌ನಲ್ಲಿ ಕಾಣೆ!!!(?)

† † † †

ಎಂ. ಸಿ ಸಿ ಯೆಂದರೆ ದೊರೆಗಳ ಟೀಮು ಎಂದೇ ಎಲ್ಲರ ಅಭಿಪ್ರಾಯ. ಸ್ಪೋರ್ಟ್ಸ್‌ಮೆನ್ ಸ್ಪಿರಿಟ್ (Sportsman Spirit) ಅವರಲ್ಲಿರುವುದೆಂದು ನನ್ನ ಭಾವನೆಯಿತ್ತು.

† † † †

ಆದರೆ ತಮಗೆ ಸೋಲು ದೊರೆಯಿತೆಂದೊಡನೆ ಎಚ್ ಸಿ ಸಿ ಯವರಿಗೆ ಚೀಯರ್ಸ್ (Cheers) ಕೊಡದಿರುವಷ್ಟು ಸೌಜನ್ಯ—ಸೌಹಾರ್ದ್ರಗಳಿರದಿರಬೇಕೆ!

† † † †

ಆದದ್ದು ಆಯಿತು. ಇನ್ನು ಮುಂದಾದರೂ ಎಂ. ಸಿ. ಸಿ ಯವರು ಟೋರ್ನಮೆಂಟಿನಲ್ಲಿ Three Cheers ಹೇಳಲು ಮರೆಯದಿರಲಿ! ಕೆಪ್ಟನರಿಗೆ ನೆನಪಿರಲಿ. **ದಿವ್ಯದೃಷ್ಟಿ.**

(ಸ್ಥಳಾಭಾವದಿಂದ ಕೆಲವು ಗಳುಯ 'ದಿವ್ಯದೃಷ್ಟಿ'ಯು ಕಾಣೆಯಾಗಿದ್ದು, ಮುಂದಕ್ಕೆ ಬರುವವು)

ಶಿವನ ಸಿಟ್ಟು! ಭಕ್ತನ ತ್ಯಾಗ!! ಬೇಲಿ ಹೊಲವನ್ನು ಮೇಯಿತು!

ಸತ್ತು ಬದುಕಿದುದು.

ನ್ಯೂಯೋರ್ಕಿನ ಮಿಲ್ವಾಕೀ ಎಂಬಲ್ಲಿ ಅಮೆರಿಕನ್ ಮೆಡಿಕಲ್ ಎಸೋಸಿಯೇಶನಿನ ಸಭೆಯೊಂದು ಜರಗಿತು. ಸುಪ್ರಸಿದ್ಧ ಶಾಸ್ತ್ರಜ್ಞರು ತಮ್ಮ ಸ್ವಾನುಭವವನ್ನು ಸಭೆಗೆ ತಿಳಿಸಿದರು. ಡಾ। ಅಲ್ಬರ್ಟ ಹೈಮನ್ ಎಂಬವರು ಹೇಳಿದ ಒಂದು ವಿಷಯವು ಬಹು ವಿಚಿತ್ರವಾಗಿತ್ತು. ಈ ಡಾಕ್ಟರರಿಗೆ ಒಬ್ಬ ಮಿಲಿಯಾಧಿಪತಿಯು ಮಿತ್ರನಾಗಿತ್ತು. ಒಂದು ದಿನ ಆ ಮಿಲಿಯನೆಯರನು ಹೃದ್ರೋಗದಿಂದ ಥಟ್ಟನೆ ಬಿದ್ದು ಬಿಟ್ಟನು. ಅವನ ಕಣ್ಣುಗಳು ಮುಚ್ಚಿಕೊಂಡುವು. ಅಷ್ಟರಲ್ಲಿ ಈ ಶಾಸ್ತ್ರಜ್ಞರು ಸಾಯುವವನ ಬಳಿ ಸೇರಿದರು. ಏನಾಗಬೇಕೆಂದು ವಿಚಾರಿಸಿದ್ದಕ್ಕೆ "ನನ್ನನ್ನು ಪುನಃ ಬದುಕಿಸಿರಿ, ಅಗತ್ಯ ಕೆಲಸವಾಗಲಿದೆ" ಎಂದು ಮರಣೋನ್ಮುಖನಾದವನಿಂದ ಅಸ್ಫುಟವಾಗಿ ಉತ್ತರ ಬಂದಿತು. ಅಷ್ಟು ಹೇಳಿ ಆ ಮಿಲಿಯಾಧಿಪತಿಯು ಮೃತನಾದನು. ಅವನ ಶ್ವಾಸೋಚ್ಛ್ವಾಸವು ಸಂಪೂರ್ಣವಾಗಿ ನಿಂತಿತು. ಈ ಡಾಕ್ಟರರು 'ಹೃದಯ ಚಾಲಕ' ಯಂತ್ರವನ್ನು ತಂದು ಹಿಡಿದು ಹೆಸರುವಾಸಿಯಾಗಿದ್ದರು. ಒಡನೆ ಈ ಸಾಧನವನ್ನು ಮೃತನಾದ ಮಿಲಿಯಾಧಿಪತಿಯ ಹೃದಯದ ಮೇಲಿಟ್ಟು ಚಿಕಿತ್ಸೆ ನಡೆಸಿದರು. ಮೊದಮೊದಲು ಯತ್ನವು ನಿಷ್ಫಲವಾಗುವಂತೆ ತೋರಿತು. ಆದರೆ ಅರೆತಾಸು ಕಳೆಯುವಷ್ಟರಲ್ಲೇ ಮಿಲಿಯಾಧಿಪತಿಯ ಹೃದಯವು ಮಿಸಿಯತೊಡಗಿತು. ಒಂದರೆ ಘಳಿಗೆಯಲ್ಲಿ ಹೃದಯವು ಮೆಲ್ಲನೆ ಪುನಃ ಬಡೆಯಲಾರಂಭಿಸಿತು. ಎರಡು ತಾಸುಗಳಾಗುವಷ್ಟರೊಳಗೆ ಆ ಮಿಲಿಯಾಧಿಪತಿಯು ಮಾತನಾಡಲು ಶಕ್ತನಾದನು. ಮಗನನ್ನು ಕೂಡಲೇ ಬರಮಾಡಬೇಕೆಂದನು. ಒಂದೂವರೆ ದಿನಗಳು ಕಳೆದ ನಂತರ ಮಗನು ಪರವೂರಿನಿಂದ ಬಂದನು. ಯಂತ್ರವು ಕೆಲಸವನ್ನು ನಡೆಸುತ್ತಾ ಇತ್ತು. ಸಾಯುವ ಮಿಲಿಯಾಧಿಪತಿಯು ತನ್ನ ಆಸ್ತಿಪಾಸ್ತಿಗಳಿಗಾಗಿ ಸುವ್ಯವಸ್ಥಿತ ವೀಲು ತಯಾರಿಸಿ, ಮಗನಿಗೂ ಬಂಧುಗಳಿಗೂ ಅಂತ್ಯವಂದನೆಗಳನ್ನರ್ಪಿಸಿದನು. ೪೮ ತಾಸುಗಳು ಕಳೆದುವು. ಯಂತ್ರಕ್ಕೆ ಹೆಚ್ಚು ಶಕ್ತಿಯಿಲ್ಲ. ಮುದುಕನು ಪುನಃ ಮೃತನಾದನು.

೧೨+೪೫.

ಕಾಂಗ್ರೆಸ್ಸಿನ ಚಳವಳಿಯ ಹೊಸ ರಾಜ್ಯಾಂಗರಚನೆಯನ್ನು ಕೇಳಿದ ಪರಿಣಾಮವಾಗಿ ಬ್ರಿಟಿಷ ಸರಕಾರವು ಶ್ವೇತಪತ್ರ ಸುಧಾರಣೆಗಳನ್ನು ಹಿಂದೂಸ್ಥಾನಕ್ಕೆ ಕೊಟ್ಟಿತಷ್ಟೆ! ಈ ಸುಧಾರಣೆಗಳು ಅಸಮರ್ಪಕವೆಂದು ಜನರು ಅಭಿಪ್ರಾಯಪಟ್ಟರೂ ಬ್ರಿಟಿಷ ಸರಕಾರವು ಅವುಗಳನ್ನೇ ಹಿಂದೂಸ್ಥಾನಕ್ಕೆ ದಾನ ಮಾಡುವುದರಲ್ಲಿದೆ. ಇದಕ್ಕಾಗಿ ಇಂಗ್ಲಾಂಡಿನಲ್ಲಿ ಎಲ್ಲಾ ಬಗೆಯ ವ್ಯವಸ್ಥೆಗಳೂ ನಡೆಯುತ್ತಿವೆ. ೧೯೩೪ರ ಅಂತ್ಯದಲ್ಲಿ ಈ ನವೀನ ರಾಜ್ಯಾಂಗರಚನಾ ದಾನವು ಹೊರಬೀಳುವುದೆಂದು ತಿಳಿಸಲಾಗಿದೆ. ಈ ಮಧ್ಯೆ ಹಿಂದೂಸ್ಥಾನದ ನಿಜವಾದ ಪರಿಸ್ಥಿತಿಗಳನ್ನು ತಿಳಿದುಕೊಳ್ಳುವುದಕ್ಕಾಗಿ ಬ್ರಿಟಿಷ ಸರಕಾರವು ಇಂಡಿಯಾ ಸರಕಾರದ ಪ್ರಭುಗಳಾದ ಲೋರ್ಡ್ ವಿಲ್ಲಿಂಗ್ಡನ್ನರು ಬೇಕಾದ ಸಲಹೆ ಸಾಕ್ಷಿಗಳನ್ನು ಕೊಡಲು ಕರೆದಿರುತ್ತದೆ. ಅದೇ ಮೇರೆಗೆ ವೈಸರಾಯರು ನಾಲ್ಕು ತಿಂಗಳುಗಳ ರಜೆಯ ಮೇಲೆ ಬೇಗನೆ ಇಂಗ್ಲಾಂಡಿಗೆ ತೆರಳುವರಾಗಿಯೂ, ಅವರ ಸ್ಥಾನದಲ್ಲಿ ಮದ್ರಾಸ್‌ಗವರ್ನರರಾದ ಸರ್ ಜೋರ್ಜ್ ಸ್ಟೇನ್ಲಿಯವರು ತಾತ್ಕಾಲಿಕವಾಗಿ ರಾಜ್ಯಭಾರ ನಡೆಸುವರಾಗಿಯೂ ಪ್ರಕಟವಾಗಿದೆ. ವೈಸರಾಯರು ಇಂಗ್ಲಾಂಡಿಗೆ ತೆರಳುವುದರಿಂದ ಹಿಂದೂಸ್ಥಾನಕ್ಕೆ ಹಿತವಿರಬಹುದೆಂದು ಕೆಲವು ಪತ್ರಿಕೆಗಳ ಹೇಳಿಕೆ. ಆದರೆ ಕೆಲವು ಪತ್ರಿಕೆಗಳು ಮಾತ್ರ ವೈಸರಾಯರ ಇತ್ತಲಾಗಿನ ಭಾಷಣಗಳ ಮೇಲೆ ಆಧರಿಸಿಕೊಂಡು ಅವರು ಹಿಂದೂಸ್ಥಾನದ ಮೇಲೆ ಸಹಾನುಭೂತಿಪರರಾಗಿರುವುದು ಅಸಂಭವನೀಯವೆಂದು ಹೇಳುತ್ತಿವೆ. ವೈಸರಾಯರು ಅಲ್ಲಿಗೆ ಹೋದ ನಂತರ ಅಲ್ಲಿ ಬ್ರಿಟಿಷ ಸರಕಾರದ ಇನ್ನೊಂದು ಸಮ್ಮೇಳನವು ಜರಗಿ ಅದರಲ್ಲಿ ವೈಸರಾಯರ ಅಭಿಪ್ರಾಯವನ್ನು ಸ್ವೀಕರಿಸಲಾಗುವುದು. ವೈಸರಾಯರು ಯಾವ ರೀತಿಯಲ್ಲಿ ಅಭಿಪ್ರಾಯ ಪಡುವರೋ ಆ ರೀತಿಯ ಸಂಧಾನಗಳು ಬಹುಮತದ ಮೇರೆಗೆ ಹೊರಬರುವುವು. ಈ ಸಂದರ್ಭದಲ್ಲಿ ಬ್ರಿಟಿಷ ಸರಕಾರವು ಮಿತವಾದಿಗಳಿಂದ ಕೆಲವು ಕಾಂಗ್ರೆಸ್ ಪಕ್ಷೀಯರನ್ನು ಸಮಿತಿಗೆ ಕರೆಯುವುದು ಉಪಯುಕ್ತವಾಗಿದೆಯೆಂದು ಒಂದೆರಡು ಪತ್ರಿಕೆಗಳು ಧ್ವನಿಯೆಬ್ಬಿಸುತ್ತಿವೆ. ಆದರೆ ಈ ಸಲಹೆಗಳು ಬ್ರಿಟಿಷ ಸರಕಾರದವರಿಂದಾಗಲೀ ಇಂಡಿಯಾ ಸರಕಾರದವರಿಂದಾಗಲೀ ಅನುಮೋದಿತವಾಗಿರುವುದಿಲ್ಲವೆಂದೆನ್ನಲು ಕಾರಣಗಳಿವೆ. ಲೋರ್ಡ್ ವಿಲ್ಲಿಂಗ್ಡನ್ನರು ಆರೋಗ್ಯ ಸಂಬಂಧವಾಗಿ ಇಂಗ್ಲಾಂಡಿಗೆ ತೆರಳುವರೆಂದು ಕೆಲವರ ಅಭಿಪ್ರಾಯ. ಆದರೆ ಈ ಹೇಳಿಕೆಯ ಸತ್ಯಾಸತ್ಯತೆಯು ಎಲ್ಲಿಯವರೆಗಿರುವುದೆಂದು ತಿಳಿದು ಬಂದಿಲ್ಲ. ಹಾಗೂ ವೈಸರಾಯರು ನಾಲ್ಕು ತಿಂಗಳುಗಳ ರಜೆಯ ಮೇಲೆ ಹೋಗಲಿರುವರೆಂಬುದು ನಿರ್ಧಾರವಾಗಿದೆ. ಅಗತ್ಯ ಪ್ರಸಂಗಗಳಲ್ಲಿ ವೈಸರಾಯರಿಗೆ ರಜೆ ಕೊಡುವ ಕಾನೂನುಗಳೂ ಪ್ರಕಟವಾಗಿವೆ.

ಹೊಸ ಪಕ್ಷ

ಶ್ರೀ ಸತ್ಯಮೂರ್ತಿ, ಶ್ರೀ ಜಮ್ನಾದಾಸ್ ದ್ವಾರಕದಾಸ್ ಮೊದಲಾದವರು ಕಾಂಗ್ರೆಸ್ಸಿನಿಂದ ಹೊರ ನಿಂತು, ಈಗ ನ್ಯಾಯವಿಧಾಯಕ ಸಭೆಗಳಿಗೆ ಪ್ರವೇಶಿಸಬೇಕೆಂದು ಹವಣಿಸುತ್ತಿರುವರಷ್ಟೆ! ಅವರ ಯೋಜನೆಯ ಕುರಿತಾಗಿ ದೇಶೀಯ ಪತ್ರಿಕೆಗಳು ಕೆಲವು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡಲಾರಂಭಿಸಿವೆ. ಡಿಲ್ಲಿಯ 'ನೆಶನಲ್ ಕೋಲ್' ಎಂಬ ಪತ್ರಿಕೆಯು ಸತ್ಯಮೂರ್ತಿಯವರ ಅಭಿಪ್ರಾಯ, ಕ್ರಿಯೆಗಳನ್ನು ಟೀಕಿಸುತ್ತಾ "ಈ ಹೊಸ ಚಳವಳಿಗಾರರು ಕಾಂಗ್ರೆಸ್ಸಿನ ಹೆಸರಿನಿಂದ ನಿಂತು ನ್ಯಾಯವಿಧಾಯಕ ಸಭೆಗಳಿಗೆ ಪ್ರವೇಶಿಸಲು ಯತ್ನಿಸುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇವರು ಬೆಳೆಯಲ್ಲಿ ಮಾತ್ರ ದಂಗೆಯನ್ನೆಬ್ಬಿಸುತ್ತಿರುವಂತೆ ಭಾಸವಾಗುತ್ತದೆ. ತಮ್ಮನ್ನು ಇನ್ನೂ ಅನೇಕ ದಂಗೆಗಾರರು ಅನುಸರಿಸಬಹುದೆಂಬ ಆಶೆಯು ಇವರಲ್ಲಿರುತ್ತದೆ. ಇವರು ಅತ್ಯುಜ್ವಲವಾದ ಕಾಂಗ್ರೆಸ್ ಸಂಸ್ಥೆಯನ್ನು ಅಲ್ಲಗಳೆದು ವರ್ತಿಸುತ್ತಿರುವುದರಿಂದ ಇವರು ಎಷ್ಟು ಶ್ರದ್ಧೆ ಮತ್ತು ತಾಳ್ಮೆಯುಳ್ಳವರೆಂಬುದು ಸ್ವಯಂ ವಿದಿತ. ಇವರು ಏಕ ಹಸ್ತತಾಳದಿಂದ ಎಷ್ಟರ ಮಟ್ಟಿಗೆ ಜಯಶೀಲರಾಗಬಹುದೆಂದು ತಿಳಿಯಲಾರದು" ಎಂದು ಹೇಳಿದೆ. ಅಲ್ಲಹಾಬಾದಿನ 'ಲೀಡರ್' ಪತ್ರಿಕೆಯೂ ಕೂಡಾ ಶ್ರೀ ಸತ್ಯಮೂರ್ತಿಯವರಂಥವರ ಹೊಸ ಪಾರ್ಟಿಯವರನ್ನು ಟೀಕೆಗೆ ಗುರಿಮಾಡಿರುತ್ತದೆ. ಅದು ಹೇಳುವುದೇನೆಂದರೆ.—"ಶ್ರೀ ಸತ್ಯಮೂರ್ತಿಯವರು ಕೌನ್ಸಿಲು ಪ್ರವೇಶ ಮಾಡಬೇಕೆಂದು ಹೇಳುವುದಾದರೆ ಅವರು ಅಂಕು ಡೊಂಕು ಮಾರ್ಗದಿಂದ ಚಳವಳಿಯನ್ನು ಧ್ವಂಸಿಸುವುದೇಕೆ? ಕಾಂಗ್ರೆಸ್ಸಿನೆದುರು ನಿಂತು ಕೆಲಸ ಮಾಡಬಾರದೇ? ಕಾಂಗ್ರೆಸ್ಸಿನ ಮರೆಯಲ್ಲಿ ನಿಂತು ಶ್ರೀ ಮೂರ್ತಿಯವರು ಕೌನ್ಸಿಲು ಪ್ರವೇಶಕ್ಕೆ ಕೈ ಚಾಚುವುದು ಯಶಸ್ವೀ ಕಾರ್ಯವಲ್ಲ" ಇನ್ನು ಲಾಹೋರಿನ 'ಪೀಪ್ಲ್' ಎಂಬ ಪತ್ರಿಕೆಯು ಈ ಹೊಸ ಪಾರ್ಟಿಯ ಕುರಿತು ಅಭಿಪ್ರಾಯ ಪಡುತ್ತಾ "ಈ ಪಕ್ಷದ ಉದ್ದಂಡತನವು ದೇಶಕ್ಕೆ ಘಾತುಕಪ್ರಾಯವಾದುದು. ಇವರ ವರ್ತನೆಯಿಂದ ಕಾಂಗ್ರೆಸ್ಸಿನ ಶಕ್ತಿಯು ಕುಂದುವುದು" ಎಂದು ಧೈರ್ಯದಿಂದ ಹೇಳಿರುತ್ತದೆ.

ಫ್ರೀಪ್ರೆಸ್ ಜರ್ನಲ್ ಪತ್ರಿಕೆಯು ಈ ಪಕ್ಷೀಯರಿಗೆ ಪ್ರಶ್ನೆಗಳನ್ನಿಡುತ್ತಾ "ಆ ಪಕ್ಷೀಯರಿಗೆ ಬೆಂಬಲವಿದೆಯೋ? ಇದರ ಕೆಲಸಗಳು ಸರ್ವ ಸ್ವೀಕಾರವಾಗಿದೆಯೋ? ಕಾಂಗ್ರೆಸ್ ಪಕ್ಷೀಯರು ನ್ಯಾಯವಿಧಾಯಕ ಸಭೆಗಳಿಗೆ ಒಮ್ಮೆ ಪ್ರವೇಶಿಸಿರುವರು. ಆದರೆ ಪರಿಣಾಮವೇನಾಯಿತು? ಕೆಲವು ಆಕಾಶ ಬಾಣಗಳು ಹಾರಿದುವು. ಅಲ್ಲದೆ ಮತ್ತೇನು ಫಲವೂ ಆಗಿರುವುದಿಲ್ಲ. ಕಡೆಗೆ ಕಾಂಗ್ರೆಸ್ಸು ದೀರ್ಘಾಲೋಚನೆ ಮಾಡಿ ಸ್ವರಾಜ್ಯ ಪಾರ್ಟಿಯೆಂಬುದನ್ನು ಕೌನ್ಸಿಲುಗಳಿಂದ ಹಿಂದೆ ಕರೆಯಲೇ ಬೇಕಾಯಿತು. ಈ ಪಕ್ಷವು ಕೌನ್ಸಿಲು ಪ್ರವೇಶ, ಕಂದಾಯ ಕಡಿಮೆ ಮಾಡುವಿಕೆ, ಪಂಚಾಯಿತಿ ಕೋರ್ಟುಗಳ ಸ್ಥಾಪನೆ ಮೊದಲಾದುವುಗಳಿಗೆ ಹೆಣಗಾಡಬಹುದು. ರಚನಾ ರೀತಿಯ ಯಾವ ಕೆಲಸವನ್ನೂ ಮಾಡಲಸಾಧ್ಯ" ಎಂದು ಹೇಳಿದೆ. ಅಂತೂ, ಈ ಹೊಸ ಪಾರ್ಟಿಯ ಮೇಲೆ ಹೆಚ್ಚಿನವರಿಗೆ ಧೈರ್ಯವಿಲ್ಲವೆಂದು ಗೊತ್ತಾಗುತ್ತದೆ.

ಕರಾಚಿಯ ಸ್ವಾಮಿ—ಗೋವಿಂದಾನಂದ ಎಂಬವರು ಈ ವಾರ ಸೆರೆಯಿಂದ ಹೊರ ಬಂದೊಡನೆ ಗಾಂಧೀಜಿಯವರನ್ನೂ, ಕಾಂಗ್ರೆಸ್ಸನ್ನೂ ವಿಮರ್ಶೆ ಮಾಡುತ್ತಾ "ಗಾಂಧಿಯವರು ಇನ್ನೂ ನಮ್ಮ ಮುಂದಾಳಾಗಲು ಸಾಧ್ಯವಿಲ್ಲ. ಅವರನ್ನು ನಂಬಿ ಭ್ರಷ್ಟರಾದೆವು. ಸಂದಿಗ್ಧ ಸಮಯದಲ್ಲೇ ಅವರು ದೇಶದ ಮಾರ್ಗವನ್ನು ತಪ್ಪಿಸಿ ಬಿಡುತ್ತಾರೆ. ಅವರ ಅಂತರಾತ್ಮನ ಧ್ವನಿಯೊಂದು ಇಡೀ ಕಾಂಗ್ರೆಸ್ಸಿನ ನಡವಳಿಕೆಯನ್ನೇ ಬದಲಾಯಿಸಿದೆ. ರಾಜ್ಯಾಂಗ ರಚನೆಯ ಕೆಲಸವು ಗಾಂಧಿಯವರ ಧುರೀಣತ್ವದಲ್ಲಿ ಎಂದೂ ಸಾಧ್ಯವಾಗಲಾರದು. ಅವರನ್ನು ನಂಬುವುದು ತಿಳಿಗೇಡಿತನ. ಅವರ ತತ್ವವು ಆಧುನಿಕ ರಾಜ್ಯಾಂಗ ರಚನೆಗೆ ಎಂದೂ ಪ್ರಯೋಜನವಾಗಲಿಕ್ಕಿಲ್ಲ" ಎಂದು ಬರೆದಿರುವರು! ಅವರು ಇದೇ ರೀತಿಯಾಗಿ ಪಂಡಿತ ಜವಾಹರಲಾಲರಿಗೂ ಬರೆದು ಜವಾಹರಲಾಲರು ಅಖಿಲಭಾರತ ಕಾಂಗ್ರೆಸ್ ಕಮಿಟಿಯ (ಸಭೆಯನ್ನು) ಸೇರಿಸಬೇಕಾಗಿಯೂ ತಪ್ಪಿದರೆ ದೇಶವು ಮಹಾಘಾತಕ್ಕೊಳಗಾದೀತೆಂದೂ ಹೇಳಿರುತ್ತಾರೆ. ಕಾಂಗ್ರೆಸ್ಸು ಸೋತಿತೆಂದೇ ಶ್ರೀ ಸ್ವಾಮಿಯವರು ಅಭಿಪ್ರಾಯಪಟ್ಟು ನಮ್ಮ ಅಪಜಯವನ್ನು ಒಪ್ಪಿ ಮುಂದಕ್ಕೆ ಸದ್ದಾರಿಯಲ್ಲಿ ನಡೆಯಬೇಕೆಂಬೂ ಇವರ ಬೋಧನೆಯಾಗಿರುತ್ತದೆ. ಹೆಚ್ಚಿನ ಪತ್ರಿಕೆಗಳು ಕೂಡಾ ಅಖಿಲಭಾರತ ಕಾಂಗ್ರೆಸ್ಸಿನ ಮ[illegible] ಸಭೆಯು ಜರಗಬೇಕೆಂದು ಅಭಿಪ್ರಾಯ ಪಟ್ಟಿರುವುದರಿಂದಲೂ ಪಂಡಿತ ಮಾಲವೀಯ, ಸರೋಜಿನಿ ನಾಯಿಡು ಮೊದಲಾದ ಧುರೀಣರೂ ಹಾಗೆಯೇ ಹೇಳಿರುವುದರಿಂದಲೂ ಬೇಗನೆ ಈ ಸಭೆಯು ಜರಗಲಿದೆಯೆಂದು ತಿಳಿಯಲಾಗಿದೆ. ಅದು ಜರಗಿದ ಮೇಲೆ ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮಗಳು ಹೊರಬೀಳುವುವು.

ಯಾವ ಪರರಾವು ಯ ಪಕ್ಷಗಳು ಮಂಜೂರಾಗಿ ರಾಜ್ಯ ರಚನಾ ವಿಷಯವಾದ ಕಾರ್ಯಧೋರಣೆಗಳು ಸ್ವೀಕೃತವಾಗದಿರುವೆಂದು ಎಲ್ಲರ ಊಹನೆ. ಪಂಡಿತ ಜವಾಹರಲಾಲರು ಸೆರೆಯ ಹೊರಗಿರುವುದರಿಂದ ಅವರ ಮತವು ಬಲವಾಗಬಹುದೆಂದೂ ಅವರನ್ನು ಅಲ್ಲಗಳೆದು ಕಾಂಗ್ರೆಸ್ಸು ಎಂದೂ ವರ್ತಿಸಲಾರದೆಂದೂ ತಿಳಿಯಲ್ಪಟ್ಟಿರುವುದರಿಂದ ಕಾಂಗ್ರೆಸ್ಸಿನ ಕಾರ್ಯಕ್ರಮವು ಹೆಚ್ಚಿನ ಬದಲಾವಣೆಗಳನ್ನು ಹೊಂದಲಾರದೆಂದು ಭಾವಿಸಲಾಗಿದೆ.

ಪಂಡಿತ ಜವಾಹರಲಾಲರು ಮಾತ್ರ ತನ್ನ ಮಾತೆಯವರ ಅಸೌಖ್ಯದಿಂದಾಗಿ ಯಾವ ಕೆಲಸಕ್ಕೂ ಸದ್ಯಕ್ಕೆ ಕೈಯಿಕ್ಕುವಂತಿಲ್ಲ. ಹಿಂದೂಸ್ಥಾನದ ಸಮಸ್ಯೆಯು ಆರ್ಥಿಕ ರೂಪದಿಂದಲೇ ನಿಂತಿರುವುದರಿಂದ ಅದನ್ನು ಸುಧಾರಿಸುವುದಕ್ಕಾಗಿ ಕಾಂಗ್ರೆಸು ಯತ್ನಿಸುವುದು ನ್ಯಾಯವಿದೆಯೆಂದೂ ಅವರು ಪದೇ ಪದೇ ಹೇಳುತ್ತಾರೆ. ಒಂದಲ್ಲ ಒಂದು ದಿನ ಬೇಗನೆ, ಹಿಂದೂಸ್ಥಾನವು ಸಾಮಾಜಿಕ ಮತ್ತು ಆರ್ಥಿಕ ಆಂದೋಲನಕ್ಕೊಳಗಾಗಿ ಸಮಸ್ತ ಪಂಚಾಂಗವೇ ಅಲುಗಾಡಿ, ಆ ನಂತರ ಎಲ್ಲವೂ ವ್ಯವಸ್ಥಿತ ಸ್ಥಿತಿಯನ್ನು ಹೊಂದುವುದೆಂದು ಜವಾಹರಲಾಲರು ಹೇಳುತ್ತಾರೆ.

+ ++ +

ಅಸ್ವಸ್ಥವಾಗಿಲ್ಲ
ಆದರೂ, ನಿಜವಾಗಿಯೂ ಆರೋಗಿಯಲ್ಲ.

ನಿಮ್ಮನ್ನು ಚೈತನ್ಯದಾಯಕ ಪೋಷಣ ಸಾರ ಕೊಡುವ ಹೊರ್ಲಿಕ್ಸ್ ಆರೋಗ್ಯರನ್ನಾಗಿಯೂ ಶಕ್ತಿವಂತರನ್ನಾಗಿಯೂ ಮಾಡಲಿ

ನಮ್ಮಲ್ಲಿ ಅನೇಕರಿಗೆ ಹೆಚ್ಚಾಗಿ ಆರೋಗಿಗಳಾಗಿರಲು ಬಹಳ ಕಷ್ಟವಾಗುತ್ತದೆ. ಆಫೀಸು ಕೆಲಸ, ಬೇಸರ ಕಡಿಮೆ ಅಂಗ ಸಾಧನ, ಕೆಟ್ಟ ವಾತಾವರಣ ಇವೆಲ್ಲ ನಮ್ಮ ಶಕ್ತಿಯನ್ನು ಕುಂದುವಂತೆ ಮಾಡುತ್ತವೆ. ಹೀಗೆ ಬಳಲಿದ ಸಮಯದಲ್ಲಿ ನಾವು ಹೆಚ್ಚಾಗಿ ಶೀತ ಮತ್ತು ಜ್ವರಗಳನ್ನು ಹೊಂದುತ್ತೇವೆ.

ಹೊರ್ಲಿಕ್ಸನ್ನು ಸೇವಿಸುತ್ತಿರುವುದರಿಂದ ಅಪಾಯದಿಂದ ದೂರವಾಗಬಹುದು. ಹೊರ್ಲಿಕ್ಸನ್ನು ದನದ ಕೆನೆ ಹಾಲಿನಿಂದಲೂ, ಅತ್ಯುತ್ತಮ ಗೋದಿ ಸಾರದಿಂದಲೂ, ಮೊಲ್ಟೆಡ್ ಬಾರ್ಲಿಯಿಂದಲೂ ತಯಾರಿಸಿರುವುದರಿಂದ ಇದರಲ್ಲಿ ಪೋಷಣೆಯ ಸಾರವಿದೆ. ಚೈತನ್ಯವನ್ನು ಹೆಚ್ಚಿಸುತ್ತದೆ. ನಿಮ್ಮ ಶಕ್ತಿಯನ್ನು ವೃದ್ಧಿಸುತ್ತದೆ.

Cool, refresh-
ing drinks'
ಧರ್ಮಾರ್ಥಕರ ಪತ್ರ
ಕ್ಕಾಗಿ ಬ ಪೆ ೨೨೨೨
ಕಲ್ಕತ್ತೆಕ್ಕೆ ಬರೆಯಿರಿ

"ಹೊರ್ಲಿಕ್ಸ್"
ಮೂಲಭೂತ ಮೊಲ್ಟೆಡ್ ಹಾಲು
ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ.



ಹೊರ್ಲಿಕ್ಸ್ ಮಿಕ್ಸರ್ ಎಲ್ಲ ಸ್ಟೋರ್‌ಗಳಲ್ಲಿ ದೊರೆಯುತ್ತದೆ. ಅಥವಾ ಬ ಪೆ ೨೨೨೨ ಕಲ್ಕತ್ತೆಕ್ಕೆ ೧೪ ಆಣೆ ಸ್ಟ್ಯಾಂಪು ರವಾನಿಸಿದರೆ ದೊರೆಯುತ್ತದೆ.

DUO-TREAD TIRES.

Seiberling's Novel Features.

1. Air Cooled.
2. Duo Tread.
3. Twice the Mileage. FOR
4. Only 20 per cent extra Money

A TIRE UN-IMITATED & EXCLUSIVE.

Dealers Earn Profits. *Users Save Money.*

The Canara Public Conveyance Co., Ltd.

MANGALORE.

[illegible]

ಹುಡುಗ ಹುಡುಗಿಯರ ಪ್ರತ್ಯೇಕ ಶಿಕ್ಷಣ

ವಿಷಯವಾಗಿ ಇದೇ ಮುಂದರಿದ ವರು ತಿಲುವಾಂಕೂರು ರಾಜ್ಯದ ಸರಕಾರದ ಶಿಕ್ಷಣಾಧಿಕಾರಿಗಳು. ಇದು ವರೆಗೆ ಹಲವು ಶಾಲೆಗಳು ಹೆಮ್ಮಕ್ಕಳ ಸಲುವಾಗಿ ಮಾತ್ರವೇ ಹಲವು ಗಂಡು ಮಕ್ಕಳಿಗಾಗಿ ಮಾತ್ರವೆ ಎಂತಿರುವು ವಾದವೂ, ಪ್ರಾಥಮಿಕ ತರಗತಿಗಳಲ್ಲಿ ಇನ್ನು ಎಲ್ಲ ಮಕ್ಕಳನ್ನು ಒಂದೇ ಶಾಲೆಯಲ್ಲಿ ಕಲಿಸಬೇಕಾಗಿಯೂ ನಿರ್ಧರವಿದೆ. ಅದಲ್ಲದೆ, ಇನ್ನು ಹೆಮ್ಮಕ್ಕಳ ಶಾಲೆಗಳಿಷ್ಟು ಬೇಕು, ಗಂಡು ಮಕ್ಕಳಿಗಿಷ್ಟು ಬೇಕು ಎಂಬುದನ್ನು ವಿಚಾರಿಸದೆ, ಎಲ್ಲ ಮಕ್ಕಳಿಗೂ ಶಾಲೆಗಳಿಷ್ಟು ಬೇಕು ಎಂಬುದನ್ನು ಮಾತ್ರ ಸರಕಾರವು ವಿಚಾರಿಸಿ ಸಂಕಲ್ಪ ಮಾಡುವುದು. ಶಿಕ್ಷಣಾಧಿಕಾರಿಗಳಲ್ಲಿ ಸ್ತ್ರೀ ಶಿಕ್ಷಣ ವಿಭಾಗವು ಮಾತ್ರ ಇದನೊಪ್ಪಿಲ್ಲ, ಏಕೆಂದು ಇಲ್ಲಿ ಹೇಳುವುದೂ ಅಗತ್ಯವಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿಯನ್ನು ಸರ್ವ ವಿಧದಲ್ಲೂ ಏಳಿಗೆಗೆ ತರಬೇಕೆನ್ನುವರೇ ವಿನಾ, ಹೆಣ್ಣಿನ ಹಂದರ ಗಂಡಿನ ಹಂದರ ಎಂಬಂತೆ ಬೇರೆ ಹಂಗಡಗಳ ಮಾತಿರಬಾರದಾಗಿ ತೀರ್ಮಾನವಾಗಿದೆ. ಎಳೆಯ ತರಗತಿಗಳಲ್ಲಿ ಉಪಾಧ್ಯಾಯಿನಿಯರನ್ನೆ ಹೆಚ್ಚಾಗಿ ಇರಿಸುವರು. ಏಕತ್ರ ಶಿಕ್ಷಣದಿಂದ, ಬಾಲಿಕೆಯರು ಅಷ್ಟು ಬೆದರದೆ, ಧೀರೆಯರಾಗಿ, ಚಟುವಟಿಕೆಯಿಂದ ತುಂಬುವರೆಂದೂ, ಬಾಲಕರು ತಮ್ಮ ನಡತೆಯ ವಿಷಯ ಜಾಗರೂಕರಾಗಿ, ಸಹಾನುಭೂತಿ, ಸಾಹಸ, ಸಹಕಾರಗಳನ್ನುಳ್ಳವರಾಗಿ ಬೆಳೆವರೆಂದೂ ಆಸೆ

ಜನಾಂಗ ಸಂಘದಲ್ಲಿ ಗಲ್ಲಾ

ಜರ್ಮನಿಯು ಜನಾಂಗ ಸಂಘದಿಂದ ಹೊರಬಿದ್ದಿದೆ! ಎಲ್ಲ ರಾಷ್ಟ್ರಗಳು ಯುದ್ಧ ಸನ್ನಾಹ ತ್ಯಾಗದ ವಿಷಯ ಪರ್ಯಾಲೋಚನೆ ಮಾಡುತ್ತ ಅರುವತ್ತು ಸಭೆಗಳೇನೋ ನಡೆದು ಈಗ ಮುಕ್ತಾಯಕ್ಕೆ ಬರುವಾಗ, (ರಾಗ ಬರುವಾಗ ತಂತಿ ಕಡಿಯಿತು.) ಸಭಾಧ್ಯಕ್ಷರ ಮೇಜಿನ ಮೇಲೆ ಸಿಡಿಗುಂಡು ಸಿಡಿದಂತಾಗಿದೆ! ಜಪಾನು ಚೀನಾ ಯುದ್ಧದಲ್ಲಿ ಜನಾಂಗ ಸಭೆಯನ್ನು ಗಣ್ಯ ಮಾಡದೆ, ಕೊನೆಗೆ ಸಭೆಯಿಂದ ಹೊರಡಿತಲ್ಲ, ಅದೇ ಜಪಾನು ಈಗ ಜರ್ಮನಿಯು ಬೆನ್ನು ತಟ್ಟಿ,—ಈ ಸಭೆಯಿಂದ ಫಲವಿಲ್ಲಯ್ಯಾ, ಬೇಷ್ ಮಾಡಿದೆ ಎನ್ನುತ್ತಿದೆ, ಇಂಗ್ಲೆಂಡಿನಲ್ಲಿ, ಸುಮ್ಮನೆ ಯುದ್ಧವಾದೀತೆಂದು ಬೆದರದಿರಿ, ಹಿಟ್ಲರನಿಗೆ ಬುದ್ಧಿ ಹೇಳಿರಿ, ಜರ್ಮನಿಯು ಎಂದಿನಿಂದಲೂ ಯುದ್ಧಕ್ಕಾಗಿ ಹಾತೊರೆದಿದ್ದು, ನೈತಿಕ ವಿಚಾರಗಳಲ್ಲಿ ಕ್ಷೀಣವಾಗಿದೆ ಎಂದು ತಿಳಿಸಿರಿ ಎನ್ನುವುದುತ್ತಮವೆಂದು ಟೈಮ್ಸ್ ಬರೆದಿದೆ. ಫ್ರಾನ್ಸಿನಲ್ಲಿ, ಆಹಾ! ಈಗ ನಿಜ ವೇಷ ಹೊರಬಿತ್ತು ಎಂದೇ ಕೂಗು. ಇತರರು ಮೌನವಂತೆ. ಗಾಂಗಳನೇ ಇಸ್ಲಿಯ ನೆನಪಾಗಿ, ಅಮೇರಿಕವು ಚಿಂತಾಮಗ್ನವಾಗಿದೆ. ವಾರ್ಸೇಲ್ಸ್ ಒಪ್ಪಂದದಲ್ಲಿ ಜರ್ಮನಿಯನ್ನು ಬಾಗಿಸಿ, ಗುದ್ದಿ, ಒದ್ದು, ಒತ್ತಿರುವರೆಂದೇ ಸ್ವಗೌರವಕ್ಕಾಗಿ ಜರ್ಮನಿಯು ಇತರ ಮುಖ್ಯ ಜನಾಂಗಗಳಂತೆ ತಾನೂ ಬೆಳೆಯಬೇಕೆಂಬ ಆಸೆಯಿಂದ ಹೀಗೆ ಮಾಡಿದುದಲ್ಲದೆ, ಯುದ್ಧಾತುರತೆಯಿಂದಲ್ಲವೆಂದು ಹೇಳಿಕೆ. ಎಷ್ಟೆ, ಶಸ್ತ್ರಾಸ್ತ್ರಗಳ ರಾಶಿ, ಸಿಡಿಮದ್ದು ಎಲ್ಲ ಸಿದ್ಧ, ಬೆಂಕಿಯ ಕಿಡಿ ಬಂದಿತ್ತೆಂದರೆ, ಪುನಃ ೧೯೧೪ರ ಮಹಾಭಿನಯ

ರಾಜ ಪಕ್ಷದವರು

ಎಂಬ ಹೆಸರಿನ ಕೆಲವರು ಬಂಗಾಳದಲ್ಲಿ ತಲೆಯೆತ್ತಿರುವರು. ಇವರು ಮಿಡ್ನಾಪುರದಿಂದ (ಅದರ ಹೆಸರು ಬರೆದರೂ ಅಪಶಕುನ!) "ಸರಕಾರವು ನಮ್ಮನ್ನು ಕೈ ಬಿಟ್ಟರೆ, ಬೇಗಬೇಗನೇ ನಮ್ಮನ್ನು ಮಾರುತ್ತಾರಲ್ಲ" ಎಂದು ಇಂಗ್ಲೆಂಡಿನ ಪತ್ರಿಕೆಗೆ ಬರೆದಿರುವರು. ದುಃಖವೆಂದರೆ, ಇವರನ್ನು ಮಾರುವುದಂತಿರಲಿ, ಇವರನ್ನು ಮಾರಿದರೆ, ಕೊಂಡುಕೊಳ್ಳುವ ಗಿರಾಕಿಗಳಾದರೂ ಎಲ್ಲಿರಬೇಕೋ ತಿಳಿದಿಲ್ಲ. 'ಮಿಡ್ನಾಪುರದಲ್ಲಿರುವ ಜನರಲ್ಲಿ ನೂರಕ್ಕೆ ೭೦ರಂತೆ ಜನರು ಕ್ರಾಂತಿಕಾರರು" ಎಂದು ಇವರೆನ್ನುತ್ತಾ, "ಹಿಂದೂಗಳೂ ನಮ್ಮ ದೂರಿಗೆ ಸಹಿ ಹಾಕುತ್ತಾರೆ" ಎಂದು ಇವರು ತಿಳಿಸುವಾಗ, ಏನೆನ್ನಬೇಕು? ೭೦ರಂತೆ ಜನರು ಕ್ರಾಂತಿಕಾರರ ಪಕ್ಷ ಎಂತಾದರೆ, ಅವರ ಅಭಿಪ್ರಾಯವೇನು? ಇವರಿಗೆ ಜನರ ಬೆಂಬಲವಿದೆ ಎಂದರೆ ತಾತ್ಪರ್ಯವೇನು? ಇದೂ ಅಲ್ಲದೆ, "ಕ್ರಾಂತಿಕಾರರನ್ನೂ, ಅವರಲ್ಲಿ, ಸಹಾನುಭೂತಿಯುಳ್ಳವರನ್ನೂ ಕೂಡಲೆ ಗಡೀಪಾರು ಮಾಡಬೇಕು" ಎಂದು ಇವರು ಬರೆವಾಗ, ಮಿಡ್ನಾಪುರದಲ್ಲಿ ಗಡೀಪಾರಾಗದೆ ಉಳಿಯಬಹುದಾದ ಜನರೆಷ್ಟಾದರು? "ಮಿಡ್ನಾಪುರದ ಜನರ ಮೇಲೆ ಕ್ರಾಂತಿಗೆ ಸಹಾಯ ಮಾಡುವವರೆಂದು ಜುಲುಮಾನೆ ವಿಧಿಸಿ, ಆ ಹಣದಿಂದ ಓಳಗುಟ್ಟನ್ನು ಕ್ರಯಕ್ಕೆ ದೊರಕಿಸಿಕೊಳ್ಳಬೇಕು" ಎಂಬುದೂ ಇವರ ಇನ್ನೊಂದು ಅಮೂಲ್ಯ ಸೂಚನೆ. "ಹಣ ಕೊಟ್ಟಗುಟ್ಟು ಪಡೆಯಿರಿ" ಎನ್ನುವಾಗ ಕ್ರಾಂತಿಯ ದಸೆಯಿಂದ ಪ್ರಾಂತಾಂತರಗಳೂ ಒಂದು ವಹಿವಾಟು ನಡೆಸುತ್ತಾರೆಯೋ ಎಂತೋ ತೋರದು!

ಇಂತಹ ಹುಚ್ಚು ಇದೆಯೇ!

ಶ್ರೀಯುತ .... ಭಟ್ಟಾಚಾರ್ಯರು "ಮುಸ್ಲಿಮರಿಗೆ ಅಧಿಕ ಸ್ಥಾನಗಳು ಬಂಗಾಳದಲ್ಲಿ ದೊರೆಯದೇ ಬೇಕಾಗಿದೆ. ಹಾಗಿರುವಾಗ, ಹಿಂದುಗಳಿಗೆ ಈ ಬಗೆಯಾಗಿ ಮುಸ್ಲಿಮರ ಕೈಕೆಳಗೆ ಇರಲು ಇಷ್ಟವಿಲ್ಲದರೆ ಅವರು ಕೂಡಲೆ ಬಂಗಾಳವನ್ನು ಬಿಟ್ಟು ಹೊರಡಲಿ!" ಎಂದರು. "ತಲೆ ತಿರುಗಿದ ಯಾವನಾದರೂ ಈ ಬಗೆಯಾಗಿ ಆಡುವನೆ? ಇದೂ ಒಂದು ಮಾತೇ! ಸಾಧಾರಣ ತಲೆಯುಳ್ಳವರು ಸಹ ಈ ಮಾತುಗಳನ್ನು ಭಟ್ಟಾಚಾರ್ಯರು ಆಡಿದರೆಂದು ನಂಬುವುದು ಸಹ ಕಠಿನ. ಯಾವನೊಬ್ಬ ಮುಸ್ಲಿಮನ ಮನಸ್ಸಿನಲ್ಲಿ ಇಂತಹ ಉತ್ಕಟ ಅನಿಷ್ಟ ಕಾಂಕ್ಷೆಯು ಇರಲಾರದು. ಲಂಡನು ಯಾತ್ರೆಗೆ ತೆರಳಿದ ಬಳಿಕ, ತಲೆಯೊಳಗೆ ಗಾಳಿ ಹೊಕ್ಕಿರುವಂತೆ ತೋರುತ್ತಿರುವುದಲ್ಲ! ಇನ್ನಾದರೂ, ಈ ಮಹನೀಯರನ್ನು ಸರಕಾರವು ಲಂಡನಿಗೆ ಕಳುಹುವ ಬದಲಾಗಿ, ತಾನು ಭಟ್ಟಿಯ ಮಹಮ್ಮದ ತೊಗ್ಲಕನ ವಂಶದವನೆನ್ನುವ ಈ ಗೃಹಸ್ಥರನ್ನು, ಭಟ್ಟಿಗೇ ರವಾನಾ ಮಾಡಿದರೆ, ಬಂಗಾಳಕ್ಕೆ ಕ್ಷೇಮವಾದೀತು" ಎಂದು ಕಲ್ಕತ್ತದ ಪತ್ರಿಕೆಗಳು ಎನ್ನುತ್ತಿವೆ. ತಲೆ ತಿರುಗಿದರೆ, ಲೋಕವೇ ತಿರುಗದೇಕೆಂದಿದೆಯೋ?

ಪಿಸ್ತೂಲುಂಟೋ, ಫಾಸಿ!

ಎಂಬ ಕಾನೂನನ್ನು ಜಾರಿಗೆ ತರುವುದುತ್ತಮವೆಂದೂ ಈ ವಿಧ್ವಮಾನಗಳಲ್ಲಿ ಸಂಗತವೆಂದೂ ಬಂಗಾಳದ ಕೆಲ ಇಂಗ್ಲಿಷರು ಸರಕಾರಕ್ಕೆ ಸೂಚಿಸಿಕೊಂಡಿರುವರು. ಪಿಸ್ತೂಲನ್ನು ಲೈಸನ್ಸಿಲ್ಲದೆ ಇಟ್ಟುಕೊಳ್ಳುವುದು ಕೇವಲ ಗುಂಡಿಕ್ಕಿ ಕೊಳ್ಳುವುದಕ್ಕಾಗಿ ಎಂಬುದನ್ನು ಸಿದ್ಧಾಂತ ಮಾಡಿ, ಹಾಗೆ ಯಾರ ಬಳಿ ಪಿಸ್ತೂಲು ಇರುವುದೋ ಅವರನ್ನು ಆ ಕಾಸಿನೋಗೆ ಫಾಸಿ ಶಿಕ್ಷೆಗೆ ಕೊಡುವುದೆಂದು ಶಾಸನವನ್ನೇ ಮಾಡಬೇಕಾಗಿ ಇವರ ಶಿಫಾರಸು. ಕ್ರಾಂತಿಕಾರರನ್ನು ಅಣಗಿಸುವುದಕ್ಕೆಂದು ಈ ಹೊಸ ಬಗೆ. ಆದರೆ, ಕ್ರಾಂತಿಕಾರರಿಗೇ ಇದರಿಂದ ಎಷ್ಟು ಕಾರ್ಯ ಸಿದ್ಧಿಯಾಗುವುದೋ ಅದನ್ನು ಶಿಫಾರಸು ಮಾಡುವವರು ತಿಳಿದಿಲ್ಲ. ಅವರೇನು ಮಾಡುವರು? ಯಾರಯಾರ ಮನೆಯೊಳಗೆ ನುಗ್ಗಿ, ಮೆಲ್ಲನೆ ಒಂದೊಂದು ಪಿಸ್ತೂಲನ್ನು ಅಲ್ಲಲ್ಲಿ ಮಡಗಿದರಾಯಿತು. ಒಡನೆಯೆ ಅವರೆಲ್ಲರನ್ನು ಅಧಿಕಾರಿಗಳೇ ಆ ಕಾಸುಗಳಲ್ಲಿ ಫಾಸಿಯಿಕ್ಕುವರು. ಇದಕ್ಕೆ ಬದಲಾಗಿ, ಕ್ರಾಂತಿಕಾರರು ಹೀಗೆ ಸುಲಭವಾಗಿ ವಿಜಯ ಹೊಂದುವಂತೆ ನಾನಾ ಕೃತ್ರಿಮೋಪಾಯಗಳನ್ನು ಸೂಚಿಸುವ ಈ ಮಹಾ ಜಾಣರಲ್ಲಿ ಕೆಲವರನ್ನು ಜರ್ಮನಿಗೋ ಕಳುಹಿಸಿಕೊಟ್ಟರೆ, ಉತ್ತಮವಾದ ಪರಿಣಾಮವು ಸರಕಾರಕ್ಕೂ ಜನತೆಗೂ ಉಂಟಾಗುವುದು.

ಬಾಲಕನಿಗೆ ಫಾಸೀ ಶಿಕ್ಷೆ

ತಾಯಿಯು ದಾರಿಗೆಡುವ ಹಾಗೆ ಮಾಡಿದ 'ಗೃಹಸ್ಥ'ನೊಬ್ಬನು, ಅವಳ ಮಗನ ಕೈಗೆ ಬಲಿ ಬಿದ್ದನು. ತಂದೆಯು ಈ ಗೃಹಸ್ಥನ ನಡತೆ ತಿಳಿದು 'ತಾಯಿ'ಯನ್ನೆ ಕೊಂದಿಕ್ಕಿದನು. ತಂದೆಗೆ ಈ ಕೊಲೆ ಮಾಡಿದುದಕ್ಕೊಂದು ಜೀವಾಂತ್ಯದ ವರೆಗೆ ಸಜೆಯಾಯಿತು. ಹೀಗೆ ಅವನಿಗೆ ಸಜೆಯಾಗುವಂತೆ ಸಾಧಿಸಿದವನು ಈ ಗೃಹಸ್ಥನೆಂದು, ಮಗನು ತಿಳಿದು, ತಂದೆಯನ್ನೂ ತಾಯಿಯನ್ನೂ ತನ್ನಿಂದ ದೂರವಾಗುವಂತೆ ಪ್ರಯತ್ನಿಸಿದುದಕ್ಕಾಗಿ, ಅವನನ್ನೆ ಕೊಂದನು. ಹುಡುಗನನ್ನು ಈ ಫಾಸೀ ಶಿಕ್ಷೆಗೆ ಒಳಪಡುವಂತೆ ಪಂಜಾಬು ಹೈಕೋರ್ಟು ವಿಧಿಸಿರುವುದು. ಆದರೆ, ಹದಿಮೂರೇ ವರ್ಷ ವಯಸ್ಸಿನ ಬಾಲಕನನ್ನು ಇಂತಹ ಶಿಕ್ಷೆಗೆ ಗುರಿ ಮಾಡಿದುದು ಅಂದವಲ್ಲವೆಂದು ಅಲ್ಲಲ್ಲಿನ ಸಂತಾಪ. ನಾಲ್ಕೈದು ವರ್ಷ ತಿದ್ದುಪಡಿಯ ಶಾಲೆಗಳಲ್ಲಿ ಅವನು ಇರುವಂತೆ ವಿಧಿಸಿದ್ದರೆ ಚೆನ್ನಾಗುತ್ತಿತ್ತು. ಅವನನ್ನು ಅಷ್ಟು ಉದ್ರೇಕಗೊಳಿಸಿದ ಹಾಗೂ ಅವನಲ್ಲಿ ಜೀವನದ ಕೋಮಲತೆಯೇನೂ ಇರದಂತೆ ಪ್ರೇರೇಪಿಸಿದ ಗೃಹಸ್ಥನ ಕೃತ್ಯಗಳೂ ನಡೆದ ವಿಧ್ವಮಾನಗಳೂ ಎಂತಹವೆಂದು ಪಂಜಾಬು ಸರಕಾರವು ವಿಚಾರಿಸಿ, ನ್ಯಾಯಕ್ಕೆ ಸಮಾಧಾನವಾಗುವಂತೆ ಶಿಕ್ಷೆಯನ್ನು ತಿದ್ದದರಾಗದೇ? ಕೊಂದೂ ೨೦೦ ರೂಪಾಯಿ ಜುಲುಮಾನೆ ತೆತ್ತು ಕೈ ಬೀಸಿ ಹೋದವರೆಷ್ಟು ಉತ್ತರ ದೇಶದಲ್ಲಿಲ್ಲ? ಇಂಗ್ಲೆಂಡಿನಲ್ಲಾದರೆ, ಈ ಬಾಲಕನ ಸಲುವಾಗಿ ಒಂದು ಮಿಲಿಯ ದಸ್ಕತಿನ ಅರ್ಜಿಗಳು ದಾಖಲಾಗುತಿದ್ದುವಲ್ಲ!

NOTES...
ನೋಟಗಳು.

ಮಾವ ಅಳಿಯಂದಿರೆಂದರೆ ಎಂದಿನಿಂದಲೂ ಕಂಸ-ಕೃಷ್ಣರೇ ಎಂಬ ಭಾವನೆ ಇನ್ನೂ ಇರಬೇಕೆ? ಹೆಣ್ಣು ಕೊಟ್ಟರೂ ಮಾವ, ತಾಯಿಯ ಸೋದರನೂ ಮಾವ ನಿಜ. ಆದರೆ, ಅಳಿಯಂದಿರು ಮಾವಂದಿರನ್ನು ದ್ವಾಪರದಂತೆ ಈಗಲೂ ಹಿಂಸಿಸುವುದು ಕಲಿಕಾಲಕ್ಕೆ ವಿಹಿತವೆ?

* * * *

ಮಾವನನ್ನು ಕೊಂದವರು, ಮಾವನನ್ನು ತುಳಿದವರು ಗಾಯಪಡಿಸಿದವರು ಇತ್ಯಾದಿಯವರ ವಿಷಯ ಕೇಳುವಾಗ, ಮಾವನಾದರೂ ಮಾವಾದರೂ ಒಂದೇ ಬಗೆ ಎಂದು ತೋರುವುದು ಇಂಲಿ,—ಮಾವ-ಮಾವು ಶಬ್ದಗಳು ಉಂಟಾದುದು ಸಹ ಹೀಗೆಯೊ ಏನು?

* * * *

ಹಾಗಾದರೆ, ಕನ್ನಡಿಗರಲ್ಲಿ ಕನ್ನಡ ಭಾಷೆ ಪ್ರಾರಂಭವಾದಂದಿನಿಂದ ಮಾವಂದಿರಿಗೆ ಗಂಡಾಂತರ ಹೆಚ್ಚೆಂದು ಖಂಡಿತವಾಗುವುದು. ಭಾಷಾ ಶಾಸ್ತ್ರಜ್ಞರು ಇದನ್ನು ವಿಚಾರಿಸಲಿ.

* * * *

ನಮ್ಮೂರ ರತ್ನಗಳು ಒಂದೊಂದಾಗಿ ಮಾಯವಾಗುತ್ತವಲ್ಲ! ಈ ವಾರ ಶ್ರೀ ದಿವಾನ್ ಬಹದ್ದೂರ್ ಎನ್ ಸುಬ್ಬರಾಯರು ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಸರಕಾರದ ಅಂಕೆಯಲ್ಲೂ ವಿಶೇಷ ಹೆಸರುಗೊಂಡವರು. ಇವರ ಆಡಳಿತದ ಪರಿಣಾಮ ಫಲಗಳು ಇನ್ನೊಂದು ತಲಾಂತರದ ವರೆಗೂ ಕಾಣಿಸಿಕೊಳ್ಳುವಂತೆ ಇವರು ಜಿಲ್ಲಾ ಬೋರ್ಡನ್ನು ನಡಸಿ ತಂದವರು. ಹಿರಿಯರು ಹಾಗೂ ಮನೆತನದ ಕೀರ್ತಿಯನ್ನು ಅಳ್ಳಳಿಯದೆ ಪಾಲಿಸಿದವರು, ಮುಂದೆ ಮುಂದೆಯೂ ಇವರ ಮಕ್ಕಳು ಮನೆತನದ ಶ್ರೇಯಸ್ಸನ್ನು ಕಾಪಾಡಿ ಬರುವ ಹಾಗೆ ಅವರ ನೊಂದ ಮನಸ್ಸಿಗೆ ಶಾಂತಿಯನ್ನು ಪರಮಾತ್ಮನು ಅನುಗ್ರಹಿಸಲಿ

* * * *

ಏಡೆಡ್ ಶಾಲೆಗಳು ಇರುವಲ್ಲಿ ಬೋರ್ಡುಗಳು ಹೊಸ ಶಾಲೆ ತೆರೆಯ ಬಾರದೆಂಬುದು ನ್ಯಾಯವಾಗಿದೆ, ಆದರೆ, ಇದ್ದ ಬೋರ್ಡು ಶಾಲೆಯನ್ನು ಮುಚ್ಚುವ ಹವ್ಯಾಸವೇತಕ್ಕೆ?

* * * *

ಒಂಟ್ಯಾಕ—ಬಿಜೈ ಶಾಲೆಗಳ ಮೇಲೆ ಮಂಗಳೂರು ತಾಲೂಕು ಬೋರ್ಡಿನ ವಕ್ರದೃಷ್ಟಿ ಪ್ರಾರಂಭವಾಗಿದೆಯಂತೆ. ಈ ಶಾಲೆಗಳಲ್ಲಿನ ಮಕ್ಕಳು ಅಕ್ಕಿನ ಏಡೆಡ್ ಶಾಲೆಗಳನ್ನು ಸೇರ ಹೋದರೆ, ಅಲ್ಲಿ ಕೂಡಲೆ ಸಂಬಳ ಹೆಚ್ಚಿಸುವರೆಂದು ಈಗಲೆ ದಿಗಿಲು. ಶಾಲಾಧಿಕಾರಿಗಳು ಮಾತ್ರ ಹಾಗೆ ಮಾಡಿದರೆ, ವಿದ್ಯಾ ಪ್ರಚಾರಕ್ಕೆ ಹುಟ್ಟಿದವರಲ್ಲ, ಸಫೆಗೆ ಎಂದು ತಿಳಿಯದೆ?

* * * *

ಕೆಲಸಕ್ಕೆ ಬಾರದ ನೂರು ಶಾಲೆಗಳನ್ನು ಇಟ್ಟುಕೊಂಡು ಅವುಗಳಲ್ಲಿ ವಿದ್ಯಾರ್ಥಿಗಳು ಇರಲಿ, ಇಲ್ಲದಿರಲಿ, ಮಾಸ್ತರರು ಹೇಗೂ ಇರಲಿ, ಶಾಲೆಗಳು ನೆರೆಮನೆಗಳಂತೆ ಹತ್ತಿರವಿರಲಿ, ಆದರೂ ೫೦೦೦ ರೂಪಾಯಿ ನಷ್ಟವಾಯಿತೆಂದು ಮಾತ್ರ ಹೇಳುವುದು ಸರಿಯೆ?

* * * *

ನಮ್ಮಲ್ಲಿನ ಫಜೀತಿ ನೋಡಬಾರದೆ? ೬—೭ ವರ್ಷದ ಬಾಲಿಕೆಯರು ಹರಿಕಥೆ, ನರ್ತನ, ನಾಟಕ ಮಾಡ ಶಕ್ತರಾಗುವುದು ವಿಚಿತ್ರವೊ, ಅಥವಾ ಅವರು ಬರೇ ಕನ್ನಡ ಬಾಲಿಕೆಯರಾದರೆ 'ಮಿಸ್' ವರ್ತಿಗಳಾಗುವುದು ವಿಚಿತ್ರವೊ?

* * * *

ಇಂಥವರು ಕುಮಾರಿಯರಾಗಿದ್ದರೇ ಚೆಂದ, 'ಮಿಸ್' ಪದವಿಗೆ ಏರಿದರೆ ಸ್ವಲ್ಪ ಮೋಸ ಮುಂಧಕ್ಕಿದೆ.

* * * *

ಸೇಕಡಾ ೯೫ ಮಂದಿ ಹಿಂದುಗಳು ವರ್ಣಾಶ್ರಮ ಸ್ವರಾಜ್ಯ ಸಂಘದವರೆಂದೂ, ಸೇಕಡಾ ೯೫ ಮಂದಿ ಹಿಂದೂ ಮಹಾಸಭೆಯ ಮೆಂಬರರೆಂದೂ, ಅವರವರ ಹೇಳಿಕೆ. ನೂರು ಹಿಂದುಗಳಿರುವರಾದರೆ, ೧೯೦ ಮಂದಿ ಇವೆರಡು ಸಭೆಗೆ ಸೇರಿದಂತಾಯಿತು. ಇದೂ ಒಂದು ಲೆಕ್ಕ

* * * *

ಪ್ರಪಂಚದಲ್ಲಿ ೩೦೦೦ ಮಿಲಿಯನ್ ನಿರುದ್ಯೋಗಿಗಳು! ಅಮೇರಿಕಾದಲ್ಲಿ ೧೩೦೦೦ ಮಿ, ಜರ್ಮನಿಯಲ್ಲಿ ೬೦೦೦ ಮಿ, ಇಂಗ್ಲೆಂಡಿನಲ್ಲಿ ೬೦೦೦ ಮಿ, ಒಟ್ಟು ೨೫,೦೦೦ ಮಿಲಿಯನ್! ಇದು (೨೫,೦೦೦) ೩೦೦೦ದಿಂದ ಹೋಗಲಾಗಿ "ಉಳಿದದ್ದು ಪ್ರಪಂಚದ ಇತರ ಭಾಗಗಳಲ್ಲಿದೆ" ಎಂದರೆ,—ಎಷ್ಟು? ಯಾವ ಪ್ರಪಂಚದಲ್ಲಿ? ಇದೂ ಒಂದು ಲೆಕ್ಕ [illegible]ರವರು ಹೇಗೆಂದು ಅಸ್ಸರ್ಥನ ಲೆಕ್ಕದ ಕ್ರಮ [illegible]

If you want FULL VALUE for your money insist on Swastik Products

ನಿಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ ಸಾಮಾನುಗಳನ್ನೇ ಕೊಂಡುಕೊಳ್ಳಿರಿ

Swastik 777 Bar soap & Swastik Cake & Cube Soaps; best in washing Soaps.



ಕಸ, ಕೊಳೆ, ಕಲ್ಮಶ, ಮೊದಲಾದ ಕಶಾರಗಳು ಕಿಂಚಿತ್ತಾದರೂ ಉಳಿಯಬಾರದು—ಆಗ ತಾನೇ

ಲೋಕ ಕ್ಷೇಮ 777 ಇದರಿಂದಾಗಿ ಪ್ರಸನ್ನತೆ

ನಂಬರಿನ ಸ್ವಸ್ತಿಕಾ ಅತ್ಯುತ್ತಮ ಸಾಬೂನು

ಸ್ವದೇಶಿಗಳಲ್ಲಿ ಅಗ್ರಗಣ್ಯ, ಬಟ್ಟೆಗಳಿಗೆ, ಇತರ ಸಾಬೂನುಗಳಿಗೆ ಮೇಲ್ಪಂಗಿ ಉತ್ಕೃಷ್ಟವಾಗಿ ಒಗೆಯುವುದು ಹೆಚ್ಚು ಕಾಲ ಬಾಳುವುದು. ಯೋಗ್ಯತೆ ಮಿಗಿಲಾಗಿ ಬೆಲೆ ಕಡಿಮೆ—ವಿಲಾಯತಿ ಸಾಬೂನಿಗೆ ಪ್ರತಿಸ್ಪರ್ಧಿಯಾಗಿದೆ.

Swastik Double boiled & Raw Linseed Oils

SWASTIK

THE MARK OF QUALITY

available in 5 gallon drums, 1 gallon tin



ಪೈಂಟ್ ಬಗ್ಗೆ ಸ್ವಸ್ತಿಕಾ ಬೇಯಿಸಿದ ಅತೀ ಉತ್ತಮ ತರದ ಲೀನ್‌ಸೀಡ್ ಎಣ್ಣೆ ೫ ಗೆಲನ್ ಡ್ರಮುಗಳಲ್ಲೂ ಗೆಲನ್ ಟಿನ್ನುಗಳಲ್ಲೂ ದೊರೆಯುವುವು.

ಕಾಷ್ಠ ಗಿಡಗಳ ಮೇಲೆ ಕ್ರಿಮಿ ಹಿಡಿಯದಂತೆ ಚೆಲ್ಲುವರೆ ಸ್ವಸ್ತಿಕಾ ಹಸಿ ಲಿನ್‌ಸೀಡ್ ಎಣ್ಣೆ ೫ ಗೆಲನ್ ಡ್ರಮುಗಳಲ್ಲಿ ದೊರೆಯುವುದು

ವಿಲಾಯತಿ ಎಣ್ಣೆಗಿಂತಲೂ ಶೇಕಡಾ ೨೦ರಷ್ಟು ಹೆಚ್ಚಿನ ಫಲ ಪ್ರಯೋಜನ ಕೊಡುವುದಾಗಿ ಲಂಡನ್ ಜ್ಯೂರಿಚ್ ಲೆಬೋರೇಟೋರಿಯವರು ಸರ್ಟಿಫಿಕೇಟು ಕೊಟ್ಟಿದ್ದಾರೆ

Swastik CASTOR OIL (medicinal) (Cold drawn)

Packed in gallon tins & 4 oz, 8 oz, 1 lb bottles

ಸ್ವಸ್ತಿಕಾ ಹರಳೆಣ್ಣೆ

4 ಔನ್ಸ್, 8 ಔನ್ಸ್, 1 ರಾತಲ ಬಾಟ್ಲಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವುದು.

ಶಾಸ್ತ್ರೀಯ ರೀತಿಯಲ್ಲಿ ಸಿದ್ಧಗೊಳಿಸುವ ಶುದ್ಧವಾದ ಈ ಹರಳೆಣ್ಣೆಯು ವಾಸನೆ ಇಲ್ಲದ್ದು ರುಚಿರಹಿತವಾದದ್ದು

ಹರಳೆಣ್ಣೆಯಿಂದಾಗುವ ಯಾವತ್ತೂ ಉಪಯೋಗಗಳು ನಾಲಗೆಗೂ, ಮನಸ್ಸಿಗೂ ಬೇಸರವಾವ್ವದೂ ಇಲ್ಲದೆ ಈ ಸ್ವಸ್ತಿಕಾ ಹರಳೆಣ್ಣೆಯಿಂದ ದೊರೆಯುವುವು ಇವಲ್ಲದೆ—

ಸ್ವಸ್ತಿಕಾ ಕಡ್ಲೆಂಣೆ, ಎಳ್ಳೆಂಣೆ, ವಾರ್ನಿಸು, ಮೈಗೆ ಹಾಕುವ ಸಾಬೂನು ವಗೈರೆ ಇವೆ

Swastik Oil Mills Ltd, Bombay.

Chairman–Seth Ambalal Sarabhai,

Directors–Sir Purushothamdas Thakurdas

Mr F E Dinshaw

Mr C S Patel & others

ಮಲಬಾರ್ ಮತ್ತು ಕನ್ನಡ ಜಿಲ್ಲೆಗೆ ಏಜಂಟರು—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು.

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಆಯುರ್ವೇದೋಕ್ತ

ಹಾಗು ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುನಾಶ ಮ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣುಗಳಿಗೆ ಉರುಪು ಬೀಳೋದು, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋದು ನಡು ನೋಯೋದು ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಘೋಳಕೆ ಬರೋದು ಸೌಚಕ್ಕೆ ಸಾವು ಆಗದೇ ಇರೋದು ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಜಠರಾಗ್ನಿಯು ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು ಅಶಕ್ತ ಮುದುಗರು ಬಲವಂತರಾಗುವರು ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು

ಬಾಟ್ಲಿ ಬೆಲೆ ೧—೪—೦ ೪ ಬಾಟ್ಲಿಗೆ ೪—೬—೦ ಡಝನ ಬಾಟ್ಲಿಗೆ ೧೩ ರೂಪಾಯಿ ಟಪಾಲ ಖರ್ಚು ಪೋಸ್ಟೇಜ ಬೇರೆ ಬೀಳುತ್ತದೆ ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರುಗಳೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು

ಮ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ — ಮಂಗಳೂರು—ಗಣೇಶನ ಮೆಡಿಕಲ್ ಹಾಲ್ ಮತ್ತು ಪಿ ಚಾರ್ಲ್ಸ ಬ್ರದರ್ಸ್, ಕಾರ್‌ಸ್ಟ್ರೀಟ್

ಕುಂದಾಪುರ—ಕೆ ಆರ್ ಭಟ್ಟ, ಕೆಮಿಸ್ಟ ಉಡುಪಿ—ಪೈ ಫಾರ್ಮಸಿ, ತೆಂಕಪೇಟೆ ಕಾರ್ಕಳ—ಎ ಪಿ ಶೆಣೈ ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ ಕಾಸರಗೋಡು—

೨-೬-'೩೮ ಕೆ ರಾಮ ನಾಯ್ಕ, ಕೋರ್ಟ ರಸ್ತೆ ಬಂಟವಾಳ—ದಿ ಕೆನರಾ ಪೋಪ್ಯುಲರ ಫಾರ್ಮಸಿ

ಬಿಪ್ಪತ್ತೇಳು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್ ಬಾತ್ ಟುವಾಲುಗಳೂ ಧೋತಿ, ಸೀರೆ—ಬೈರವಾಸು—ಚೆಕ್ಕ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪೈ,

[ಸಾಹುಕಾರ ಮುಹ.ಲ್]

ರಥಬೀದಿ, ಮಂಗಳೂರು

Srinivasa Ranga Pai,

Representatives for South Canara and Malabar

For – A & F Harvey

Managers Madura Mills Co Ltd

For neat and nice Printing

Please call at

THE SHARADA PRESS,

Car Street, MANGALORE

ದಕ್ಷಿಣಕನ್ನಡ ಜಿಲ್ಲಾ ವರ್ಗದಾರರ ಸಂಘ.

ಪ್ರಕಟನೆ

ಸದ್ಯದಲ್ಲಿ ಸರಕಾರದವರು ಈ ಜಿಲ್ಲೆಗೆ ಹೊಸ ಸಟ್ಲ್‌ಮೆಂಟನ್ನು ಏರ್ಪಡಿಸುವ ಪ್ರಯತ್ನದಲ್ಲಿದ್ದಾರೆಂಬುದು ಎಲ್ಲರಿಗೂ ತಿಳಿದಿರಬಹುದು ಈ ಸಂದರ್ಭದಲ್ಲಿ ಈ ಕೆಳಗಿನ ಅನುಭವವು ಪಡೆಯುವುದು ಅಗತ್ಯಪಟ್ಟಿದೆ ಕಳೆದ ಸಪ್ಟಂಬರ ೩೦ ೩೧ರಲ್ಲಿ ಜರಗಿದ ಸಂಘದ ಮಹಾಸಭೆಯಲ್ಲಿ ಸುಮಾರು ಆರು ವಾರಗಳ ಮುಟ್ಟಿಗೆ ಈ ಜಿಲ್ಲೆಯ ಕೆಲವು ಕಡೆಗಳಲ್ಲಿ ಈಗ ಬೆಳೆಯು ಭತ್ತದ ಬೆಳೆಯಿಂದ ಆಗುವ ಉತ್ಪತ್ತಿಯ ವಿಷಯವಾಗಿ ಸರಿಯಾದ ಅನುಭವ ಪಡೆಯುವ ಬಗ್ಗೆ ಒಬ್ಬರನ್ನು ನೇಮಕ ಮಾಡಬಹುದಾಗಿ ಠರಾವು ಆದರೂ ಸಮಯ ಸಂಕೋಚದಿಂದಲೂ, ಸಂಘದಲ್ಲಿ ಹಣವಿಲ್ಲದ ಕಾರಣದಿಂದಲೂ ಆ ಬಗ್ಗೆ ಒಬ್ಬರನ್ನು ನೇಮಕ ಮಾಡುವರೆ ಸಾಧ್ಯವಾಗಲಿಲ್ಲ.

ಬೇಕಾದ ಅನುಭವವು ಯಾವುದೆಂದರೆ, ಮುಖ್ಯವಾಗಿ ಈ ಜಿಲ್ಲೆಯಲ್ಲಿ ಬೇರೆ ಬೇರೆ ತರದ ಸ್ಥಳಗಳಿಂದ ಎಕ್ರೆ ಒಂದರ ಭತ್ತದ ಪೈರಿನಿಂದ ಆಗುವ ಉತ್ಪತ್ತಿ ಎಷ್ಟು ಎಂಬುದು. ಈ ಬಗ್ಗೆ ಜಿಲ್ಲೆಯ ಕೆಲವು ಕಡೆಗಳಲ್ಲಿ ಈಗಿನ ಬೆಳೆಯು ಕಟಾವು ಆಗಿರಬಹುದು ಆದರೆ ಕೆಲವು ಕಡೆಗಳಲ್ಲಿ ಇನ್ನೂ ಆಗಲಿಲ್ಲ ಹಾಗೆ ಎಲ್ಲೆಲ್ಲಿ ಆಗಲಿಲ್ಲವೋ ಅಂಥಾ ಕಡೆಗಳಲ್ಲಿ ವರ್ಗದಾರರು ಯಾವುದಾದರೊಂದು ಗದ್ದೆಯನ್ನು ನಿಶ್ಚೈಸಿ ಅದರ ಸರಿಯಾದ ಅಳತೆಯನ್ನು ತಿಳಕೊಂಡು, ಅದರಿಂದ ಈಗಿರುವ ಭತ್ತದ ಪೈರಿನಿಂದ ಒಂದ ಬೆಳೆಯನ್ನು ಪ್ರತ್ಯೇಕವಾಗಿಟ್ಟು ಅದು ಹಸಿಯಾಗಿ ರುವಾಗ ಎಷ್ಟು ಮುಡಿಯು ಸೇರು (೪೨ ಸೇರಿನ ಮಂಗ್ಳೂರು ಹೋಲಿಕೆ) ಎಂಬುದನ್ನು ಸರಿಯಾಗಿ ಅಳತೆ ಮಾಡಿ ನಂತರ ಅದೇ ಭತ್ತವು ಚೆನ್ನಾಗಿ ಒಣಗಿದ ನಂತರ ಎಷ್ಟು ಅಳತೆಯಾಗುವದೆಂಬುದನ್ನು ಕೂಡಾ ಸರಿಯಾಗಿ ನಿಶ್ಚೈಸಿ ನನಗೆ ಅದಷ್ಟು ... ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ. ಆ ರೀತಿ ಪೈರು ಬೆಳ್ದಿರುವ ಸ್ಥಳ, ಸಾಧಾರಣವಿರುವ ಸ್ಥಳ ಮತ್ತು ಕನಿಷ್ಠವಿರುವ ಸ್ಥಳ, ಬೆಟ್ಟು, ಮಜಲು, ಮತ್ತು ಬೈಲು ಈ ರೀತಿ ಅನೇಕ ನಮೂನೆಯ ಸ್ಥಳಗಳಿಂದ ಈ ವಿಷಯವನ್ನು ಪಡೆಯತಕ್ಕದ್ದು. ಯಾಕೆಂದರೆ ಯಾವುದಾದರೂ ಒಂದೇ ರೀತಿಯ ಸ್ಥಳದ ಮಾಹಿತಿಯನ್ನು ಪಡಕೊಂಡರೆ ಅದು ನಮ್ಮ ಕೆಲಸಕ್ಕೆ ಪ್ರಯೋಜನ ಬೀಳಲಾರದು ಹಿಂದೆ ೧೯೦೩ರಲ್ಲಿ ನಡೆದ ಸೆಟ್ಲ್‌ಮೆಂಟಿನಲ್ಲಿ ಸರಕಾರದವರು ಈ ರೀತಿ ಮಾಹಿತಿ ಪಡೆದ ಸಂಖ್ಯೆಗಳು ಕಳೆದ ಸೆಟ್ಲ್‌ಮೆಂಟು ಪ್ರಕಟಣೆಯಲ್ಲಿ ಕಾಣುತ್ತದೆ ಅದು ಸರಿಯೋ ತಪ್ಪೋ ಎಂದು ನಾವು ತಿಳಿಯುವುದು ಕೇವಲ ಅಗತ್ಯ ಮತ್ತು ಅಂಥಾ ಮಾಹಿತಿಯು ಪ್ರಯೋಜನ ಬರಬೇಕಾದರೆ ಯಾವ ತರದ ತಪ್ಪು ಮಾಡದೆ ಪ್ರತಿಯೊಂದು ಅಳತೆಯನ್ನು ಸರಿಯಾಗಿ ಮಾಡಿದಲ್ಲಿ ಮಾತ್ರ ಪ್ರಯೋಜನ ಬಂದೀತು ಹೊರತು ಅಂದಾಜಿನಿಂದ ಮಾಡಿದ ಅನುಭವವು ಕೇವಲ ನಿಷ್ಪ್ರಯೋಜನವೇ ಸರಿ.

೧೫ನೇ ಪುಟಕ್ಕೆ ಮುಂದುವರಿಸಿಯದೆ.

ಅನುಕ್ರಮಣಿಕೆ.

ಅಗ್ರಲೇಖ

ಸ್ವಾಮಿ ದಯಾನಂದ ಸರಸ್ವತಿಯವರು . . . ೮

ಸ್ಫುಟಿವಿಚಾರಗಳು ೩

ಸೂಚನೆಗಳು ೧೧

ವರ್ತಮಾನ ಸಂಗ್ರಹಗಳು

ಗುಡ್ ಬ್ಯಾ! . . . ೨

ಒಳದೇಶ ವರ್ತಮಾನ ವಿದೇಶ ವರ್ತಮಾನ, ೮

ವಿವಿಧ ಸಮಾಚಾರಗಳು . ೧೧

ದಕ್ಷಿಣ ಕನ್ನಡ—ಮಂಗಳೂರು, ಸುರತ್ಕಲ್, ಕುಂದಾಪುರ, ಮುಲ್ಕಿ

ಕಾಸರಗೋಡು, ೯

ವೈಸರಾಯರು ಇಂಗ್ಲಾಂಡಿಗೆ ತೆರಳುವರು! ೮

ಪತ್ರವ್ಯವಹಾರ ೧೪

ಶ್ರೀ ವಿ ಜೆ. ಪಟೇಲರ ಆದಾಯಕರ ದೇಶಸ್ಥಿತಿ! ೧೫

ಸ್ವದೇಶಾಭಿಮಾನಿ.

ತಾ. ೨೦ನೇ ಶುಕ್ರವಾರ ಒಕ್ಟೋಬರ ೧೯೪೪.

ಸ್ವಾಮಿ ದಯಾನಂದ ಸರಸ್ವತಿಯವರು.

(ಅವರ ಅರ್ಧ ಶತಮಾನೋತ್ಸವ)

ಸ್ವಾಮಿ ದಯಾನಂದರವರ ಅರ್ಧ ಶತಮಾನೋತ್ಸವವು ಉತ್ತರ ಹಿಂದೂಸ್ಥಾನದಲ್ಲಿ ಸಂಭ್ರಮಪೂರ್ವಕವಾಗಿ ಆಚರಿಸಲಾಯಿತು ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಜೀಯವರು ಢಿಲ್ಲಿಯ "ತೇಜ ಎಂಬ ಪತ್ರಿಕೆಗೆ ಈ ರೀತಿಯಲ್ಲಿ ತಂತಿ ಮೂಲಕ ಅವರ ಪ್ರಶಂಸೆಯನ್ನು ಮಾಡಿದರು –

"ಋಷಿ ದಯಾನಂದರು ಶ್ರೇಷ್ಠತಮ ಹಿಂದೂ ಸುಧಾರಕರಲ್ಲಿ ಒಬ್ಬರು ಅವರು ವೇದಾಧ್ಯಯನವನ್ನು ಪ್ರೋತ್ಸಾಹಿಸಿದರು, ಮತ್ತು ಅಸ್ಪೃಶ್ಯತೆಯನ್ನೂ ಇತರ ಹಾನಿಗಳನ್ನೂ ನಿರ್ಭಯರಾಗಿ ವಿರೋಧಿಸಿದರು

ಸ್ವಾಮಿ ದಯಾನಂದರ ಮಹತ್ವವನ್ನು ತಿಳಿಯ ಬೇಕಾದರೆ ಅವರು ಜನನಕ್ಕೆ ಬಂದ ಸಮಯದಲ್ಲಿನ ಹಿಂದೂಗಳ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು ಅವರು ಜನನಕ್ಕೆ ಬಂದ ಸಮಯದಲ್ಲಿ ಬ್ರಿಟಿಷರು ಪೂರ್ಣಾಧಿಕಾರಕ್ಕೆ ಬಂದಿದ್ದರು ಮಾತ್ರ ಆ ಮೊದಲಿನ ಮುಸಲ್ಮಾನ ಆಳುವಿಕೆಯ ಪರಿಣಾಮಗಳ ಅವಶೇಷವು ಸಮಾಜದಲ್ಲಿ ದೃಢಮೂಲವಾಗಿದ್ದುವು ಮರಾಟರ ಪತನದಿಂದಲೂ ಬ್ರಿಟಿಷ ಆಳುವಿಕೆಯ ವಿಸ್ತರಣೆಯಿಂದಲೂ ಹಿಂದೂಗಳೂ ನಿರುತ್ಸಾಹಿಗಳೂ ಉತ್ತೇಜನವಿಲ್ಲದವರೂ ಚೇತನರಹಿತರೂ ಆಗಿದ್ದರು ಒಂದು ಕಡೆಯಿಂದ ಪಾಶ್ಚಾತ್ಯ ಕ್ರಿಸ್ತೀಯ ಮಿಶನುಗಳೂ ಬಲಶಾಲಿಯಾಗಿ ಹಿಂದೂ ಸಂಖ್ಯೆಯನ್ನು ಕ್ಷೀಣಿಸುತ್ತಿತ್ತು, ಇನ್ನೊಂದು ಕಡೆಯಿಂದ ಮುಸಲ್ಮಾನರ ಮತ ಧರ್ಮಾಂಧತೆಯು ಹಿಂದೂಗಳಲ್ಲಿ ಪರಾಜಯ ಮಾನಸಿಕತೆ (Inferiority complex)ನ್ನು ಉಂಟು ಮಾಡಿದ್ದಿತು

ಉಚ್ಚ ಶಾಸ್ತ್ರಿಕ ಮಹತ್ವದಿಂದ ಬ್ರಾಹ್ಮಣರು ಶತಮಾನಗಳ ರಾಜಕೀಯ ಅವನತಿಯಿಂದ ಹೇಯ ಸ್ವಾರ್ಥಮಯ ಮತಾಂಧ ಆಚಾರಗಳಿಗೆ ಇಳಿದು ಬ್ರಾಹ್ಮಣೇತರರ ಮೇಲೆ ಅಧಿಕರಿಸುತ್ತಿದ್ದರು ಇತ್ತ ಪಾಶ್ಚಾತ್ಯ ಜ್ಞಾನವೂ ವಿಜ್ಞಾನವೂ ಮೆಲ್ಲನೆ ದೇಶದಲ್ಲಿ ಪ್ರಸರಿಸಲಾರಂಭಿಸಿ ಪೌರೋಹಿತ್ಯ ಮೋಹವನ್ನು ಒಡೆದು ಎಲ್ಲರನ್ನೂ ಸಮಾನತೆಯ ಭಾವನೆಯೊಳಗೆ ಜಾಗರಿಸಲಾರಂಭಿಸಿದ್ದಿತು ರಾಜಾ ರಾಮ ಮೋಹನ್ ರಾಯಿಯವರ ಬ್ರಹ್ಮ ಸಮಾಜವು ಹಿಂದೂ ಮತ್ತು ಪಾಶ್ಚಾತ್ಯ ಮತ ಧರ್ಮಗಳೊಳಗಿನ ಮಾನಸಿಕ ಜಗಳ (Struggle) ವಾಗಿದ್ದಿತು ಅಸಮಾನತೆಯು, ಆಚಾರಾಂಧತೆಯು ಹಿಂದೂತ್ವವೇ? ಅಥವಾ ವಿಚಾರಕ್ಕೆ ಒಪ್ಪುವ ಸ್ವಾತಂತ್ರ್ಯದ ಉಸಿರಿನಿಂದ ಬೆಳಗುವ ಕ್ರೀಸ್ತತ್ವವೇ ಎಂಬ ಭಾವನೆಯು ನೂತನ ವಿದ್ಯಾವಂತರಲ್ಲಿ ಜಗಳಕ್ಕೆಡೆ ತಿದ್ದುವು ಸ್ವಭಾವವಾಗಿ ಹಿಂದೂತ್ವದ ಮೂಲ ಸೂತ್ರಗಳೇ ಹಾರೆತು ಹೋಗಿ ಹಿಂದೂ ಸಮಾಜದ ವಿಶೃಂಖಲತೆಯು ಹತ್ತಿರವಾಗಿದ್ದಿತು

ಸ್ವಾಮಿ ದಯಾನಂದರು ನೂತನ ಮತಸ್ಥಾಪಕರೆನ್ನುವುದಕ್ಕಿಂತಲೂ ಆಗಿನ ಸಮಯದ ಪ್ರತಿಕ್ರಿಯೆ (re-action) ಯ ಅವತಾರವೆನ್ನಬಹುದಾಗುತ್ತದೆ ಅವರು ಮತದ ಟೀಕೆಗಾಗಿ ಹೊರಟವರಲ್ಲ, ಸಮಾಜದ ಉದ್ಧರಣೆಗೆ ಹೊರಟವರು ಹಿಂದೂಮತವು ತತ್ವಗಳ ಗೊಂದಲದಲ್ಲಿಯೂ, ಆಚಾರಗಳ ಅಂಧತೆಯಲ್ಲಿಯೂ, ಸ್ವಾರ್ಥಗಳ ಸಾಧನೆಗಳಲ್ಲಿಯೂ ಹುಂದಿತ್ತು. ನೂತನ ವಿದ್ಯೆಯ ವಿಚಾರದಲ್ಲಿ ಸಿಲುಕಿದವರು ಹಿಂದೂಮತವನ್ನು ತ್ಯಜಿಸುವ ತಯಾರಿಯಲ್ಲಿದ್ದರು. ಆಗ ಉಂಟಾದ ಈ ವಿಚಾರಕ್ರಾಂತಿಯ ಫಲವಾಗಿಯೇ ಸ್ವಾಮಿಜಿಯವರು ಹಿಂದೂಮತಕ್ಕೆ ದೊರಕಿದರು. ಬುದ್ಧ ಮತದ ಪ್ರಚಾರದ ನಂತರ ಶ್ರೀ ಶಂಕರಾಚಾರ್ಯರಿಂದ ಹಿಂದೂಮತವು ಹೇಗೆ ರಕ್ಷಿಸಲ್ಪಟ್ಟಿತೊ ಕ್ರಿಸ್ತೀ ಮುಸಲ್ಮಾನ ಮತ ಪ್ರಚಾರದ ನಂತರ ಹಿಂದೂಮತವು ಶ್ರೀ ದಯಾನಂದರಿಂದ ರಕ್ಷಿಸಲ್ಪಟ್ಟಿತು

ನೂತನ ಕಲ್ಪನಾಮಯವಾದ ನೂತನ ಭಾವವಾಹಕವಾದ ಉಪದೇಶಗಳು ಸ್ವಭಾವತಃ ತಮ್ಮ ಸುಧಾರಣೆಯ ಉತ್ಸಾಹದಲ್ಲಿ ತೀಕ್ಷ್ಣತೆಗೂ ಧರ್ಮಾಂಧತೆ (Fanaticism) ಗೂ ಹೋಗುವುವು. ಹಾಗೆಯೇ ಶ್ರೀ. ದಯಾನಂದರ ಮತದೊಳಗೆ ಏನೊಂದು ದೋಷವಿಲ್ಲವೆನ್ನಲಾಗುವುದಿಲ್ಲ. ನೋಡಹೋದರೆ ಪ್ರತಿ ಮತದಲ್ಲಿಯೂ ಒಂದಲ್ಲ ಒಂದು ದೋಷವಿದ್ದೇ ಇದೆ ಆದರೆ ಆಗಿನ ಸಂದರ್ಭದಲ್ಲಿ, ಮತ್ತು ಈಗ ಕೂಡ ಆರ್ಯಸಮಾಜವು ದೇಶಕ್ಕೆ ಅತ್ಯಾವಶ್ಯಕ ಅದು ಹಿಂದೂಮತದ ತತ್ವಮಯ ಜಡತೆಯನ್ನು ತೆಗೆದು ಹಾಕಿ ಕರ್ಮಮಯ ಚೇತನವನ್ನು ಪ್ರೇರಿಸಿತು ಆರ್ಯ ಸಮಾಜದ ಹಲವು ಸಂಸ್ಥೆಗಳು, ಆರ್ಯಸಮಾಜದೊಳಗಿನ ಕೇಸರಿಗಾರರ ಉತ್ಸಾಹ, ಆರ್ಯ ಸಮಾಜವು ದೇಶದ ನೈತಿಕ, ರಾಜಕೀಯ ಮತ್ತು ವಿದ್ಯಾವಿತರಣೆಯ ಬಗ್ಗೆ ಮಾಡಿದ ಕೆಲಸಗಳು, ಆರ್ಯ ಸಮಾಜದ ಮೂಲಕ ಹಿಂದೂ ಮತದಿಂದ ಹೊರಹೋಗುವಂತಹವರು ಹಿಂದೂ ಮತದಲ್ಲಿಯೇ ಉಳಿದಂತಾದುದು, ಇವೆಲ್ಲನ್ನು ನೋಡಿದರೆ, ಅವರಿಂದ ಹಿಂದೂ ಸಮಾಜಕ್ಕೆ ಉಂಟಾದ ಅಪ್ರತಿಮ ಪ್ರಯೋಜನವು ತಿಳಿಯುವುದು ನಿಜವಾಗಿ ಸ್ವಾಮಿ ದಯಾನಂದರಂತಹ ವಿಸ್ತಾರ ದೃಷ್ಟಿಯುಳ್ಳವರು ನಾಲ್ಕು ಶತಮಾನಗಳ ಮೊದಲು ಜನಿಸಿದ್ದುದಾದರೆ ಹಿಂದೂಸ್ಥಾನದಲ್ಲಿ ಹಿಂದೂ—ಮುಸಲ್ಮಾನ ಮತ ವೈಷಮ್ಯಗಳೇ ಇರುತ್ತಿರಲಿಲ್ಲ ಏಕೆಂದರೆ ಅಂತಹ ವೈಷಮ್ಯಕ್ಕೆ ಪ್ರೋತ್ಸಾಹವೀಯುವ ಈಗಿನ ಮುಸಲ್ಮಾನ ಜನ ಸಂಖ್ಯೆಯಲ್ಲಿ ಹೆಚ್ಚಿನವರು ಹಿಂದೂಗಳಿಂದ ಮತಾಂತರ ಹೊಂದಿದವರಾಗಿದ್ದು, ಹಿಂದೂಮತದಲ್ಲಿ ಪುನಃ ಸೇರಲು ಉಪಾಯವಿದ್ದುದಾದರೆ ಹಿಂದೂಗಳಾಗಿಯೇ ಉಳಿಯುತ್ತಿದ್ದರು

ಹಿಂದೂಮತದ ಅಸ್ತಿತ್ವವೇ ಅಲುಗಿಸಲ್ಪಟ್ಟಾಗ ಅದನ್ನು ರಕ್ಷಿಸಲು ಮುಂದೆ ಬಂದ ಕೆಲವೇ ಮಹಾತ್ಮರಲ್ಲಿ ಸ್ವಾಮಿ ದಯಾನಂದರು ಒಬ್ಬರು ಪ್ರಮುಖರು ಅವರ ಹೆಸರು ಹಿಂದೂಗಳೆಲ್ಲರಿಗೂ ಪೂಜನೀಯವಾಗಿರುತ್ತದೆ

++ ++

Latest News.

ರಾಜಪಾಲಯಂ ಮತ್ತು ಟಿಂಡಿವನಂ ಮಧ್ಯೆ ರೈಲು ಮಾರ್ಗದಲ್ಲಿ ಯಾರೋ ದೊಡ್ಡ ದೊಡ್ಡ ಮರಗಳನ್ನು ಕೆಡವಿದುದರಿಂದ ಟ್ರಿವೆಂಡ್ರಂ ಪೆಸೆಂಜರ್ ರೈಲಿನ ಎದುರು ಭಾಗವು ಮುರಿಯಿತು

ಕಲ್ಲಿಕೋಟೆಯ ವಲ್ಲುವನಾಡ್ ತಾಲೂಕ್ ಬೋರ್ಡು ಗಾಂಧೀ ಪಟವನ್ನು ಆಫೀಸಿನಲ್ಲಿಟ್ಟ ಬಗ್ಗೆ ವೆಚ್ಚವಾದ ರೂ ೪. ೧೫—ನ್ನು ಸರಕಾರವು ಅನಧಿಕೃತ ವೆಚ್ಚವೆಂದು ಕೊಡಲೊಪ್ಪಲಿಲ್ಲ

ಸಯಾಮಿನಲ್ಲಿ ಪ್ರಿನ್ಸ್ ಒಪಾ ರಿಡೆಜ್ ಎಂಬ ಅರಸು ಕುಮಾರನು ದಂಗೆಯೆದ್ದು ಸರಕಾರೀ ಅಧೀನತದಲ್ಲಿ ಕ್ರೋಧಿ ಎದ್ದಿದೆ ನೌಕಾ ಸೈನ್ಯವು ದಂಗೆಗಾರರೊಡನೆ ಸೇರಿರುತ್ತದೆ

ಶಸ್ತ್ರವಿನ್ಯಾಸ ಸಭೆಯು ಜಯಶೀಲವಾಗುತ್ತದೆಂಬ ಸ್ಥಿತಿಯುಂಟಾದೊಡನೆ ಜರ್ಮನಿಯು ಮುಂದಕ್ಕೆ ಈ ಸಭೆಯಲ್ಲಿ ತಾನಿಲ್ಲವೆಂದು ಹಿಂತೆರಳಿ ಇಡೀ ಪ್ರಪಂಚವನ್ನೇ ಆಶ್ಚರ್ಯಗೊಳಿಸಿರುತ್ತದೆ

ಮದ್ರಾಸು ಕಲ್ಕತ್ತಗಳನ್ನು ವಿಮಾನ ಸಂಚಾರಾಟದಿಂದ ಒಂದು ಮಾಡಲು ನಿರ್ಣಯವಾಗಿದೆ ಬರುವ ತಿಂಗಳಿನಿಂದ ಸರ್ವಿಸ್ ಪ್ರಾರಂಭವಾಗುವುದು

ಮುಂಬಾಯಿಯ ಸಸ್ಸೂನ್ ಮತ್ತು ಅಲೈನ್ ಮಿಲ್ಲುಗಳು ಮುಚ್ಚಲ್ಪಟ್ಟುವು

ಪೆರಿಸಿನಲ್ಲಿ ಬರ್ಟ ಮತ್ತು ಡೊರಿಯರ್ ಎಂಬಿಬ್ಬರು ಶೋಧನಕಾರರು ರಾಷ್ಟ್ರದ ಹಿತಕ್ಕಾಗಿ ಚರ್ಮಕ್ಕೆ ಮುಟ್ಟಿದ ಕೂಡಲೇ ಮನುಷ್ಯನು ಸಾಯುವ ಒಂದು ವಿಷವನ್ನು ಕಂಡುಹಿಡಿದಿರುವರು

ಶ್ರೀ ವಿ ಜೆ ಪಟೇಲರಿಗೆ ಅನೇಕ ಸಹತಾಪ ತಂತಿಗಳು ಬಂದಿವೆ. ಲೋರ್ಡ್ ಅರ್ವಿನರು ಅವರಿಗೊಂದು ಮೈತ್ರಿಭಾವದ ಪತ್ರ ಬರೆದು ಪಟೇಲರನ್ನು ಸಂತೈಸಿರುತ್ತಾರೆ

ನೀಲಗಿರಿ ಪರ್ವತದಲ್ಲಿ ದೊರೆಯುವ ಒಂದು ವಿಚಿತ್ರ ರೋಗನಾಶಕ ಮದ್ದಿಗಾಗಿ ಲಂಡನಿನಿಂದ ಫ್ರೆಡೆರಿಕ್ ರಾಮ್ ಹೋ ಎಂಬವರು ಬರುವರು

ಒಳದೇಶ ವರ್ತಮಾನ

ಮುಂಬಾಯಿಯ ಗವರ್ನರರಾಗಿ ಲೋರ್ಡ್ ಬ್ರಬೋರ್ನ್ ದೊರೆಗಳವರು ನೇಮಕಪಟ್ಟಿರುವರು.

ವಿಪರೀತ ಮಳೆಯಿಂದಾಗಿ ಬಂಗಾಳದಲ್ಲಿ ದನಕರುಗಳಿಗೆ ಅಂಟು ರೋಗಗಳು ತಗಲಿವೆ

ಅಲ್ಲಾಹಾಬಾದಿನಲ್ಲಿ ಶ್ರೀಮತಿ ಮೋತಿಲಾಲರ ಒಪರೇಶನ್ ನಡೆಯಿತು. ಅವರು ಸ್ವಲ್ಪ ಸುಖವಾಗಿರುವರು.

ನಾಗಪುರದಿಂದ ಜಬ್ಬಲಪುರಕ್ಕೆ ಮೆಟ್ರೊಗೋಲ್ಡ್ವಿನ್ ಚಲಚಿತ್ರದ ಕಲ್ಕತ್ತಾ ಪ್ರತಿನಿಧಿಗಳಾದ ಎನ್ ಸಿ ಲಹ್ರಿ ಎಂಬವರು ಅಲ್ಲಿಯ ರೀಜೆಂಟ್ ಟೋಕಿಯ ಪಾಲುಗಾರರೊಂದಿಗೆ ಕಾರಿನಲ್ಲಿ ಸವಾರಿ ಮಾಡುತ್ತಿದ್ದಾಗ ಕಾರು ಮರಕ್ಕೆ ಢಕ್ಕೆಹೊಡೆದು ಇಬ್ಬರೂ ವಿಷಮಾವಸ್ಥೆಯಲ್ಲಿರುವರು.

ಮುಂಬಾಯಿಯ ವಿದ್ಯಾದಾಯಿನಿ ಸಭೆಯವರು ಕಳೆದ ತಾ. ೮ನೇ ಆದಿತ್ಯವಾರ ಸಂಜೆಗೆ ಬಾಟ್ಲಿಬಾಯಿ ಎಕೌಂಟೆನ್ಸಿ ಹೋಲಿನಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿ ಬಡವರ ಬಂಧುವಿನ ಉಪಸಂಪಾದಕರಾದ ಶ್ರೀಯುತ ಬಿ ನರಸಪ್ಪನವರನ್ನು ಆಮಂತ್ರಿಸಿ ಸತ್ಕರಿಸಿ ಭಾಷಣ ಫಲಾಹಾರಗಳೊಡನೆ ಕೂಟವನ್ನು ಮುಕ್ತಾಯಗೊಳಿಸಿದರು.

ಲುಧಿಯಾನಾದ ಬಳಿ ಖನುಕಿ ಎಂಬಲ್ಲಿ ಒಬ್ಬ ರಿಸಾಲ್ದಾರರನ್ನೂ ಒಬ್ಬ ಪೋಲೀಸನನ್ನೂ ಡಕಾಯಿತರು ಗುಂಡಿಕ್ಕಿ ಕೊಲಿಸಿದರು ಪೋಲೀಸನು ಮೃತಪಟ್ಟನು

ನಾಗಪುರದ ಒಂದು ಹೊಟೇಲಿನ ಕೆಲಸಗಾರರೊಬ್ಬನನ್ನು ಕೆಲಸದಿಂದ ತೆಗೆದಿದ್ದರು ತಾ ೧೫ನೇ ದಿನ ಅವನು ಹೊಟೇಲನ್ನು ಹೊಕ್ಕು ಯಜಮಾನನ ಯೌವನೆ ಮಗಳನ್ನೂ ಅವಳ ಚಿಕ್ಕ ತಂದೆಯನ್ನೂ ಚೂರಿಯಿಂದ ತಿವಿದನು

ಕಲ್ಕತ್ತದಲ್ಲಿ "ಇಂಗ್ಲಿಷ್ಮನ್" ಎಂಬ ಸ್ಟೀಮರಿನಲ್ಲಿ ಬೆಂಕಿಯೆದ್ದು ನಾಲ್ಕು ತಾಸುಗಳೊಳಗೆ ಹೇರಳ ನಷ್ಟವಾಯಿತು

ಬ್ರಿಟಿಷ ಸರಕಾರವು ಕೊಟ್ಟ ಕಮ್ಯೂನಲ್ ಎವಾರ್ಡ್ ಅಸಂಮಂಜಸವೆಂದು ಹಿಂದೂ ಮಹಾ ಸಭೆಯವರು ಜೊಯಿಂಟ್ ಸಿಲೆಕ್ಟ್ ಕಮಿಟಿಗೂ ಲೀಗ್ ಒಫ್ ನೇಶನ್ಸಿಗೂ ತಂತಿಕೊಟ್ಟಿರುವರು.

ಕಲ್ಕತ್ತದ ಕೆಲವು ಹಿಂದೂ ದೇವಸ್ಥಾನಗಳ ಮೂರ್ತಿಗಳ ಭಂಗಾರದ ಸಾಮಗ್ರಿಗಳು ಕಾಣೆಯಾಗುತ್ತಿವೆ ಇಷ್ಟರಲ್ಲೇ ದೇವರುಗಳ ಅನೇಕ ಸಾವಿರ ರೂಪಾಯಿಗಳ ಭಂಗಾರವು ಕಾಣೆಯಾಯಿತು

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಈ ತಿಂಗಳಿಡೀ ಆಂಧ್ರ ದೇಶದಲ್ಲಿ ತಿರುಗಾಡುವರೆಂದು ಕಾರ್ಯಕ್ರಮವು ಪ್ರಕಟವಾಗಿದೆ

ಎರಡು ಸಲ ಜೈಲಿನಿಂದ ತಲೆತಪ್ಪಿಸಿಕೊಂಡ ಲಕ್ಷ್ಮಿನಾಥಂ ಎಂಬವನು ಮೂರನೇ ಸಲವೂ ತಲೆ ತಪ್ಪಿಸಲೆತ್ನಿಸಿ ಸಿಕ್ಕಿಬಿದ್ದಿರುವನು.

ತಾ ೩೦ರಿಂದ ೨೫ನೇ ಸಪ್ಟಂಬರದಲ್ಲಿ ಬಂಗಾಳದಲ್ಲಿ ೨೯ ಡಕಾಯಿತಿಗಳು ನಡೆದುವು

ಲೋರ್ಡ್ ವಿಲ್ಲಿಂಗ್ಡನರೂ ಅವರ ಪತ್ನಿಯವರೂ ಅಸ್ಸಾಮ್ ಪ್ರಾಂತ್ಯಕ್ಕೆ ದರ್ಶನವಿತ್ತುದಕ್ಕಾಗಿ ತಾ ೨೬ನೇ ದಿನವು ಸರಕಾರಿ ರಜಾ ದಿನವಾಗಿ ನಿರ್ಣಯಿಸಲ್ಪಟ್ಟಿದೆ.

ಮದ್ರಾಸಿನ ತಂಬರಂನಲ್ಲಿ ಒಂದು ಗೂಡ್ಸ್ ರೈಲುಗಾಡಿಯು ಓಡುವ ರೈಲಿಗೆ ಢಕ್ಕೆಹೊಡೆದು ಅನೇಕರು ಘಾಯಗೊಂಡರು. ಗಾಡಿಗಳು ಕೆಡವಿಬಿದ್ದ ಮಾರ್ಗಗಳು ಹಾಳಾಗಿವೆ

ಇಷ್ಟರ ತನಕ ಪೂನೆಯಲ್ಲಿ ಮುದ್ರಿತವಾಗುತ್ತಿದ್ದ ಗಾಂಧಿಜೀಯವರ ಹರಿಜನ ಪತ್ರಿಕೆಯು ಇನ್ನು ಮದ್ರಾಸಿನಲ್ಲಿ ಮುದ್ರಿಸಲ್ಪಡುವುದು ಇಡೀ ಸಂಸ್ಥೆಯು ಬರುವ ತಿಂಗಳಿನಿಂದ ಮದ್ರಾಸಿನಲ್ಲಿ ನಿಲ್ಲುವುದು

ಪೇಶಾವರದ ಚರ್ಸದದಲ್ಲಿ ಬೆಂಕಿಯೆದ್ದು ೩೦ ದೊಡ್ಡ ದೊಡ್ಡ ಮನೆಗಳು ಭಸ್ಮವಾದುವು ಅನೇಕ ಲಕ್ಷ ರೂಪಾಯಿಗಳು ನಷ್ಟವಾದುವು.

ಬರಹಂಪುರಿನ ಸಮೀಪ ರಸ್ಸೆಲ್‌ಕೊಂಡ ಎಂಬಲ್ಲಿ ಮನೆಯ ಮಾಳಿಗೆಯು ಬಿದ್ದು ಒಂದು ಮಗುವು ಕೂಡಲೇ ಸತ್ತಿತು ಒಬ್ಬ ವಿಧವೆಯು ಬಹಳ ಘಾಯಗೊಂಡು ಆಸ್ಪತ್ರೆಪಾಲಾದಳು

ವಿಜಗಪಟ್ಟಣದಲ್ಲಿ ದೀಪಾವಳಿ ಸಂಬಂಧ ಆಕಾಶಬಾಣ ಬೊಂಬಲಾದ ಮದ್ದುಗಳನ್ನು ಚಮರ್ತಿ ಜಗನ್ನಾಥನೆಂಬವನು ತಯಾರಿಸುತ್ತಿರುವಾಗ, ಸ್ಫೋಟನವಾಗಿ ಎರಡು ಮಾಳಿಗೆಗಳ ದೊಡ್ಡ ಮನೆಯೂ ಸಮೀಪದ ಕಟ್ಟಡಗಳೂ ನಿಮಿಷಾರ್ಧದಲ್ಲಿ ಧೂಳಾಗಿ ಅನೇಕ ಫರ್ಲಾಂಗ್ ದೂರಕ್ಕೆ ಹಾರಿದುವು. ಕಟ್ಟಡಗಳಲ್ಲಿದ್ದ ೩೦ ಮಂದಿಗಳಲ್ಲಿ ೧೧ ಮಂದಿಗಳ ಕೈಕಾಲುಗಳು ಛಿದ್ರವಾಗಿವೆ. ಮರಣ ಹೊಂದಿದವರ ಲೆಕ್ಕವು ಸಿಕ್ಕಿರುವುದಿಲ್ಲ. ಶೋಧಿಸಲಾಗುತ್ತಿದೆ.

++ + +

ಮದ್ರಾಸು ಜೈಲುಗಳಲ್ಲಿ ಒಟ್ಟು ೨೦೯ ಕೈದಿಗಳಿರುವರಾಗಿ ಲೆಖ್ಖವಾಗಿದೆ

ಹೈದರಾಬಾದ್ ಸಂಸ್ಥಾನದಲ್ಲಿ ೧೫೩ ಜನರು ಪ್ಲೇಗಿನಿಂದಾಗಿ ಮೃತರಾದರು.

ಲಾಹೋರಿನಲ್ಲಿ ಶ್ರೀ ಶಾಂತಸಿಂಗ್, ಎಂ ಎಲ್ ಎ ಇವರು ಭಾಷಣ ಮಾಡುತ್ತ ಹೈಂದವ ಸುಧಾರಣೆಗಳನ್ನು ಎಲ್ಲರೂ ಧೀಂತೆ ಯುದ್ಧ ಎದುರಾಯಿಸಬೇಕೆಂದು ಹೇಳಿದರು.

ದೇವಸ್ಥಾನ ಪ್ರವೇಶ ಬಿಲ್ಲಿನ ಕುರಿತಾಗಿ ಜನರ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಮದ್ರಾಸ್ ಸರಕಾರವು ಹೈಕೋರ್ಟ್, ಕಲೆಕ್ಟರ್, ಸರಕಾರಿ ಆಫೀಸರರು ಮೊದಲಾದ ಪ್ರಮುಖರಿಗೆ ಬರೆದು ಪ್ರಚಾರ ಮಾಡುತ್ತಿದೆ

ವಾರ್ಧಾ ಆಶ್ರಮದಿಂದ ಶ್ರೀಮತಿ ನೀಲನಾಗಿಣಿ ದೇವಿಯವರು ಅಕಸ್ಮಾತ್ತಾಗಿ ಹೊರಹೊರಟು ದಿಲ್ಲಿಗೆ ತಲುಪಿರುವರು ಅವರು ಹೋದುದು ಮಹಾತ್ಮರಿಗೂ ತಿಳಿದಿದ್ದಿಲ್ಲ

ದಕ್ಷಿಣ ಕನ್ನಡ

ಮಂಗಳೂರು: ಇಲ್ಲಿಯ ಜೇಡಿಗುಡ್ಡೆ ಶುತ್ತು ವೈಕುಂಠ ಶೇಖರವರಿಗೆ, ಆವರ ಬೀಡಿಕೈಗಾರಿಕೆಯ ಬಗ್ಗೆ ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲಿ ಪ್ರದರ್ಶನ ಕಮಿಟಿಯವರು ಈ ವರ್ಷ ಸ್ಪೆಶ್ಯಲ್ ಆಗಿ ಬೆಳ್ಳಿಯ ಪದಕವನ್ನೂ, ಸರ್ಟಿಫಿಕೇಟನ್ನೂ ದಯಪಾಲಿಸಿ, ಮಂಗಳೂರಿನ ಕೈಗಾರಿಕೆಯನ್ನು ಪ್ರೋತ್ಸಾಹಿಸಿರುವರು

ಇಲ್ಲಿಯ ಪೋಲೀಸ್ ಆಫೀಸಿನಲ್ಲಿ ಕ್ಲಾರ್ಕರಾಗಿದ್ದ ಶ್ರೀ ಎಸ್ ಪಿ. ಎಸ್. ಭಟ್ಟರು ಕಳೆದ ಆದಿತ್ಯವಾರ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಶ್ರೀಯುತರು ತರುಣ ವಯಸ್ಸಿನವರಾಗಿದ್ದು ಜನಪ್ರೀತಿಗೆ ಪಾತ್ರರಾಗಿದ್ದರು ದುಃಖಿತ ಕುಟುಂಬದೊಡನೆ ನಮ್ಮ ಸಹತಾಪವಿದೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯಿರಲಿ!

ಇಲ್ಲಿಯ ಸಬ್. ಇನ್ಸ್‌ಪೆಕ್ಟರ್ ಕಳಂಬಿ ರಾಮಚಂದ್ರರಾಯರು ಅಸ್ವಸ್ಥದಲ್ಲಿದ್ದು ಮೊನ್ನೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ

ಕಳೆದ ಶನಿವಾರ ದಿನ ಗಣಪತಿ ಹೈಸ್ಕೂಲಿಗೂ ಕೆನರಾ ಹೈಸ್ಕೂಲಿಗೂ ಜೂನಿಯರ್ ಕ್ರಿಕೆಟ್ ಮೇಚ್ ನಡೆದು ಕೆನರಾ ಹೈಸ್ಕೂಲಿಗೆ ಜಯ ದೊರೆಯಿತು

ಕಲ್ಲಿಕೋಟೆಯ ಕೋಮನ್‌ವೆಲ್ತ್ ಟ್ರಸ್ಟ್ ಲಿಮಿಟೆಡ್‌ರವರಿಂದ ನಡೆಸಲ್ಪಡುತ್ತಿರುವ ಜಪ್ಪಿನ ಕೋಮನ್‌ವೆಲ್ತ್ ಹಂಚು ಕಾರ್ಖಾನೆಯಲ್ಲಿನ ಸುಮಾರು ೩೦೦ ಕೂಲಿಗಾರರು ಸಂಬಳದ ಕುರಿತಾದ ಚರ್ಚೆಯಿಂದಾಗಿ ಮುಷ್ಕರ ಹಿಡಿದಿರುವರು. ಮಣ್ಣಿನ ಅಚ್ಚು ಹೊರುವವರ ಕೂಲಿಗಳ ಸಂಬಳದ ಕುರಿತು ಮೊದಲು ವಾದವೆದ್ದಿತು ಅವರು ಕೈಕಟ್ಟಿ ಸುಮ್ಮಗಾದೊಡನೆ ಹೊರಗಿನ ಕೆಲಸ ಮಾಡುತ್ತಿದ್ದ ಪಂಚಮರನೇಕರಿಗೆ ಕೆಲಸವಿಲ್ಲದಾಯಿತು ಅವರು ಕೆಲಸಕ್ಕೆ ಬರುವುದು ಅಗತ್ಯವಿಲ್ಲವೆಂದು ನೋಟೀಸು ಹೊರಬಿತ್ತು ಇದನ್ನು ಕಂಡು ಎಲ್ಲರೂ ಕೈಕಟ್ಟಿದರು. ಇದಾದೊಡನೆ ಮೆನೇಜರರಾದ ಗನ್ ದೊರೆಯವರು ಕಾರ್ಖಾನೆಯನ್ನು ಮುಚ್ಚಿದರು ಈಗ ಎಲ್ಲಾ ಕೂಲಿಗಾರರೂ ತಮ್ಮ ಕಷ್ಟಗಳನ್ನು ಕಲೆಕ್ಟರರಿಗೆ ತಿಳುಹಿಸಿದರು.

ಈ ಸಲ ಟ್ರೈನಿಂಗ್ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್-ಪಬ್ಲಿಕ್ ಪರೀಕ್ಷೆಯು ೧೯೩೪ನೇ ಮಾರ್ಚ ತಾ. ೧೩, ೧೪, ೧೫ನೇ ದಿನಗಳಲ್ಲಿ ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುತ್ತದೆ ಹಳೇ ಸ್ಕೀಮಿನ ಪರೀಕ್ಷೆಗೆ ಈ ಸಲ ಭೂಗೋಳದಲ್ಲಿ ಪರೀಕ್ಷೆ ಇದೆ. ಹೊಸ ಸ್ಕೀಮಿನವರಿಗೆ ಕಳೆದ ವರುಷದ ಪಾಠಗಳಲ್ಲೇ ಪರೀಕ್ಷೆ ಇದೆ. ಈ ೧೯೩೪ನೇ ಮಾರ್ಚಿಯ ಪರೀಕ್ಷೆಯು ಹಳೇ ಸ್ಕೀಮಿನ ಪ್ರಕಾರ ಪರೀಕ್ಷೆಗೆ ಬರುವವರಿಗೆ ಕೊನೆಯ ಪರೀಕ್ಷೆಯಾಗಿದೆ ಅವರು ಒಂದು ಯಾ ಎರಡು ಸಬ್ಜೆಕ್ಟುಗಳಲ್ಲಿ, ಯಾ ಇಡೀ ಪರೀಕ್ಷೆಯಲ್ಲಿ ಫೈಲಾದರೆ ಮುಂದೆ ಹೊಸ ಸ್ಕೀಮಿನ ಎಲ್ಲಾ ಸಬ್ಜೆಕ್ಟುಗಳಲ್ಲಿಯೂ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಒಂದು ಯಾ ಎಲ್ಲಾ ಸಬ್ಜೆಕ್ಟುಗಳಲ್ಲಿ ಪರೀಕ್ಷೆ ಕೊಡುವವರು ೩-೦-೦ ರೂಪಾಯಿಗಳನ್ನು (ಮೂರು) ಇದೇ ಒಕ್ಟೋಬರ್ ೨೫ನೇ ತಾರೀಕಿನೊಳಗೆ ಅವರವರಿಗೆ ಸನಿಹವಿರುವ ಖಜಾನೆಗೆ ಕಟ್ಟಿ, ಖಜಾನೆ ಚಲನನ್ನೂ ಈ ಕೆಳಗಿನ ವಿವರವನ್ನೂ ಸದ್ರಿ ಶಾಲೆಯ ಹೆಡ್ಮಾಸ್ತರರಿಗೆ ಕಳುಹಿಸತಕ್ಕದ್ದು ೧. ತರಬೇತಿಯಾದ ವರುಷ. ೨ ಈ ಮೊದಲು ಪರೀಕ್ಷೆ ಕೊಟ್ಟ ವರುಷ, ಆ ವರುಷದ ರಿಜಿಸ್ಟರ್ ನಂಬ್ರಗಳು. ೩ ಈ ಸಲ ಪರೀಕ್ಷೆ ಕೊಡುವ ವಿಷಯಗಳು. ೪ ಅರ್ಜಿದಾರರ ಗ್ರೇಡು (ಹೈಯರ್ ಯಾ ಲೋವರ್). ೫ ಅವರ ವಿಳಾಸ

ಈ ವಿಷಯಗಳನ್ನು ತಿಳಿಸದಿದ್ದಲ್ಲಿ ಪರೀಕ್ಷೆ ಅರ್ಜಿಯನ್ನು ಅಂಗೀಕರಿಸಲಿಕ್ಕಿಲ್ಲವೆಂದು ಸದ್ರಿ ಶಾಲೆಯ ಹೆಡ್ಮಾಸ್ಟರರು ತಿಳಿಸುತ್ತಾರೆ

ಶುದ್ಧಿ ಸಂಸ್ಕಾರ—ಕಳೆದ ಶುಕ್ರವಾರ ಇಲ್ಲಿಯ ಆರ್ಯಸಮಾಜ ಮಂದಿರದಲ್ಲಿ ನಾಲ್ಕು ಜನರಿರುವ ಒಂದು ರೋಮನ್ ಕೆಥೊಲಿಕ್ ಕ್ರೈಸ್ತ ಕುಟುಂಬದ ಶುದ್ಧಿಸಂಸ್ಕಾರವು ಶ್ರೀಯುತ ಮೋಹನಪ್ಪ ತಿಂಗಳಾಯರ ಪೌರೋಹಿತ್ಯದಿಂದ ಜರಗಿಸಲ್ಪಟ್ಟಿತು. ಸಂಸ್ಕಾರಾಂತ್ಯದಲ್ಲಿ ಶ್ರೀ ತಿಂಗಳಾಯರು ಇವರಿಗೆ ಧರ್ಮೋಪದೇಶವನ್ನು ಮಾಡಿ ಮರಿಯ, ಮಾಡ್ತ ಪೌಲ್ ಬಪ್ತಿಸ ಎಂಬ ಕ್ರೈಸ್ತನಾಮದ ಬದಲಿಗೆ ಕಾವೇರಿ, ಕಮಲ, ರಾಧ, ಭಾಸ್ಕರ ಎಂಬ ಹಿಂದೂ ಹೆಸರನ್ನಿಟ್ಟರು ಇವರು ಪುತ್ತೂರು ತಾಲೂಕಿನ ಒಂದು ಬಂಟ್ರ ಜಾತಿಯ ಕುಟುಂಬಕ್ಕೆ ಸೇರಿದವರಾಗಿದ್ದು, ಒಂದೂವರೆ ವರ್ಷದ ಮೊದಲು ರೋಮನ್ ಕೆಥೊಲಿಕ್ ಮತವನ್ನವಲಂಬಿಸಿದ್ದರು ಇವರಿಗೆ ಕ್ರೈಸ್ತ ಮಿಶನರಿಗಳು ಪ್ರಥಮದಲ್ಲಿ ತುಂಬಾ ಉದಾರತೆಯನ್ನು ತೋರಿಸಿ ಮತಾಂತರಗೊಳಿಸಿದರು ಕ್ರಮೇಣ ಇವರಿಗೆ ಕ್ರೈಸ್ತಮತ ಮತ್ತು ಪಾದ್ರಿಗಳ ಮೇಲೆ ಅಶ್ರದ್ಧೆ ಯಾ ತಮ್ಮ ವರ್ತನದ ಮೇಲೆ ಪಶ್ಚಾತ್ತಾಪವೂ ಉಂಟಾಯಿತು! ಇವರ ಶುದ್ಧೀ ಸಂಸ್ಕಾರದ ಸಮಯ ಪುತ್ತೂರು ರಾಮದೇವಾಶ್ರಮದ ಕೆಮ್ಮಿಂಜ ಸುಬ್ಬಣ್ಣಯ್ಯನವರು ಹಾಜರಿದ್ದು ಪ್ರೋತ್ಸಾಹಿಸಿದರಲ್ಲದೆ, ಈಶ್ವರಾನಂದ ಮಹಿಳಾ ಸೇವಾಶ್ರಮದ ಪ್ರಬಂಧಕರ್ತರು ಶುದ್ಧಿಯಾದವರ ಭವಿಷ್ಯ ಜೀವನದ ಉತ್ತಮ ವ್ಯವಸ್ಥೆಯನ್ನು ಮಾಡಿದರು

ಮಂಗಳೂರು ಕೋಓಪರೇಟಿವ್ ಟೌನ್ ಬ್ಯಾಂಕಿನ ಮಹಾಸಭೆಯು ಇದೇ ಬರುವ ನವಂಬರ ತಾ ೫ನೇ ಆದಿತ್ಯವಾರ ಮಧ್ಯಾಹ್ನ ಗಂಟೆ ೩ಕ್ಕೆ ಬೇಂಕಿನ ಆಫೀಸಿನಲ್ಲಿ ಜರಗುವುದು.

ಕುಂದಾಪುರ — ತಾರೀಕು ೯ನೇ ಸೋಮವಾರ ಸಂಜೆ ೫॥ ಘಂಟೆಗೆ ಸ್ಥಳೀಯ ಹಿಂದೀ ಪ್ರೇಮಿಮಂಡಲಿಯ ಆರಂಭೋತ್ಸವವು ಇಲ್ಲಿಯ ಥಿಯೊಸಫಿಕಲ್ ಹೋಲಿನಲ್ಲಿ ಶ್ರೀಯುತ ಕೆ ವೆಂಕಪ್ಪ ಸೆಟ್ಟಿ ತಾಲೂಕುಬೋರ್ಡ್ ಪ್ರಸಿಡೆಂಟ್ ಇವರ ನೇತೃತ್ವದಲ್ಲಿ ಜರಗಿತು ಊರ ಪ್ರಮುಖರನೇಕರು ಬಂದಿದ್ದರು, ಅಲ್ಲದೆ ಮಾನ್ಯ ಡಿ ಬೋ ಪ್ರಸಿಡೆಂಟ್ ಶ್ರೀಯುತ ಎ. ಬಿ ಶೆಟ್ಟಿಯವರೂ ಕೂಡಾ ಚಿತ್ತೈಸಿದ್ದರು

ಮೂಲ್ಕಿ: — ಉದ್ಯಾವರ ಶ್ರೀ ಪುರುಷೋತ್ತಮ ವಿಠ್ಠಲ ಶ್ಯಾನುಭಾಗರು ಕಳೆದ ತಾರೀಕು ೧೨ರಲ್ಲು ತನ್ನ ತೀರ್ಥರೂಪರು ಮೃತಪಟ್ಟ ಹನ್ನೆರಡನೆಯ ದಿನ ಸುಮಾರು ೩೦೦ಕ್ಕೆ ಮಿಾರಿ ಹರಿಜನರಿಗೂ ಇತರ ಬಡಬಗ್ಗರಿಗೂ ಒಂದೊಂದು ಸೇರಿನಂತೆ ಅಕ್ಕಿಯನ್ನೂ ವಸ್ತ್ರಯನ್ನೂ ಹಂಚಿ ದರಿದ್ರನಾರಾಯಣನನ್ನು ತೃಪ್ತಿಪಡಿಸಿದರು ಇವರ ಕುಟುಂಬವನ್ನು ಪರಮಾತ್ಮನು ಆಶೀರ್ವದಿಸಲಿ

ಕಾಸರಗೋಡು — ಇಲ್ಲಿಯ ಮಿಶನ್ ಸೆಕಂಡರಿ ಶಾಲೆಯಲ್ಲಿ ಇತ್ತೀಚೆಗೆ ಕರೆಯಲ್ಪಟ್ಟ ಕರ್ನಾಟಕ ವಿದ್ಯಾರ್ಥಿ ಸಂಘದ ಒಂದು ಸಭೆಯು ತಾ. ೧೪-೧೦-೩೩ನೇ ಮಂಗಳವಾರ ಕೆ ಪಿ. ಪದ್ಮನಾಭಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಉತ್ಸಾಹವನ್ನು ತೋರ್ಪಡಿಸಿದರು.

ಸುರತ್ಕಲ್ — ಇಲ್ಲಿಯ ಗೌಡಸಾರಸ್ವತ ಯುವಕ ಸಂಘದವರಿಂದ ಧರ್ಮಶಾಲೆಯಲ್ಲಿ ವರುಷಂಪ್ರತಿ ನಡೆಯುತ್ತಿರುವ ಕಾರ್ತಿಕ ಮಾಸದ ಭಜನೆಯು ಇತ್ತೀಚೆಗೆ ಪ್ರಾರಂಭಿಸಲ್ಪಟ್ಟು ಕೆಲವು ದಿನಗಳು ಕಳೆದುವು.

ಇಲ್ಲಿ ಅಲ್ಲಲ್ಲಿ ಹುಚ್ಚುನಾಯಿಗಳ ಕಾಟವು ಅಧಿಕವಾಗತೊಡಗಿದೆ. ಅನೇಕ ಜನ-ಜಾನುವಾರುಗಳೂ, ಸಾಕುನಾಯಿಗಳೂ ಇವುಗಳ ಕಡಿತಕ್ಕೊಳಗಾಗಿರುವುದರಿಂದ "ಗ್ರಾಮಪಂಚಾಯಿತ ಸಮಿತಿ"ಯವರು ತಕ್ಕ ವ್ಯವಸ್ಥೆಗಳನ್ನೇರ್ಪಡಿಸಿ ಗ್ರಾಮಹಿತವನ್ನೆಸಗಿ ಉಪಕರಿಸಬೇಕೆಂದು ಗ್ರಾಮಸ್ಥರು ವಿನಂತಿಯೊಂದನ್ನು ಬರೆದುಕೊಂಡಿರುವರಾಗಿ ತಿಳಿದುಬರುತ್ತದೆ

ಇದೇ ಕಳೆದ ೩ ೭ನೇ ಶನಿವಾರ ರಾತ್ರಿ ಇಲ್ಲಿಯ "ಇಡ್ಯ ವಿದ್ಯಾದಾಯಿನೀ ಶಾಲಾ" ಮಂದಿರದಲ್ಲಿ 'ಕರ್ನಾಟಕ ಭೀಮ' ಬಿರುದಾಂಕಿತರಾದ "ಈಗ ಮುಂಬಾಯಿಯಲ್ಲಿರುವ ಮಂಗಳೂರ ಪ್ರೊಫೆಸರ್ ಕೆ ಜಿ ರಾವ್,—ಇವರ ಮತ್ತು ಬೆಂಗಳೂರು ಪ್ರೊಫೆಸರ್ ಕೆ ವಿ. ಐಯ್ಯರರ ಶಿಷ್ಯರಾದ ಪ್ರೊಫೆಸರ್ ದಿ ಟಿ ಸುವರ್ಣರವರ "ಶಕ್ತಿಪ್ರದರ್ಶನ"ವು ಜರಗಿತು

ಸ್ವೀಕಾರ

ನವಿಲುಗರಿ—ಕಥೆಗಳ ಸಂಗ್ರಹ—ಸಂಪಾದಕರು ಶ್ರೀ ಬೆಟಗೇರಿ ಕೃಷ್ಣಶರ್ಮ ಜಿ. ಬಿ ಜೋಶಿ ಬೆಲೆ ೦-೧೨-೦ ಮನೋಹರ ಗ್ರಂಥಮಾಲೆಯ ಎರಡನೆ ಕುಸುಮವಾಗಿ ಹೊರಬಿದ್ದಿರುತ್ತದೆ ಓದಿದರೆ ಕೆಳಗಿಡಲಿಚ್ಛೆಯಾಗದ ಕಥೆಗಳು

ಮೂಲ್ಕಿಯ ದಿ. ಯೂನಿಯನ್ ಕ್ಲಬ್ಬಿನ ೧೯೩೩ರ ವರದಿ— ನಮ್ಮ ಹಸ್ತಗತವಾಗಿದೆ

ಬಾಳಿನ ಬೆಳಕು ಬರೆದುದು— ಚಂದಿರದೇವಿ ಕವಿತಾಗುಚ್ಛವಿದು ಮಧುರವಿದೆ

ಸ್ವದೇಶೀ ಪ್ರಚಾರಕ ಮಂಗಳೂರು—ಇದರ ಎರಡನೆ ಸಂಪುಟದ ಒಂದನೆ ಸಂಚಿಕೆ ಚಿತ್ತಾಕರ್ಷಕವಾಗಿದೆ

ನೋಟೀಸು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ —

ನಮ್ಮ ಆಫೀಸಿನಲ್ಲಿ ಕಳೆದ ಐದು ವರ್ಷಗಳಿಂದ ಕ್ಲಾರ್ಕ ಕೆಲಸದಲ್ಲಿದ್ದ ಶ್ರೀ ಕಾಪು ವಾಮನ ಶೆಣೈ ಇವರು ಇದೇ ಆಗೋಸ್ತು ತಾ. 18ರಲ್ಲಿ ನಮ್ಮ ಆಫೀಸಿನ ಕೆಲಸದಲ್ಲಿ ನಿವೃತ್ತಿ ಹೊಂದಿರುವರು. ಆ ತಾರೀಕು ಮೊದಲುಗೊಂಡು ಅವರಿಗೆ ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ಶಾರದಾ ಛಾಪಖಾನೆ, ಯಾ ಸ್ವದೇಶಾಭಿಮಾನಿಯ ಯಾವ ವ್ಯವಹಾರಗಳಲ್ಲೂ ಯಾವ ಹಕ್ಕೂ ಇರುವುದಿಲ್ಲವಾದುದರಿಂದ ಮುಂದಕ್ಕೆ ಅವರು ಈ ಮೂರು ಸಂಸ್ಥೆಗಳಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ನಡೆಸಿದರೆ ನಾವು ಜವಾಬ್ದಾರರಲ್ಲ ಎಂದು ಈ ಮೂಲಕ ತಿಳಿಸಲಾಗುತ್ತದೆ.

V K KAMATH,
The Manager,
Mangalore Trading Association, Ltd., Mangalore

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ).

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಿಂಟ್ಯಾನ್, ಇಂಕ್ಸ್,
ಚ್ಯವನಪ್ರಾಶ, ಸ್ನೋ, ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director -**Venkatraya Annappa Baliga**

Jubilee Year *Jubilee Year*

The Bombay Life Assurance Co. Ltd.,

Bombay—Established 1908.

Chairman—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply *Right opportunity to those who desire independant and respectable vocation*

Applications should reach the undersigned by 25th September 1933, giving full qualifications and whether they can guarantee business

Apply to:— **KOCHIKAR BROTHERS,**
Madras Branch Secretaries.

Vishveshwarapuram Circle, *Bangalore City.* *or* Udipi, *South India.* *or* Post Box No 337, *Mount Road, Madras*

N B Intending candidates *may interview by previous appointment* with our Organizing Secretary (now in Malabar) who will be touring

(25-8-33)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1-4-0 ಚವನಪ್ರಾಶಲೇಹ ೧ ರಾತಿಗೆ ರೂ 2-8-0 ಅಭಯಾಮಲಕಿ ೧ ರಾತ್ತಲಿಗೆ ರೂ 2 ಚಂದ್ರಮಸ್ (ವಿಷೂಚಿಕೆಗೆ ರಾಮಬಾಣ) ನಾಲು ಔನ್ಸಿಗೆ ರೂ 0-5-0 ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-4-0 ಕೃಷ್ಣಾರಕ ೧ ಔನ್ಸಿಗೆ ರೂ 0-6-0 ಚಿತ್ರಕ (ಮಕ್ಕಳ ಗ್ರಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ 0-8-0. ಮಹಾ ಚಿತ್ರಕ ತೊಲೆ ೧ಕ್ಕೆ ರೂ 1-0-0 ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 0-10-0 ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-8 0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-0-0 ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ, 3-8-0

ನಮ್ಮ ಔಷಧಗಳು ದೊರೆಯುವ ಸ್ಥಳ:— ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲ್‌ಬೈಲ್ ಬೈಂದೂರು—ಕೆ ಪುತ್ತು ಕಾನುಧಾರಗ ಗಂಗೊಳ್ಳಿ—ಬಿ ಸುರೇಂದ್ರ ನಾಯ್ಕ. ಕುಂದಾಪುರ—ಕೆ ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್. ಉಡುಪಿ—ಪಿ ಜನಾರ್ದನ ನಾಯಕ್ ಎಂಡ್ ಕೊ, ಪೈ ಫಾರ್ಮಸಿ, ಆರ್ ಎಸ್. ಶೆಣೈ, ರಥಬೀದಿ ಕಾರ್ಕಳ—ವಿ. ವಿ. ಶೆಣೈ ಕಾಪು—ಡಾಕ್ಟರ್ ಬಿ ಕೆ ಬೇಕಲ ಡಿಸ್ಪೆನ್ಸರಿ ಬಟ್ಕಲ್—ವಾಮನ ನರಸಿಂಹ ನಾಯಕ್ ಬಾರ್ಕೂರು—ಬಿ. ಭಗವಂತ ಮಲ್ಯ, ಆರ್ ಪಿ ಔಷಧಾಲಯ ಬ್ರಹ್ಮಾವರ ಕೆ ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI**

Branches. Mangalore, Payyanur, Brahmavar, Kumta, Karwar, Hubli. Honnavar, Bangalore & Cannanore

Authorised Capital Rs. 1,00,000 Subscribed Capital Rs 1,00,000 Paid up Capital Rs 20,000

STATEMENT OF AFFAIRS OF THE SYNDICATE AS ON 31ST September 1933

Liabilities	Rs	Assets	Rs.
Paid up Capital	20,000—0 0.	Loans on Land mortgage	2,75,298—12—6
Reserve & other funds	20,250—0—0	Loans on Valuable Securities	2,23,792—13—5
Deposits	10,54,933—10—11.	Loans on Bills of Exchange, Hundis and Promissory Notes	4,59,985—8—4
Due to Bankers	48,335—7—6	Investment on Shares of other Companies	43 575—0—0
		On Deposits with other Bankers	1,15,000—0—0
Bills for Collection	22,631—3—7.	Bills for collection (per contra)	22,631—3—7
Sundries	1,22,328—13—5.	Sundries	1,14,721—4—9
		Cash in hand & with Bankers	33,467—8—10
Total Rs	12,88,472-3-5	Total Rs.	12,88,472-3-5.

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 7-10-1933.

P. A. Pai Bros,
Managing Agents.

ಮಂಗಳೂರಲ್ಲಿ ಕೂಲಿಗಾರರ ಮುಷ್ಕರ!

ಧೂಮ್ರಪಾನ

ಹೊಗೆ ಸೊಪ್ಪಿನ ಪ್ರಾಚೀನತೆಯನ್ನು ಕಂಡು ಹಿಡಿಯಬೇಕೆಂದು ಅನೇಕ ವಿವೇಕಿಯ ತಜ್ಞರು ಪ್ರಾರಂಭಿಸಿದರು. ಕೊನೆಗೆ ೧೫೮೬ರಲ್ಲಿ ಸರ್ ವಾಲ್ಟರ್ ರೇಲಿ ಎಂಬ ಇತಿಹಾಸ ಪ್ರಸಿದ್ಧ ವ್ಯಕ್ತಿಯು ಅದನ್ನು ಇಂಗ್ಲಾಂಡಿಗೆ ತಂದನೆಂದು ಗೊತ್ತಾಯಿತು. ಅವನಿಗಿಂತಲೂ ೨೦ ವರ್ಷಗಳ ಪೂರ್ವದಲ್ಲಿ ಸರ್ ಜೋನ್ ಹೋಕಿನ್ಸ್ ಎಂಬ ಚಾರಿತ್ರಿಕ ವ್ಯಕ್ತಿಯು ತಂದಿದ್ದನೆಂದು ಅನಂತರ ತಿಳಿಯಿತು. ಮೊದಲು ಇಂಗ್ಲಾಂಡಿನಲ್ಲಿ ವರ್ಷ ೧೩,೦೦೦,೦೦೦ ಪೌಂಡುಗಳಷ್ಟು ಹೊಗೆಸೊಪ್ಪು ವೆಚ್ಚವಾಗುತ್ತಿದ್ದಿತು. ಆದರೆ ಆಧುನಿಕ ದಿನಗಳಲ್ಲಿ ವರ್ಷಂಪ್ರತಿ ೧೨೫,೦೦೦,೦೦೦ ಪೌಂಡು ಹೊಗೆಸೊಪ್ಪು ಅಲ್ಲಿ ವ್ಯಯವಾಗುತ್ತಿದೆ. ಧೂಮ್ರಪಾನ ಸೇವನೆಯೆಂಬುದು ಇಂಗ್ಲಾಂಡಿನಲ್ಲಿ ಪ್ರಬಲವಾಗಿ ಬಿಟ್ಟಿದೆ. ಅರ್ ಸ್ಟೀಫನ್ ಜೋನ್ಸ್ ಎಂಬವರು ಈ ಹೊಗೆಸೊಪ್ಪಿನ ಮಹತ್ವವನ್ನು ವರ್ಣಿಸುತ್ತಾ, ಇಂಗ್ಲಾಂಡಿನ ಪ್ರತಿಯೊಬ್ಬ ಪ್ರಸಿದ್ಧ ಪುರುಷನೂ ಈ ಸೊಪ್ಪಿನ ಸೇವನೆಗೆ ಬಲಿಬಿದ್ದಿದ್ದನೆಂದು ತಿಳಿಸುತ್ತಾರೆ. ನಿಕೊಟಿನ್ ಎಂಬ ವಿಷವು ಇಂಗ್ಲಾಂಡಿನ ಜನರಿಗೆ ಎಷ್ಟು ಪ್ರಿಯಕರವೆಂದು ಅವರ ಹಿರಿಯರ ಅಭ್ಯಾಸ ಬಲವನ್ನು ತಿಳಿದಲ್ಲಿ ವ್ಯಕ್ತವಾಗುವುದು. ಚಾರ್ಲ್ಸ್ ಕಿಂಗ್ಸ್‌ಲಿ ಎಂಬ ಸಾಹಿತಿಯು "ಹೊಗೆಸೊಪ್ಪು ಬಡವನ ಅನ್ನವ"ಂದಿರುವನು. ಟೆನ್ನಿಸನ್ ಎಂಬ ಮಹಾಕವಿಯು ದಿನದ ೧೨ ತಾಸುಗಳಲ್ಲಿ ೯ ತಾಸುಗಳನ್ನು ಧೂಮ್ರಪಾನದಲ್ಲೇ ಕಳೆದು ಅದನ್ನು ತನ್ನ ಪ್ರಾಣವೆಂದು ಕರೆದಿರುವನು. ಕಾರ್ಲೈಲ್ ಮಹಾ ಬರಹಗಾರನು ಒಮ್ಮೆ ಹೊಗೆಸೊಪ್ಪನ್ನು ನಿಂದಿಸಿದ್ದನು. ಆದರೆ ಕೆಲವು ವರ್ಷಗಳ ನಂತರ ಅದರ ಕಾಲು ಹಿಡಿದನು. ಅದೇ ರೀತಿ ತಜ್ಞನಾದ ಡಾರ್ವಿನ್ನನೂ ಮಾಡಿದನು. ಬೈರನ್ ಕವಿಪುಂಗವನು ಹೊಗೆಸೊಪ್ಪನ್ನು ಸ್ವರ್ಗವೆಂದು ಕರೆದನು. ಲೋರ್ಡ್ ವೂಲ್ಸಿಯು ದಿನವಿಡೀ ಧೂಮ್ರಪಾನವನ್ನು ಮಾಡಿದನು. ಹೊಗೆಸೊಪ್ಪು ಇಷ್ಟು ಪ್ರಸಿದ್ಧ ವ್ಯಕ್ತಿಗಳಿಂದ ಪ್ರೀತಿಸಲ್ಪಟ್ಟಿದ್ದರೂ, ಅಂತರ್ರಾಷ್ಟ್ರೀಯವಾಗಿ ಎಲ್ಲರ ತಿರಸ್ಕಾರಕ್ಕೆ ಪಾತ್ರವಾಗಿದೆ. ಅದರಲ್ಲಿರುವ ನಿಕೊಟಿನ್ ಎಂಬ ವಿಷವು ಹೃದಯವನ್ನು ದಿನಂಪ್ರತಿ ಕೊರೆದು ತಿನ್ನುತ್ತದೆಂದು ಪರಿಶೋಧಿಸಲ್ಪಟ್ಟಿದೆ. ಹೀಗಿರುವುದರಿಂದ ಇನ್ನು ಮುಂದಕ್ಕೆ ಹೊಗೆಸೊಪ್ಪನ್ನು ಬೆಳೆಸುವಾಗ ಅದರಲ್ಲಿ ನಿಕೊಟಿನ್ ವಿಷವು ಹೆಚ್ಚಾಗಿ ಇರದಂತೆ ಕೆಲವು ಬೇರೆ ಗೊಬ್ಬರಗಳನ್ನು ಹಾಕಿ ಅದನ್ನು ಬೆಳೆಸಬಹುದೆಂದು ನಿರ್ಧಾರವಾಗಿದೆ.

೨೦೦೦ ವರ್ಷಗಳ ಹಿಂದಿನ ಮನುಷ್ಯ!

ರೋಮ್ ದೇಶದ ವೆಸೂವಿಯಸ್ ಎಂಬ ಜ್ವಾಲಾಮುಖಿಯು ಸ್ಫೋಟನವಾಗಿ ಆ ದೇಶವು ಹೇಗೆ ನಿರ್ನಾಮವಾಯಿತೆಂದು ಸರ್ವರಿಗೂ ತಿಳಿದ ವಿಷಯವಾಗಿದೆ. ಅನೇಕ ವರ್ಷಗಳಿಂದ ಶೋಧನಕಾರರು ಈ ಪಟ್ಟಣವನ್ನು ಅಗೆಯುತ್ತಿದ್ದು ೨೦೦೦ ವರ್ಷಗಳ ಹಿಂದಿನ ರೋಮ್ ದೇಶದ ಸಂಸ್ಕೃತಿಯು ಎಷ್ಟರ ನಾಗರಿಕತೆಯಿಂದು ಕಂಡುಹಿಡಿಯುತ್ತಿದ್ದಾರೆ. ಇತ್ತೀಚೆಗೆ ಅಗೆದು ಶೋಧೆ ನಡೆಸಿದ್ದಲ್ಲಿ ಸುಮಾರು ೪೦೦ ಅಡಿಗಳ ಕೆಳಗೆ, ಉಸುಬಿನ ಅಡಿಯಲ್ಲಿ ಈ ಪಟ್ಟಣವು ಇರುವುದೆಂದು ಗೊತ್ತಾಗಿದೆ. ಅನೇಕ ಕಡೆಗಳಲ್ಲಿ ಅಗೆದುದರಿಂದ ದಿವ್ಯ ದೇವಾಲಯಗಳೂ ಅಸಾಧಾರಣವಾದ ವಜ್ರ ವೈಢೂರ್ಯಗಳೂ ದೊರೆತಿವೆ. ಇತ್ತಲಾಗೆ ಒಂದು ಕಡೆ ಅಗೆದಾಗ ಒಬ್ಬ ಮನುಷ್ಯನ ಸಂಪೂರ್ಣ ಕೃತಿಯು ಕಾಣಸಿಕ್ಕಿತು. ಈ ಮನುಷ್ಯನು ೨೦೦೦ ವರ್ಷಗಳ ಹಿಂದೆ ಜ್ವಾಲಾಮುಖಿಯು ಒಡೆದು ಹರಿಯ ತೊಡಗಿದಾಗ ಹೆದರಿ ಮನೆಯ ಗೋಡೆಗೆ ಒರಗಿ ನಿಂತಿದ್ದನು—ಕಣ್ಣಿಗೆ ಕೋಲನ್ನು ಹಿಡಿದಿದ್ದನು. ಹಾಗೆ ನಿಂತಾಗ ಅವನು ಜ್ವಾಲಾಮುಖಿಯಿಂದಾಗಿ ಮೃತನಾದನು. ೨೦೦೦ ವರ್ಷಗಳಿಂದಲೂ ಅವನು ಅದೇ ಗೋಡೆಗೆ ಒರಗಿ, ಹಾಗೆಯೇ ನಿಂತಿದ್ದನು. ಅಗೆದಾಗ ಇವನು ಹೀಗೆ ನಿಂತುದು ಕಂಡು ಬಂತು.

ಮಂತ್ರಗಾರ ಸ್ಟೇಶನ್ ಮಾಸ್ಟರ್.

ಬೊಳಾರಿದ್ದ ಕಾಲಯನಲ್ಲಿ ಎಂ ಎಂಡ್ ಎಸ್ ಎಂ ರೈಲ್ವೆ ಸ್ಟೇಶನ್ ಮಾಸ್ಟರರಾದ ಶ್ರೀ ಪಮುಲ್ಲೆ ನರಸಯ್ಯ ಎಂಬವರೊಬ್ಬರಿದ್ದಾರೆ. ಇವರು ಹಾವು ಕಡಿದವರನ್ನು ತನ್ನ ಮಂತ್ರ ಶಕ್ತಿಯಿಂದಲೇ ಗುಣಪಡಿಸುತ್ತಾರೆ. ಯಾರಿಗಾದರೂ, ಎಷ್ಟು ದೂರದವರೇ ಆಗಲಿ, ಹಾವು ಕಡಿದೊಡನೆ ಇವರಿಗೆ ತಿಳಿಸಿದರೆ ಸರಿ, ಇವರು ತಂತಿಯ ಮೂಲಕವಾಗಿಯಾಗಲಿ, ಟೆಲಿಫೋನ್ ಮೂಲಕವಾಗಿಯಾಗಲಿ ಮಂತ್ರಗಳನ್ನು ಕಳುಹಿಸುವರು. ಈ ಮಂತ್ರಗಳನ್ನು ಕೇಳಿದೊಡನೆ ಕಡಿಯಲ್ಪಟ್ಟವನು ಸುಖಗೊಳ್ಳುವನು. ಇವರ ವಿಚಿತ್ರ ಶಕ್ತಿಯು ಸಾವಿರಾರು ಮೈಲುಗಳ ದೂರದಿಂದಲೂ ರೋಗಿಗಳನ್ನು ಕಾಯುತ್ತಿದೆ.

ಸಮುದ್ರದಡಿಯ ಪ್ರಪಂಚ.

ಸಮುದ್ರದಡಿಯಲ್ಲಿ ಸಣ್ಣ ದೊಡ್ಡ ಮೀನುಗಳು ಮಾತ್ರ ಇವೆಯೆಂದು ಯಾರೂ ತಿಳಿಯಬಾರದು. ಭೂಮಿಯ ಮೇಲೆ ಯಾವ್ಯಾವ ಜಾತಿಯ ಪ್ರಾಣಿಗಳಿವೆಯೋ ಅಂಥದೇ ಜಾತಿಯ ಪ್ರಾಣಿಗಳು ಸಮುದ್ರದಡಿಯಲ್ಲೂ ಇವೆ. ಸಮುದ್ರದಲ್ಲಿ ಸಿಂಹ, ಹುಲಿ, ಕರಡಿ, ಹಂದಿ, ಆನೆ, ಕುದುರೆ, ಹಾವು ಮೊದಲಾದ ಎಲ್ಲಾ ಪ್ರಾಣಿಗಳೂ ಇವೆ. ಭೂಮಿಯ ಮೇಲಿನ ಪ್ರಾಣಿಗಳಂತೆಯೇ ಅವುಗಳಿಲ್ಲವಾದರೂ ಅವುಗಳು ಜಿಪ್ಪನ ಮಟ್ಟಿಗೆ ಗುಣ ಆಕಾರಗಳಲ್ಲಿ ಅವುಗಳಂತೆಯೇ ಇವೆ. ಡಚ್ ಈಸ್ಟ್ ಇಂಡೀಸ್‌ನಲ್ಲಿ ವಾರ್ಡ್‌ಫಿಂಗ್ ಎಂಬವರು 'ಸಮರಂಗ' ಎಂಬ ಭಯಂಕರ ಚಲಚಿತ್ರವೊಂದನ್ನು ತಯಾರಿಸಿರುತ್ತಾರೆ. ಅದರಲ್ಲಿ ಸಮುದ್ರದಡಿಯ ವಿಚಿತ್ರ ಪ್ರಪಂಚದ ಛಾಯಾಚಿತ್ರವು ಪ್ರದರ್ಶಿಸಲ್ಪಟ್ಟಿದೆ. ಸಾವಿರಾರು ಅಡಿಗಳ ಕೆಳಗೆ, ಸಮುದ್ರಕ್ಕೆ, ಒಂದು ಗಾಜಿನ ಕೋಣೆಯೊಳಗೆ ಕುಳಿತು ಇಳಿದು ಅದರೊಳಗಿನಿಂದ ಹೊರಗಿನ ಚಿತ್ರವನ್ನು ತೆಗೆದಿರುತ್ತಾರೆ. ಈ ಗಾಜಿನ ಕೋಣೆಯೊಳಗಿನ ಮನುಷ್ಯನನ್ನು ತಿನ್ನುವುದಕ್ಕಾಗಿ ಓಡಿ ಬರುವ ಅನೇಕ ತರದ ಭಯಂಕರ ಜಲಚರಗಳನ್ನು ಕಂಡಲ್ಲಿ ಮೈ ಜುಮ್ಮೆನಿಸುವುದು. ೪೦ ಅಡಿಗಳ ಉದ್ದದ ಹೆಬ್ಬಾವುಗಳು ಗಾಜಿನ ಕೋಣೆಗೆ ಹೊಡೆಯುವುವು. ಒಂದು ಪ್ರಾಣಿಯನ್ನು ಇನ್ನೊಂದು ಪ್ರಾಣಿಯು ಗುಳುಮ್ಮನೆ ನುಂಗಿಬಿಡುವುದು. ತಾನು ಮುಂದು ತಾನು ಮುಂದೆಂದು ಅವುಗಳು ಹೊಡೆದಾಡಿಕೊಳ್ಳುವುವು. ಸಮುದ್ರದಡಿಯಲ್ಲಿ Octopus ಎಂಬ ಭಯಂಕರ ಪ್ರಾಣಿಯೊಂದಿರುವುದು. ಇದು ಎಷ್ಟು ದೊಡ್ಡ ಮೀನನ್ನೂ ಹೊಡೆದು ಕೆಡವಿ ವಿಷಬಿಕ್ಕಿ ಕೊಂದು ನೆತ್ತರು ಕುಡಿಯುವುದು. ಇದರ ಭೀಕರಾಕೃತಿಯು ಸ್ಮೃತಿಯನ್ನೇ ತಪ್ಪಿಸುವಂತಿರುವುದು.

ಈಜಾಡುವ ಮಗು.

ಟೋಕೋಲೇಕ್ ಎಂಬಲ್ಲಿ ತಾಯಿಯ ಬಳಿಯಲ್ಲಿದ್ದ ಒಂದು ವರ್ಷದ ಒಂದು ಮಗುವು ಸಮೀಪದ ಸರೋವರಕ್ಕೆ ಬಿದ್ದುಬಿಟ್ಟಿತು. ಎಲ್ಲರೂ ಬೊಬ್ಬಿಟ್ಟು ಮಗುವನ್ನು ರಕ್ಷಿಸಲು ಗಡಿಬಿಡಿಸಿದರು. ಆದರೆ ಎಲ್ಲರೂ ನೋಡುವಂತೆಯೇ ಆ ಮಗುವು ಒಮ್ಮೆ ಮುಳುಗಿದರೂ ಮರುಕ್ಷಣದಲ್ಲೇ ನೀರ ಮೇಲೆ ಈಜಾಡಿ ಇಪ್ಪತ್ತು ಅಡಿ ಅಗಲದ ಆ ಸರೋವರದ ಕಿನಾರೆಯನ್ನು ಸೇರಿತು. ಅಟೆ ದಡದಲ್ಲಿದ್ದವರು ಮಗುವನ್ನು ಕೂಡಲೇ ಮೇಲೆತ್ತಿದರು. ಆ ಮಗುವಿಗೆ ಇಷ್ಟರ ತನಕ ಯಾರೂ ಈಜು ಕಲಿಸಿರುವುದಿಲ್ಲ. ನೀರನ್ನು ಕಂಡರೆ ಅದು ಭಯಭ್ರಾಂತವಾಗುತ್ತದೆ. ಹಾಗಿರುವಾಗ ಅದಕ್ಕೆ ಈಜಾಡಲು ಅಂತರ್ಜ್ಞಾನವನ್ನು ಯಾರು ಕೊಟ್ಟರು ಎಂಬುದೀಗ ಆ ಹಳ್ಳಿಗರ ಯೋಚನೆ. ಕೆಲವರು ಆ ಮಗುವಿಗೆ ಅದ್ಭುತ ಶಕ್ತಿಯೇನೋ ಇರುವುದೆಂದು ಅದನ್ನು ಆರಾಧಿಸಲಾರಂಭಿಸಿರುವರು.

ಭಯಂಕರ ನಾಟಕ.

ಚೀನಾದ ಪೈಕಿನ್ ನಾಟಕ ಮಂದಿರದಲ್ಲಿ ನಾಟಕವು ನಡೆಯುತ್ತಲಿತ್ತು. ಚೀನದ ಪ್ರಖ್ಯಾತ ನಟನಾದ ಲೂ-ಶೂ-ಕೇ ಎಂಬವನು ಸ್ತ್ರೀ ವೇಷವನ್ನು ಧರಿಸಿ ಪ್ರಣಯಿಸೊಬ್ಬನೊಡನೆ ಸಂಭಾಷಿಸುತ್ತಿದ್ದನು. ಅಷ್ಟರಲ್ಲಿ ಒಬ್ಬ ಮನುಷ್ಯನು "ಮುಯ್ಯಿ, ಮುಯ್ಯಿ" ಎಂದು ಆರ್ಭಟಿಸುತ್ತಾ ಸ್ಟೇಜಿಗೆ ಹಾರಿ ಸ್ತ್ರೀವೇಷಧಾರಿಯನ್ನೂ, ಅವನೊಡನೆ ಮಾತಾಡುತ್ತಿದ್ದ ಪುರುಷನನ್ನೂ ಕತ್ತಿಯಿಂದ ತಿವಿದು, ಆ ಮೇಲೆ ತನ್ನ ಕತ್ತನ್ನು ಅದೇ ಕತ್ತಿಯಿಂದ ತಿವಿದು ಬಿದ್ದುಕೊಂಡನು. ಜನರೆಲ್ಲರೂ ಬೊಬ್ಬಿಟ್ಟರು! ಹಾಹಾಕಾರವೆದ್ದು ಅನೇಕರು ಮೂರ್ಛೆಗೊಂಡರು. ಬಿದ್ದ ಇಬ್ಬರು ವಿಷಮಾವಸ್ಥೆಯಲ್ಲಿರುವರು. ತನ್ನನ್ನು ನಾಟಕ ಸಂಘದಿಂದ ತೆಗೆದುದಕ್ಕಾಗಿ ಕೊಲೆಗಾರನು ದ್ವೇಷವನ್ನು ಕಾರಿದನೆಂದು ಪ್ರಕಟವಾಗಿದೆ.

ಮಹಾರಾಜರು.

ಮಹಾರಾಜರೆಂದರೆ ಮಂದು ವೆಚ್ಚದ ನಿಧಿಗಳೆಂದು ಹೆಚ್ಚಿನವರ ಅಭಿಪ್ರಾಯ. ಇದಕ್ಕೆ ಕಾರಣಗಳೂ ಇವೆ. ಅಲ್ವಾರ್ ಮಹಾರಾಜರು ಬಡವರಿಗೆ ಒಂದು ಪೈಯನ್ನೂ ಕೊಡುತ್ತಿದ್ದಿಲ್ಲ. ಸ್ವಂತ ವೆಚ್ಚಕ್ಕಾಗಿ ದಿನಕ್ಕೆ ೫೦೦ ರೂಪಾಯಿಗಳನ್ನಾದರೂ ವೆಚ್ಚ ಮಾಡುತ್ತಿದ್ದರು. ಮೊನ್ನೆ ನೇಪಾಳದ ರಾಜ ಕುಟುಂಬದಲ್ಲಿ ಒಬ್ಬರಿಗೆ ಅಸ್ವಸ್ಥವಾಯಿತು. ರೋಗವು ಮಹತ್ವದ್ದಲ್ಲವಾದರೂ, ಅಂಥವರಿಗೆ ತಂತಿಯೂ ಮಹತ್ವವಾಗಿಯೇ ಹೋಯಿತು. ಅಲ್ಲಿಂದ ಡಾಕ್ಟರ್ ಎಚ್. ಎಸ್. ಸೌಟರ್ ಮತ್ತು ಡಾ. ಜೆ. ಎಚ್. ವಲ್ಲಿಸ್ ಎಂಬವರು ವಿಮಾನದಲ್ಲಿ ೯೨೦೦ ಮೈಲು ದಾಟಿ ಇಂಡಿಯಕ್ಕೆ ಬಂದರು. ಅವರ ಪ್ರಯಾಣ ಒಂದರ ವೆಚ್ಚವೆಷ್ಟು? ರೂ ೩೦,೦೦೦!!! ಹಿಂದೂಸ್ಥಾನದಲ್ಲಿ ಮದ್ದಿಲ್ಲವೆಂಬುದು ಸುಳ್ಳಲ್ಲವೇ?

ಬೆರೆತು ಹೋದುವು!

ಪೋರ್ಚುಗಲ್ ನಗರದಲ್ಲಿ ಎರಡು ವಾರಗಳ ಹಿಂದೆ ಒಂದು ಮನೆಯಲ್ಲಿ ಒಬ್ಬಳು ತಾಯಿಯೂ ಅವಳ ಮಗಳೂ ಏಕ ಕಾಲದಲ್ಲಿ ಪ್ರಸವಿಸಿದರು. ಇಬ್ಬರ ಮಕ್ಕಳೂ ಗಂಡು. ಒಂದು ದಿನ ದಾದಿಯು ಆ ಮಕ್ಕಳಿಗೆ ಸ್ನಾನ ಮಾಡಿಸುತ್ತಿದ್ದಾಗ ಆಕಸ್ಮಿಕವಾಗಿ ಎರಡು ಶಿಶುಗಳನ್ನೂ ಬೆರೆಸಿಬಿಟ್ಟದ್ದರಿಂದ ಈಗ ಯಾವುದು ತಾಯಿಯ ಮಗು, ಯಾವುದು ಮಗಳ ಮಗು ಎಂದು ತಿಳಿಯಲು ಕಷ್ಟವಾಗಿರುತ್ತದೆ. ಎರಡು ಶಿಶುಗಳೂ ಒಂದೇ ರೂಪದಿಂದಿರುವುವು. ವೈದ್ಯರ ಸಹಾಯದಿಂದ ಯತ್ನವು ನಡೆಯುತ್ತಲಿದೆ.

ಆಯುಷ್ಯಬಲ.

ಮಧುರೆಯ ಪಲಂಡೂರ್ ಮತ್ತು ಬೆಕ್ಕನೂರಿನಲ್ಲಿ ಮಧುರಾ ಬೋಡಿ ನಾಯಕ ಕನೂರ್ ಸೆಕ್ಷನಿನ ನಂಬ್ರ ೩೧೬ನೇ ರೈಲು ಓಡುತ್ತಿತ್ತು. ಆಗ ತನ್ನ ಅಜ್ಜಿಯೊಡನೆ ರೈಲಿನ ಮೂರನೇ ಕ್ಲಾಸಿನಲ್ಲಿದ್ದ ಐದು ವರ್ಷದ ಮಗುವೊಂದು ಅಕಸ್ಮಾತ್ ಜಾರಿ ಕೆಳಗೆ ಬಿದ್ದಿತು. ಕೂಡಲೇ ಜನರ ಕೂಗಿಬೆಯಿದ್ದಿತು. ಚೈನು ಎಳೆದು ರೈಲು ನಿಲ್ಲಿಸಲ್ಪಟ್ಟಿತು. ಅರುವತ್ತು ಗಜ ದೂರದಲ್ಲಿ ಮಗುವು ಕೂಗುತ್ತಿದ್ದಿತು. ಮಗುವು ಸತ್ತಿರುವುದೆಂದು ಎಲ್ಲರೂ ತಿಳಿದಿದ್ದರು. ಆದರೆ ಹತ್ತಿರ ಹೋಗಿ ನೋಡಿದಾಗ ಮಗುವು ಎದ್ದು ನಿಂತು ಅಳುತ್ತದೆ. ಅದರ ಕೈಗೂ ಮೂಗಿಗೂ ಅಲ್ಪಸ್ವಲ್ಪ ಘಾಯವಾದುದಲ್ಲದೆ ಬೇರೇನೂ ಅಪಾಯವು ಅದಕ್ಕಾಗಿರುವುದಿಲ್ಲ. ಆಯುಷ್ಯಬಲವಿದೆಂದು ಜನರೆಲ್ಲರ ಮಾತು.

+ + + +

Notice.

In the Court of the District Munsiff of Mangalore

S C No 624/1933

Between —

Katil Narasimha Pai—Plantiff

and

Ullal Venktraya Kini son of Ullal Ganapathi Kini, residing at Mangalore Town—Defendant

Notice is hereby given that the above suit filed by the Plaintiff for recovery of Rs 176-7-6 and future interest and costs of suit is posted to 26-10-1933 at 11 A M for hearing before the above Court The defendant may appear in person or by Pleader and contest the suit on the said date, failing which the same will be heard and decided in his absence

Mangalore
15-10-'33

B Vaikunta Baliga,
Vakil for Plaintiff

+ + + +



ಗುಣ ಹೊಂದಲು ಒಂದು ಡೋಜು ಸಾಕು

ಇದು ಏನೂ ದೋಷಕರವಲ್ಲ. ಎಲ್ಲಾ ವಯಸ್ಸಿನವರಿಗೂ ಮಲೇರಿಯಾ, ಇನ್‌ಫ್ಲುಯೆಂಜಾ ಆಗ್ಯು, ಇತ್ಯಾದಿಗಳ ಪರಿಹಾರಾರ್ಥವಾಗಿ ಕೊಡಬಹುದು. ಕೆಳಗೆ ಕೊಟ್ಟ ಶಿಫಾರಸಿನಿಂದ ಈ ಮದ್ದು ನಲ್ವತ್ತು ವರ್ಷಗಳಿಂದ ಎಷ್ಟು ಪ್ರಸಿದ್ಧವಾಗಿದೆಯೆಂಬುದನ್ನು ತೋರಿಸುವುದಕ್ಕೆ ಮುದ್ರಿಸಲಾಗಿದೆ. ಈ ಸ್ಕ್ವಿಬ್ಸ್ ಸ್ಪೆಸಿಫಿಕನ್ನು ಜ್ವರಪೀಡಿತರಾದ ಮಿಲಿಯಾವಧಿ ಜನರು ಕುಡಿದು ಗುಣ ಹೊಂದಿರುತ್ತಾರೆ.

"ಎರಡು ವರ್ಷಗಳಿಂದ ನಮ್ಮ ಮಿಲ್ಲಿನಲ್ಲಿ ಈ ಔಷಧಿಯನ್ನುಪಯೋಗಿಸುತ್ತೇವೆ. ಒಂದು ಡೋಜಿನಲ್ಲಿ ಜ್ವರ ನಿಂತಿದೆ. ಎಲ್ಲಾ ಜ್ವರಗಳಿಗೂ ಇದು ಗುಣಕಾರಿ ಅದಕ್ಕೆ ಸಂದೇಹವಿಲ್ಲ" ಜೆ. ಎಚ್. ಟೂತ್, ಮೆನೇಜರ್—ಹತಿಸಿಂಗ್ ಮಿಲ್ ಅಹ್ಮದಾಬಾದ್

'ಸ್ಕ್ವಿಬ್ಬರ ಆಗ್ ಸ್ಪೆಸಿಫಿಕ್' ಆಶ್ಚರ್ಯವನ್ನೇ ಉಂಟುಮಾಡುತ್ತಿದೆ. ಅದನ್ನ ಉಪಯೋಗಿಸಿದವರು ಭರವಸೆ ಕೊಡುತ್ತಾರೆ.

ಜಿ. ಜೆ ಫೇಸಿ, ಲೋಕೊ ಡಿಪೊ, ಎ ಎಂಡ್ ಬಿ. ರೈಲ್ವೆ ಅಸ್ಸಾಮ್.

ಮದನ್ ಸನ್ಸ್ ಎಂಡ್ ಕೋ, ಬೊಂಬಾಯಿ 2

Madon Sons & Co, Bombay 2.

[illegible] ಶ್ರೀಮುಖ ಸಂವತ್ಸರದ [illegible] ೭ ಶುಕ್ರವಾರದ ವರೆಗಿನ ಪಂಚಾಂಗ

([illegible])

							ಸೂರ್ಯ.	
[illegible]	[illegible]	[illegible]	[illegible]	[illegible]	[illegible]	[illegible]	[illegible]	ಅಸ್ತ
21	[illegible]	[illegible]	[illegible]	[illegible]	[illegible]	[illegible]	6.23	6. 9
22	ರವಿ	[illegible]	[illegible]	ಅನುರಾಧಾ	[illegible]	[illegible]	6.23	6. 9
23	ಸೋಮ	[illegible]	[illegible]	ಜ್ಯೇಷ್ಠಾ	[illegible]	[illegible]	6.24	6. 8
24	[illegible]	[illegible]	[illegible]	ಮೂಲಾ	[illegible]	[illegible]	6.21	6. 8
25	ಬುಧ	[illegible]	[illegible]	ಪೂ. ಷಾ.	[illegible]	[illegible]	6.24	6. 7
26	ಗುರು	[illegible]	[illegible]	ಶ್ರವಣಾ	[illegible]	೧೦	6.24	6. 6
27	ಶುಕ್ರ	[illegible]	೧೮	ಧನಿಷ್ಠಾ	[illegible]	೧೧	6.24	6. 6

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದುದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
13	83—9	73—3	0—09	—
14	82—9	73—9	1—45	—
15	82—4	73—0	0—13	—
16	84—1	73—9	0—05	—
17	82—4	74—5	1—24	—
18	82—7	71—9	0—04	—
19	84—7	74—9	0—86	157-70

ಮಂಗಳೂರಿನ ಪೇಟೆ ಧಾರಣೆ.

ಜೀನಸು.	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	4—2	4—12
ಮುಸ್ಕತಿ ...	5—4	5—12
ಗುಡ್ಡು ...	4—4	5—0
ಸುಗ್ಗಿ ...	4—4	4—14
ಊರ ಅವ್ವಲ್ ಬೆಳ್ತಿಗೆ ...	4—10	5—4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	5—12	6—8
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	4—0	4—4
ಗೋದಿ ಗೋಣಿ ೧ಕ್ಕೆ ...	11—8	12—8
ತೊಗರಿ ಗೋಣಿ ೧ಕ್ಕೆ ...	9—8	12—0
ಹುರುಳಿ ಗೋಣಿ ೧ಕ್ಕೆ ...	5—12	5—10
ಕಡಲೆ ಗೋಣಿ ೧ಕ್ಕೆ ...	10—8	12—8
ತೊಗರಿಬೇಳೆ ಗೋಣಿ ೧ಕ್ಕೆ ...	10—8	20—0
ಉದ್ದು ಗೋಣಿ ೧ಕ್ಕೆ ...	8—8	9—0
ಹೆಸರು ಗೋಣಿ ೧ಕ್ಕೆ ...	8—0	9—0
ಊರುಬೆಲ್ಲ ಖಂಡಿ ೧ಕ್ಕೆ ...	31—8	40—0
ಉಪ್ಪು ಗೋಣಿ ೧ಕ್ಕೆ ...	5—12	6—0
ಕೊಬ್ರಿ ಖಂಡಿ ೧ಕ್ಕೆ ...	52—8	65—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	17—0	18—0
ಎಳ್ಳಿಂಡಿ ಖಂಡಿ ೧ಕ್ಕೆ ...	20—0	21—4
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	3—7	4—6
ಎಳ್ಳೆಣ್ಣೆ ಮುಡಿ ೧ಕ್ಕೆ ...	5—0	6—0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7—4	8—12
ಮೋರಿಸ ಸಕ್ಕರೆ ಮುಡಿ ೧ಕ್ಕೆ ...	3—15	4—0
ಹೊಸ ಮೆಣಸು ...	7—8	—
ಸಾಸಿವೆ ಮುಡಿ ೧ಕ್ಕೆ ...	5—0	5—4
ಕಾಳುಮೆಣಸು ಖಂಡಿ ೧ಕ್ಕೆ ...	140—0	160—0
ಮೆಂತ್ಯೆ ಮುಡಿ ೧ಕ್ಕೆ ...	19—0	22—8
ಗೇರುಬೀಜ ಮುಡಿ ೧ಕ್ಕೆ ...	3—0	3—2
ಅಡಿಕೆ ಖಂಡಿ ೧ಕ್ಕೆ ...	35—8	40—5
ಕಾಂಡ್ಲ ಕಟ್ಟಿಗೆ ಮುಡಿ ೧ಕ್ಕೆ ...	10—0	10—8
ಕಾಂಡ್ಲ ಕಾಷ್ಠಗಳು ಮುಡಿ ೧ಕ್ಕೆ ...	13—8	14—8
[illegible] ೧ಕ್ಕೆ ...	14—12	15—0
[illegible] ಮುಡಿ ೧ಕ್ಕೆ ...	9—0	9—8
[illegible] ೧ಕ್ಕೆ ...	20—0	20—8
ಹುಣಸೆ ಹುಳಿ ಖಂಡಿ ೧ಕ್ಕೆ ...	35—0	45—0
[illegible] ಕಾಫಿ ಖಂಡಿ ೧ಕ್ಕೆ ...	200—0	250—0
[illegible] ಕಾಫಿ ಖಂಡಿ ೧ಕ್ಕೆ ...	260—0	270—0
[illegible] ...	130—0	140—0
[illegible] ...	120—0	130—0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ಸಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಯಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ.

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ.

(ವಾಚಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು (ಸಂ. ಸ್ವ)

ಅಯ್ಯಾ,

ಸ್ವದೇಶಾಭಿಮಾನಿಯ ತಾ ೩—೨—೩೩ನೇ ಸಂಚಿಕೆಯಲ್ಲಿ ೧೯೩೧ನೇ ಡಿಸೆಂಬರದಲ್ಲಿ ಕೋಟೆದಲ್ಲಿ (ನನ್ನ ತಿಳುವಳಿಕೆ ಮಟ್ಟಿಗೆ) ಕಡೇ ಸಲ ಜರಗಿದ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಕಾರ್ಯಕಲಾಪಗಳ ಕುರಿತಾಗಿ ಕೆಲವು ಸಂಗತಿಗಳನ್ನು ತಿಳಿಯಬೇಕೆಂಬ ಕಾಂಕ್ಷೆಯಿಂದ ನಾನು ಬರೆದಿರುವ ಒಂದು ಪತ್ರವು ಪ್ರಕಟವಾದದ್ದು ವಾಚಕರಲ್ಲನೇಕರಿಗೆ ನೆನಪಿರಬಹುದು. ಸದರಿ ಪರಿಷತ್ತಿನಲ್ಲಿ ಕೆಲವು ಸುಧಾರಕರು ಸಮಾಜ ಸುಧಾರಣೆಯ ಪ್ರಶ್ನೆಗಳನ್ನು ತರಲು ಯತ್ನಿಸಿದ ದೆಸೆಯಿಂದ ಆ ಕುರಿತು ಸಮಾಜದವರ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಒಂದು ಕಮಿಟಿ ನೇಮಕ ಹೊಂದಿದ್ದೂ, ಕಮಿಟಿಯವರು ಒಂದು [illegible]ಪತ್ರ ತನಕ ಸುಮ್ಮನಿದ್ದು ಅನಂತರ ಕಮಿಟಿಯ ಮೆಂಬರರಲ್ಲೊಬ್ಬರು ೧೫ ದಿವಸಗಳೊಳಗೆ ಇಷ್ಟವಿದ್ದವರಿಂದ ಪತ್ರವ್ಯವಹಾರಗಳ ಮೂಲಕ ಅಭಿಪ್ರಾಯಪಡೆಕೊಳ್ಳಲಾಗುವುದೆಂದು ಪತ್ರಿಕಾ ನೋಟೀಸು ಕೊಟ್ಟದ್ದೂ ತಿಳಿದುಬಂದ ಸಂಗತಿಗಳಾಗಿವೆ. ತದನಂತರದ ಕಾರ್ಯಕಲಾಪಗಳನ್ನು ತಿಳಿಯುವ ಬಗ್ಗೆಗಿಯೇ ಮೇಲ್ಕಂಡ ನನ್ನ ಪತ್ರವನ್ನು ಬರೆದಿದ್ದೆನು. ಆದರೆ ಈ ತನಕ ಯಾವ ಪತ್ರಿಕೆಯಲ್ಲಿಯೂ ನನ್ನ ಸವಾಲುಗಳಿಗೆ ಉತ್ತರವಾಗಿ ಯಾವ ಲೇಖನವೂ ಪ್ರಕಟವಾದಂತೆ ಕಂಡುಬರುವುದಿಲ್ಲ. ದ್ರಾವಿಡ ಬ್ರಾಹ್ಮಣ ಪರಿಷತ್ತೆಂಬುದು ನಿರ್ನಾಮವಾಯಿತೆಂದೇ ಭಾವಿಸಬೇಕಾಗುತ್ತದೆ.

ಪರಿಷತ್ತು ನಿಂತುಹೋದರೂ ಸುಧಾರಣೆಯನ್ನು ನಿಲ್ಲಿಸಲು ಸಾಧ್ಯವಿಲ್ಲ. ಸಮಾಜಕ್ಕೆ ಸುಧಾರಣೆ ಆಗತಕ್ಕದ್ದೋ ಎಂಬ ಪ್ರಶ್ನೆ ಇನ್ನು ಉಳಿದಿಲ್ಲ. ಸುಧಾರಣೆಯ ಸಾಧ್ಯಾಸಾಧ್ಯತೆಗಳನ್ನು ಆಲೋಚಿಸಿ ಪ್ರವರ್ತಿಸುವ ಕಾಲವು ಬಂದೊದಗಿರುತ್ತದೆ. ಆದ್ದರಿಂದ ಸಾಧ್ಯವಿರುವ ಕೆಲವು ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರುವಂತೆ ಮಾಡಲು ಕೆಲವು ಮಂದಿ ಸುಧಾರಕರು ಬದ್ಧಕಂಕಣರಾಗಿ ಸತ್ಯಾಗ್ರಹಿಗಳಾದ ಆದರ್ಶ ಸುಧಾರಕರಾಗಿ ಮುಂದೆ ಬರಬೇಕಾಗಿದೆ. ಪ್ರಕೃತಕ್ಕೆ ಸಾಧ್ಯವೆಂದು ನಾನು ಎಣಿಸುವ ಕೆಲವು ನಿರ್ಣಯಗಳನ್ನು ವಾಚಕರ ಮುಂದಿಡುವೆನು.

(೧) ಸಹಪಂಕ್ತಿ ಭೋಜನಕ್ಕೆ ಅರ್ಹರಾದ ದ್ರಾವಿಡ ಬ್ರಾಹ್ಮಣ ವರ್ಗದ ಬೇರೆ ಬೇರೆ ಒಳಜಾತಿಯವರು ತಮ್ಮೊಳಗೆ ಅಂತರ್ಜಾತೀಯ ವಿವಾಹ ಆಗುವಂತೆ ಪ್ರೋತ್ಸಾಹಿಸುವುದು.

(೨) ಶಾರದಾ ಮಸೂದೆಯನ್ನು ಪರಿಪಾಲಿಸುವುದು.

(೩) ವಿಧವಾ ವಿವಾಹವನ್ನು ಆಚರಣೆಗೆ ತರುವುದು.

(೪) ಅನಿವಾರ್ಯ ಸಂದರ್ಭಗಳಲ್ಲಿ ವಿವಾಹವಿಚ್ಛೇದವನ್ನು ಮಾಡಿಕೊಳ್ಳಬಹುದೆಂಬ ಕಾನೂನನ್ನು ಸರಕಾರದವರು ಅಂಗೀಕರಿಸುವಂತೆ ಚಳವಳ ಹೂಡುವುದು.

ಈ ಮೇಲ್ಕಂಡ ನಿರ್ಣಯಗಳು ಫಲಕಾರಿಯಾಗುವಂತೆ ನಿರ್ಭಯವಾಗಿ ಸಹಕರಿಸಲು ಸಾಧ್ಯವಿರುವ ಸುಧಾರಕರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿ ವಿನಂತಿ.

ಇತರ ಸ್ಥಳೀಯ ಪತ್ರಿಕೆಗಳೂ ನನ್ನ ಈ ಲೇಖನವನ್ನು ಪ್ರಕಟಿಸಿ ಸಹಕರಿಸಬೇಕಾಗಿ ವಿಜ್ಞಾಪಿಸಿಕೊಳ್ಳುವೆನು.

೪—೧೦—೧೯೩೩ 'ಸುಧಾರಕ'

C/o ಪೋಸ್ಟ್ ಮಾಸ್ಟರ್, ಬೇಕಲ.

+ ++ +

'ದೀಪಾವಳಿ ಹಬ್ಬ'

ದೀಪಾವಳಿ ಹಬ್ಬದ ದಿನವು ಆರ್ಯ ವೀರರ ಶ್ರೇಷ್ಠ ಕಾರ್ಯದ [illegible]ರಕ ದಿನವಾಗಿದೆ. ಆದರ್ಶ ಪುರುಷೋತ್ತಮನಾದ ಶ್ರೀ ರಾಮಚಂದ್ರನು ದಶಶಿರನನ್ನು ವಧಿಸಿ, ಲಂಕಾದ್ವೀಪದಿಂದ ಅಯೋಧ್ಯೆಗೆ ಬಂದು ಪಟ್ಟಾಭಿಷೇಕ ಮಾಡಿಸಿಕೊಂಡನು. ಆ ದಿನ ಪ್ರಜೆಗಳು ತಮ್ಮ ಸಂತೋಷವನ್ನು ತೋರ್ಪಡಿಸುವುದಕ್ಕಾಗಿ ದೀಪೋತ್ಸವವನ್ನು ಆಚರಿಸಿದರು. ಅಂದು ಮೊದಲ್ಗೊಂಡು ಇಂದಿನ ವರೆಗೂ, ಆ ಮಹೋತ್ಸವವನ್ನು ಸರ್ವರೂ ಆಚರಿಸುತ್ತಾರೆ. ಶ್ರೀ ಕೃಷ್ಣನು ಲೋಕಕಂಟಕನಾದ ನರಕಾಸುರನನ್ನು ನಾಶ ಮಾಡಿದ ದಿನವೂ, ನಾಸ್ತಿಕರ ಹಾವಳಿಯಿಂದ ಆರ್ಯಧರ್ಮವನ್ನು ರಕ್ಷಿಸಿದ ಶಂಕರಾಚಾರ್ಯರು ದುಷ್ಟರ ಕುಯುಕ್ತಿಗೆ ಪಾತ್ರರಾಗಿ ವಿಷಪ್ರಯೋಗದಿಂದ ಮೃತಪಟ್ಟ ದಿನವೂ, ಗುರುನಾನಕ ದೇವನೂ ತಥಾ ಶ್ರೀ ಸ್ವಾಮಿ ರಾಮತೀರ್ಥರೂ ಶರೀರಾಂತ್ಯಗೈದ ದಿನವೂ ಇದಾಗಿದೆ! ಇದೇ ದೀಪೋತ್ಸವದ ಪುಣ್ಯ ದಿನವೇ ವೈದಿಕ ಜ್ಞಾನ ಪ್ರಕಾಶಕ್ಕೆ ಪುನರ್ಜನ್ಮವಿತ್ತ, ಯೋಗಿರಾಜ ಸ್ವಾಮಿ ದಯಾನಂದ ಸರಸ್ವತಿಯವರು ಮುಕ್ತಿಧಾಮವನ್ನೈದಿದರು!! ಭಾರತೀಯರು ಅತ್ಯುತ್ಕೃಷ್ಟ ಗೌರವವನ್ನು ಪಡೆಯುವ ವಿಧಾನವನ್ನು ತೋರ್ಪಡಿಸಲು ನಮಗೆ ಯಾರು ತೋರಿಸಿದರೋ ಆ ಮಹಾತ್ಮನು ಈ ದೀಪಾವಳಿಯ ದಿನವೇ ಧರ್ಮವೇದಿಯಲ್ಲಿ ತನ್ನ ಶರೀರವನ್ನು ಬಲಿಯಾಗಿತ್ತನು.

ಸ್ವಾಮಿ ದಯಾನಂದರ ಪುಣ್ಯ ಚರಿತ್ರೆಯನ್ನು ಭಾರತೀಯರು ಓದಿರಬಹುದಾದುದರಿಂದ, ಅದನ್ನಿಲ್ಲಿ ವಿಸ್ತರಿಸದೆ, ಕೆಲವಂಶ ಮಾತ್ರ ಬರೆಯುವುದು ಯುಕ್ತವೆಂದು ಕಾಣುತ್ತದೆ. ಶ್ರೀ ಸ್ವಾಮಿ ದಯಾನಂದರು ಬಾಲ್ಯಾವಸ್ಥೆಯಿಂದಲೇ ತೀಕ್ಷ್ಣ ಬುದ್ಧಿಯುಳ್ಳವರಾಗಿದ್ದವರಲ್ಲದೆ, ಸಂಸಾರದಲ್ಲಿ ವಿರಕ್ತರೂ ಆಗಿದ್ದರು. ವೈರಾಗ್ಯದ ಅಗ್ನಿಯು ಅವರ ಅಂತಃಕರಣದಲ್ಲಿ ಪ್ರಜ್ವಲಿಸುತ್ತಾ ಇದ್ದು, ಕಡೆಗೊಂದು ದಿನ ಅದು ಬಹು ಪ್ರಜ್ವಲಿಸತೊಡಗಿ, ತನ್ನ ಸಂಪೂರ್ಣ ಐಶ್ವರ್ಯವನ್ನೂ, ಬಂಧು ಬಾಂಧವರನ್ನೂ ಬಿಟ್ಟು, ಏಕಾಂಗಿಯಾಗಿ ದೇಶಸಂಚಾರ ಮಾಡಿ, ಸಮಸ್ತ ಜ್ಞಾನವನ್ನು ಹೊಂದಿ ಆ ಜ್ಞಾನ ಪ್ರಕಾಶದಿಂದ ಭಾರತೀಯರ ಮತಾಂಧಕಾರವನ್ನು ನಿವಾರಿಸುವಂತೆ ಮಾಡಿತು. ಇವರು ಅನೇಕ ಸಾಧು ಸಂತರನ್ನೂ, ಯೋಗಿಗಳನ್ನೂ ತರ್ಕ ಶಾಸ್ತ್ರಿಗಳನ್ನೂ, ಪಂಡಿತೋತ್ತಮರೆನ್ನಿಸುವವರನ್ನೂ ಸಂದರ್ಶಿಸಿ, ಅವರೊಡನೆ ತರ್ಕ ವಿತರ್ಕಗಳನ್ನು ನಡೆಸಿದೆಂದಾದರೂ, ಅವರ್‍ಯಾರಲ್ಲಿ ತೃಪ್ತಿಯುಂಟಾಗದೆ ವಿದ್ಯಾರ್ಜನೆಗಾಗಿ ಅಲ್ಲಲ್ಲಿ ತಿರುಗುತ್ತಿದ್ದರು. ಕಡೆಗೆ ಮಥುರಾಪಟ್ಟಣದಲ್ಲಿ, ತತ್ವವೇತ್ತರೂ, ವ್ಯಾಕರಣ ಶಾಸ್ತ್ರಜ್ಞರಲ್ಲಿ ಅಗ್ರಗಣ್ಯರೂ ಆಗಿರುವ ವಿರಜಾನಂದ ಸ್ವಾಮಿ ಎಂಬವರಿರುವರೆಂಬ ಸಮಾಚಾರವನ್ನು ಕೇಳಿ ಅಲ್ಲಿಗೆ ಹೋಗಿ ಅವರ ಶಿಷ್ಯರಾಗಿ, ಆರ್ಷೇಯ ಗ್ರಂಥಗಳ ಜ್ಞಾನವನ್ನು ಪಡೆದರು. ತರುವಾಯ ಆ ಗುರುವರ್ಯರು ಆಜ್ಞಾಪಿಸಿದ್ದೇನೆಂದರೆ, "ವೇದಗಳ ನಿಜವಾದ ಅರ್ಥವನ್ನರಿಯುವ ರೀತಿಯನ್ನು ಜನರಿಗೆ ತೋರಿಸಿ ಆ ಮೂಲಕ ಅವರ ಅಜ್ಞಾನಾಂಧಕಾರವನ್ನೂ, ಪೊಳ್ಳು ಭಕ್ತಿಯನ್ನೂ ನಾಶಗೊಳಿಸಿ ಸತ್ಯಸನಾತನ ವೈದಿಕ ಧರ್ಮವನ್ನು ಪುನಃ ಸ್ಥಾಪಿಸಬೇಕು" ಲೋಕೋಪಕಾರವಾದ ಗುರು ಆಜ್ಞೆಯನ್ನು ಸ್ವೀಕರಿಸಿ, ಅದನ್ನು ಪೂರೈಸುವುದಕ್ಕಾಗಿ ಸ್ವಾಮಿ ದಯಾನಂದರು ತನ್ನ ಉಳಿದ ಆಯುಷ್ಯವನ್ನೆಲ್ಲ ವಿನಿಯೋಗಿಸಲು ಸಿದ್ಧರಾದರು.

ಸನ್ ೧೮೬೭ರಲ್ಲಿ ಹರಿದ್ವಾರದಲ್ಲಿ ಜರಗಿದ ಮಹಾ ಕುಂಭಮೇಳದಲ್ಲಿ "ಪಾಖಂಡ ಖಂಡನಿ" ಎಂಬ ಪತಾಕೆಯನ್ನು ಏರಿಸಿ, ಆರ್ಯ ಧರ್ಮದ ವಿಜಯನಿನಾದವನ್ನು ಎಲ್ಲರಿಗೂ ಕೇಳಿಸಿದರು. ಅಲ್ಲಿ ನೆರೆದಿದ್ದವರೆಲ್ಲ ಸ್ವಾಮಿಜಿಯವರ ಸತ್ಯೋಪದೇಶವನ್ನು ಶ್ರವಣ ಮಾಡಿ ತಲೆ ತೂಗಿದರೂ ಅವರಲ್ಲಿ ಬಲವಾಗಿ ನಾಟಿರುವ ಸಂಪ್ರದಾಯದ ಅವಿವೇಕತ್ವವು ಸತ್ಯವನ್ನು ಗ್ರಹಿಸಲೆಡೆಗೊಡಲಿಲ್ಲ! ಆದರೂ ಬಹು ಜನರಲ್ಲಿ ನವಜಾಗ್ರತಿಯುಂಟಾಯಿತೆನ್ನಬಹುದು! ಎಲ್ಲೆಲ್ಲಿಯೂ ಸ್ವಾಮಿಜಿಯವರ ಕೀರ್ತಿಯು ಹಬ್ಬಿತು. ಅನೇಕ ಕಡೆಗಳಲ್ಲಿ ಪಾಷಾಣಾದಿ ಜಡಪೂಜೆಯ ಕುರಿತು ಪೌರಾಣಿಕ ಶಾಸ್ತ್ರಿಗಳ ಕೂಡೆ ಶಾಸ್ತ್ರಾರ್ಥ ಮಾಡಿದರು. ಸಾವಿರಾರು ಜನರು ವೇದವಿರುದ್ಧ ಆಚಾರವಿಚಾರಗಳನ್ನು ಬಿಟ್ಟು ಸ್ವಾಮಿಜಿಯವರ ಅನುಯಾಯಿಗಳಾದರು. ಆ ಮೇಲೆ ಮುಖ್ಯ ಮುಖ್ಯ ನಗರಗಳಲ್ಲಿ ವೈದಿಕ ಧರ್ಮ ಪ್ರಚಾರ ಮಾಡುತ್ತಾ, ಪೌರಾಣಿಕ ಸಂಪ್ರದಾಯಗಳ ವಕ್ಷಸ್ಥಾನವಾದ ಕಾಶೀಪಟ್ಟಣದಲ್ಲಿಯೂ, ವೇದ ಧರ್ಮದ ಧ್ವಜವನ್ನು ಸ್ಥಾಪಿಸಿ, ವೇದ ವಿರುದ್ಧ ಸಮಸ್ತ ಮತಗಳನ್ನೂ ನಿರ್ಭಯದಿಂದ ಖಂಡಿಸಿದರು! ಹೊರತು ಕಾಶಿರಾಜರ ಅಧ್ಯಕ್ಷತೆಯಲ್ಲೊಂದು ಸಭೆ ಸೇರಿ, ಕಾಶಿಯಲ್ಲಿ ಹೆಸರುವಾಸಿಗಳಾದ ಸ್ವಾಮಿ ವಿಶುದ್ಧಾನಂದರೂ, ಪಂಡಿತ ಬಾಲ ಶಾಸ್ತ್ರೀ ಮೊದಲಾದವರೂ ಸ್ವಾಮಿಜಿಯವರೊಡನೆ ಶಾಸ್ತ್ರಾರ್ಥ ಮಾಡಿದರಾದರೂ, ಋಷಿ ದಯಾನಂದರ ಪಕ್ಷವೇ ಜಯವನ್ನು ಹೊಂದಿತು! ಸ್ವಾಮಿ ದಯಾನಂದರು ಹೇಗೆ ಹಿಂದೂ ಧರ್ಮದಲ್ಲಿರುವ ಅಪ್ರಾಮಾಣಿಕ ವಿಷಯಗಳನ್ನು ಖಂಡಿಸಿದರೋ ಹಾಗೆಯೇ ಕ್ರಿಸ್ತ ಮತ್ತೂ ಮುಸಲ್ಮಾನ ಧರ್ಮದಲ್ಲಿರುವ ಅಸಂಬಂಧ ವಿಷಯಗಳನ್ನು ಖಂಡಿಸಿ ಮಾನವರಿಗೆಲ್ಲ ವೇದ ಧರ್ಮ ಒಂದೇ ಶ್ರೇಷ್ಠ ಧರ್ಮವಾಗಿರುವುದೆಂದು ಬೋಧಿಸಿರುವರು.

ಸ್ವಾಮಿ ದಯಾನಂದ ಸರಸ್ವತಿಯವರು ವೇದಗಳ ಭಾಷೆಯನು ಸರಿಯಾಗಿ ಮಾಡುತ್ತಾ, ಸತ್ಯಾರ್ಥ ಪ್ರಕಾಶವೇ ಮೊದಲಾದ ಉಜ್ವಲ ಗ್ರಂಥಗಳನ್ನು ಬರೆಯುತ್ತಾ, ಮತಮತಾಂತರಗಳ ಅಂಧಕಾರ ತಿಮಿರವನ್ನು ವೇದಸೂರ್ಯನ ಹಿರಿದಾದ ಕಿರಣದಿಂದ ತೊಲಗಿಸುತ್ತಾ, ಸರ್ವರೂ ವೈದಿಕ ಧರ್ಮದ ವಿಶಾಲವೃಕ್ಷದ ನೆರಳಿನಲ್ಲಿ ವಿಶ್ರಾಂತಿ ಹೊಂದುವಂತೆ ಮುಂಬಾಯಿ ಮುಂತಾದೆಡೆಗಳಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿದರು. ಅವರು ರಚಿಸಿದ ಸಮಾಜದ ಹತ್ತು ನಿಯಮಗಳನ್ನು ಓದಿದರೆ, ಅವರ ಸದುದ್ದೇಶವೇನೆಂಬುದು ಪ್ರತಿಯೊಬ್ಬನಿಗೂ ಮನದಟ್ಟಾಗುವುದು. ಒಂದೇ ಮಾತಿನಿಂದ ಹೇಳುವುದಾದರೆ ಪ್ರಕೃತ ಕಾಲದಲ್ಲಿ ಎಷ್ಟೆಲ್ಲ ಸುಧಾರಣೆಯ ಕಾರ್ಯಗಳು ನಡೆಯುತ್ತವೋ ಅವುಗಳೆಲ್ಲ ದಯಾನಂದರ ಋಷಿ ಬುದ್ಧಿಯಿಂದ ತೋರಿಸಿ ಕೊಟ್ಟ ಕಾರ್ಯಗಳಾಗಿರುತ್ತವೆ. ಭಾರತೀಯರ ಅಭ್ಯುದಯಕ್ಕನುಕೂಲವಾಗಿರುವ ಸರಳೋಪಾಯಗಳನ್ನು ಅವರ ಮುಂದಿಟ್ಟಿರುವರು. ಕಡೆಗೆ ಸ್ವಾಮಿಜಿಯವರ ವಿಶ್ವಾಸಕ್ಕೆ ಪಾತ್ರನಾಗಿದ್ದ ಜಗನ್ನಾಥನೆಂಬ ರಸೋಯಿ ಕೆಲಸದವನು ಕ್ಷುದ್ರಬುದ್ಧಿಯುಳ್ಳವರ ಮಾತಿಗೆ ಮರುಳಾಗಿ ಗಾಜಿನ ತುಂಡುಗಳನ್ನು ಪುಡಿ ಮಾಡಿ ಚೆನ್ನಾಗಿ ಪುಡಿ ಮಾಡಿ ಹಾಲಿನೊಂದಿಗೆ ಸೇರಿಸಿ ಸ್ವಾಮಿಜಿಯವರಿಗೆ ಕುಡಿಯಲು ಕೊಟ್ಟನು! ಅದೇ ಅವರ ದೇಹಾಂತ್ಯಕ್ಕೆ ಕಾರಣವಾಯಿತು. ಸ್ವಾಮಿದ್ರೋಹಿಯಾದ ಜಗನ್ನಾಥನನ್ನು ಹತ್ತಿರಕ್ಕೆ ಕರೆದು ಅಂದದ್ದೇನೆಂದರೆ,—ನೀನು ಇನ್ನು ಇಲ್ಲಿದ್ದರೆ ಶಿಕ್ಷೆಗೆ ಗುರಿಯಾಗುವೆ. ಆದಕಾರಣ, ಈಗಲೇ ಇಲ್ಲಿಂದ ನೇಪಾಲ ಮುಂತಾದೆಡೆಗಳಿಗೆ ಹೋಗಿ ಸುಖಿಯಾಗಿರೆಂದು ಕೆಲವು ರೂಪಾಯಿಗಳನ್ನು ಕೊಟ್ಟು ಕಳುಹಿಸಿದರು. ಸ್ವಾಮಿ ದಯಾನಂದರ ಕ್ಷಮಾಶೀಲತ್ವದ ಮಹತ್ವವು ಇದರಿಂದ ಸ್ವಯಂ ಒಡೆದು ಪ್ರಕಾಶಿಸುತ್ತದೆ. ಸ್ವಾಮಿಜೀಯವರು ೧೮೮೩ನೇ ಇಸವಿ ಅಕ್ಟೋಬರ ತಾ ೩೦ನೇ ಕಾರ್ತಿಕ ಅಮಾವಾಸ್ಯೆಯ ದಿನ ಗಾಯತ್ರಿ ಮಂತ್ರವನ್ನು ಪಠಿಸುತ್ತಾ "ಈಶ್ವರನೇ ನಿನ್ನ ಇಚ್ಛೆಯು ಪೂರ್ಣವಾಗಲಿ" ಎಂದೆನ್ನುತ್ತಾ ಭೌತಿಕ ಶರೀರವನ್ನು ಬಿಟ್ಟುಹೋದರು. ಆದುದರಿಂದ ದೀಪಾವಳಿ ಹಬ್ಬದ ದಿನ ಪ್ರತಿಯೊಬ್ಬರೂ ಆ ಋಷಿ ದಯಾನಂದ ಸರಸ್ವತಿಯವರ ಉಪಕಾರವನ್ನು ಸ್ಮರಿಸುವುದೂ, ತಥಾ ಅವರು ತೋರಿಸಿರುವ ಲೋಕೋಪಕಾರವಾದ ಕಾರ್ಯಗಳನ್ನು ಮಾಡುವುದಕ್ಕೆ ಕಂಕಣ ಬದ್ಧರಾಗುವುದೂ ನಮ್ಮೆಲ್ಲರ (ಹಿಂದುಗಳ) ಪ್ರಥಮ ಕರ್ತವ್ಯವಾಗಿರುತ್ತದೆ.

ಎಂ. ಚಂದ್ರಶೇಖರ, ಮುಂಬಾಯಿ

ದುಃಖಸೂಚಕ ಸಭೆ.

ಉಡುಪಿ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ತಾ. ೧೪—೧೦—೩೩ರಲ್ಲು ಉಡುಪಿ ಬೋರ್ಡುಮಿಡ್ಲ್ ಶಾಲೆಯಲ್ಲಿ ಶ್ರೀಯುತ ಕೊರಡ್ಕಲ್ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ೨೦೦ಕ್ಕೆ ಮಿಕ್ಕಿ ಉಪಾಧ್ಯಾಯ ಉಪಾಧ್ಯಾಯಿನಿಯರು ಹಾಜರಿದ್ದರು. ಆರಂಭದಲ್ಲಿ ಕುರುಕಾಲು ಗಣಪಯ್ಯ ಸೆಟ್ರವರು, ದಿವಾನ್ ಬಹದ್ದೂರ್ ನಯಂಪಳ್ಳಿ ಸುಬ್ಬರಾಯರ ಸಂಕ್ಷಿಪ್ತ ಜೀವನಚರಿತ್ರೆಯನ್ನೂ ಅವರ ಅನಿರೀಕ್ಷಿತ ನಿಧನದಿಂದ ಉಪಾಧ್ಯಾಯ ವರ್ಗಕ್ಕೆ ಉಂಟಾದ ಅಪಾರ ನಷ್ಟದ ವಿಷಾದವನ್ನೂ ವಿವರಿಸಿ ಹೇಳಿ, ಈ ಕೆಳಗಿನ ದುಃಖಸೂಚಕ ಠರಾವನ್ನು ಸಭೆಯ ಮುಂದಿಟ್ಟರು. ಅಧ್ಯಕ್ಷರು ಈ ವಿಷಯದಲ್ಲಿ ಕೆಲವು ಹೊತ್ತು ಮಾತಾಡಿ ಸಭೆಯನ್ನು ಕೇಳಿಕೊಂಡಂತೆ ಎಲ್ಲರೂ ಎದ್ದು ನಿಂತು ಸದರಿ ಠರಾವನ್ನು ಮಂಜೂರು ಮಾಡಲಾಯಿತು.

"ಮಾಜಿ ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರರೂ ಮಾಜಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರೂ ಆಗಿ ಈ ಜಿಲ್ಲೆಯ ಪ್ರಮುಖ ವ್ಯಕ್ತಿಗಳೆನ್ನಿಸಿಕೊಂಡು ಹಲವು ಮುಖದಿಂದ ಜನತಾಸೇವೆಯನ್ನು ಮಾಡುತ್ತಿದ್ದುದಲ್ಲದೆ 'ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲು ಸ್ಥಾಪನೆಯಾದ ಲಾಗಾಯಿತು ಈ ವರೇಗೆ ಅದರ ಪ್ರೆಸಿಡೆಂಟರಾಗಿದ್ದು, ಜಿಲ್ಲೆಯ ವಿದ್ಯಾಭಿವೃದ್ಧಿಯ ಹಾಗೂ ಉಪಾಧ್ಯಾಯರ ಮತ್ತು ಮನೇಜರರ ಹಿತಚಿಂತನೆಯಿಂದ ನಿರಂತರ ತಮ್ಮ ತನುಮನಧನ ಸೇವೆಯನ್ನು ಅರ್ಪಿಸುತ್ತಿದ್ದ ದಿವಾನ್ ಬಹದ್ದೂರ್ ನಯಂಪಳ್ಳಿ ಸುಬ್ಬರಾಯರವರು ತಾರೀಕು ೧೩—೧೦—೩೩ರಲ್ಲು ಮದ್ರಾಸಿನಲ್ಲಿ ಅನಿರೀಕ್ಷಿತವಾಗಿ ತೀರಿಹೋದರೆಂಬ ವಾರ್ತೆಯನ್ನು ಕೇಳಿ ಉಡುಪಿ ಸೆಂಟರಿನ ಉಪಾಧ್ಯಾಯರ ಸಭೆಯು ತಮಗುಂಟಾದ ಅಪಾರ ವಿಷಾದವನ್ನು ವ್ಯಕ್ತಪಡಿಸುವುದಲ್ಲದೆ ಶೋಕಸಾಗರದಲ್ಲಿರುವ ಅವರ ಪತ್ನೀ ಪುತ್ರರು ಹಾಗೂ, ಬಂಧುಬಳಗದೊಡನೆ ತಮ್ಮ ಸಹಾನುಭೂತಿ ಸಂತಾಪಗಳನ್ನು ಸೂಚಿಸಿ ದಿವಂಗತರ ಆತ್ಮಕ್ಕೆ ದಿವ್ಯ ಪದವಿಯನ್ನೂ ಅವರ ಕುಟುಂಬಕ್ಕೆ ಮನಶ್ಶಾಂತಿಯನ್ನೂ ಶ್ರೀ ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸಿಕೊಳ್ಳುತ್ತದೆ,

ಈ ಠರಾವನ್ನು ದಿವಂಗತರ ಕುಟುಂಬಕ್ಕೂ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿಗೂ ಪತ್ರಿಕೆಗಳಿಗೂ ಕಳುಹಿಸಬೇಕಾಗಿ ನಿರ್ಧರಿಸಲಾಯಿತು.

ಉಡುಪಿ, ೧೪—೧೦—೩೩ } ಕುರುಕಾಲು ಗಣಪಯ್ಯ ಸೆಟ್ಟಿ, ಉಡ್ಪಿ ಸೆಂಟರ್ ಉಪಾಧ್ಯಾಯರ ಸಂಘ

ಪಡುಬಿದ್ರೆಯಲ್ಲಿ ಭಜನೆ.

ಇಲ್ಲಿಯ ಸ್ಥಳೀಯ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದಲ್ಲಿ ಕಾಲಂಪ್ರತಿ ನಡೆಯತಕ್ಕ ಆಶ್ವೀಜ ಶು ೧೦ ಮೊದಲ್ಗೊಂಡು ಕಾರ್ತಿಕ ಶು ೧೧ಕ್ಕೆ ಸಮಾಪ್ತವಾಗುವ, ಮಾಸಿಕ ನಗರ ಯಾಟನಾ ಭಜನೆಯು, ಕ್ರಮದಂತೆ ಅತಿ ವಿಜೃಂಭಣೆಯಿಂದ ಜರಗಿಸಲ್ಪಡುತ್ತದೆ.

ಆದರೆ ಈ ಭಜನೆಯಲ್ಲಿ ದೀರ್ಘಕಾಲಾನುಗತ ಭಾಗ ವಹಿಸಿಕೊಂಡು ಬರುವ ಸಂತ ಮಂಡಳಿಯವರು, ಗಾಂಧಿತತ್ವಕ್ಕೆ ವಿರೋಧಿಗಳಾಗಿರುವುದರಿಂದಲೂ, ಮತ್ತು ಇತರ ಬಹುಮತದಿಂದ ಭಾರತಮಾತಾ ಸ್ತೋತ್ರ, ಗಾಂಧಿ ಜಯಘೋಷ, ಮುಂತಾದುವುಗಳಿಗೆ ಆತಂಕವಿಲ್ಲದಿರಲೂ, ಮೇಲ್ಕಾಣಿಸಿದ ಮಂಡಳಿಯವರು ಇವರೊಡನೆ ಸಹಭಾಗಿಗಳಾಗಲು ನಿರಾಕರಿಸಿದರು.

ಪರಂತು ಪ್ರಕೃತದ ಮಂಡಳಿಯವರು ಕೂಡಾ ಕೆಲವು ದಿವಸಗಳಿಂದೀಚೆ, 'ಭಾರತ ಮಾತಾ' ಸ್ತೋತ್ರ, 'ಗಾಂಧಿ' ಜಯಘೋಷ ಇತ್ಯಾದಿಗಳಿಗೆ ಆತಂಕ ಮಾಡುವುದು ನೋಡುವಾಗ್ಗೆ, ಯಾವ ಉದ್ದಿಷ್ಟವು ಇನ್ನೊಂದು ಮಂಡಳಿಯವರಿಗೆ ಹಿತಕರವಾಗಿದ್ದು "ಹರಿಕೀರ್ತನಾವಳಿಯಲ್ಲಿ ಭಾಗವಹಿಸಿಕೊಂಡು ಶ್ರೀ ಪರಮಾತ್ಮನ ಕಟಾಕ್ಷಕ್ಕೆ ಪಾತ್ರರಾಗುವಲ್ಲಿ ಅಂಥ ಉದ್ದಿಷ್ಟವನ್ನು ಪ್ರಥಮತಾ ನಿರಾಕರಿಸಿ ನಂತರ ಸ್ವಲ್ಪ ದಿವಸಗಳಲ್ಲೇ ಬೇರೆಯಾಯಿತೆಂದರೆ, ಇದೊಂದು ವಿಶ್ವಾಸಘಾತವೆನ್ನಲು ಅತಿಶಯೋಕ್ತಿಯಾಗಲಾರದು.

ಭಜಕರಲ್ಲೊಬ್ಬ.

ನೋಟೀಸು.

ಜನಾಬ್ ಕೆ. ಎಚ್. ಶೇಕ್ ಫರೀದ್ ಸಾಹೇಬ್ ಮತ್ತು ಅವರ ಮಿತ್ರರು ಕೂಡಿ ಮುಸ್ಲಿಂ ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸ ಅಭಿವೃದ್ಧಿಗೋಸ್ಕರ ಸಾರ್ವಜನಿಕ ಸಹಾಯದಿಂದ ಈ ವರೆಗೆ ಜಮೆಮಾಡಿದ ಒಟ್ಟು ರೂ. 98–2–2ಯನ್ನು ಕೊಡಿಯಾಲ್ ಬೈಲ್ ಪೋಸ್ಟ್ ಆಫೀಸಿನಲ್ಲಿ ಡಿಪೋಜಿಟ್ ಮಾಡಿರುವರೆಂದು ಈ ಮೂಲಕ ಸರ್ವರಿಗೂ ತಿಳಿಸುತ್ತಾರೆ.

K. H. S. Fareed Saheb.

ನೋಟೀಸು.

ಕಾಸರಗೋಡು ಪ್ರಿನ್ಸಿಪಾಲ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ.

ಕ್ರಮ ನಂಬ್ರ. ೨೦/1933.

ಕ್ರಮ ಅಮಲ್ದಾರಿ ಅರ್ಜಿ ನಂಬ್ರ. 808/1933.

ನಡುಮನ ಇಲ್ಲತ್ತ ನಾರಾಯಣ ಎಂಬ್ರಾಂದ್ರಿ ಈಶ್ವರ ಎಂಬ್ರಾಂದ್ರಿರ ಮಗ ಕಾಸರಗೋಡು ತಾಲೂಕು ಕೊಡಕ್ಕಾಟ ಗ್ರಾಮದಲ್ಲಿರುವ ವಾದಿ ಅರ್ಜಿದಾರರು

ಮತ್ತು

1. ಕಂಙಂಗ್ಯೆ ತೆಕ್ಕೇಪುದುಮನ ಇಲ್ಲತ್ತ ಈಶ್ವರ ಎಂಬ್ರಾಂದ್ರಿ. 2. ಕಂಙಂಗ್ಯೆ ತೆಕ್ಕೇಪುದುಮನ ಇಲ್ಲತ್ತ ಸರಸ್ವತಿ ಅಂತರ್ಜನಂ. 3. ಕಂಙಂಗ್ಯೆ ತೆಕ್ಕೇಪುದುಮನ ಇಲ್ಲತ್ತ ಗೌರಿ ಅಂತರ್ಜನಂ—ಪ್ರತಿವಾದಿರು ರೆಸ್ಪೋಂಡೆಂಟರು.

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ, ಅರ್ಜಿದಾರನು ರೆಸ್ಪೋಂಡೆಂಟರ ಹಕ್ಕಿನ ಸ್ಥಿರಾಸ್ತಿಗಳು ವಿಕ್ರಯದ ಬಗ್ಗೂ ಮತ್ತು ಸದ್ರಿ ಸ್ಥಿರಾಸ್ತಿಗಳು ಏಲಂ ಸಮಯ ಮರು ಕರೆಯುವರೆ ಅನುಮತಿ ಕೊಡಿಸಬೇಕಾಗಿ ಕೂಡಾ ಮೇಲ್ಕಂಡ ಅರ್ಜಿ ದಾಕ್ಲು ಮಾಡಿದ್ದಾನೆ. ಆದುದರಿಂದ ವಿಕ್ರಯದ ಶರ್ತಗಳನ್ನು ನಿರ್ಣಯಿಸಲಿಕ್ಕೆ 1933ನೇ ಇಸವಿ ಅಕಟೋಂಬ್ರ 19ನೇ ತಾರೀಕು ನಿಶ್ಚಯಿಸೋಣಾಗಿಯದೆಂತ ಸದ್ರಿ ರೆಸ್ಪೋಂಡೆಂಟರಾದ ಪ್ರತಿವಾದಿರಿಗೂ ವ ಸರ್ವಜನರಿಗೂ ಇದರಿಂದ ತಿಳಿಸೋಣಾಗುತ್ತದೆ.

ಕಾಸರಗೋಡು,
೧೨–೧೦–೩೩

A. V. Narayana Menon,
Vakil for Petr. (Plff).

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ.

O. P. No. 82/1933.

ಕೊರಗಾತಿ ಹೆಂಗಸು—ಅರ್ಜಿದಾರಳು.

ಪುಟ್ಟ ನ್ಯಾಕ ಕೂಡಾ 2 ಜನರು—ಎದ್ರಿರು.

ತಾ. 2–10–1929ರಲ್ಲು ಶಂಕ್ರನಾರಾಯಣ ಗ್ರಾಮದ ಕೌಲಾಳಿಯಲ್ಲಿ ಮೃತಪಟ್ಟ ಅರ್ಜಿದಾರಳ ಗಂಡ ವ 1ನೇ ಎದ್ರಿಯ ತಮ್ಮ, 2ನೇ ಎದ್ರಿಯ ಚಿಕ್ಕ ತಂದೆಯಾದ ಮರಾಟಿ ಶಿವನ್ಯಾಕಗೆ ಹೊರಗಿನಿಂದ ಬರತಕ್ಕ ಸಾಲ ವಸೂಲು ಮಾಡುವರೆ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಮೇಲಿನ ಅರ್ಜಿ ದಾಖಲು ಮಾಡಿರುತ್ತಾಳೆ. ಆದುದರಿಂದ ಈ ವಿಷಯದಲ್ಲಿ ಆಕ್ಷೇಪ ಹೇಳತಕ್ಕವರು ಇದೇ ಬರುವ ತಾ. 18–11–1933ನೇ ದಿವಸ ಹಗಲು 11 ಘಂಟೆಗೆ ತಮ್ಮ ಆಕ್ಷೇಪಗಳನ್ನು ಸದರಿ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳಬಹುದೆಂತ ಈ ಮೂಲಕ ಎಲ್ಲಾ ಜನರಿಗೂ ತಿಳಿಸೋಣಾಗಿದೆ.

ಕುಂದಾಪುರ
೧೪–೧೦–೩೩.

S. A. Udpa B.A.B.L.
Advocate for Petitioner.

ಸ್ವದೇಶಾಭಿಮಾನಿಗೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ

ಉತ್ಸಾಹೀ ಏಜಂಟರು

ಬೇಕು!

ಕೂಡಲೇ ಮೆನೇಜರರಿಗೆ ಬರೆಯಿರಿ.

ಒಂದು ಸುಂದರ ಕೂಸು

ಸೆನಿಟರಿ ಇನ್ಸ್‌ಪೆಕ್ಟರರು.

„ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದನು. ಆದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,
ಸೆನಿಟರಿ ಇನ್ಸ್‌ಪೆಕ್ಟರ್,
ಮಾಲೂರು, ಮದುರಾ.

ನಿಮ್ಮ ಕೆಮಿಸ್ಟರರ ಹತ್ತಿರ ಕೇಳಿರಿ.

ಅಥವಾ

ಕೇಸರಿ ಕುಟೀರಂ,
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯೂಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ.

ಬೆಂಗಳೂರು ಏಜಂಟ್:— ಬಿ. ರೂಪಟ್‌ಲಾಲ್ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.
ಮದ್ರಾಸು ಸಂಸ್ಥಾನದ ಏಜಂಟರು:— ದಾಮೋದರ ಮತ್ತು ಕಂಪೆನಿ, 78 ಜೈನ ಒಜಾರ ರೋಡ್,
ಮಂಗಳೂರು „ — ದಿ ಉಲನ್ ಮಾರ್ಟ್. ಧಾರವಾಡ ಏಜಂಟ್— ದಿ ಧಾರವಾಡ ಫಾರ್ಮಸಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು
"ಜೀವಮಾನದ ಅಮೃತ. ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನೀ ಔಷಧಗಳ ರಾಜ" "ಸರ್ವ ಸಿದ್ಧೌಷದ"
"ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"
ಎಂಬೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ. ಪರಮೋತ್ಕೃಷ್ಟ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಧಾರವೂ ಆದ

ಜೀವಾಮೃತವು

ಇದು ಪಂಡಿತ ಡಿ. ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ೧೮೯೮ನೇ ಇಸವಿಯಿಂದಲೂ ಇದು ಬಳಕೆಯಲ್ಲಿದೆ. ನರಗಳ ದೌರ್ಬಲ್ಯವು ದುಷ್ಕೃತ್ಯದ ಹೀನತೆ ಪಡೆದು, ಆಯಾಸ ರಕ್ತ ಹೀನತೆ, ನರಗಳ ಅಶಕ್ತತೆ, ಮೆದುಳು ಚೈತನ್ಯಗುಂದಿರುವಿಕೆ, ತೂಕದಲ್ಲಿ ಕಡಮೆಯಾಗಿರುವುದು, ಇತ್ಯಾದಿಗಳಿಂದ ನರಳುತ್ತಿದ್ದಲ್ಲಿ, ಜೀವಾಮೃತವನ್ನು ಸೇವಿಸಲಾರಂಭಿಸಿರಿ. ಇದರಿಂದ ನಿಮಗೆ ಪರಮಾಶ್ಚರ್ಯಕರವಾದ ಗುಣವುಂಟಾಗುವುದು. ಮೊದಲನೇ ಸಾರಿ ಸೇವಿಸಲು ಪ್ರಾರಂಭಿಸಿದಾರಭ್ಯವೇ ಅವರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎರಡು ಸೈಜುಗಳಲ್ಲಿ ರೂ. ೩–೪–೦ ಮತ್ತು ರೂ. ೧–೧೨–೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೮೫, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೬೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೋಪ್ಯೂಲರ್ ಸ್ಟೋರ್ಸ್, ಮಂಗಳೂರು.

P. No. 104

[illegible] ಅಪಾಯಕರ ದೇಹಸ್ಥಿತಿ!!!

ಶ್ರೀ ಸುಭಾಷ್‌ಚಂದ್ರ ಬೋಸರ ಅನಾರೋಗ್ಯ!

[illegible] ಪಟೇಲರ ನಿರಾಶ!

[illegible]

ಶ್ರೀ ವಿ. ಜೆ. ಪಟೇಲರು

[illegible] ಚಂದಿದೆಯೆಂದು ಹೇಳಲು- [illegible] ರೋಗದಿಂದ ಅಪಾಯವು ಯಾವಾಗಲೂ [illegible] ರೋಗದ [illegible] ಪಟೇಲರು ತಾನು ನಿಜವಾಗಿಯೂ ಸಾಯು [illegible] ಉದಿದು.

[illegible]

[illegible]

[illegible] ಹೊಳೆಯ ಕಿನಾರೆಯಲ್ಲಿ ಕಳೆದ ವಾರ [illegible] ದೇಹವೊಂದು ತೇಲಾಡಿಕೊಂಡು ದಡಕ್ಕೆ ಬಂದಿತ್ತು [illegible] ನೋಡಿದರು. ಗುರುತು ಸಿಗುವಂತಿಲ್ಲ—ಅಂಗಾಂಗ [illegible] ಪೋಲೀಸರೂ ಬಂದರು.

† † † †

[illegible] ನೋಡಿದರು, ಕಣ್ಣು ತುಂಬಾ ನೋಡಿದರು, ಹಿಂದೆ ನಡೆದರು ಮರುದಿನ ಅರ್ಧ ಹೆಣವು ಮೀನುಗಳ ಪ್ರಾಯಗ! ಇನ್ನೊಂದು ದಿನ ಕಳೆದೊಡನೆ ಇಡೀ ಶವವೇ ತುಂಡು ತುಂಡಾಗಿ ಮೀನುಗಳ ಆಹಾರವಾಯಿತು.

† † † †

ಇಂತಹ ಶವಗಳನ್ನು ಪೋಲೀಸರು ಕಂಡೂ ಹೊಳೆಯಿಂದ ತೆಗೆಸಿ ವಿಚಾರಿಸುವ ಕ್ರಮವಿಲ್ಲವೆಂದು ತೋರುತ್ತದೆ ಪೋಲೀಸರ ತನಿಖೆ ಎಂದರೆ ಅನಾಥ ಶವಗಳನ್ನು ಬಂದು ನೋಡಿ ಹಿಂತಿರುಗುವುದೇ?

† † † †

ಮೂರು ತಿಂಗಳುಗಳ ಹಿಂದೆಯೂ ಒಂದು ಶವವು ಹಾಗೆಯೇ ತೇಲಾಡಿ ಇದೇ ಹೊಳೆಯ ಕಿನಾರೆಗೆ ಬಂದಿತ್ತು. ಆ ಶವದ ಗತಿಯೂ ಹೀಗೆಯೇ ಆಯಿತು ಪೋಲೀಸರ ಕಂಡೂ ತೆಗೆಸಲಾರದಾದರೇಕೆ?

† † † †

ಮುಷ್ಕರವೆಂಬುದು ಮಂಗಳೂರಿಗೂ ಬಂತು! ಕೊಮನ್ ವೆಲ್ತ್ ಟ್ರಸ್ಟ್ ಲಿಮಿಟೆಡ್ ಕಲ್ಲಿಕೋಟೆ ಇವರಾಡಳಿತದಲ್ಲಿರುವ ಜಪ್ಪುವಿನ ಹಂಚು ಕಾರ್ಖಾನೆಯಲ್ಲಿ ಕೂಲಿಗಾರರ ಸಂಬಳದ ಕುರಿತು ವಿವಾದವಾಗಿ, ದೊರೆಗಳು ಕಾರ್ಖಾನೆಯನ್ನು ಮುಚ್ಚಿಯೇ ಬಿಟ್ಟರು.

† † † †

೩೦೦ ಕೂಲಿಕಾರರು ತಮ್ಮ ಕಷ್ಟಗಳನ್ನು ಕಲೆಕ್ಟರರಿಗೆ ಹೇಳಿಕೊಂಡಿರುವರು ಮಾನ್ಯ ದೊರೆಗಳು ಏನು ಹೇಳಿರುವರೆಂದು ತಿಳಿದುಬಂದಿಲ್ಲ

† † † †

ಬಡವರು ಬೆಂಕಿ ಹಿಡಿಯುವುದೇ ಕಡಿಮೆ ಹರಡಿದರೆ ಅದಕ್ಕೆ ನೀರಿಲ್ಲವೆಂಬುದನ್ನು ಯಜಮಾನರು ತಿಳಿಯುವುದು ಉತ್ತಮ

† † † †

ಶ್ರೀ| ಕಾರ್ನಾಡು ಸದಾಶಿವ ರಾಯರು ಮುಂಬಾಯಿ ಸರಕಾರದ ಅಪ್ಪಣೆ ಮೇರೆಗೆ ತಾ ೧೩ರಲ್ಲಿ ಕೈದಿಗೊಳಗಾಗಿರುವರೆಂದು ಗೊತ್ತಾಗಿದೆ ಶ್ರೀ ರಾಯರು ಅಂಕೋಲೆಯ ಮೆಜಿಸ್ಟ್ರೇಟರೆದುರು ನವಂಬರ ತಾ ೧೮ಕ್ಕೆ ನಿಲ್ಲಬೇಕೆಂದು ಹುಕುಂ!

† † † †

ಶ್ರೀ ಸದಾಶಿವ ರಾಯರು ಬಹುವಾದ ಕಾಯಿಲೆಯಲ್ಲಿರುವರು. ಇದರಿಂದಾಗಿ ಅವರು ಅಂಕೋಲೆಗೆ ಪ್ರಯಾಣ ಬೆಳೆಸಲು ಸಾಧ್ಯವಿಲ್ಲವೆಂದು ಡಾಕ್ಟರ ಅಭಿಪ್ರಾಯವಿದೆ.

† † † †

[illegible] ಸುಮಾರು ೬೦ ಮಂದಿ [illegible] ಕಾಲಿಟ್ಟಿರುವರಾಗಿಯೂ, [illegible] ತಿಳಿದು ಬಂದಿದೆ. [illegible]

† † † †

[illegible] ದಿನೇ ದಿನೇ [illegible] ಸರಕಾರ [illegible] ತಿಳಿಯಲಾರದು.

† † † †

[illegible]

ಶಾರೀಕು ೧೩

ಶ್ರೀ ಪಟೇಲರ ಸ್ಥಿತಿಯು ಈಗ ಸ್ವಲ್ಪ ಚೆನ್ನಾಗಿರುತ್ತದೆಂದೂ, ಆದರೂ ಒಬ್ಬ [illegible] ವೈದ್ಯನ ಅಗತ್ಯವಿರುವುದರಿಂದ ಮುಂಬಾಯಿಯ ಡಾ| ಗೋವರ್ಧನದಾಸ ಪಟೇಲರು ಕೂಡಲೇ ವಿಯೆನ್ನಾಕ್ಕೆ ಬರಬೇಕೆಂದೂ ಸುಭಾಷ್‌ಚಂದ್ರ ಭೋಸರ ಕೇಬಲ್ ಬಂದಿರುವುದರಿಂದ ಇದೇ ೭ ಧವಾರ ದಿನ ಡಾ| ಗೋವರ್ಧನ ದಾಸ ಪಟೇಲರು ಕರಾಚಿ [illegible] ವಿಮಾನ ಮೂಲಕ ಯುರೋಪಿಗೆ ಹೋಗಿ [illegible] ಶ್ರೀ ಬೋಸರು ಪಟೇಲರನ್ನು ಅತ್ಯಕ [illegible]

ಮುಂಬಾಯಿಯಲ್ಲಿ ತಾ ೧೬ನೇ ದಿನ ಸಾರ್ವಜನಿಕ ಸಭೆಯೊಂದು ಸೇರಿ ಶ್ರೀ ಪಟೇಲರು ತಮ್ಮ [illegible] ಬೇಗನೆ

ಶ್ರೀ [illegible]

[illegible]

— — —

೭ನೇ ಪುಟದಿಂದ ಮುಂದುವರಿಯುದು

ಇನ್ನೊಂದ ವಿಷಯ [illegible] ಈ ಅನುಭವ ಪಡೆ [illegible] ಅಳತೆಯ ಸ್ಥಳವನ್ನು [illegible] ಈ ಕೆಲಸವನ್ನು ಮಾಡಬಹುದು ಅಂಥ ಸ್ಥಳದ [illegible] ದನ್ನು ನಾನು ಪ್ರತ್ಯೇಕವಾಗಿ ಹೇಳಬೇಕು [illegible] ಹಾಗೆ ಅನುಭವ ಪಡೆದ ನಂತರ ಆ ಕೆಳಗೆ [illegible] ಅದನ್ನು ಬರೆಯಿಸಿ ಆದಷ್ಟು ಬೇಗನೆ ನನಗೆ ಕಳುಹಿಸಿಕೊಡಬೇಕು

ಬರಾಯಿಸತಕ್ಕ ಕಲಂಗಳು

೧ ಯಾವ ಗ್ರಾಮ [illegible] ? ೨ ಸರ್ವೆ ನಂಬ್ರ [illegible] ಸರ್ವೆ ನಂಬ್ರ [illegible] ಸದ್ರಿ ಸ್ಥಳವು ಅಸಂಗಲದಲ್ಲಿ ಯಾವ ಕ್ರಿಸ್ ಮತ್ತು ಯಾವ ದಂಡ [illegible] ೪ ಬೆಳೆ ತೆಗೆದ ಸ್ಥಳದ ಸರಿಯಾದ ವಿಸ್ತೀರ್ಣ—ಎಕ್ರೆ ವ ಸೆಂಟ್ಸ್ ೫ ಸದರಿ ಸ್ಥಳದಲ್ಲಿ ಹೋಗುವ ಬಿತ್ತು ೬ ಮತ್ತು [illegible] ವಿವಾದು ಮೇರೆಗಿನ [illegible] ಯಾವ ಜಾತಿಯದು ೮ ಈಗಿನ ಬೆಳೆ ಒಳ್ಳೆದೋ, ಸಾಧಾರಣವೋ ನಿಸ್ಸೃಷ್ಟವೋ ೯ ಬೆಳೆಯನ್ನು ಕೊಯ್ದ ತಾರೀಕು ೧೦. ಆದರಿಂದ ಬಂದ ಹಸಿ ಭತ್ತದ ಅಳತೆ—ಮುಡಿ ವ ಕ್ರಾ ಸೇರು. ೧೧ ಯಾವ ತಾರೀಕಿನಲ್ಲಿ [illegible] ಸದರಿ ಭತ್ತವು ಪೂರ್ಣವಾಗಿ ಒಣಗಿದ ನಂತ [illegible] ಅಳತೆ ೧೩. ಹಾಗೆ ಅಳತೆ ಮಾಡಿದ ತಾರೀ [illegible] ಈ ಮಾಹಿತಿಯನ್ನು ಕೊಡುವವರ ವಿಳಾಸ ವ ದಸ್ಕತ

ಮೇಲಿನ ಅನುಭವವನ್ನು ಬರಾಯಿಸುವರೆ ತಯಾರಿಸಲ್ಪಟ್ಟ [illegible] ಬೇಕಾದವರು ನನಗೆ ಬರದಲ್ಲಿ ಕೂಡಲೇ ಟಪ್ಪಾಲು ಮೂಲಕ [illegible] ಇದೇ ರೀತಿಯ ಅನುಭವವನ್ನು ಮುಂದಿನ ಹಟ್ಲ, [illegible] ಕೊಳಕೆ ಬೆಳೆಯಲ್ಲಿ ಕೂಡಾ ಪಡೆದು ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ.

[illegible] ರಾಮಕೃಷ್ಣ ಕಾರಂತ್, ಕಾರ್ಯದರ್ಶಿ.

ಉಕ್ಕಿ ಉಕ್ಕಿ ಒರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ 'ಕೂ ಕೂಮಿನ್' ಇದು ದಿವ್ಯೌಷಧವಾಗಿದೆ ಕ್ರಯ 1-8-0

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲಿಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್—

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು

WANTED.

Four Organisers to organise the work of the South Indian General Assurance Society, Ltd., in the following places noted below Capable organisers can expect to have attractive and encouraging terms with sound footing for their future

(1) South Canara, (2) Mysore Hassan and Coorg, (3) Kadur Shimoga Chitaldroog and Tumkur (4) Mangalore Kolar

For terms and other particulars please apply to—

The Divisional Manager

The South Indian General Assurance Co Ltd

64 3rd Cross Road, Srirampur Extn
Malleswaram Post, BANGALORE

OR

The Managing Agents,

The S I G A Co Ltd

55 Poonamallee High Road Kilpauk, MADRAS.

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಅಂಥ ಪ್ಲಾಂಟರರಿಗೂ ತೋಟದವರಿಗೂ

ಬೇಕಾಗುವಂತಹ

ಚಕ್ ರೋಲ್ ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಮೆ. ನೇಜರ್,

ಶಾರದಾ ...,

ರಥಬೀದಿ, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ...

... ಮಂಗಳೂರು.

ಕೋ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯು ಎಲ್ಲಾ ವಿಧದ ಫಾರಂಗಳು, ರಜಿಸ್ಟ್ರಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.

ರಥಬೀದಿ, ಮಂಗಳೂರು

THE SOUTH INDIA
CO-OPERATIVE INSURANCE SOCIETY
LIMITED MADRAS

LOCAL BOARD:—

THE SOUTH CANARA CENTRAL CO OPERATIVE BANK LTD, MANGALORE

Applications are invited for Sub Agents from capable and energetic persons and Co operative Institutions to canvass business on behalf of the Local Board of the Society at Mangalore

FOR TERMS APPLY TO—

The Secretary,

South Canara Central Co-operative Bank Ltd KODIALBAIL P O (Mangalore)
SOUTH CANARA

ಮನೋಹರ ಗ್ರಂಥಮಾಲಾ, ಧಾರವಾಡ.

ಮೊದಲನೆಯ ಕುಸುಮ

ಸುದರ್ಶನ (ಸ್ವತಂತ್ರ ಸಾಮಾಜಿಕ ಕಾದಂಬರಿ) ಪುಟ ೧೮೦.

ಬರೆದವರು ಆನಂದಕಂದ.

ಎರಡನೆಯ ಕುಸುಮ—ನಡಿಯುಗಿರಿ.

ಕರ್ನಾಟಕ ಪ್ರಸಿದ್ಧ ಕತೆಗಾರರ ಕಥಾಸಂಗ್ರಹ.

ಬೇಗನೆ ಹೊಂದೇಕು ...

ಸ್ವದೇಶಾಭಿಮಾನಿ

EDITED, PRINTED & PUBLISHED BY V. S. KUDVA AT THE SHARADA PRESS, MANGA...

ಸ್ವದೇಶಾಭಿಮಾನಿ.

(... ಪಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

... ಮಂಗಳೂರು ಶಾರದಾ ... ಪ್ರಕಟವಾಗುವ ವಾರಪತ್ರಿಕೆ.

ಮಂಗಳೂರು ... ಶುಕ್ರವಾರ ಒಕ್ಟೋಬರ ೧೯೩೩ (27-10-'33) ಸಂಚಿಕೆ ...

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras.**

ಹೆಡ್ ಆಫೀಸು—ಉಡುಪಿ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000-

ನಿಯಮಿತ ಮೂಲಧನ ರೂ. 3,50,000- ... ಪ್ರಕ್ರಿಯ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 30TH SEPTEMBER, 1933.

	Capital and Liabilities.	Rs.		Property and Assets	Rs.
1	Paid up Capital	2,25,000-0-0	1	Bank Premises, Buildings, Furniture etc.	66,863-7-9
2	Reserve and other funds	2,35,000-0-0	2	Investment on Gvt. securities	3,00,560-8-6
3	Deposits	22,02,425-12-9	3	Authorised Investments	23,21,009-9-5
4	Due to Bankers	18,722-6-4	4	Bills for collection	13,385-8-6
5	Sundries	92,674-3-8	5	Sundries	29,120-7-6
6	Bills for collection per contra	13,385-8-6	6	Cash on hand & with bankers.	56,178-3-7
	Total	27,87,207-15-3		Total	27,87,207-15-3

UDIPI, 3-10-'33.

N. ANANDA RAO,
Secretary & Manager

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಛಾತಿ ನೋವು, ವಿಶೇಷ ಗುಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ! ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಡೋಂಗರೆ

ಬಾಲಾಮೃತ

ಓದಲಿಕ್ಕೂ, ಜಾಹೀರಾತು ಕೊಡಲಿಕ್ಕೂ ಮಕ್ಕಳಿಗೂ, ದೊಡ್ಡವರಿಗೂ, ಹಳ್ಳಿಯವರಿಗೂ, ಪೇಟೆಯವರಿಗೂ, ವಿದ್ಯೆ ಇದ್ದವರಿಗೂ, ಇಲ್ಲದವರಿಗೂ, ಬೇಕಾದ,

ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ ಪತ್ರಿಕೆ

ಸ್ವದೇಶಾಭಿಮಾನಿ

27 ವರ್ಷಗಳ ನವತರುಣ!

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯ ಔಷಧವಾಗಿದೆ. ಕ್ರಯ 1-8-0

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೋರೆಟರಿಯವರಿಂದ ಸಿದ್ಧವಾದುದು.

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್—

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd. Cross Road, Srirampur Extn.
Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಶಾಥಿ ಷ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂಥ

ಚಕ್ ರೋಲ್ ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಕೋ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ತರುಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು.

THE SOUTH INDIA CO-OPERATIVE INSURANCE SOCIETY, LIMITED, MADRAS.

LOCAL BOARD:—

THE SOUTH CANARA CENTRAL CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

FOR TERMS APPLY TO:—

The Secretary,
South Canara Central Co-operative Bank, Ltd., KODIALBAIL P. O. (Mangalore)
SOUTH CANARA

ಮನೋಹರ ಗ್ರಂಥಮಾಲಾ, ಧಾರವಾಡ.

ಮೊದಲನೆಯ ಕುಸುಮ.

ಸುದರ್ಶನ (ಸ್ವತಂತ್ರ ಸಮಾಜಿಕ ಕಾದಂಬರಿ)

ಬರೆದವರು ಆನಂದಕಂದ.

ಎರಡನೆಯ ಕುಸುಮ—

ಕರ್ನಾಟಕ ಪ್ರಸಿದ್ಧ ಕಥೆಗಾರರ ಕಥಾಸಂಗ್ರಹ.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

[illegible] ಮಾನಿ.

(... ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

... ಮಂಗಳೂರು ... ಪ್ರಕಟವಾಗುವ ವಾರಪತ್ರಿಕೆ.

[illegible] ಸ್ವದೇಶಿ ... ನಿಶ್ಚಿತಾರ್ಥಾ ... ಧೀರಾ ॥ ೧ ॥

[illegible] ಮತ್ತೆ ನಿಮ್ಮದ ಸುಡುಕ ಬರುತಿರುವ ॥

[illegible] ಕರಡ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೯ ॥

[illegible] ಮಂಗಳೂರು ತಾ ೨೭ನೇ ಶುಕ್ರವಾರ ಒಕ್ಟೋಬರ ೧೯೩೩ (27 - 10 - '33) ಸಂಚಿಕೆ ೪೨

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

ಹೆಡ್ ಆಫೀಸು—ಉಡುಪಿ ಶಾಖೆ - ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000-

ನಿಯಮಿತ ಮೂಲಧನ ರೂ 3,50,000- [illegible] ಆಗಿಸಿದ ವ ಎತ್ತಿದ ಮೂಲಧನ ರೂ 2,25 000-

STATEMENT OF ASSETS & LIABILITIES AS ON 30TH SEPTEMBER 1933

	Capital and Liabilities.			Property and Assets	
1	Paid up Capital	Rs. 2,25,000-0-0	1	Bank Premises, Buildings, Furniture etc Rs	66 86 [illegible] 9
2	Reserve and other funds	" 2,35,000-0-0	2	Investment on Gvt. securities	" [illegible] 00 [illegible]60 [illegible] 6
3	Deposits	" 22,02,425 12 9	3	Authorised Investments	23 21 009 9 [illegible]
4	Due to Bankers	" 18,722- 6-4	4	Bills for collection	3 385 8 6
5	Sundries	" 92,674- 3 8	5	Sundries	29 120 6
6	Bills for collection per contra	13,385-8 6	6	Cash on hand & with bankers	[illegible]
	Total	27,87,207-15 3		Total	[illegible]

Udipi, 3-10-33.

N. ANANDA RAO
Secretary & Manager

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಚ್ಚುಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ ಬಹು ಶೀತ, ನೋವುಳ್ಳ ಗಳೆ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲಲ್ಲಿಯೂ ಮಾರಲ್ಪಡುತ್ತದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಹಚ್ಚುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ; ಡಜನಿಗೆ ರೂ- 3—8—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದ್ರಾಸು ಮತ್ತು ಬೊಂಬಾಯಿ.

ಡೋಂಗರೆ

ಅವರ

ಬಾಲಾಮೃತ

ಇದನ್ನು [illegible]

ಓದಲಿಕ್ಕೂ, ಜಾಹೀರಾತು ಕೊಡಲಿಕ್ಕೂ ಮಕ್ಕಳಿಗೂ, ದೊಡ್ಡವರಿಗೂ ಹಳ್ಳಿಯವರಿಗೂ, ಪೇಟೆಯವರಿಗೂ, ವಿದ್ಯೆ ಇದ್ದವರಿಗೂ, ಇಲ್ಲದವರಿಗೂ ಬೇಕಾದ,

ನಮ್ಮ, ನಿಮ್ಮ, ಎಲ್ಲರ, ಸ್ವಾತಂತ್ರ್ಯಕಾಂಕ್ಷಿಗಳ ಪತ್ರಿಕೆ

ಸ್ವದೇಶಾಭಿಮಾನಿ

27 ವರ್ಷಗಳ ನವತರುಣ!



ಓವಲ್ಟಿನ್‌ನಿಂದ ಮಕ್ಕಳು
ದೃಢಕಾಯರಾಗಿಯೂ
ಆರೋಗ್ಯರಾಗಿಯೂ ಬೆಳೆಯುತ್ತಾರೆ

ಮಕ್ಕಳಿಗೆ ಸಾಕಷ್ಟು ಪೋಷಣೆಯು ... ನೀವು ... ಆರೋಗ್ಯ ಬಲ ... ವೃದ್ಧಿಗಾಗಿ ಮಾಡಬೇಕು ಅಂತಹ ಪೋಷಣೆಯು ... ಆಹಾರ ಪದಾರ್ಥಗಳಲ್ಲಿರುವುದಿಲ್ಲ ಅದಕ್ಕಾಗಿಯೇ 'ಓವಲ್ಟಿನ್' ...

ಬೆಳೆಯುತ್ತಿರುವ ಮಕ್ಕಳಿಗೆ ಬೇಕಾದ ಆರೋಗ್ಯ ಬಲ, ಶಕ್ತಿಗಳ ವರ್ಧನೆಗಾಗಿ ... ವಾದ ಮತ್ತು ಸಂಪೂರ್ಣಯಾದ 'ಓವಲ್ಟಿನ್' ಬೇಕು ಅದು ರುಚಿಕರವಾಗಿದ್ದು ಎಲ್ಲಾ ಮಕ್ಕಳೂ ಸೇವಿಸಲು ಸಂತೋಷಗೊಳ್ಳುತ್ತವೆ

ಓವಲ್ಟಿನ್ನು ಪ್ರಕೃತಿಯ ಆಹಾರವಾದ ಬಾರ್ಲಿ ... ಹಾಲು, ಮತ್ತು ಕೋಳಿಮೊಟ್ಟೆಗಳಿಂದ ತಯಾರಿಸಲಾಗುತ್ತದೆ ತಯಾರಿಯಲ್ಲಿ ... ಇರುವುದಿಲ್ಲ

OVALTINE
TONIC FOOD BEVERAGE

ಮೆದುಳು ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ

[illegible] ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

[illegible] ಸ್ಪೆನ್ಸರ್ ಕಲ್ಕತ್ತ ಮತ್ತು ಬೊಂಬಾಯಿ, ಮದ್ರಾಸ್ ಡಿಪೋಗಳಲ್ಲಿ

OV/182

1-9-38

ಪಂಡಿತ ಬಿ ಆರ್ ಗೋವಿಂದ ರಾಜುಲು ನಾಯುಡು ಯವರ

ಮೋಹ ಸಂಜೀವಿನಿ ಎಣ್ಣೆ

[illegible] ಅನರ್ಥಕಾರಿಯಾದ ಅನೇಕ [illegible] ದುಷ್ಟ ಸ್ಥಿತಿಯಲ್ಲಿ ತಮ್ಮ ... ಯುವೆಂಬ ಅಮೋಘ ವಸ್ತುವನು ಧಾರೆಯೆರೆದು ... ಬಿಳುಪು ಭಗಂದರ, ತೊಡೆವಾಳ ... ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ಶರೀರವು ... ಪಡುತ್ತಿರುವ ನಮ್ಮ ದೇಶೀಯ ... ಯೌವನಸ್ಥರಿಗೆ ಈ ಔಷಧವು ... ವನ್ನೇ ಕಲ್ಪಿಸಕೊಡುವುದಾಗಿರುವುದು ... ಔಷಧ ... ರೋಗವು ... ಕಾಲಾಂತರಗಳವರಿಗೂ ಹುಟ್ಟುತ್ತಾ ತನ್ನ ... ವನ್ನು ಆ ವಂಶದಲ್ಲಿ ನೆಲೆಗೊಳಿಸುವುದೆಂಬುದೇ ವೈದ್ಯ ಶಾಸ್ತ್ರದ ... ಇಂತಹ ಮಹಾ ಭಯಂಕರ ... ವ್ಯಕ್ತಿಗೆ ... ಈ ಔಷಧವನ್ನು ವೈದ್ಯ ಶಾಸ್ತ್ರಗಳ ಆಧಾರದಿಂದ ... ಗಳ ಸಂಯೋಜನದಿಂದ ... ಸರ್ಟಿಫಿಕೇಟುಗಳು ನಮ್ಮ ವೈದ್ಯ ಶಾಲೆಯಲ್ಲಿ ... ಸಂಜೀವಿನಿ ಎಣ್ಣೆಯು ಸೇವನೆಯಿಂದ ಸ್ತ್ರೀಪುರುಷರಿಗೆ ... [illegible]

[illegible]

[illegible]

... ಗಾಂಧಿಜೀಯವರ ... ಸಂಗ್ರಾಮಕ್ಕೆ ... [illegible]

ನಮ್ಮ ... ಅನಂತರ ಬಡ ... ಕಾಲ ಬರುವಂತೆ ಮಾಡಬೇಡ ... [illegible]

× × × ×

... ಸರ್ಕಾರದವರಿಗೆ ಹಗಲು ... ಇದು ... ಅದೃಷ್ಟ ... ಕೂಡಾ ನಮ್ಮ ಅದೃಷ್ಟದಿಂದ ... [illegible]

× × × ×

... ಕಡೆಯಿಂದ ... ಬಿಲ್ಲು' ಒಂದು ಕಡೆಯಿಂದ ... ಬಿಲ್ಲು' ... ಗಾಂಧಿಯ ಬಿಲ್ಲು ... ಹೇಗೆ ... ಹೇಳಿ!!

× × × ×

ಗಾಂಧೀಜೀಯವರು ... ಗುಂಡಾಗಿದ್ದಾರೆ ... [illegible]

[illegible]

... ಗಾಂಧಿ ... [illegible]

[illegible]

Canara Bank Limited.

Established 1906.

Authorised Capital	10,00000-0-0
Subscribed capital	6,00,000—0—0
Paid up Capital	3,30,000—0—0
Reserves	4,31,000-0-0

Head Office—Bunder Mangalore Local Office—City & Bunder

BRANCHES— Bombay, Cochin Calicut, Ernaculam, Alleppey, Chikmagalur Ganguli Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Bank Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

ಮಂಗಳೂರು,
12—7—33

A Madhava Pal,
Secretary

East & West Insurance Company Ltd.,

(Incorporated in India 1913)

Head Office—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders
&
Wide popularity
Economic Management
Sound investment
That is why you should select East & West"
Ere you invest in the rest

Interim Bonus Declared Rs 15 Per 1000 On whole life & Endowment Policies

For particulars and Agency terms apply to —
H S Nayak, *Organiser Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ಸೋಪನ್ನು ಪಡೆಯುವಾಗ ನೀವು ಪರಿಶುಭ್ರತೆಗೆ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾ ರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾವಲ್ಯತೆಯು ಎಷ್ಟೆಂದು ತಿಳಿಯುವುದು

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟುಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ತೆಳುವಾದ ಚರ್ಮವೂ ಬಾಧಕ ಹೊಂದುವುದಿಲ್ಲ ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು.

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್ — ಪನ್ ಬ್ರೆಂಡ್ ಕೊಡೆಯ ಪ್ರಖ್ಯಾತಿಯ ಸೇಟ್ ನಾಗ್‌ಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ

ಈ ಜಿಲ್ಲೆಗೆ ಪ್ರವರ್ತಕರು—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗೆಲಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಸಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3-12-0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3-8-0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀತಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕ್ಯಾಮಿಂಗೆ ಮಿಶ್ಯನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಿಸ್ (ಕಾಶೀ)

— ಗಡಿಯಾಳ ಪುಕ್ಕಟೆ —

ಪಡುವಿನಾಳಿ ಮುಲಮು —ಗಜಕರ್ಣ, ಕಜ್ಜಿ, ಇಸಬು, ನಾಯಟ ಮುಂತಾದ ಎಲ್ಲಾ ಚರ್ಮರೋಗದ ಮೇಲೆ ಪಂದೇ ರಾಮಬಾಣ ಔಷಧಿ, ೨೪ ತಾಸಿನಲ್ಲಿ ಗುಣಬರುತ್ತದೆ ಸಾವಿರಾರು ಜನರು ಶಿಫಾರಸು ಮಾಡಿರುತ್ತಾರೆ. ಕಿಮ್ಮತ್ತು ಡಬ್ಬಿ ೧ರ ಆಣೆ ೦—೪—೦. ೧೨ರ ಮೇಲೆ ಟೈಂಪೀಸು, ೧೮ರ ಮೇಲೆ ಅಲಾರ್ಮ ಟೈಂಪೀಸು, ೨೪ರ ಮೇಲೆ ರಾಸ್ಕೋಪ, ೩೬ರ ಮೇಲೆ ರಿಸ್ಟವಾಚ್ ಪುಕ್ಕಟೆ ಸಿಗುವುದು ಕೂಡಲೇ ಬರೆಯಿರಿ. ಪತ್ರವ್ಯವಹಾರ ಮರಾಠಿ ಯಾ ಇಂಗ್ಲೀಷಿನಲ್ಲಿ

King George Coronation,
BOBMAY 4
16—6—33 (Head Office—Kotah Rajputana)

(11—8)

DOCTOR·HAKIM·VAIDYA

ಡಾಕ್ಟರರು ಹಕೀಮರು ವೈದ್ಯರು

ಇವರೆಲ್ಲ ಏಕಕಂಠದಿಂದ

French Barqi Water

"ಫ್ರೆಂಚ್ ಬಾರ್ಕಿ ವಾಟರ್‌ನಿಂದಾಗಿ"

80 ವರ್ಷ ಪ್ರಾಯದಲ್ಲೂ ವಿವಾಹವಾಗಲು ಸಾಧ್ಯವೆಂದು ಹೇಳಿರುವರು ಎಲ್ಲಾ ಸ್ತ್ರೀ ಪುರುಷರ ವೀರ್ಯ ದೋಷಗಳಿಗೆ ಇದು ಪರಮೋತ್ಕೃಷ್ಟವಾದ ಔಷಧಿ. ಈ ಔಷಧಿಯು ಫ್ರೆಂಚ್ ಡಾಕ್ಟರನೊಬ್ಬನಿಂದ ಕಂಡುಹಿಡಿಯಲ್ಪಟ್ಟಿತು. ಆದುದರಿಂದ 'ಫ್ರೆಂಚ್ ಬಾರ್ಕಿ ವಾಟರ್' ಎಂದು ಲೋಕ ಪ್ರಸಿದ್ಧಿಯಾಯಿತು ತಾರುಣ್ಯದ ದುರಾಭ್ಯಾಸಗಳಿಂದ ಪುರುಷತ್ವವನ್ನು ಕಳೆದುಕೊಂಡಿರುವವರಿಗೆ ಇದು ಸ್ವರ್ಗದ ವರವಾಗಿರುತ್ತದೆಂಬುದು ಖಾತ್ರಿ.

ಫ್ರೆಂಚ್ ಬಾರ್ಕಿ ವಾಟರ್—ಮುದುಕರನ್ನು ತರುಣರನ್ನಾಗಿ ಮಾಡುತ್ತೆ,
ಫ್ರೆಂಚ್ ಬಾರ್ಕಿ ವಾಟರ್—ಹೋದ ಶಕ್ತಿಯನ್ನು ೧೨ ಗಂಟೆಗಳೊಳಗೆ ತಂದುಕೊಡುತ್ತದೆ,
ಫ್ರೆಂಚ್ ಬಾರ್ಕಿ ವಾಟರ್—ಸ್ತ್ರೀ ಪುರುಷರಿಗೆ ಸಂತತಿಯುತ್ಪನ್ನ ಶಕ್ತಿಯನ್ನೀಯುತ್ತದೆ

ಹಾಳಾದ ಪುರುಷತ್ವವನ್ನು ವೃದ್ಧಿಸುವ ದಿವ್ಯ ಮದ್ದು ಇದರ ಒಂದು ತಟಕು ನೀರೆಂದರೆ ದೇಹಕ್ಕೆ ೧೨ ತಟಕು ರಕ್ತ ದೊರೆತಂತೆ. ಸ್ತ್ರೀಯರಲ್ಲಿ ಸಂತತಿಯುತ್ಪನ್ನಗೊಳಿಸುತ್ತೆ ಔಷಧಿಯೊಡನೆ ಉಪಯೋಗದ ಅನುಪಾನ ಕಳುಹಿಸುತ್ತೆ ಒಂದು ಬಾಟ್ಲಿಗೆ ರೂ 3—8—0 ನಾಲ್ಕು ಬಾಟ್ಲಿಗಳನ್ನು ಪಡೆದವರಿಗೆ ಒಂದು ಬಾಟ್ಲಿ ಧರ್ಮಾರ್ಥ ಅಂಚೆ ಹಾಸಲು ಆಣೆ 8 ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಿರಿ.

Bargi Depot,
Kothe No. 44, Kushak St. MUTTRA.

LOOK HERE!

We have got for sale all kinds of freshly prepared Exercise books, Note books and Diaries etc,

SHARADA PRESS,
Car Street, Mangalore

ಶ್ರೀ ವಿ. ಜೆ. ಪಟೇಲರು ದೈವಾಧೀನರಾದರು!!!

ಅವರ ಅಂತ್ಯ ಸಂದೇಶ. ಅವರ ದೇಶಪ್ರೇಮ

ಪ್ರಪಂಚದಲ್ಲೆಲ್ಲಾ ಸಂತಾಪ ಸೂಚನೆ

"Give my blessings to all my countrymen and all friends in India throughout the world. Before I die, I am praying for the early attainment of India's freedom."

"ನನ್ನ ಆಶೀರ್ವಾದವನ್ನು ನನ್ನ ಎಲ್ಲಾ ದೇಶ ಬಾಂಧವರಿಗೂ ಹಿಂದೂಸ್ಥಾನ ಮತ್ತು ಜಗತ್ತಿನ ಮಿತ್ರರಿಗೂ ಅರ್ಪಿಸಿರಿ. ನಾನು ಮರಣ ಹೊಂದುವ ಮೊದಲು ಹಿಂದೂದೇಶವು ಶೀಘ್ರದಲ್ಲೇ ಸ್ವಾತಂತ್ರ್ಯವನ್ನು ಹೊಂದಲೆಂದು ಪ್ರಾರ್ಥಿಸುತ್ತೇನೆ." — ಶ್ರೀ ವಿ. ಜೆ. ಪಟೇಲರು

ಶ್ರೀಯುತ ವಿ. ಜೆ. ಪಟೇಲರು ಅಸ್ವಸ್ಥರಾಗಿದ್ದು ಹೆಚ್ಚಿನ ಅಪಾಯಕ್ಕೆ ಗುರಿಯಾಗಿರುವರೆಂದು ಪ್ರಕಟಿಸಿದ್ದೆವಷ್ಟೆ! ತಾ. ೨೨ನೇ ದಿನ ಜಿನೀವಾದಿಂದ ಬಂದ ವಾರ್ತೆಯಿಂದಾಗಿ ಅವರು ತಾ. ೨೨ನೇ ರಾತ್ರಿ ೩-೩೦ ಘಂಟೆಗೆ ದೈವಾಧೀನರಾದರೆಂದು ತಿಳಿದು ಬರುತ್ತದೆ. ಶನಿವಾರ ರಾತ್ರಿ ಅವರ ಸ್ಥಿತಿಯು ವಿಪರೀತ ವಿಷಮತೆಗೆ ಮುಟ್ಟಿತು. ಆ ರಾತ್ರಿಯನ್ನು ಅವರು ಕಳೆಯುವುದೇ ದುಸ್ಸಾಧ್ಯವೆಂದು ಎಲ್ಲರೂ ತಿಳಿದರು. ಸಂಜೆ ಪ್ರಕಟವಾದ ಬುಲ್ಲೆಟಿನಿನಲ್ಲಿ ಪಟೇಲರ ಸ್ಥಿತಿಯು ಅತ್ಯಂತ ಆತಂಕಜನಕವಾಗಿದೆಯೆಂದು ತಿಳಿಸಲಾಯಿತು. ಅದಾದ ಕೆಲವು ತಾಸುಗಳಲ್ಲೇ ಅವರ ಮರಣ ವಾರ್ತೆಯು ಜಿನೀವಾದಲ್ಲಿ ಬೆಂಕಿಯಂತೆ ಹರಡಿತು. ಮರಣ ಹೊಂದುವ ವರೆಗೂ ಶ್ರೀಯುತರು ಪ್ರಜ್ಞೆಯಲ್ಲೇ ಇದ್ದರು. ಪ್ರಾಣ ವಾಯುವು ಹಾರಿ ಹೋಗುವ ಮೊದಲು ಅವರು **"ನನ್ನ ಆಶೀರ್ವಾದವನ್ನು ನನ್ನ ಎಲ್ಲಾ ದೇಶ ಬಾಂಧವರಿಗೂ ಹಿಂದೂಸ್ಥಾನ ಮತ್ತು ಜಗತ್ತಿನ ಮಿತ್ರರಿಗೂ ಅರ್ಪಿಸಿರಿ ನಾನು ಮರಣ ಹೊಂದುವ ಮೊದಲು ಹಿಂದೂದೇಶವು ಶೀಘ್ರದಲ್ಲೇ ಸ್ವಾತಂತ್ರ್ಯವನ್ನು ಹೊಂದಲೆಂದು ಪ್ರಾರ್ಥಿಸುತ್ತೇನೆ"** ಎಂದು ಹೇಳಿದರು.

ಸಂಕ್ಷಿಪ್ತ ಜೀವನ ಚರಿತ್ರೆ.

ಶ್ರೀ ವಿ. ಜೆ. ಪಟೇಲರು ಗುಜರಾಥಿನ ನಡಿಯಾದಿನಲ್ಲಿ ಜನಿಸಿದರು. ಇವರ ಹಿರಿಯರು ಕೃಷಿಕರು. ಇವರ ತಂದೆಗೆ ಮೂವರು ಮಕ್ಕಳು. ಹಿರಿಯ ಮಗನು ಕೆಲವು ವರ್ಷಗಳ ಹಿಂದೆ ತೀರಿಕೊಂಡನು. ವಿಟ್ಠಲ್ ಬಾಯಿ ಜವೇರ್ ಬಾಯಿ ಪಟೇಲರು ಸುಶಿಕ್ಷಿತರಾದರು. ಇವರೊಡನೆ ಇವರ ಸಹೋದರರಾದ ಶ್ರೀ ವಲ್ಲಭಬಾಯಿ ಪಟೇಲರೂ ವಿದ್ಯಾಭ್ಯಾಸಂಗ ಮಾಡಿದರು. ಇಬ್ಬರು ಸಹೋದರರೂ ಗುಜರಾಥಿನ ಸಾಮಾಜಿಕ ವ್ಯವಹಾರಗಳಲ್ಲಿ ಮುಂದರಿಯುಟ್ಟರು. ಮುಂಬಾಯಿ ಅಹ್ಮದಾಬಾದುಗಳಲ್ಲಿ ಇವರ ಹೆಸರು ಹರಡಿತು. ಶ್ರೀ ವಿಟ್ಠಲ್‌ಬಾಯಿಯವರೂ, ಶ್ರೀ ವಲ್ಲಭಬಾಯಿಯವರೂ ಇಂಗ್ಲಾಂಡಿಗೆ ತೆರಳಿ ಅಲ್ಲಿ ಬಾರ್-ಅಟ್-ಲಾ ಪರೀಕ್ಷೆ ಪಾಸಾಗಿ ಮುಂಬಾಯಿಗೆ ಹಿಂತಿರುಗಿ, ವಕಾಲತ್ತಿನಲ್ಲಿ ಯಶಸ್ಸನ್ನು ಪಡೆದರು. ಇಬ್ಬರು ಸಹೋದರರ ಐಂತರ್ಯವೂ ಅಧಿಕಾರವನ್ನು ಅಪೇಕ್ಷಿಸಿರಲಿಲ್ಲವಾದರೂ, ಇವರ ಶಕ್ತಿ ಸಾಮರ್ಥ್ಯಗಳು ಇವರನ್ನು ಕೀರ್ತಿಶಾಲಿಗಳನ್ನಾಗಿ ಮಾಡಿದುವು. ವಿ. ಜೆ. ಪಟೇಲರು ಬಾಲ್ಯದಿಂದಲೂ ಹಠವಾದಿಗಳು. ಇವರು ಮಹಾತ್ಮಾ ಗಾಂಧಿಯವರ ಸಾತ್ವಿಕ ಸಂದೇಶಕ್ಕೆ ಬಗ್ಗಲಾರದಾದರು. ಆದರೆ ವಲ್ಲಭಬಾಯಿಯವರು ಮಾತ್ರ ಗಾಂಧೀಜಿಯವರ ನಮ್ರ ಭಕ್ತರಾದರು. ಈ ಇಬ್ಬರು ಸಹೋದರರೂ ಭಿನ್ನಾಭಿಪ್ರಾಯವುಳ್ಳವರಾದ ಸಂದರ್ಭಗಳೂ ಇವೆ. ಆದರೂ ಇಬ್ಬರ ಗುರಿಯೂ ರಾಷ್ಟ್ರಸೇವೆಯೇ ಆಗಿತ್ತು. ಕೆಲವು ವರ್ಷಗಳಲ್ಲೇ ಗುಜರಾಥ ಪ್ರಾಂತ್ಯವು ಈ ಪಟೇಲರುಗಳ ಪ್ರತಿಭೆಗೊಳಗಾಯಿತು. ವಿ. ಜೆ. ಪಟೇಲರು ಮುಂಬಾಯಿ ಕೊರ್ಪರೇಶನಿಗೆ ಚುನಾಯಿತರಾದರು. ಅಂದಿನಿಂದ ರಾಷ್ಟ್ರೀಯ ಕಾರ್ಯದಲ್ಲಿ ಅವರ ಜೀವನವು ಹೊಸ ಹೆದ್ದಾರಿಯನ್ನು ಹಿಡಿಯಿತು. ಈಗ ವೈಸರಾಯರಾಗಿರುವ ಲೋರ್ಡ್ ವಿಲ್ಲಿಂಗ್ಡನ್ನರು ಮುಂಬಾಯಿ ಗವರ್ನರರಾಗಿದ್ದಾಗ ಪಟೇಲರ ರಾಷ್ಟ್ರ ಸೇವಾ ಕಾರ್ಯಗಳು ಭರದಿಂದ ನಡೆದುವು. ವಿಲ್ಲಿಂಗ್ಡನ್ನರಿಗೂ ಪಟೇಲರ ಸಾಮರ್ಥ್ಯದ ಅರಿವಿದ್ದಿತು. ಇದೇ ಸಮಯದಲ್ಲಿ ಹೋಮ್‌ರೂಲ್ ಚಳವಳಿ ಮುಂಬಾಗಿತು. ಲೋಕಮಾನ್ಯ ಬಾಲ ಗಂಗಾಧರ ತಿಲಕರ ಕಾರ್ಯರಂಗವು ವಿಸ್ತಾರವಾದುದು ಇದೇ ಸಮಯದಲ್ಲೇ! ೧೯೧೮ರಲ್ಲಿ ಮುಂಬಾಯಿ ಸ್ಪೆಶಲ್ ಕಾಂಗ್ರೆಸ್ ಸಭೆಯ ಸ್ವಾಗತ ಕಮಿಟಿಯ ಛೇರ್ಮನರಾದರು. ೧೯೧೮-೧೯೧೯ರಲ್ಲಿ ಅವರು ಮೊಂಟೆಗೊ ಚೆಮ್ಸ್‌ಫರ್ಡ್ ರಿಫೋರ್ಮ್ ಬಿಲ್‌ನ ಕುರಿತು ಸಾಕ್ಷ್ಯ ಹೇಳಲು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಲಂಡನ್ನಿಗೆ ಹೋದರು.

ಮೊಡರೇಟ್ ಪಕ್ಷವನ್ನು ಎದುರಾಯಿಸಿ ತಿಲಕರ ಅನುಗಾಮಿಯಾಗಿ ಇವರು ನಿಂತರು. ತಾನು ಐಯರ್ಲೆಂಡಿನಲ್ಲಿ ಅರಿತ ರಾಜಕೀಯ ಅನುಭವದ ಮೇರೆಗೆ ಹಿಂದೀಯರು ಕೌನ್ಸಿಲು ಪ್ರವೇಶ ಮಾಡಿ ಚಳವಳಿಸಬೇಕೆಂದು ಅವರು ನಿರ್ಧರಿಸಿದರು. ಅಷ್ಟರಲ್ಲಿ ಮಹಾತ್ಮರ ಅಸಹಕಾರ ಚಳವಳಿವು ತಲೆದೋರಿ ಅವರ ಆಶಯವು ನೆರವೇರದಾಯಿತು. ಕೆಲವು ಸಮಯವು ದಾಟುತ್ತಲೇ ಕಾಂಗ್ರೆಸ್ಸಿನ ಒಲವು ಕುಗ್ಗಿತ್ತು. ಬಂತು ಆಗ ಬಿಡುಗಡೆ ಹೊಂದಿದ ದಿವಂಗತ ಸಿ. ಆರ್. ದಾಸರೂ ಇನ್ನಿತರ ಧುರೀಣರೂ ಪಟೇಲರೊಡಗೂಡಿ ಅಸಹಕಾರತೆಯ ಸೂತ್ರವು ಮುರಿದು ಬೀಳದಂತೆ ಕೌನ್ಸಿಲು ಪ್ರವೇಶ ಮಾಡಬೇಕೆಂದು ನಿರ್ಧರಿಸಿದರು. ಕೌನ್ಸಿಲು ಪ್ರವೇಶವಾದೊಡನೆ ಪಟೇಲರ ಚಳವಳಿಕ್ಕೆ ಮೊದಲಾಯಿತು. ಫೈನಾನ್ಸ್ ಬಿಲ್ ಮೊದಲಾದುವುಗಳು ಚರ್ಚೆಗೆ ಬಂದಾಗ ಶ್ರೀ ಪಟೇಲರು ರಾಷ್ಟ್ರೀಯ ಹಿತದೃಷ್ಟಿಯಿಂದ ದಿನಗಟ್ಟಳೆಯಾಗಿ ಚಳವಳಿಸಿದರು. ೧೯೨೫ರಲ್ಲಿ ನ್ಯಾಯ ವಿಧಾಯಕ ಸಭೆಯ ಅಧ್ಯಕ್ಷತೆಗೆ ಸ್ವರಾಜ್ಯ ಪಾರ್ಟಿಯವರ ಪರವಾಗಿ ಶ್ರೀ ಪಟೇಲರು ನಿಂತರು. ಸರಕಾರವು ಅವರಿಗೆ ವಿರೋಧವಾಗಿದ್ದರೂ ಮಹಾ ಸಾಹಸದಿಂದ ಶ್ರೀ ಪಟೇಲರೇ ಅದರ ಅಧ್ಯಕ್ಷರಾಗಿ ಚುನಾಯಿತರಾದರು. ಆ ಪದವಿಯಲ್ಲಿದ್ದು ಅವರು ನಿರಂತರವೂ ದೇಶ ಹಿತ ದೃಷ್ಟಿಯಿಂದಲೇ ಶಾಸನಗ



ದಿವಂಗತ ವಿ. ಜೆ. ಪಟೇಲರು.

ಳನ್ನು ರಚಿಸುವ ವ್ಯವಸ್ಥೆ ಮಾಡಿದರು. ರಿಸರ್ವ್ ಬ್ಯಾಂಕ್ ಬಿಲ್, ಪಬ್ಲಿಕ್ ಸೇಫ್ಟಿ ಬಿಲ್ ಮೊದಲಾದುವುಗಳು ಚರ್ಚೆಗೆ ಬಂದಾಗ ಅವರು ಅವುಗಳಿಂದ ದೇಶಕ್ಕಾಗುವ ಆಘಾತದ ವಾಸನೆಯನ್ನು ಪರಿಶೋಧಿಸಿ ಅವುಗಳು ಬಿದ್ದುಹೋಗುವಂತೆ ಮಾಡಿದರು. ಅವರ ರಾಷ್ಟ್ರೀಯವಾದವು ಅವರನ್ನು ವೈಸರಾಯರ ಎಚ್ಚರಿಕೆಗೆ ಬಲಿಯುಟ್ಟಿತು. ಆದರೂ ನ್ಯಾಯ ಮಾರ್ಗದಲ್ಲೇ ಇದ್ದ ಪಟೇಲರು ವೈಸರಾಯರಿಗೂ ತಕ್ಕ ಉತ್ತರವನ್ನಿತ್ತು ಅವರನ್ನು ಸಮ್ಮತದ ಹಾದಿಗೆಳೆದರು. ಇಷ್ಟಾಗುತ್ತಾ ೧೯೨೯-೩೦ರಲ್ಲಿ ರಾಷ್ಟ್ರೀಯ ಚಳವಳಿವು ಬಲವಾಗಿ ಮುಖಂಡರ ದಸ್ತಗಿರಿಗಳು ನಡೆದುವು. ಇದನ್ನು ಕಂಡು ಶ್ರೀ ಪಟೇಲರು ಅತ್ಯಂತ ದುಃಖಗೊಂಡು ೧೯೩೦ರ ಏಪ್ರಿಲ್ ೨೫ರಲ್ಲಿ ತನ್ನ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟರು. ಅವರು ತನ್ನ ರಾಜಿ ಅರ್ಜಿಯಲ್ಲಿ ಬರೆದ ವಾಕ್ಯಗಳು ಅತಿ ಹಾಸ ಪ್ರಸಿದ್ಧವಾಗುವುವು. "ದೇಶದ ಏಳ್ಗೆಗಾಗಿ ನಾನು ಯಾವ ಶಾಸನಗಳನ್ನೂ ಮಾಡಲು ಸಾಧ್ಯವಾಗುವುದಿಲ್ಲ. ಕೌನ್ಸಿಲರರು ಸರಕಾರದ ಬೇಕುಬೇಕಾದವನ್ನು ಸಭೆಯಲ್ಲಿಟ್ಟು ಚಳವಳಿಸುವರು. ದೇಶ ವಿರುದ್ಧ ಶಾಸನಗಳಿಗೆ ನನ್ನ ಸಮ್ಮತವಿಲ್ಲ, ದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆ. ಆತ್ಮನಾಶವನ್ನು ಮಾಡಿಕೊಳ್ಳುವುದರ ಬದಲು ನಾನು ನನ್ನ ದೇಶ ಬಾಂಧವರೊಡನೆ ಸ್ವಾತಂತ್ರ್ಯ ಸಾಧನೆಯನ್ನು ಮಾಡಿ ಸರಕಾರದ ಸಂಬಂಧವನ್ನು ಈ ರಾಜಿನಾಮೆಯೊಡನೆ ಅಂತ್ಯಗೊಳಿಸುವೆನು" ಎಂದು ಅವರು ಬರೆದು ವೈಸರಾಯರಿಗೆ ಕಳುಹಿಸಿದರು. ಹೀಗೆ ಅವರು ಅಧ್ಯಕ್ಷ ಪದವಿಯಿಂದ ಕೆಳಗಿಳಿದು ೧೯೩೦ರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಕೆಲಸ ಮಾಡುತ್ತಿದ್ದಾಗ ಡಾ| ಅನ್ಸಾರಿಯವರ ಮನೆಯಲ್ಲಿ ಕೈದು ಮಾಡಲ್ಪಟ್ಟರು. ಸೆರೆಮನೆಯನ್ನು ಸೇರಿದಂದಿನಿಂದ ಅವರ ದೇಹಾರೋಗ್ಯವು ಕೆಟ್ಟಿತು. ಆರೋಗ್ಯ ಸಂಪಾದನೆಗಾಗಿ ಅವರು ವಿಯೆನ್ನಾಕ್ಕೆ ತೆರಳಿದರು. ಅಲ್ಲಿ ಸ್ವಲ್ಪ ಗುಣ ಹೊಂದಿದೊಡನೆ ಇಂಗ್ಲಾಂಡಿಗೂ, ಅಲ್ಲಿಂದ ಹಿಂದೂದೇಶದ ನಿಜ ಸ್ಥಿತಿ ಗತಿಗಳನ್ನು ಅಮೆರಿಕದ ಜನಾಂಗಕ್ಕೆ ತಿಳುಹಿಸುವುದಕ್ಕಾಗಿ ಅವರು ಅಲ್ಲಿಗೂ ತೆರಳಿದರು. ಈ ಪ್ರಯಾಣದಿಂದಾಗಿ ಅವರ ದೇಹಾರೋಗ್ಯವು ಸಂಪೂರ್ಣ ಕೆಟ್ಟಿತು. ಅವರನ್ನು ಜಿನೀವಾಕ್ಕೊಯ್ಯಲಾಯಿತು. ಅಲ್ಲಿಂದ ಬರುತ್ತಿದ್ದ ವಾರ್ತೆಗಳಿಂದ ಅವರ ಸ್ಥಿತಿಯು ಆಶಾಜನಕವಾಗುತ್ತಿದೆಯೆಂದು ತಿಳಿದು ಬರುತ್ತಿತ್ತು. ಶ್ರೀ ಪಟೇಲರು ಇದೇ ನವಂಬರ ತಿಂಗಳಲ್ಲಿ ಹಿಂದೂಸ್ಥಾನಕ್ಕೆ ಹಿಂತೆರಳಬೇಕೆಂದಿದ್ದರು.

ಶ್ರೀಯುತ ಪಟೇಲರ ಮರಣ ವಾರ್ತೆಯು ಮುಂಬಾಯಿಯಲ್ಲಿ ಹರಡಿದೊಡನೆ ನಗರ ಸಂಗೀತ ಸಭೆಗಳು ಅರ್ಧದಾರಿಯಿಂದಲೇ ದುಃಖಿಸುತ್ತಾ ಹಿಂದೆ ಬಂದುವು. ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟುವು.

ಅವರ ಕುರಿತು ಅಭಿಪ್ರಾಯಗಳು.

ಲಾಹೋರಿನಲ್ಲಿ ಡಾ| ಮಹಮ್ಮದ್ ಆಲಂರವರು "ಶ್ರೀ ಪಟೇಲರು ಭರತವರ್ಷಕ್ಕಾಗಿಯೇ ಜೀವಿಸಿ ತೀರಿದರು. ನ್ಯಾಯ ವಿಧಾಯಕ ಸಭೆಯ ಅಧ್ಯಕ್ಷರಾಗಲು ಅವರಿಗಿಂತ ಯೋಗ್ಯರಾರು? ಅವರ ಅಡಿಗಳನ್ನು ಯೂರೋಪಿಯನ್ ಜೇಶಿಗರೂ ಅನುಸರಿಸುವರು" ಎಂದರು.

ಮುಂಬಾಯಿಯಲ್ಲಿ ಮೌಲಾನಾ ಶೌಕತಾಲಿಯವರು "ಪಟೇಲರ ಮರಣದಲ್ಲಿ ಹಿಂದೂಸ್ಥಾನವು ಒಬ್ಬ ಪ್ರತಿಭಾಶಾಲಿ ಯೋಧನನ್ನು ಕಳೆದುಕೊಂಡಂತಾಗಿದೆ. ಹತ್ತು ವರ್ಷಗಳಿಂದ ನಮ್ಮ ದೇಶದಲ್ಲಿ ಇಂತಹ ರಾಷ್ಟ್ರರತ್ನಗಳು ಉದುರಿ ಬೀಳತೊಡಗಿವೆ" ಎಂದರು.

ಕರಾಚಿಯಲ್ಲಿ ಮೆಯರರಾದ ಶ್ರೀ ಜಮ್ಷೆಡ್ ಮೇಥಾರವರು "ಭಿನ್ನ ಭಾವನೆಗಳಿದ್ದರೂ ಶ್ರೀಯುತರು ರಾಜಕೀಯ ಗುರುವಿಗೆ ವಿಧೇಯರಾಗಿಯೇ ಇದ್ದರು. ಘನ ವ್ಯಕ್ತಿಯಾಗುವ ಎಲ್ಲಾ ಚಿಹ್ನೆಗಳೂ ಅವರಲ್ಲಿದುವು. ಅವರು ಸಿರಿವಂತರೂ ಆಗಬಹುದಿದ್ದಿತು. ಆದರೆ ಅವರದನ್ನು ತೊರೆದು ಬಡತನದ ಹಾದಿಯನ್ನು ಹಿಡಿದರು. ಜೀವನದಲ್ಲಿ ಘನಸ್ಥಿಕೆಯಲ್ಲಿದ್ದಂತೆ ಅವರು ಮರಣದಲ್ಲೂ ಘನವಂತರೇ ಸರಿ" ಎಂದರು.

ಲಾಹೋರಿನಲ್ಲಿ ರಾಜಾ ನರೇಂದ್ರನಾಥರು "ಶ್ರೀ ಪಟೇಲರು ಹಿಂದೂಸ್ಥಾನದ ಉನ್ನತ ರಾಜಕೀಯ ಧುರೀಣರಲ್ಲೊಬ್ಬರು" ಎಂದರು.

ಶ್ರೀ ವಿ. ಜೆ. ಪಟೇಲರ ಕೊನೆಯ ಕೋರಿಕೆಯಂತೆ ಅವರ ಮೃತ ಶರೀರವನ್ನು ತಾ. ೨೭ನೇ ದಿನ 'ವಿಕ್ಟೋರಿಯಾ' ಎಂಬ ಇಟೆಲಿಯಾನ್ ಸ್ಟೀಮರಿನಲ್ಲಿರಿಸಿ ಮುಂಬಾಯಿಗೆ ತರಲಿರುವರು. ತಾ. ೪ ಅಥವಾ ೫ನೇ ನವಂಬರ ದಿನ ಶವವು ಮುಂಬಾಯಿಗೆ ತಲಪುವುದು. ಪ್ರಪಂಚದ ಎಲ್ಲಾ ಭಾಗಗಳಿಂದಲೂ ಜಿನೀವಾಕ್ಕೆ ಅನೇಕಾನೇಕ ಸಂತಾಪ ಸೂಚಕ ತಂತಿಗಳು ಬಂದಿವೆ. ಗಾಂಧೀಜಿಯವರು ಶ್ರೀಯುತರ ಕುರಿತು ಪ್ರಶಂಸನೀಯವಾಗಿ ನುಡಿಯುತ್ತಾ "ಶ್ರೀ ಪಟೇಲರ ಮರಣದಿಂದಾಗಿ ಬಹುಶ್ರಮಸಹಿಷ್ಣುವೂ ವಿಚಕ್ಷಣಶಾಲಿಯೂ ಆದ ರಾಜಕೀಯ ಧುರೀಣನನ್ನು ಕಳೆದುಕೊಂಡಂತಾಗಿದೆ. ಅವರ ಕಾರ್ಯತತ್ಪರತೆಯು ಆಶ್ಚರ್ಯಕರವಾದುದು. ಮುಂಬಾಯಿಯ ಕೊರ್ಪರೇಶನಿನಲ್ಲಾಗಲೀ ಅಥವಾ ನ್ಯಾಯವಿಧಾಯಕ ಸಭೆಯಲ್ಲಾಗಲೀ ಅವರು ಯಾವ ಕೆಲಸವನ್ನೂ ಬಾಕಿಯಿಡದೆ ಕೂಡಲೇ ಮಾಡುತ್ತಿದ್ದರು. ಈ ಸಂದಿಗ್ಧ ವೇಳೆಯಲ್ಲಿ ಅವರ ಮರಣದಿಂದ ದೇಶವು ಮಹಾನಷ್ಟಕ್ಕೆ ಗುರಿಯಾಯಿತು. ಶ್ರೀ ಸುಭಾಷ್ಚಂದ್ರ ಬೋಸರು ಸ್ವಿಟ್ಸರ್ಲೆಂಡಿನಲ್ಲಿ ಶ್ರೀ ಪಟೇಲರ ಅಷ್ಟೇ ಶುಶ್ರೂಷೆ ಮಾಡಿರುವುದು ಅಭಿನಂದನೀಯವಾಗಿದೆ" ಎಂದಿರುವರು.

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

[illegible]ಗಳು—

[illegible]

[illegible]

[illegible] ನಮ್ಮ ಸ್ವಸರಾಯರಾಗಿ[illegible] ಈಗ ಪಾರ್ಲಿಮೆಂಟಿನ [illegible] ಮೆಂಬರರಾಗಿ ನಮ್ಮ [illegible] ದೇಶಭಕ್ತಿಯನ್ನು ಟೀಕಿಸುತ್ತಾರೆ. ಹಿಂದೀಯರನ್ನು ಸೈನ್ಯಗಳಲ್ಲಿ ಉಪಯೋಗಿಸುವಾಗ ಅವರನ್ನು ಯುದ್ಧದ ಮೊದಲನೆ ಸಾಲಿನಲ್ಲಿ ನಿಲ್ಲಿಸದೆ, ಎರಡನೆ ಸಾಲಿನವರಾಗಿ ನಿಲ್ಲಿಸಬೇಕೆಂದು ಇವರ ಹೇಳಿಕೆ. ಯಾವಲ್ಲಿ ನೋಡಿದರೂ, ಹಿಂದೀ ಸಿಪಾಯರು ಅಪ್ರತಿಮರೆಂದು ಹೆಸರುಗಳಿಸಿರುವರು. ಇಂಗ್ಲಿಷ ಮಹಾ ಸೈನ್ಯಾಧ್ಯಕ್ಷರೂ ಹಾಗೆಯೇ ಬರೆದು ಸಾರಿರುವರು. ಯುದ್ಧ ಒದಗಿದಾಗ್ಯೆ, ಮೊದಲನೆ ಅಥವಾ ಎರಡನೆ ಸಾಲಿನವರೆಂದೇನೂ ಇರದೆ, ಗುಂಡಿಗೆ ಎದೆ ಕೊಡುವಧೈರ್ಯವುಳ್ಳವರೆಲ್ಲರನ್ನೂ ಮುಂದೊತ್ತುವರೆಂಬುದಕ್ಕೆ ಗಾಗ್ಗಾಳ—ಗಾಗ್ಗಲರಲ್ಲಿ ನಡೆದ ಮಹಾಯುದ್ಧ ಪುರಾವೆ. ರಾಜುವಾತಲ್ಲವೆ? ಫ್ಲೆಂಡರ್ಸಿನಲ್ಲಿ ಇಂಗ್ಲಿಷ ಸೇನಾಬಲವು ಬಹಳ ಪ್ರಬಲವಾಗಿತ್ತೇ? ಆಗ ಮೊದಲನೆ ಸಾಲಿನಲ್ಲಿ ಹೋರಾಡಲು ನಿಂತವರು ಹಿಂದೀಯರೇ, ಲೋರ್ಡರ ಮನೆತನದವರೇ? ಹಿಂದೀ ಸೈನ್ಯಾಧ್ಯಕ್ಷರೆಂದು ೩೯ ಮಂದಿಯನ್ನು ಆಗ ನೇಮಿಸಿದವರಲ್ಲಿ, ಅವರೇನು ಯಾವ ಕೋಲೇಜಿನಲ್ಲಿ ಎಷ್ಟು ಕಾಲ ತರಬೇತಾಗಿದ್ದವರು? ಅಡಚಣೆ ಒದಗಿದರೆ, ಎರಡನೆ ಪ್ಪೂರನೆ ಯಾಕೆ ಸಾವಿರನೆಯವರೂ ಮೊದಲನೆಯವರಿಗೂ ಮುಂದು! ಇದಾಯಿತ್ತೆ? ತಾನಲ್ಲದೆ ಇತರರೆಲ್ಲರೂ, ಹಿಂದೂಗಳಲ್ಲದವರೂ ಹಿಂದು ಹಿಂದೆಯೆ!

ಬಾಲಾ-ವೃದ್ಧ ವಿವಾಹ

ಮಧ್ಯಪ್ರಾಂತ್ಯಗಳ ಕೌನ್ಸಿಲಿನಲ್ಲಿ ಇಂತಹ ವಿವಾಹಗಳನ್ನು ಕೊನೆಗಾಣಿಸಲು ಒಂದು ಮಸೂದೆಯು ತಯಾರಾಗಿದೆ. ಸಮಾಜದಲ್ಲಿ ಹಣವಿದ್ದವರು ಎಷ್ಟೋ ಮುದುಕರಾದರೂ ಎಳೆಯ ಬಾಲಿಕೆಯರನ್ನು ವಿವಾಹವಾಗುವ ರೀತಿಯನ್ನು, ಯುವಕರು ಎಲ್ಲೆಲ್ಲಿಯೂ ಎದುರಾಡುತ್ತಿರುವರು, ಆದರೆ ಅದು ತೃಪ್ತಿಕರವಾಗದೆ, ಉಳಿದ ಕಾರಣ, ಇನ್ನು ಕಾನೂನು ಮೂಲಕವೇ ಅಂತಹ ವಿವಾಹಗಳನ್ನು ಜರುಗದಂತೆ ಮಾಡಬೇಕೆಂದೇ ಸಾರದಾ ಕಾನೂನು ಇದ್ದರೂ ಕೌನ್ಸಿಲು ಮೆಂಬರರು ತಯಾರಿಸಿರುವರು. ಇಂತಹ ವಿವಾಹಗಳ ಫಲಿತಾಂಶವಾಗಿ ಕನ್ಯಾವಿತಂತುಗಳ ಸಂಖ್ಯೆಯು ಏರುತ್ತಿದೆ, ಅನಂತರದಲ್ಲಿ ಅಂತೂ ಅಂತವರ ದುಃಖ ದುಸ್ಥಿತಿಗಳನ್ನು ಹೇಳಿ ಬರುವಂತಿಲ್ಲ. ಶ್ರೀಮಂತ ವೃದ್ಧರು ವಿಶೇಷ ಪ್ರಾಯ ಕೊಟ್ಟು ಹೆಣ್ಮಕ್ಕಳನ್ನು ಕ್ರಯಕ್ಕೆ ಕೊಂಡುಕೊಳ್ಳುವ ಕಾರಣ, ಇತರ ಸಂಪನ್ನ ಯುವಕರಿಗೆ ಯೋಗ್ಯ ವಧುಗಳು ದೊರೆಯುವರೆ ಉಪಾಯವಿಲ್ಲವಾಗಿದೆ ಎಂದೂ ಮಸೂದೆಯು ಹೇಳಿಕೆಯಿದೆ. ಪುನರ್ವಿವಾಹ ಪದ್ಧತಿಯಿಲ್ಲದ ಸಮಾಜಗಳಲ್ಲಿ ಈ ಕಾನೂನು ಬಳಕೆಗೆ ಬರುವಂತಾದರೆ ಸಮಾಜಕ್ಕೆ ಕ್ಷೇಮವುಂಟು.

ದಿವಂಗತ ವಿಟ್ಠಲ ಬಾಯಿ

ವಿಯೆನ್ನದಲ್ಲಿ ಶುಶ್ರೂಷೆಗೆಂದು ತೆರಳಿದ ವೀರ ವಿಟ್ಠಲಬಾಯಿ ಪಟೇಲರು, ಪ್ರಪಂಚದ ಜನಾಂಗ ಸಂಘವು ಸೇರುವ ದಿನವದಲ್ಲಿ ಅವರ ಕಳೇಬರವನ್ನು ತೊರೆದರು. ಅವರ ನಿಧನವೇನೂ ಅನಿರೀಕ್ಷಿತವಾದುದಲ್ಲ, ಆದರೂ, ದೇಹವನ್ನಿಡುವುದಕ್ಕೆ ಮಾತೃಭೂಮಿಗೆ ತೆರಳಲಿರುವೆನು ಎಂದು ಕಿಂಚಿತ್ತಾದರೂ ಸೌಖ್ಯ ಹೊಂದುತ್ತಲೆ ನೊವೆಂಬರಿನಲ್ಲಿ ಇತ್ತ ಬರಬೇಕೆಂದಿದ್ದ ಅವರ ಆಸೆಯು ಮಾತ್ರ ಕೈಗೂಡಲಿಲ್ಲ. ಎಸೆಂಬ್ಲಿಯ ಅಧ್ಯಕ್ಷಸ್ಥಾನದ ಗೌರವವನ್ನು ರವಷ್ಟಾದರೂ ಕುಂದದಂತೆ ಕಾಪಾಡಲೆತ್ನಿಸಿ, ಎಷ್ಟೋ ಸಲ ಸರಕಾರದ ವಿಧಾನಗಳನ್ನು ಇವರು ನ್ಯಾಯಸಮ್ಮತವಾದ ಶಾಸನಗಳಿಂದ ಪಡೆದು ತಿದ್ದಿ, ಎಲ್ಲ ಪಕ್ಷದವರನ್ನೂ ಏಕದೃಷ್ಟಿಯಿಂದ ನಡೆಸಿ ಬಂದಿದ್ದರು. ಕೊಂಗ್ರೆಸ್ ಪಕ್ಷದವರು ಎಸೆಂಬ್ಲಿಯನ್ನು ತ್ಯಜಿಸಿದ ತರುವಾಯದಲ್ಲಿ ಅದೊಂದು ಪ್ರಾಮುಖ್ಯ ಪಂಗಡವೇ ಇಲ್ಲದ ವೇಳೆ, ಸರಕಾರವು ಹೊಸೆಯುತ್ತಿದ್ದ ನಾನಾ ಕಾನೂನುಗಳು ಅಲ್ಲಲ್ಲೇ ತಡೆವಂತೆ ಮಾಡಿದ್ದರು. ಸರ್ವ ಪ್ರತಿನಿಧಿಗಳೂ ಇಲ್ಲದಾಗ, ಚರ್ಚೆಗಿಡುವುದೆಂದರೇನು? ಸರಕಾರದ ಪಕ್ಷವೇ ಬಲವಾಗಿದ್ದಾಗ ಚರ್ಚೆಗಿಂದೊಪ್ಪಿಸಿ, ಬೇಕು ಬೇಕಾದುದನ್ನೆಲ್ಲ ಸುಲಭವಾಗಿ ತೀರ್ಮಾನಿಸಿಕೊಳ್ಳುವುದೆಂದರೇನು? ಎಂಬುವೇ ಅವರ ಕಾರಣಗಳಾಗಿದ್ದುವು. ದಬ್ಬಾಳಿಕೆಯು ಹೆಚ್ಚಿ, ಜನತೆಯಲ್ಲಿ ಕೊಂಗ್ರಸ್ ಕಾರ್ಯಕ್ರಮವು ಪ್ರಚಾರಕ್ಕೆ ಬರುತಿದ್ದಾಗ ಇನ್ನು ಎಸೆಂಬ್ಲಿಯ ಸೇವೆಗಿಂತ ದೇಶ ಸೇವೆಯೆ ಮುಖ್ಯವೆಂದು ಅವರು ಎಸೆಂಬ್ಲಿಯನ್ನು ತ್ಯಜಿಸಿ, ದೇಶ ಸೇವೆಗೆ ತೊಡಗಿ ಅದರ ಉಡುಗೊರೆಗಳನ್ನು ಹೊಂದಿ, ಕಾರಾವಾಸದಲ್ಲಿದ್ದು, ಚಿಕಿತ್ಸೆ ಪಡೆದು, ಯೂರೋಪು, ಅಮೇರಿಕಗಳಲ್ಲಿ ಸ್ವದೇಶದ ಶುದ್ಧ ಭಾವನೆಗಳನ್ನು ಹರಡಿಸಿ ಕೊನೆಗೆ ಪುನಃ ಜನ್ಮಭೂಮಿಗೆ ಬರುತಿದ್ದರು. ಅಲ್ಲಿಗೆ ಆಯುಶ್ಶೇಷ. ಅವರ ಆತ್ಮಕ್ಕೆ [illegible]

ಮುಸ್ಲಿಮ್ ಲೀಗ್

[illegible] ಮುಸ್ಲಿಮ್ ಲೀಗ್ [illegible] ಕೊಂಡಿವೆ. ಕೌನ್ಸಿಲುಗಳಲ್ಲಿ ಮೂರರಲ್ಲೊಂದಂಶ ಸ್ಥಾನಗಳು ಮುಸ್ಲಿಮರಿಗಿಲ್ಲ. ಬಂಗಾಳದಲ್ಲಿ ಜನಸಂಖ್ಯೆಯು ದಾಮಾಷೆಯಲ್ಲಿ ಮುಸ್ಲಿಮರಿಗೆ ಬೇಕಾಗಿರುವ ಪ್ರಾತಿನಿಧ್ಯವು ದೊರೆತಿಲ್ಲ. ಒರಿಸ್ಸವನ್ನು ಪ್ರತ್ಯೇಕಿಸಿದ ಬೀಹಾರ ಪ್ರಾಂತ್ಯದ ಮುಸ್ಲಿಮರ ಸ್ಥಾನ ಸಂಖ್ಯೆಯು ಕಡಿಮೆಯಾಗಿದೆ. ಪ್ರಾಂತಿಕ ಸರಕಾರಗಳಿಗೆ ಮಿಕ್ಕುಳಿದ ಅಧಿಕಾರ ಹಕ್ಕು ಎದರೂ ಸಿಕ್ಕಿಲ್ಲ. ಜಾದಾ ಪ್ರಾತಿನಿಧ್ಯಗಳೆಂಬವಲ್ಲಿ ಮುಸ್ಲಿಮರಿಗೆ [illegible] ಸ್ಥಾನಗಳಿಲ್ಲ; ಬಲುಚಿಸ್ಥಾನವನ್ನು ಒಂದು ಪ್ರಾಂತ್ಯವಾಗಿ ರಚಿಸಿಲ್ಲ, ಇತ್ಯಾದಿ ದೂರು ಆಕ್ಷೇಪಗಳನ್ನು ಚರ್ಚಿಸಿ, ಕ್ರಾಂತಿಕಾರರ ಹಾವಳಿಯನ್ನು ಆಕ್ಷೇಪಿಸಿ, ಮುಸ್ಲಿಮರು ಸರ್ವದಾ ಸರಕಾರದ ಸಹಾಯಕರಾಗಿ ಶಾಂತಿಯನ್ನು ಕೇಳುವವರೆಂದು ನಿರ್ಧರಿಸಿ, ಹಿಂದೂ ಮಹಾಸಭೆಯು ಸಾಮಾಜಿಕ ಪ್ರಾತಿನಿಧ್ಯದ ಪ್ರಶ್ನೆಯನ್ನು ಪುನಃ ಎತ್ತುವುದೆಂಬ ವಿಷಯವನ್ನು ಟೀಕಿಸಿ ಆಕ್ಷೇಪಿಸಿ, ಪ್ರಾಂತ್ಯಗಳಲ್ಲಿ ವರಿಷ್ಠ ಕೌನ್ಸಿಲುಗಳು ಅನವಶ್ಯಕವೆಂದು ಸೂಚಿಸಿ ಸಭೆ ಮುಗಿದಿದೆ. ಐಕ್ಯವಾಗಿ ಒಂದೇ ಬಲವಾಗಿ ಸರಕಾರದಿಂದ ಸ್ವರಾಜ್ಯವನ್ನು ಪಡೆವ ಸಾಧನೆಗಳಾಗುವ ಬದಲಾಗಿ, ಮುಸ್ಲಿಮರು, ಸಿಖ್ಖರು, ಹಿಂದುಗಳು ಈಗಲೆ ಇನ್ನಷ್ಟು ಪ್ರತ್ಯೇಕ ಪಂಗಡಗಳಾಗುವರೆ ಹೋರಾಡುತ್ತಿರುವುದು ವಿಚಿತ್ರ ವಿವೇಕವಾಗಿದೆ. ಈ ವಿಪರೀತ ಬುದ್ಧಿಯು ಮುಗಿಯುವುದೆಂದಿಗೆ?

ಶರ ಸನ್ಯಾಸ

ಯುದ್ಧ ತ್ಯಾಗದ ಮಾತಿರಲಿ, ಆಯುಧ ತ್ಯಾಗವೂ ಹಾಗಿರಲಿ, ಆಯುಧಗಳ ಸಂಖ್ಯೆಯನ್ನಾದರೂ ಇಳಿಸಬೇಕೆಂದು ನಡೆವ ಪ್ರಯತ್ನಗಳು ಇನ್ನು ಸಾಗಿದರೂ, ಸಾಗದಿದ್ದರೂ ಒಂದೇ ಎನ್ನಬಹುದು. ಜರ್ಮನಿಯು ತನ್ನ ಹೇಳಿಕೆ ತಿಳಿಸಿ, ಪರಿಷತ್ತಿನ ಬಾಗಿಲಿಂದ ಹೊರಕ್ಕೆ ನಡೆಯಿತು. ಕೆಲವೇ ಮುಖಂಡ ರಾಷ್ಟ್ರಗಳ ಮಾತು ಸಲ್ಲಿಸುವುದಕ್ಕಾಗಿ ಈ ಜನಾಂಗ ಸಂಘವೆಂದು ಜರ್ಮನಿಯು ತಿಳಿದು, ಹಾಗೆ ತಿಳಿಸಿದೆ. ಸರ್ವರೂ ಸಮಾನರೆಂದ ಒಳಿತ, ಇತರರಷ್ಟೇ ಬಲವಾಗಿ ಸನ್ನಾಹ ತನಗಿರಲಿ, ಇಲ್ಲವೇ ಎಲ್ಲರೂ ತನ್ನಷ್ಟೆ ಪ್ರಬಲ ಸನ್ನಾಹ ಮಾಡಿರಲಿ ಎಂಬುವ ಈ ಏಕರಾಶಿ ತತ್ವವನ್ನೆ ಅದು ಅಂದಿನಿಂದಲೂ ಸಾರುತ್ತಲೇ ಇದ್ದಿತು. ಯುದ್ಧದಲ್ಲಿ ಸೋತು ಸಮಸ್ತ ವಸಾಹತಗಳನ್ನು ಕಳೆದುಕೊಂಡು, ಗಣಿಗಳನ್ನೂ ಕೈಗಾರಿಕೆಗಳನ್ನೂ ಕುಂದಿಸಿ, ಹಣಕ್ಕೆ ತತ್ವಾರವೂ ವ್ಯಾಪಾರಕ್ಕೆ ಕೊರತೆಯೂ ಉಂಟಾಗಿ ಬಂದರೂ, ಇನ್ನೂ ತನ್ನನ್ನು ಚಿರಕಾಲಕ್ಕೆ ಜಗ್ಗಿ ಬಡಿದು ಪಾತಾಳಕ್ಕೊಪ್ಪಿಸುವುದೆಂದರೇನು? ಎಂಬುದೇ ಅದರ ಆತ್ಮದಲ್ಲಿ ಉರಿಯುವ ದುಃಖದ ಜ್ವಾಲೆ. ಕೊಂಗ್ರೆಸ್ ಪಕ್ಷವು ಶಾ ಟಿ. ಪರಿಷತ್ತಿನಿಂದ ದೂರವಾದರೂ ಪರಿಷತ್ತು ಸಾಗುತ್ತಿಲ್ಲವೇ? ಅದರಂತೆ, ಶರಸನ್ಯಾಸದ ಪರಿಷತ್ತು ಸಹ ಸಾಗುತ್ತ, ಜರ್ಮನಿಯೂ ಒಪ್ಪಬಹುದಾದಂತಹ ನಿಯಮಗಳನ್ನು ಮಾಡಿಕೊಳ್ಳಬಾರದೆಂದೇನೂ ಇಲ್ಲ. ಆದರೆ, ನಮ್ಮ ದೇಶದಲ್ಲಿ ಹೇಗೂ ಹಾಗೆಯೇ ಇಡೀ ಪ್ರಪಂಚದಲ್ಲಿ ಸಂಶಯ ಭಯ ಎಂಬಿವೆರಡು ರಾಹುಕೇತುಗಳಂತೆ ಜನಾಂಗಗಳ ಮನಸ್ಸಿಗೆ ಗ್ರಹಣ ಹಿಡಿದಿವೆ. ಇದು ಮುಗಿಯದೆ ಶಾಂತಿ ಪಥದ ಮೇಲೆ ಬೆಳಕಿಲ್ಲ.

ಸಂಯುಕ್ತ ಪ್ರಾಂತ್ಯಗಳ ಲಿಬರಲ್ ಪಕ್ಷದವರು

ಸಭೆ ಸೇರಿದರು. ಸಾಮಂತರುಗಳನ್ನು ಸಂರಕ್ಷಿಸುವ ಬಗೆಗೆ ಸರಕಾರವು ತಂದ ಮಸೂದೆಯನ್ನು ನಿರಾಕರಿಸಬೇಕೆಂಬುದೊಂದು ಪ್ರಶ್ನೆಯು ಎದ್ದು, ಮೊದಲೇ ಸಂಕುಚಿತವಾಗಿರುವ ಪತ್ರಿಕಾ ಸ್ವಾತಂತ್ರ್ಯವು ಇನ್ನಷ್ಟು ಕುಂದಿ ಹೋಗುವುದೆಂದು ಟೀಕೆಯಾಗಿ, ಪ್ರಾಗತಿಕ ಧೋರಣೆಯುಳ್ಳ ಸಾಮಂತ ರಾಜ್ಯಗಳು ಸುಧಾರಣೆ ಹೊಂದುವ ಹಾಗೆ ಬೇರೆ ಉಪಾಯವಿಲ್ಲೆಂದು ಸೂಚನೆಯಾಗಿ, ಸರಕಾರವು ಉತ್ತಮವಾದರೂ ಅನಿಯಂತ್ರಿತವಾಗಿರದಂತೆ ನಡೆವುದು ಹೇಗೆ ಅಗತ್ಯವೋ ಹಾಗೆಯೆ ಪತ್ರಿಕೆಗಳು ಹದ ಮೀರದೆ ನಡೆವುದೂ ಅಗತ್ಯವೆಂದು ನಿರ್ದೇಶಿಸಿ, ಆ ಮಸೂದೆಯನ್ನು ವಿರೋಧಿಸಬೇಕೆಂದಾಯಿತು. ದಬ್ಬಾಳಿಕೆಯನ್ನು ದೂಷಿಸಿ, ಶಾಸನೋಲ್ಲಂಘನವನ್ನು ಮುಗಿಸಬೇಕೆಂದಾಯಿತು. ರೈಲ್ವೆ ಇಲಾಖೆಯಲ್ಲಿ ಹಿಂದೀ ಅಧಿಕಾರದ ಸ್ಥಾನ ಮಾನಗಳನ್ನು ಕಾಪಾಡಬೇಕೆಂದೂ, ಏಡನನ್ನು ಬಿಟ್ಟುಕೊಡಬಾರದೆಂದೂ, ಶ್ವೇತಪತ್ರವು ಅತೃಪ್ತಿಕರವೆಂದೂ, ಕೆನಿಯದಲ್ಲಿ ಹಿಂದೀಯರನ್ನು ಯುರೋಪೀಯರು ಆತಂಕಿಸಬಾರದೆಂದೂ, ರಿಜರ್ವ ಬೇಂಕಿನ ನಿಬಂಧನೆಗಳಲ್ಲಿ ತಿದ್ದುಪಡಿಗಳಾಗಬೇಕೆಂದೂ ಸಹ ಸೂಚಿಸಲಾಯಿತು. ಸೂಚಿಸುವುದಾದರೆ ಎಷ್ಟೋ ಇರಬಹುದು, ಆಲೋಚಿಸಿ ನೋಡಿ ಕೈಗೊಳ್ಳುವವರು ಬೇಡವೆ?

NOTES...
ನೋಟಗಳು.

ಶ್ವೇತಪತ್ರವೆಂದರೇನು? ಏನೂ ಬರೆಯದ ಕಾಗದದ ಹಾಳೆಗಳನ್ನು ರಕ್ಷಾ ಸೂತ್ರಗಳಿಂದ ಬಹಳವಾಗಿ ಸುತ್ತಿದ ಒಂದು ಸುರುಳಿ.

* * * *

"ಜರ್ಮನಿಯು ಜಿನೆವದ ಜನಾಂಗ ಸಂಘದಿಂದ ಪಾರಿತು."—ಯೋಗ್ಯ ಪ್ರಾಸವಿದೆ. ಅದೇಕೆ? "ಜಾಪಾನು ಜಾರಿದ್ದಿತು"—ಅದರಲ್ಲೂ ಪ್ರಾಸವಿದೆ. "ಜಾರಿದ [illegible]" ಎಂದರೆ ಹೀಗಿರಬೇಕೆ?

* * * *

ನಮ್ಮ ದೇಶಕ್ಕೆ ಹಿಡಿದ ಜಾಡ್ಯವನ್ನು ಗುಣಪಡಿಸಲು ಥಾಯಿ ಪರಮಾನಂದರು ಒಂದು ಚಿಕಿತ್ಸೆ ಸೂಚಿಸಿರುವರು. ಅದನ್ನು ಪ್ರಯೋಗಿಸಿದರೆ, ಬೇರೇ ಒಂದು ಮಹತ್ತಾದ ಜಾಡ್ಯವು ದೇಶವನ್ನು ಆಕ್ರಮಿಸುವುದು

* * * *

ಯಾವ ಮತವಿಚಾರಗಳಲ್ಲೂ ಕೈಯಿಕ್ಕದ ಸರಕಾರವು ಮುಸ್ಲಿಮರಿಗೆ ಮತ ಶಿಕ್ಷಣಕ್ಕೆ ಅಗತ್ಯವಾದ ಏರ್ಪಾಡುಗಳನ್ನು ಮಾಡಲು ಪ್ರಕಟಿಸಿಯದೆ

* * * *

ಕ್ರೈಸ್ತರು, ಬೌದ್ಧರು, ಮುಸ್ಲಿಮರು ತಮಗೆ ಅಗತ್ಯವೆಂದಿರುವ ಮತ ಶಿಕ್ಷಣವನ್ನು ಶಾಲೆಗಳಲ್ಲಿ ಮಾಡಿರುವಂತಾಯಿತು. ಕೇವಲ ಹಿಂದುಗಳಿಗೆ ಮಾತ್ರ, ಯಾವ ಮತ ಶಿಕ್ಷಣವೂ ಅಗತ್ಯವಿಲ್ಲ

* * * *

ಹಿಂದುಗಳು ಕೇಳಿದರೆ, ಎಂಡೌಮೆಂಟ್ ಬೋರ್ಡಿನ ಮೂಲಕ ಹಣವು ಒದಗುವುದು. ಮತವೂ ಹಿಂದುಗಳಿಗೆ ಬೇಡವಾಗಿದೆ. ಕಾರಣವೇನು? ಹಿಂದುಗಳ ಮತ-ಬಹು ಋಷಿಗಳ ಮತ ಎಂದೇ? ಅಥವಾ ಯಾವ ಮತದಿಂದಲೂ ಹಿಂದೂಗಳಿಗೆ ಪ್ರಯೋಜನವಿಲ್ಲದೆ?

* * * *

ಮುಸ್ಲಿಮ ಮುಖಂಡರೊಬ್ಬರು ಈ ಪ್ರಶ್ನೆ ಕೇಳಿರುವರು. ಸುಮ್ಮನೆ ಇಸ್ಲಾಂ ಧರ್ಮ ಬೋಧನೆಗೆ ಮಾತ್ರ ಸರಕಾರವು ಪಕ್ಷಪಾತ ಮಾಡಿದೆ ಎನ್ನುವ ಹಿಂದುಗಳು ಈ ಪ್ರಶ್ನೆಗೆ ಯೋಗ್ಯ ಉತ್ತರ ಕೊಡಬಾರದೆ?

* * * *

ಹಿಂದಣ ವರ್ಷಗಳಲ್ಲಿ ಜಾಪಾನು ಬರ್ಮದಿಂದ ಕ್ರಯಕ್ಕೆ ಪಡೆದ ಅಕ್ಕಿಯನ್ನು ಈಗ ಹಿಂದೂದೇಶದಲ್ಲಿ ತಂದು ತುಂಬುತ್ತಿರುವುದು. ಹೀಗಿರುವಾಗ,—ಜನಸಂಖ್ಯೆ ಹೆಚ್ಚುತ್ತದೆ, ಆಹಾರ ಕಡಿಮೆಯಾಯಿತು, ಮಿತ ಸಂತತಿ ಅಗತ್ಯ ಎನ್ನುವವರಿಗೆ ಬೇರೆ ಸಮಾಧಾನ ಬೇಕೇ?

* * * *

ಇಂಡಿಯಾ ಮತ್ತು ಬರ್ಮಗಳಿಂದ ಇನ್ನು ಜಾಪಾನು ಮಾತ್ರ ಅಕ್ಕಿ ಪಡೆಯದೆಂದು ಬಹಿಷ್ಕಾರ ಹಾಕಿಕೊಂಡಿದೆ. ಈ ನಮ್ಮ ಅಕ್ಕಿ ಉಂಡರೆ ಕೈಗಾರಿಕೆಗಳನ್ನು ಅಗ್ಗ ಕ್ರಯಕ್ಕೆ ಧಾರಾಳವಾಗಿ ಮಾರಲಾಗುವುದಿಲ್ಲವೆ?

* * * *

ಜಸ್ಟಿಸ್ ಪತ್ರಿಕೆಯು ಕೆಲ ವರ್ಷಗಳಿಂದ ಇತ್ತು ಮುತ್ತಿತ್ತು. ಈಗ ಪುನರುತ್ಥಾನವಾಗಿದೆ. ಆದರೆ ಎಷ್ಟೆಂದರೂ, ಜಸ್ಟಿಸ್ ಪಕ್ಷದವರೇ ಪಂಗಡಗಳಾಗಿರುವಾಗ, ಪತ್ರಿಕೆಯಾದರೂ ಹೇಗಿರಬೇಕು. ಕೈಕಾಲು ದಪ್ಪ, ಚಿಕ್ಕ ತಲೆ ಎಂಬಂತಾಗಿದೆ ಎಂದು ಆ ಪಕ್ಷದವರೇ ಒರೆಯುವರು

* * * *

ಈಗ ಕೌನ್ಸಿಲು ಚುನಾವಣೆಯ ಕಾಲವು ಸಮೀಪಿಸುವುದಾಗಿ ತಿಳಿದು, ಈ ಪತ್ರಿಕೆಯ ಪುನರ್ಜನ್ಮವೇ? ಚುನಾವಣೆಯ ತನಕ ವಿವಿಧವಾಗಿ ಅರ್ಭಟಿಸಿ, ಕೊನೆಗೆ ಮೌನವಾದರೆ ತೀರಿತು.

* * * *

ಮುಳ್ಳಿನಿಂದ ದ್ರಾಕ್ಷೆ ಹುಟ್ಟುವುದಾಗಿ ಜನರು ನಂಬುವ ದಿನಕ್ಕೆ ಜಸ್ಟಿಸ್ ಪಕ್ಷದಿಂದ ಜನತೆಗೆ ಸತ್ಪರಿಣಾಮ ಫಲಗಳು ಉಂಟಾಗಬಹುದು ಎಂದು ಇಷ್ಟು ವರ್ಷಗಳ ಮಂತ್ರಿಮಂಡಲಗಳ ಕಾರ್ಯಕಲಾಪಗಳಿಂದ ಗೊತ್ತೇ ಆಗದೆ?

If you want FULL VALUE for your money insist on Swastik Products.

ನಿಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ ಸಾಮಾನುಗಳನ್ನೇ ಕೊಂಡುಕೊಳ್ಳಿರಿ.

Swastik 777 Bar soap & Swastik Cake & Cube Soaps, best in washing Soaps.

ಕಸ, ಕೊಳೆ, ಕಲ್ಮಷ, ಮೊದಲಾದ ಕಶ್ಮಲಗಳು ಕಂಡಿತ್ತಾದರೂ ಉಳಿಯಬಾರದು—ಆಗ ತಾನೇ ಲೋಕಕ್ಷೇಮ. 777 ಇದ್ದರಿಂದಾಗಿ ಪ್ರಸನ್ನತೆ. ನಂಬರಿನ ಸ್ವಸ್ತಿಕಾ ಅತ್ಯುತ್ತಮ ಸಾಬೂನು ಸ್ವದೇಶಿಗಳಲ್ಲಿ ಅಗ್ರಗಣ್ಯ, ಬಟ್ಟೆಗಳಿಗೆ, ಇತರ ಸಾಬೂನುಗಳಿಗೆ ಮೇಲ್ಪಂಕ್ತಿ ಶುಭ್ರತಮವಾಗಿ ಒಗೆಯುವುದು. ಹೆಚ್ಚು ಕಾಲ ಬಾಳುವುದು. ಯೋಗ್ಯತೆ ಮಿಗಿಲಾಗಿ ಬೆಲೆ ಕಡಿಮೆ—ವಿಲಾಯತಿಗೆ ಸಾಬೂನಿಗೆ ಪ್ರತಿಧ್ವಂದ್ವಿಯಾಗಿದೆ

Swastik Double boiled & Raw Linseed Oils.

SWASTIK

THE MARK OF QUALITY

available in 5 gallon drums, 1 gallon tin.



ಪೈಂಟ್ ಬಗ್ಗೆ ಸ್ವಸ್ತಿಕಾ ದೇಯಿಸಿದ ಅತೀ ಉತ್ತಮವಾದ ಲೀನ್‌ಸೀಡ್ ಎಣ್ಣೆ 5 ಗೆಲನ್ ಡ್ರಮುಗಳಲ್ಲೂ, ಗೆಲನ್ ಟಿನ್ನುಗಳಲ್ಲೂ ದೊರೆಯುವುವು.

ಹಾಳೆ ಗಿಡಗಳ ಮೇಲೆ ಕ್ರಿಮಿ ಹಿಡಿಯದಂತೆ ಚಿಲ್ಲುವರೆ ಸ್ವಸ್ತಿಕಾ ಹಸಿ ಲಿನ್‌ಸೀಡ್ ಎಣ್ಣೆ 5 ಗೆಲನ್ ಡ್ರಮುಗಳಲ್ಲಿ ದೊರೆಯುವುದು.

ವಿಲಾಯತಿ ಎಣ್ಣೆಗಿಂತಲೂ ಸೇಕಡಾ 50ರಷ್ಟು ಹೆಚ್ಚಿನ ಫಲ ಪ್ರಯೋಜನ ಕೊಡುವುದಾಗಿ ಲಂಡನ್ ಇಂಪೀರಿಯಲ್ ಲೆಬೋರೇಟರೀಯವರು ಸರ್ಟಿಫಿಕೇಟು ಕೊಟ್ಟಿದ್ದಾರೆ.

Swastik CASTOR OIL (medicinal) (Cold drawn)

Packed in gallon tins & 4 oz, 8 oz, 1 lb bottles



ಸ್ವಸ್ತಿಕಾ ಹರಳೆಣ್ಣೆ

4 ಔನ್ಸ್, 8 ಔನ್ಸ್, 1 ರಾತ್ತಲು ಬಾಟ್ಲಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವುದು.

ಶಾಸ್ತ್ರೀಯ ರೀತಿಯಲ್ಲಿ ಸಿದ್ಧಗೊಳಿಸಿರುವ ಶುದ್ಧವಾದ ಈ ಹರಳೆಣ್ಣೆಯು ವಾಸನೆ ಇಲ್ಲದ್ದು ರುಚಿರಹಿತವಾದದ್ದು.

ಹರಳೆಣ್ಣೆಯಿಂದಾಗುವ ಯಾವತ್ತೂ ಉಪಯೋಗಗಳು ನಾಲಗೆಗೂ, ಮನಸ್ಸಿಗೂ ಬೇಸರವಾವುದೂ ಇಲ್ಲದೆ ಈ ಸ್ವಸ್ತಿಕಾ ಹರಳೆಣ್ಣೆಯಿಂದ ದೊರೆಯುವುವು. ಇವಲ್ಲದೆ—

ಸ್ವಸ್ತಿಕಾ ಕಡ್ಲೆಣ್ಣೆ, ಎಳ್ಳೆಣ್ಣೆ, ವಾರ್ನಿಸು, ಮೈಗೆ ಹಾಕುವ ಸಾಬೂನು ವಗೈರೆ ಇವೆ.

Swastik Oil Mills Ltd, Bombay.

Chairman—Seth Ambalal Sarabhai,

Directors—Sir Purushothamdas Thakurdas.

" Mr. F. E. Dinshaw.

" Mr. C. S. Patel, & others.

ಮಲಬಾರ್ ಮತ್ತು ಕನ್ನಡ ಜಿಲ್ಲೆಗೆ ಏಜಂಟರು:—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು.

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸುವ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು

ಭಂಗಾರದ ಮೆಡಲು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುವು ಬೀಳೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ಸೊಂಟ ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋವಳಿ ಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯುವನವಂತರಾಗಿ ಶರೀರ ಬಲವಾಗಿ ಮಕ್ಕಳು ಫಲವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟು ಗಡಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦, ೪ ಬಾಟ್ಲಿಗೆ ೩—೮—೦, ದಳ್ಳುನ ಬಾಟ್ಲಿಗೆ ೨ ರೂಪಾಯಿ ಟಪಾಲ ಖರ್ಚ ಪೋಸ್ಟೇಜ ಬೇರೆ ಬೀಳುತ್ತದೆ, ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, ಘೋಡ್ಗೆ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ವಿಜಾರ್ ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಕೆಮಿಸ್ಟ್. ಉಡುಪಿ—ಸ್ಟ್ಯಾ ಫಾರ್ಮಸಿ, ತೆಂಕಪೇಟೆ. ಕಾರ್ಕಳ—ವಿ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ ರಸ್ತೆ. ಬಂಟವಾಳ—ದಿ ಕೆನರಾ ಫೋಕ್ಸ್ ಫಾರ್ಮಸಿ.

2-6-38

Seventyseven Years!

Two generations of approved service enables us to pick and choose what is cheap lasting & good to suit the pockets & the tastes of our ongstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzesh etc

Shrinivas Ranga Pai,

Sawkar Mahal,

Car Street, MANGALORE.

For neat and nice Printing

Please call at

THE SHARADA PRESS,

Car Street, MANGALORE.

ಅಸ್ಪೃಶ್ಯತಾ ನಿವಾರಣಾ ಶ್ರೀ ಗಣಪತಿ ಪ್ರತಿಷ್ಠೆಯು ಬಹಳ ವಿಜೃಂಭಣೆಯಿಂದ ನಡೆಯಿತು.

ಬಹಳ ದಿನದಿಂದಲೂ ಪ್ರಚಾರ ಮಾಡಿದ್ದ ಪ್ರಕಾರ ೧೯—೧೦—೩೭ನೇ ಶುಕ್ರವಾರದ ದಿವಸ ತಗಡೂರಿನಲ್ಲಿ ಅಸ್ಪೃಶ್ಯತಾ ನಿವಾರಣಾ ಶ್ರೀ. ಗಣಪತಿ ಪ್ರತಿಷ್ಠೆಯು ಬಹಳ ವಿಜೃಂಭಣೆಯಿಂದ ನಡೆಯಿತು. ಆ ಕಾಲಕ್ಕೆ ಮೈಸೂರು, ಬೆಂಗಳೂರು, ನಂಜನಗೂಡು, ಚಿಕ್ಕನವಾಳುಗಳಿಂದ ರಾಷ್ಟ್ರ ಮುಖಂಡರುಗಳೂ, ದೇಶಭಕ್ತರುಗಳೂ, ಸ್ವಯಂಸೇವಕರುಗಳೂ, ಸ್ಕೌಟುಗಳೂ ಅನೇಕ ಜನ ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳೂ, ಸುತ್ತ ಮುತ್ತಲು ಗ್ರಾಮದ ಮಹಾಜನರೂ ಸಹ ದಯಮಾಡಿಸಿದ್ದರು. ಮೈಸೂರು ನಾಗಲಿಂಗ ಸ್ವಾಮಿ ಮಠದ ಸ್ವಾಮಿಗಳಾದ ಸಿದ್ಧಲಿಂಗ ಸ್ವಾಮಿಗಳು ಮೈಸೂರು ಪ್ರಾಂತ್ಯದ ಹಳ್ಳಿಗಳಲ್ಲಿ ಬಹಳ ಪಂಡಿತರು. ಅನೇಕ ಕಡೆ ಮೂರ್ತಿ ಸ್ಥಾಪನೆ ಮಾಡಿದ್ದಾರೆ. ಮೂರ್ತಿಗಳನ್ನು ತಯಾರು ಮಾಡಿಕೊಟ್ಟಿದ್ದಾರೆ. ತಗಡೂರಿನಲ್ಲೇ ಸವರ್ಣ ಹಿಂದೂಗಳಿಗಾಗಿ ಒಂದು ಶ್ರೀ. ಗಣಪತಿ ಮೂರ್ತಿಯನ್ನೂ ಪ್ರತಿಷ್ಠೆ ಮಾಡಿಕೊಟ್ಟಿದ್ದಾರೆ. ಪೂರ್ಣ ವಿದ್ಯಾವಂತರು, ಕರ್ನಾಟಕದಲ್ಲೆಲ್ಲಾ ಪ್ರಸಿದ್ಧರಾದವರು ಇಂಥಾ ಸ್ವಾಮಿಗಳೇ ದಯಮಾಡಿಸಿ ಅಸ್ಪೃಶ್ಯತಾ ನಿವಾರಣಾ ಶ್ರೀ. ಗಣಪತಿ ಮೂರ್ತಿಯನ್ನು ಪ್ರತಿಷ್ಠೆ ಮಾಡುವರು. ಆಗಮಶಾಸ್ತ್ರದ ರೀತಿ ಮೂರ್ತಿ ಸ್ಥಾಪನೆಯಾಗುವುದು ಎಂಬ ವರ್ತಮಾನವನ್ನು ಕೇಳಿ ಆಶ್ಚರ್ಯಚಕಿತರಾಗಿ ಬಹಳ ಜನರು ಸೇರಿದ್ದರು.

ಮಧ್ಯಾಹ್ನ ೧೨ ಗಂಟೆಗೆ ಸರಿಯಾಗಿ ಸತ್ಯಾಗ್ರಹಾಶ್ರಮದ ಕಾಂಪೌಂಡಿನಲ್ಲಿ ಮಂಗಳವಾದ್ಯದೊಡನೆ. ರಾಷ್ಟ್ರೀಯ ಧ್ವಜ ವಂದನೆಯಾಯಿತು. ನಂತರ ತಳಿರು ತೋರಣಗಳಿಂದ ಅಲಂಕೃತವಾಗಿದ್ದ ಶ್ರೀ ಗಣಪತಿ ಮಂಟಪ ಪ್ರವೇಶವಾಯಿತು. ಬ್ರಾಹ್ಮಣರು ಮೊದಲುಗೊಂಡು ಅಂತ್ಯಜರ ವರೆಗೂ ಎಲ್ಲಾ ಜಾತಿಯ ಜನರೂ ಕಿಕ್ಕಿರಿಯುತ್ತಾ ತುಂಬಿದ್ದರು. ಗ್ರಾಮದ ಛೇರ್ಮನರವರೂ ಶ್ರೀ. ಪಟೇಲ್ ಮಾದಪ್ಪನವರೇ ಮೊದಲಾದ ಗ್ರಾಮ ಮುಖಂಡರುಗಳೂ, ಪೋಲೀಸಿನವರೂ ಸಹ ಬಂದಿದ್ದರು. ಸ್ವಾಮಿಗಳು ಅವರ ಶಿಷ್ಯರೂ ಸೇರಿ ಪೂರ್ವ ಪದ್ಧತಿಯ ಪ್ರಕಾರ ಹೋಮ, ಕಲಶ ಸ್ಥಾಪನೆ, ಅಷ್ಟಬಂಧನ, ಮೂರ್ತಿಸ್ಥಾಪನೆ, ಪ್ರಾಣಪ್ರತಿಷ್ಠೆ, ಮಹಾಭಿಷೇಕ, ಅಲಂಕಾರ ಮಹಾ ಮಂಗಳಾರತಿ ಇವೇ ಮೊದಲಾದ ಎಲ್ಲಾ ಕಾರ್ಯಕ್ರಮಗಳೂ ಕ್ರಮ ಪ್ರಕಾರವಾಗಿ ಆಗಮ ಶಾಸ್ತ್ರದರೀತ್ಯಾ ಮಾಡಿದರು. ಸುಮಾರು ೬ ಗಂಟೆಯ ವರೆಗೆ ಮೂರ್ತಿಸ್ಥಾಪನೆಯ ಕಾರ್ಯವು ನಡೆಯಿತು. ಮಂಗಳಾರತಿಯಾಯಿತು. ಸಭಿಕರಿಗೆಲ್ಲಾ ಪ್ರಸಾದವು, ಪಾನಕ ಹಂಚಲಾಯಿತು. ಆ ಮೇಲೆ ರಾಜಬೀದಿಗಳಲ್ಲೆಲ್ಲಾ ಪಾದಚಾರಿಗಳಾಗಿ ಸ್ವಾಮಿಗಳ ಮೆರವಣಿಗೆ ಮಾಡಿಕೊಂಡು ಲಕ್ಷ್ಮೀ ರಮಣ ಸ್ವಾಮಿಯ ದೇವಾಲಯವನ್ನೂ ಸೇರಿದೆವು. ದಾರಿಯಲ್ಲೆಲ್ಲಾ ಅವರ ಶಿಷ್ಯರುಗಳು ದಂಡನಮಸ್ಕಾರಗಳನ್ನು ಮಾಡುತ್ತಿದ್ದರು.

ತಗಡೂರು ರಾಮಚಂದ್ರ ರಾವ್.

[illegible]
[illegible] ಸಂಗ್ರಹಗಳು
[illegible] ... ೮
[illegible] ... ೧೧
ಪ್ರೀ [illegible]—ಹುಗ್ಗಿಗಳು, ಶಾಂತಿ, ಧುರಂಧರ, ಮೂಲ್ಕಿ, [illegible], ಮಹಾತ್ಮಾ, ಅಣ್ಣಾರು, [illegible], ... ೯
ಶ್ರೀ ವಿ. ಜೆ. ಪಟೇಲರು ದೈವಾಧೀನರಾದರು. ... ೪
[illegible] ... ೧೩
ಕಾಂಗ್ರೆಸ್ ಜೀವಂತ ಸನಿಗೆಸುಲು ಅರಿಟು? ... ೧೫
ರಂಗಭೂಮಿಯ ಮುಂದಿನ ಪ್ರಶ್ನೆಗಳು. ... A
ಶ್ರೀಮದ್ಭಗವಂದ [illegible] ಬಾಗಿಲ ದೀಪಾವಳಿ. ... B

ಸ್ವದೇಶಾಭಿಮಾನಿ.

ತಾ. ೨೭ನೇ ಶುಕ್ರವಾರ ಒಕ್ಟೋಬರ ೧೯೩೩.

ಹಿಂದೂಸ್ಥಾನದ ದುರ್ಭಾಗ್ಯ.

ಸತ್ಯಾಗ್ರಹ ಚಳವಳವು ಬಂದು ಬಾರಿ ವಿಜಯದಶಿಖರವನ್ನು ಹತ್ತಿ ಪರಾಜಯದ ಕೂಪದಲ್ಲಿ ಬೀಳುವುದು ಹಿಂದೂಸ್ಥಾನದ ಚರಿತ್ರೆಯೊಳಗಿನ ಕಾರ್ಯಗಳ ಗತಿ ಕ್ರಮವೆನ್ನಬಹುದೇನೋ, ಹಾಗೆಯೇ ಸೈಮನ್ ಕಮಿಶನು ಅವಮರ್ಯಾದಿತವಾಗಿ ತಿರಸ್ಕೃತವಾದ ಮೇಲೆ ರೌಂಡ' ಟೇಬಲ್ ಕೊನ್ಫರೆನ್ಸು ದೇಶದ ರಾಜಕೀಯ ಉದ್ಧರಣೆಗಾಗಿ ರಚಿಸಲ್ಪಟ್ಟು ಆ ಮೇಲೆ ಅದು ಹಿಂದೆ ಜಿದಿದು, (White Paper) ಎಂಬ ಶೂನ್ಯ ಸುಧಾರಣೆಯು ತೋರಿಸಲ್ಪಟ್ಟು, ಅದು ಕೂಡ ದೊರಕಲು ಕಷ್ಟ ಸಾಧ್ಯವೆಂದು ಈಗ ಪರಿಣಮಿಸಿದುದು ಬರೇ ವಿಶ್ವಾಸಕ್ಕೆ ಅನರ್ಹನಾದ ಬ್ರಿಟಿಷನ ಸಾಮಾನ್ಯ ಮಾನಸಿಕತೆಯಹುದೇನೋ; ಕೊಂಗ್ರೆಸ್ಸು ಅಖಂಡ ಒಮ್ಮನಸಿನಿಂದ ಕಾರ್ಯರಂಗದಲ್ಲಿ ಶ್ರಮಿಸಿ, ದಣಿದು, ಸಹನೆಯ ಪರಮಾವಧಿಯನ್ನು ಸೇರಿ ಈಗ ಮತಭೇದಗಳಿಂದ ವಿಚ್ಛಿನ್ನವಾಗುವುದು ರಾಜಕೀಯ ಸಂಸ್ಥೆಗಳ ಸ್ವಾಭಾವಿಕ ಪರಿವರ್ತನೆಗಳೆನೋ; ಆದರೆ ವೀರರೂ ಸಾಹಸಿಗಳೂ, ಚೇತನಾತ್ಮಕರೂ, ಸುದೃಢರೂ ಆದ ಭಾರತೀಯ ಪುತ್ರರತ್ನಗಳು ಒಂದೊಂದಾಗಿ ಕಳಚಿ ಬಿದ್ದು ಅದೃಶ್ಯವಾಗುವುದು—ಅದು ಯಾವ ಕಾರಣವೊ—ದೈವವೊ,—ಗ್ರಹಗತಿಯೋ ಹೇಳುವವರಾರು?

ಸೇನಗುಪ್ತರ ಮರಣದ ದುಃಖದಿಂದ ಜನಾಂಗವು ಇನ್ನೂ ನಗುಮುಖವಾಗಿಲ್ಲ, ಪರಾಜಯದ ಸಂತಾಪದಿಂದ ಕಾಂಗ್ರೆಸ್ಸು ಇನ್ನೂ ತಣಿದಿಲ್ಲ; ಅಷ್ಟರೊಳಗೆನೇ ಮೇಲಿಂದ ಮೇಲಾಗಿ ಈ ಪುತ್ರಶೋಕದ ಜ್ವಾಲೆಯು ಹಿಂದೂಸ್ಥಾನದ ಗರ್ಭವನ್ನು ಸುಡಲು ಬಂದುದು—ಇದಕ್ಕಾಗಿ ವಿಧಾತನನ್ನು ದೂರದೇ ಕಲ್ಲದೆ ಮತ್ತೇನು?

ವಿಠ್ಠಲಭಾಯಿ ಪಟೇಲರೆಂದರೆ ಅಂತಹವರು, ಕಾಂಗ್ರೆಸ್ಸಿನ ಯುದ್ಧರಂಗದಲ್ಲಿ ಅಂತಹ ಚಾಣಾಕ್ಷ ವೀರರು ಇತರರಿಲ್ಲ. ಅವರ ಹೃದಯ ಪ್ರತಿಸ್ಪಂದನವೂ ಭಾರತೀಯ ನೆನವನ್ನಿತ್ತು; ಅವರ ಬಾಯಿಯು ಪ್ರತಿ ಮಾತೂ ಅವಳ ಸ್ವಾತಂತ್ರ್ಯವನ್ನು ಪ್ರಾರ್ಥಿಸುತ್ತಿತ್ತು. ಅದಕ್ಕಾಗಿ ಅವರು ಯಾವ ತರದಲ್ಲಿ ಸಹನೆಯನ್ನು ವಹಿಸಿರಲಿಲ್ಲ?

ಕಾಂಗ್ರೆಸ್ಸಿನೊಳಗೆ ಧುರೀಣರು ಹಲವರಿದ್ದಾರೆ. ಆದರೆ ಧುರೀಣರಲ್ಲಿ ಹೆಚ್ಚಿನವರು ಸಾಮಾನ್ಯ ಜನರಿಗೆ ಧುರೀಣರು; ಅಂತರ್ಯದಲ್ಲಿ ಅವರು ಅನುಯಾಯಿಗಳು. ಕಾಂಗ್ರೆಸ್ಸಿನಲ್ಲಿ ಇಂದಿನ ದಿನದಲ್ಲಿ ಧುರೀಣರು ಹೆಚ್ಚಿಲ್ಲ. ಆದರೆ ವಿಠ್ಠಲಭಾಯಿ ಪಟೇಲರು ಅಂತಹ ಧುರೀಣರಾಗಿರಲಿಲ್ಲ. ಅವರಲ್ಲಿ ವೈಯಕ್ತಿಕತೆ ಇತ್ತು; ಸ್ವಂತ ಧುರೀಣತೆ ಇತ್ತು; ದೂರದರ್ಶಿಕತೆ ಇತ್ತು; ವಿಚಕ್ಷಣತೆ ಇತ್ತು; ಎಲ್ಲಕ್ಕೂ ಮಿಗಿಲಾಗಿ ದೃಢತೆಯಿತ್ತು.

೧೯೨೦ನೇ ಇಸವಿಯ ಅಸಹಕಾರ ಚಳವಳದಲ್ಲಿ ಅವರು ಕಾಂಗ್ರೆಸ್ಸಿನ ವಿರುದ್ಧವಾಗಿದ್ದರು. ಅವರು ಸರಳ ವಕ್ತಾರಗಳಾಗಿರಲ್ಲಿ. ಆದರೆ [illegible] ಮೂಲಕ ಜನತೆಯನ್ನು ಸ್ವಾಧೀನ [illegible] ಮಾಡುವುದು ಸ್ವತಂತ್ರ್ಯ [illegible] ಇಲ್ಲ, ಅವರು ಎಲ್ಲಿ [illegible] ಇರುವನು. [illegible] ಮಾಡುತ್ತಿರಲಿಲ್ಲ; [illegible] ತಮ್ಮ ಸಂದೇಶವನ್ನು ಕೊಡುತ್ತಿರಲಿಲ್ಲ. ಅದುದರಿಂದ ಅವರು ಶ್ರೇಷ್ಠ ವರ್ಗದ ವಕ್ತಾರಗಳಾಗಿದ್ದರೂ ಜನತೆಯ ವಿಶ್ವಾಸಪಾತ್ರರಾಗುತ್ತಿದ್ದರು.

ಅವರ ಜೀವನವೇ ದೇಶಪ್ರೇಮದ ಜ್ಯೋತಿ. ಆ ಜ್ಯೋತಿಯಲ್ಲಿ ಏರಿಳಿವಿಕೆಗಳಿರಲಿಲ್ಲ. ತಪ್ಪುಗಳಿರಲಿಲ್ಲ. ಅವರ ರಾಜಕೀಯ ಧೋರಣವು, ರಾಜಕೀಯ ರಂಗದೊಳಗೆ ಅವರು ಬಂದಂದಿನಿಂದ ನಿಧನದ ವರೆಗೂ ಒಂದೇ. ಮಹಾತ್ಮಾಜೀಯವರ ಜೀವನದಲ್ಲಿ ಕೂಡ ತಪ್ಪು ತಿದ್ದುಪಡಿಗಳಿವೆ. ಆದರೆ ಪಟೇಲರ ಜೀವನದಲ್ಲಿ ತಪ್ಪುಗಳೇ ಇರಲಿಲ್ಲ. ೧೯೨೦ನೇ ಇಸವಿಯ ಮೊಂಟೆಗ್ಯುರವರ ಔದಾರ್ಯದಲ್ಲಿ ಕೂಡ ಮಹಾತ್ಮಾಜೀಯವರು ತಪ್ಪಿ ಹೋಗಿ ಹೋದಂತೆ—ಪಟೇಲರು ಮೋಸ ಹೋಗಿಲ್ಲ. ಅಂದಿನಿಂದ ಇಂದಿನ ವರೆಗೆ ಒಂದೆ—ಕಡದಾಡುವಿಕೆ.

ಹಿಂದೂಸ್ಥಾನಕ್ಕೆ ಇಡೀ ಜಗತ್ತಿನಲ್ಲಿ ನೂತನ ಗೌರವವನ್ನು ಅವರು ಉಂಟು ಮಾಡಿದುದು ಅವರು ಎಸೆಂಬ್ಲಿಯ ಅಧ್ಯಕ್ಷರಾಗಿದ್ದಾಗ. ಅವರ ನಿಶ್ಚಲತೆ, ಅವರ ದೃಢತೆ, ಅವರ ಧೈರ್ಯ, ಅವರ ಶೌರ್ಯ, ಅವರ ವಿಚಕ್ಷಣತೆ, ಮೇಲಾಗಿ ಅವರ ನಿಸ್ಸೀಮ ದೇಶಪ್ರೇಮ, ಇವೆಲ್ಲ ಸದ್ಗುಣಗಳು ಅವರ ಆ ಅಧಿಕಾರದ ಸ್ಥಳದಿಂದ ಪ್ರತಿಫಲಿಸಿದಂತೆ ಎಲ್ಲಿಯೂ ಕಂಡು ಬಂದಿಲ್ಲ. ಅಧಿಕಾರವೂ, ದ್ರವ್ಯ ಸಂಚಯವೂ ಮನುಷ್ಯನನ್ನು—ಎಂತಹ ಧುರೀಣನೇ ಆಗಲಿ, ತಲೆ ತಿರುಗಿಸುತ್ತಿದೆ. ಪಟೇಲರಿಗೆ ಇವೆರಡೂ ಬೇಕಷ್ಟು ಇದ್ದುವು. ಆದರೆ ಇವುಗಳಿಂದ ಅವರು ಸೋತು ಹೋಗುವ ಬದಲಿಗೆ ಇವುಗಳ ಮೇಲೆ ಅವರು ವಿಜಯವನ್ನು ದೊರಿದರು. ಜೀವನದ ಮಹತ್ವವನ್ನು ಸೂಚಿಸಲಿಕ್ಕೆ ಇದಕ್ಕಿಂತ ಮಿಗಿಲಾದುದು ಇನ್ನೊಂದಿಲ್ಲ.

ಎಸೆಂಬ್ಲಿಯ ಅಧ್ಯಕ್ಷರಾಗಿದ್ದಾಗ ಸರಕಾರಕ್ಕೆ ಅವರ ಹೆದರಿಕೆ ಇದ್ದಷ್ಟು ಅಸಹಕಾರದ ಸಮಯದಲ್ಲಿ ಗಾಂಧಿಗಳ ಹೆದರಿಕೆ ಸರಕಾರಕ್ಕಿರಲಿಲ್ಲ. ಏಕೆಂದರೆ ಶ್ರೀ ಪಟೇಲರು ಸರಕಾರದ ಕೊಟೆಯೊಳಗೆನೇ ಸರಕಾರದ ಆಯುಧಗಳಿಂದಲೇ ಸರಕಾರದೊಡನೆ ಯುದ್ಧ ಬೆಳಸಿದರು. ಮತ್ತು ಪ್ರತಿಯೊಂದು ಸಮಯದಲ್ಲಿಯೂ ವಿಜಯಶ್ರೀಯು ಅವರದಾಗಿದ್ದಿತು. ಇಷ್ಟು ವಿಶಾಲ ಅಧಿಕಾರವುಳ್ಳ ಸರಕಾರವು ಅವರಿಗೆ ತಲೆ ತಗ್ಗಿಸಿತು. ಅವರೊಡನೆ ಕಾದಾಡಿ ಕಡೆಗೆ ಅವರೊಡನೆ ಕ್ಷಮೆಯಾಚನೆ ಮಾಡಿತು. ಅಂತಹ ದೃಢ, ನಿಶ್ಚಲ, ಪ್ರತಿಭಾಸಂಪನ್ನ ಅಧ್ಯಕ್ಷರು ಇನ್ನು ಎಸೆಂಬ್ಲಿಗೆ ಎಂದಿಗೂ ದೊರಕಲಿಕ್ಕಿಲ್ಲ.

ದೇಶದ ಕರೆಯು ಬಂದಾಗ ಅವರು ಸುಮ್ಮನಿರಲಿಲ್ಲ, ತಪ್ಪಿಸಿಕೊಳ್ಳುವುದಾದರೆ ಅವರಿಗೆ ಹಲವು ನೆವನಗಳಿದ್ದುವು. ಎಸೆಂಬ್ಲಿಯ ಜವಾಬ್ದಾರಿ, ಅನಾರೋಗ್ಯ, ಇವುಗಳನ್ನು ಹೇಳಿ ಅಧ್ಯಕ್ಷತನದ ಅಧಿಕಾರವನ್ನೂ ಗೌರವವನ್ನೂ, ದ್ರವ್ಯವನ್ನೂ ಸುಖವಾಗಿ ಅನುಭವಿಸಬಹುದಿತ್ತು. ಆದರೆ ಮುಹೂರ್ತ ಬಂದ ಕೂಡಲೇ ಅವರು ಅದನ್ನು ತ್ಯಜಿಸಿದರು. ಕಾಂಗ್ರೆಸ್ಸಿನ ಸಮರವನ್ನು ಸೇರಿದರು. ಈ ವರೆಗೆ ಎಸೆಂಬ್ಲಿಯ ಅಧ್ಯಕ್ಷರಾಗಿ ಸರಕಾರದ ತಲೆ ತಗ್ಗಿಸಿದವರು ಸತ್ಯಾಗ್ರಹಯೋದ್ಧರಾಗಿ ಸರಕಾರದ ಜೈಲನ್ನು ಸೇರಿದರು. ಪ್ರಾಯಶಃ ಇಷ್ಟು ಶೀಘ್ರ ಮರಣಕ್ಕೆ ಅವರ ಈ ಜೈಲುವಾಸವೂ ಕಾರಣವಾಗಿರಬಹುದು.

ಆರೋಗ್ಯ ಸಂಪಾದನೆಗಾಗಿ ಅವರು ಯುರೋಪಿಗೆ ಯಾತ್ರೆ ಬೆಳಸಿದರಾದರೂ ಅವರು ಅಲ್ಲಿ ಕೂಡಾ ಸುಮ್ಮನಿರಲಿಲ್ಲ. ಅವರು ಯುರೋಪಿನ ದೇಶಗಳನ್ನೂ, ಇಂಗ್ಲೆಂಡನ್ನೂ ಆಯರ್ಲೆಂಡನ್ನೂ ಸಂಚರಿಸುತ್ತ ಹಿಂದೂಸ್ಥಾನದ ರಾಷ್ಟ್ರೀಯತೆಯನ್ನು ಪ್ರಸರಿಸಿದರು. ಮಹಾತ್ಮಾಜೀಯವರು ಸತ್ಯಾಗ್ರಹವನ್ನು ನಿಲ್ಲಿಸಿ ಪರಾಜಯದ ನಿರಾಶೆಯನ್ನು ಉಸುರಿದಾಗ, ಹಿಂದೂಸ್ಥಾನವು ಅವಮಾನದ ದೂಳಿನಲ್ಲಿ ಉಳಿಯಬಾರದಾಗಿಯೂ, ಸ್ವಾತಂತ್ರ್ಯದ ಧ್ವಜವನ್ನು ಇಳಿಸಬಾರದಾಗಿಯೂ ಯೂರೋಪಿನಿಂದ ಅವರು ವೀರಾವೇಶವನ್ನೆತ್ತಿದರು.

ಅಂತಹ ವೀರಪುತ್ರನನ್ನು ಕಳಕೊಳ್ಳುವ ದುರ್ಭಾಗ್ಯವು ಹಿಂದೂಸ್ಥಾನದ್ದಾಗಿದೆ. ಜೈಲಿನೊಳಗಿಂದ ಹೊರಬಂದ ಬಹುಮಂದಿ ಹಿಂದೀಗಳು ಆರೋಗ್ಯವನ್ನು ಕಳಕೊಂಡಿದ್ದಾರೆ. ಮರಣಕ್ಕೆ ತುತ್ತಾದವರ ಸಂಖ್ಯೆಯೂ ಕಡಿಮೆಯಿಲ್ಲ. ಸುಭಾಷ ಚಂದ್ರಬೋಸರಂತೆ ಆರೋಗ್ಯವು ಪುನರ್ಲಾಭವಾಗದವರೂ ಹಲವರಿದ್ದಾರೆ. ಭಾರತೀಯ ಈ ನಿಟ್ಟುಸಿರು ಎಂದಿನ ವರೆಗೆ?

ಶಸ್ತ್ರನಿಷ್ಠಾನ ಶಾಸನವನ್ನು ಜರ್ಮನಿಯು ತೊರೆದು ನಡೆದುದರ ಸಂಬಂಧವಾಗಿ ಪ್ರಧಾನ ಮಂತ್ರಿ ಮಿ। ಮೆಕ್ಡೊನಾಲ್ಡರು ಸಭೆಯಲ್ಲಿ ಒಂದು ಭಾಷಣಮಾಡುತ್ತಾ "ಜರ್ಮನಿಯು ಪುನಃ ಸಭೆಗೆ ಬರುವುದು ಯೋಗ್ಯ" ವೆಂದರು.

ಪರದೇಶ ವರ್ತಮಾನ

[illegible] ಎಲ್ಲಾ ಭಾಗಗಳಲ್ಲೂ [illegible] [illegible] ಮರಣಗಳು ಕಳೆದ ವಾರ ಘಟಿಸಿತು.

ಚಿತ್ತಗಾಂಗಿನಲ್ಲಿ ಶ್ರೀ ಎಸ್. [illegible] ಎಂಬವರ ಬಾಯಿಯು ಮಳೆ ಬರುತ್ತಿದ್ದಾಗ ಇಬ್ಬರು ಮುಸಲ್ಮಾನರು ಬಂದು [illegible] ದಾರಿಯಲ್ಲಿ ಮಳೆ ಬಹಳವಾಗುವುದರಿಂದ ಒಂದು ಗೋಡೆಯ ಮರೆಯಲ್ಲಿ ನಿಂತರು. ಕೂಡಲೇ ಬಂದು ಬರೆದು ಮೂವರೂ ಆಕ್ರಮಿಸಿದರು. ಅವರನ್ನು ಹುಡುಕಿಕೊಂಡು ಹೋದ ಅನ್ವೇಷಣೆಗೂ ಅದೇ ಗತಿಯಾಯಿತು.

ಚಿತ್ತಗಾಂಗಿನಲ್ಲಿ ಅಸಾಂ ಬಂಗಾಳ ರೈಲ್ವೆಯ ಮುಖ್ಯ ತಂತಿ ಸರಿಗೆಗಳು ಕಡಿಯಲ್ಪಟ್ಟುವು. ಒಬ್ಬ ಬಂಗಾಳಿ ಯುವಕನ ಪತ್ತೆಯಾಗಿದೆ.

ಕಲ್ಕತ್ತದಲ್ಲಿ ತನ್ನ ಅಪ್ಪಣೆಯಂತೆ ತನ್ನನ್ನು ಕಾಣದೆ ತಲೆತಪ್ಪಿಸಿಕೊಂಡುದಕ್ಕಾಗಿ ಪೂರ್ಣದು ಕುಮಾರಸೇನ್ ಎಂಬವನಿಗೆ ಅಲ್ಲಿಯ ಮಾಜಿಸ್ಟ್ರೇಟರು ಹನ್ನೆರಡು ತಿಂಗಳುಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಲಾಹೋರಿನ ಗವರ್ನಮೆಂಟ್ ಕೋಲೇಜಿನ ಶೋಧನಾಲಯದಲ್ಲಿ ಶಂಭುನಾಥನೆಂಬ ಒಬ್ಬ ವಿದ್ಯಾರ್ಥಿಯು ಶೋಧ ನಡಸುವಾಗ ಮದ್ದು ಸ್ಫೋಟನಗೊಂಡು ಆತನು ಗಾಯಗೊಂಡು ಬಹು ವಿಷಮಸ್ಥಿತಿಯಲ್ಲಿ ರುವನು.

ಚಿತ್ತಗೋಂಗಿನಲ್ಲಿ ಪರಿಚಿತ ಸೆಕ್ರೆಟ ಕಾರ್ಡುಗಳನ್ನು ಹಿಡಿದುಕೊಳ್ಳದಿದ್ದುದಕ್ಕಾಗಿ ಅನೇಕ ಜನರು ಕೈದು ಮಾಡಲ್ಪಟ್ಟಿರುವರು. ೩ ಮಂದಿ ವಿದ್ಯಾರ್ಥಿಗಳೂ ಇರುವರು

ಶ್ರೀಮತಿ ಸರೋಜಿನಿ ನಾಯ್ಡು, ಬಾಬು ಪುರುಷೋತ್ತಮದಾಸ್ ಟಂಡನ್ ಮೊದಲಾದ ಸಂಯುಕ್ತ ಪ್ರಾಂತ್ಯದ ಧುರೀಣರ ಸಭೆ ಸೇರಿ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಿಕೊಂಡಿರುವರು. ಶ್ರೀಮತಿ ನಾಯ್ಡುರವರು ಮುಂಬಾಯಿಗೆ ಹಿಂತಿರುಗಿರುವರು.

ಜಪಾನವು ಹಿಂದೂದೇಶದಿಂದ ಹತ್ತಿಯನ್ನು ಪಡೆದುಕೊಂಡರೆ ಜಪಾನಿನ ಸರಕು ಹಿಂದೂದೇಶದಲ್ಲಿ ಕಾಲಿಡಬಹುದೆಂದು ನ್ಯೂ ಡಿಲ್ಲಿಯಲ್ಲಿ ಜಪಾನ ವ್ಯಾಪಾರೀ ಪ್ರತಿನಿಧಿಗಳಿಗೂ ಇಂಡಿಯಾ ಸರಕಾರಕ್ಕೂ ಒಪ್ಪಂದವಾಗಲಿದೆ.

ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾದ ಸರ್ ಆರ್. ಕೆ. ಷಣ್ಮುಗಂಚೆಟ್ಟಿಯವರು ಅಸ್ವಸ್ಥರಾಗಿರುವರು.

ಪಶ್ಚಿಮ ಗೋದಾವರಿಯಲ್ಲಿ ನೆರೆಹಾವಳಿಯಿಂದ ಬಳಲಿದ ಜನರ ಸಹಾಯಾರ್ಥವಾಗಿ ಸರಕಾರವು ರೂ. ೫೦೦೦ವನ್ನು ಮಂಜೂರು ಮಾಡಿರುತ್ತದೆ.

ಕಲ್ಕತ್ತದಲ್ಲಿನ ಸಮುದ್ರದಲ್ಲಿ ಬಿರುಗಾಳಿಯೆದ್ದು ಷಣ್ಮುಗನಾಥಂ ಎಂಬ ೧೯ ಜನರಿದ್ದ ದೋಣಿಯು ೫೦೦ ಮೈಲುಗಳ ದೂರ ದೇಶಕ್ಕೆ ಅಲೆಗಳೊಡನೆ ಕೊಚ್ಚಿಕೊಂಡೊಯ್ಯಲ್ಪಟ್ಟು ಮೂರು ದಿನಗಳ ನಂತರ ನಾಡಿಗೆ ತಲಪಿತು.

ಮಹಾತ್ಮಾ ಗಾಂಧಿಯವರು ಆಂಧ್ರ ದೇಶದಲ್ಲಿ ಸಂಚಾರ ಮಾಡಲಿರುವುದರಿಂದ ಅವರಿಗೆ ತಾವು ಮಾನಪತ್ರವನ್ನರ್ಪಿಸಬೇಕೆಂದು ಎಲ್ಲೂರು ಮುನಿಸಿಪಾಲಿಟಿಯವರು ನಿರ್ಧರಿಸಿರುವರು.

ದಿವಂಗತ ವಿ. ಜೆ. ಪಟೇಲರ ಕುರಿತು ಶ್ರೀ. ಜವಾಹರಲಾಲರು ಅಭಿಪ್ರಾಯ ಕೊಡುತ್ತಾ "ಅವರು ಆರೋಗ್ಯ ಅನಾರೋಗ್ಯ ಸ್ಥಿತಿಗಳಲ್ಲೂ ಹಿಂದೂಸ್ಥಾನದ ಸ್ವತಂತ್ರ್ಯಕ್ಕಾಗಿ ದುಡಿದವರು. ನಮ್ಮ ರಾಷ್ಟ್ರೀಯ ಸಮಸ್ಯೆಯು ಅನೇಕ ವಿಭೂತಿ ಪುರುಷರನ್ನು ನುಂಗಿತು, ಇನ್ನೂ ನುಂಗಲಿದೆ. ಆದರೆ ನಮ್ಮ ಯಂತ್ರವು ನಿಲ್ಲದೇ ನಡೆಯುವುದು" ಎಂದರು.

ಹೈದರಾಬಾದಿನ ನಾಲಗುಟ್ಟ ಎಂಬಲ್ಲಿ ವಿದ್ಯುಚ್ಛಕ್ತಿಯ ಕಂಭವೊಂದನ್ನು ಮುಟ್ಟಿ ಎಲ್ಲಮ್ಮನೆಂಬ ೫ ವರ್ಷದ ಮಗುವು ಒಡನೆ ತೀರಿಕೊಂಡಿತು, ಇದನ್ನು ಕಂಡು ತಾಯಿಯು ಬೊಬ್ಬೆಯಿಡುತ್ತಾ ಬಂದು ಮಗುವನ್ನು ಮುಟ್ಟಲು ತಾಯಿಗೆ ಬಲವಾದ ಕಂಪನವುಂಟಾಯಿತು. ತನಿಖೆ ನಡೆಯುತ್ತದೆ. ವಿದ್ಯುದ್ವೀಪದ ಸರಿಗೆಯು ಕೆಳಗಿಳಿದುದೇ ಈ ಮರಣಕ್ಕೆ ಕಾರಣ!

ಪಾಟ್ನಾ ಸೆರೆಮನೆಯಲ್ಲಿ ಶ್ರೀ ಬಾಬುರಾಜೇಂದ್ರ ಪ್ರಸಾದರು ಅಸ್ವಸ್ಥರಾಗಿರುವರಷ್ಟೆ!—ಅವರ ಸ್ಥಿತಿಯು ಬೇಕಿನ ಮಟ್ಟಿಗೆ ಸುಧಾರಿಕವಾಗಿರುವುದಿಲ್ಲ.

ತಿರುವಾಂಕೂರು ರೈತರಿಗೆ ರೂ. ೧೧೦,೦೦೦ವನ್ನು ಸಾಲ ಕೊಡಲು ಅಲ್ಲಿ ಬಜೆಟಿನಲ್ಲಿ ಪ್ರತ್ಯೇಕಿಸಲಾಗಿದೆ.

ಲಾಹೋರಿನ ಮೊಂಟ್‌ಗೊಮರಿ ಸೆರೆಮನೆಯಲ್ಲಿ ೬ ತಿಂಗಳ ಕಾರಾವಾಸ ಮತ್ತು ೫ ವರ್ಷಗಳ ರಿಫೋರ್ಮೆಟರಿ ಶಾಲೆಯ ಶಿಕ್ಷೆಗೆ ಗುರಿಯಾಗಿದ್ದ ತರುಣ ಕೈದಿಯೊಬ್ಬನು ತಲೆತಪ್ಪಿಸಿರುವನು.

ದಕ್ಷಿಣ ಕನ್ನಡ.

ಮಂಗಳೂರು: — ಇದೇ ತಿಂಗಳ ತಾರೀಕು ೨೯ನೇ ಆದಿತ್ಯವಾರ ಬೆಳಿಗ್ಗೆ ೮॥ ಘಂಟೆಗೆ ಇಲ್ಲಿಯ ಬ್ರಹ್ಮ ಸಮಾಜದವರ ಮಂದಿರದಲ್ಲಿ ರಾವ್ ಸಾಹೇಬ್ ಡಾ॥ ವಿ. ರಾಮಕೃಷ್ಣರಾವ್, ಎಂ. ಎ. ಎಲ್. ಟಿ. ಪಿಎಚ್. ಡಿ. ರಿಟಾಯರ್ಡ್ ಪ್ರಿನ್ಸಿಪಾಲ್ ಪಿಠಾಪುರ ರಾಜರ ಕಾಲೇಜ್, ಕೊಕನಾಡ ಇವರು ದೇವಾರಾಧನ ಮತ್ತು ಧರ್ಮ ವ್ಯಾಖ್ಯಾನ ಮಾಡುವರು. ಸರ್ವರಿಗೂ ಸುಸ್ವಾಗತವಿದೆ.

ಇದೇ ತಾ ೨೧ನೇ ದಿನ ಅತ್ತಾವರ ಮುನಿಸಿಪಲ್ ಹುಡುಗರ ಶಾಲೆಯಲ್ಲಿ ದಿ ಮುನಿಸಿಪಲ್ ಟೀಚರ್ಸ್ ಎಸೋಸಿಯೇಶನಿನ ತೃತೀಯ ವಾರ್ಷಿಕೋತ್ಸವವು ಡಾ॥ ವಿಠ್ಠಲಶೆಟ್ಟಿ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಯಕ್ಷಗಾನವನ್ನು ಇನ್ನಷ್ಟು ವ್ಯವಸ್ಥೆಗೊಳಿಸಿ ಪ್ರಚಾರಗೊಳಿಸುವ ನಿಮಿತ್ತ ಸಂಘವೊಂದನ್ನು ಸ್ಥಾಪಿಸುವ ಸಲುವಾಗಿ ಇದೆ ಬರುವ ನವಂಬರ ತಾ. ೪ನೆಯ ಶನಿವಾರ ಸಾಯಂಕಾಲ ಘಂಟೆ ೫ಕ್ಕೆ ಸರಿಯಾಗಿ ಮಹಾಸಭೆಯೊಂದು ಮಂಗಳೂರು ಕೆನರಾ ಹೈಸ್ಕೂಲಿನ ಭುವನೇಂದ್ರ ಮಂದಿರದಲ್ಲಿ ನೆರವೇರಲಿರುವುದು. ಗಂಟೆ ೫.೪೦ಕ್ಕೆ ಶ್ರೀ ಬಲಿಪ ನಾರಾಯಣ ಭಾಗವತರ ಹಾಡುವಿಕೆಯಿಂದ ಯಕ್ಷಗಾನ ಸಮಾರಂಭವೂ ಜರಗಲಿರುವುದು. ಸದರಿ ಸಮಾರಂಭಗಳಿಗೆ ಸರ್ವರೂ ಬಂದು ಪ್ರೋತ್ಸಾಹಿಸಬೇಕಾಗಿ ಕೆ. ಬಾಲಕೃಷ್ಣರಾವ್, ಬಿ. ಎ., ಬಿ. ಎಲ್., ಎಡ್ವೋಕೇಟ್‌ರವರು ತಿಳಿಸುತ್ತಾರೆ.

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ. ೧೮ರಲ್ಲು ಪ್ರಸಿದ್ಧ ನರ್ತಕಿಯರ ನರ್ತನ ಮತ್ತು ಹಾಸ್ಯ. ನಂತರ "ಹೇಡ್ ಬೋಯ್ಸ್" ಎಂಬ ಸೀರಿಯಲ್. ಇದರೊಡನೆ ನರ್ತನವಿದೆ. ಅನಂತರ ಮಿಸ್ ಗೋಹರರಿಂದ ಅಭಿನಯಿಸಲ್ಪಟ್ಟಿರುವ "ಮಿಸ್ ೧೯೩೩". ಈ ಚಿತ್ರವು ಮುಂಬಾಯಿ ನಗರದಲ್ಲಿ ಈಗಲೂ ೧೦ ವಾರಗಳಿಂದ ಪ್ರದರ್ಶಿಸಲ್ಪಡುತ್ತಿದೆ. ಮುಂಬಾಯಿ ನಗರವನ್ನೇ ಆನಂದಸಾಗರದಲ್ಲಿ ಮುಳುಗಿಸಿರುವುದು.

ತಾ. ೨೮—೯—೩೩ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವರ್ಗದಾರರ ಸಂಘದವರು ಮಾನ್ಯ ರಿವಿನ್ಯೂ ಮೆಂಬರರಿಗೆ ರಿಸೆಟ್ಲ್‌ಮೆಂಟ್ ಸಂಬಂಧವಾಗಿ ಮಂಗಳೂರಲ್ಲಿ ಮಾಡಿದ ಮನವಿಗೆ "ದಕ್ಷಿಣ ಕನ್ನಡ ಜಿಲ್ಲೆಯ ರಿಸೆಟ್ಲ್‌ಮೆಂಟ್‌ನ ಕುರಿತು ಸರಕಾರವು ಸ್ಕೀಮ್ ರಿಪೋರ್ಟ್ ಹೊರಡಿಸುವಾಗ ಈ ಮನವಿಯನ್ನು ಅವಗಾಹನೆಗೆ ತಂದುಕೊಳ್ಳಲಾಗುವುದು" ಎಂದು ಉತ್ತರ ಬಂದಿದೆಯಾಗಿ ವರ್ಗದಾರರ ಸಂಘದ ಜನರಲ್ ಸೆಕ್ರೆಟರಿಯವರು ಬರೆಯುತ್ತಾರೆ.

ಉಡುಪಿ — ಶ್ರೀಮಾನ್ ವಿಠ್ಠಲಬಾಯಿ ಪಟೇಲರವರ ನಿಧನದ ಬಗ್ಗೆ ದುಃಖಸೂಚಕವಾಗಿ ತಾ. ೨೬ನೇ ಗುರುವಾರ ಹರತಾಳವನ್ನು ಆಚರಿಸಿರುತ್ತಾರೆ. ಅಂದೇ ಸಾಯಂಕಾಲ ಸ್ಥಳೀಯ ಕ್ಲಬ್ಬಿನ ಮೈದಾನದಲ್ಲಿ, ಇವರ ಆತ್ಮಕ್ಕೆ ಶಾಂತಿಯು ದೊರೆಯಲೆಂದು ದೇವರನ್ನು ಪ್ರಾರ್ಥಿಸುವರೆ ಮುಸ್ಲಿಮರ ಮಹಾ ಸಭೆಯು ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ್ ಬಹದ್ದೂರರವರ ಅಧ್ಯಕ್ಷತೆಯಲ್ಲಿ ಕೂಡಲಿರುವುದಾಗಿಯೂ ಒಂಭತ್ತು ಪ್ರಮುಖ ಗೃಹಸ್ಥರ ಸಹಿಯ ವಿನಂತಿ ಪತ್ರಗಳು ಹಂಚಲಾಗಿವೆ.

ಕರ್ನಾಟಕ ರಂಗಭೂಮಿಯಲ್ಲಿ ಪ್ರಖ್ಯಾತಗೊಂಡ ಶ್ರೀ ಅಂಜನೇಯ ಪಾತ್ರವನ್ನು ಮಾಡುವ ಶ್ರೀ ನಂಜುಂಡಯ್ಯನವರು ಸ್ವಕಾರ್ಯ ನಿಮಿತ್ತ ಇಲ್ಲಿಗೆ ಬಂದ ಸಂದರ್ಭವನ್ನು ಉಪಯೋಗಿಸಿಕೊಂಡು, ಶ್ರೀ ವೆಂಕಟ್ರಮಣಸ್ವಾಮಿ ನಾಟಕ ಕಂಪೆನಿಯವರು ಎರಡು ಸಲ ಲಂಕಾದಹನ ನಾಟಕವನ್ನು ಸದ್ರಿಯವರಿಂದ ಅಂಜನೇಯ ಪಾತ್ರವನ್ನು ಮಾಡಿಸಿ ಜನ ಮನಸ್ಸನ್ನು ಸಂತೋಷಗೊಳಿಸಿದರು; ಕಂಪೆನಿಯವರಿಗೂ, ಯೋಗ್ಯ ಪ್ರಯೋಜನವಾಯಿತು.

ಬಂಟ್ವಾಳ — ಇಲ್ಲಿಯ ಬೋರ್ಡ್ ಹೈಸ್ಕೂಲಿನ ಸೀನಿಯರ್ ಕ್ರಿಕೆಟ್ ಟೀಮಿನವರಿಗೂ ಪುತ್ತೂರು ಬೋರ್ಡ್ ಹೈಸ್ಕೂಲಿನ ಸೀನಿಯರ್ ಕ್ರಿಕೆಟ್ ಟೀಮಿನವರಿಗೂ ಪಂದ್ಯಾಟವು ನಡೆದು ಬಂಟವಾಳದವರು ಗೆದ್ದರು.

ಬಂಟವಾಳ ಮಹಾಲಿಂಗೇಶ್ವರ ದೇವಸ್ಥಾನದ ಉದ್ಧಾರಕ ಕಮಿಟಿಯವರ ಸಭೆಯು ಆದಿತ್ಯವಾರ ಜರಗಿ ೮ ಮಂದಿ ಕೋಟ ಬ್ರಾಹ್ಮಣರು ಇಬ್ಬರು ಗೌಡಸಾರಸ್ವತ ಬ್ರಾಹ್ಮಣರು, ಒಬ್ಬರು ಸಾರಸ್ವತ ಬ್ರಾಹ್ಮಣರು ೫ ಮಂದಿ ನಾಡವರು ಇಬ್ಬರು ಕುಂಬಾರರು ಒಬ್ಬರು ವೈಶ್ಯ ಕೊಂಕಣಿಯರು ಒಬ್ಬರು ಕ್ರಿಶ್ಚನರು ಒಬ್ಬರು ಗಾಣಿಗರು ಹೀಗೆ ೨೦ ಮಂದಿಯನ್ನು ಪಂಚಾಯತ ಕಮಿಟಿ ಮೆಂಬರರಾಗಿ ಚುನಾಯಿಸಿರುವರು. ಮುಂದಿನ ಸಭೆ ೨೯ರಲ್ಲಿ ನಡೆಯುವದು.

ಬಂಟವಾಳ ಕರ್ನಾಟಕ ಸಂಘದ ಸಭೆಯು ವಿಕ್ಟೋರಿಯಾ ಪ್ರೆಸ್ಸಿನ ಮಾಲೀಕರಾದ ರಾ. ಬ. ಕೃಷ್ಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ ತಿಂಗಳಿಗೊಂದರಂತೆ ಒಬ್ಬೊಬ್ಬರು ಭಾಷಣ ಕೊಡಬೇಕೆಂದು ನಿರ್ಣಯಿಸಲಾಯಿತು.

ಮುಲ್ಕಿ: — ಜಿಲ್ಲಾ ಹೆಲ್ತ್ ಆಫೀಸರರು ಇದೇ ಕಳೆದ ತಾ. ೭, ೮ ಮತ್ತು ೯ರಲ್ಲಿ ಇಲ್ಲಿ ಮೊಕ್ಕಾಂ ಮಾಡಿದ್ದು ತಾ. ೧೦ನೆ ಬೆಳಿಗ್ಗೆ ಹೊರಟು ಹೋದರು. ಇವರು ಪಟ್ಟಣವನ್ನು ಸುತ್ತಿ ನೋಡಿದುದಲ್ಲದೆ, ತಾ. ೯ನೆ ಬೆಳಿಗ್ಗೆ ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಮೇಲ್ತರಗತಿಯ ಮಕ್ಕಳನ್ನು ಕೂಟ್ಟುಗೂಡಿಸಿ 'ಅಂಟುರೋಗಗಳು ಮತ್ತು ಅವುಗಳ ನಿವಾರಣೋಪಾಯಗಳು' ಎಂಬ ವಿಷಯದಲ್ಲಿ ಸುಮಾರು ೧॥ ತಾಸುಗಳ ವರೆಗೆ ಮಾತಾಡಿದರು.

ಸ್ಥಳೀಕ ವೆಂಕಟ್ರಮಣ ದೇವಾಲಯದ ಟ್ರಸ್ಟಿಯವರು ಆರ್ಥಿಕ ದುಃಸ್ಥಿತಿಯಿಂದ ನರಳುತ್ತಿರುವ ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಗೆ ರೂ. ೫೦ನ್ನು ದಾನ ಮಾಡಿದುದು ಸ್ತೋತ್ರಾರ್ಹವಾಗಿದೆ.

ಸ್ಥಳೀಕ ಯೂನಿಯನ್ ಕ್ಲಬ್ಬಿನ ನೇತೃತ್ವದಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಮಂಗಳೂರಿನ ಸೈಂಟ್ ಎಲೋಸಿಯಸ್ ಕೋಲೇಜಿನ ಪ್ರಧಾನ ಕರ್ನಾಟಕ ಪಂಡಿತ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಇದೇ ಬರುವ ತಾ. ೨೮—೧೦—೩೩ನೇ ಶನಿವಾರ ಅಪರಾಹ್ನ ಘಂಟೆ ೫ಕ್ಕೆ "ಪಂಪನ ಕವಿತಾ ಮಾರ್ಗ" ಎಂಬ ವಿಷಯವನ್ನೆತ್ತಿಕೊಂಡು ಭಾಷಣ ಮಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಮಂಗಳೂರು ತಾಲೂಕು ಬೋರ್ಡು ಪ್ರಸಿಡೆಂಟ್ ಮಿ. ಎ. ಸಿ. ಗೊನ್ಸಾಲ್ವಿಸ್, ಬಿ. ಎ., ಬಿ. ಯಲ್.ರವರು ಇದೇ ತಿಂಗಳ ಆದಿಯಲ್ಲಿ ಇಲ್ಲಿಯ ಬೋರ್ಡು ಹಾ. ಎ. ಶಾಲೆಯನ್ನು ಆಕಸ್ಮಾತ್ತಾಗಿ ಸಂದರ್ಶಿಸಿ, ಸದಭಿಪ್ರಾಯಪಟ್ಟು ಹಿಂತೆರಳಿದರು.

ಮೂಡಬಿದ್ರೆ — ಮೂಡಬಿದ್ರಿ ಸೆಂಟರಿನ ಉಪಾಧ್ಯಾಯರ ಸಭೆಯು ಇದೇ ತಿಂಗಳ ೧೪ರಲ್ಲು ಮ. ರಾ. ರಾ. ಕರಂಜೆ ಶ್ಯಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು

ಅಡ್ಯಾರು — ಇಲ್ಲಿಯ ಶ್ರೀ ಮಹಲಿಂಗೇಶ್ವರ ಕೃಪಾಪೋಷಿತ ಸಂಘದವರು ಇದೇ ತಾರೀಕು ೨೪ನೇ ಮಂಗಳವಾರದಿಂದ ೨೮ನೇ ಶನಿವಾರದ ವರೆಗೆ ಪ್ರತಿ ದಿನ ಸ್ಸಾಯಂ ಘಂಟೆ ೪ಕ್ಕೆ ಹೊರಟು ಭಜನೆಯಿಂದ ನಗರ ಸಂಚಾರ ಮಾಡುವರಾಗಿಯೂ, ೨೯ನೇ ಆದಿತ್ಯವಾರ ಸ್ಸಾಯಂ ಘಂಟೆ ೪ಕ್ಕೆ ಸರಿಯಾಗಿ ಶ್ರೀಯುತ ಪುಂಡೂರು ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರ ಅಧ್ಯಕ್ಷತೆಯಲ್ಲಿ ಸಂಘದ ಕಟ್ಟಡದಲ್ಲಿ ಭಜನಾ ಮಂಗಲವನ್ನು ನೆರವೇರಿಸುವರಾಗಿಯೂ ಸಂಘಾಧ್ಯಕ್ಷರಾದ ಯಂ. ರವಿವರ್ಮರವರು ಸರ್ವರಿಗೂ ವಿನಯಪೂರ್ವಕವಾಗಿ ತಿಳಿಸುತ್ತಾರೆ. ಎಲ್ಲರಿಗೂ ಸುಸ್ವಾಗತವಿದೆ.

ಬೆಳ್ತಂಗಡಿ: — ಇಲ್ಲಿನ ಡಿಪ್ಯುಟಿ ತಹಶಿಲ್ದಾರ್ ರಾ ಗಣೇಶರವರ ಮುಂದಾಳುತ್ವದಲ್ಲಿ ಬೆಳ್ತಂಗಡಿಯ ಕ್ಲಬ್ ನವೀನ ಹುರುಪನ್ನು ಪಡೆದು ಸರ್ವಾಂಗ ಶೋಭಿತ ದಿಂದ ಮುನ್ನಡೆಯುತ್ತಿದೆ. ಮೊನ್ನೆ ತಾನೆ ಚಿತ್ರ್ಯಸಿದ್ಧ ಡಿಪ್ಯುಟಿ ಕಲೆಕ್ಟರರನ್ನು ಕ್ಲಬ್ಬಿನವರು ಶಾಲು ಫಲಹಾರಾದಿಗಳಿಂದ ಸತ್ಕರಿಸಿ ಅವರ ಗುಣ ಕಥನ ಮಾಡಿ ಅವರಿಗೆ ಶ್ರೇಯೋಭಿವೃದ್ಧಿಗಳನ್ನು ಹಾರೈಸಿ ಬೀಳ್ಕೊಂಡರು.

ಕಾಂತಾವರ — ಇದೇ ತಾ. ೨೦ರಲ್ಲು ಇಲ್ಲಿಯ ಬೇಲಾಡಿ ಚಾಮುಂಡಿ ಗೋಳಿ ಎಂಬಲ್ಲಿ ಇದೇ ಗ್ರಾಮಸ್ಥರಾದ ಮು॥ ರಾ॥ ಪುಂಡಾಡಿ ಬೀಡು ಪೂಜಾರಿಗಳ ಮಗ ಕಾರ್ಕಳ ಪಣಪಿಲು ಬೋರ್ಡು ಶಾಲಾ ಹೆಡ್ ಮಾಸ್ತರ ಶ್ರೀ ಕೆ. ಶ್ರೀಧರನವರ ಸಹೋದರ ಶ್ರೀ ದೇಜಪ್ಪ ಎಂಬವರು ಸುಮಾರು ೫೦೦ ರೂಪಾಯಿ ವೆಚ್ಚ ಮಾಡಿ ಹೊಸತಾಗಿ ಕಟ್ಟಿಸಿದ ಶಾಲಾ ಕಟ್ಟೋಣದಲ್ಲಿ ಇಂದು ಮಧ್ಯಾಹ್ನ ಗಂಟೆ ೧೧ ಘಂಟೆಗೆ ಬಹಳ ವಿಜೃಂಭಣೆಯಿಂದ ಶಾಲಾ ಪ್ರವೇಶೋತ್ಸವವು ನಡೆಯಿತು. ಶಾಲಾ ಪ್ರವೇಶೋತ್ಸವಕ್ಕೆ ಊರ ಪರವೂರ ಮಹನೀಯರು ಸುಮಾರು ೩೦೦ಕ್ಕೆ ಮಿಕ್ಕಿ ನೆರೆದಿದ್ದರು.

ಧನ ಸಹಾಯ ಮಾಡಿದವರ ಹೆಸರು:—ಶ್ರೀಗಳಾದ ಕೆ. ತಿಮ್ಮಪ್ಪ ಪೂಜಾರಿಯವರು ರೂ. ೧೦. ಕಾರ್ಕಳ ಬಸಟಿ ಶೆಂದಿ ಅಂಗಡಿ ತನಿಯಪ್ಪನವರು ರೂ. ೮. ಇರುವತ್ತೂರು ಬೋರ್ಡು ಶಾಲಾ ಹೆಡ್‌ಮಾಸ್ತರ್ ಕೆ. ವಾಸುದೇವ ಭಟ್, ರೂ. ೫. ಮಂಚದಬೈಲು ನರಸಿಂಗರಾಯರು, ರೂ. ೪. ನ್ಯಾಯತಬೆಟ್ಟು ಬಾಬು ಭಟ್ಟರು ರೂ. ೧. ಶ್ರೀಮತಿ ಪಂಜಾಡಿ ಲೂಜ ಬ್ಯಾ, ರೂ. ೧. ಕುರುಂದಿಲ ದೇವುರಾಜ ಅತಿಕಾರಿಯವರು ರೂ. ೧. ಕುಬಳಬೆಟ್ಟು ಉಮಯ್ಯ ಪೂಜಾರಿ ರೂ ೦—೮—೦. ಈ ಮಹನೀಯರುಗಳಲ್ಲದೆ ಇನ್ನನೇಕರು ವ್ಯಾಖ್ಯಾನ ಮಾಡಿರುವರೆಂದು ಶ್ರೀ ಕೆ. ಎಸ್. ರಾಘವೇಂದ್ರ ಭಟ್ಟರು ತಿಳುಹಿಸುತ್ತಾರೆ.

ಅಖಿಲ ಕರ್ನಾಟಕ ಔದ್ಯೋಗಿಕ ಮತ್ತು ವ್ಯವಸಾಯಿಕ ಪ್ರದರ್ಶನ, ಶ್ರೀ ಧರ್ಮಸ್ಥಳ.

ಈ ಮೊದಲು ಪ್ರಕಟಿಸಿದ ವಿವರಗಳ ಹೊರತು ಈ ಕೆಳಗಿನ ವಿವರಗಳು ಸಾರ್ವಜನಿಕವಾಗಿ ಈಗ ಜಾಹೀರಪಡಿಸಲ್ಪಡುತ್ತವೆ. (೧) ಕೈಗಾರಿಕೆ ಅಥವಾ ಔದ್ಯೋಗಿಕ ವಿಭಾಗದಲ್ಲಿ, ಈ ಮುಂಚೆ ಕೊಟ್ಟಿರುವದರ ಹೊರತು ನಮ್ಮ ಭರತ ಖಂಡಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ವಿಷಯದಲ್ಲಿ ತೈಲ್ಯ ವರ್ಣಗಳಿಂದ ಬರೆಯಲ್ಪಟ್ಟ ಮೂಲ ಕಲ್ಪನಾ ಚಿತ್ರಕ್ಕೆ ವಿಶೇಷ ಬಹುಮಾನವನ್ನು ಏರ್ಪಡಿಸಲಾಗಿದೆ.

೨. ಆಯುರ್ವೇದ ಔಷಧಿ ಸಂಗ್ರಹಗಳಲ್ಲಿ ವಿಶೇಷ ಬಹುಮಾನ ಒಂದು ಕೂಡಾ ಏರ್ಪಡಿಸಲ್ಪಟ್ಟಿದೆ. ಶಾಸ್ತ್ರೀಯ ಪ್ರಸಿದ್ಧ ಮದ್ದುಗಳಾದ
೧. ಷಡ್ಗುಣ ಜಾರಿತ—ಮಕರಧ್ವಜ (ಭೈಷಜ್ಯ ರತ್ನಾವಳಿ ಪ್ರಕಾರ).
೨. ತಾಮ್ರ ಭಸ್ಮ (ಯೋಗ ರತ್ನಾಕರ ಪ್ರಕಾರ)

ಈ ಎರಡು ಮದ್ದುಗಳನ್ನಾಗಲೀ ಇವುಗಳ ಪೈಕಿ ಕೇಳಿದ ಯಾವುದಾದರೂ ಒಂದನ್ನು ಅವಶ್ಯವಿದ್ದಲ್ಲಿ, ತಯಾರು ಮಾಡಿ ತೋರಿಸಲು ಸಿದ್ಧರಾಗಿರುವವರು ತರುವ ಮದ್ದುಗಳ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಆ ಸ್ಪರ್ಧೆಯಲ್ಲಿ ಭಾಗವಹಿಸುವವರು ಆ ಮದ್ದುಗಳ ಸಿದ್ಧಿ ಮಾಡಿ ತೋರಿಸಲು ಇಲ್ಲಿ ಸಿದ್ಧರಾಗಿರತಕ್ಕದ್ದು. ಇವಕ್ಕೆ ಬೇಕಾದ ಉಪಕರಣ ಮತ್ತು ದ್ರವ್ಯಗಳು ಇಲ್ಲಿ ಒದಗಿಸಲ್ಪಡುವುವು. ಅಭಿಜ್ಞ ಪಂಡಿತರ ಮತವು ಇದರಲ್ಲಿ ಕೊನೆಯ ತೀರ್ಮಾನವಾಗಿರುವುದು.

ತಾ. ೧೫—೧೧—೩೩ರಲ್ಲು (೧) ವಿಷಮ ಜ್ವರ (ಮಲೇರಿಯಾ) ೨. ಅತಿಸಾರ. ೩. ರಕ್ತಾತಿಸಾರ. ೪. ಪ್ಲೀಹ. ೫ ಕಲಿಜದ ಅತಿಕ್ರಮ, ೬. ಸನ್ನಿಪಾತ (ನಿಮೋನಿಯಾ) (ಪಾಶ್ಚಾತ್ಯ ಮತ್ತು ಆಯುರ್ವೇದ ಸಿದ್ಧಾಂತ) ಇವುಗಳ ಕುರಿತು ತಜ್ಞರಿಂದ ವೈದ್ಯರಿಂದ ಭಾಷಣಗಳು ಕೊಡುವಂತೇ ಏರ್ಪಡಿಸಲಾಗಿದೆ. ಎಲ್ಲಾ ವೈದ್ಯ ಮಹನೀಯರಿಗೂ ಸ್ವಾಗತವಿದೆ.

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ).

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಂಟ್ಯಾನ್, ಇಂಕ್ಸ್,
ಚ್ಯವನಪ್ರಾಶ, ಸ್ನೋ, ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director:—**Venkatraya Annappa Baliga**

Jubilee year! Jubilee year!

The Bombay Life Assurance Co. Ltd.,

Bombay—Established 1908.

Chairman:—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both, with reasonable Travelling Allowance. Only educated ladies need apply. Right opportunity to those who desire independant and respectable vocation.

Applications should reach the undersigned by 25th September 1933, giving full qualifications and whether they can guarantee business.

Apply to:— **KOCHIKAR BROTHERS,** **Madras Branch Secretaries.**

Vishveshwarapuram Circle, *Bangalore City.* *or* Udipi, *South India.* *or* Post Box No. 387, *Mount Road, Madras.*

N. B. Intending candidates may interview by previous appointment with our Organizing Secretary (now in Malabar) who will be touring.

(25—8—33.)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1—4—0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0. ಚವನಪ್ರಾಶಲೇಹ ೧ ರಾತಲಿಗೆ ರೂ. 2-8-0. ಅಭಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮುಖ್ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0—5—0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-4-0. ತೃಷ್ಣಾರಕ ೧ ಔನ್ಸಿಗೆ ರೂ. 0-6—0. ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0. ಮಹಾ ಚಿತ್ರಕ ತೊಲೆ ೧ಕ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1—0—0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 3—8-0.

ನಮ್ಮ ಔಷಧಗಳು ದೊರೆಯುವ ಸ್ಥಳಗಳು:— ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲ್‌ಬೈಲ್. ಬೈಂದೂರು—ಕೆ. ಪುತ್ತು ಶಾನುಭಾಗ. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ. ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ಎ. ವಿ. ಶೆಣೈ. ಕಾಪು—ಡಾಕ್ಟರ್ ಬಿ. ಕೆ. ಬೇಕಲ ಡಿಸ್ಪೆನ್ಸರಿ. ಬಟ್ಕಳ್—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವ್ಯಾಖ್ಯಾತಿಗಳಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli. Honnavar, Bangalore & Cannanore.

Authorised Capital Rs. 1,00,000. Subscribed Capital Rs. 1,00,000. Paid up Capital Rs. 20,000

STATEMENT OF AFFAIRS OF THE SYNDICATE AS ON 31ST September 1933.

LIABILITIES.	Rs.	ASSETS.	Rs.
Paid up Capital	20,000—0—0.	Loans on Land mortgage	2,75,298—12—6.
Reserve & other funds	20,250—0—0.	Loans on Valuable Securities	2,23,792—13—5.
Deposits	10,54,933—10—11.	Loans on Bills of Exchange, Hundis and Promissory Notes	4,59,985—8—4.
Due to Bankers	48,335—7—6.	Investment on Shares of other Companies	43,575—0—0.
		On Deposits with other Bankers	1,15,000—0—0
Bills for Collection	22,631—3—7.	Bills for collection (per contra)	22,631—3—7.
Sundries	1,22,321—13—5.	Sundries	1,14,721—4—9.
		Cash in hand & with Bankers	33,467—8—10
Total Rs.	12,88,472—3—5	Total Rs.	12,88,472—3—5.

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 1-10-1933. **P. A. Pai Bros.,** *Managing Agents.*

ಶ್ರೀಯುತ ಕೆ. ಎಫ್. ನರಿಮಾನರ ಬಿಡುಗಡೆ!

ದೇವರಿಗೆ ಅಪಮಾನ.

ರಷ್ಯದಲ್ಲಿನ ಲೆನಿನ್‌ಗ್ರೇಡ್ ಎಂಬಲ್ಲಿ ಒಂದು ವಸ್ತು ಪ್ರದರ್ಶನಾಲಯವಿದೆ. ಇದನ್ನು ಹೊರಗಿನಿಂದ ನೋಡುವಾಗ ದೊಡ್ಡ ಇಗರ್ಜಿಯಂತಿರುವುದು. ಎಷ್ಟೋ ಜನರು ಇದು ಇಗರ್ಜಿಯೆಂದು ಮೋಸ ಹೋಗುವುದೂ ಉಂಟು, ಆದರೆ ಒಳಹೊಕ್ಕು ನೋಡಿದರೆ ಈ ವಿಶಾಲ ಮಂದಿರವು ದೇವರಿಗೆ ವಿರುದ್ಧವಾದ ಅಪಮಾನಗಳನ್ನು ಚಿತ್ರಿಸಿ ತೋರಿಸುವ ವಸ್ತು ಪ್ರದರ್ಶನಾಲಯವೆಂದು ತಿಳಿಯುವುದು. ರಷ್ಯದಲ್ಲಿ ಮತಧರ್ಮಗಳನ್ನು ದ್ವೇಷಿಸುವುದಿಲ್ಲ. ಅಲ್ಲಿ ಇಗರ್ಜಿ ಮತ್ತು ಪುರೋಹಿತರೆಂದರೆ ಸಮಸ್ತ ಜನಾಂಗದ ವೈಷಮ್ಯಕ್ಕೆ ಕಾರಣ. ಗುರುಗಳು ಸ್ವಾರ್ಥಾಂಧರಾಗಿ, ದೇವರ ಹೆಸರಿನಿಂದ ನಡೆಸುವ ಸಾವಿರಾರು ಅನಾಚಾರಗಳನ್ನು ಈ ಮಂದಿರದಲ್ಲಿ ಚಿತ್ರಿಸಿ ತೋರಿಸುವರು. ದೇವರು ಇರುವುದಿಲ್ಲವೆಂದೂ, ಇದ್ದರೆ ಇಂತಹ ದುರಾಚಾರಗಳನ್ನು ಸಹಿಸುತ್ತಿದ್ದಿಲ್ಲವೆಂದೂ ಗೋಡೆಗಳಲ್ಲಿ ಬರೆಯಲ್ಪಟ್ಟಿದೆ. ಲೆನಿನ್‌ಗ್ರೇಡಿನ ಈ ಮಂದಿರದಲ್ಲಿ ಒಂದೆಡೆ ಕ್ರಿಸ್‌ಮಸ್ ಕಾಲದಲ್ಲಿ ಜನರು ಆನಂದಿಸಿ ಕೊನೆಗೆ ಮದ್ಯಪಾನ ಮಾಡಿ ಹಬ್ಬವನ್ನು ಮುಗಿಸುವ ಚಿತ್ರಗಳೂ ಬರಹಗಳೂ ಇವೆ. ದೇವರ ಹೆಸರಲ್ಲಿ, ಮುಂದಾಳಾಗಿ ಬಂದಿರುವ ರಾಜನೀತಿಜ್ಞರು ಮಾಡುವ ಯುದ್ಧ ಮತ್ತು ಅನಾಹುತಗಳೂ ಎಲ್ಲೆಲ್ಲೂ ಚಿತ್ರಿಸಲ್ಪಟ್ಟಿವೆ. ಒಂದೆಡೆ ಬ್ರಿಟಿಷ ಮಂತ್ರಿಯಾದ ಮೆಕಡೊನಾಲ್ಡರು ಇಗರ್ಜಿಯಲ್ಲಿ ಪ್ರಾರ್ಥನೆ ನಡೆಸುತ್ತಿರುವುದನ್ನು ಕಾಣಿಸಿ ನಕಲಿ ಮಾಡಿರುತ್ತಾರೆ. ಅಧರ್ಮಿಗಳು ದೇವರನ್ನು ನಂಬಿ ದೇವರಿಗೆ ಅಪಮಾನವನ್ನುಂಟು ಮಾಡಿರುವರೆಂದೇ ಈ ಚಿತ್ರಗಳ ಸೂಚನೆ.

ದೇವರ ಶಕ್ತಿ.

ದೇವರಿಲ್ಲವೆಂದು ಎಷ್ಟು ಒದರಿದರೂ ಮನುಷ್ಯನು ತನ್ನ ಕಷ್ಟ ಕಾಲದಲ್ಲಿ ಆತನನ್ನು ಕೂಗಿ ಆತನಲ್ಲಿ ಮರೆಯಾಗುತ್ತಾನೆಂಬುದು ಲೋಕವಿದಿತವು. ರಷ್ಯದಲ್ಲಿ (atheist) ನಾಸ್ತಿಕರ ಒಂದು ಬಲವಾದ ಸಂಗಡವಿದೆ. ದೇವರಿಲ್ಲವೆಂದೇ ಇವರ ವಾದ. ರಷ್ಯದಲ್ಲಿನ ಕಮ್ಯೂನಿಸ್ಟ್ ಸಂಗಡದವರೆಲ್ಲಾ ನಿರೀಶ್ವರವಾದಿಗಳಾಗಬೇಕೆಂದು ಅಲ್ಲಿ ಶರ್ತವಿದೆ. ಈ ಸಂಗಡಕ್ಕೆ ಸೇರಿಸಲ್ಪಡುವ ಮೊದಲು ಉಮೇದ್ವಾರನನ್ನು ಒಂದು ಕಮಿಟಿಯು ಅನೇಕಾನೇಕ ಪ್ರಶ್ನೆಗಳಿಂದಾಗಿ ಪರೀಕ್ಷಿಸುವುದು. ಈ ಪರೀಕ್ಷೆಯಲ್ಲಿ ಅವನು ತೇರ್ಗಡೆ ಹೊಂದಿದರೆ ಮಾತ್ರ ಅವನು ಸ್ವೀಕರಿಸಲ್ಪಡುವನು. ಈ ಸಂಗಡಕ್ಕೆ ಸರಕಾರದ ಬೆಂಬಲವೂ ಕೂಡಾ ಇದೆ. ಇದು ಕೇಳಿದಂತೆ ಕೊಡುವುದಕ್ಕೂ, ಹೇಳಿದಂತೆ ನಡೆಯುವುದಕ್ಕೂ ಸರಕಾರವು ಸಿದ್ಧ. ಒಮ್ಮೆ ಒಬ್ಬಳು ಸ್ತ್ರೀಯನ್ನು ನಾಸ್ತಿಕರ ಸಂಗಡಕ್ಕೆ ಸೇರಿಸಬೇಕಾಗಿತ್ತು. ಆ ಸ್ತ್ರೀಯನ್ನು ಅನೇಕಾನೇಕ ಪ್ರಶ್ನೆಗಳಿಂದ ಪರೀಕ್ಷಿಸಿದರು. ಎಲ್ಲಾ ಪ್ರಶ್ನೆಗಳಿಗೂ ಅವಳು ಸದುತ್ತರಗಳನ್ನಿತ್ತು, ದೇವರು ಇಲ್ಲವೆಂಬುದನ್ನೇ ಪ್ರತಿಪಾದಿಸಿದಳು. ಅವಳನ್ನು ಸಂಗಡಕ್ಕೆ ಸ್ವೀಕರಿಸಲಾಯಿತು, ಕಮಿಟಿಯು ಕೋಣೆಯ ಹೊರಗೆ ಬರುತ್ತಾ ಆ ಸ್ತ್ರೀಯು ಬೆವರನ್ನೊರೆಸಿ "ಅಬ್ಬಬ್ಬ ದೇವರೇ, ಪರೀಕ್ಷೆಯು ಹೇಗಾದರೂ ಮುಗಿಯಿತು!" ಎಂದಳು. ದೇವರಿಲ್ಲವೆಂದು ಅವಳು ಅರಗಳಿಗೆಯ ಮೊದಲು ಪ್ರತಿಜ್ಞೆಗೈದಿರುತ್ತಾ, ಕಷ್ಟಪರಿಹಾರದ ಸ್ಮರಣೆಯಲ್ಲಿ ದೇವರ ಸ್ಮರಣೆಯನ್ನು ಮಾಡಿದುದು ವಿಚಿತ್ರವಲ್ಲವೇ?

ಪುರುಷ-ಸ್ತ್ರೀಯರು.

ಮರ್ಮಸ್ಥಾನ ಭೇದಗಳುಂಟಾಗಿ ಸ್ತ್ರೀಯರು ಪುರುಷರಾಗುತ್ತಿರುವುದೂ, ಪುರುಷರು ಸ್ತ್ರೀಯರಾಗುತ್ತಿರುವುದೂ ಈಗಿನ ದಿನಗಳಲ್ಲಿ ಆಗಾಗ ಕೇಳಬರುತ್ತದೆ. ಆ ವಿಚಿತ್ರದೊಡನೆ ಸ್ತ್ರೀಯರು ಅನೇಕ ವರ್ಷಗಳ ತನಕ ತಾವು ಪುರುಷರಂತೆಯೇ ಜೀವನ ನಡೆಸಿದ ವಿಷಯಗಳೂ ಈಗೀಗ ಬಯಲಾಗುತ್ತಿವೆ. ಅಲ್ಲದೆ ಕೆಲವು ಪುರುಷರು ಕೂಡಾ ಸ್ತ್ರೀಯರ ವೇಷ ಧರಿಸಿ ತಮ್ಮ ದಿನಗಳನ್ನು ಕಳೆದ ವೈಚಿತ್ರ್ಯಗಳೂ ಇವೆ; ಇತ್ತಲಾಗೆ ಪ್ಯಾರಿಸ್‌ನಲ್ಲಿ 'ವೊಗೆಟ್' ಎಂಬ ಪ್ರಖ್ಯಾತ ನರ್ತಕಿಯೊಬ್ಬಳು ಒಂದು ಹೊಟೆಲಿನ ಕೋಣೆಯೊಳಗೆ ಅಕಸ್ಮಾತ್ತಾಗಿ ಬಿದ್ದು ಸತ್ತಳು. ಇವಳ ಸೌಂದರ್ಯಕ್ಕೆ ಮರುಳಾಗಿ, ಇವಳ ನರ್ತನಕ್ಕೆ ಮರುಳಾಗಿ ಇವಳನ್ನು ತಮ್ಮ ನಾಲಿಗೆಯ ತುದಿಯಲ್ಲೇ ಇರಿಸಿದ ಸಾವಿರಾರು ಪುರುಷ ಸ್ತ್ರೀಯರು ಬಹಳ ವ್ಯಥೆಗೊಂಡರು. ಇವಳ ಮರಣ ಸೂಚನೆಯನ್ನು ಚಿಂತಾಕ್ರಾಂತರಾಗಿ ನೋಡಿದರು. ಆದರೆ ಮರಣದ ಮರುದಿನ ಬಂದ ವಾರ್ತೆಯಿಂದಾಗಿ 'ವೊಗೆಟ್' ಎಂಬ ತರುಣಿಯು ಪುರುಷನೆಂದು ಶವವನ್ನು ಪರೀಕ್ಷಿಸುವಾಗ ತಿಳಿದುಬಂದೊಡನೆ ಎಲ್ಲರೂ ಆಶ್ಚರ್ಯಗೊಂಡರು. ಈ 'ವೊಗೆಟ್' ವೇಷದ ತರುಣನು ಅನೇಕ ಹೆಸರುಗಳಿಂದ ಅನೇಕ ವ್ಯಕ್ತಿಗಳನ್ನು ವಹಿಸಿ, ಸ್ಪೈನಿಕ್ಕೆ ಸೇರಿ ದೇಶದ ಗೊಂಡು ನರ್ತಕಿಯಾದನೆಂದು ಗೊತ್ತಾಯಿತು.

ಸ್ತ್ರೀಯ ಸಾಹಸ.

೧೮೩೧ರಲ್ಲಿ ಇಂಗ್ಲೆಂಡಿನ ವೂರ್‌ಸೆಸ್ಟರ್ ಎಂಬಲ್ಲಿದ್ದ ಹನ್ನಾ ಸ್ನೆಲ್ ಎಂಬ ತರುಣಿಯೊಬ್ಬಳು ಒಬ್ಬ ಕಾಡಿಳನನ್ನು ವಿವಾಹವಾದಳು. ವಿವಾಹದ ನಂತರ ಅವಳಿಗೆ ಸುಖವು ದೊರೆಯಲಿಲ್ಲ. ಅವಳಿಗೆ ಒಂದು [illegible] ತೀರಿಹೋಯಿತು. ಈ ಶೋಕದಿಂದಾಗಿ ಅವಳು [illegible] ಗಂಡುವೇಷ ಧರಿಸಿ ಎಷ್ಟೋ ಸಹಿಸಿ ಅನೇಕ ಕೆಲಸಗಳನ್ನೆಲ್ಲ ಮಾಡಿ, ಅವಳು ಕೊನೆಗೆ ಸೈನ್ಯಕ್ಕೆ ಸೇರಿದಳು. ಜೇಮ್ಸ್ ಗ್ರೇ ಎಂಬುದಾಗಿ ತನಗೆ ಹೆಸರಿಟ್ಟುಕೊಂಡಳು. ಅಲ್ಲಿಯೂ ಕೂಡಾ ಅವಳಿಗೆ ಕಷ್ಟವು ತಪ್ಪಲಿಲ್ಲ. ಒಮ್ಮೆ ಅವಳಿಗೆ ಛಡಿಗಳೂ ಬಿದ್ದುವು. ಅವಳು ಸೈನ್ಯವನ್ನು ಬಿಟ್ಟು ಹೊರಬಂದ ಮೇಲೆ ತನ್ನ ಆ ವೃತ್ತವನ್ನು ಅನೇಕ ಥಿಯೇಟರುಗಳಲ್ಲಿ ಹೇಳಿ ಜನರನ್ನು ಬೆರಗುಗೊಳಿಸಿದಳು. ಒಮ್ಮೆ ಗಾಯಗೊಂಡು ತಾನು ಡಾಕ್ಟರರ ಚಿಕಿತ್ಸೆಯಿಲ್ಲದೆ ರಹಸ್ಯವಾಗಿ ಗಾಯವನ್ನು ಹೇಗೆ ಗುಣಪಡಿಸಿಕೊಂಡನೆಂದು ಅವಳು ತನ್ನ ವಿಚಿತ್ರ ಅನುಭವಗಳನ್ನು ಹೇಳಿದಳು. ಹನ್ನಳ ಈ ಕಥೆಯನ್ನು ಕೇಳಿ ಸರಕಾರವು ಅವಳಿಗೆ ವರ್ಷಕ್ಕೆ ಇಪ್ಪತ್ತು ಪೌಂಡುಗಳ ಪೆನ್ಶನನ್ನೂ ಕೊಟ್ಟಿತು. ಅವಳಿಗೆ ಅನೇಕ ಬಿರುದುಗಳೂ ದೊರೆತುವು.

ನೊಣಕ್ಕೆ ಕಿವಿಕೇಳಿಸುವುದಿಲ್ಲ!

ನೊಣಕ್ಕೆ ಕಿವಿ ಕೇಳಿಸುತ್ತದೋ ಇಲ್ಲವೋ ಎಂದು ಸಂಶೋಧಕರ ಶೋಧೆಯು ನಡೆಯಿತು. ಯಾವ ಜಾತಿಯ ನೊಣದ ಸಮೀಪ ಎಷ್ಟು ದೊಡ್ಡ ಶಬ್ದವನ್ನೆಬ್ಬಿಸಿದರೂ ಅವುಗಳಿಗೆ ಕೇಳಿದ ಚಿಹ್ನೆಯೇ ಇರುವುದಿಲ್ಲವೆಂದು ಈಗ ಕಂಡುಹಿಡಿಯಲಾಗಿದೆ. ಒಬ್ಬನು ಒಂದು ನೊಣವನ್ನು ಹಿಡಿಯಬೇಕೆಂದು ಬೆರಳುಗಳನ್ನು ಅದರ ಹಿಂದಿನಿಂದಾಗಲೀ ಬೇರಾವ ಪಕ್ಕದಿಂದಾಗಿ ಮುಂದುಮಾಡಿದರೆ ಆ ನೊಣಕ್ಕೆ ತಿಳಿಯುತ್ತದೆ. ನೊಣದ ತಲೆಯಲ್ಲಿ ತುಂಬಾ ಕಣ್ಣುಗಳಿರುವುದರಿಂದಲೂ ಅದರ ಕಣ್ಣುಗಳು ಬಹು ಸೂಕ್ಷ್ಮವಾಗಿರುವುದರಿಂದಲೂ, ಅದು ಬೆರಳು ಸಮೀಪಿಸುತ್ತಲೇ ಹಾರಿಹೋಗುತ್ತದೆ. ಅದಕ್ಕೆ ಅದೇ ನೊಣದ ಸಮೀಪ ಎಷ್ಟು ದೊಡ್ಡ ಶಬ್ದವನ್ನು ಮಾಡಿದರೂ ಅದು ಎದ್ದು ಹೋಗುವುದಿಲ್ಲ. ಇದಕ್ಕೆ ಕಾರಣವಾದರೂ ಏನು? ಪ್ರಾಣಿವರ್ಗಕ್ಕೆ ಕಿವಿಯ ಶಕ್ತಿಯು ಬಂದುದು ಬಹು ತಡವಾಗಿ. ಮನುಷ್ಯನಿಗೂ ಕೂಡಾ ಎಲ್ಲಾ ಶಕ್ತಿಗಳು ಪರಿಪೂರ್ಣವಾಗಿ ಬಂದ ಮೇಲೆಯೇ ಕಿವಿ ಕೇಳುವ ಶಕ್ತಿಯು ಬಂದಿತು. ಹೀಗೆ ಇಷ್ಟರ ತನಕವೂ ಕಿವಿ ಕೇಳುವ ಶಕ್ತಿಯು ಬಾರದಿರುವ ಅನೇಕಾನೇಕ ಪ್ರಾಣಿಗಳಿವೆ. ಪಕ್ಷಿಗಳೂ ಇವೆ; ಅವುಗಳಲ್ಲಿ ನೊಣವೊಂದು.

ಮುದ್ದಿನ ಮದ್ದು.

ಮುತ್ತಿನ ಕ್ರಮವು ಒಂದೊಂದು ದೇಶಕ್ಕೆ ಒಂದೊಂದು ರೀತಿಯಾಗಿರುತ್ತದೆ. ಉತ್ತರ ಬ್ರಿಟಿಷ ದೇಶದಲ್ಲಿ ಅತಿಥಿಯಾಗಿ ಬಂದ ಪುರುಷರೆಲ್ಲರೂ ಸ್ತ್ರೀಯರ ಕೆನ್ನೆಗೆ ಮುದ್ದಿಡಬೇಕು. ಜಪಾನಿನಲ್ಲಿ ಅತಿಥಿಗಳು ಸ್ತ್ರೀಯರ ಹಣೆಯನ್ನು ಮುದ್ದಿಸುತ್ತಾರೆ. ಇಂಗ್ಲಾಂಡಿನಲ್ಲಿ ಅತಿಥಿಗಳು ಸ್ತ್ರೀಯರ ಕೈಗಳಿಗೆ ಮುತ್ತಿಡುತ್ತಾರೆ, ಆದರೆ ಸ್ಕಾಟ್ಲೆಂಡಿನಲ್ಲಿ ಮಾತ್ರ ಹಾಗಿರುವುದಿಲ್ಲ. ಅಲ್ಲಿ ಎಲ್ಲಾ ವ್ಯವಹಾರವು ಮುತ್ತಿನಿಂದಲೇ ನಡೆಯಬೇಕಾಗಿದೆ. ಸ್ಕಾಟ್‌ಲೆಂಡಿನಲ್ಲಿ ಎಂತಹ ಕುರೂಪಿಯೇ ಆಗಲಿ, ಎಂತಹ ಸ್ವರೂಪಿ ಸ್ತ್ರೀಯಿಂದಾಗಲೀ ಒಂದಲ್ಲ ಒಂದು ದಿನ ಮುತ್ತನ್ನು ಪಡೆಯುತ್ತಾನೆ. ಸ್ಕಾಟ್‌ಲೆಂಡಿನಲ್ಲಿ ತುಟಿಗಳು ಬಲು ಅಗ್ಗ – ಇಟೆಲಿಯಲ್ಲಿ ಕೈಗಳು ಅಗ್ಗವಿರುವುದಕ್ಕಿಂತಲೂ ಅಲ್ಲಿ ತುಟಿಗಳು ಅಗ್ಗ. ಅಲ್ಲನ್ ಚಾರ್ಟಿಯರ್ ಎಂಬ ಮಹಾಕವಿಯು ಅನೇಕರ ರಸಭರಿತ ನಾಟಕಗಳನ್ನು ಹೇಳಿದುದಕ್ಕಾಗಿ ಸ್ಕಾಟ್‌ಲೆಂಡಿನ ರಾಣಿಯಾದ ಮಾರ್ಗರೆಟಳು ಅವನನ್ನು ಬಹಿರಂಗವಾಗಿ ಮುದ್ದಿಟ್ಟಳಂತೆ. ಈ ಕವಿಯಷ್ಟು ಕುರೂಪಿಯು ಬೇರೊಬ್ಬನಿರಲಿಲ್ಲವಂತೆ. ಸ್ಕಾಟ್‌ಲೆಂಡಿನಲ್ಲಿ ಇಗರ್ಜಿಗಳ ಧರ್ಮಗುರುಗಳೂ ಮುದ್ದಿನ ಮದ್ದುಗಳನ್ನು ಸೇವಿಸುತ್ತಾರೆಂದರೆ ಆಶ್ಚರ್ಯಕರ ವಿಷಯವು. ಇಗರ್ಜಿಯಲ್ಲಿ ವಿವಾಹ ವಿಧಿಗಳು ನಡೆದಾದ ಮೇಲೆ ಮದುಮಗಳು ಪುರೋಹಿತರನ್ನು ಮುದ್ದಿಸಬೇಕು. ಹೀಗೆ ಪುರೋಹಿತರಿಂದಲೇ ಮುತ್ತಿಕ್ಕಿಸಿಕೊಳ್ಳುವುದರಿಂದ ಮುಂದಕ್ಕೆ ಸರ್ವ ಸುಖಲಾಭವಾಗುತ್ತದೆಂದು ತಿಳುವಳಿಕೆ. ಅನೇಕ ವೇಳೆ ಲಜ್ಜಾಸ್ಥಿತಿಯುಳ್ಳ ಸ್ತ್ರೀಯರು ಅಂತಹ ಪ್ರಥಮ ಮುದ್ದನ್ನು ಪುರೋಹಿತರಿಗೆ ಕೊಡದೆ ಜೋಪಾನವಾಗಿಟ್ಟುಕೊಳ್ಳಲು ಯತ್ನಿಸುತ್ತಾರೆ, ಆದರೂ ಬಲಾತ್ಕಾರವು ನಡೆಯುತ್ತದೆ. ಒಮ್ಮೆ ಒಬ್ಬ ತರುಣಿಯು ತಾನು ಪೆಸ್ಟರರಿಗೆ ತನ್ನ ಪ್ರಥಮ ತುಟಿದಾನವನ್ನು ಮಾಡಲಾರೆನೆಂದು ತಂದೆಗೆ ಹೇಳಿ ಅತ್ತಳು. ತಂದೆಯು ಪೆಸ್ಟರರೊಡನೆ ಈ ವಿಷಯವನ್ನು ಹೇಳಿ "ತಾವು ಅವಳನ್ನು ಮಾಫಿಯಾಗಿ ಬಿಡಬೇಕು" ಎಂದನು; ಇದನ್ನು ಕೇಳಿ ಪೆಸ್ಟರರಿಗೆ ಸಿಟ್ಟೇರಿತು! "ಅವಳ ಮುದ್ದು ಸಿಗುವುದಿಲ್ಲವಾದರೆ, ಈ ವಿವಾಹದ ವೆಚ್ಚವೂ ಕೂಡಾ ನನಗೆ ಬೇಡ" ವೆಂದು ಬಿಟ್ಟರಂತೆ.

ಮೋಚಿಗಾರನ ಐಶ್ವರ್ಯ!

ಮೋಚಿ ಹೊಲಿಯುವುದೆಂದರೆ ಹೀನ ವೃತ್ತಿಯೆಂದು ಹಿಂದೂಸ್ಥಾನದಲ್ಲಿ ಪರಿಗಣಿಸಲ್ಪಟ್ಟಿದೆ. ಇದು ಹೆಚ್ಚಾಗಿ ಬಡವರ ವೃತ್ತಿಯೆಂದು ಎಲ್ಲರ ಅಭಿಪ್ರಾಯ. ಆದರೆ ಮೋಚಿ ಹೊಲಿಯುವವರಲ್ಲೂ ಲಕ್ಷಾಧೀಶರಿರುವರೆಂದರೆ ವಿಚಿತ್ರವೆನಿಸಬಹುದು. ಅಮೇರಿಕದಲ್ಲಿ ಪೆಟ್ರೋಬರ್ನಾಡಿನ್ ಎಂಬವನು ಬಾಲ್ಯದಿಂದಲೂ ಮೋಚಿ ಹೊಲಿಯುವ ವೃತ್ತಿಯಲ್ಲಿದ್ದನು. ಇವನ ಸಂಪಾದನೆಯು ದೊಡ್ಡ ದೊಡ್ಡ ಗಿರಣಿಗಾರರನ್ನೂ ಅಸೂಯೆ ಪಡಿಸುತ್ತಿದ್ದಿತು. ಇವನು ಇತ್ತಲಾಗೆ ಕಾಲವಾದನು. ಇವನ ವೀಲಿನ ಬಿಟ್ಟು ಹಣವು ೬೦೦೦೦೦ ಪವನುಗಳಾಗಿದ್ದಿತು. ಇವನು ಬದುಕಿಕೊಂಡಿರುವಾಗ ಇವನಿಗೆ ಸರಕಾರೀ ಅಧಿಕಾರಿಗಳಂತಹ ಗೌರವವು ದೊರೆಯುತ್ತಿದ್ದಿತಂತೆ!

ಹೇಗೂ ಮುಟ್ಟಿತು!

ಮುಂಬಾಯಿಯಲ್ಲಿ ಒಬ್ಬರು ತಾ. ೨೧–೯–೧೯೩೩ನೆ ಇಸವಿಯಲ್ಲಿ ಇಲ್ಲಿನ ಇನ್ನೊಂದು ಅಂಚೆ ಆಫೀಸಿಗೆ ತಲಪಲು ಒಂದು ಕಾರ್ಡು ಬರೆದು ಹಾಕಿದರು. ಈ ಕಾರ್ಡು ಇಷ್ಟು ಕಾಲವೂ ಅಂಚೆಖಾತೆಯವರ ಬಳಿಯೇ ಇದ್ದು, ಈಗ ಮೊನ್ನೆ ತಾನೇ ಅದು ಅಂದು ಕಳುಹಿಸಲಾದವರಿಗೇನೇ ಹಿಂದೆ ಬರದು ಹೇಗೂ ಮುಟ್ಟಿತು! ೮ ವರ್ಷಗಳ ಪ್ರಯಾಣ!

ಒಂದೇ!

ಬೆಂಕಿಪೆಟ್ಟಿಗೆ ವೆಚ್ಚವನ್ನು ಕಡಿಮೆ ಮಾಡಬೇಕೆಂದು ಒಬ್ಬ ಸಂಶೋಧಕನು ಬಹಳ ಗಾಢವಾದ ಶೋಧೆ ನಡಿಸಿ ಈಗ ಒಂದು ಬೆಂಕಿ ಕಡ್ಡಿಯನ್ನು ತಯಾರಿಸಿರುತ್ತಾನೆ. ಇದನ್ನು ಒಮ್ಮೆ ಆ ಪೆಟ್ಟಿಗೆಗೆ ಸವರಿದರೆ ಒಮ್ಮೆ ಉರಿದು ನಾಲ್ಕಾರು ಸೆಕೆಂಡು ಉರಿಯುತ್ತದೆ. ಪುನಃ ಅದೇ ಕಡ್ಡಿಯನ್ನು ನೂರು ಸಲ ಸವರಿದರೂ ಅದು ಉರಿಯುತ್ತದೆ.

ಶ್ರೀ ಕೆ. ಎಫ್. ನರಿಮಾನರು ಬಿಡುಗಡೆಹೊಂದಿದರು

ಶ್ರೀಯುತ ಕೆ. ಎಫ್. ನರಿಮಾನರ ಶಿಕ್ಷಾವಧಿ ಮುಗಿದು ಇದೇ ತಾ. ೨೨ನೇ ದಿನ ಬಿಜಾಪುರ ಜೈಲಿನಿಂದ ಬಿಡುಗಡೆಹೊಂದಿ ಮುಂಬಾಯಿಗೆ ತಲಪಿರುವರು. ಶ್ರೀಯುತ ವಿ. ಜೆ. ಪಟೇಲರ ಮರಣವಾರ್ತೆಯನ್ನು ಕೇಳಿ ಅವರು ಆಘಾತಪಟ್ಟರು. ಕಾಂಗ್ರೆಸ್ಸಿನ ಕುರಿತು ಅವರು ಅಭಿಪ್ರಾಯ ಸೂಚನೆಯನ್ನು ಮಾಡುತ್ತಾ "ಕಾಂಗ್ರೆಸ್ಸಿನ ಗೌರವವನ್ನು ಜನತೆಯು ಅಗತ್ಯವಾಗಿ ಉಳಿಸಿಕೊಳ್ಳಬೇಕು" ಎಂದರು. ಅಲ್ಲದೆ ಕಾಂಗ್ರೆಸ್ಸಿನಲ್ಲಿರುವ ಪ್ರತ್ಯೇಕ ಭಿನ್ನಾಭಿಪ್ರಾಯವನ್ನು ನಿವಾರಿಸಬಹುದೆಂದೂ ಅವರು ಹೇಳಿದರು. ಶ್ವೇತಪತ್ರವು ಯಾವ ಪಕ್ಷದವರಿಗೂ, ಅದರಲ್ಲೂ ಕಾಂಗ್ರೆಸ್ಸಿನವರಿಗೂ ಎಂದೂ ಸ್ವೀಕಾರಾರ್ಹವಲ್ಲವೆಂದು ಮತವಿತ್ತರು. ಶ್ರೀ ನರಿಮಾನರು ಬಹು ಕೃಶರಾಗಿದ್ದರು. ಕಾಂಗ್ರೆಸ್ ಪಕ್ಷೀಯರು ಸಂಕಷ್ಟಗಳಿಗೆ ಮರುಗುವುದು ಅವರ ಧರ್ಮವಲ್ಲವಾದುದರಿಂದ ಸೆರೆಯಲ್ಲಿ ತನಗೆ ದೊರೆತ ರಕ್ಷಣೆಯ ಕುರಿತು ತಾನು ಯಾವ ಆರೋಪಣೆಯನ್ನು ಮಾಡಲಾರೆನೆಂದು ಅವರೆಂದರು. ಅವರ ಮಾತಿನಿಂದ ಗೊತ್ತಾದಂತೆ, ಸೆರೆಯಲ್ಲಿ ಅವರಿಗೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ತುಂಡುಗಳನ್ನಲ್ಲದೆ ಮತ್ತಾವ ರಾಷ್ಟ್ರೀಯ ಪತ್ರಿಕೆಗಳು ಅವರಿಗೆ ಓದ ದೊರೆಯುತ್ತಿದ್ದಿಲ್ಲ.

ಇಂಗ್ಲೆಂಡ್ ಇಂಡಿಯಾ ಟೆಲಿಫೋನ್.

ಇತ್ತೀಚೆಗೆ ಇಂಗ್ಲಾಂಡ್ ಮತ್ತು ಇಂಡಿಯಾಗಳನ್ನು ಸಮುದ್ರ ಮಾರ್ಗ ರೇಡಿಯೊ ಟೆಲಿಫೋನಿನ ಮೂಲಕ ಸಂಯೋಜಿಸಲಾಯಿತಷ್ಟೆ! ಈ ಟೆಲಿಫೋನ್ ಸರ್ವಿಸನ್ನು ಈಗ ಡಿಲ್ಲಿ ಸಿಮ್ಲಾಗಳಿಗೂ ಮುಂದರಿಸಿ ರಚಿಸಿರುವರು. ಹಿಂದೂಸ್ಥಾನದಿಂದ ಯುನೈಟೆಡ್ ಕಿಂಗ್‌ಡಮ್ಮಿಗೂ, ಯೂರೋಪದ ಯಾವ ಭಾಗಕ್ಕೂ ಇನ್ನು ವಾರ್ತೆಗಳನ್ನು ಕಳುಹಬಹುದು. ಯುನೈಟೆಡ್ ಕಿಂಗ್‌ಡಮ್ಮಿನೊಡನೆ ನಡೆಸುವ ೩ ನಿಮಿಷಗಳ ಮಾತುಕತೆಗೆ ರೂಪಾಯಿ ೪೦ ಕೊಡಬೇಕು. ವೈಸರಾಯರ ಆಫೀಸು ಮತ್ತು ಇಂಗ್ಲಾಂಡ್‌ಗಳ ವೈಟ್‌ಹಾಲಿಗೂ ದಿನ ದಿನ ಮಾತುಕತೆ ನಡೆಯಲಾರಂಭವಾಗಿದೆ.

ಮದ್ರಾಸಿನಲ್ಲಿ ಅಸ್ಥಿಪಂಜರ.

ಮದ್ರಾಸಿನಲ್ಲಿ ರಾವ್‌ಬಹದ್ದೂರ್ ಪಿ. ಎಸ್. ಜಂಬುಲಿಂಗ ಮುದಲಿಯಾರ್ ಬಿ. ಎ. ಎಫ್. ಆರ್. ಇ. ಎಸ್. ಇವರು ಫೆಬ್ರವರಿ ೨೨. ೫ನೇ ದಿನ ಅಕಸ್ಮಾತ್ತಾಗಿ ಕಾಣೆಯಾದರು. ಅವರು ಮುಂಬಾಯಿಯ ಲೋರ್ಡ್ ಕೆಡೆಸ್‌ಡೇಲ್‌ರವರನ್ನು ಸಂದರ್ಶಿಸ ಹೋಗಿರುವರೆಂದು ಮಕ್ಕಳು ತಿಳಿದರು. ಆದರೆ ಇದೇ ತಾ. ೨ನೇ ದಿನ ಅವರ ಮಕ್ಕಳ ಅಂಗಡಿಯ ಗೋಡೆಯ ಬಳಿ ಮುದಲಿಯಾರರ ಅಸ್ಥಿಪಂಜರವು ಕಾಣಸಿಕ್ಕಿತು. ಇವು ಘೋರ ಎಲುಬುಗಳೆಂದು ನಿರ್ಧರಿಸಲಸಾಧ್ಯವಾಗಿರುವುದಾದರೂ ಹೆಚ್ಚಿನ ಊಹನೆಯಿಂದ ಮುದಲಿಯಾರರದ್ದೆಂದೇ ತಿಳಿಯಲಾಗಿದೆ. ಮೂವರನ್ನು ಕೈದು ಮಾಡಲಾಗಿದೆ.

ನೋಟೀಸು.

ಪುತ್ತೂರು ತಾಲೂಕು ನಂಬ್ರ 14ನೇ ಇಂದಬೆಟ್ಟು ಗ್ರಾಮದ ಕೊಪಂಗೆ ಎಂಬಲ್ಲಿರುವ ಮಜಲ್ಲ ವೀರಪ್ಪ ಪೂಜಾರಿ ಅಳಿಯ ಅಪ್ಪುಪೂಜಾರಿಯು ಈ ಮೂಲಕ ತಿಳಿಸುವುದೇನಂದರೆ–

ನನ್ನ ಮಾವ ಮಜಲ್ಲ ವೀರಪ್ಪ ಪೂಜಾರಿಯು ಈಗ ವೃದ್ಧಾಪ್ಯದವನಾಗಿದ್ದು ನಮ್ಮ ಕುಟುಂಬದ ಆಸ್ತಿಗಳ ಆಡಳಿತೆ ಬಹು ದೀರ್ಘಕಾಲದಿಂದ ನಡಿಸಿಕೊಂಡು ಬರುತ್ತಾನೆ. ಕುಟುಂಬಕ್ಕೆ ಸಾಲವೇನೂ ಇಲ್ಲ. ಆತಗೆ ಇಬ್ಬರು ಹೆಂಡಂದಿರು ಇದ್ದಾರೆ. ಆ ಪೈಕಿ ಒಬ್ಬಳಲ್ಲಿ ಮಕ್ಕಳಿಲ್ಲ. 2ನೇಯವಳಿಗೆ ನಾಲ್ಕು ಮಕ್ಕಳು ಇರುತ್ತಾರೆ. ಸದರಿ ವೃದ್ಧಾಪ್ಯದವನಾದ ವೀರಪ್ಪ ಪೂಜಾರಿಯಿಂದ ಆತನ ಹೆಂಡಂದಿರು ಆತಗೆ ದುಬೋಧನೆ ಕೊಟ್ಟು ಕುಟುಂಬದ ಆಸ್ತಿಗಳು ಕುಟುಂಬಕ್ಕೆ ಸಿಕ್ಕದಂತೆ ಯೇನೋ ಸಾಧನೆಗಳು ಬರಿಸುವ ಹಿಕ್ಮತು ನಡಿಸುತ್ತಾರೆಂತ ಇತ್ತಲಾಗೆ ನನ್ನ ತಿಳುವಳಿಕೆಗೆ ಬಂದದೆ. ಆ ರೀತಿ ಆತನಿಂದ ಬರಿಸಲ್ಪಡುವಾದ ಯಾವುದೊಂದೂ ಸಾಧನೆಗಳು ನಮ್ಮ ಕುಟುಂಬಕ್ಕೆ ಯಾ ಕುಟುಂಬದ ಆಸ್ತಿಗಳಿಗೆ ಬದ್ಧಪಡಿಸತಕ್ಕವುಗಳಲ್ಲವೆಂತ ಈ ಮೂಲಕ ಪ್ರಕಟಿಸಿಯದೆ.

ತಾ. ೨೬–10–33 ಅಪ್ಪು ಪೂಜಾರಿಯ ರುಜು.

ಕಾಲಾವಧಿ ... ಶ್ರೀಮುಖ ಸಂವತ್ಸರದ ಕಾರ್ತಿಕ ಶು ೧೦ ಶನಿವಾರದಿಂದ ಶ್ರೀಮುಖ ಸಂವತ್ಸರದ ಕಾರ್ತಿಕ ಶು ೧೬ ಶುಕ್ರವಾರದ ವರೆಗಿನ ಪಂಚಾಂಗ.
(ಗಣಿತ... ತುಲಾ—ದೊಂತಿಲ್).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ ತಾ.	ಸೂರ್ಯ ಉದಯ	ಅಸ್ತ
28	ಶನಿ	೧೦	೧೫॥	ವಿಶಾಖಾ	೫೪	೧೩	6.26	6. 6
29	ರವಿ	೧೧	೧೫॥	ಅನುರಾಧಾ	೫೪॥	೧೪	6.25	6. 5
30	ಸೋಮ	೧೨		೧೪।	ಜ್ಯೇಷ್ಠಾ	೫೫।	೧೫	6 25	6 5
31	ಮಂಗಳ	೧೩	೧೪।	ಮೂಲಾ	೫೫।	೧೬	6 25	6 4
1	ಬುಧ	೧೪	೧೫॥	ಪೂ. ಷಾ.	೬೦	೧೭	6 25	6 4
2	ಗುರು	೧೫	೧೭॥	ಶ್ರವಣ	೨।	೧೮	6.26	6. 3
3	ಶುಕ್ರ	೨	೨೧	ಧನಿಷ್ಠಾ	೬॥	೧೦	6 26	6 3

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
19	82— 9	76— 2	0—86	—
20	83— 4	73— 2	0—15	—
21	83— 6	75— 4	—	—
22	84— 0	74— 8	—	—
23	83— 8	74— 6	—	—
24	84— 2	75— 1	—	—
25	84— 6	74— 9	—	157-85

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	4— 2	4—12
ಮುಸ್ತಿ ...	5— 4	5—12
ಗುಡ್ಡು ...	4— 4	5— 0
ಸುಗ್ಗಿ ...	4— 4	4—14
ಊರ ಅವ್ವಲ್ ಬೆಳ್ತಿಗೆ ...	4—10	5— 4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ ...	5—12	6— 8
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	4— 0	4— 4
ಗೋದಿ ಗೋಣಿ ೧ಕ್ಕೆ ...	11— 8	12— 8
ತೊಗರಿ ಗೋಣಿ ೧ಕ್ಕೆ ...	9— 8	12— 0
ಹುರುಳಿ ಗೋಣಿ ೧ಕ್ಕೆ ...	5—12	5—10
ಕಡಲೆ ಗೋಣಿ ೧ಕ್ಕೆ ...	10— 8	12— 8
ತೊಗರಿಬೇಳೆ ಗೋಣಿ ೧ಕ್ಕೆ ...	10— 8	20— 0
ಉದ್ದು ಗೋಣಿ ೧ಕ್ಕೆ ...	8— 8	9— 0
ಹೆಸರು ಗೋಣಿ ೧ಕ್ಕೆ ...	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ ...	31— 8	40— 0
ಉಪ್ಪು ಗೋಣಿ ೧ಕ್ಕೆ ...	5—12	6— 0
ಕೊಬ್ರಿ ಖಂಡಿ ೧ಕ್ಕೆ ...	52— 0	65— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	16— 8	17— 0
ಎಳ್ಳಿಂಡಿ ಖಂಡಿ ೧ಕ್ಕೆ ...	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ ...	3— 7	4— 6
ಎಳ್ಳೆಣ್ಣೆ ಮಣ ೧ಕ್ಕೆ ...	5— 0	6— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7— 4	8—12
ಮೋರಿಸ ಸಕ್ಕರೆ ಮಣ ೧ಕ್ಕೆ ...	3—15	4— 0
ಹೊಸ ಹುಣಸು ...	7— 0	8— 8
ಸಾಸಿವೆ ಮುಡಿ ೧ಕ್ಕೆ ...	5— 6	5— 4
ಕಾಳುಮೆಣಸು ಖಂಡಿ ೧ಕ್ಕೆ ...	140— 0	160— 0
ಧೋಲಕ್ಕಿ ಮಣ ೧ಕ್ಕೆ ...	19— 0	[illegible]— 8
ಗೇರುಬೀಜ ಮುಡಿ ೧ಕ್ಕೆ ...	3— 0	3— 2
ಶಬ್ಬಿಗ ಖಂಡಿ ೧ಕ್ಕೆ ...	35— 8	40— 5
ತಾಂಬ್ರ ತಗಡು ಮಣ ೧ಕ್ಕೆ ...	10— 0	10— 8
ತಾಂಬ್ರ ಪಾತ್ರಗಳು ಮಣ ೧ಕ್ಕೆ ...	13— 8	14— 8
ಬೀಟಿಬೆಂಡು ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮಣ ೧ಕ್ಕೆ ...	9— 0	9— 8
ಸತ್ತು ೧ಕ್ಕೆ ...	20— 0	20— 8
ಜುಜುಕಿ ಹೂ ಖಂಡಿ ೧ಕ್ಕೆ ...	35— 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ ...	200— 0	250— 0
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ ...	260— 0	270— 0
ಹಳೆ ಅಡಿಕೆ ...	130— 0	140— 0
ಹೊಸ ಅಡಿಕೆ ...	120— 0	130— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಲಾವೆ ಮಾರ್ಗವಾಗಿಯೂ, ೪ ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ಸಾಲ್ಪೇ ತಾಸುಗಳಲ್ಲಿ ಉಡುಪಿಗೆ ತಲಪಿರಿ, ಒಂದೇ ಶಿಲೆಯಲ್ಲಿ ನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣ**ಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR,

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು— ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ.

(ಪತ್ರವ್ಯವಹಾರದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು (ಸಂ. ಸ್ವ)

"ನಾವೇ ಹೇಳುತ್ತೇವೆ!"

ನಾವೇ ಹೇಳುತ್ತೇವೆ! ಏನೆಂದು? 'ನೀವೆ ಹೇಳಿ" ಎಂದು ಸ್ವಬಂಧುವಿನ ೨೬—೧೦—೩೩ನೇ ಸಂಚಿಕೆಯಲ್ಲಿ "ಮ ಶಾ ರಜೇಬರ" ಲೇಖನವೊಂದರಲ್ಲಿದ್ದ ಅಷ್ಟು ದೋಷಗಳನ್ನೆತ್ತಿ ಹಿಡಿದು [illegible]ಯ ಗುರಿಗಳು ಮುಳುಗಿ ಎದ್ದ ವಾಚಕರ ತಿಳುವಳಿಕೆಯನ್ನು! [illegible]ರಿಗೆ ಸ್ವದೇಶಾಭಿಮಾನಿಯ ಸಾಬೂನ ಮೇಲೂ ಕಣ್ಣು, ಮ ಶಾ, [illegible]ರ ಮೇಲೂ ಕಣ್ಣು! ಇನ್ನು ದಿವ್ಯ ದೃಷ್ಟಿಯ ಮೇಲೆ ಕಣ್ಣಾಗ [illegible]ದ್ದರೆ ಸರಿ! ಈ ವಾಚಕರಿಗೆ ಸಿಗುವುದಿಲ್ಲ ಹುಂಡೇ! ಎಲ್ಲಾ ಕನ್ನಡ [illegible]ಗಳನ್ನೂ ಇವರು ನಿಂದಿಸುವಂತಿದೆ ಹಿತ ಸೂಚನೆಗಳನ್ನು ಇವರು [illegible]ಮಾಡುವಂತೆಯೇ ಇಲ್ಲ. ಇದೇ ವೃತ್ತಿಯೋ? ದೊರೆಗಳೇ!

ಮ. ಶಾ

ಮಲೆನಾಡು.

ಸರಕಾರದವರೂ ಅವರ ಪ್ರತಿನಿಧಿಗಳೂ ಪ್ರಜಾಪ್ರತಿನಿಧಿಗಳೂ ಕೇಂದ್ರ [illegible] ಸೌಕರ್ಯಕ್ಕೆಂದು ಸುಮಾರು ೩೦ ವರ್ಷಗಳಿಂದೀಚೆಗೆ ವಿನೇ[illegible] [illegible]ಗಳನ್ನು ಹೂಡಿದರು ಬಹಳ ಹಣ ಖರ್ಚು ಮಾಡಿದರು [illegible] ಯಾವ ಬಾಬಿನಿಂದಲೂ ಕ್ಷೇಮಲಾಭವಾಗಲಿಲ್ಲ ಕೈಗಾರಿಕೆ [illegible] ಇಲ್ಲಿಯ ಸಾಂಪ್ರತಿಕ ಸ್ಥಿತಿಗಳು ಕಳೆದೋದಲಿಲ್ಲ ಕಳೆದ [illegible] ಅಧಿವೇಶನಗಳಲ್ಲಿ ಚರ್ಚಿಸಿದ ಕಂದಾಯ ಮತ್ತು ನೀರಾವರಿ [illegible] ಸೌಕರ್ಯ, ತೀರ್ಥಹಳ್ಳಿ ತುಂಗಾನದಿಗೆ ಸೇತುವೆ, ಈ ಪ್ರಶ್ನೆಗಳಿಗೂ ಖಂಡಿತವಾದ ಉತ್ತರ ದೊರೆಯಲಿಲ್ಲ ಕಂದಾಯ ಒಂದು [illegible] ಸಾಲದು ಸಾಹುಕಾರರಿಗೆ ಕೋರ್ಟು ರಿಯಾಯಿತಿ [illegible] ಅತಿ ಮುಖ್ಯವಾದುದಾಗಿದೆ ಅಗ್ರಿಕಲ್ಚರಲ್ ರಿಲೀಫ್ ಆಕ್ಟ್ [illegible]ರಿಗೆ ಬರಬೇಕು ಮುಜರಾಯಿ ಶಾಸನದಿಂದ ಅನೇಕ ಕಾಂ[illegible] [illegible]ಗಳು ಕೆಟ್ಟು ಹೋದವು, ಈ ಸಂಬಂಧ ರಿಯಾಯಿತಿಯ [illegible] ಆಗುವುದು ಖಾತರಿಯಾಗಿದೆ ಈ ಸಾರಿ ಮಳೆಯು ಕೊನೆಗೆ ಹೆಚ್ಚಾಗಿ ಫಸಲು ಪೂರಾ ಕೈಸೇರದಂತೆ ಆಗಿದೆ ಸೂಚಿಗೆ ದರವಿಲ್ಲ

ಬಡವರ ಕಷ್ಟಗಳು ಹೇಳತೀರದು ಒಟ್ಟಿನ ಮೇಲೆ ಸರಕಾರದವರು ಮಲೆನಾಡಿನ ಅಭಿವೃದ್ಧಿ ಕಾರ್ಯಗಳನ್ನು ಮತ್ತು ಪ್ರಜಾಪ್ರತಿನಿಧಿ ಸದಸ್ಯರು ತಂದಿರುವ ವಿಷಯಗಳನ್ನು ಮುಂದಾದರೂ ನೆರವೇರಿಸುವರೆಂದು ನಂಬಿರುತ್ತೇನೆ

ಟಿ ಕಾಳಪ್ಪ ತೀರ್ಥಹಳ್ಳಿ

ಅಯ್ಯಾ,

ಸಂಪಾದಕರು ಶ್ರೀ ಕೀಲಾರು ರಾಮಚಂದ್ರಯ್ಯನವರ ಅರಮನೆ [illegible] ಅಡಿಕೆ ಕೋಟೆಯೊಳಗೆ ತಾ ೧೪—೧೦—೩೩ನೇ ರಾತ್ರಿ ಮತ್ತು ೧೬—೧೦—೩೩ನೇ ದಿನ ರಾತ್ರಿ ಹಿಂಡಾನೆಗಳು ನುಗ್ಗಿ ಫಲ ಕೊಡುತ್ತಿರುವ ಸುಮಾರು ೨೦ ವರ್ಷದ ಉತ್ತಮವಾದ ೧೪೫ ಅಡಿಕೆ ಮರಗಳನ್ನೂ, ೫೦೦ಕ್ಕಿಂತ ಮಿಕ್ಕಿ ಬಾಳೆ ಸಸಿಗಳನ್ನೂ ಮುರಿದು ತಿಂದು ನಷ್ಟ ಪಡಿಸಿದುದು ನೋಡುವವರಿಗೂ ಕೇಳುವವರಿಗೂ ವ್ಯಸನಾಸ್ಪದವೇ ಸರಿ ಈ ಮಲೆನಾಡ ರೈತರಿಗೆ ಆನೆ ಹುಲಿ ವಗೈರೆ ದುಷ್ಟ ಜಂತುಗಳ ಹಾವಳಿಯಿಂದ ಆಗಾಗ್ಗೆ ಸಂಭವಿಸುವ ನಷ್ಟಗಳು ಮತ್ತು ಕಾಲಸ್ಥಿತಿಯಲ್ಲಿ ಒದಗಿದ ಆರ್ಥಿಕ ದುಸ್ಥಿತಿಗಳನ್ನು ಗ್ರಹಿಸಿದರೆ ಇಲ್ಲಿಯ ರೈತರ ದುರ್ಭಿಕ್ಷ ತೀರುವಂತಿಲ್ಲ ಎಂದೇ ಹೇಳಬೇಕು ಇನ್ನು ರಿಸಟ್ಲ್ ಬಂದರೆ ಎಲ್ಲಾ ಸಟ್ಲ್ ಆಗುವುದೇ ಸರಿ!!!

ಮಲೆನಾಡ ಬಡರೈತ

VIII ಸ್ಟ್ಯಾಂಡಾರ್ಡ ಸರ್ಟಿಫಿಕೇಟನ್ನು ಹೊಂದಿ ಹಾಯರ್ ಗ್ರೇಡಾಗಿ ತಖ್ತೀಲು ಹೊಂದಲಿಕ್ಕೆ ಬಾಕಿ ಇರುವ

ಎಲ್ಲಾ ಲವರ್‌ಗ್ರೇಡ್ ಟ್ರೈನ್ಡ್ ಉಪಾಧ್ಯಾಯರ ಅವಗಾಹನೆ ಬಗ್ಗೆ.

G O No 1581/4–9–33ನೇ ಹುಕುಂಗೆ ಮೊದಲು ನ್ಯಾಟ್ ಸ್ಕೂಲಿನಲ್ಲಿ VIII ಸ್ಟ್ಯಾಂಡಾರ್ಡ ಸರ್ಟಿಫಿಕೇಟು ಪಡೆದ ಲವರ್‌ಗ್ರೇಡ್ ಟ್ರೈನ್ಡ್ ಉಪಾಧ್ಯಾಯರಲ್ಲಿ ತಾ. ೪-೯—೩೩ಕ್ಕೆ ಮೊದಲು ಗ್ರೇಡು ತಖ್ತೀಲಿ ಮಾಡಿಕೊಂಡವರ ವಿನಹ ಸರ್ಟಿಫಿಕೇಟು ಪಡೆದು ಗ್ರೇಡು ತಖ್ತೀಲಿಗೆ ಬಾಕಿ ಇರುವವರ ಗ್ರೇಡು ತಖ್ತೀಲಿ ಆಗುವುದಿಲ್ಲವಾಗಿ, ತಖ್ತೀಲಿ ಬಗ್ಗೆ ಮದ್ರಾಸಿಗೆ ಹೋದ ಕೆಲವರ ಸರ್ಟಿಫಿಕೇಟುಗಳು ಅಂತೆಯೇ ವಾಪಾಸು ಬಂದಿವೆಯೆಂದು ತಿಳಿದುಬರುತ್ತದೆ. ಹೀಗೆ ಉಳಿದವರ ದುರಾದೃಷ್ಟಕ್ಕೆ ಕೆಲವು ಡಿಪ್ಯುಟಿ ಇನ್ಸ್‌ಪೆಕ್ಟರರು 'ಪ್ರ್ಯಾಕ್ಟಿಕಲ್ ಟೆಸ್ಟ್' ಎಂಬ ಬಲವಾದ ಕ್ರಮವನ್ನು ಇಟ್ಟುಕೊಂಡದ್ದರಿಂದಲೂ, ಸದ್ರಿ ಪ್ರ್ಯಾಕ್ಟಿಕಲ್ ಟೆಸ್ಟ್ ಮಾಡಲಿಕ್ಕೆ ಪರ್ಯಾಯವಧಿ ಇನ್ಸ್‌ಪೆಕ್ಷನ್ ಕಾಲವೇ ಎಂದು ಇಟ್ಟುಕೊಂಡು ಕಾಲವಿಳಂಬ ಮಾಡಿದ್ದೇ ಕಾರಣವಾಗಿದೆ ಹೀಗೆ ಹಿಂದೆ ಬಿದ್ದವರ ಸಂಖ್ಯೆ ನಮ್ಮ ಜಿಲ್ಲೆಯಲ್ಲಿ ಅಂಕೈ ಮುಕ್ಕಿ ಇವೆ

ಇವರು ಯೋಗ್ಯತೆ ಹೀನರಾದರೂ ಪರೀಕ್ಷೆಯಾಗದೆ ತೀರ್ಪು ಸ್ವೀಕರಿಸುವುದು ಅಗತ್ಯ ಹಿಂದೆ ಪಡೆದ ಯೋಗ್ಯತೆಯನ್ನು ಮುಂದಿನ ಸರ್ಕಾರಿ ಹುಕುಂ ಅಳಿಸಿಬಿಡುವ ಕ್ರಮವಿಲ್ಲ. ಆದುದರಿಂದ ಈ ಬಾಬಿನಲ್ಲಿ ಸರಕಾರಕ್ಕೆ ಕಳುಹಿಸುವ ಮನವಿಯನ್ನು ಪ್ರಿಂಟು ಮಾಡಿಸುತ್ತೇನೆ, ಸಂಬಂಧಪಟ್ಟವರು ಕೂಡಲೇ ನನ್ನಿಂದ ಪಡೆಸಿಕೊಂಡು ಸರಕಾರಕ್ಕೆ ಕಳುಹಿ ಕೊಡಲು ಮರೆಯಬಾರದು, ಬರುವ ಜನವರಿ ತಾ. ೨೫ಕ್ಕೆ ವಿದ್ಯಾ ಇಲಾಖಾ ಡೈರೆಕ್ಟರರು ಮಂಗಳೂರಿಗೆ ಬರಲಿಕ್ಕಿರುವರು ಆಗ ಕೂಡಾ ನಾವು ಒಟ್ಟಾಗಿ ಮೊರೆ ಇಡುವುದು ಅಗತ್ಯ

ವಿ. ಬಾಬುಶೆಟ್ಟಿ,
ಕಾರ್ಯದರ್ಶಿ, ಜಿಲ್ಲಾ ಉಪಾಧ್ಯಾಯರ ಸಂಘ, ಬಿಟ್ಲ

ಸರ್ಕ್ಯೂಲಾರು.

ಪುತ್ತೂರು ತಾಲೂಕಿನ ಎಲ್ಲಾ ಉಪಾಧ್ಯಾಯರ ಸಂಘಗಳಿಗೆ—

ಲೋವರ್ ಎಲಿಮೆಂಟರಿ ಗ್ರೇಡಿನ ತರಬೇತಿಯ ಸರ್ಟಿಫಿಕೇಟು ಇರುವ ಉಪಾಧ್ಯಾಯರು ಹೆಚ್ಚಿಗೆ ತರಬೇತಿ ಹೊಂದದೆ ಹಾಯರ್ ಗ್ರೇಡಿನ ಟ್ರೈನಿಂಗ್ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟಿನ ಪರೀಕ್ಷೆಯಲ್ಲಿ ಪಾಸಾಗಿ ಹಾಯರ್ ಗ್ರೇಡ್ ಸರ್ಟಿಫಿಕೇಟು ಹೊಂದಬಹುದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟದ್ದಾರೆ ಇದರಿಂದ ಸ್ಪೆಶಲ್ ನ್ಯಾಟ್ ಸ್ಕೂಲುಗಳಿಗೆ ಹಾಜರಿ ಹಾಕುವ ತೊಂದರೆ ಇಲ್ಲವೆಂದಾಯಿತು ಮತ್ತು ಎಲ್ಲರೂ ತಮ್ಮಷ್ಟಕ್ಕೆ ಸ್ವಲ್ಪ ಶ್ರಮ ವಹಿಸಿಕೊಂಡರೆ ತಮ್ಮ ಗ್ರೇಡಿನಲ್ಲಿ ಬಡ್ತಿ ಹೊಂದಿಕೊಂಡು ಲೋವರ್ ಲೋವರ್ ಎಂಬ ಕೀಳು ಸ್ಥಿತಿಯನ್ನು ಒಗೆದು ಬಿಟ್ಟು ಹಾಯರ್ ಮರ್ಯಾದೆಯನ್ನು ಸುಲಭವಾಗಿ ಹೊಂದಬಹುದು ಮಾತ್ರವಲ್ಲ, ಈ ಸಂದರ್ಭದ ಅಭ್ಯಾಸದಿಂದ ತಮ್ಮ ಜ್ಞಾನಭಂಡಾರವನ್ನೂ ಶಿಕ್ಷಣಶಕ್ತಿಯನ್ನೂ ವೃದ್ಧಿಸಬಹುದು ಆದುದರಿಂದ ಈಗ ಹೇಗೂ ಸಿಕ್ಕಿದ ಈ ರಿಯಾಯಿತಿಯನ್ನೂ ಲೋವರ್ ಗ್ರೇಡಿನ ಉಪಾಧ್ಯಾಯ, ಉಪಾಧ್ಯಾಯಿನಿಯರೂ ಖಾಲಿಯಾಗಲು ಬಿಡಬಾರದೆಂದು ನನ್ನ ಆಗ್ರಹವಿದೆ

ಬರುವ ಪರೀಕ್ಷೆಯು ೧೯೩೪ನೇ ಇಸವಿ ಮಾರ್ಚ ತಾ, ೧೩ ೧೪ ೧೫ ಈ ಮೂರು ದಿನಗಳಲ್ಲಿ ಮಂಗಳೂರಿನಲ್ಲಿ ಟ್ರೈನಿಂಗ್ ಶಾಲೆಯಲ್ಲಿ ಜರಗುವುದು ಸರ್ಟಿಫಿಕೇಟುಗಳ ಪೂರ್ಣಗೊಳಿಸಿದವರು ಮಾತ್ರ ಈ ಪರೀಕ್ಷೆಯನ್ನು ಖಾಸಗಿಯಾಗಿ ಕೊಡಬಹುದು. ಇದಕ್ಕೆ ಫೀಸು ರೂ ೩ನ್ನು ಖಜಾನೆಗೆ ಕಟ್ಟಿ ಆ ರಶೀದಿಯನ್ನು ಟ್ರೈನಿಂಗ್ ಅಸಲು ಸರ್ಟಿಫಿಕೇಟನ್ನೂ ಲಗ್ತಿಪಡಿಸಿ ಪರೀಕ್ಷೆಗೆ ನಿಲ್ಲುವ ಬಗ್ಗೆ ಅರ್ಜಿಯನ್ನು ಈ ತಿಂಗಳ ಅಖೈರಿಯೊಳಗೆ ಕಳುಹಿಸಬೇಕು. ಅರ್ಜಿಯ ಫೋರ್ಮುಗಳು ಡಿಪ್ಯುಟಿ ಇನ್ಸ್‌ಪೆಕ್ಟರರ ಅಥವಾ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರ ಆಫೀಸಿಗೆ ಬರೆದು ತರಿಸಿಕೊಳ್ಳಬೇಕು

ಮದರಾಸ್ಸಿನ ಸ್ಕೀಮ್ ಪ್ರಕಾರ ಈ ಪರೀಕ್ಷೆ ಮಾಡಲಾಗುವುದು ಪಠ್ಯ ಪುಸ್ತಕಗಳು ೧೯೩೪ನೇ ಇಸವಿಯಲ್ಲಿ ಹಾಯರ್ ಗ್ರೇಡಿನ ಪರೀಕ್ಷೆಗಿಂತ ಇಟ್ಟ ಪುಸ್ತಕಗಳೇ. ಸವಾಲು ಕಾಗದಗಳೂ ಹಾಯರ್ ಗ್ರೇಡಿನವರದೇ ಪರೀಕ್ಷೆಗಿರುವ ವಿಷಯಗಳೂ ಅಂತೆಯೇ

ಈ ಸಲ ಪರೀಕ್ಷೆಗೆ ನಿಲ್ಲದಿದ್ದವರ ಕುಂದುಕೊರತೆ ಏನು ಮಾಡಬೇಕೆಂಬುದು ತಾಲೂಕು ಬೋರ್ಡು ಮೀಟಿಂಗಿನಲ್ಲಿ ತೀರ್ಮಾನಿಸಲಾಗುವುದು

ಪುತ್ತೂರು
೧೬—೧೦ ೩೩

ನೊಳಹಳ್ಳಿ ಶಿವರಾವ್,
ಪ್ರೆಸಿಡೆಂಟ್ ಪುತ್ತೂರು ತಾಲ್ಲೂಕು ಬೋರ್ಡ

— ++ —

Notice.

IN THE COURT OF THE DISTRICT MUNSIF OF KARKALA.

Original Suit No. 583/1925,
R. E. P. No. 1107/1932.

B Narasimha Nayak, Plaintiff (Petitioner).

Kudyadi Ganesha Rau and others Defendants (Respondents)

To Kudyadi Ganesha Rau, son of Mangeshayya c/o K Raghunath Rau, Solicitte Stores Bandra, Bombay

Whereas the Plaintiff (Petitioner) has made application to this Court for execution of decree in O S No 583/1925 this is to give you notice that you are to appear before this Court on the 25th day of November 1933, to show cause why execution should not be granted

23–10–33
Karkala

K. L. Kudva,
Pleader for Petitioner.

Wanted

Applications are invited for the post of three Supervisors in the South Kanara District on a monthly salary of Rs. 30 each to work as canvassing agents in the Calcutta National Tea Company.

Applications are to be sent to the undersigned and applications received after the 15th of November will not be accepted.

B Srinivasa Rao,
Inspector,
The Calcutta National Tea Company,
Near S I Ry Station
Mangalore, S Kanara.

— ++ —

ಗುಣ ಹೊಂದಲು ಒಂದು ಡೋಜು ಸಾಕು.

ಇದು ಏನೂ ದೋಷಕರವಲ್ಲ. ಎಲ್ಲಾ ಪ್ರಾಯಸ್ಥರಿಗೂ ಮಲೇರಿಯಾ, ಇನ್‌ಫ್ಲುಯೆಂಜಾ ಆಗ್ಯು, ಇತ್ಯಾದಿಗಳ ಪರಿಹಾರಾರ್ಥವಾಗಿ ಕೊಡಬಹುದು ಕೆಳಗೆ ಕೊಟ್ಟ ಶಿಫಾರಸಿನಿಂದ ಈ ಮದ್ದು ನಲ್ವತ್ತು ವರ್ಷಗಳಿಂದ ಎಷ್ಟು ಪ್ರಸಿದ್ಧವಾಗಿವೆಯೆಂಬುದನ್ನು ತೋರಿಸುವುದಕ್ಕೆ ಮುದ್ರಿಸಲಾಗಿದೆ ಈ ಸ್ಕ್ವಿಬ್ಸ್ ಸ್ಪೆಸಿಫಿಕನ್ನು ಜ್ವರಪೀಡಿತರಾದ ಮಿಲಿಯಾವಧಿ ಜನರು ಕುಡಿದು ಗುಣ ಹೊಂದಿರುತ್ತಾರೆ

"ಎರಡು ವರ್ಷಗಳಿಂದ ನಮ್ಮ ಮಿಲ್ಲಿನಲ್ಲಿ ಈ ಔಷಧಿಯನ್ನುಪಯೋಗಿಸುತ್ತೇವೆ ಒಂದು ಡೋಜಿನಲ್ಲಿ ಜ್ವರ ನಿಂತಿದೆ ಎಲ್ಲಾ ಜ್ವರಗಳಿಗೂ ಇದು ಗುಣಕಾರಿ ಅದಕ್ಕೆ ಸಂದೇಹವಿಲ್ಲ' ಜಿ ಎಚ್ ಟೂಕ್, ಮನೇಜರ್—ಹುತಿಸಿಂಗ್ ಮಿಲ್ ಅಹ್ಮದಾಬಾದ್

'ಸ್ಕ್ವಿಬ್ಸರ ಆಗ್ ಸ್ಪೆಸಿಫಿಕ್' ಆಶ್ಚರ್ಯವನ್ನೇ ಉಂಟುಮಾಡುತ್ತಿದೆ ಅದನ್ನು ಉಪಯೋಗಿಸಿದವರು ಭರವಸೆ ಕೊಡುತ್ತಾರೆ

ಜಿ ಜಿ ಫೇಸಿ, ಟೋಕೊ ಡಿಪೊ, ಎ ಎಂಡ್ ಬಿ ರೈಲ್ವೆ ಅಸ್ಸಾಮ್

ಮಡನ್ ಸನ್ಸ್ ಎಂಡ್ ಕೋ, ಬೊಂಬಾಯಿ 2

Madon Sons & Co, Bombay 2.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

E. P. 807/1933

... ರಾಮಾ ಜೋಯಿಸ—ಅರ್ಜಿದಾರ ವಾದಿ.

ಮತ್ತು

... ಕೃಷ್ಣಯ್ಯ ವಾರಂಬಳ್ಳಿ, ಶೀನ ವಾರಂಬಳ್ಳಿಯರ ಮಗ, ... ವಾರಂಬಳ್ಳಿ ಗ್ರಾಮದಲ್ಲಿ ಇರುವತ—ಎದ್ರಿರು ಪ್ರತಿವಾದಿರು.

ಮೇಲಿನ ಅಮಲುಜಾರಿಯಲ್ಲಿ ದಾಖಲು ಮಾಡಿದ ಏಲಂ ... ಹಾಜರತೆಗಳು ನಿರ್ಣಯಿಸಲಿಕ್ಕೆ ತಾ. 31-10-33ಕ್ಕೆ ... ದೆ. ಅದಕ್ಕೆ ಪ್ರತಿವಾದಿಗೆ ಆಕ್ಷೇಪವಿದ್ದರೆ ಸದರಿ ... ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ... ಮಾಡಿಕೊಳ್ಳತಕ್ಕದ್ದು, ತಪ್ಪಿದರೆ ಏಲಂ ಇಸ್ತಿಹಾರು ... ಗೈರುಹಾಜರಿಯಲ್ಲಿ ಕೋರ್ಟಿನವರಿಂದ ಮುಂಜೂರು ಮಾಡಲ್ಪಡುವುದು ಎಂತ ಈ ಮೂಲಕ ತಿಳಿಸೋಣಾಗಿದೆ.

ಉಡುಪಿ, ... | B. Srinivasa Rao, Advocate for Petitioner

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 120/1933.

1. ಭಾಗೀರಥಿ ಬಮ್ಮ, ಕೆ. ಪಿ. ಕೃಷ್ಣಯ್ಯ ಶ್ಯಾನುಭಾಗರ ಮಗಳು ವ ಪಯ್ಯನ್ನೂರು ಮಂಜುನಾಥ ಪೈಗಳ ವಿಧವೆ. 2. ಮೋಹನ ಪೈ, 3. ರಾಮರಾಯ ಪೈ, 4. ವಿಟ್ಠಲ ಪೈ—ಮೃತಪಟ್ಟ ಪಯ್ಯನ್ನೂರು ಮಂಜುನಾಥ ಪೈಗಳ ಮಕ್ಕಳು, ಮ್ಯಾನರರು. ಇವರ ಕ್ಷೇಮಚಿಂತಕಳು ಇವರ ತಾಯಿ 1ನೇ ಅರ್ಜಿದಾರಳು ಭಾಗೀರಥಿ ಬಮ್ಮ, ಕಾಸರಗೋಡು ತಾಲೂಕು ಕಾಸರಗೋಡು ಕಸಬೆಯಲ್ಲಿರುವವರು—ಅರ್ಜಿದಾರರು.

ಮತ್ತು

1. ಮಾಧವ ಪೈ, 2. ಲಕ್ಷ್ಮಣ ಪೈ, ಪಯ್ಯನ್ನೂರು ನರ್ಸ ಪೈಗಳ ಮಕ್ಕಳು. 1ನೇಯವನು ಕಾಸರಗೋಡು ತಾಲ್ಲೂಕು ಸಿದ್ಧೇಶ್ವರ ಕಸಬಾ ಗ್ರಾಮದಲ್ಲಿಯೂ, 2ನೇಯವನು ಕೋಲಾಪುರದಲ್ಲಿ ಹಿಂದೂ ಮೋಟರ್ ಸರ್ವಿಸಿನ ಮೋಟರ್ ಡ್ರೈವರ್ ಕೂಡಾ ಆಗಿರುತ್ತಾನೆ.—ರೆಸ್ಪಾಂಡೆಂಟರು.

ಇವರೊಳಗೆ

1ನೇ ಅರ್ಜಿದಾರಳ ಗಂಡ, 2ರಿಂದ 4ನೇ ವರೇಗಿನವರ ತಂದೆ ಮೃತಪಟ್ಟ ಪಯ್ಯನ್ನೂರು ಮಂಜುನಾಥ ಪೈಗಳಿಗೆ ದಿ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿಯಿಂದ ನಂಬ್ರ 18496 ಮತ್ತು 18151ನೇ ಪೋಲಿಸಿಗಳ ಮೇರೆಗೆ ಸಿಕ್ಕತಕ್ಕ ಐವಜು ಬೋನಸ್ಸು ವಗೈರೆ ಎಲ್ಲಾ ಐವಜುಗಳನ್ನೂ ಸದ್ರಿ ಮಂಜುನಾಥ ಪೈಗಳು ಅಡೂರು ವಾಸ್ತೇವ ಕಮ್ತಿರ ಮೇಲೆ ಪಡೆದ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್ ಕ್ರಮ ನಂಬ್ರ 572/1929ನೇ ವ್ಯಾಜ್ಯದ ಡಿಕ್ರಿ ಪ್ರಕಾರ ಬಹಾ ಬಾಕಿ ಐವಜು ಕೂಡಾ ಒಟ್ಟು ರೂ. 1173—2—5ನ್ನು ವಸೂಲು ಮಾಡುವರೆ ಸದ್ರಿ ಮಂಜುನಾಥ ಪೈಗಳ ವಾರಿಸ್ದಾರರಾದ ಅರ್ಜಿದಾರರು ತಮ್ಮ ಪೈಕಿ 1ನೇ ಅರ್ಜಿದಾರಳ ಹೆಸರಲ್ಲಿ ವಾರಿಸು ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 20—11—33ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಆದುದರಿಂದ ಆ ಕುರಿತು ಏನಾದರೂ ಆಕ್ಷೇಪ ಇದ್ದವರು ಸದ್ರಿ ತಾರೀಕು 20-11-1933ಕ್ಕೆ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾಸರಗೋಡು, ೧೫—೧೦—೩೩. | C. M. Kamath, B.A., B.L., *Vakil for Petitioners.*

ನೋಟೀಸು

ಕಾಸರಗೋಡು ಕಸಬೆಯಲ್ಲಿರುವ ಚಿತ್ತಾರಿ ದೇವಂಟ ನಾರಾಯಣ ಕಿಣಿ 1, ಇವರ ಮಗ ಶಾಂತಾರಾಮ ಕಿಣಿ 1, ನಾರಾಯಣ ಪ್ರಭುರ ಮಗ ಅನಂತ ಪ್ರಭು 1 ಈ ಮೂರು ಜನರು ತಿಳಿಸುವುದೇನೆಂದರೆ—ನಾವು ಮೂರು ಜನರು ಕಾಸರಗೋಡು ಕಸಬೆಯಲ್ಲಿ ಡಿ. ಎನ್. ಕಿಣಿ ಸನ್ ಮತ್ತು ಕಂಪೆನಿ ಎಂಬ ಹೆಸರಿನಿಂದ ನಡಿಸುತ್ತಿರುತ್ತಿದ್ದ ವ್ಯಾಪಾರದ ಎಲ್ಲಾ ವ್ಯವಹಾರಗಳನ್ನು ಕಾಲು ಅಗಲಿಕೆಯಾಗಿ ನಮ್ಮ ಪೈಕಿ 1—2ನೇಯವರಿಗೆ 3ನೇಯವನು ಬಿಟ್ಟುಕೊಟ್ಟಿರುತ್ತಾನೆ. ಇನ್ನು ಸದ್ರಿ ವ್ಯಾಪಾರದ ವ್ಯವಹಾರದಲ್ಲಿ 3ನೇಯವನಿಗೆ ಏನೊಂದು ಹಕ್ಕಿರುವುದಿಲ್ಲ.

ಕಾಸರಗೋಡು, ... | B. Anantha Prabhu.

ಒಂದು ಸುಂದರ ಕೂಸು

ಸೆಟಿಲಂ ಇನ್ಸಪೆಕ್ಟರರು

"ನಾನು ನಿಮ್ಮ ಹೆಸರುಳ್ಳ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದೆನು. ಅದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,
ಸೆಟಿಲಂ ಇನ್ಸಪೆಕ್ಟರ್,
ಮಾಲೂರು, ಮದುರಾ.

ನಿಮ್ಮ ಕೆಮಿಸ್ಟರರ ಹತ್ತರ ಕೇಳಿರಿ.

ಅಥವಾ

ಕೇಸರಿ ಕುಟೀರಂ,
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ.

ಬೆಂಗಳೂರು ಏಜಂಟ್:—ಬಿ. ಶೋಭಟ್ ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.
ಮದ್ರಾಸು ಸಂಸ್ಥಾನದ ಏಜಂಟರು:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್,
ಮಂಗಳೂರು ,, ದಿ ಉಲನ್ ಮಾರ್ಟ್. ಧಾರವಾಡ ಏಜಂಟ್—ದಿ ಧಾರ್ವಾಡ ಫಾರ್ಮಸಿ,

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ| ವಿ. ಬಿ. ರಾಮನ್, ಎಲ್. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಊಣ ಇರುವ, ಹಸಿವು ಕಡಿಮೆಯಾಗಿರುವುದು, ಕೂಳವು ಕಡಿಮೆಯಾಗಿರುವುದು, ಇವು ವ್ಯಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿವೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೦೭, ಮದ್ರಾಸು.

ಲೋಕಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಎಜನ್ಸಿ, ... ಬೆಂಗಳೂರು. (... ಆಸ್ಪತ್ರೆ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ರಂಗಭೂಮಿಯ ಮೇಲಿನ ಪ್ರಶ್ನೆಗಳು.

ಬೆಂಗಳೂರು ನಗರದಲ್ಲಿ, ಕರ್ನಾಟಕ ನಾಟಕಾಲಂಕಾರ ಅಥಯುಕ್ತೇಶ್ವರ ಶ್ರೀಮಾನ್ ಸಭಾಪತಿರಾವ್ ಗರೂಡರ ಅಧ್ಯಕ್ಷತೆಯಲ್ಲಿ, ೧೯೩೩ನೇ ಏಪ್ರಿಲ್ ೧೫ ಮತ್ತು ೧೬ನೇ ತಾರೀಖುಗಳಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲಿ ಕರ್ನಾಟಕ ರಂಗಭೂಮಿಯ ಅಭಿವೃದ್ಧಿಗೆ ಸಂಬಂಧಿಸಿದ ಪ್ರಶ್ನಾವಳಿಯೊಂದನ್ನು ತಯಾರಿಸಿ ನಾಟಕವೃತ್ತಿವಂತರ, ನಾಟಕೋಪಾಸಕರ ಮತ್ತು ನಾಟಕ ಕಲಾಭಿಮಾನಿಗಳ ಅಭಿಪ್ರಾಯವನ್ನು ಮೂರು ತಿಂಗಳೊಳಗಾಗಿ ಪ್ರಕಟಿಸಬೇಕೆಂದು ಗೊತ್ತುವಳಿಯನ್ನು ಮಾಡಿರುವರು.

ಈ ಕಾರ್ಯವನ್ನು ನೆರವೇರಿಸಲು ಒಂದು ಉಪಸಮಿತಿಯು ಏರ್ಪಡಿಸಲ್ಪಟ್ಟಿದೆ. ಮಂಗಳೂರು ಮತ್ತು ಬೆಂಗಳೂರುಗಳಲ್ಲಿ ಈ ಸಮಿತಿಯ ಸದಸ್ಯರೂ ಇತರ ನಾಟಕ ಕಲಾಭಿಮಾನಿಗಳೂ ಸಭೆ ಸೇರಿ ಅನೇಕ ವಿಷಯಗಳನ್ನು ಚರ್ಚಿಸಿ ಪ್ರಶ್ನಾವಳಿಯನ್ನು ಯಾವ ರೀತಿಯಲ್ಲಿ ರೂಪುಗೊಳಿಸಬೇಕೆಂದು ನಿಶ್ಚಯಿಸಿದರು. ಕಲಾ ಪತ್ರಿಕೆಯೂ ಈ ಕಾರ್ಯದಲ್ಲಿ ನೆರವಾಗಬೇಕೆಂದು ಸಂಕಲ್ಪ ಮಾಡಿ ಅನೇಕ ಸದಸ್ಯರಿಂದ ಬಂದ ಸೂಚನೆಗಳನ್ನು ಸಂಗ್ರಹಿಸಿ ತಾತ್ಕಾಲಿಕ ಪ್ರಶ್ನಾವಳಿಯನ್ನು ಪ್ರಕಟಿಸಿರುವುದು. ಈ ಪ್ರಶ್ನೆಗಳು ತೃಪ್ತಿಕರವಾಗಿದ್ದರೆ ಅವುಗಳಿಗೆ ಉತ್ತರವನ್ನೂ ಬದಲಾವಣೆಗಳು ಅಗತ್ಯವಿದ್ದರೆ ಸೂಚನೆಗಳನ್ನೂ ಪ್ರಶ್ನಾವಳಿಯು ಅಪೂರ್ಣವೆಂದು ತೋರಿದರೆ ಅವಶ್ಯಕವಾದ ಹೆಚ್ಚು ಪ್ರಶ್ನೆಗಳನ್ನೂ ಕಳುಹಿಸಿಕೊಡಬಹುದು. ಮುಖ್ಯವಾದುವನು ಕ್ರಮೇಣ ಕಲಾಪತ್ರಿಕೆಯಲ್ಲಿ ಪ್ರಕಟಿಸುವೆವಲ್ಲದೆ ಈ ವಿಷಯಗಳನ್ನೆಲ್ಲ ನಾಟಕ ಸಮ್ಮೇಳನದ ಉಪಸಮಿತಿಯು ಮುಂದಿಟ್ಟು ವರದಿಗೆ ಉಪಯೋಗ ಮಾಡಿಕೊಳ್ಳುವೆವು.

ಪ್ರಶ್ನಾವಳಿಗಳು.

ನಾಟಕಗಳು

೧ ನಾಟಕ ರಚನೆಯಲ್ಲಿ ಧ್ಯೇಯಗಳನ್ನು ಗುರಿಯಿಟ್ಟುಕೊಂಡಿರುವ ಅಗತ್ಯವುಂಟೆ, ಯಾವ ಯಾವ ಧ್ಯೇಯಗಳು ನಾಟಕಕ್ಕೆ ಆಧಾರವಾಗಿರಬಹುದು? ೨ ನಮ್ಮ ನಾಡಿನ ನಾಟಕವು ಯಾವ ರೂಪಾಂತರಗಳನ್ನು ಹೊಂದಿ ಈಗಿನ ರೂಪಕ್ಕೆ ಬಂದಿದೆ ಇವುಗಳಲ್ಲಿ ಯಾವ ಯಾವುವು ಉಳಿದುಕೊಂಡಿವೆ. ೩ ನಮ್ಮಲ್ಲಿ ಬಳಕೆಯಲ್ಲಿರುವ ನಾಟಕಗಳನ್ನು ಎಷ್ಟು ತಂಗಡಗಳಾಗಿ ವಿಂಗಡಿಸಬಹುದು? ೪. ಈಗಿರುವ ನಾಟಕಗಳ ಜೊತೆಗೆ ಇನ್ನೂ ಹೆಚ್ಚು ನಾಟಕಗಳು ಬೇಕೆ? ಬೇಕಾಗಿದ್ದಲ್ಲಿ ಯಾವ ಬಗೆಯ ನಾಟಕಗಳ ಅವಶ್ಯಕತೆಯು ಹೆಚ್ಚಾಗಿದೆ? ೫ ನಾಟಕದಲ್ಲಿ ಸಂಗೀತದ ಸ್ಥಾನವೇನು? ಸಂಗೀತವೇ ಇಲ್ಲದ ನಾಟಕಗಳ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು? ೬ ನಾಟಕದಲ್ಲಿ ಬರುವ ಹಾಸ್ಯಗಳನ್ನು ಎಷ್ಟು ಗುಂಪುಗಳಾಗಿ ವಿಂಗಡಿಸಬಹುದು, ಈ ಭಾಗದಲ್ಲಿ ಗಮನಿಸಬೇಕಾದ ಮುಖ್ಯ ಅಂಶಗಳಾವುವು? ಹಾಸ್ಯವೇ ಪ್ರಧಾನವಾದ ನಾಟಕಗಳು ನಮ್ಮಲ್ಲಿ ಉಂಟೆ, ಅವುಗಳ ಅವಶ್ಯಕತೆಯು ಎಷ್ಟರಮಟ್ಟಿಗೆ? ೭ ನಾಟಕದ ಭಾಷಾಶೈಲಿಯು ಹೇಗಿರಬೇಕು? (ಅ) ನಾಟಕಗಳಲ್ಲಿ ಪ್ರಧಾನ ಅಭಿನಯ ನಡೆಯುತ್ತಿರುವಾಗ ರಸಪ್ರಧಾನವಾದ ವಾದ್ಯವಾದನ ಅಥವ ಗಾನವನ್ನು ರಂಗದ ಹಿಂಭಾಗದಲ್ಲಿ ನಡೆಸುವುದರಿಂದ ಪ್ರಯೋಜನವುಂಟೆ? ಇದನ್ನು ನಮ್ಮ ರಂಗಗಳಲ್ಲಿ ಆಚರಣೆಗೆ ತರಬಹುದೆ? ೮ ೧ ನಾಟಕವು ಎಷ್ಟು ಗಂಟೆಗಳ ಕಾಲ ಪ್ರದರ್ಶನ ನಡೆಯುವುದಕ್ಕೆ ತಕ್ಕಂತಿರಬೇಕು? ೯ ಒಂದು ನಾಟಕದೊಳಗೆ ಮತ್ತೊಂದು ದೂರ ಸಂಬಂಧದ, ಸಂಬಂಧವೇ ಇಲ್ಲದ ಕಥೆಗಳನ್ನು ಸೇರಿಸುವುದರ ಪರಿಣಾಮವೇನು? ೯ ಐತಿಹಾಸಿಕ ಪೌರಾಣಿಕ ಮತ್ತು ಸಾಮಾಜಿಕ ವಿಷಯಗಳನ್ನು ನಾಟಕಕ್ಕೆ ಆರಿಸಿಕೊಳ್ಳುವಾಗ ಮುಖ್ಯವಾಗಿ ಗಮನಿಸಬೇಕಾದ ಅಂಶಗಳಾವುವು? ೧೦ ಕನ್ನಡ ನಾಟಕಗಳ ಮಧ್ಯದಲ್ಲಿ ಇತರ ಭಾಷಾಪ್ರಸಂಗಗಳನ್ನು ತರುವ ಅಗತ್ಯವುಂಟೆ? ಹಾಗೆ ತರುವಾಗ ಮುಖ್ಯವಾಗಿ ಗಮನಿಸಬೇಕಾದ ವಿಷಯಗಳಾವುವು? ೧೧ ನಾಟಕದಲ್ಲಿ ಇಂದ್ರಜಾಲದಂತಹ ಅದ್ಭುತಗಳನ್ನು ತರಬಹುದೆ, ಹಾಗೆ ತರುವಾಗ ಗಮನಿಸಬೇಕಾದುದೇನು

ಪ್ರದರ್ಶನ.

೧೨ ನಾಟಕವನ್ನು ಸುವ್ಯವಸ್ಥೆಯಿಂದ ಪ್ರದರ್ಶನ ಮಾಡಿಸುವ (producer) ಪ್ರದರ್ಶನಕಾರರ ಅವಶ್ಯಕತೆಯು ಎಷ್ಟರಮಟ್ಟಿಗೆ ಉಂಟು (ಅ) ಅಂತಹ ಪ್ರದರ್ಶನಕಾರರು ಮುಖ್ಯವಾಗಿ ತಿಳಿದಿರಬೇಕಾದ ವಿಷಯಗಳಾವುವು (ಆ) ಪ್ರದರ್ಶನಕಾರರಿಗೆ ಸರಿಯಾದ ಶಿಕ್ಷಣವೀಯುವಂತಹ ವ್ಯವಸ್ಥೆಯು ಅವಶ್ಯಕವೇ? ೧೩ ನಾಟಕ ಮಂಡಲಿಯು ಒಂದು ಸಂಸ್ಥೆಯ ಅಥವಾ ಒಬ್ಬ ವ್ಯಕ್ತಿಯ ಅಧೀನದಲ್ಲಿರುವುದು ಒಳ್ಳೆಯದೇ? ಅಥವಾ ನಟರೆಲ್ಲ ಸೇರಿ ನಡೆಸುವುದು ಒಳ್ಳೆಯದೆ? (ಅ) ಬೇರೆ ಬೇರೆ ನಟರನ್ನು ಕೂಡಹಾಕಿ ನಾಟಕಪ್ರದರ್ಶನ ಮಾಡುವುದರಲ್ಲಿ ನಿಮ್ಮ ಅಭಿಪ್ರಾಯವೇನು? ೧ ರಂಗದಲ್ಲಿರಬೇಕಾದ ಮುಖ್ಯ ಸೌಕರ್ಯಗಳಾವುವು ೧೫, ರಂಗಪೀಠಕ್ಕೆ ಸೇರಿದ ಮುಖ್ಯ ಭಾಗಗಳು, ರಂಗದ ಎತ್ತರ, ವಿಸ್ತೀರ್ಣ, ಸಂಗೀತದ ಪಕ್ಕವಾದ್ಯಗಳನ್ನು ಇಡುವ ಸ್ಥಳ ಮುಂತಾದುವುಗಳ ವಿವರವೇನು? ೧೬ (ಅ) ರಂಗದಲ್ಲಿ ಮುಖ್ಯವಾಗಿರಬೇಕಾದ ಬೆಳಕುಗಳಾವುವು? (ಆ) ಬೆಳಕು ಬಿಡುವುದು, ನೆರಳು ಪರದೆಯ ಮೇಲೆ ಬೀಳದಂತೆ ಮಾಡುವುದು, ಬೇರೆ ಬೇರೆ ಬಣ್ಣದ ಬೆಳಕು ಬಿಡುವುದು. ಇವುಗಳ ವಿಷಯದಲ್ಲಿ ನಿಮ್ಮ ಸೂಚನೆಯೇನು? ೧೭. ವೇಷಭೂಷಣಗಳ ಕೊಠಡಿಯ ವ್ಯವಸ್ಥೆ ಸರಿಯಾಗಿದೆಯೋ? ಈ ಭಾಗದಲ್ಲಿ ಆಗಬೇಕಾದ ಸೌಕರ್ಯಗಳಾವುವು?

ಅಲಂಕರಣೆಗಳು

೧೮ (ಅ) ನಾಟಕದ ಪಾತ್ರಗಳಲ್ಲಿ ಸಂಪ್ರದಾಯಬದ್ಧವಾದ ವಿವರಣೆಯೂ ಅಲಂಕಾರವೂ, ಉಡಿಗೆತೊಡಿಗೆ ಉಪಕರಣಗಳೂ ಅಗತ್ಯವೇ? ಇದರಲ್ಲಿ ಅವಶ್ಯಕವಾದ ಬದಲಾವಣೆ ಮಾಡಬಹುದೆ? (ಆ) ನಟನ ಅಭಿನಯ, ಭಾಷಣ ವ್ಯವಹಾರಗಳಲ್ಲಿ ಕೂಡ ಅನುಸರಿಸಬೇಕಾದ ಸಂಪ್ರದಾಯಬದ್ಧವಾದ ಪದ್ಧತಿಗಳುಂಟೆ? ಅವುಗಳನ್ನು ಅತಿಕ್ರಮಿಸುವುದರಿಂದ ಉಂಟಾಗುವ ಪರಿಣಾಮವೇನು? (ಇ) ದೃಶ್ಯಗಳಲ್ಲಿಯೂ, ವೇಷಭೂಷಣಗಳಲ್ಲಿ (symbalic) ಚಿಹ್ನಾರೂಪಗಳೇನಾದರೂ ಉಂಟೆ? ೧೯ ಪರದೆಗಳಲ್ಲಿರಬೇಕಾದ ಮುಖ್ಯ ಗುಣಗಳೇನು? ನಾಟಕದಲ್ಲಿ ಉಪಯೋಗಿಸುವ ತೆರೆಗಳನ್ನು ಎಷ್ಟು ಗುಂಪುಗಳಾಗಿ ವಿಂಗಡಿಸಬಹುದು? ೨೦ ನಾಟಕದಲ್ಲಿ ಪ್ರದರ್ಶನವಾಗುವ ಪದಾರ್ಥಗಳು, ಉಡಿಗೆತೊಡಿಗೆಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳಾವುವು? ೨೧ (ಅ) ಅಲಂಕಾರದ ಸಾಮಗ್ರಿಗಳಾದ ಬಣ್ಣ, ಕೂದಲು, ಟೋಪಿನ್ ಮುಂತಾದ ನಾಟಕೋಪಕರಣಗಳಲ್ಲಿ ಯಾವ ಬಗೆಯವು ಒಳ್ಳೆಯದು? (ಆ) ನಟನಟಿಯರನ್ನು ಶೃಂಗರಿಸಲು ಪ್ರತ್ಯೇಕವಾದ ಜನರು ಅಗತ್ಯವೆ? ನಟರೇ ಸ್ವತಃ ಶಿಂಗರಿಸಿಕೊಳ್ಳುವುದು ಮೇಲೆ? ೨೨ ನಟರ ವಸ್ತ್ರಾಭರಣಗಳಲ್ಲಿ ಯಾವ ಬಗೆಯ ಔಚಿತ್ಯವು ಅತ್ಯಾವಶ್ಯಕ

ರಂಗಮಂದಿರ.

೨೩ ರಂಗಮಂದಿರದ ವಿಸ್ತೀರ್ಣವೆಷ್ಟಿರಬೇಕು, ಆಕಾರ ಎತ್ತರ ತಗ್ಗುಗಳು, ಯಾವರೀತಿ ಇರುವುದು ಒಳ್ಳೆಯದು ೨೪ ಪ್ರೇಕ್ಷಕರಿಗೆ ಯಾವ ಬಗೆಯ ಸೌಕರ್ಯಗಳು ಅವಶ್ಯಕ ಈಗಿನ ರಂಗಮಂದಿರಗಳಲ್ಲಿ ಯಾವ ಬಗೆಯದಾದರೂ ಅಸೌಕರ್ಯಗಳುಂಟೇ? ಅವನ್ನು ಪರಿಹರಿಸುವ ಪರಿಯೆಂತು ೨೫ ಎಷ್ಟು ಜನಸಂಖ್ಯೆಯುಳ್ಳ ಪಟ್ಟಣಗಳಲ್ಲಿ ರಂಗಮಂದಿರಗಳನ್ನು ಕಟ್ಟಬಹುದು ಕರ್ನಾಟಕದ ದೊಡ್ಡ ಪಟ್ಟಣಗಳಲ್ಲೆಲ್ಲಾ ನಾಟಕಮಂದಿರಗಳವೆಯೆ ಸಾಕಾದಷ್ಟು ಸಂಖ್ಯೆಯಲ್ಲಿವೆಯೆ, ೨೬ ಈಗಿರುವ ರಂಗಮಂದಿರಗಳಲ್ಲಿ ಯಾವುದಾದರೂ ನ್ಯೂನತೆಗಳುಂಟೋ, ಇವನ್ನು ಪರಿಹರಿಸಲು ಉಪಾಯಗಳೇನು? ೨೭ ನಾಟಕದ ಪರದೆ, ಉಡಿಗೆತೊಡಿಗೆ, ಆಭರಣಗಳು, ಇವುಗಳು ತೃಪ್ತಿಯಾಗಿರುವಂತೆ ಮಾಡಲು ಏನು ಉಪಾಯಗಳನ್ನು ಸೂಚಿಸುವಿರಿ ಇವು ಸುಲಭದಲ್ಲಿ ದೊರೆಯುವಂತೆ ಮಾಡಲು ನಿಮ್ಮ ಸಲಹೆಗಳೇನು?

ಪ್ರೇಕ್ಷಕರು

೨೮ ಅಭಿರುಚಿ, ಸಂಸ್ಕೃತಿ, ಅಂತಸ್ತು, ಇವುಗಳಿಗನುಗುಣವಾಗಿ ಪ್ರೇಕ್ಷಕವರ್ಗವನ್ನು ಕೆಲವು ಪಂಗಡಗಳಾಗಿ ವಿಂಗಡಿಸಬಹುದೇ? ಒಂದುವೇಳೆ ಹಾಗೆ ವಿಂಗಡ ಮಾಡುವುದಾದರೆ ಬೇರೆ ಬೇರೆ ಪಂಗಡಗಳಿಗೆ ರುಚಿಸುವ ಪ್ರದರ್ಶನ ವಿಷಯಗಳಾವುವು ೨೯ ಯಾವ ಬಗೆಯ ನಾಟಕಗಳು ಎಲ್ಲಾ ವರ್ಗಕ್ಕೂ ಸಾಮಾನ್ಯವಾಗಿ ರುಚಿಸುವುವು ೩೦ ರಂಗದಲ್ಲಿನ ಗಾನ ಮತ್ತು ಸಂಭಾಷಣೆಗಳು ಎಲ್ಲಾ ವರ್ಗದ ಸಭಿಕರಿಗೂ ಒಂದೇ ಸಮನಾಗಿ ಕೇಳಬರುವಂತೆ ಮಾಡುವುದು ಸಾಧ್ಯವೇ!

ನಟರು.

೩೧ ನಟರ ಸಾಮಾನ್ಯ ವಿದ್ಯೆವೂ ಸಂಸ್ಕೃತಿಯೂ ಕಡೆಯ ಪಕ್ಷ ಎಷ್ಟರಮಟ್ಟಿಗೆ ಇರಬೇಕು ೩೨ ನಟರಲ್ಲಿರುವ ಅಭಿನಯ ಚಾತುರ್ಯವನ್ನರಿತು ಅದನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಏನು ಉಪಾಯಗಳನ್ನು ಸೂಚಿಸುವಿರಿ ೩೩ ನಟರು ಕ್ರಮನಿಯಮಗಳಿಗೆ ಒಂದು ಶಿಸ್ತಿಗೂ ಬದ್ಧರಾಗಿ ನಾಟಕವು ಯಾವ ಅಡಚಣೆಯೂ ಇಲ್ಲದೆ ಉತ್ತಮವಾಗಿ ನಡೆಯಲು ಯಾವ ಯಾವ ಏರ್ಪಾಡು ಮಾಡಬೇಕು ೩೪ ನಟರಿಗೂ, ನಾಟಕಸಂಸ್ಥೆಗಳ ಮಾಲೀಕರಿಗೂ ಪರಸ್ಪರ ವೈತ್ರಿಯು ಹೆಚ್ಚಲು ಸಲಹೆಗಳೇನು ೩೫ ನಟರ ಆರ್ಥಿಕಸ್ಥಿತಿಯೂ ಇತರ ಸೌಕರ್ಯಗಳೂ ಉತ್ತಮಗೊಳ್ಳಲು ಏನು ಮಾಡಬೇಕು. ನಟರಿಗೆ ವಿದ್ಯಾಭಿವೃದ್ಧಿ, ಕಲಾಭಿವೃದ್ಧಿಗಾಗಿ ಯೂರ ಏರ್ಪಾಡು ಮಾಡಬಹುದು ರಜ, ಪ್ರಾವಿಡೆಂಟ್ ಫಂಡ್, ಮುಂತಾದ ಸೌಕರ್ಯಗಳನ್ನು ಕಲ್ಪಿಸುವುದು ಎಷ್ಟರಮಟ್ಟಿಗೆ ಸಾಧ್ಯ ೩೬ ಚಿಕ್ಕ ಮಕ್ಕಳನ್ನು ರಂಗಕ್ಕೆ ತರುವಾಗ ಯಾವ ವಿಷಯಗಳು ಗಮನಿಸಬೇಕು. ೩೭ ಸ್ತ್ರೀಯರು ಪುರುಷರ ಪಾತ್ರವನ್ನೂ, ಪುರುಷರು ಸ್ತ್ರೀಯರ ಪಾತ್ರಗಳನ್ನೂ ಧರಿಸುವುದರ ಪರಿಣಾಮವೇನು? ಸ್ತ್ರೀಯರ ಪಾತ್ರಗಳನ್ನು ಸ್ತ್ರೀಯರೇ ವಹಿಸುವುದರ ಗುಣದೋಷಗಳಾವುವು ೩೮ ಹುಡುಗರುಗಳೇ ಕಂಪನಿಗಳನ್ನು ಮಾಡಿಕೊಂಡು ದೊಡ್ಡವರು ಆಡುವ ನಾಟಕಗಳನ್ನು ಅಭಿನಯಿಸುವುದರ ಪರಿಣಾಮವೇನು? ೩೯. ನಾಟಕಸಂಸ್ಥೆಗಳ ಮಾಲಿಕರಾಗಲು ಅವರಲ್ಲಿರಬೇಕಾದ ಮುಖ್ಯ ಗುಣಗಳಾವುವು. ಅವನಿಗೆ ದುಸ್ತಾನ ಸೌಕರ್ಯಗಳಿರಬೇಕು.

ಮಾಲೀಕರು

೪೦ ಕರ್ನಾಟಕದಲ್ಲಿ ಅನೇಕ ನಾಟಕಸಂಸ್ಥೆಗಳ ಮಾಲೀಕರು ನಷ್ಟಹೊಂದಿ ಅಶಕ್ತರಾಗುತ್ತಿರಲು ಕಾರಣಗಳೇನು? ಇವನ್ನು ಪರಿಹರಿಸಬಹುದೇ? ಹೇಗೆ?

ಕಲಾಮಂದಿರ,
ಬೆಂಗಳೂರು ನಗರ
೧೩—೧೦—೩೩

ಎ. ಎನ್. ಸುಬ್ಬರಾವ್,
ಕಾರ್ಯದರ್ಶಿ,
ನಾಟಕ ಸಮ್ಮೇಳನದ ಉಪಸಮಿತಿ.

ಪ್ರಕಟಣೆ.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟನಲ್ಲಿ

O P No. 103/1933

ಲಕ್ಷ್ಮಮ್ಮ ಸೆಟ್ಟಿ—ಅರ್ಜಿದಾರಳು

ಕಾರ್ಕಳ ತಾಲೂಕು ಶಿವಪುರ ಮಾಗಣೆ ಕೆರೆಬೆಟ್ಟು ಗ್ರಾಮದ ಮರಿಯಂಡ ಬೆಟ್ಟು ಎಂಬಲ್ಲಿರುವವನಾಗಿದ್ದ ನೂರಮ್ಮ ಸೆಟ್ಟಿರ ಮಗ ಸುಬ್ರ ಸೆಟ್ಟಿಯು ಬರೆದಿಟ್ಟ ರಿಜಿಸ್ಟ್ರಿ ಮಾಡಲ್ಪಟ್ಟ ವೀಲ್ ನಾಮೆ ಯ ಶರ್ತಗಳಿಗನುಸಾರವಾಗಿ ಸದ್ರಿ ಸುಬ್ರ ಸೆಟ್ಟಿಯು ವಾದಿಯಾಗಿ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟನಲ್ಲಿ ಮಾಡಿರುವ S C S. No 200/1933ನೆ ದಾವೆಗೆ ಕಾರಣವಾದ ಸಾಲ ವಸೂಲಿ ಮಾಡುವರೆ ತನ್ನ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಕೇಳಿ ಮೇಲ್ಕಂಡ ಅರ್ಜಿದಾರಳು ಮೇಲ್ಕಂಡ ಕೋರ್ಟನಲ್ಲಿ ಅರ್ಜಿ ದಾಖಲ್ಲ ಮಾಡಿರುತ್ತಾಳೆ ಸದ್ರಿಯವಳಿಗೆ ವಾರಿಸು ಸರ್ಟಿಫಿಕೇಟು ಕೊಡಕೂಡದೆಂತ ಆಕ್ಷೇಪ ಹೇಳಿಕ್ಕೆ ಮನಸ್ಸು ಉಳ್ಳವರು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟನಲ್ಲಿ ತಾ. 24-11-1933ನೇ ದಿನ ಬೆಳಿಗ್ಗೆ 11 ಘಂಟೆಗೆ ಕೋರ್ಟು ಮುಂದೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳಬಹುದು. ಎಂತ ಸಂಬಂಧಪಟ್ಟಿರುವ ಸರ್ವರಿಗೂ ಈ ಮೂಲಕ ತಿಳಿಸಿರುತ್ತೇನೆ

ಇಡ್ಯದ ವಾಸುದೇವಯ್ಯ, ಬಿ ಎ ಬಿ.ಎಲ್
ಅರ್ಜಿದಾರಳ ಕಡೆ ವಕೀಲ್

PAI PHARMACY,

Car Street, MANGALORE.

ESTABLISHED 1926

Always ask for:—

Lister Antiseptic & Dressings (1928) Ltd., Calcutta.

Popularly known as

'Ladco'

Vegetable Toilet and Washing Soaps

Indian Capital, Indian Labour, Indian Management.

LIBERAL TERMS TO TRADE

Agents:—

Pai Pharmacy, Car Street, Mangalore.

Wholesale Stockists.—

JAYAVANT SHANTARAM & BROS., *Merchants,*
Bunder, Mangalore, S K

1—9—33

ಶ್ರೀಮದ್ದಯಾನಂದ ನಿರ್ವಾಣೋತ್ಸವ ಹಾಗೂ ದೀಪಾವಳಿ.

ಮುಂಬಾಯಿ-ಇಲ್ಲಿಯ ಫೋರ್ಟ್-ಆರ್ಯ ಸಮಾಜದವರು ಶ್ರೀಯುತ ಶಂಕರ್ ಕೆ. ಕೋಟ್ಯಾನರ ಆಮಂತ್ರಣದ ಮೇರೆಗೆ ಸದ್ರಿಯವರ "ಕರ್ನಾಟಕ ಹಿತೈಷಿ ಕಂಪೆನಿ"ಯಲ್ಲಿ ಬುಧವಾರ ತಾ. ೧೮-೧೦-೧೯೩೩ಕ್ಕೆ ವೈದಿಕ ಧರ್ಮದ ವಿಧಿಯಂತೆ ಆರ್ಯ ಸಮಾಜದ ರೀತ್ಯಾನುಸಾರವಾಗಿ, ವೈದಿಕ ಯಜ್ಞವು ಶ್ರೀ ಎ. ಸತ್ಯಾರ್ಥಿ ಸಿದ್ಧಾಂತ ವಿಶಾರದರ ಪೌರೋಹಿತ್ಯದಲ್ಲಿ ಜರಗಿತು. ಈ ಸಂದರ್ಭದಲ್ಲಿ ಸಮಾಜದ ಪರವಾಗಿ ಎ. ಸತ್ಯಾರ್ಥಿಯವರು ವೈದಿಕ ಧರ್ಮ ಪ್ರಚಾರ ಹಾಗೂ ಪ್ರಾಚೀನ ಆದರ್ಶದ ಕುರಿತಾಗಿ ಪ್ರೋತ್ಸಾಹಿಸಿದ ಕೋಟ್ಯಾನರಿಗೆ ಧನ್ಯವಾದಗಳನ್ನು ಅರ್ಪಿಸಿದ ತರುವಾಯ ಶ್ರೀ ಶಂಕರ್ ಕೆ. ಕೋಟ್ಯಾನರು ಸಮಾಜದ ಪ್ರಚಾರ ನಿಧಿಗೆ ರೂಪಾಯಿ ಐನ್ನು ಸಹಾಯವಿತ್ತರು. ಬಳಿಕ ಸಭೆಯು ಉಪಾಹಾರದೊಂದಿಗೆ ಮುಕ್ತಾಯವಾಯಿತು.

ಅಂದೇ ಸಾಯಂಕಾಲ ಘಂಟೆ ೬ಕ್ಕೆ ಶ್ರೀಮಾನ್ ಸದಾರಾಮದಾಸರ "ಲಕ್ಷ್ಮಿ ಟೈಲರಿಂಗ್ ಕಂಪೆನಿ"ಯಲ್ಲಿಯೂ, ಎ. ಸತ್ಯಾರ್ಥಿ ಸಿದ್ಧಾಂತ ವಿಶಾರದರ ಪೌರೋಹಿತ್ಯದಲ್ಲಿ ಯಜ್ಞ ಮಾಡಲ್ಪಟ್ಟಿತು. ನಂತರ ಫಲಾಹಾರಾದಿಗಳೊಂದಿಗೆ ಸಭೆ ಕೊನೆಗೊಂಡಿತು.

ಮರುದಿನ ತಾ. ೧೯-೧೦-೧೯೩೩ಕ್ಕೆ ಚರ್ಚಿಗೇಟ್ ರಸ್ತೆಯಲ್ಲಿರುವ ಯೂಸಫ್ ಬಿಲ್ಡಿಂಗ್‌ನಲ್ಲಿ ಶ್ರೀ ಮದ್ದಯಾನಂದ ನಿರ್ವಾಣೋತ್ಸವವನ್ನು ಶ್ರೀಮಾನ್ ಯು ರಾಮಚಂದ್ರಜೀ. ಬಿ. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಸದ್ರಿ ಸಭೆಯಲ್ಲಿ ಶ್ರೀ. ಮಲ್ಲಪ್ಪನವರೂ, ಶ್ರೀ ಎ ಸತ್ಯಾರ್ಥಿ ಸಿದ್ಧಾಂತ ವಿಶಾರದರೂ, ಶ್ರೀ ನಾರಾಯಣ ನಾಯ್ಕರೂ, ಶ್ರೀ ಬಾಲಕೃಷ್ಣ ನಾಯ್ಕರೂ, ಶ್ರೀ. ಎಚ್. ಎಸ್ ಕಲ್ಯಾಣದರೂ, ಶ್ರೀ ಬಾಬು ಶಾಸ್ತ್ರಿ ಯೋಗಿರಾಜ ದಯಾನಂದ ಸರಸ್ವತಿಯವರು ದೇಶೋನ್ನತಿ ಮತ್ತು ಧರ್ಮೋನ್ನತಿಗಾಗಿ ಮಾಡಿದ ಕಾರ್ಯಗಳನ್ನು ಸವಿಸ್ತಾರವಾಗಿ ಬೋಧಿಸಿದರು. ಬಳಿಕ ಮಾಸ್ಟರ್ ದೇವಪ್ಪನವರ ಮತ್ತು ಕುಮಾರಿ ಗಿರಿಜಾಬಾಯಿಯ ಮನೋರಂಜಕ ಗಾಯನವಾಯಿತು. ತರುವಾಯ ಅಧ್ಯಕ್ಷರು ಜಗದ್ವಿಭೂತಿಯಾದ ಸ್ವಾಮಿ ದಯಾನಂದರ ಕಾರ್ಯವನ್ನು ಸಂಸಾರದಲ್ಲಿ ಚೆನ್ನಾಗಿ ಮಾಡಿ ತೋರಿಸುವ ವಿಧಾನವನ್ನೂ, ಸ್ವಾಮಿಜೀಯವರ ಪೂರ್ವಕಾಲದ ದೇಶದ ಪರಿಸ್ಥಿತಿಯನ್ನೂ, ನಂತರ ಸ್ವಾಮಿಜಿಯವರು ಬೆಳಗಿಸಿದ ಜ್ಞಾನ ಜ್ಯೋತಿಯ ಪ್ರಭಾವದಿಂದ ಈಗ ಸರ್ವತ್ರ ಸುಧಾರಣೆಯ ಕಾರ್ಯ ನಡೆಯುವುದನ್ನೂ ಸಭಿಕರಿಗೆ ಹೃದಯಂಗಮವಾಗುವಂತೆ ಮಹತ್ವಪೂರ್ಣ ಭಾಷಣವಿತ್ತರು. ತರುವಾಯ ಧನ್ಯವಾದ ಹಾಗೂ ಶಾಂತಿಪಾಠದೊಂದಿಗೆ ಸಭೆ ವಿಸರ್ಜನವಾಯಿತು.

ಮರುದಿನ ತಾ. ೨೦-೧೦-೧೯೩೩ಕ್ಕೆ ಶ್ರೀ ಎಸ್. ಅಂತಪ್ಪನವರ ಆಮಂತ್ರಣದ ಮೇರೆಗೆ ಅವರ "ಟೈಲರಿಂಗ್ ಕಂಪೆನಿ"ಯಲ್ಲಿ ಪ್ರಾತಃಕಾಲ ಘಂಟೆ ೮ಕ್ಕೆ ಯಜ್ಞ ಮಾಡಲ್ಪಟ್ಟಿತು. ತರುವಾಯ ಶ್ರೀ. ಎ. ಸತ್ಯಾರ್ಥಿಯವರು ಸಮಾಜದ ಕಾರ್ಯಕ್ಕೆ ಪ್ರೋತ್ಸಾಹವಿತ್ತ ಶ್ರೀ. ಯಸ್. ಅಂತಪ್ಪನವರಿಗೆ ಸಮಾಜದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ನಂತರ ಫಲಾಹಾರಾದಿಗಳೊಂದಿಗೆ ಸಭೆಯು ಸಮಾಪ್ತಿಯಾಯಿತು.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು ನಿಮಗೆ ಬೇಕಾದುದು ಇಲ್ಲೇ ಇದೆ

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ ವಿವರಗಳಿಗೆ—**ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ** (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್ಸ—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಕ್ಟ್ ಡಿಪೊಜಿಟರಿ ಕೊ., ಮಂಗಳೂರು.

ರೋಗವು ಕ್ಷೀಣಿಸುತ್ತದೆ...
ಹೊರ್ಲಿಕ್ಸ್ ವೃದ್ಧಿಸುತ್ತದೆ..

ಹೊರ್ಲಿಕ್ಸಿನ ನಿರಂತರ ಪೋಷಣೆಯು ರೋಗಾಲ್ಪದ ವೇಳೆಯಲ್ಲಿ ನವಶಕ್ತಿಯನ್ನ ಕೊಡುತ್ತದೆ.

ರೋಗವು ಕೊನೆಗೊಂಡ ನಂತರ ನಿರ್ಬಲತೆಯನ್ನು ಹೋಗಲಾಡಿಸಬೇಕೆಂದು ಡಾಕ್ಟರರು ಅಭಿಪ್ರಾಯಗೊಳ್ಳುವರು. ರೋಗದ ಸಮಯ ನಷ್ಟವಾದ ಚೈತನ್ಯವನ್ನು ಪುನರ್ವೃದ್ಧಿಸಬೇಕೆಂದು ಹೇಳುವರು. ಆಗ ಹೊರ್ಲಿಕ್ಸನ್ನು ತೆಗೆದುಕೊಳ್ಳಬೇಕು. ಕಾರಣ ಅದು ದನದ ಹಾಲಿನ ಶುದ್ಧ ಕ್ರೀಮಿನಿಂದ ತಯಾರಿಸಲ್ಪಟ್ಟದ್ದೂ, ಮೊಲ್ಟೆಡ ಬಾರ್ಲಿ, ಗೋಧಿಯ ಸಾರದಿಂದ ಕೂಡಿದ್ದೂ ನಿಶ್ಶಕ್ತ ದೇಹಕ್ಕೆ ಯೋಗ್ಯವಾದ ಪೋಷಣೆಯನ್ನು ಕೊಡುತ್ತದೆ.

ಹೊರ್ಲಿಕ್ಸ್ ಹಾಲಿನ ಸ್ವಚ್ಛ ಪರಿಮಳವು ಮನಹ್ಲಾದವನ್ನುಂಟು ಮಾಡುತ್ತದೆ.
ಇನ್ನಿತರ ಆಹಾರವಾಗುವುದಿಲವಾದರೆ, ಮಕ್ಕಳಿಗೆ ಕೊಟ್ಟರೆ ಇದು ಬೇಗನೇ ಜೀರ್ಣಸುತ್ತದೆ

ಹೊರ್ಲಿಕ್ಸ್ ಮಿಕ್ಸರ್ ಕೆಲವು ಸೆಕೆಂಡುಗಳಲ್ಲೇ ಯೋಗ್ಯ ಪಾನೀಯವಾಗುತ್ತದೆ ಅಥವಾ ಟಿ ಪೆ. ೨೨೨೯ ಕಲ್ಕತ್ತ ಇಲ್ಲಿಗೆ 14 ಆಣೆ ಅಂಚೆ ಚೀಟು ರವಾನಿಸಿದರೆ ಸಿಗುತ್ತೆ

'ಹೊರ್ಲಿಕ್ಸ್'
ಮೂಲಭೂತ ಮೊಲ್ಟೆಡ್ ಹಾಲು,
ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ.

ಟಿ ಪೆ. ೨೨೨೯ ಕಲ್ಕತ್ತ
ಹೊರ್ಲಿಕ್ಸ್ ಇನ್‌ವೆಲಿಡಸ್ ಎಂಬುದರ ಕುರಿತು ಧರ್ಮಾರ್ಥ ಸವಿವರ ಪತ್ರವನ್ನು ನನಗೆ ಕಳುಹಿಸಿರಿ.
ಹೆಸರು ....
ವಿಳಾಸ ....No. S. D. 107 .....
ಹೊರ್ಲಿಕ್ಸ್ ಮಿಕ್ಸರ್ ಬೇಕಾಗಿದ್ದರೆ 14 ಆಣೆ ಅಂಚೆ ಚೀಟು ರವಾನಿಸಿರಿ.

[illegible]

[illegible] ಈ ಕೃತ್ರಿಮ ಸಾಧನಗಳನ್ನು ಎಷ್ಟರ ತನಕ ಮುಂದುವರಿಸಲಿ? ಅದೆಲ್ಲವೂ ಅನರ್ಥ ವಿಷಯಗಳು. ನನ್ನ ಜನರ ಸೇವೆಯನ್ನು ನಾನು ಮನಃಪೂರ್ವಕವಾಗಿಯೂ, ವಿಶ್ವಾಸಪೂರ್ವಕವಾಗಿಯೂ ಮಾಡಬೇಕಾದರೆ ನಾನು ಮೊದಲು ಸುಸಜ್ಜಿತನಾಗಬೇಕು, ಆ ಮೇಲೆ ನವಜೀವನವನ್ನು ಪ್ರಾರಂಭಿಸಬೇಕು. ಕಳೆದ [illegible] ವರ್ಷಗಳಲ್ಲಿ ನಾನು ನನ್ನ ಸಾಧನೆಗಳಲ್ಲಿ ಅಪಯಶಸ್ವಿಯಾದೆನೆಂದರೆ ಅದು ನನ್ನ ಪ್ರಾಪಂಚಿಕ ಅಜ್ಞಾನದಿಂದಾಗಿರುತ್ತದೆ. ಜಗತ್ತಿನ ಆಗು ಹೋಗುಗಳ ಅರಿವಿಲ್ಲದ ಕಾರಣದಿಂದಾಗಿದೆ. ಇಂತಹ ಅಜ್ಞಾನಕ್ಕೆ ಅಂತ್ಯ ಸಂಸ್ಕಾರವನ್ನು ಮಾಡಬೇಕೆಂದು ನನ್ನಲ್ಲಿ ಭಾವನೆಯುಂಟಾಯಿತು.

ನಾನು ಸೆರೆಯಿಂದ ಹೊರ ಬಂದ ನಂತರ ನನ್ನೀ ಕಂದ ಭಾವನೆಗಳು ನನ್ನನ್ನು ಸಾಹಿತ್ಯ ಜ್ಞಾನಾರ್ಜನೆಯನ್ನು ಮಾಡಬೇಕೆಂದು ಪ್ರೇರೇಪಿಸಿದುವು. ಸೆರೆಯಲ್ಲಿರುವಾಗ ನಾನು 'ಜಗತ್ತಿನ ಮಹಾಪುರುಷರ ಜೀವನ ಚರಿತ್ರೆ'ಯನ್ನೂ, [illegible] ರಾಷ್ಟ್ರಗಳ ಆಧುನಿಕ ಚರಿತ್ರೆಯನ್ನೂ, ಮತ್ತು ಆಕಾಶ ವಿಜ್ಞಾನ ಗ್ರಂಥಗಳನ್ನೂ ಓದಿದೆ. ಈ ವಿಷಯಕವಾದ ಇನ್ನೂ ಕೆಲವು ಗ್ರಂಥಗಳನ್ನೂ ನಾನು ಓದಿದೆ.

ಕೈದಿಯು ಸ್ವತಂತ್ರನಲ್ಲವಾದುದರಿಂದ ಅವನ ಎಲ್ಲಾ ವ್ಯವಹಾರಗಳಲ್ಲೂ ನಿರ್ಬಂಧವಿದೆ. ಎಷ್ಟು ಸಣ್ಣ ಕೆಲಸಕ್ಕೂ ಅವನು ಜೈಲಧಿಕಾರಿಗಳನ್ನು ಕೇಳಿಕೊಳ್ಳಬೇಕಾಗಿದೆ. ಕೈದಿಯ ಈ ಅಧಿಕಾರಿಗಳ ಸಂಪೂರ್ಣ ಅಧಿಕಾರದ ವಶವಿರುತ್ತಾನೆ. ಕೈದಿಯನ್ನು ಕಂಡು ಅಧಿಕಾರಿಗಳು ವಿಚಕ್ಷಣರು, ಅವರಿಗೆ ಅವನ ವಿಷಯದಲ್ಲಿ ಸಂದೇಹಗಳಿಲ್ಲದಿದ್ದರೆ ಅಧಿಕಾರಿಗಳು ನ್ಯಾಯವಾದ ಕೇಳಿಕೆಗಳನ್ನು ತಿರಸ್ಕರಿಸುವುದಿಲ್ಲ. ಇಲ್ಲದಿದ್ದರೆ ಅವ ನನ್ನು ದಣಿಸುತ್ತಾರೆ. ದ್ವಿಪಕ್ಷಗಳವರ ಮೇಲೂ ಜವಾಬ್ದಾರಿ ಇದೆ. ನನ್ನ ವಿಷಯವಾಗಿ ಹೇಳುವುದಾದರೆ, ನಾನ ದಣಿಸಲ್ಪಟ್ಟಿಲ್ಲವೆಂದೇ ಹೇಳುವೆನು. ನನಗೆ ಬೇಕಾದ ಎಲ್ಲಾ ಗ್ರಂಥಗಳನ್ನೂ ಅವರು ನನಗೆ ಕೊಟ್ಟರು. ಕಾರಣ ಅಲ್ಲಿ ನಿಷಿದ್ಧ ಗ್ರಂಥಗಳಿರಲಿಲ್ಲ. ಹೀಗಿದ್ದುದರಿಂದ ಹಚ್ಚಿನ ಮಟ್ಟಿಗೆ ನನ್ನ ವಾಚನ ಕಾರ್ಯವು ನಡೆಯಿತು. ಬೆಳಗಾಂವಿ ಸೆಂಟ್ರಲ್ ಜೈಲಿನಿಂದ ಸಬಮರ್ತಿಗೆ ವರ್ಗಾಯಿಸಲ್ಪಟ್ಟ ಆರು ತಿಂಗಳುಗಳಲ್ಲಿ ನಾನು ನೂರು ಗ್ರಂಥಗಳನ್ನು ಓದಿದೆ. ಸ್ವಾತಂತ್ರ್ಯದಿಂದ ಸುಖದಿಂದಿರಲು ಹೋರಾಡುವ ರಾಷ್ಟ್ರಗಳ ಕುರಿತಾಗಿ ನಾನು ಹೆಚ್ಚಿನ ಅನುಭವವನ್ನು ಹೊಂದಿದೆನೆಂದು ಹೇಳಬಹುದು. [illegible] ಇನ್ನೂ ಹೆಚ್ಚಿನ ಬಿಡುವೂ ಗ್ರಂಥ [illegible] ಈಗ ಮನಗಂಡಿದ್ದೇನೆ. ಆದರೆ [illegible] ಸಾಧ್ಯವಿಲ್ಲದಾ[illegible]

[illegible] ಎದುರಾಡುವುದು [illegible] ಇದ್ದರಾಗ [illegible]

[illegible]

ಎಂ. ಎನ್. ಕೆ. ಯವರಿಂದ ತಪ್ಪಿದ ಕೊರೊನೇಶನ್ ಕ್ಲಬ್ [illegible] ಯವರಿಗೆ ಸಿಗುವಂತಿದ್ದರೂ ಗವರ್ನಮೆಂಟು ಕೊಡದಿದ್ದವರು ಅದನ್ನು ಪತ್ತೆ ಹಚ್ಚುವರೆ

† † † †

ಅಖಿಲ ಭಾರತ ಪಂಚಾಯತ ಕೌನ್ಸಿಲಿನಲ್ಲಿ ಪ್ರೆಸಿಡೆಂಟರು ಕೋರಂ ಇಲ್ಲದೆ, ವಾದಿ ಪ್ರತಿವಾದಿರಿಲ್ಲದೆ, ಎರಡು ಘಂಟೆ ಹೊಡೆಯುವ ಮೊದಲೇ ಕೇಸುಗಳನ್ನು ಎಡ್ಜರ್ನ್ ಮಾಡಿ ಇಟ್ಟರೆಂಬ ಬಗ್ಗೆ ಸ್ವಲ್ಪ ಗಲಾಟೆಯದ್ದಿತು. ಅದೂ ದೇಗನೇ ತೀರ್ಮಾನವಾದುದು ಸ್ವಸ್ಥ! ಇನ್ನು ಮುಂದೆ ಹಾಗಾಗದಿರಲಿ! ಆದಲ್ಲಿ, ದಿವ್ಯದೃಷ್ಟಿಗೆ ತಿಳಿಸಲಿ

† † † †

ಕಳೆದ ವಾರ ಮನೆಯಲ್ಲಿ ಪೂಜೆಗೂ ಕೂತಿದ್ದಾಗ ವಕೀಲ ಗುಮಾಸ್ತರಾದ ಶ್ರೀ ಕೃಷ್ಣಾಪೂರ ಶ್ರೀನಿವಾಸ ರಾಯರನ್ನು ಅವರ ಅಳಿಯನ ತಿವಿದನು ಶ್ರೀನಿವಾಸರಾಯರು [illegible] ಗಳಲ್ಲಿ ಆಸ್ಪತ್ರೆಯಲ್ಲಿ ತೀರಿಕೊಂಡರು. ಕೊಲೆಗಳ ಬೇಗೂ ಇಳಿದುವೇ?

† † † †

'ಮಿತ ಸಂತಾನ' ಪದ್ಧತಿಯನ್ನು ನಿಷೇಧಿಸುವುದಕ್ಕಾಗಿ ಕಥೊಲಿಕರ ಸಭೆಯೊಂದು ಕಾ ಗ್ರಾರಲ್ಲಿ ಕಥೋಲಿಕ್ [illegible] ಯನ್ [illegible] ಪ್ರೈಸ್ "ವೆರಿಂಡ್ ಆರ್ [illegible] ಮಸ್ಕರೇಂಜನ ಅಧ್ಯಕ್ಷತೆಯಲ್ಲಿ ನಡೆದು ಅದನ್ನು ನಿಷೇಧಿಸಲಾಯಿತ. ಸಂತಾನವು ವೃದ್ಧಿಯಾಗಲಿ!

† † † †

ಗಾಂಧಿ ಜಯಂತಿ [illegible] ನಲ್ಲಿ ಕುಮಾರ [illegible] ಯ [illegible] ದ ಸಲ್ಪಟ್ಟಿದೆ. ನಮ್ಮ ಸ್ವಾತಂತ್ರ್ಯದಲ್ಲವ

† †

[illegible] ಗ,ಲ್ಲ,ಬಿಗಿಯಿಂದ [illegible] ಯೆಂದು ತಿಳಿದು ಸಂತೋಷ ಹೊಂದಬೇಕಾಗಿದೆ

† † †

[illegible] ಮಾಡಲ್ [illegible] ಸುವರ್ಣ [illegible] ಗದೆ [illegible]

†

ಅಂತಹ [illegible] ನವ [illegible] ಕಾನ್ಸುಲರ ಸ್ವರೂಪವನ್ನು ತೋರಿಸುವಂತಿದೆ

ದಿವ್ಯದೃಷ್ಟಿ

— ++ +

ಮಾನವ ಕತ್ತಲ ದಾರಿಯಿಂದ ನಾವು ಪಾರಾಗಬೇಕಾಗಿದೆ. ಪ್ರಾಂತೀಯ ಮತೀಯ, ಜಾತೀಯ ಮತ್ತು ಸಂಕುಚಿತ ದುಃಸ್ಥಿತಿಗಳಿಂದ ನಾವು ದೂರವಾಗಬೇಕಾಗಿದೆ. ದೇಶ ಸೇವೆಯನ್ನು ಮಾಡಬೇಕೆಂದಾದರೆ ಅದನ್ನು ಸ್ವಪ್ರಯತ್ನದಿಂದ ಮಾಡಬೇಕು. ನಮ್ಮ ದೃಷ್ಟಿಕೋನವನ್ನು ವಿಶಾಲಗೊಳಿಸಬೇಕು. ದೃಷ್ಟಿ ವೈಶಾಲ್ಯತೆ, ನಾವು ಅನ್ಯ ಜನಾಂಗಗಳ ಸ್ಥಿತಿಗತಿಗಳನ್ನು ಸಮತುಲನೆ ಮಾಡಿ ನಾವೇನು ಎಲ್ಲಿದ್ದೇವೆಂದು ತಿಳಿದು ಮಿತಿಯಾವಧಿಯಲ್ಲಿನ ನಮ್ಮವರ ಉದ್ಧಾರಾರ್ಥವಾಗಿ ಯಾವ ರೀತಿಯ ಪ್ರಯತ್ನ, ವಿಶಾಲ ಮನಸ್ಸು ಬೇಕೆಂದು ನಿರ್ಧರಿಸಿಕೊಳ್ಳಬೇಕಾಗಿದೆ.

ಈ ಸಲದ ಕಾರಾಗ್ರಹ ಜೀವನವು ನನಗೆ ಇಷ್ಟನ್ನು ಕಲಿಸಿತು. ಇದು ನನ್ನ ಮನನೀಯ ಅರ್ಜನೆ. ಈ ಜ್ಞಾನದ ಉಪಯೋಗವನ್ನು ಮಾಡಬೇಕೆಂದು ಇಚ್ಛೆಯುಳ್ಳವನಾಗಿದ್ದೇನೆ. ಆದರೆ ಭವಿಷ್ಯದ ಗರ್ಭದಲ್ಲೇನಡೆಯುವುದು ಯಾರು ಬಲ್ಲ?

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೇ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕಫ-ಕಮಿನ್' ಇದು ದಿವ್ಯಔಷಧವಾಗಿದೆ. ಕ್ರಯ 1-8-0

ಮದ್ರಾಸಿನಲ್ಲಿ ದಿ ಓರಿಯಂಟಲ್ ರಿಸರ್ಚ್ ಲೆಬೋರೆಟರಿಯವರಿಂದ ಸಿದ್ಧವಾದುದು.

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್-

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು.

...ನಮೂನೆಯ ...

ಫಾರಂಗಳು, ರಜಿಸ್ಟರುಗಳು, ...

ಮುದ್ರಿತ ಫಾರಂಗಳ ...

ದಿ ಮಂಗಳೂರು ಟ್ರೇಡಿಂಗ್ ...

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga. Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,

The South Indian General Assurance Co. Ltd.

64, 3rd, Cross Road, Srirampur Extn.

Malleswaram Post, BANGALORE.

OR

The Managing Agents,

The S. I. G. A. Co. Ltd.

55, Poonamallee High Road, Kilpauk, MADRAS.

THE SOUTH INDIA

CO-OPERATIVE INSURANCE SOCIETY,

LIMITED, MADRAS.

LOCAL BOARD:—

THE SOUTH CANARA CENTRAL CO-OPERATIVE BANK. LTD., MANGALORE.

Applications are invited for 'Sub Agents, from capable and energetic persons and Co-operative Institutions to canvass business on behalf of the Local Board of the Society at Mangalore.

FOR TERMS APPLY TO:—

The Secretary,

South Canara Central Co-operative Bank, Ltd., KODIALBAIL P. O. (Mangalore)

SOUTH CANARA.

ಮನೋಹರ ಗ್ರಂಥಮಾಲಾ, ಧಾರವಾಡ.

ಮೊದಲನೆಯ ಕುಸುಮ.

ಸುದರ್ಶನ (ಸ್ವತಂತ್ರ ಸಮಾಜ ಕಾದಂಬರಿ) ...

ಬರೆದವರು ಆನಂದಕಂದ.

ಎರಡನೆಯ ಕುಸುಮ—...

ಕರ್ನಾಟಕ ಪ್ರಸಿದ್ಧ ಕಥೆಗಾರರ ಕಥಾಸಂಗ್ರಹ.

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಚಕ್ ರೋಲ್ ಗಳು

ಮೂರು ಸ್ಸಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ಮೆನೇಜರ್,

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ದಶಮೂಲಾರಿಷ್ಟ.

ಮಹಾನಾರಾಯಣ ತೈಲ

EDITED, PRINTED & PUBLISHED BY V. S. ...

[illegible] ಸ್ವದೇಶಾಭಿಮಾನಿ.

(... ಗಂಟಲಲ್ಲಿ ಸ್ಥಾಪಿತವಾದುದು.)

[illegible] ಪ್ರಕಟವಾಗುವ ವಾರಪತ್ರಿಕೆ.

[illegible]

[illegible] ಮಂಗಳೂರು [illegible] ಶುಕ್ರವಾರ ನವಂಬರ [illegible] (3 - 11 - '33) ಸಂಚಿಕೆ [illegible]

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—Coondapoor, Mangalore, Shimoga & Madras.

ಹೆಡ್ ಆಫೀಸು—ಉಡುಪಿ. ಶಾಖೆ:-ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ. 3,50,000. ಶೇರು ಹಾಕಲಿಕ್ಕೆ ಆಪಿಗಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 30TH SEPTEMBER, 1933.

	Capital and Liabilities.			Property and Assets	
1	Paid up Capital	Rs. 2,25,000-0-0	1	Bank Premises, Buildings, Furniture etc Rs.	66,863-7-9
2	Reserve and other funds	„ 2,35,000-0-0	2	Investment on Govt. Securities	„ 3,0[illegible]
3	Deposits	„ 22,02,425-12-9	3	Authorised Investments	„ 23,2[illegible]
4	Due to Bankers	„ 18,722-6-4	4	Bills for collection	13,385-8-6
5	Sundries	„ 92,674-3-8	5	Sundries	„ 29,120[illegible]
6	Bills for collection per contra	13,385-8-6	6	Cash on hand & with bankers	[illegible]
	Total	27,87,207-15-3		Total	[illegible]

UDIPI, 3—10—'33.

N. ANANDA RAO,
Secretary & Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಟ್ಟುಕೊಡುವ ವಾತ, ಭಾರಿ ನೋವು, [illegible] ಹಲ್ಲುನೋವು, [illegible] ಬಹು ಶೀತ, ಸಹಿಸಲಸದಳವಾದ ಚಳಿ, [illegible] ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ವೇದನೆಗಳನ್ನು ಅತೀ ಶೀಘ್ರದಲ್ಲಿ ಗುಣ ಪಡಿಸುತ್ತದೆ. ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿಯನ್ನು [illegible] ಚರ್ಮರೋಗಗಳನ್ನೂ, [illegible] ಕೂಡಲೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ! ಡಜನಿಗೆ ರೂ 8—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದ್ರಾಸು ಮತ್ತು ಬೊಂಬಾಯಿ

ಡೋಂಗರೆ

ಅವರ

ಬಾಲಾಮೃತ

[illegible]

ಓದಲಿಕ್ಕೂ, ಜಾಹೀರಾತು ಕೊಡಲಿಕ್ಕೂ

ಮಕ್ಕಳಿಗೂ, ದೊಡ್ಡವರಿಗೂ, ಹಳ್ಳಿಯವ

ರಿಗೂ, ಪೇಟೆಯವರಿಗೂ, ವಿದ್ಯೆ

ಇದ್ದವರಿಗೂ, ಇಲ್ಲದವರಿಗೂ

ಬೇಕಾದ,

ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ

ಪತ್ರಿಕೆ

'ಸ್ವದೇಶಾಭಿಮಾನಿ'

27 ವರ್ಷಗಳ ನವತರುಣ!

ಕುಟುಂಬದ ಆರೋಗ್ಯ ಮತ್ತು
ಶಕ್ತಿಗಾಗಿ ದಿವ್ಯ ಪಾನೀಯ

ನಿಮ್ಮ ಮನೆಯಲ್ಲಿ ರುಚಿಕರವಾದ 'ಓವಲ್ಟಿನ್' ನಿತ್ಯ ಪಾನೀಯವಾಗಿ ಉಪಯೋಗಿಸಿರಿ. ನಿಮ್ಮ ಕುಟುಂಬದವರ ಆರೋಗ್ಯವನ್ನು ಅದು ವೃದ್ಧಿಪಡಿಸಲು ಸಹಾಯಕವಾಗುತ್ತದೆ

ಪ್ರಕೃತಿಯ ಟಾನಿಕ್ ಆಹಾರಗಳಿಂದಲೇ 'ಓವಲ್ಟಿನ್'ನ್ನು ತಯಾರಿಸಲಾಗಿದೆ. ಇದಕ್ಕೆ ಬೆಳೆದ ಬಾರ್ಲಿ ಮೋಲ್ಟ್, ದನದ ದಪ್ಪ ಹಾಲು, ಕೋಳಿಮೊಟ್ಟೆಗಳನ್ನು ಉಪಯೋಗಿಸಿದೆ. ಆರೋಗ್ಯ ವರ್ಧನೆ ಸ್ಕೆಲಿಟನ್ ದೃಢತೆಗೂ ಇದು ಸಮತೂಕದ ಪೋಷಣೆಯನ್ನೀಯುತ್ತದೆ. ವೀರ್ಯ ವೃದ್ಧಿ, ಬಲವೃದ್ಧಿಯಾಗುತ್ತದೆ. ಇದನ್ನು ತಯಾರಿಸುವಾಗ ಹಸ್ತಸ್ಪರ್ಶವಾಗುವುದಿಲ್ಲ

OVALTINE
TONIC FOOD BEVERAGE

ಮೆದುಳು, ನರ, ದೇಹಗಳನ್ನು ಇದು ಬೆಳೆಸುತ್ತದೆ

[illegible] ಎಲ್ಲಾ ಕೆಮಿಸ್ಟರುಗಳಲ್ಲಿಯೂ ದೊರೆಯುತ್ತದೆ

ಏಜೆಂಟರು — ಜೇಮ್ಸ್ ರಾಟ್ ... ವಿಲ್ಸನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಾಯಿ ಮದರಾಸ್ ರಂಗೂನುಗಳಲ್ಲಿ

OV/131

1-9-63

ಪಂಡಿತ ಬಿ ಆರ್. ಗೋವಿಂದ ರಾಜುಲು ನಾಯುಡುಯವರ

ಮೋಹ ಸಂಜೀವಿನಿ ಎಣ್ಣೆ.

ಪವಿತ್ರತೆಯಾದ ತನ್ನ ಹೆಂಡತಿಯಲ್ಲಿಯೇ ಅತಿಸಂಭೋಗ ಮಾಡುವುದರಿಂದ ಅನರ್ಥಕರವಾದ ಅನೇಕ ರೋಗಗಳು ಬರುತ್ತಿರುವಲ್ಲಿ ದುಷ್ಟಸ್ತ್ರೀಯರಲ್ಲಿ ತಮ್ಮ ಪ್ರಾಯವೆಂಬ [illegible] ವನ್ನು ಧಾರೆಯೆರೆದು ಹಾಳುಮಾಡಿಕೊಂಡು ಮೇಹವನ್ನು, ಭಗಂದರ, [illegible] ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು [illegible] ...

ದೇಹ [illegible] ನಡೆಯುತ್ತಿದ್ದರು [illegible] (goal) ಗೋಲ್ [illegible]

[illegible] ಎಂದು [illegible] ಎಂದರು. [illegible]

ಶ್ರೀ [illegible]
ಶ್ರೀ ಎಸ್ ಸಿ. [illegible]

Canara Bank Limited.

Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office —Bunder, Mangalore • Local Office -City & Bunder

BRANCHES— Bombay Cochin, Calicut, Ernaculam, Alleppey Chikmagalur, Ganguli, Coondapoor, Udipi, Karkal, Puttur Kasaragod, & Buntwal Out-agency.

Interest is allowed on Current, Fixed and Saving Bank Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

ಮಂಗಳೂರು, 12—7—33

A Madhava Pai,
Secretary

East & West Insurance Company Ltd.,

(Incorporated in India 1913)

Head Office —EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus Declared
Rs 15 Per 1000
On whole life & Endowment Policies

For particulars and Agency terms apply to —
H S Nayak, *Organiser Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ

1000 ಬಹುಮಾನ.

ಸಾಬೂನು ಪಡೆಯುವಾಗ ' ' ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಖ್ಯಾತಿ ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ ಈ ಸಾಬೂನು ದೇಶೀಯ ಅನುಕೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು,

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:— ಸನ್.ಬ್ರೆಂಡ್ ಕೊಡಿಯ ಫ್ಯಾಕ್ಟರಿಯ ಸ್ಟೇಟ್ ನಾರ್ಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

S·U N·& CO.

Choukhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾಶೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಶ್ಯಾಮಿಗೆ ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬೆನಾರಿಸ್ (ಕಾಶೀ

— ಗಡಿಯಾಳ ಪ್ರಕಟ —

ಪದುಮಿನಿ ಶಕ ಮುಲಮು —ಗಜಕರ್ಣ, ಕಜ್ಜಿ, ಇಸಬ ನಾಯಟು ಮುಂತಾದ ಎಲ್ಲಾ ಚರ್ಮರೋಗದ ಮೇಲೆ ಪದೇ ರಾಮಬಾಣ ಔಷಧಿ, 24 ತಾಸಿನಲ್ಲಿ ಗುಣಬರುತ್ತದೆ ಸಾವಿರಾರು ಜನರು ಶಿಫಾರಸು ಮಾಡಿರುತ್ತಾರೆ ಕಿಮ್ಮತ್ತು ಡಬ್ಬಿಗೆ ಆಣೆ 0—4—0 ಗಳ ಮೇಲೆ ಟ್ರೈಂಫೀಸು, 12ರ ಮೇಲೆ ಅಲಾರ್ಮ ಟ್ರೈಂಫೀಸು 24ರ ಮೇಲೆ ರಾಸ್ಕೋಪ 48ರ ಮೇಲೆ ರಿಸ್ಟ್ ವಾಚ್ ಪ್ರಕಟ ಸಿಗುವುದು ಕೂಡಲೇ ಬರೆಯಿರಿ ಪತ್ರವ್ಯವಹಾರ ಮರಾಠಿ ಯಾ ಇಂಗ್ಲೀಷಿನಲ್ಲಿ

King George Coronation,
BOBMAY 4

16—6—33 (Head Office—Kotah Rajputana)

(11—8)

ಡಾಕ್ಟರರು ಹಕೀಮರು ವೈದ್ಯರು

ಇವರೆಲ್ಲ ಏಕಕಂಠದಿಂದ

French Barqi Water

"ಫ್ರೆಂಚ್ ಬಾರ್ಕಿ ವಾಟರ್‌ನಿಂದಾಗಿ"

80 ವರ್ಷ ಪ್ರಾಯದಲ್ಲೂ ವಿವಾಹವಾಗಲು ಸಾಧ್ಯವೆಂದು ಹೇಳುವರು ಎಲ್ಲಾ ಸ್ತ್ರೀ ಪುರುಷರ ವೀರ್ಯ ದೋಷಗಳಿಗೆ ಇದು ಪರಮೌಷಧಿಯಾಗಿರುವ ಔಷಧಿ ಈ ಔಷಧಿಯು ಫ್ರೆಂಚ್ ಡಾಕ್ಟರನೊಬ್ಬನಿಂದ ಕಂಡುಹಿಡಿಯಲ್ಪಟ್ಟಿತು. ಆದುದರಿಂದ 'ಫ್ರೆಂಚ್ ಬಾರ್ಕಿ ವಾಟರ್' ಎಂದು ಲೋಕ ಪ್ರಸಿದ್ಧಯಾಯಿತು ತಾ ಎಳ್ಳದ ದುರಾಭ್ಯಾಸಗಳಿಂದ ಪೌರುಷತ್ವವನ್ನು ಕಳೆದುಕೊಂಡಿರುವವರಿಗೆ ಇದು ಸ್ವರ್ಗದ ವರ ಎನ್ನುತ್ತದೆಂಬುದು ಖಾತ್ರಿ.

ಫ್ರೆಂಚ್ ಬಾರ್ಕಿ ವಾಟರ್—ಮುದುಕರನ್ನು ತರುಣರನ್ನಾಗಿ ಮಾಡುತ್ತೆ.

ಫ್ರೆಂಚ್ ಬಾರ್ಕಿ ವಾಟರ್—ಹೋದ ಶಕ್ತಿಯನ್ನು 24 ಗಂಟೆಯೊಳಗೆ ತಂದುಕೊಡುತ್ತದೆ

ಫ್ರೆಂಚ್ ಬಾರ್ಕಿ ವಾಟರ್—ಸ್ತ್ರೀ ಪುರುಷರಿಗೆ ಸಂತತಿಯುಕ್ತನ್ನ ಶಕ್ತಿ ಯನ್ನೀಯುತ್ತದೆ

ಹಾಳಾದ ಘೋರ ಪಶ್ಚಿಮವನ್ನು ವೃದ್ಧಿಸುವ ದಿವ್ಯ ಮದ್ದು ಇದರ ಒಂದು ಹನಿಯು ನೀರಿಂದರೆ ದೇಹಕ್ಕೆ ನೂರು ಹನಿ ರಕ್ತ ದೊರೆತಂತೆ ಸ್ತ್ರೀಯರಲ್ಲಿ ಸಂತತಿಯುಕ್ತನ್ನಗೊಳಿಸುತ್ತೆ ಔಷಧಿಯೊಡನೆ ಉಪಯೋಗದ ಅನುಪಾನ ಕಳುಹಿಸುತ್ತೆ ಒಂದು ಬಾಟ್ಲಿಗೆ ರೂ 3—8—0 ನಾಲ್ಕು ಬಾಟ್ಲಿಗಳನ್ನು ಪಡೆದವರಿಗೆ ಒಂದು ಬಾಟ್ಲಿ ಧರ್ಮಾರ್ಥ ಅಂಚೆ ಹಾಸಲು ಆಣೆ 8 ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಿ.

Bargi Depot,
Kothe No 44 Kushak St MUTTRA

LOOK HERE!

We have got for sale all kinds of freshly prepared Exercise books, Note books and Diaries etc,

SHARADA PRESS,
Car Street, Mangalore.

[illegible]ವಿಚಾರಗಳು:—

[illegible]

NOTES...
ನೋಟಗಳು.

ಶಾಸ್ತ್ರಿ ಮತ್ತು [illegible] ಯವರ ಯೋಚನೆ.

ಮಾನನೀಯ ಶ್ರೀನಿವಾಸ ಶಾಸ್ತ್ರಿಯವರು ಯುವಕಸಂಘಕ್ಕೋಸ್ಕರವಾಗಿ ಬೋಧನೆ ಕೊಡುವಾಗ— [illegible]ಯಿಂದಲೂ ಕೌನ್ಸಿಲುಗಳಲ್ಲಿ ಪ್ರವೇಶಿಸದೆ ಇರುವ ದುರವಸ್ಥೆಗೆ [illegible] ಮಾಡುತ್ತಿರುವುದಿಲ್ಲ ಎಂದರು. ಅಸಹಕಾರದ ತತ್ವ[illegible]ಂದು ಕೌನ್ಸಿಲಿನಿಂದ ದೂರವಿರುವುದು ಸಲ್ಲದು; ಜನತೆಗೆ [illegible]ಹಕಾರವಾಗ ಯಾವ ಸಾಧನೆಗಳಿಂದಲಾದರೂ ಬೋಧಿಸಬೇ[illegible]ದು. ಜನಾಂಗವೇ ಹೀಗೆ ಕೌನ್ಸಿಲುಗಳಿಂದ ದೂರ ನಿಂತರೆ ಅನ್ಯ[illegible]ಯಿಗೆ ಹಿತ ಮಾಡುವವರಾರು? ಆಗಾಗ ಅಸಹಕಾರವೊಂದು [illegible] ಹಿಂತೆರೆ ಅಗಾಗ ವಿರೋಧದ ಸ್ಥಿತಿಯನ್ನು ಉಂಟುಮಾಡಿ, [illegible]ನೂ ಅದರಲ್ಲಿ ಚೇತನ ತುಂಬ ಬೇಕಾಗುವುದಿಲ್ಲವೆ? ಕರ್ಮ ಮಾಡಲು ದೂರವಾಗಿ ಬಂಧನ ಹಾಕಿಕೊಂಡರೆ, ಬಲಶಾಲಿ[illegible] ಅಸ್ವಸ್ಥರೂ ಇದ್ದು ಫಲವೇನಾಗುವುದು? ಬಂದ [illegible] ಎದೆಕೊಟ್ಟು ಮುಂದೊತ್ತುವವರೇ ವಿಜಯಶೀಲರಾಗು[illegible]ರು. ಕೌನ್ಸಿಲುಗಳಲ್ಲಿ ಹೋಗಿ ಮಾಡುವುದು ಕಡಿಮೆಯೇ [illegible]ದಿದ್ದರೂ, ಸಾಧನ ನಡೆಸಲೇ ಬೇಕು. ಎಂದು ಮೊದ[illegible]ಗಿ ಇವರು ಬೋಧಿಸಿದರು. ಸಭೆಯಲ್ಲೊಬ್ಬರು,—ಕೌನ್ಸಿಲುಗಳಿಗೆ ಬಲಿದೇಕೆಂದೇ? ಎಂದೊಬ್ಬರು ಕೇಳಿದಂತೆ ಸಭೆಯ ಹೊರಗೆ ದೇಶದಲ್ಲೂ ಕೇಳುವ ಜನರ ಗುಂಪು ದೊಡ್ಡದಿದೆಯಲ್ಲವೆ?

ಸ್ವರಾಜ್ಯ ದೊರೆತಾಗ

ಜನರಲ್ಲಿ ಹಲವರು ಆ ಕಾಲದ ಸರಕಾರದ ಕ್ರಮಗಳಿಗೆ ಎದುರಾಡಿದರೆ ಎಂದರೆ ಅವರೂ ಶಾಸನಭಂಗ ಸತ್ಯಾಗ್ರಹ ಇತ್ಯಾದಿಗಳಿಗೆ ಕೈ ಹಚ್ಚಿದರೆ ಏನು ಮಾಡುವಿರಿ? ಆದುಕಾರಣ ಆ ತತ್ವವೂ ಕಾರ್ಯಕ್ರಮವೂ ತಪ್ಪು ಎಂದು ಶ್ರೀಮಾನ್ ಗವರ್ನರ ಸಾಹೇಬರು ಅಭಿವಚನ ಕೊಟ್ಟಿರು. ಸ್ವರಾಜ್ಯ ದೊರೆತ ಇಂಡಿಯವು ಇಂತಹ ಚಳವಳವನ್ನು ಅಟಗಿಸಬೇಕಾಗುವುದು. ಅಗತ್ಯ, ಅದೂ ತ್ವರೆಯಾಗಿ, ಅವಶ್ಯವಾಗಿ. ಆದರೆ ಇಂತಹ ಚಳವಳಗಳು ಯಾವ ಕಾರಣಗಳಿಂದ ಉಂಟಾಗುವವೂ ಅವನ್ನ ಶೋಧಿಸಿ ನ್ಯಾಯ ಸಮ್ಮತವಾಗಿ ತಿದ್ದಲಾರದೆ ಇರುವು. ಸತ್ಯಾಗ್ರಹವು ಎಂತಹ ಸಂದರ್ಭಗಳಲ್ಲಿ ತಲೆದೋರಬಹುದೆಂದು ತಿಳಿದೇ ಇರಬಲ್ಲ ಸರಕಾರವು ಅಂತಹ ಸಂದರ್ಭಗಳುಂಟಾಗದಂತೆ ನೋಡಿಕೊಳ್ಳಲಾರದೆ? ಅಥವಾ ಅಂತಹ ಸಂದರ್ಭಗಳು ಉಂಟಾದಾಗ, ಶಾಂತಿಗಳನ್ನು ಪ್ರಯೋಗಿಸುವ ಯುಕ್ತಾ ಯುಕ್ತತೆಯನ್ನಾದರೂ ಅದು ತಿಳಿಯಲಾರದಷ್ಟು ಮೂಢವಾಗಿದ್ದೀತೆ? ಅದೆಲ್ಲವೂ ಒತ್ತಟ್ಟಿಗಿರಲಿ. ಜವಾಬ್ದಾರನನ್ನುವ ಸರಕಾರವು ಎಂದರೇನೆಂಬುದರ ಅರ್ಥವಾದರೂ ಆ ಸ್ವರಾಜ್ಯ ಸರಕಾರಕ್ಕೆ ತಿಳಿಯಲಾರದಿದ್ದೀತೆ? ಮೂರು ವರ್ಷಗಳ ವಾಯಿದೆ ದಾಟುತ್ತಲೆ, ಅಗತ್ಯವಾಗಿಯೂ ಕೌನ್ಸಿಲಿನ ಮತ್ತೊಂದು ಚುನಾವಣೆಗೆ ತೊಡಗದಿದ್ದರೆ, ಪ್ರಜೆಗಳ ಯಾವ ಪ್ರತಿನಿಧಿಗಳಿಂದ ತಾನೆ ಆ ಕೌನ್ಸಿಲು ತುಂಬಿದೆ ಎಂದಾದರೂ ಅದು ತಿಳಿಯದೆ? ಈ ವಿಷಯವಾಗಿ ಈಗ ತಲೆದೋರಿರುವ ಚಳವಳವನ್ನು ಕಂಡರೆ ಏನು ತಿಳಿಯುವುದು?

"ಜೋಕ್!"

ಪಾರ್ಲಿಮೆಂಟರಿ ಕಮಿಟಿಯ ಸಮಕ್ಷ ಸಾಕ್ಷ್ಯ ಹೇಳಲು ಬಂದು ನಾನಾ ಬಗೆಯ ಅರೆ ಸುಳ್ಳು ಅರೆ ಸತ್ಯಗಳನ್ನು ಹೇಳುತ್ತಿದ್ದ ಡಾಯರ್ಕಾರ್ಡರು ಯಾವತ್ತು ಸುಧಾರಣಾ ಸೂಚನೆಗಳನ್ನು ನಿಂದಿಸಿದರೇ ಅಲ್ಲದೆ, ತಮ್ಮನ್ನು ಪ್ರಶ್ನಿಸಿರೆಂದು ಅಧ್ಯ ಸವಾಲು ಕಾದು ಕೂತರು. "ಶ್ವೇತಪತ್ರವನ್ನು ಒಪ್ಪಿದರೆ ಅನರ್ಥವಾದೀತು ಎನ್ನುತ್ತೀರಲ್ಲ. ಅದರ ಬದಲು ಬೇರೇನಾದರೂ ನಿಮ್ಮ ಸುಧಾರಣಾ ಸೂಚನೆಗಳನ್ನು ಕೊಡಿರಿ" ಎಂದು ಸರ್ ಹ್ಯೂಬರ್ಟ್‌ಕಾರರು ತಿಳಿಸಿದರು. "ಹಾಗೆ ಮಾಡಿರೆಂದು ನಮಗೆ ಯಾರೂ ತಿಳಿಸಿಲ್ಲ" ಎಂದು ಉತ್ತರ ಬಂತು. ತಲೆಯಲ್ಲೇನೂ ಬೇರೆ ಇಲ್ಲ ಎಂದು ಇದರ ತಾತ್ಪರ್ಯ. "ಶ್ವೇತ ಪತ್ರವನ್ನು ಹೊರ ತಳ್ಳಲು ಬನ್ನಿ" ಎಂದು ಯಾರೂ ಕರೆದಿದ್ದರೇ ಇವರನ್ನು? ಅದಕ್ಕೆ ಆಮಂತ್ರಣ ಕಾದಿರದವರು ಇದಕ್ಕಾಗಿ ಕಾದು ಕೂತಿದ್ದರೇ? ಅಗಲಿ; ಮುಂದೆ ಅಧ್ಯ ಸವಾಲಿಗೆಂದು ಹಾತೊರೆದು ನಿಂತ ಡಾಯರ್ಕಾರ್ಡರನ್ನು, ಹಿಂದೀ ಪ್ರತಿನಿಧಿಗಳಾರೂ ವಿಚಾರಿಸಲೇ ಇಲ್ಲ." ನಮ್ಮ ದೃಷ್ಟಿಯೇ ಬೇರೆ, ಇವರದು ಬೇರೆಯೆ. ಹೀಗಿರುತ್ತಾ, ಇವರಿಗೆ ಸವಾಲು ಕೇಳುತ್ತಾ, ಕಮಿಟಿಯ ಸಮಯವನ್ನು ಹಾಳು ಮಾಡುವುದಕ್ಕೆ ನಾವ್ಯಾರೂ ಇಚ್ಛಿಸುವುದಿಲ್ಲ, ಎಂದು ಶ್ರೀ ಜಯಕಾರರು ಎಂದರು. ಅಲ್ಲಿಗೆ ಡಾಯರ್ಕಾರ್ಡರ ನಿರ್ಯಾಣ.

ಸವಾಜೋದ್ಧಾರವು

ಹೇಗೆ ಸಾಗಬೇಕೆಂಬುದಕ್ಕೆ ಪಂಡಿತ ಜವಾಹರಲಾಲರು ಬರೆಯುವರು:— "ಸವಾಜೋದ್ಧಾರವೆಂದರೆ ಕೇವಲ ಸ್ವಾತಂತ್ರ್ಯವಷ್ಟೆ ಅಲ್ಲ. ಜನತೆಯ ಸುಖ ಜೀವನ, ಬೀಕಾಣಿಗೆ, ದಾರಿದ್ರ್ಯ ನಿರ್ಮೂಲನ, ರೋಗ ದುಃಖಗಳ ಅಂತ್ಯ, ದೇಹ ಮತ್ತು ಮಾನಸಿಕ ಅಭಿವೃದ್ಧಿ ಇವೆಲ್ಲ ಸಾಧಿಸಬೇಕಾಗಿದೆ." ದೊಂಬಾಯಿ ಗವರ್ನರ ಬಹದ್ದೂರರು ಇದೇ ಸಮಯದಲ್ಲೆ, ತಮ್ಮ ಅಳಿಕೆಯ ಕೆಲ ದಿನಗಳಲ್ಲೇ ಮುಗಿಯುತ್ತಿರುವಾಗ ಗ್ರಾಮಾಭ್ಯುದಯ ಚಳವಳವನ್ನು ಹೂಡಿ, ಸರಕಾರದ ಅಧಿಕಾರಿಗಳೆಲ್ಲ ಆ ದಾರಿಯಾಗಿ ತಮ್ಮ ಪರಿಶ್ರಮವನ್ನು ತಿರುಗಗೊಡಬೇಕು, ಎಂದು ಅಲ್ಲಲ್ಲಿ ಸಾರುತ್ತಿರುವರು. ಮುಖ್ಯ ಬೇಕಾದುದು ಪಂಚಾಂಗ ಶ್ರವಣವಲ್ಲ, ಮುಹೂರ್ತ ನಿಶ್ಚಯವೂ ಅಲ್ಲ. ಕಾರ್ಯಯೋಗಿಗಳು ಮುಂದೆ ಬಂದು ಉತ್ಸಾಹದಿಂದ ಗ್ರಾಮಸೇವೆಗೆ ಸಿದ್ಧರಾಗುವಂತೆ ತರಬೇತು ಹೊಂದಿ, ಅವರಿಗೆ ಬೇಕಾಗುವ ಅನುಕೂಲತೆಗಳು ಗ್ರಾಮಸ್ಥರಿಂದಲೂ ಸರಕಾರದಿಂದಲೂ ಸಿಗುವಂತಾದರೆ ಮಾತ್ರ ಜನ ಸಮಾಜವು ಶೀಘ್ರವಾಗಿ ಅಭ್ಯುದಯ ಹೊಂದಬಹುದು. ಉತ್ಸಾಹ, ಪ್ರಚಾರ, ಬೋಧನೆಗಳಿಗಿಂತ ನಿರುದ್ಯೋಗಿಗಳಿಗೆ ಯೋಗ್ಯ ಕಸಬನ್ನು ಕೊಟ್ಟು ಅವರಿಂದ ಅಶಿಕ್ಷಿತರಿಗೆ ಶಿಕ್ಷಣ ದೊರೆವಂತೆ ಮಾಡಿ, ಪ್ರತಿಯೊಂದು ಹಳ್ಳಿಯೂ ಮಾದರಿ ಹಳ್ಳಿಯಾಗಿ ತನ್ನಲ್ಲೆ ತಾನು ಪೂರ್ಣತ್ವ ಹೊಂದುವಂತೆ ಮಾಡುವರಾದರೆ ಅಲ್ಲಿಗೇ ಮುಕ್ತಿ.

ಜವಾಹರಲಾಲರ ಅಭಿಪ್ರಾಯ

ಪಾರ್ಲಿಮೆಂಟಿನ ಮೆಂಬರರಾಗಿರುವ ಮಿ। ಜೇಲ್ಸ್‌ಕರು ಮಹಾತ್ಮಜಿಯವರಿಗೆ ಹೇಗೆಯೋ, ಹಾಗೆಯೆ ಜವಾಹರಲಾಲರಿಗೂ ಪತ್ರ ಬರೆದು ಕಾಂಗ್ರೆಸ್ ಸಭೆಯನ್ನು ಒಮ್ಮೆ ಕೂಡಿಸಿ, ರಾಜಕೀಯ ಸ್ಥಿತಿಯನ್ನು ವಿಮರ್ಶಿಸಿದರಾಗದೆ ಎಂದು ಪ್ರಶ್ನೆ ಕೇಳಿರುದರಿಂದ, ಪಂಡಿತರು ತಮ್ಮ ಅಭಿಪ್ರಾಯಗಳನ್ನು ಈಗ ಬರೆದುಕೊಂಡಿರುವರು. "ಪರಕೀಯರ ಸತ್ತೆಯಿಂದ ಪಾರಾಗಲು ಜನಾಂಗವೊಂದು ಚಳವಳಿಸುವಾಗ, ಕಠಿಣ ಪ್ರಸಂಗಗಳು ನಡೆಯದೆ ಇರಲಾರವು. ಮಾಡುವುದೇನು? ಇದು ದುರ್ಭಾಗ್ಯವು. ಆದರೂ ನಾವು ಇಂತಹ ಕಠಿಣ ಸ್ಥಿತಿಯನ್ನು ಉಂಟು ಮಾಡುವ ಬದಲಾಗಿ, ಪ್ರೇಮದ ಮೇರೆಯ ನಮ್ಮ ಚಳವಳವನ್ನು ಆಧರಿಸಿದ್ದೇವೆ. ವಿರೋಧಿಯನ್ನು ಹಗೆ ಮಾಡುವ ಬದಲಾಗಿ, ನಮ್ಮ ಧ್ಯೇಯವನ್ನು ಪ್ರೇಮದಿಂದ ಪಡಿಸಿದ್ದೇವೆ. ನಾವೆರಡೂ ಜನಾಂಗದವರು ಸಮಾನರಾಗಿ ನೇರಿ ಆಲೋಚಿಸಿದರೆ ನಮ್ಮಿಬ್ಬರೊಳಗೂ ಪರಸ್ಪರ ಬಾಂಧವ್ಯವು ಖಂಡಿತವಾಗಿಯೂ ಬೆಳೆಯುವುದು. ಧ್ವಂಸ ಮಾಡುವ ಕಾರ್ಯಕ್ರಮವನ್ನು ನಾವಿಟ್ಟುಕೊಂಡಿಲ್ಲ. ರಚನಾಶೀಲ ಕಾರ್ಯಕ್ರಮವೇ ನಮ್ಮದು. ಆದರೆ, ಹೊಸ ರಚನೆಗೆ ತೊಡಗುವಾಗ, ಹಳೆಯ ಕಸದ ತಿಪ್ಪೆಗಳನ್ನು ಒಮ್ಮೆಗೆ ನಿರ್ಮೂಲಿಸಬೇಕಾಗುವುದಲ್ಲವೆ?

ಹಿಂದೀಯರ ಬೆಳವಣಿಗೆಗೆ ಮಿತಿ ಹಾಕಿರಿ

ಎಂದು ನಮ್ಮ ಮಾನಸಮವಾದಿ ಡ್ಯರೆಕ್ಟರರು ಸೂಚಿಸಿದುದನ್ನು ಎಲ್ಲರೂ ಈಗ ಕೇಳಿರುವಂತಾಗಿದೆ. ಎಳೆ ಕೂಸುಗಳ ಮರಣ ಸಂಖ್ಯೆಯು ಬಹಳವಾಗಿದೆಯಾದರೂ ಜಾಪಾನು, ಚೀನಾ, ಇಂಡಿಯಾ ದೇಶಗಳಲ್ಲಿ ಜನ ಸಂಖ್ಯೆಯು ಪ್ರಬಲವಾಗಿ ಹೆಚ್ಚುತ್ತಲೇ ಇದೆ. ಜಾಪಾನಿನಲ್ಲಿ ಪ್ರತಿ ವರ್ಷವೂ ಹತ್ತು ಲಕ್ಷ ಜನರು ಹೆಚ್ಚುತ್ತಿರುವುದು, ದೇಶಕ್ಕೆ ಕುಂದಲ್ಲವಾದರೂ, ರಾಜಕೀಯವಾದ ಅವಾಂತರಗಳಿಗೆ ಕಾರಣವಾದೀತೆಂಬ ಅಂಜಿಕೆಯುಂಟಾಗಿದೆ. ಎಳೆ ಜಾಪಾನು ಚೀನಗಳ 'ಹಳದಿ ವರ್ಣಕ್ಕೂ' 'ಬಿಳೇ ವರ್ಣಕ್ಕೂ' ಖಂಡಿತವಾಗಿಯೂ ಯುದ್ಧವಾಗುವ ಸಂಭವಗಳಾಗುವುವೆಂದು ಭವಿಷ್ಯ ನುಡಿಯುವ ಮುಖಂಡರಿಗಳಿದ್ದಾರೆ. ಹಾಗೆಂದು, ಮಿತ ಸಂತತಿಯ ಕ್ರಮವನ್ನು ಈ ದೇಶಗಳಲ್ಲಿ ರೂಢಿಗೆ ತರುವುದಕ್ಕೂ ವಿಜ್ಞಾನ ಶಾಸ್ತ್ರದಲ್ಲಿ ಬಳಸುವುದಕ್ಕೂ ಭೇದವುಂಟು. ಯಾಂತ್ರಿಕ ಕೃತ್ರಿಮಗಳನ್ನು ಉಪಯೋಗಿಸುವರೆ ಕೈಹಚ್ಚಿದರೆ, ಅವುಗಳ ಬೆಲೆಯು ಹೆಚ್ಚಾಗಿರುವುದರಿಂದ, ಸಂತಾನ ವೃದ್ಧಿಯ ದಾರಿದ್ರ್ಯಶಾಲಿಯವು ಅತಿ ಹೆಚ್ಚಾಗಿರುವ ಬಡವರಿಗೆ ಅವುಗಳು ಪ್ರಯೋಜನಕ್ಕೆ ಬಾರದಂತಾಗಿದೆ. ಮತ ಸಂಬಂಧ ಭಾವನೆಗಳ ರೂಢಿಯನ್ನೂ ತಡೆವುದೂ ಕೇಳುವುದೂ ಸುಲಭವಾಗಿಲ್ಲ. ಹಿಂದೀಯರಲ್ಲಿ ಜನನಗಳನ್ನು ತಡೆಯಿರಿ ಎನ್ನುವುದೇಕೆ? ಹಾಲು ಮಿಲ್ಲಿಯದ ಮಾತಿಂಲಿ, ಸಾವಿರ ಮಿಲ್ಲಿಯತ್ತು ಬೇಕಾಗುವ ಆಹಾರ ಅನ್ನಗಳು ಈ ದೇಶದಲ್ಲಿ ದೊರೆಯಲಾರವೆಂದಿಲ್ಲವಷ್ಟೆ. ಚಿಕ್ಕ ಪತ್ರಿಸ್ತಿನಲ್ಲಿ ಜನ ಸಂಖ್ಯೆಯು ಹೆಚ್ಚದಷ್ಟು ಉತ್ತಮ ಎಂದು ಹೇಳಿ, ಬೂತಂಬದಲ್ಲಿನ ಜನಗಳ ಸಂಖ್ಯೆಯನ್ನು ಅಧರಿಸಿ, ೩ll ಮಿಲ್ಲಿಯ ಯುವತಿಯರಿಗೆ ಎಷ್ಟೋ ಮನ್ನಣೆಗಳನ್ನು ಸರಕಾರವು ಕೊಡುತ್ತಿದೆಯಲ್ಲ! ಇಟಲಿಯಲ್ಲಿ ಸರಕಾರವೇ ಪ್ರೋತ್ಸಾಹ ನಡೆಯುಸಿ ಹೊನ್ನ ತಿಂಗಳಲ್ಲಿ ೩೦೦೦೦ ವಿವಾಹಗಳನ್ನು ಜರಗಿಸಿತು; ದಂಪತಿಗಳಿಗೆಲ್ಲ ಬಹುಮಾನ ಕೊಟ್ಟಿತು. ನಮ್ಮ ದೇಶದಲ್ಲೇ ಈ ಜನಸಂಖ್ಯೆ ಅತಿಶಯವೆನ್ನುವ ಗುಟ್ಟೇನು? ಬೇರೆ ಕಾರಣಗಳು ಇರಬೇಕಲ್ಲವೆ? ಅವನ್ನು ತಿಳಿಸಿದರಾಗದೆ?

ಹೊಸ ಪಕ್ಷವೊಂದು ಜನನ ಹೊಂದಿತು. ಡೆಮೊಕ್ರಟಿಕ್ ಸ್ವರಾಜ್ಯ ಪಾರ್ಟಿ ಎಂದು ನಾಮಕರಣ ಹೊಂದಿತು. ಕಾಂಗ್ರೆಸ್ಸಿನ ಮೆಂಬರರಾಗಿ ೫ ವರ್ಷಕ್ಕೆ ಮಿಕ್ಕಿದವರು ಇದಕ್ಕೆ ಸದಸ್ಯರಾಗಬಹುದು. ಮುಂಬಾಯಿ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ಇದಕ್ಕೆ ಬೆಂಬಲ. ಮಹಾರಾಷ್ಟ್ರೀಯರೇ ನಾಯಕರು.

* * * *

ಹುಟ್ಟುತ್ತಲೆ ಇದು ರಾಕ್ಷಸ ಹಲ್ಲುಗಳುಳ್ಳದ್ದೆಂದು ಕೆಲವರ ನೋಟ. ಅಧಿಕಾರ ಸ್ಥಾನಗಳನ್ನೆಲ್ಲ ಸ್ವಾಧೀನ ಪಡಿಸಿಕೊಳ್ಳಬೇಕು, ಕಾಂಗ್ರೆಸ್ ಸಭೆ ಶಾನೂನು ಸಮ್ಮತವೆಂದಾದ ಬಳಿಕ ಅದನ್ನು ಸ್ವಾಧೀನ ಮಾಡಿಕೊಳ್ಳಬೇಕು, ಶ್ವೇತ[illegible] ಬೇಡ, ದಬ್ಬಾಳಿಕೆ ಮುಗಿಯಬೇಕು, ಎಂದು ಪ್ರಥಮ ಸೂಚನೆಗಳಾದುವು.

* * * *

ಪಕ್ಷ ಕಟ್ಟುವುದರಲ್ಲೂ (ವೇಷ ಕಟ್ಟುವುದರಲ್ಲಿರುವಂತೆ,) ಮದ್ರಾಸು ಹಿಂದೆಯಾಗಿಲ್ಲ... ಸತ್ಯ ಮೂರ್ತಿಯವರ ಸನ್ನಿಧಾನದಲ್ಲಿ ಕಾಂಗ್ರೆಸ್ ಸ್ವರಾಜ್ಯ ಪಾರ್ಟಿ ಎಂಬೊಂದು ಪಕ್ಷದ ರಚನೆಯಾಯಿತು.

ಈ-+ -+-

ಕತಂಜೀವಿಗಳಾಗಲು ಸಂಜೀವನ

ವನ್ನು, ಕಿಂಚಿತ್ತು ಅಸ್ವಸ್ಥವನ್ನು ಕೂಡ ಅನುಭವಿಸುತ್ತಿದ್ದರೂ, ನಮ್ಮ ಗವರ್ನರ ಸಾಹೇಬರು, ತಮ್ಮ ನ್ಯಾಯವಿಧಾಯಕ ಸಭೆಗೆ ಕಳುಹಿಸಿಕೊಟ್ಟಿರುವುದು ಸಂತೋಷದ ಸುದ್ದಿ. ಲೆಜಿಸ್ಲೇಟಿವ್ ಕೌನ್ಸಿಲು ಅಧಿವೇಶನವಾಗುತ್ತಲೆ, ಇದೇ ವಾರದಲ್ಲೇನೂ ಮುಗಿಯ ಬೇಕಾಗಿದ್ದ ಕೌನ್ಸಿಲಿನ ಜೀವಮಾನದ ಅವಧಿಯನ್ನು ಇನ್ನೊಂದು ವರ್ಷದ ತನಕ ಮುಂದರಿಸಿದ್ದುದು, ಕೌನ್ಸಿಲರುಗಳಿಗೆಲ್ಲ ಮಹದಾನಂದವನ್ನು ಉಂಟುಮಾಡಿರುವುದು. ಸಮಯ ಹೋಗುತ್ತಲಿದ್ದಂತೆ, ಅಂತರ್ದಾನವಾಗಿ ಬಂದ ಕೌನ್ಸಿಲು ಈಗ ಪುನರ್ಜನ್ಮವನ್ನು ಮರಣಾನುಭವವೇನೂ ಇಲ್ಲದೆ ಪಡೆದಂತಾಯಿತು. ವೋಟರರ ಅಭಿಪ್ರಾಯಗಳಲ್ಲಿ ಮೂರು ವರ್ಷಗಳಲ್ಲಿ ಏನ ಬದಲಾವಣೆಯೇನೂ ಆಗಿಲ್ಲವೆಂದಿಲ್ಲ; ಅಂದು ಚುನಾವಣೆ ಹೊಂದಿದ ಕೌನ್ಸಿಲರುಗಳೆಲ್ಲ, ಈಗ ಚುನಾವಣೆಗೆ ನಿಂತರೆ, ಕೌನ್ಸಿಲಿನಲ್ಲಿ ಪುನಃ ಕುಳಿತುಕೊಳ್ಳಲು ಆಸನಗಳನ್ನು ಪಡೆಯುವಷ್ಟು ಶಕ್ತಿ ತಪ್ಪು ಇಲ್ಲ. ಸ್ಟೇಟ್ ಸೆಕ್ರೆಟರಿಗಳ ಸೂಚನೆಯ ಪ್ರಭಾವದಿಂದ ಪ್ರತಿಪ್ರಾಂತ್ಯವೂ ಹೀಗೆಯೆ ತನ್ನ ಕೌನ್ಸಿಲಿನ ಆಯುಷ್ಯವನ್ನು ಹೆಚ್ಚಿಸಿಕೊಳ್ಳುತ್ತಲಿದೆ. ಗವರ್ನರ ಸಾಹೇಬರು, ದೈಹಿಕ ದುಬ ದುಸ್ಥಿತಿಗಳನ್ನು ಕುರಿತು ಬಹಳವಾಗಿ ಮರುಗಿದರೂ ತೀರ್ವೆಯನ್ನು ಯಾವ ರೀತಿಯಿಂದಲೂ ಕಡಿಮೆ ಮಾಡಲು ಯೋಗ್ಯ ಮುಹೂರ್ತವೇ ಇನ್ನೂ ಒದಗಿಲ್ಲವೆಂದ ಬಳಿಕ, ಸಂಜಾರಂಗವನ್ನು ಬದಲಾಗಿ ಬೆಳಸಬೇಕೆನ್ನುವವರಿಗೆ ಇನ್ನಷ್ಟು ಪ್ರೋತ್ಸಾಹ ಕೊಟ್ಟಂತಾಗಲಿಲ್ಲವೆ?

ಮುನಿಸಿಪಾಲಿಟಿಗಳ ದುಸ್ಥಿತಿಯು

ವಲ್ಲಭನಾಡು ತಾಲೂಕು ಬೋರ್ಡಿನವರು ಮಹಾತ್ಮಾಜೀಯವರ ಅದೊಂದು ಛಾಯಾಚಿತ್ರವನ್ನ ಪ್ರತಿಷ್ಠಿಸಿದುದಕ್ಕಾಗಿ ವ್ಯಯಿಸಿದ ರೂ. ೧೯-೧೩-೧ನ್ನು ತಮ್ಮ ಕೇಲದಿಂದಲೇ ಹೊರತು ಬೋರ್ಡು ಭಂಡಾರದಿಂದ ಖರ್ಚು ಮಾಡಬಾರದಿತ್ತೆಂದು, ಅಷ್ಟನ್ನು ಈಗ ಮೆಂಬರರಿಂದ ವಸೂಲು ಮಾಡಲಾಗುತ್ತಿದೆ ಎಂದು ತಿಳಿದು, ಪತ್ರಿಕೆಯೊಂದು ಹೀಗೆ ಬರೆದಿದೆ:—"ತಿಮಿಂಗಿಲವನ್ನು ನುಂಗಿದವನು ಕಪ್ಪೆಯು ಬಾಯಿ ತೆರೆದುದಕ್ಕಾಗಿ ದೂರುವ ಧರ್ಮವು ಎಂತಹುದು? ರಿವರ್ಸ್ ಕೌನ್ಸಿಲು ಬಿಲ್ಲುಗಳೆಂಬ ರೂಢಿಗೆ ಶ್ರೀಕಾರವನ್ನು ಬರೆದ ಜಿಂಜಾಬು ಗವರ್ನರರ ಪೀಠಾರೋಹಣದಿಂದ ಹಲವು ಕೋಟಿ ರೂಪಾಯಿಗಳ ನಷ್ಟವು ಇಂದೂ ಮುಂದೆಯೂ ಆಗುವುದಕ್ಕಿದೆ; ಮುಂಬಾಯಿಯ ಬೇಕ್ ಬೇ ಉದ್ಯಮದಲ್ಲಿ ಕೋಟ್ಯಂತರ ರೂಪಾಯಿ ಅನವಶ್ಯಕವಾಗಿ ಬಯಲಿಗೆಳೆಸಿದ ಮುಂಬಾಯಿ ಗವರ್ನರ ಲೋಯ್ಡ್ ಲೋಯ್ಡರ ಅತಿರೇಕದಿಂದ ಆ ಸಂಸ್ಥೆಯು, ಹಲವು ತಲಾಂತರಗಳ ತನಕ ಬಂಡವಾಳ ಬರಿದಾಗಿ ಉಳಿಯುವಂತಾಗಿದೆ. ಈ ಮಹಾ ಕೃತ್ಯಗಳನ್ನು ಟೀಕಿಸಿ, ನಷ್ಟಪಾಡದನ್ನು ಕೂಡಿಸಲು ಪ್ರಯತ್ನ ಮಾಡುವವರಿದ್ದಾರೆಯೆ? ಅದು ಹಾಗಿರಲಿ. ಮಹಾತ್ಮಾಜೀಯವರ ಚಿತ್ರದಲ್ಲಿರುವ ಮದ್ರಾಸು ಗವರ್ನರರ ಚಿತ್ರವನ್ನು ಆ ತಾಲೂಕು ಬೋರ್ಡಿನವರು ಪ್ರತಿಷ್ಠಿಸಿದರೆ, ಬೋರ್ಡು ಮೆಂಬರರಿಂದ ಹಣ ವಸೂಲು ಮಾಡಬೇಕಾಗುತ್ತಿದ್ದಿತೆ? ಅಥವಾ ವಿಷಯವನ್ನು ಟೀಕಿಸುತ್ತಿದ್ದಿತೆ?"

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಕಾಂಗ್ರೆಸ್ಸಿನ ಮಹಾಸಭೆ ಸೇರಲಿ, ಗೌರವವುಳಿಯಲಿ'

ಡಾ। ಆಲಮಾರೂ ಸೇಟ ಜಮ್ನಾಲಾಲ ಬಜಾಜರೂ ರಾಜಿನಾಮೆ ಕೊಟ್ಟರು.

ಗಾಂಧೀಜಿಯವರ ಪ್ರವಾಸ! ——— ಹರಿಜನ ಸೇವೆ!

ವಿ. ಜೆ. ಪಟೇಲರ ಶವವನ್ನು ಮುಂಬಾಯಿಗೆ ತರುವರು.

[ಕೆ]ಲವು ದಿನಗಳ ರಾಜಕೀಯ ವಾತಾವರಣ ಪರಿಶೀಲನೆಯಿಂದಾಗಿ, ಕಾಂಗ್ರೆಸ್ಸಿನ ಭವಿತವ್ಯತೆಯು ಶಿಥಿಲವಾಗುವುದೆಂದು ಊಹಿಸಲನುವಾಗುತ್ತದೆ. ಮಹಾತ್ಮರು ತಾನಿನ್ನು ೧೯೩೪ರ ಆಗೋಸ್ತು ತಿಂಗಳ ತನಕ ರಾಜಕೀಯದ ಯಾವ ಕೆಲಸಕ್ಕೂ ಕೈಯಿಕ್ಕುವುದಿಲ್ಲವೆಂದು ನಿರ್ಧರಿಸಿದಂದಿನಿಂದ ಕಾಂಗ್ರೆಸ್ಸಿನವರೊಳಗೆ ಭಿನ್ನ ಮತವು ತಲೆದೋರಲಾರಂಭವಾಗಿ, ಅದು ಈಗೀಗ ತಗ್ಗುವ ಬದಲು ಉಬ್ಬಿಕೊಂಡೇ ಹೋಗುತ್ತಿರುವಂತಿದೆ. ಪಂಡಿತ ಮಾಲವೀಯರೇ ಮೊದಲಾದ ಕೆಲವರು ಕಾಂಗ್ರೆಸ್ಸಿನ ಮಹಾಸಭೆಯನ್ನು ಸೇರಿಸಿ ಅದರ ಗೌರವ ಪಾಲನೆಯನ್ನು ಮಾಡಬೇಕೆಂದಿರುವರು. ಕರಾಚಿಯ ಗೋವಿಂದಾನಂದರೆಂಬವರು ಪಂಡಿತ ಜವಾಹರಲಾಲರಿಗೊಂದು ಪತ್ರವನ್ನು ಬರೆದು ಆದಷ್ಟು ಶೀಘ್ರವಾಗಿ ಅಖಿಲ ಭಾರತ ಕಾಂಗ್ರೆಸ್ಸಿನ ಮಹಾ ಸಭೆಯನ್ನು ನೆರಗಿಸಿ ಮುಂದಿನ ಸುಂಘಟಿತ ರಾಜಕೀಯ ಪಥವನ್ನು ಗೊತ್ತು ಮಾಡಿಕೊಳ್ಳಬೇಕೆಂದಿರುವರು. ಶ್ರೀ. ಪಂಡಿತರು ಅವರಿಗೆ ಉತ್ತರ ಕೊಡುತ್ತಾ ಇಷ್ಟರ ತನಕ ಆ ಬಗ್ಗೆ ಯಾರ ಕೇಳಿಕೆಯೂ ಬರಹ ಮೂಲಕ ಬರದಿರುವುದರಿಂದ ಅದಕ್ಕೆ ಚಿತ್ತ ಕೊಡಲಿಲ್ಲ; ಹೆಚ್ಚಿನವರ ಸಲಹೆಗಳು ಬಂದರೆ ಅದನ್ನು ನೆರವೇರಿಸಲು ಮೊದಲು ಮಾಡಲಾಗುವುದು ಎಂದಿರುವರು. ಮಹಾತ್ಮಾ ಗಾಂಧಿಯವರು ಶಾಂತಿ ಸಮಾಧಾನ ಮಾಡಲು ಯತ್ನಿಸಬೇಕಾಗಿ ಅವರಿಗೆ ಕೆಲವು ಹಿತ ಚಿಂತಕರು ಸೂಚಿಸುತ್ತಿರುವರು. ಪಾರ್ಲಿಮೆಂಟಿನ ಸದಸ್ಯರಾದ ಹೇಲ್ಸ್ ಎಂಬವರು ಗಾಂಧಿಜೀಯವರಿಗೊಂದು ಪತ್ರವನ್ನು ಬರೆದು ಗಾಂಧಿಜೀಯವರು ದೇಶ ಸಂಚಾರ ಮಾಡಿ ದೇಶದಲ್ಲಿನ ವಾತಾವರಣವನ್ನು ಬದಲಾಯಿಸಿ ಶಾಂತಿಸ್ಥಾಪನೆಯನ್ನು ಮಾಡಬೇಕು ಎಂದು ಹೇಳಿದರು. ಮಹಾತ್ಮರು ಈ ಪತ್ರಕ್ಕೆ ಉತ್ತರ ಬರೆದು ತಾನು ಯಾರೊಡನೆಯೂ ಯಾವ ಸಮಯದಲ್ಲೂ, ಸರಕಾರದೊಡನೆಯೂ ಶಾಂತಿಸ್ಥಾಪನೆಗಾಗಿ ಸದಾ ಸಿದ್ಧನಿರುವೆನೆಂದೂ, ತಾನು ಶಾಂತಿ ಸ್ಥಾಪನೆಗಾಗಿಯೇ ಈ ದೇಹವನ್ನು ಸವೆಯಿಸುತ್ತಿರುವೆನೆಂದೂ ಹೇಳಿರುವರು. ಅಖಿಲ ಪಕ್ಷೀಯ ಸಮ್ಮೇಳನವೊಂದನ್ನು ಜರಗಿಸಿ ಗಾಂಧಿಜೀಯವರು ಮತ ಸಂಬಂಧ ವಿಷಯಗಳನ್ನು ಪರಿಷ್ಕರಿಸಬೇಕೆಂದು ಅದೇ ಹೇಲ್ಸರು ಗಾಂಧಿಜೀಯವರಿಗೆ ಸೂಚಿಸಿದುದಕ್ಕೆ, ಗಾಂಧಿಜೀಯವರು ಬರೆಯುತ್ತಾ, ತಾನು ಅಖಿಲ ಪಕ್ಷೀಯರ ಸಭೆಯಲ್ಲಿ ಜಯಶಾಲಿಯಾಗುವುದಿಲ್ಲ, ಆದುದರಿಂದ ಅದನ್ನು ಕೂಡಿಸುವ ಜವಾಬ್ದಾರಿಕೆಯು ತನಗೆ ಪ್ರತ್ಯಕ್ಷಕ್ಕೆ ಬೇಡವೆಂದಿರುವರು.

ಸೇಟ್ ಜಮ್ನಾಲಾಲ ಬಜಾಜರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯವರಾದ ಪಂಡಿತ ಜವಾಹರಲಾಲರಿಗೆ ತನ್ನ ರಾಜಿನಾಮೆಯನ್ನೊಪ್ಪಿಸಿ ಹೀಗೆಂದಿರುವರು:—“ಇತ್ತೀಚೆಗೆ ನಾನು ಕಾರಾಗೃಹದಲ್ಲಿ ಕಳೆದಿರುವುದರಿಂದ ನನಗೆ ಬಹಳ ವ್ಯಸನವಾಗಿರುತ್ತದೆ. ನನಗೆ ಸವಿನಯ ಚಳವಳಿಯಲ್ಲೂ, ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲೂ ವಿಶ್ವಾಸವಿದೆ. ಆದರೆ ನನ್ನ ಆರೋಗ್ಯವು ನೆಟ್ಟಗಿಲ್ಲದಿರುವುದರಿಂದ ನನಗೆ ಮುಂದಕ್ಕೆ ಕಾಂಗ್ರೆಸ್ ಕಮಿಟಿಯ ಖಜಾನ್ಚಿಯ ಕೆಲಸವೂ ಕಾಂಗ್ರೆಸ್ಸಿನ ಸದಸ್ಯತನವೂ ಬೇಡವೆಂದೆನಿಸಿ ಅವುಗಳಿಗೆ ಈ ಮೂಲಕ ರಾಜಿ ಅರ್ಜಿ ಕೊಡುವೆನು. ನನಗೆ ಇನ್ನೂ ಹೆಚ್ಚು ವಿಶ್ರಾಂತಿಯು ಬೇಕಾಗಿದೆ. ನನ್ನ ದೈಹಿಕ ಮತ್ತು ಮಾನಸಿಕ ಶಕ್ತಿಗಳು ಲಭ್ಯವಾಗಬೇಕಾದರೆ ಇನ್ನೂ ದೀರ್ಘ ಸಮಯವು ಬೇಕಾಗಿದೆ. ನಾನು ನನ್ನ ಸ್ಥಾನಗಳಲ್ಲಿದ್ದರೆ ನನಗೆ ಇವುಗಳನ್ನು ಹೊಂದಲಸಾಧ್ಯ. ಇನ್ನೊಬ್ಬ ಖಜಾನ್ಚಿಯನ್ನು ಚುನಾಯಿಸಲು ಥಕ್ಕನೆ ಸಾಧ್ಯವಾಗುವುದಿಲ್ಲವಾದರೆ ಅಷ್ಟರ ತನಕ ಖಜಾನ್ಚಿಯಾಗುವೆನು. ಮೆಂಬರನಾಗುವುದಿಲ್ಲ. ನಾನು ಹೀಗೆ ರಾಜಿ ಕೊಡುವಾಗ ನನಗೆ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಭರವಸೆಯು ಕಡಿಮೆಯಾಗಿದೆಯೆಂದು ಎಂದೂ ತಿಳಿಯಲಾಗದು. ನಾನು ನನ್ನ ಕೈಲಾದ ಮಟ್ಟಿಗೆ ಕಾಂಗ್ರೆಸ್ಸಿನ ಧರ್ಮವನ್ನು ನೆರವೇರಿಸಲು ಸಾಹಸ ಪಡುವೆನು. ನನ್ನ ಮೇಲಿನ ಬಹು ಭಾರವನ್ನು ಕಳೆಗೆಳೆಸುವುದಕ್ಕಾಗಿ ಮಾತ್ರ ಹೀಗೆ ಮಾಡಿರುವೆನು.” ಬಜಾಜರು ಖಜಾನ್ಚಿಯ ಪದವಿಗೂ ಸದಸ್ಯತನಕ್ಕೂ ರಾಜಿನಾಮೆ ಕೊಟ್ಟಿರುವುದರಿಂದ ಅನರ್ಥ ಕಲ್ಪನೆಗಾರಂಭವಾಗಿರುತ್ತದೆ. ಅವರು ತನ್ನ ಆರೋಗ್ಯದ ದೃಷ್ಟಿಯಿಂದ ಮಾತ್ರ ಹಾಗೆ ಮಾಡಿರುವರಾದರೂ, ಕೆಲವರು ಅವರ ವರ್ತನೆಗೆ ಕಾಂಗ್ರೆಸಿನ ಅಸಂತುಷ್ಟಿಕರ ನಡವಳಿಕೆಯೂ ಗಾಂಧಿಜೀಯವರ ಆಚರಣೆಯೂ ಕಾರಣವೆಂದೆನ್ನುತ್ತಿರುವರು. ಪಂಡಿತ ಜವಾಹರಲಾಲರು ಅವರಿಗೆ ಉತ್ತರ ಬರೆದು, ಕಾಂಗ್ರೆಸ್ಸಿನ ಇನ್ನೊಂದು ಸಭೆಯಲ್ಲಿ ನಿಮ್ಮ ರಾಜಿನಾಮೆಯನ್ನಿಡಲಾಗುವುದೆಂದೂ, ಇನ್ನಿತರ ವ್ಯವಸ್ಥೆಯನ್ನು ಮಾಡುವ ತನಕ ನೀವು ಖಜಾನ್ಚಿಯರಾಗಿರಬೇಕೆಂದೂ ಕೇಳಿಕೊಂಡಿರುವರು. ಡಾ। ಆಲಮರೂ ಕಾಂಗ್ರೆಸ್ಸಿನ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುವರು. ಅವರು ತನ್ನ ಪತ್ರದಲ್ಲಿ ಹೇಳುವುದೇನಂದರೆ–“ನನ್ನ ಖಾಸಗಿ ಸ್ಥಿತಿ ಗತಿಗಳನ್ನು ಪರಿಶೀಲಿಸಿ ನಾನು ಇನ್ನೊಮ್ಮೆ ವಕಾಲತ್ತನ್ನು ಪ್ರಾರಂಭಿಸಬೇಕೆಂದಿರುವೆನು. ಎಷ್ಟರ ತನಕ ನಾನು ಕಾಂಗ್ರೆಸ್ಸಿನ ಸದಸ್ಯನಾಗಿರುತ್ತೇನೋ, ಅಷ್ಟರ ತನಕ ನಾನು ವಕಾಲತ್ತು ಮಾಡಲು ಸಾಧ್ಯವಾಗುವುದಿಲ್ಲ. ಕಾಂಗ್ರೆಸ್ಸಿನ ಪ್ರಕೃತದ ಕಾರ್ಯಕ್ರಮದಿಂದಾಗಿ ನಾನು ಅದರ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುವೆನು. ನನಗೆ ಕಾಂಗ್ರೆಸ್ಸಿನ ಮೇಲೆ ಗೌರವ ವಿಶ್ವಾಸಗಳಿವೆ. ಯಾವ ವಿಧದಲ್ಲೂ ಕಾಂಗ್ರೆಸ್ಸಿಗೆ ಎರಡೆಣಿಸೆನು. ಹೀಗೆ ಮಾಡಿದೊಡನೆ ನಾನು ಸಾರ್ವಜನಿಕ ಸೇವೆಯಲ್ಲಿ ಹಿಂದಾಗುವೆನೆಂದೂ, ಭಗವಂತನ ಇಚ್ಛೆ ಇದ್ದರೆ ಮಾತೃಭೂಮಿಯ ಸೇವೆಯನ್ನು ಮಾಡಲು ಹಿಂಜರಿಯಲಾರೆನೆಂದೂ ನನ್ನ ಪ್ರಾಣವಿರುವ ವರೆಗೂ ದೇಶಸೇವೆಯನ್ನು ಮಾಡುವೆನೆನ್ನುವೆನು. ಈ ಪತ್ರವನ್ನು ಬರೆದಿರುವ ಸೌಹಾರ್ದ್ರದಿಂದಲೇ ನೀವು ಈ ರಾಜಿನಾಮೆಯನ್ನು ಸ್ವೀಕರಿಸಿ ನಾನು ಕಾಂಗ್ರೆಸ್ ಕಮಿಟಿಯ ಸದಸ್ಯತನದಿಂದ ಬಿಡುಗಡೆಯಾಗಲು ಅಪ್ಪಣೆ ಕೊಡುವಿರೆಂದು ತಿಳಿಯುತ್ತೇನೆ” ಎಂದಿರುವರು. ಡಾ। ಆಲಮರು ಉಜ್ವಲ ರಾಷ್ಟ್ರಾಭಿಮಾನಿಗಳು. ಅವರು ತನ್ನ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುವುದರಿಂದಲೂ ಕಾಂಗ್ರೆಸ್ಸಿನ ಮೇಲೆ ಹಲಕೆಲವು ಆರೋಪಣೆಗಳೇರಿವೆ.

ಕೊನೆಯದಾಗಿ ತಲಪಿರುವ ವಾರ್ತೆಯ ಮೇರೆಗೆ ಮಹಾತ್ಮಾಗಾಂಧಿಯವರು ತಾ. ೮ನೇ ದಿನ ಹರಿಜನ ಸಂಚಾರವನ್ನು ಪ್ರಾರಂಭಿಸುವರೆಂದು ಗೊತ್ತಾಗಿದೆ. ವರಾಡ್, ಬಿರಾರ್, ಮಧ್ಯಪ್ರಾಂತ್ಯ ಹಿಂದೀ, ಚತ್ರಗಹರ ದಿಲ್ಲಿ, ಪಂಜಾಬ್, ಸಿಂಧ್, ರಜಪುತಾನ, ಸಂಯುಕ್ತ ಪ್ರಾಂತ್ಯ, ಬಿಹಾರ್, ಕಲ್ಕತ್ತ ಬಂಗಾಳ, ಆಸಾಮ್, ಒರಿಸಾ, ಆಂಧ್ರ, ಮದ್ರಾಸ್ ತಮಿಳು, ಕೊಚ್ಚಿನ್, ತಿರುವಾಂಕೂರು, ಮೈಸೂರು, ಮಲಬಾರ್ ಕರ್ನಾಟಕ, ಮಹಾರಾಷ್ಟ್ರ, ಮುಂಬಾಯಿ, ಗುಜರಾಥ್ ಮತ್ತು ಕಥಿಯಾವಾಡ್‌ಗಳಿಗೆ ಅವರು ತೆರಳಿ ಹರಿಜನ ಸೇವೆಯನ್ನು ಕೈಕೊಳ್ಳುವರು. ಒಟ್ಟು ೩೭ ವಾರಗಳ ತನಕ ಅವರ ಪ್ರವಾಸವು ನಡೆಯುವುದು. ೧೯೩೪ರ ಜುಲಾಯಿ ಆಖೇರಲ್ಲಿ ಅವರ ಸಂಚಾರವು ಕೊನೆಗಾಣುವುದು. ಹರಿಜನ ಸೇವಾ ಸಂಸ್ಥೆಗಳಿಗೆಲ್ಲ ಈ ಸಂಚಾರ ಕ್ರಮವನ್ನು ತಿಳುಹಿಸಲಾಗಿದೆ. ಜನವರಿ ೧೮ಕ್ಕೆ ಮಹಾತ್ಮರು ಸಂಯುಕ್ತ ಪ್ರಾಂತ್ಯವನ್ನು ತಲಪುವರು. ೧೯೩೪ರ ಆಗೋಸ್ತು ತಿಂಗಳ ತನಕ ತನಗೆ ದೊರೆತಿರುವ ಈ ಸುದಿನಗಳ ಸತ್ಪ್ರಯೋಜನೆ ಮಾಡಿ ಹರಿಜನ ಸೇವೆಯನ್ನು ಮಾಡಬೇಕೆಂದು ಅವರ ಆಶಯವಾಗಿರುತ್ತದೆ. ಅವರ ಈ ಸಂಚಾರದಿಂದಾಗಿ ದೇಶದಲ್ಲೆಲ್ಲಾ ಅನೇಕ ದೇವಸ್ಥಾನಗಳು ಹರಿಜನರಿಗಾಗಿ ತೆರೆಯಲ್ಪಡುವುವೆಂದು ತಿಳಿಯಲಾಗಿದೆ.

ದಿವಂಗತ ವಿ. ಜೆ. ಪಟೇಲರ ಮೃತಶರೀರವನ್ನು ಜಿನೆವಾದಲ್ಲಿ ಸ್ಟೀಮರಿನ ಮೂಲಕ ಹಿಂದೂಸ್ಥಾನಕ್ಕೆ ರವಾನಿಸಿರುವರು. ಆ ಬಗ್ಗೆ ಶ್ರೀ. ಸುಭಾಷ್ಚಂದ್ರ ಬೋಸರು ಮಹಾತ್ಮಾ ಗಾಂಧಿಯವರಿಗೊಂದು ಕೇಬ್ಲನ್ನು ರವಾನಿಸಿ “ವಿಠ್ಠಲ್ ಭಾಯಿಯವರ ಶರೀರವನ್ನು ಸ್ಟೀಮರಿಗೇರಿಸಿದೆ. ಅಂತ್ಯ ಸಂಸ್ಕಾರಗಳು ನಡೆಯುವಂತೆ ವ್ಯವಸ್ಥೆ ಮಾಡಿರಿ” ಎಂದು ತಿಳುಹಿಸಿರುವರು. ತಾ. ೪ ಅಥವಾ ೫ನೇ ದಿನದೊಳಗೆ ಸ್ಟೀಮರು ಮುಂಬಾಯಿಗೆ ತಲಪುವುದೆಂದು ತಿಳಿಯಲಾಗಿದೆ. ಅಂತ್ಯ ಸಂಸ್ಕಾರವನ್ನು ಶ್ರೀ. ವಲ್ಲಭಭಾಯಿ ಪಟೇಲರು ಮಾಡುವುದು ನ್ಯಾಯವಿರುವುದರಿಂದ ಅವರನ್ನು ಸೆರೆಯಿಂದ ಬಿಡುಗಡೆ ಮಾಡುವಂತೆ ಸರಕಾರವನ್ನು ಕೇಳಿಕೊಳ್ಳಬೇಕೆಂದು ವ್ಯವಸ್ಥೆಯಾಗಿದೆ.

ಮುಸಲಿಪಟ್ಟಾಮಿನ ಬಳಿ ಗುಡಿವಾಡಾ ಎಂಬಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಭಾಷಣ ಮಾಡುವರೆಂದು ತಾ. ೬ನೇ ದಿನ ಪ್ರಕಟಿಸಲಾಗಿದ್ದಿತು. ಅವರು ಬೆಳಗ್ಗೆ ಎಲ್ಲೂರಿನಿಂದ ಬಂದು, ಪ್ರಚಂಡ ಜನತಂಡದಲ್ಲಿ ಭಾಷಣ ಮಾಡಲಾರಂಭಿಸಿದರು. ಅಷ್ಟಾಗುತ್ತಲೇ ಗುಡಿವಾಡದಲ್ಲಿನ ಪೋಲೀಸ್ ಇನ್ಸ್‌ಪೆಕ್ಟರರು ಅವರನ್ನು ಕೈದು ಮಾಡಿದರು. ಅವರೊಡನೆ ವಕೀಲರಾದ ಶ್ರೀ. ಕೆ. ಎಮ್. ನರಸಿಂಹ ರಾವ್ ಎಂಬವರನ್ನೂ, ಶ್ರೀಮತಿಯವರ ಭಾಷಣವನ್ನು ಭಾಷಾಂತರಿಸುವುದಕ್ಕಾಗಿ ಬಂದಿದ್ದ ಶ್ರೀವೆಂಕಟ ನರಸಿಂಹ ಎಂಬವರನ್ನೂ ಅವರೊಡನೆ ಸೆರೆಹಿಡಿದರು. ಮರುದಿನ ಬೆಳಗ್ಗೆ ಅವರನ್ನು ಮೆಜಿಸ್ಟ್ರೇಟರೆದುರು ನಿಲ್ಲಿಸಲಾಯಿತು. ಮೂವರನ್ನೂ ೧೦ ದಿನಗಳ ರಿಮಾಂಡಿನಲ್ಲಿಡಲಾಯಿತು. ಇವರನ್ನು ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಏಕ್ಟಿನ ಸೆಕ್ಷನ್ ೧೭ (೧)ರ ಪ್ರಕಾರ ತಕ್ಸೀರಿಗೆಳೆಯಲಾಗುವುದೆಂದು ತಿಳಿಯಲಾಗಿದೆ.

ಕಳೆದ ನವಂಬರ ತಿಂಗಳಲ್ಲಿ ಅಲ್ಲಹಾಬಾದಿನಲ್ಲಿ ಕೂಡಿದ ಅಖಿಲ ಪಕ್ಷೀಯ ಸಭೆಯು ಕಾರಣಾಂತರಗಳಿಂದ ಹಿಂದಕ್ಕಿರಿಸಲ್ಪಟ್ಟಿದ್ದು ಈಗ ಕಾಂಗ್ರೆಸ್ಸಿನ ಸ್ಥಿತಿಗತಿಗಳನ್ನು ನಿರ್ಧರಿಸಿಕೊಳ್ಳುವ ಬಗ್ಗೆ ಅದನ್ನೇ ಪುನಃ ಮುಂದರಿಸಿದರೆ ಕಾಂಗ್ರೆಸ್ಸನ್ನು ಸಭೆಗೂಡಿಸುವ ಅನಾನುಕೂಲತೆಯೂ ಪೆಚ್ಚವೂ ಉಳಿಯುವುದೆಂದು ಪಂಡಿತ ಮಾಲವೀಯರು ಅಭಿಪ್ರಾಯವಿತ್ತಂತೆ ಅದನ್ನು ದಶಂಬರದ ಕ್ರಿಸ್‌ಮಸ್ ಸಮಯದಲ್ಲಿ ಕೂಡಿಸುವರಾಗಿ ತಿಳಿದು ಬಂದಿದೆ. ಈ ಸಭೆಯ ಜರಗೋಣಕ್ಕೂ ಗಾಂಧೀ ಜವಾಹರಲಾಲರು ತಮ್ಮ ಬೆಂಬಲವನ್ನು ಕೊಟ್ಟಾರೋ ಎಂಬ ಶಂಕೆಯು ತಲೆದೋರಿದೆ. ಗಾಂಧಿಜೀಯವರಿಗೆ ಇಂತಹ ಕೂಟಗಳಲ್ಲಿ ವಿಶ್ವಾಸವು ಕಡಿಮೆಯಾಗಿದೆಯೆಂದು ಒಂದು ಪತ್ರಿಕೆಯೆನ್ನುತ್ತಿದೆ. ಪಂಡಿತ ಜವಾಹರಲಾಲರೂ ಗಾಂಧಿಜೀಯವರನ್ನೇ ಅನುಸರಿಸಿದರೆ ಅವರಿಬ್ಬರನ್ನೂ ಹತ್ತಿರವಿರಿಸದೆ ರಾಷ್ಟ್ರೀಯ ಸಭೆಯೊಂದು ಜರಗುವುದೆಂದು ತಿಳಿಯಲಾಗಿದೆ. ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮದಲ್ಲಿ ಕಾಯಿದೆಭಂಗವು ಸಂಪೂರ್ಣವಾಗಿ ತ್ಯಾಜ್ಯವಾಗಿ ಕೌನ್ಸಿಲು ಪ್ರವೇಶ,—ಗ್ರಾಮ ಪಂಚಾಯಿತಿ ಸ್ಥಾಪನೆ, ರೈತರ ಉದ್ಧರಣೆ, ನಿರುದ್ಯೋಗ ನಿವಾರಣೆಗಳೇ ಪ್ರಾಮುಖ್ಯ ಗುರಿಯಾಗುವುವೆಂದೆನ್ನಬಹುದು. ಪಂಡಿತ ಜವಾಹರಲಾಲರು ಒಂದು ಸ್ಟೇಟ್‌ಮೆಂಟನ್ನು ಮಾಡುತ್ತಾ ಕಾಂಗ್ರೆಸ್ಸೂ ಹಿಂದೂದೇಶವೂ ಇಂಗ್ಲಾಂಡೂ ಪರಸ್ಪರ ಗೌರವಪೂರ್ವಕ ಒಡನಾಡಿಗಳಾಗಿಯೇ ಇರಬೇಕೆಂದು ತನ್ನ ಆಶೆಯಿರುತ್ತದೆಂದೂ ಹಾಗಿದ್ದರೂ ಹಳೆಯ ಆಡಳಿತ ಕ್ರಮವೂ ಸರಕಾರದ ನಿರಂಕುಶ ಪ್ರಭುತ್ವವು ಕೊನೆಗಾಣಬೇಕೆಂದೂ, ಹೀಗಾಗಬೇಕಾದರೆ ಸಂಪೂರ್ಣ ಬದಲಾವಣೆಯುಳ್ಳ ರಾಜ್ಯರಚನಾ ಕ್ರಮವು ಹೊರಗಾಗಬೇಕೆಂದೂ ಹೇಳಿರುವರು. ಶ್ವೇತಪತ್ರ ಸುಧಾರಣೆಗಳು ಇಷ್ಟರ ತನಕವೂ ಯಾವ ರಾಷ್ಟ್ರೀಯನಿಂದಲೂ ಸ್ವೀಕೃತವಾಗಿಲ್ಲ. ಜೊಯಿಂಟ್ ಸಿಲೆಕ್ಟ್ ಕಮಿಟಿಗೆ ತೆರಳಿದ ಹಿಂದೀಯ ಮಹಿಳಾ ವರ್ಗದ ಪರವಾಗಿ ಸಾಕ್ಷ್ಯವನ್ನಿತ್ತ ಮಹಿಳಾ ಪ್ರತಿನಿಧಿಗಳು ಮೊನ್ನೆ ಹಿಂತಿರುಗಿ ಅಲ್ಲಿಯ ಕಾರ್ಯಕಲಾಪಗಳ ಕುರಿತಾಗಿ ಅಭಿಪ್ರಾಯಪಡುತ್ತಾ, ಲಂಡನಿನಲ್ಲಿಯ ಯಾವ ಸುಧಾರಣೆಗಳೂ ಹಿಂದೀಯರಿಗೆ ಮೋಕ್ಷದಾಯಕವಲ್ಲವೆಂದೂ, ತಾವು ಎಷ್ಟು ಸಾಧಿಸಿದರೂ ಬ್ರಿಟಿಷ ಮುತ್ಸದ್ದಿಗಳ ಕೈಯೇ ಮೇಲಾಗಿ ಹೋಯಿತೆಂದೂ ಹೇಳಿ ಸಂತಾಪ ಸೂಚಿಸಿರುವರು. ಬಹು ಸಂಖ್ಯಾತ ಕಾಂಗ್ರೆಸ್ಸಿನವರು ಗಾಂಧಿಜೀಯವರ ಮತವನ್ನು ಅನುಸರಿಸಲು ಸಿದ್ಧರಿಲ್ಲವಾದುದರಿಂದಲೂ ಗಾಂಧಿಜೀಯವರು ಈಗ ರಾಷ್ಟ್ರೀಯ ಕೆಲಸವನ್ನು ಬಿಟ್ಟಿರುವುದರಿಂದಲೂ ಮುಂದಕ್ಕೆ, ಬರುವ ಆಗೋಸ್ತು ತಿಂಗಳ ವರೆಗಾದರೂ ರಾಜಕೀಯದಲ್ಲಿ ವಿಶೇಷವೇನೂ ನಡೆಯಲಾರದೆಂದು ಊಹಿಸಲಾಗಿದೆ.

If you want FULL VALUE for your money insist on Swastik Products.

ನಿಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ ಸಾಮಾನುಗಳನ್ನೇ ಕೊಂಡುಕೊಳ್ಳಿರಿ.

Swastik 777 Bar soap & Swastik Cake & Cube Soaps best in washing Soaps.

ಕಸ್ತು, ಕೊಳೆ, ಕಲ್ಮಶ, ಮೊದಲಾದ ಕಶಾರಗಳು ಕಂಚಿತ್ತಾದರೂ ಉಳಿಯಬಾರದು—ಆಗ ಶಾನೇ ಲೋಕ ಕ್ಷೇಮ. 777 ಇದರಿಂದಾಗಿ ಪ್ರಸನ್ನತೆ. ನಂಬರಿನ ಸ್ವಸ್ತಿಕಾ ಅತ್ಯುತ್ತಮ ಸಾಬೂನು ಸ್ವದೇಶಿಗಳಲ್ಲಿ ಅಗ್ರಗಣ್ಯ, ಬಟ್ಟೆಗಳಿಗೆ, ಇತರ ಸಾಬೂನುಗಳಿಗೆ ಮೇಲ್ಪಂಗಿ, ಶುಭ್ರತವಾಗಿ ಒಗೆಯುವುದು. ಹೆಚ್ಚು ಕಾಲ ಬಾಳುವುದು. ಯೋಗ್ಯತೆ ಮಿಗಿಲಾಗಿ ಬೆಲೆ ಕಡಿಮೆ—ವಿಲಾಯತಿ ಸಾಬೂನಿಗೆ ಪ್ರತಿಸ್ಪರ್ಧಿಯಾಗಿದೆ.

Swastik Double boiled & Raw Linseed Oils.

SWASTIK

THE MARK OF QUALITY

available in 5 gallon drums, 1 gallon tin.

ಪೈಂಟ್ ಬಗ್ಗೆ ಸ್ವಸ್ತಿಕಾ ಬೇಯಿಸಿದ ಅತೀ ಉತ್ತಮವಾದ ಲೀನ್‌ಸೀಡ್ ಎಣ್ಣೆ 5 ಗೆಲನ್ ಡ್ರಮ್ಮು ಗಳಲ್ಲೂ, ಗೆಲನ್ ಟಿನ್ನುಗಳಲ್ಲೂ ದೊರೆಯುವುವು.

ಕಾಫಿ ಗಿಡಗಳ ಮೇಲೆ ಕ್ರಿಮಿ ಹಿಡಿಯದಂತೆ ಚೆಲ್ಲುವರೆ ಸ್ವಸ್ತಿಕಾ ಹಸಿ ಲಿನ್‌ಸೀಡ್ ಎಣ್ಣೆ 5 ಗೆಲನ್ ಡ್ರಮುಗಳಲ್ಲಿ ದೊರೆಯುವುದು.

ವಿಲಾಯತಿ ಎಣ್ಣೆಗಿಂತಲೂ ಶೇಕಡ 50ರಷ್ಟು ಹೆಚ್ಚಿನ ಫಲ ಪ್ರಯೋಜನ ಕೊಡುವುದಾಗಿ ಲಂಡನ್ ಇಂಪೀರಿಯಲ್ ಲೆಬೋರೇಟರಿಯವರು ಸರ್ಟಿಫಿಕೇಟು ಕೊಟ್ಟಿದ್ದಾರೆ.

Swastik CASTOR OIL (medicinal)
(Cold drawn)
Packed in gallon tins & 4 oz, 8 oz, 1 lb bottles



ಸ್ವಸ್ತಿಕಾ ಹರಳೆಣ್ಣೆ 4 ಔನ್ಸು, 8 ಔನ್ಸು, 1 ರಾತಲು ಬಾಟ್ಲಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವುದು.

ಶಾಸ್ತ್ರೀಯ ರೀತಿಯಲ್ಲಿ ಸಿದ್ಧಗೊಳಿಸಿರುವ ಶುದ್ಧವಾದ ಈ ಹರಳೆಣ್ಣೆಯು ವಾಸನೆ ಇಲ್ಲದ್ದು ರುಚಿ ಹಿತವಾದದ್ದು.

ಹರಳೆಣ್ಣೆಯಿಂದಾಗುವ ಯಾವತ್ತೂ ಉಪಯೋಗಗಳು ನಾಲಗೆಗೂ, ಮನಸ್ಸಿಗೂ ಬೇಸರವಾಗ್ದದೆ ಇಲ್ಲದೆ ಈ ಸ್ವಸ್ತಿಕಾ ಹರಳೆಣ್ಣೆಯಿಂದ ದೊರೆಯುವುವು. ಇವಲ್ಲದೆ—

ಸ್ವಸ್ತಿಕಾ ಕಲ್ಲೆಣ್ಣೆ, ಎಳ್ಳೆಣ್ಣೆ, ವಾರ್ನಿಶು, ಮೈಗೆ ಹಾಕುವ ಸಾಬೂನು ವಗೈರೆ ಇವೆ.

Swastik Oil Mills Ltd, Bombay.
Chairman—Seth Ambalal Sarabhai,
Directors—Sir Purushothamdas Thakurdas,
„ Mr. F. E. Dinshaw,
„ Mr. C. S. Patel. & others.

ಮಲಬಾರ್ ಮತ್ತು ಕನ್ನಡ ಜಿಲ್ಲೆಗೆ ಏಜಂಟರು:—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು.

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೊದಲು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳ ಉರುವು ಬೀಳುವಿಕೆ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋವಳಿ ಬರೋಣ, ಸಾಚಕ್ಕೆ ಸಾಫು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮುಖ್ಯವು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳಿಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦, ೪ ಬಾಟ್ಲಿಗೆ ೪—೮—೦. ಹರ್ಯುನ ಬಾಟ್ಲಿಗೆ ೩ ರೂಪಾಯಿ ಟಪಾಲು ಖರ್ಚು ಪೋಸ್ಟೇಜ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್‌ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.
ವ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟು ನಿಪ್ಪಾಣಿ ಜಿಲ್ಲಾ (ಬೆಳಗಾಂವಿ)
ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಕೆಮಿಸ್ಟ್. ಉಡುಪಿ—ಸ್ಟೈ ಫಾರ್ಮಸಿ, ತೆಂಕಪೇಟೆ. ಕಾರ್ಕಳ—ಪಿ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು—
2-6-'38 ಕೆ. ರಾಮ ನಾಯ್ಕ, ಕೆಮಿಸ್ಟ್. ಬಂಟವಾಳ—ದಿ ಕೆನರಾ ಫೋರ್ಕ್ಮೆಡ್ ಫಾರ್ಮಸಿ.

ಎಷ್ಟೆಲ್ಲಾ ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯಾಲಕ್ಷ ಮಾನದಿಂದ ತಿಳಿದು, ಅವರಿಗೆ ಸುಲಭ ಧರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ—ಬೈರವಾಸು—ಚೆಕ್ಸ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For— A. & F. Harvey,
Managers: Madura Mills Co, Ltd.

For neat and nice Printing
- Please call at
THE SHARADA PRESS,
Car Street, MANGALORE.

ಸಕಲೇಶಪುರದ ವಾರ್ತೆ.

ಸ್ಥಳೀಯ ಅವಲ್ದಾರ್ ರಾ. ಎಮ್. ಎನ್ ಇವರು ಮಡಿಕೇರಿ—ಚೆನ್ನಪಟ್ಣದ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿದ್ದಾರೆ.

ಚೆನ್ನಪಟ್ಣ ಮಡಿಕೇರಿನ ಅಸಿಸ್ಟೆಂಟ್ ಸುಪರಿಂಟೆಂಡೆಂಟರವರಾಗಿದ್ದ ರಾ. ಸಿ. ಮಾಚಯ್ಯನವರು ಹಾಸನದ ಡಿಸ್ಟ್ರಿಕ್ಟ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಳೆದ ತಾ. ೧೫—೧೦—ಇದರಲ್ಲು ಅಖಿಲ ಭಾರತ ಚರಕಾ ಸಂಘದವರು ಖಾದಿ ಭಂಡಾರವನ್ನು ಸಕಲೇಶಪುರದಲ್ಲಿ ತೆರೆದಿರುತ್ತಾರೆ.

ಸಕಲೇಶಪುರದ ಸಬ್ ಇನ್ಸ್‌ಪೆಕ್ಟರ್ ರಾ. ಎ. ಜಿ. ಲಿಂಗಯ್ಯ ಇವರನ್ನು ಅರಕಲಗೂಡು ತಾಲೂಕಿಗೂ, ಅರಕಲಗೂಡು ತಾಲೂಕಿನಲ್ಲಿರುವ ರಾ. ಅಹಮ್ಮದ್ ಬೇಗ್ ಎಂಬುವರು ಸಕಲೇಶಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಸ್ಥಳೀಯ ಕೋಆಪರೇಟಿವ್ ಸೊಸೈಟಿಯ ಜನರಲ್ ಬೋರ್ಡ ಮೀಟಿಂಗು ಕಳೆದ ತಾ. ೧೫—೧೦—ಇದರಲ್ಲು ಸೊಸೈಟಿ ಮೀಟಿಂಗಿನಲ್ಲಿ ನಡೆಯಿತು. ಸುಮಾರು ೩೫ ಮೆಂಬರರು ಹಾಜರಿದ್ದರು. ಗತವರ್ಷದಲ್ಲಿ ಸುಮಾರು ರೂಪಾಯಿ ೩೫೦/—ನಷ್ಟವಾಗಿದೆಂದು ತಿಳಿದು ಬರುತ್ತೆ.

ಸೊಸೈಟಿ ಬಿಲ್ಡಿಂಗಿನ ಒಂದು ಮಳಿಗೆಯನ್ನು ಬಹು ಮಂದಿ ಮೆಂಬರರ ಅಪೇಕ್ಷೆ ಮೇರೆಗೆ ಅಖಿಲ ಭಾರತ ಚರಕಾ ಸಂಘಕ್ಕೆ ಮುಫತ್ತಾಗಿ ಕೊಡುವಂತೆ ತೀರ್ಮಾನವಾಗಿರುವುದು ಸಂತೋಷ ಸಂಗ್ತಿ. ಈ ವಿಚಾರದಲ್ಲಿ ಸ್ಥಳೀಯ ಧನಿಷ್ಠರಿತ್ತಾಯವು ಬಂದಾಗಲ್ಲಿ ರಾ। ಮಳಲಿ ಎಸ್. ಎಂ. ರಾಮ ಸ್ವಾಮಿಯವರ ಸಾಧನೆಯು ಫಲಕಾರಿಯಾಯಿತೆಂದು ತಿಳಿದು ಬರುತ್ತೆ.

ಅಖಿಲ ಭಾರತ ಚರಕಾ ಸಂಘದ ಪರವಾಗಿ ಏಜಂಟರಾಗಿ ಸ್ಥಳೀಯ ರಾ. ಎಸ್ ವಿ. ಕೇಶವಯ್ಯ ನಾಯ್ಕ ಎಂಬವರು ನೇಮಕ ಹೊಂದಿ ಸ್ವಲ್ಪರಲ್ಲೇ ಖಾದಿ ವ್ಯಾಪಾರವನ್ನು ಶುರು ಮಾಡಲಿರುವರಾಗಿ ತಿಳಿದು ಬರುತ್ತದೆ.

ಹಾಸನ.

ಹಾಸನದ ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರರು ಸದ್ಯದಲ್ಲೇ ರಜೆ ಮೇಲೆ ಹೋಗುತ್ತಾರಾಗಿಯೂ, ಸದ್ರಿಯವರ ಬದಲಾಗಿ ಚೆನ್ನಪಟ್ಣದಲ್ಲಿ ಅಸಿಸ್ಟೆಂಟ್ ಸುಪರಿಂಟೆಂಡೆಂಟರರಾಗಿರುವ ರಾ। ಸಿ. ಮಾಚಯ್ಯ (Coorg) ಇವರು ಡಿಸ್ಟ್ರಿಕ್ಟ ಸುಪರಿಂಟೆಂಡೆಂಟರರಾಗಿ ನೇಮಕ ಹೊಂದಲಿರುವರಾಗಿಯೂ ತಿಳಿದುಬರುತ್ತೆ.

+ + + +

ಅನುಕ್ರಮಣಿಕೆ.

ಅಗ್ರಲೇಖ—
ಕಾಂಗ್ರೆಸ್ಸಿನ ಹೊಸ ಪಕ್ಷಗಳು . . . ೪
ಸ್ವತಂತ್ರಲೇಖಗಳು . . . ೪
ಸೂಚನೆಗಳು . . . ೧೧
ವರ್ತಮಾನ ಸಂಗ್ರಹಗಳು—
[illegible] . . . ೪
ಸ್ವದೇಶ ವರ್ತಮಾನ ವಿದೇಶ ವರ್ತಮಾನ, . . . ೪
ವಿವಿಧ ಸಮಾಚಾರಗಳು . . . ೧೧
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಕುಂದಾಪುರ, ಅಡ್ಯಾರು, ಬೆಳ್ತಂಗಡಿ ಸುರತ್ಕಲ್, ಮೂಡಬಿದ್ರೆ. . . . ೯
"ಕಾಂಗ್ರೆಸ್ಸಿನ ಮಹಾಸಭೆ ಸೇರಲಿ, ಗೌರವಪೂರ್ವಕವಾಗಿ" . . . ೬
ಪತ್ರವ್ಯವಹಾರ . . . ೧೫
ಪಾಲೆಸ್ತೀನದಲ್ಲಿ ದಂಗೆಗೂ ಪೋಲೀಸರಿಗೂ ಹೋರಾಟ! . . . ೧೫

ಸ್ವದೇಶಾಭಿಮಾನಿ.

ತಾ. ೨೭ನೇ ಶುಕ್ರವಾರ ನವಂಬರ ೧೯೨೫.

ಕಾಂಗ್ರೆಸ್ಸಿನ ಹೊಸ ಪಕ್ಷಗಳು.

ಕಾಂಗ್ರೆಸ್ಸಿನ ಪ್ರಕೃತದ ಕಾರ್ಯಕ್ರಮದಿಂದ ದೇಶದ ರಾಜಕೀಯ ಚೇತನವು ಜಡವಾಗಿ ಬರುತ್ತದೆಂದು ನಾವು ಮೊದಲೇ ಸೂಚಿಸಿದ್ದೇವೆ. ಹಾಗೂ ಬದಲಾವಣೆಗಳು ಅಗತ್ಯವೆಂಬುದನ್ನೂ ನಾವು ಬರೆದಿದ್ದೇವೆ. ಸಚೇತನವಾದ ಜನಾಂಗದೊಳಗೆ ಇಂತಹ ಜಡತೆಯು ಹೆಚ್ಚು ಕಾಲ ಬಾಳಲಾರದು. ಆದುದರಿಂದ ಹೊಸ ಪಕ್ಷಗಳು ಕಾಂಗ್ರೆಸ್ಸಿನೊಳಗೆ ಹುಟ್ಟುವುದು ಸ್ವಾಭಾವಿಕವಾಗಿರುತ್ತದೆ.

೧೯೨೧ನೇ ಇಸವಿಯ ಅಸಹಕಾರ ಚಳವಳವು ನಿಲ್ಲಿಸಲ್ಪಟ್ಟ ಮೇಲೆ, ಈಗಿನಂತೆಯೇ ಕಾಂಗ್ರೆಸ್ಸಿನ ಆಂದೋಲನದಲ್ಲಿ ಜಡತೆಯ ಭಾವವು ಉಂಟಾಗುತ್ತಿದ್ದಾಗ, ದೇಶಬಂಧು ದಾಸರು ಧೈರ್ಯವಾಗಿ ಮುಂದೆ ಬಂದು, ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿ, ಕೌನ್ಸಿಲ್ ಪ್ರವೇಶವನ್ನು ಸಾಧಿಸಿದರು. ಆ ಮೂಲಕ ೧೯೨೩ರಿಂದ ೧೯೨೫ರ ವರೆಗೆ ದೇಶದೊಳಗಿನ ರಾಜಕೀಯ ಜಾಗೃತಿಯನ್ನು ಸಚೇತನವಾಗಿ ಕಾದಿಟ್ಟರು. ಪ್ರಾಯಶಃ ಆಗಿನ ಅವರ ಆ ಕಾರ್ಯ ಸಾಧನೆಯಿಲ್ಲದಿದ್ದರೆ ಈ ಬಾರಿಯ ಸತ್ಯಾಗ್ರಹ ಚಳವಳವು ಸಾಧ್ಯವಾಗುತ್ತಿರಲಿಲ್ಲ.

ಆದುದರಿಂದ ಕೌನ್ಸಿಲು ಪ್ರವೇಶ ಮೊದಲಾದ ಕಾರ್ಯಕ್ರಮಗಳು ಅವುಗಳೇ ಆಗಿ ಎಷ್ಟು ಕಾರ್ಯಕಾರಿಯಾದೀತೆಂಬುದನ್ನೂ ನಾವು ಹೇಳಲಾರೆವಾದರೂ, ಅದಕ್ಕಿಂತಲೂ ಉತ್ತಮವೂ ಸಾಧ್ಯವೂ ಆಗಿರುವ ಇತರ ಕಾರ್ಯಕ್ರಮವನ್ನು ಕಂಡುಹಿಡಿಯುವ ವರೆಗೆ ಜನ ಜಾಗ್ರತಿಯನ್ನು ಕಾದಿಡಲಿಕ್ಕೆ ಇಂತಹ ಕಾರ್ಯಕ್ರಮಗಳು ಅಗತ್ಯವಿದ್ದೇ ಇವೆ. ಹಲವು ಕಡೆಗಳಲ್ಲಿ ಹಲವು ಪ್ರಮುಖರು ಒಟ್ಟುಗೂಡಿ ನೂತನ ಕಾರ್ಯಕ್ರಮ ರಚಿಸಲು ಪ್ರಯತ್ನಿಸುವುದೂ ಈ ಆವಶ್ಯಕತೆಯ ಅನುಭವದ ಕಾರಣದಿಂದಲೇ ಆಗಿರುತ್ತದೆ.

ಮದ್ರಾಸಿನಲ್ಲಿ ಶ್ರೀ ಸತ್ಯಮೂರ್ತಿಯವರೂ, ಮುಂಬಾಯಿಯಲ್ಲಿ ಜಮ್ನಾದಾಸ ಮೇಹತಾ, ಕೇಳ್ಕರರೂ ಈ ನೂತನ ಪಕ್ಷ ಸ್ಥಾಪನೆಗೆ ಟೊಂಕ ಕಟ್ಟಿದ್ದಾರೆ. ಆದರೆ ಕಳೆದ ೧೯೨೩ನೆ ಇಸವಿಯ ಸ್ವರಾಜ್ಯಪಕ್ಷದರಚನೆಗೂ ಈಗಿನ ಧುರೀಣರಿಗೂ ಬಹಳ ತಾರತಮ್ಯವಿದೆ. ಮದ್ರಾಸಿನಲ್ಲಿ ಶ್ರೀ. ಶ್ರೀನಿವಾಸ ಅಯ್ಯಂಗಾರರೂ, ಶ್ರೀ. ರಾಮದಾಸ ಪಂತುಲುರವರೂ, ಕಲ್ಕತ್ತಾದಲ್ಲಿ ಶ್ರೀ ದೇಶಬಂಧು ದಾಸರೂ, ಶ್ರೀ ಸೇನಗುಪ್ತರೂ, ಮುಂಬಾಯಿಯಲ್ಲಿ ಶ್ರೀ ವಿಠ್ಠಲಭಾಯಿ ಪಟೇಲರೂ, ಸಂಯುಕ್ತ ಪ್ರಾಂತ್ಯದಲ್ಲಿ ಪಂಡಿತ ಮೋತೀಲಾಲ ನೆಹರುರವರೂ, ತಮ್ಮ ಪ್ರಾಂತ್ಯದ ಜಗತ್ತು, ಇಡೀ ದೇಶದ ಜಗತ್ತು-ಧುರೀಣತೆಯನ್ನು ವಹಿಸಿದ್ದರು. ದೇಶದ ದೌರ್ಭಾಗ್ಯದಿಂದ ಈ ದಿನ ಅಂತಹ ಪ್ರಚಂಡ ಧುರೀಣರು ನಮ್ಮ ಮುಂದೆ ಇರುವುದಿಲ್ಲ. ಶ್ರೀ. ಅಯ್ಯಂಗಾರರು ರಾಜಕೀಯ ಕ್ಷೇತ್ರದಿಂದಲೇ ನಿವೃತ್ತರಾದರು. ದಾಸ, ನೆಹರು, ಗುಪ್ತ, ಪಟೇಲರು ಇಹದಿಂದಲೇ ನಿವೃತ್ತರಾದರು. ಈಗ ಧುರೀಣರಾಗಿ ಮುಂದೆ ಬರುವ ಶ್ರೀ. ಸತ್ಯಮೂರ್ತಿ, ಮೇಹತಾ, ಕೇಳ್ಕರರು ಎಷ್ಟು ಮಾತ್ರವಾದರೂ ಮೊದಲಿನ ಆ ಉಜ್ವಲ ಧುರೀಣರ ಶತಾಂಶದಲ್ಲಿ ಒಂದಂಶವಾದರೂ ಶಕ್ತಿಯಾಗಲೀ ನಿಸ್ಪೃಹತೆಯಾಗಲೀ ಇದ್ದವರೆನ್ನಲಾಗುವುದಿಲ್ಲ.

[illegible] ಕಾರ್ಯಮಾಡುವರು [illegible] ಉಪಸವನ್ನು [illegible] ಪಕ್ಷದ ಧುರೀಣರನ್ನು ಈ ಸಂದರ್ಭದಲ್ಲಿ [illegible] ಅವರ ಸಹಕಾರವು [illegible] ಮಟ್ಟಿಗೆ ಸಾಧ್ಯವೆಂಬುದನ್ನು ನೋಡಿದ್ದಾದರೆ ಉತ್ತಮವಿತ್ತು ಎಂದು ನಾವು ಮೊದಲೇ ಸೂಚಿಸಿದ್ದೆವು. ಅವರನ್ನು ಹತ್ತಿರ ಬರಮಾಡಿದ್ದಾದರೆ, ಧುರೀಣತೆಯಲ್ಲಿ ಹೆಚ್ಚಿನ ಲಾಭವಾಗದಿರಬಹುದಾದರೂ ಚಳವಳದಲ್ಲಿ ಎಲ್ಲರೂ ಸೇರಿದ್ದಾರೆಂದು ತೋರಿ, ಸರಕಾರವು ಕಾಂಗ್ರೆಸ್ಸನ್ನು ಉದಾರ ಪಕ್ಷವನ್ನು ವಿಂಗಡಿಸಿ, ಕಾಂಗ್ರೆಸ್ಸನ್ನು ಉದಾರ ಪಕ್ಷದ ಸಹಾಯದಿಂದ ದಬ್ಬಾಳಿಸಿಕೊಳ್ಳದ ಹಾಗೆ ನೋಡಲು ಬಹಳ ಸಹಾಯವಾಗುತ್ತಿತ್ತು. ಅಂತಹ ದೂರದರ್ಶಿತೆಯು ಕಾಂಗ್ರೆಸ್ಸಿನಲ್ಲಿ ಉಂಟಾಗದೆ ಇದ್ದುದು ಅತ್ಯಂತ ವಿಷಾದಕರವಿದ್ದೆ.

ಗಾಂಧೀಜಿಯವರ ಈಗಿನ ಕಾರ್ಯಕ್ರಮದಲ್ಲಿ ಪಂಡಿತ ಜವಾಹಿರಲಾಲ ನೆಹರುರವರಿಗೆ ವಿಶ್ವಾಸವಿಲ್ಲವೆಂಬುವುದು ಹಲವು ರೀತಿಗಳಿಂದ ತೋರಿಬರುತ್ತದೆ. ಇನ್ನು ಒಂದು ವರ್ಷದ ವರೆಗೆ ರಾಜಕೀಯ ಚಳವಳದಲ್ಲಿ ಬರುವುದಿಲ್ಲವೆಂದು ಮಹಾತ್ಮಾಜೀಯವರು ಶಸ್ತ್ರ ತ್ಯಾಗ ಮಾಡಿದುದೇ ಇದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಹಾಗಾದರೆ, ಅವರು ಹೊಸ ಧೋರಣೆಯನ್ನು ಯಾಕೆ ಬೆಳೆಸುವುದಿಲ್ಲ? ಗಾಂಧೀಜಿಯವರಿಗೂ ತನಗೂ ಭೇದವಿಲ್ಲವೆಂದು ತೋರಿಸುವುದರಲ್ಲಿ ಯಾಕೆ ಉತ್ಸುಕರಾಗಿದ್ದಾರೆಂಬುವುದೇ ಈಗಿನ ಆಶ್ಚರ್ಯಕರ ರಾಜಕೀಯ ಪರಿಸ್ಥಿತಿಯಲ್ಲಿ ತಿಳಿಯಲಿಕ್ಕಾಗದ ವಿಷಯವಾಗಿರುತ್ತದೆ.

ಹಾಗೂ ಹೊಸ ಪಕ್ಷವು ಬರಲೇ ಬೇಕಾದುದು; ಬಂದಿತು. ಆ ಪಕ್ಷವು ಪ್ರಬಲವಾಗ ಬಲ್ಲ ಧುರೀಣರು ಅದರೊಳಗಿಲ್ಲ, ಆದರೆ ಅದರ ಹೊರಗೆ ಕೂಡ ಅಂತಹ ಧುರೀಣರು ಇದ್ದಾರೋ ಎಂಬುವುದು ಸಂದೇಹಕರವಾಗಿದೆ. ಆದುದರಿಂದ ಈಗಿನ ಪಕ್ಷವು ಕೇವಲ ಜನತೆಯ ಬೆಂಬಲದಿಂದಲೇ ನಡೆಯಬೇಕಾಗಿರುತ್ತದೆ. ಧುರೀಣರನ್ನು ಕಾಯದೆ ಜನತೆಯೇ ಅದನ್ನು ಪುಷ್ಟೀಕರಿಸಿದರೆ ತಾವಾಗಿಯೇ ಧುರೀಣರು ಉಂಟಾಗುತ್ತಾರೆ. ಆದುದರಿಂದ ಜನತೆಯೇ ಈಗ ಆ ಧುರೀಣತೆಯನ್ನು ವಹಿಸಿಕೊಳ್ಳಬೇಕಾಗಿದೆ.

ಆದರೆ ಒಂದು ವಿಷಯದಲ್ಲಿ ಮಾತ್ರ ಸ್ವಲ್ಪ ಜಾಗ್ರತೆ ಇಡಬೇಕಾಗಿದೆ. ನಮ್ಮ ಮರಾಠ ಧುರೀಣರು, ಕೇಳ್ಕರರಂತಹರು ಇನ್ನೂ Responsive Co operation ಎಂಬುದನ್ನು ಮರೆತಿಲ್ಲ. ಆ ತತ್ವದ ತಾತ್ಪರ್ಯವೇನೆಂದರೆ ಸರಕಾರವು ಸಹಕರಿಸಲು ಸಿದ್ಧವಿದ್ದರೆ ನಾವೂ ಸರಕಾರದೊಡನೆ ಸಹಕರಿಸಬೇಕು ಎಂದು. ಕಾರ್ಯದಲ್ಲಿ, ಧುರೀಣರ ಲಾಭಕ್ಕೆ ಜನತೆಯ ಸಹಕಾರ—ಅಂದರೆ ಧುರೀಣರ ಸ್ವಾರ್ಥದೊಡನೆ ಸರಕಾರದ ಸಹಕಾರಕ್ಕೆ ಧುರೀಣರು ಪ್ರತಿ ಸಹಕರಿಸುವುದು. ಮಿ. ತಾಂಬೆಯವರ ಉದಾಹರಣೆಯು ಯಾರಿಗೂ ಮರೆತಿರಲಿಕ್ಕಿಲ್ಲ. ಇಂತಹ ಸಹಕಾರವು ದೇಶದ್ರೋಹವಾಗಿರುತ್ತದೆ. ಇದಕ್ಕೆ ಎಂದಿಗೂ ಪ್ರೋತ್ಸಾಹವನ್ನು ಕೊಡಬಾರದು.

ವಿದೇಶ ವರ್ತಮಾನ.

ಒಲಿಂಪಿಯಾದ ಅಂತರ್ರಾಷ್ಟ್ರೀಯ ಮೋಟರ್ ಪ್ರದರ್ಶನದಲ್ಲಿ ಒಂಭತ್ತು ದಿನಗಳಲ್ಲಿ ೨೩೪,೦೫೫ ಮೋಟರುಗಳು ಪ್ರದರ್ಶಿಸಲ್ಪಟ್ಟವು. ಕಳೆದ ವರ್ಷಕ್ಕಿಂತ ೫೦,೦೦೦ ಮೋಟರುಗಳು ಹೆಚ್ಚಾಗಿ ಬಂದುವು.

ಜಪಾನಿನ ಬಳಿ ಟೈಫನ್ ಎಂಬಲ್ಲಿ ೫೯ ಮಂದಿಗಳಿದ್ದ ಯಶೀಮಾರು ಎಂಬ ಸ್ಟೀಮರು ಥಟ್ಟನೆ ಮುಳುಗಿ ಎಲ್ಲರೂ ಕಾಣೆಯಾಗಿರುವರು. ಕೆಲವು ದೋಣಿಗಳೂ ಮುಳುಗಿ ಅನೇಕರು ಮೃತಪಟ್ಟರು.

ಇಂಡಿಯಾ ಮತ್ತು ಆಫ್ರಿಕಕ್ಕೆ ಬ್ರಿಟಿಷ ಸೈಕಲುಗಳು ಈ ವರ್ಷ ಬಹಳ ಹೆಚ್ಚಾಗಿ ರವಾನೆಯಾದುವು. ಇಂಗ್ಲೆಂಡಿನಲ್ಲಿ ಸೈಕಲ್ ತಯಾರಿ ಕಂಪೆನಿಗಳು ರಾತ್ರಿಂದಿನ ಕೆಲಸ ಮಾಡಿ ಆರ್ಡರುಗಳನ್ನು ಪೂರೈಸುತ್ತಿವೆ.

ಟ್ರೀ ಟ್ರೀಟಿಯನ್ನು ಉಲ್ಲಂಘಿಸುವ ಇಟಲೀ, ಜರ್ಮನಿ, ರಷ್ಯ ಜಪಾನಗಳ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ವಾಶಿಂಗ್ಟನ್‌ನಲ್ಲಿ ವ್ಯಾಪಾರಸ್ಥರ ಚಳವಳ.

ಬರ್ಲಿನಿನಲ್ಲಿ ಸರ್ ಹಿಟ್ಲರನು ಮಾಡಿದ ಭಾಷಣವನ್ನು ಟೀಕಿಸುವದಕ್ಕಾಗಿ ಬ್ರಿಟಿಷ ಪತ್ರಿಕಾ ಪ್ರತಿನಿಧಿಯಾದ ಪ್ಲೇಂಟರನೆಂಬವನನ್ನು ಸೆರೆ ಹಿಡಿದಿರುವರು.

ಫ್ರಾನ್ಸಿನ ಪವರೂ ಎಂಬಲ್ಲಿ ಚೆರ್ಸ್‌ಬರ್ಗ್ ಪ್ಯಾರಿಸ್ ಎಕ್ಸ್‌ಪ್ರೆಸ್ ರೈಲು ಸೇತುವೆ ಮೇಲೆ ಕಂಬಿತಪ್ಪಿ ನಡೆದು ೩೦ ಅಡಿಗಳ ಕೆಳಗೆ ಹೊಳೆಗೆ ಬಿದ್ದಿತು. ೨೧ ಜನರು ಮೃತರಾದರು. ೩೪ ಜನರು ಗಾಯಗೊಂಡರು. ಯಾರೋ ಕಂಬಿ ತಪ್ಪಿಸಿದರೆಂತ ಪೇರಿಸಿನಲ್ಲಿ ಅಪಾದಿಸಲಾಗಿದೆ.

ಆಫ್ರಿಕದಲ್ಲಿನ ನಟಾಲ್ ಸಿ. ಕೆ. ಟಿ. ನಾಯುಡು ಎಂಬ ಕಾಂಗ್ರೆಸ್ ಕೆಲಸಗಾರರು ಕಾಲವಾದರು.

ಸ್ವದೇಶ ವರ್ತಮಾನ.

ಕಳೆದ ಆದಿತ್ಯವಾರ ದಿನ ಸಿಂಗಾಪುರದಲ್ಲಿ [illegible] ಮುಂಡಿಗೆಲ್ಲ "ಪ್ರಿನ್ಸೆಸ್" ಎಂಬ ನೌಕೆಯು ಮುಳುಗಿ ೨೮ ಮಂದಿಗಳು ಕಾಣೆಯಾಗಿರುವರು.

ಜಾವಾ ದ್ವೀಪದಲ್ಲಿ ವಿಮಾನದಲ್ಲಿ ಹಾರಾಡುತ್ತಿದ್ದ ಲೈಫ್ಟಿನೆಂಟ್ ಗ್ರೀನ್ ಎಂಬವನ ವಿಮಾನಕ್ಕೆ ರಣಹದ್ದು ಹೊಡೆದು ವಿಮಾನವು ಕೆಟ್ಟು

ಹಿಂದೀಯರಿಗೆ ಪ್ರಜಾಸತ್ತೆಯನ್ನು ನಡೆಸಲು ಸಾಧ್ಯವಿಲ್ಲದಿರುವುದರಿಂದ ಅವರಿಗದನ್ನು ಬಂದು ವೇಳೆ ಕೊಟ್ಟರೆ ಸರ್ವನಾಶವೆಂದು ಚರ್ಚಿಲ್ಲರು ಪ್ಲ್ಯಾಂಟ್ ಸಿಲೆಕ್ಟ್ ಕಮಿಟಿಯಲ್ಲಿ ವಿವರಿಸಿದ್ದಾರೆ.

ಸಯಾಮಿನ ರಾಜರಾಣಿಯರನ್ನು ರಕ್ಷಿಸುವುದಕ್ಕಾಗಿ ಸಯಾಮಿನ ಯುದ್ಧ ನಾವೆಗಳು ಅತ್ತ ತೆರಳಿವೆ.

ನ್ಯೂ ಡಿಲ್ಲಿಯಲ್ಲಿನ ರೀಗಲ್ ಥಿಯೇಟರ್ ಸಿನೆಮ ಮಂದಿರದಲ್ಲಿ ವೈಸರಾಯರೂ ಅವರ ಪತ್ನಿಯವರೂ ಜಪಾನಿನ ಪ್ರತಿನಿಧಿಗಳೂ ಕೂತಿದ್ದರು. ಅವರ ಸ್ಥಾನಗಳ ಬಳಿ ಇಬ್ಬರು ಮಧ್ಯಮ ತರಗತಿಯ ತರುಣರು ಕೂತಿದ್ದರು. ಈ ತರುಣರ ಮೇಲೆ ಸಂದೇಹ ತೋರಿ ಅವರನ್ನು ವಿಚಾರಿಸಲು ಅವರ ಕೈಯಲ್ಲಿ ಫೋಟೋ ಟಿಕೇಟುಗಳಿದ್ದುವು. ಕೆಲವರನ್ನು ಸೆರೆ ಹಿಡಿಯಲಾಗಿದೆ. ಈ ತರುಣರ ಕ್ರಿಯೆಯಲ್ಲಿ ರಾಜಕೀಯ ವಾಸನೆಯಿರುವುದೆಂದು ಪ್ರತೀತಿ.

ಕೊಲೊಂಬೊದಲ್ಲಿ ಮದ್ದು ಗುಂಡುಗಳನ್ನು ಕೊಂಡೊಯ್ಯುವ ಸ್ಟೀಮರುಗಳನ್ನು ವಿಶೇಷ ಕಾವಲು ನಡೆಸಿ ಜಾಗ್ರತೆಯಿಂದ ವ್ಯವಸ್ಥೆ ಮಾಡಿದರೆ ಸಮುದ್ರದಲ್ಲಿ ಆಗಾಗ ನಡೆಯುವ ಬೆಂಕಿಯ ಅಪಾಯಗಳು ಕಡಿಮೆಯಾದಾವೆಂದು ನಿರ್ಧರಿಸಲಾಗಿದೆ.

ಕರ್ನಾಟಕ ಎಸೋಸಿಯೇಶನ್ ಮುಂಬಯಿ ಈ ಸಂಘದವರು ಕಳೆದ ತಾ. ೨೩ನೇ ಆದಿತ್ಯವಾರ ದಿನ ಬಾಟ್ಲಿವಾಲಾ ಎಕೌಂಟೆನ್ಸಿ ಹಾಲಿನಲ್ಲಿ ದೀಪಾವಳಿ ದಿನವನ್ನು ಅತಿ ವಿಜೃಂಭಣೆಯಿಂದ ಜರಗಿಸಿದರು. ಮುಂಬಯಿಯ ಹಲವೆಡೆಗಳಿಂದ ಕನ್ನಡಿಗರು ಬಂದು ನೆರೆದಿದ್ದರು. ಇಷ್ಟು ಮಂದಿ ಕನ್ನಡಿಗರು ಸಭೆ ಸೇರಿದುದು ಮುಂಬಯಿಯಲ್ಲಿ ಇದೇ ಮೊದಲನೆಯ ಬಾರಿಯೆಂದರೆ ಅತಿಶಯೋಕ್ತಿಯಾಗಲಾರದು.

ಲಾಹೋರಿನ ಅಂತ್ಯಜರ ವಾಸಕ್ಕಾಗಿ ೧೨ ಲಕ್ಷ ರೂಪಾಯಿ ವೆಚ್ಚ ತಗಲಿಸಿ ೧೦೦೦ ಮನೆಗಳನ್ನು ಅಸ್ಪೃಶ್ಯತಾ ನಿವಾರಣಾ ಸಂಘದವರು ನಿರ್ಮಿಸಲಿರುತ್ತಾರೆ.

ರಂಗಪುರದಲ್ಲಿ ಟ್ರೈನಿನಲ್ಲಿ ನಡೆದ ದರೋಡೆಯ ಸಂಬಂಧವಾಗಿ ಮೂವರು ಯುವಕರೂ ಒಬ್ಬಳು ತರುಣಿಯೂ ದಸ್ತಗಿರಿ ಮಾಡಲ್ಪಟ್ಟರುವರು.

ಪುನೆಯಲ್ಲಿ ಪ್ಲೇಗ್ ಹಾವಳಿಯು ಕಡಿಮೆಯಾಗಿರುವುದಿಲ್ಲ. ವಾರಕ್ಕೆ ಹತ್ತಾರು ಮರಣಗಳಾಗುತ್ತಿವೆ.

ಮುಂಬಾಯಿ ಮೈಲ ತಾ ೨೬ನೇ ದಿನ ಮೊಗಲ್ ಸರಾಯಿ ಎಂಬಲ್ಲಿ ಕಂಬಿ ತಪ್ಪಿ ಬಿದ್ದು ೧೯ ಮಂದಿಗಳು ಗಾಯಗೊಂಡರು.

ನಗರಕೋಯಿಲ್ ಎಂಬಲ್ಲಿ ಒಂದು ದೋಣಿಯು ಹೊಳೆಯಲ್ಲಿ ಅಡಿ ಮೇಲಾಗಿ ೬ ಮಂದಿ ಸ್ತ್ರೀಯರೂ ಒಬ್ಬ ಬಾಲಕನೂ ನೀರು ಪಾಲಾದರು.

ಪಂಡಿತ ಮಾಲವೀಯರು ಅಸ್ವಸ್ಥರಲ್ಲಿದ್ದು ಅವರ ಹಲ್ಲುಗಳ ಸೈಲ್ಟಾ ಡಾಕ್ಟರರು ತಿಸ್ತು ತೆಗೆದರು.

ಕಲ್ಕತ್ತದಲ್ಲಿ ಅಖಿಲ ಭಾರತ ಮಾರ್ವಾಡಿ ಮಹಿಳಾ ಪರಿಷತ್ತು ಶ್ರೀಮತಿ ಜಮ್ನಾಲಾಲ್ ಬಜಾಜರ ಅಧ್ಯಕ್ಷತೆಯಲ್ಲಿ ಜರಗಿತು.

ಕಲ್ಲಿಕೋಟೆಯಲ್ಲಿ ಫಾದರ್ ಥೋಮಸ್ ಮುನ್ನಂಚೇರಿಯವರಿಂದ ಬರೆಯಲ್ಪಟ್ಟಿದ್ದ ಸತ್ಯಮಾರ್ಗಾನ್ವೇಷಣಂ ಎಂಬ ಪುಸ್ತಕವು ಸರಕಾರದಿಂದ ಬಹಿಷ್ಕರಿಸಲ್ಪಟ್ಟಿತು.

ಕೃಷ್ಣಾ ನಗರದಲ್ಲಿನ ಒಬ್ಬ ಪ್ರೊಫೆಸರರು ಅಸ್ವಸ್ಥದಿಂದ ಇನ್ನು ಬದುಕಲಾರರೆಂದು ಡಾಕ್ಟರರು ಅಭಿಪ್ರಾಯಪಟ್ಟೊಡನೆ ಅವರ ಯೌವನ ಪತ್ನಿಯು ಮೂರು ಮಾಳಿಗೆಯ ಕೆಳಗೆ ಹಾರಿ ಮಡಿದಳು. ಅವಳು ಸತ್ತ ಎರಡು ದಿನಗಳಲ್ಲೇ ಪ್ರೊಫೆಸರರು ಗುಣಮುಖರಾಗಿರುವರು, ಅವರು ಬದುಕುವರೆಂದು ತಿಳಿಯಲಾಗಿದೆ.

ದೀನ ಬಂಧು ಸಿ. ಎಫ್. ಎಂಡ್ರ್ಯೂಸರು ಸಿಮ್ಲಾದಿಂದ ಆಫ್ರಿಕಗೆ ಹೋಗಿ ಅಲ್ಲಿಯ ಅಧಿಕಾರಿಗಳೊಡನೆ ಈಸ್ಟ್ ಆಫ್ರಿಕವಾಸಿಗಳ ಸ್ಥಿತಿಗತಿಗಳನ್ನು ಹೇಳಿಕೊಂಡರು. ಶ್ರೀಯುತರು ಬೇಗನೇ ಹಿಂತಿರುಗುವರು.

Stop Press

ಪಾಲೆಸ್ತೀನದಲ್ಲಿ ಮಾರ್ಶಲ್ ಲಾ ಜಾರಿಯಾಗಿದೆ. ಸರಕಾರವು ದಂಗೆಗಾರರನ್ನು ಸದೆಬಡಿಯುತ್ತಿದೆ. ಸೈನ್ಯಗಳು ಪಡೆಯುತ್ತ ಮಾರ್ಗಗಳಲ್ಲೆಲ್ಲಾ ಮೋಟಾರಗಳ ರಾಶಿಗಳನ್ನು ಹಾಕಿರುತ್ತಾರೆ. ಭಯಂಕರ ಸ್ಥಿತಿಯು ತಲೆದೋರಬಹುದೆಂದು ಊಹನೆಯಾಗಿದೆ.

ಕೊಯಂಬತ್ತೂರಿನಲ್ಲಿನ ಪಟ್ಟಿ ಎಂಬಲ್ಲಿ ಪತ್ನಿಯು ಮೋಹದ ಕೋಪದಿಂದ ಸಲಿಗೆ ಎಂಬವನೊಬ್ಬನು ಅವಳನ್ನೂ ಅವನ ಒಂದು ವರ್ಷದ ಮಗುವನ್ನೂ ಕೊಂದಿದ್ದನು. ಪತ್ನಿಯೊಡನಿದ್ದ ಅವನ ತಮ್ಮನನ್ನು ಕಡಿದಿದ್ದನು.

ದಕ್ಷಿಣ ಕನ್ನಡ

ಮಂಗಳೂರು:— ಇದೇ ಕಳೆದ ತಾರೀಖು ೨೮ನೇ ದಿನ ಸಾಯಂಕಾಲ ಗಂಟೆ ೫ಕ್ಕೆ ಇಲ್ಲಿಯ ಶ್ರೀ ಚಾಮುಂಡೇಶ್ವರಿ ಸಂಗೀತ ಸಭೆಯ ಸದಸ್ಯರೆಲ್ಲರೂ, ಮಂಗಳೂರ ರಸಿಕರ ಪ್ರೋತ್ಸಾಹಿತರೂ ಆದ ಶ್ರೀ ಮಾಸ್ತರ್ ಪಾಂಡುರಂಗರಾವ್, ಕಾಸರಗೋಡ್‌ಕಾರ್‌ರವರು ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನ ಆಫೀಸರರೊಬ್ಬರ ಭವ್ಯವಾದ ಭವನದಲ್ಲಿ ಕಿನ್ನ ಸುಮಧುರ, ಚಿತ್ತಾಕರ್ಷಕ ಗಾನಗಳಿಂದ ಸಭಿಕರನ್ನು ಹರ್ಷಗೊಳಿಸಿದರು. ಇವರು ಮುಂದೆ ಪರಸ್ಥಳಕ್ಕೆ ಪ್ರಯಾಣ ಬೆಳಸಿ, ನಮ್ಮೂರಿಗೆ ಶ್ರೇಯಸ್ಸು ತರಲಿರುವುದರಿಂದ ಊರವರು ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಈ ಮೊದಲು ಯಕ್ಷಗಾನ ಸಮಾರಂಭವು ಕೆನರಾ ಹೈಸ್ಕೂಲಿನ ಭುವನೇಂದ್ರ ಮಂದಿರದಲ್ಲಿ ನವಂಬರ ತಾ. ೪ನೆಯ ದಿವಸ ನೆರವೇರಲಿರುವುದೆಂದು ನಿಶ್ಚಿತವಾಗಿದ್ದು ಸದರಿ ಸಮಾರಂಭವನ್ನು ಇದೇ ಬರುವ ತಾ. ೫ನೇ ಆದಿತ್ಯವಾರ ಅಪರಾಹ್ನ ೪ ಗಂಟೆಗೆ ಮುಂದುವರಿಸಬೇಕಾಗಿ ಬಂದುದರಿಂದ ತಾ. ೫ನೆಯ ಆದಿತ್ಯವಾರ ಅಪರಾಹ್ನ ೪ ಗಂಟೆಗೆ ಭುವನೇಂದ್ರ ಮಂದಿರಕ್ಕೆ ಸರ್ವರೂ ಚಿತ್ತೈಸಬೇಕಾಗಿ ಮ॥ ರಾ॥ ರಾ॥ ಕೆ. ಬಾಲಕೃಷ್ಣರಾವ್, ಎಡ್ವೋಕೇಟ್‌ರವರು ವಿನಂತಿಸುತ್ತಾರೆ.

ಕೆನರಾ ಹ್ಯಾಸ್ಕೂಲಿನವರು ಇನ್ನೊಂದು (ಮೂರನೆಯ) ಸೋಡಿಯನ್ನು ಎತ್ತುತ್ತಾರಾಗಿಯೂ, ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿದ್ದಾರಾಗಿಯೂ ತಿಳಿಯುತ್ತೇವೆ. ಶಾಲೆಯಲ್ಲಿಯೂ, ಹೊಸ್ಟೆಲಿನಲ್ಲಿಯೂ ವಿದ್ಯುಚ್ಛಕ್ತಿಯ ದೀಪಗಳನ್ನು ಇರಿಸುವ ವ್ಯವಸ್ಥೆಯಾಗುತ್ತಿದೆ. ಆ ವಿಷಯದಲ್ಲಿ ಶಾಲೆಯ ಸಕಲ ಹಳೆ ವಿದ್ಯಾರ್ಥಿಗಳೂ ಆಶ್ರಯದಾತರೂ ತಮ್ಮ ಯಥಾಶಕ್ತಿ ಸಹಾಯನೀಯುವರಾಗಿ ಶಾಲಾ ಅಧಿಕಾರಿಗಳ ಕೋರಿಕೆಯು.

ಮಂಗಳೂರು ಶಹರಿನಲ್ಲಿರುವ ಗೌಡಸಾರಸ್ವತ ಬ್ರಾಹ್ಮಣ ಹತ್ತು ಸಮಸ್ತರ ಶ್ರೀ ವಿಠಲ ರುಕುಮಾಯಿ ದೇವಸ್ಥಾನದಲ್ಲಿ ಕಳೆದ ತಿಂಗಳ ತಾ. ೨೬ರಿಂದ ೩೦ರ ವರೆಗೆ ಭಜನೆ ಸಪ್ತಾಹವು ಸಾಂಗವಾಗಿ ನೆರವೇರಿತು. ಜನಸಮುದಾಯವು ಇಷ್ಟು ವರ್ಷಗಳಿಗಿಂತಲೂ ಅಧಿಕವಾಗಿದ್ದುದರಿಂದ ಸ್ಥಳಾಭಾವದಿಂದ ಭಜಕರು ತುಂಬಾ ಅನಾನುಕೂಲತೆಯನ್ನು ಹೊಂದಬೇಕಾಯಿತು. ಶ್ರೀ ದೇವಸ್ಥಾನದ ಮಾನ್ಯ ಮೊಕ್ತೇಸರರು ಈ ಕಡೆ ನಿಗಾ ಕೊಟ್ಟು ಎದುರಿನ ಪೌಳಿಯನ್ನು ಕಟ್ಟಿಸಿ ಭಜಕರ ಪ್ರೀತಿಗೆ ಪಾತ್ರರಾಗುವರೆಂದು ಹಾರೈಸುತ್ತೇವೆ. ದಿವಂಗತ ನಾರಾಯಣ ತೀರ್ಥ ಸನ್ಯಾಸಿ (ಮುಟ್ಟ ಲಕ್ಷ್ಮಣ ಪ್ರಭುಗಳು) ಮ॥ ರಾ॥ ಮುಟ್ಟ ಕೇಶವಪ್ರಭುಗಳ ಕೂಡೆ ಈ ಬಗ್ಗೆ ಹಣ ಯಾ ಮರಮುಟ್ಟು ವಗೈರೆ ಕೊಟ್ಟಿರುವುದಾಗಿ ತಿಳುವಳಿಕೆಗೆ ಬಂದಿರುವುದರಿಂದಲೂ, ಆಗಾಗ್ಗೆ ಭಜಕವೃಂದದವರಿಂದ ಸಂಚಿತವಾದ ಮೊಬಲಗೂ ಕೂಡಾ ಜಮಾ ಇರುವುದೆಂದು ತಿಳಿದು ಬರುವುದರಿಂದಲೂ ಕಟ್ಟೋಣ ಕಟ್ಟಿಸುವರೆ ಎಲ್ಲಾ ಸೌಕರ್ಯಗಳಿರುವುದರಿಂದ ಅದನ್ನು ತ್ವರ್ಯದಲ್ಲಿ ಮಾನ್ಯ ಮೊಕ್ತೇಸರರು ಕಟ್ಟೋಣ ಕಟ್ಟಿಸುವರೆಂಬುದಾಗಿ ಭಜಕವೃಂದದವರ ಆಗ್ರಹಪೂರ್ವಕ ವಿನಂತಿ.

ದಕ್ಷಿಣ ಕನ್ನಡ ಜಿಲ್ಲಾ ವೈದ್ಯಕೀಯ ಸಂಘದವರ ಒಂದು ಸಭೆಯು ತಾ. ೨೮—೧೦—೩೩ನೇ ದಿನ ಬೆಳಗ್ಗೆ ೧೧ ಗಂಟೆಗೆ ವೆನ್‌ಲೋಕ್ ಆಸ್ಪತ್ರೆಯಲ್ಲಿ ಜರಗಿತು.

ಇದೇ ಕಳೆದ ಸಪ್ಟಂಬರ ತಿಂಗಳ ತಾ. ೧೦ರಲ್ಲು ದಕ್ಷಿಣ ಭಾರತ ಹಿಂದೀಪ್ರಚಾರ ಸಭೆಯ ನೇತೃತ್ವದಲ್ಲಿ ಜರಗಿದ ಹಿಂದೀ ಪರೀಕ್ಷೆಯಲ್ಲಿ ಶ್ರೀಮತಿ ಕಲ್ಯಾಣಿಬಾಯಿ ಟಿ. ಪುತ್ರಣ್ಣಾಯರು ಮಧ್ಯಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂದು ತಿಳಿಸುವರೆ ತುಂಬಾ ಸಂತೋಷಪಡುತ್ತೇವೆ.

ಉಡುಪಿ— ತಾ. ೨೬ಕೆಗೆ ಇಲ್ಲಿ ಶ್ರೀ ವಲ್ಲಭಭಾಯಿ ಪಟೇಲರ ನಿಧನದ ಮ॥ ಪಸೂಚಕವಾಗಿ ಸಂಪೂರ್ಣ ಹರತಾಳವು ಆಚರಿಸಲಾಗಿತ್ತೆಂದು ತಿಳಿಸಲಾಗಿತ್ತಷ್ಟೇ. ಅಂದೇ ಸಾಯಂಕಾಲ ಕ್ಲಬ್ ಮೈದಾನಿನಲ್ಲಿ ಪುರಜನರ ಮಹಾಸಭೆಯು ಸೇರಿದ್ದು, ಮಾಜಿ ಎಸೆಂಬ್ಲಿಯ ಸಭಾಸದರಾದ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ್ ಬಹದ್ದೂರರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ದಿವಂಗತರ ಜೀವನ ಚರಿತ್ರೆಯನ್ನು ಮುಖ್ಯತಃ ರಾಷ್ಟ್ರಮುಖಂಡತನದ ಎಸೆಂಬ್ಲಿಯ ಆದರ್ಶ ಪ್ರೆಸಿಡೆಂಟಿಕನದ ಕುರಿತಾಗಿ ಗುಣಕಥನ ಮಾಡಿದ ನಂತರ, ದಿವಂಗತರ ಆತ್ಮಕ್ಕೆ ಶಾಂತಿಯುಂಟಾಗಲೆಂದೂ ಅವರ ಕುಟುಂಬದೊಡನೆ ಸಹಸಂತಾಪ ಸೂಚಿಸಿಯೂ ಠರಾವು ಸರ್ವಸಮ್ಮತದಿಂದ ಮಂಜೂರಾಗಿ, ಎಲ್ಲರೂ ಎರಡು ನಿಮಿಷ ಕಾಲ ಬಾಗಿ ನಿಂತು ಮನ್ನಿಸಲಾಯಿತು. ಚಿಕ್ಕ ಬಾಲಕಿಯರು ರಾಷ್ಟ್ರಗೀತವನ್ನು ಹಾಡಿದ ತರುವಾಯ ಸಭೆಯು ಮುಕ್ತಾಯವಾಯಿತು.

ತಾ. ೨೯ನೇ ಆದಿತ್ಯವಾರ ಇಲ್ಲಿನ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಈ ವರ್ಷವೇ ಹೊಸದಾಗಿ ಸ್ಥಾಪಿಸಲ್ಪಟ್ಟಿದ್ದ (ಸ್ಕೌಟು) ದಳದ ಸ್ಥಳೀಯ ಬೋರ್ಡ್ ಹ್ಯಾಸ್ಕೂಲಿನ ಈ ಮೊದಲೇ ೪—೫ ವರ್ಷಗಳ ಹಿಂದೆಯೆ ಸ್ಥಾಪಿತವಾಗಿದ್ದ ಸ್ಕೌಟುದಳದ ಮತ್ತು ಹಳ್ಳಿಯ ಎಲಿಮೆಂಟರಿ ಶಾಲೆಯಾಗಿದ್ದರೂ ೩—೪ ವರ್ಷಗಳ ಹಿಂದೆ ಸ್ಥಾಪಿತವಾಗಿದ್ದ ಸ್ಕೌಟು ದಳದವರು ಕೂಡಿಕೊಂಡು ಸಾಯಂಕಾಲ ೬—೩೦ಕ್ಕೆ ಕ್ಯಾಂಪ್ ಫಾಯರ್ ಸಮಾರಂಭವನ್ನು ಜರಗಿಸಿದರು. ಅಂದು ಮಾನ್ಯ ಜಿಲ್ಲಾ ಜಡ್ಜರಾದ ಶ್ರೀ ಸಿ. ವಿ. ರೆಡ್ಡಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದು, ಸಂದರ್ಭೋಚಿತ ಭಾಷಣವಿತ್ತರು. ಸುಮಾರು ೫೦೦ ಮಂದಿ ಶಾಲಾ ಮಕ್ಕಳಲ್ಲದೆ ಪಟ್ಟಣದ ಹಲವು ಗೃಹಸ್ಥರೂ ಉಪಾಧ್ಯಾಯರೂ ನೆರೆದಿದ್ದು, ವಿದ್ಯಾರ್ಥಿಗಳ ಚಟುವಟಿಕೆಗಳಿಂದ ಹರ್ಷಗೊಂಡರು. ಇದೆಲ್ಲ ಕಾರ್ಯಕ್ಷೇಮಕ್ಕೆ ಜಿಲ್ಲಾ ಸ್ಕೌಟ್ ಅಸಿಸ್ಟಂಟ್ ಕಮಿಶನರಾದ ಡಾ॥ ಕೆ ಗಿರಿಧರರಾಯರು ಬಹಳ ಮಟ್ಟಿಗೆ ಕಾರಣಭೂತರಾಗಿದ್ದರು; ಇವರು ಈ ಮೊದಲೂ ಇತ್ತ ಸಂದರ್ಶನ ಮಾಡಿದ್ದಾಗಲೂ ಸ್ಕೌಟ್‌ದಳದ ವೃದ್ಧಿ ಉತ್ಸಾಹಗಳ ಕುರಿತು ಶ್ರಮಪಟ್ಟಿರುತ್ತಾರೆ

ಪಲಿಮಾರು— ಇದೇ ಒಕ್ಟೋಬರ ತಾ. ೨೪ರಲ್ಲು ಜಿಲ್ಲಾ ವೆಟರ್ನರಿ ಅಫೀಸರರಾದ ರಾ॥ ನಟೇಶ ಐಯ್ಯರ್ ಮತ್ತು ಇವರ ಟೂರಿಂಗ್ ಸರ್ಜನ್ ರಾ॥ ಸೀತಾರಾಮರಾಯರು ಇಲ್ಲಿಗೆ ಚಿತ್ತೈಸಿ ಇಲ್ಲಿಯ ಮಠದಲ್ಲಿ ಮೊಕ್ಕಾಂ ಮಾಡಿದರು. ಇಲ್ಲಿಯ ಆಸುಪಾಸು ಗ್ರಾಮಗಳಲ್ಲಿರುವ ಎತ್ತುಗಳ ಬೀಜಗಳನ್ನು ಕಸ್ಟರೇಟ್ ಮಾಡಿದರು.

ಮೂಡಬಿದ್ರೆ— ಇಲ್ಲಿಯ ತ್ರಿಭುವನ ತಿಲಕ ಚೂಡಾಮಣಿ ಜೈನ್ ಮಂದಿರದಲ್ಲಿ (ಸಾವಿರ ಕಂಭದ ಬಸದಿ) ವರ್ಷಂಪ್ರತಿ ನಡೆಯುವ ದೀಪಾರಾಧನೆಯು ಇದೇ ಬರುವ ಕಾರ್ತಿಕ ಬಹುಳ ೬ಯು ಗುರುವಾರ ತಾರೀಖು ೯—೧೧—೩೩ ರಾತ್ರಿ ಘಂಟೆ ೪ಕ್ಕೆ ಜರಗುವುದು. ಸರ್ವರಿಗೂ ಸುಸ್ವಾಗತವಿದೆಯೆಂದು ಮೂಡಬಿದ್ರಿ ಚೆಟ್ಟಿರಿ ಧರ್ಮಶಾಲೆಯ್ಯನವರು ತಿಳಿಸುತ್ತಾರೆ.

ಇಲ್ಲಿಯ ಶ್ರೀ ಚಂದ್ರನಾಥಸ್ವಾಮಿ ರೋವರ್ ಸ್ಕೌಟ್‌ಕ್ರೂ ಮತ್ತು ಉಪಾಧ್ಯಾಯರ ಸಂಘದಿಂದ ನಡೆಯುತ್ತಿರುವ ಧರ್ಮಾರ್ಥ ರಾತ್ರಿಶಾಲೆಗೆ ಮೂಡಬಿದ್ರಿ ಸಹಕಾರ ಸಂಘದ ಸರ್ವಜನೋಪಕಾರ ನಿಧಿಯಿಂದ ಕೊಟ್ಟ ರೂ. ೧೩ನ್ನೂ ಮುಂಬಾಯಿಯ ಮ॥ ರಾ॥ ರಾ॥ ಬಿ. ಎಮ್. ಟಿ. ಮಾಲವೀಯರು ಕೊಟ್ಟ ರೂಪಾಯಿ ೩ನ್ನೂ ಆತ್ಮಾದರದಿಂದ ಸ್ವೀಕರಿಸಿ ಕಾರ್ಯದರ್ಶಿಯವರು ಸದರಿ ಸಂಸ್ಥೆಗಳಿಗೆ ವ ಮಹನೀಯರಿಗೆ ಕೃತಜ್ಞತೆಯನ್ನು ವಿಶದಪಡಿಸುತ್ತಾರೆ. ಈ ರಾತ್ರಿಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಬರುವ ಡಿಸೆಂಬರ ತಾ. ೧ಕ್ಕೆ ಇಡಲ್ಪಟ್ಟಿದ್ದರಿಂದ, ಎಲ್ಲಾ ಉಪಾಧ್ಯಾಯರು ರೋವರ್ ಸ್ಕೌಟ್ಸ್, ಬೋಯ್‌ಸ್ಕೌಟ್ಸ್ ಮತ್ತು ಪೂಲ್ಸ್ ಕಬ್ಸ್ ಸಹಕರಿಸಬೇಕಾಗಿಯೂ ವಿದ್ಯಾಭಿಮಾನಿಗಳಾದ ಸಜ್ಜನರು ಸಹಾಯವನ್ನೀಯಬೇಕಾಗಿಯೂ ಕಾರ್ಯದರ್ಶಿಯವರ ವಿನಂತಿ ಇದೆ.

ಅಡ್ಯಾರು— ಇದೇ ಆದ ತಾ. ೨೫ನೇ ಸಾಯಂಕಾಲ ಇಲ್ಲಿಯ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ಭಜನಾ ಸಂಘದವರು ವಾರ್ಷಿಕ ಮಂಗಳೋತ್ಸವವನ್ನು ಶ್ರೀ ಅಚ್ಯುತನಾರಾಯಣ ಪುಣಿಂಚತ್ತಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿಸಿದರು. ಸಂಘದ ಅಧ್ಯಕ್ಷ ರಾ॥ ರವಿವರ್ಮ, ಕಾರ್ಯದರ್ಶಿ ರಾ॥ ತಿಮ್ಮಪ್ಪಶೆಟ್ಟಿ ಹಾಗೂ ಸರ್ವ ಸದಸ್ಯರ ಮತ್ತು ಸ್ಥಳೀಕ ಮಹಾಶಯರ ಸಾಹಸವು ಶ್ಲಾಘ್ಯವಾಗಿದೆ.

ಫರಂಗಿಪೇಟೆ— ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಹೊಸದಾಗಿ ಅಂದವಾಗಿ ಕಟ್ಟಿಸಿದ ಫಜೀರು ಸೈಂಟ್ ಜೋಸೆಫ್ಸ್ ಶಾಲೆಯಲ್ಲಿ ನೇರಮಜ್ಲು ಹಾಯರ್ ಎಲಿಮೆಂಟರಿ ಶಾಲಾ ಹೆಡ್ ಮಾಸ್ತರ್ ಶ್ರೀಯುತ ವಿ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು.

ಸುರತ್ಕಲ್— ಕಳೆದ ತಾ. ೨೪ನೆಯ ದಿನ ಸಂಜೆ ೮ ಗಂಟೆಗೆ ಇಲ್ಲಿಯ ಹೆಂಡದಂಗಡಿಯಲ್ಲಿ ಹೊಸಬೆಟ್ಟು, ಇಡ್ಯಗ್ರಾಮಗಳ ಮೊಗವೀರರೊಳಗೆ ಮಾತಿಗೆ ಮಾತು ಬೆಳೆದು, ಹೊಡೆತ—ಬಡಿತಗಳಾದುವು. ಈ ಜಗಳದಲ್ಲಿ ವಿಶೇಷ ಜಖಂ ಹೊಂದಿರುವ ಹೊಸಬೆಟ್ಟಿನ ಮೂವರನ್ನು ಅಂದೇ ರಾತ್ರಿ ಮೂಲ್ಕಿಯ ಆಸ್ಪತ್ರೆಗೂ, ಇಡ್ಯದ ಈರ್ವರನ್ನು ಮರುದಿನ ಮಂಗಳೂರ ಆಸ್ಪತ್ರೆಗೂ ಒಯ್ದಿರುವರು. ತಾ ೨೬ನೆಯ ದಿನ ಮೂಲ್ಕಿಯಿಂದ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ಬಂದು ಸ್ಥಳ ತನಿಖೆ ಮಾಡಿ ತೆರಳಿರುವರು.

ನವಂಬರ ತಾ. ೧ರಿಂದ ೩ ತಿಂಗಳುಗಳ ತನಕ ಭಿಕಾರಿ ನಾಯಿಗಳನ್ನು ಕೊಲ್ಲಿಸಲಾಗುವುದೆಂದೂ, ಸಾಕುನಾಯಿಗಳನ್ನು ಕಟ್ಟಿಹಾಕತಕ್ಕದೆಂದೂ "ಸುರತ್ಕಲ್ ಇಡ್ಯಗ್ರಾಮ ಪಂಚಾಯತ ಸಮಿತಿ"ಯವರ ನೋಟೀಸು ಅಲ್ಲಲ್ಲಿ ಎಲ್ಲರ ಅವಗಾಹನೆಗಾಗಿ ಅಂಟಿಸೋಣಾಗಿದೆ.

ನಾಳೆ (ತಾ. ೪ನೇ) ಶನಿವಾರ ಇಡ್ಯ ಶ್ರೀ ಮಹೇಶ್ವರ ದೇಗುಲದಲ್ಲಿ ವರ್ಷಂಪ್ರತಿ ನಡೆಯತಕ್ಕ "ದೀಪೋತ್ಸವವು" ಜರುಗಲಿದೆ.

ಮಂಜೇಶ್ವರ— ಇಲ್ಲಿಯ ಪೋಸ್ಟ ಆಫೀಸಿನಲ್ಲಿ ಟಪ್ಪಾಲು ಬ್ಯಾಗ್ ರಾತ್ರಿ ೮ ಗಂಟೆಗೆ ಹೋಗುವುದಾದರೂ ಕಾಗದಗಳು ಸಕಾಲದಲ್ಲಿ ಮುಟ್ಟುವುದು ಕಷ್ಟ. ಬ್ಯಾಗ್ ಬಹಳ ಬೇಗನೆ ಕಟ್ಟುತ್ತಾರೆಂದು ತೋರುತ್ತದೆ.

ಶ್ರೀ ಮದನಂತೇಶ್ವರ ದೇವಸ್ಥಾನದ ಆಡಳಿತ ಕಮಿಟಿಯವರು ವಿದ್ಯುಚ್ಛಕ್ತಿಯ ವೇಗದಿಂದ ಅಂಬಳ, ಅಗ್ರಸಾಲೆ, ಯಜ್ಞಮಂಟಪ, ರಥದ ಕೊಟ್ಟಿಗೆ, ಕೆರೆತೀರ್ಥ, ಜನರು ಕೂತುಕೊಳ್ಳುವ ಕಟ್ಟೆಗಳು ಎಲ್ಲವನ್ನೂ ದುರುಸ್ತಿ ಮಾಡುತ್ತಿರುವರು. ಆದರೆ ರಥ ಎಳೆಯುವ ಮಾರ್ಗದ ಬದಿಯಲ್ಲಿರುವ ಮತ್ತು ಸಾವಿರಾರು ಜನರು ಕೂತುಕೊಳ್ಳುವ ಕಟ್ಟೆಗಳ ಕಡೆಗೆ ಗಮನವು ಕಾಣುವುದಿಲ್ಲ. ಹಾಯರ್ ಎಲಿಮೆಂಟರಿ ಶಾಲೆಗೆ ರಿಕೊಗ್ನೀಶನೂ ಇಲ್ಲವಂತೆ. ಮಕ್ಕಳ ದುರಾದೃಷ್ಟ!

Wanted

A young and energitic clerk knowing Kanarese, who can travel to the Ghauts and other places and keep business accounts Pay according to qualifications with travelling allowance exclusively. Start with four months' service. After approval confirmation of post.

Apply to –

"Z"

C/o. Swadeshabhimani,

Magnalore.

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ).

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ಣಾಟಕ"

ದ್ರಾಕ್ಷಾಸವ, ಬ್ರಿಲ್ಲಿಂಟ್ಯಾನ್, ಇಂಕ್ಸ್,
ಚ್ಯವನಪ್ರಾಶ, ಸ್ನೋ, ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director:—Venkatraya Annappa Baliga

Jubilee year! *Jubilee year!*

The Bombay Life Assurance Co. Ltd.,

Bombay—Established 1908.

Chairman:—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply. Right opportunity to those who desire independant and respectable vocation.

Applications should reach the undersigned by 25th September 1933, giving full qualifications and whether they can guarantee business.

Apply to:—

KOCHIKAR BROTHERS,
Madras Branch Secretaries.

Vishveshwarapuram Circle, *Bangalore City.* *or* Udipi, *South India.* *or* Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Malabar) who will be touring.

(25—8—33)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬. ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0 ಚ್ಯವನಪ್ರಾಶಲೇಹ ೧ ರಾತಲಿಗೆ ರೂ. 2-8-0. ಅಭಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮುಖ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0-5-0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ. 0-4-0. ಕೃಷ್ಣಾಂಕ ೧ ಔನ್ಸಿಗೆ ರೂ. 0-6-0. ಚಿತ್ರಕ (ಮಕ್ಕಳ ಗೃಹಚೇ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0. ಮಹಾ ಚಿತ್ರಕ ತೊಲೆ ೧ಕ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-0-0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 3-8-0.

ನಮ್ಮ ಔಷಧಗಳು ದೊರೆಯುವ ಸ್ಥಳ:— ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಬೈಂದೂರು—ಕೆ. ಪುತ್ತು ಶಾನಭಾಗ. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ. ಜನಾರ್ದನ ನಾಯಕ್ ಎಂಡ್ ಕೊ., ಪೈ ಫಾರ್ಮಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ವಿ. ವಿ. ಶೆಣೈ. ಕಾಪು—ಡಾಕ್ಟರ್ ಬಿ. ಕೆ. ಬೇಕಲ ಡಿಸ್ಪೆನ್ಸರಿ. ಬಟ್ಕಳ—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ವರ್ತಮಾನಕ್ಕೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli. Honnavar, Bangalore & Cannanore.

Authorised Capital Rs. 1,00,000. Subscribed Capital Rs. 1,00,000. Paid up Capital Rs. 20,000

STATEMENT OF AFFAIRS OF THE SYNDICATE AS ON 31ST September 1933.

Liabilities.		Assets.	
Paid up Capital	Rs. 20,000—0—0.	Loans on Land mortgage	Rs. 2,75,298—12—6.
Reserve & other funds	,, 20,250—0—0.	Loans on Valuable Securities	,, 2,23,792—13—5.
Deposits	,, 10,54,933—10—11.	Loans on Bills of Exchange, Hundis and Promissory Notes	4,59,985— 8—4.
Due to Bankers	,, 48,335— 7—6.	Investment on Shares of other Companies	,, 43,575— 0—0.
		On Deposits with other Bankers	,, 1,15,000— 0—0
Bills for Collection	,, 22,631— 3—7.	Bills for collection (per contra)	,, 22,631— 3—7
Sundries	,, 1,22,321—13—5.	Sundries	,, 1,14,721—4 —9.
		Cash in hand & with Bankers	,, 33,467—8—10
Total Rs.	12,88,472 · 3 — 5	Total Rs.	12,88,472 · 3 — 5

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 7-10-1933.

P. A. Pai Bros.,
Managing Agents.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ದಸ್ತಗಿರಿ!

ಕುರುಡಿಯು ಗೆದ್ದಳು.

ಕಾಲಾಂತರಲ್ಲಿ ಕೆಲವರು ವಿಚಿತ್ರ ಶಕ್ತಿಯುಳ್ಳವರಿರುತ್ತಾರೆ. ಅವರಿಗೆ ಕಣ್ಣುಗಳಿಲ್ಲವಾದರೂ ಕೆಲವರು ಕಣ್ಣುಗಳಿರುವವರಂತೆ ಕೆಲಸ ಮಾಡುವ ನಿದರ್ಶನಗಳಿವೆ. ಕುರುಡರ ಶಾಲೆಗಳಿಂದ ಬರುವ ವಾರ್ತೆಗಳು ಲೋಕ ದಲ್ಲಿ ಆಶ್ಚರ್ಯಜನಕವನ್ನಾಗಿ ಮಾಡುತ್ತವೆ. ಫ್ರೆಂಚಿನ ಸಾಸ್ ಬೋಯಸ್ ಎಂಬಲ್ಲಿ ಸಪ್ಟೆಂಬರ ೧೨ನೇ ತಾರೀಕಿನ ದಿನ ಕುರುಡ ರೊಳಗೆ ಫೋರ್ ಹೇಂಡ್ ಟೈಪ್ ರೈಟಿಂಗ್ ಸ್ಪರ್ಧೆಯು ನಡೆ ಯಿತು. ನಾನಾ ವಿಧವಾಗಿ ಟೈಪ್ ಮಾಡಲು ತಿಳಿದಿದ್ದ ಕುರುಡ ಕುರುಡಿಯರು ಸ್ಪರ್ಧೆಗೆ ನಿಂತರು. ಸ್ಪರ್ಧೆಯಲ್ಲಿ ಎಂದ್ರಿ ನೌಲೆಸ್ ಎಂಬ ತರುಣಿಯೋರ್ವಳು ಪ್ರಥಮ ಸ್ಥಾನವನ್ನು ಪಡೆದಳು. ಇವಳ ಟೈಪಿನ ವೇಗವು ಎಲ್ಲರನ್ನೂ ಬೆರಗುಗೊಳಿಸಿತು. ಅಲ್ಲದೆ ಬರೆದುದರಲ್ಲಿ ತಪ್ಪುಗಳೇ ಇರಲಿಲ್ಲ. ಕುರುಡರಿಗೆ ಕಣ್ಣುಗಳಿಲ್ಲದಿದ್ದರೂ ಅವುಗಳ ಶಕ್ತಿಯು ಮಾತ್ರ ಅವರ ಅಂಗಾಂಗಗಳಲ್ಲಿ ಹರಡಿಕೊಳ್ಳುವುದರಿಂದ ಅಂಥಹ ವಿಚಿತ್ರ ಶಕ್ತಿಗಳುಂಟಾಗುತ್ತವೆಂದು ಶೋಧನೆಯಿಂದ ತಿಳಿ ದಿದ್ದಾರೆ.

ಬಹುಮಾನ ದಾನ

ಸಪ್ಟೆಂಬರ ತಾ ೨ನೇ ದಿನ ಮಿಡ್ನಾಪುರದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ ರಾದ ಮಿ। ಬರ್ಜರನ್ನು ಗುಂಡಿಕ್ಕಿ ಕೊಂದರಷ್ಟೆ. ಆ ಸಮಯದಲ್ಲಿ ಕೊಲೆಗಾರರನ್ನು ಕೆಡವಿ ಗೆದ್ದು ಹಿಡಿದು ತಮ್ಮ ಧೈರ್ಯಪ್ರದರ್ಶನ ಮಾಡಿದ ಎಡಿಶನ್ ಸುಪರಿಂಟೆಂಡೆಂಟ್ ಒಫ್ ಪೋಲೀಸರಾದ ಮಿ। ಫಿಲಿಪ್ ನೋರ್ಟನ್ ಜೋನ್ಸ್ ಎಂಬವರಿಗೂ ಮಿ। ಚಾರ್ಲ್ಸ ಒಲಿವರ್ ಸ್ಮಿತ್ ಇನ್ಸಪೆಕ್ಟರ್ ಒಫ್ ಪೋಲೀಸ್ ಇವರಿಗೂ ಚಕ್ರವರ್ತಿಯವರ ಪೋಲೀಸ್ ಪದಕವನ್ನು ಮೊನ್ನೆ ಬಹುಮಾನಿಸಲಾಯಿತು. ಆ ದಿನ ಆಟಗಾರರು ಫುಟ್‌ಬೋಲ ಆಡುವುದಕ್ಕೆಂದು ಹೊರಡಲು ಸಿದ್ಧರಾಗು ವಾಗ ಆ ಬಂಗಾಳಿ ಯುವಕರು ಅವರಿಗೆ ಗುಂಡೆಸೆದರು. ೧೦ ಗಜಗಳ ದೂರದಲ್ಲಿರುವ ಈ ಮೇಲಿನ ಇಬ್ಬರು ಪೋಲೀಸು ಅಧಿಕಾರಿಗಳೂ ಆಟದ ಉಡುಪಿನಲ್ಲೇ ಓಡಿ ಬಂದು, ಕೊಲೆ ಪಾತಕಿಗಳು ಗುಂಡನ್ನು ಹಾರಿಸುವ ಸಿದ್ಧತೆಯಲ್ಲಿದ್ದಾಗಲೇ ಅವರ ಮೇಲೆ ಬಿದ್ದು ಬಿಟ್ಟರು. ಯುವಕರ ಕೈಯ ಗುಂಡು ನೆಲಕ್ಕೆ ಹಾರಿತು. ಇಬ್ಬರೂ ಪಾತಕಿ ಗಳನ್ನು ಹಿಡಿದರು. ತಮ್ಮ ದೇಹ ಸಂರಕ್ಷಣೆಯನ್ನು ಗಮನಿಸದೆ ಇವ ರಿಬ್ಬರೂ ಪ್ರದರ್ಶಿಸಿದ ಧೈರ್ಯಕ್ಕಾಗಿ ಈ ಪದಕಗಳು.

ಸಂಪೂರ್ಣ ಹೊಸತು

ರೈಲ್ವೇ ಲೈನುಗಳನ್ನು ಮೋಟರು ಮೊದಲಾದ ವಾಹನಗಳು ದಾಟುತ್ತಿರುವಾಗ ಆಗುವ ಅಪಘಾತಗಳನ್ನು ತಪ್ಪಿಸುವುದಕ್ಕಾಗಿ ಆಸ್ಟ್ರೇ ಲಿಯದ ಸಿಡ್ನಿ ಎಂಬಲ್ಲಿರುವ ಒಬ್ಬ ಇಂಜಿನಿಯರನು ಒಂದು ಸಂಪೂರ್ಣ ಹೊಸ ಯೋಜನೆಯನ್ನು ಕಂಡು ಹಿಡಿದಿರುತ್ತಾನೆ. ರೈಲ್ವೆಯ ಗೇಟಿನ ಬಳಿಗೊಂದು ವಿದ್ಯುದ್ದೀಪವಿರುವುದು. ವಾಹನಗಳು ಗೇಟಿನ ಒಳ ಬಂದವೆಂದೊಡನೆ ಈ ವಿದ್ಯುದ್ದೀಪವು ಜಗ್ಗನೆ ಮಿಂಚಿ ದೂರದಲ್ಲಿ ಬರುವ ರೈಲ್ವೆಗೆ ಎಚ್ಚರಿಕೆಯನ್ನು ಕೊಡುವುದು. ಈ ಎಚ್ಚರಿಕೆಯು ತಲುಪಿದೊಡನೆ ರೈಲು ನಿಲ್ಲಿಸಲ್ಪಡುವುದು. ವಾಹನವು ರೈಲುಮಾರ್ಗ ವನ್ನು ದಾಟುಹೋದೊಡನೆ ದೀಪವು ನಂದುವುದು.

ಜರ್ಮನಿಯು ಸುಮ್ಮನಿಲ್ಲ.

ಜರ್ಮನಿಯು ೧೯೧೪ರ ಘೋರಯುದ್ಧದ ಸೇಡನ್ನು ತೀರಿಸಿ ಕೊಳ್ಳಲಿದೆಯೆಂದು ವಾರ್ತೆಗಳು ಹರಡಿವೆ. ವರ್ಸೇಲ್ಸ್ ಕರಾರಿನ ಮೇರೆಗೆ ಮುಂದಕ್ಕೆ ಜರ್ಮನಿಯು ಮಿಲಿಟರಿ ವಿಮಾನಗಳನ್ನೂ, ಯುದ್ಧೋಪಕರಣಗಳನ್ನೂ ಶೇಖರಿಸಬಾರದೆಂದು ಶರ್ತವಿದೆ. ಆದರೆ ಜರ್ಮನಿಯು ಸುಮ್ಮನಿರುವುದಿಲ್ಲ. ಬರ್ಲಿನ್ ನಗರದಲ್ಲಿ ಒಂದು ದೊಡ್ಡ ವಿಮಾನ ಕಾರ್ಖಾನೆಯು ಸಿದ್ಧವಾಗಿದೆ. ವ್ಯಾಪಾರದ ನೆವನ ವನ್ನು ಮುಂದೊಡ್ಡಿ ಅವರು ಈಗ ವಿಮಾನಗಳನ್ನು ಬೇಗಬೇಗನೆ ರಚಿಸು ತ್ತಿರುವರು. ವಿಷವಾಯು, ಬಾಂಬುಗಳನ್ನು ಎಸೆಯಬೇಕೆಂದು ಅನೇಕ ಪರೀಕ್ಷೆಗಳಾಗಿವೆ. ವಿಷವಾಯುವಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮುಖ ಕವಚಗಳು ತಯಾರಾಗಿ ಪ್ರತಿಯೊಂದು ಮನೆಯಲ್ಲೂ ಇರುತ್ತವೆ. ಯುದ್ಧಶ್ರಮ, ಮಿಲಿಟರಿ ತರಬೇತಿಗಳು ಯೌವನಸ್ಥರಿಗೆ ಕೊಡಲ್ಪಡು ತ್ತಿವೆ. ಯುದ್ಧವಾಗದಿರದೆಂದು ಹೇಳಲಾಗದು.

ಜೆರೂಸಲೇಮಿನಲ್ಲಿ

ತಾ ೩೧ನೇ ಪುಟದಲ್ಲಿನ ವಾರ್ತೆಯ ಹಿಂದೆ ಜೆರೂಸ ಲೇಮಿನಿಂದ ಇನ್ನೊಂದು ವಾರ್ತೆಗಳು ಬಂದಿವೆ. ತಾ ೨೯ನೇ ಬೆಳಿಗ್ಗೆ ಡಮಸ್ಕಸ್ ಗೇಟಿನ ಬಳಿ ಭಯಂಕರ ದಂಗೆಯೆದ್ದು ಪೋಲೀಸರಿಗೂ ಜನರಿಗೂ ಮಾರಾಮಾರಿ ನಡೆಯಿತು. ಅನೇಕರು ಬಿದ್ದರು. ರಾಜ ಮಾರ್ಗ ಒಂದರಲ್ಲಿ ಅರಬಿಯರ ಅಸಂಖ್ಯಾತ ಜನರು ಸೇರಿ ಯೆಹೂದಿ ಯರ ಅಂಗಡಿಗಳಿಗೆ ನುಗ್ಗಿ ಸಾಮಾನುಗಳನ್ನು ಹುಡಿ ಮಾಡಿದರು. ಕೆಲವು ಇಂಗ್ಲಿಷರ ಅಂಗಡಿಗಳೂ ಧ್ವಂಸವಾದುವು. ಮಧ್ಯಾಹ್ನದಲ್ಲಿ ನೂರಾರು ಅರಬಿಯರು ಮಸೀದಿಯಲ್ಲಿ ಪ್ರಾರ್ಥನೆ ಮಾಡಿ ಹೊರಗೆ ಬಂದು ಜಾಫಾ ಗೇಟಿನ ಬಳಿ ಭೀಷಣ ಆಟವನ್ನು ಮಾಡಿದರು. ಪೆಲೆಸ್ತೀನದ ಕೆಲವು ಕಡೆಗಳಲ್ಲಿ ದಂಗೆಗಾರಂಭವಾಗಿದೆ. ಎಕ್ರನಲ್ಲಿ ಕೈದಿಗಳನ್ನು ಬಂದೋಬಸ್ತಿನಲ್ಲಿಟ್ಟಿರುವರು. ಅರಬಿಯರ ಕಾರ್ಯಕಾರಿ ಮಂಡಲಿಯು ಪುನಃ ಸಭೆ ಸೇರಿ ಪೋಲೀಸರ ಅತ್ಯಾಚಾರವನ್ನು ಖಂಡಿಸಿ, ಕೈದಿಗಳನ್ನು ಬಿಡಬೇಕೆಂದು ಹೇಳಿ ಅರಬಿಯ ಅರಸರಿಗೂ ಲೀಗ್ ಒಫ್ ನೇಶನ್ಸಿಗೂ ಸಂತಾಪಪತ್ರವನ್ನು ಕಳುಹಿಸಿರುತ್ತದೆ. ಡಮಸ್ಕಸ್‌ನಲ್ಲಿ ಎಲ್ಲಾ ಅರಬಿ ಪತ್ರಿಕೆಗಳು ನಿಲ್ಲಿಸಲ್ಪಟ್ಟಿವೆ.

ಬಸ್ಸು ಮರಕ್ಕೆ ಧಕ್ಕೆ ಹೊಡೆಯಿತು! 15 ಜನರಿಗೆ ವಿಶೇಷ ಜಖಂ!

ಸಾಧಾರಣ ೩ ತಿಂಗಳುಗಳ ಹಿಂದೆ ಮದುರಾ ದಿಂಡಿಗಲ್ ಮಾರ್ಗ ದಲ್ಲಿ ಒಂದು ಬಸ್ಸು ಮರಕ್ಕೆ ಧಕ್ಕೆ ಹೊಡೆದು ೯ ಜನರು ವಿಷಮಾವಸ್ಥೆ ಗೊಳಗಾದರು. ಅದೇ ತಾ ೨೩ನೇ ದಿನ ೧೫ ಜನರಿರುವ ಒಂದು ಬಸ್ಸು ಅದೇ ಮಾರ್ಗದಲ್ಲಿ ಓಡುತ್ತಿರುವಾಗ ಬ್ರೇಕಿನ ದೋಷದಿಂದಾಗಿ ಬಸ್ಸು ಥಟ್ಟನೆ ಮಾರ್ಗದ ಬದಿಗೆ ತಿರುಗಿ ಬಳಿಯ ಮರಕ್ಕೆ ಧಕ್ಕೆ ಬಡೆದು ಅದರಲ್ಲಿದ್ದ ೧೫ ಜನರು ಜಜ್ಜಲ್ಪಟ್ಟು ಘಾಯವಾಗಿ ವಿಷಮಾವಸ್ಥೆ ಯಲ್ಲಿರುವರು. ಕೆಲವರ ಅಂಗಾಂಗಗಳನ್ನು ಕಡಿಯುವ ಸ್ಥಿತಿಯೊದ ಗಿದೆ. ಬಸ್ಸು ಸಂಪೂರ್ಣವಾಗಿ ಪುಡಿ ಪುಡಿಯಾಗಿರುತ್ತದೆ. ಅದೇ ಸಮಯದಲ್ಲಿ ಅದೇ ಮಾರ್ಗವಾಗಿ ಹೋಗುತ್ತಿದ್ದ ಕಲೆಕ್ಟರರು ಜಖಂ ಗೆ ಒಳವರನ್ನು ಆಸ್ಪತ್ರೆಗೊಯ್ಯುವ ಏರ್ಪಾಡನ್ನು ಮಾಡಿದರು.

ರಷ್ಯಾದೇಶದಲ್ಲಿನ ದೇವಾಲಯಗಳು.

ಅಲ್ಲಿ ಸೋವಿಯಟ್ ಸರಕಾರದ ಪ್ರಾಂತ್ಯಗಳಲ್ಲಿ ೧೯೧೭ರಲ್ಲಿ ೩೧೪ ಕಥೋಲಿಕ್ ದೇವಾಲಯಗಳೂ, ೫೮೧ ಚಿಕ್ಕ ಚೇಪಲ್‌ಗಳೂ, ೪೧೦ ಮಂದಿ ಗುರುಗಳೂ ಇದ್ದರು. ಈಗ ೧೮೩ ದೇವಾಲಯಗಳೂ ೧೧೦ ಗುರುಗಳೂ ಮಾತ್ರ ಇರುತ್ತಾರೆ. ಮಿಕ್ಕುಳಿದ ದೇವಾಲಯಗಳು ಧ್ವಂಸಮಾಡಲ್ಪಟ್ಟಿವು. ೨೦೦ ಮಂದಿ ಪಾದ್ರಿಗಳು ಸೆರೆಮನೆಯಲ್ಲಿರು ತ್ತಾರೆ. ೧೯೧೭ರಲ್ಲಿ ಈ ಪ್ರಾಂತದಲ್ಲಿ ೭ ಗುರುಮಠಗಳು ಇದ್ದುವು. ಈಗ ಎಲ್ಲವೂ ಮುಚ್ಚಲ್ಪಟ್ಟಿವೆ. ೧೯೧೯ರಲ್ಲಿ ೮ ಮಂದಿ ಮೇತ್ರಾಣಿ ಗಳಿದ್ದಲ್ಲಿ ಈಗ ಇಬ್ಬರು ಮಾತ್ರ ಇರುತ್ತಾರೆ. ಇವರಲ್ಲಿ ಮೂವರು ಸೆರೆಮನೆಯಲ್ಲಿರುತ್ತಾರೆ. ೧೯೩೭ರ ಒಳಗೆ ಎಲ್ಲಾ ದೇವಾಲಯಗಳು ರಷ್ಯದಲ್ಲಿ ನಾಶವಾಗಬೇಕೆಂದೂ ೧೯೩೭ರಲ್ಲಿ ದೇವರನ್ನೂ ಸತ್ಯವೇದ ವನ್ನೂ ರಷ್ಯಾದೇಶದಿಂದ ದೂರಕ್ಕೆ ಓಡಿಸಬೇಕೆಂದೂ ಅಲ್ಲಿಯ ಸರಕಾ ರವು ತೀರ್ಮಾನಿಸಿದೆ.

ಸಾಹಿತ್ಯ ಸಂಚಿಕೆಯು

ತಾ 10—11—33ನೇ ಸಂಚಿಕೆಯೊಡನೆ

ಹೊರಡುವುದು.—ಮೆನೇಜರ, ಸ್ವ

ಇನ್ನು ಎಷ್ಟು ಜನರು ಒಳಗಿರುವರು?

ಸರಕಾರದ ಪ್ರಕಟಣೆಯಂತೆ—ಬ್ರಿಟಿಷ ಇಂಡಿಯಾದಲ್ಲಿ ಒಟ್ಟು ೩೧೩೯ ಜನ ಶಾಸನೋಲ್ಲಂಘನೆ ಮಾಡಿದ ಕೈದಿಗಳು ಸಪ್ಟೆಂಬರ ತಿಂಗ ಳಲ್ಲಿ ಕಡಿಮೆಯಾದರು. ಆಗೋಸ್ತು ತಿಂಗಳಲ್ಲಿ ೪೫೩೮ ಕೈದಿಗಳು ಸೆರೆಯಲ್ಲಿದ್ದರು. ಸಪ್ಟೆಂಬರದಲ್ಲಿ ಈ ಸಂಖ್ಯೆಯು ೪೩೯೯ಕ್ಕೆ ಒಂದು ನಿಂತಿತು. ಮುಂಬಾಯಿಯಲ್ಲಿ ೧೯೮ ಮಂದಿಗಳು ಸೆರೆಮನೆಯಿಂದ ಹೊರಗಾದರು. ಬಂಗಾಳದಲ್ಲಿ ೭೮ ಗಡಿನಾಡಿನಲ್ಲಿ ೧೯೩ ಜನರು ಸಂಯುಕ್ತ ಪ್ರಾಂತ್ಯ, ಬಿಹಾರ್, ಒರಿಸ್ಸಾ, ಪಂಜಾಬಿನಲ್ಲಿ ೪೯ ೧೦೯, ೧೪೯೦ ಕೈದಿಗಳು ಹೆಚ್ಚಿದರು. ಆಗೋಸ್ತು ತಿಂಗಳಾದಿಯಲ್ಲಿ ವೈಯಕ್ತಿಕ ಶಾಸನೋಲ್ಲಂಘನಾ ಚಳವಳವು ಜಾರಿಗೆ ಬಂದುದೇ ಇದಕ್ಕೆ ಕಾರಣವಾಯಿತು. ಕಳೆದ ವರ್ಷದ ಸಪ್ಟೆಂಬರದಲ್ಲಿ ೧೬,೮೫೮ ಜನರು ಕೈದಿಗಳಾಗಿದ್ದರು. ಈಗ ಅವರ ಸಂಖ್ಯೆಯು ೧೫ ಸಾವಿರಕ್ಕೆ ಇಳಿಯಿತು. ಒಟ್ಟು ೨೧೩ ಸ್ತ್ರೀಯರು ರಾಜಕೀಯ ಕೈದಿಗಳಾಗಿ ಅಲ್ಲಲ್ಲಿಯ ಸೆರೆ ಯಲ್ಲಿರುವರು. ಕಳೆದ ತಿಂಗಳಿಗಿಂತ ಸಪ್ಟೆಂಬರಕ್ಕೆ ಅವರ ಸಂಖ್ಯೆಯು ೨೭ ಕಡಿಮೆಯಾಯಿತು.

ಜರ್ಮನಿಯಲ್ಲಿನ ಶಾಸ್ತ್ರಜ್ಞರು

ಜರ್ಮನಿಯ ಕೆಲವು ವಿಶ್ವವಿದ್ಯಾಲಯಗಳ ಅಧ್ಯಾಪಕರೂ ಶೋಧನಕಾರರೂ ಒಟ್ಟು ೬೦೦ ಮಂದಿಗಳು ಅಲ್ಲಿಯ ಸರಕಾರದಿಂದ ಬಲಾತ್ಕಾರವಾಗಿ ಉದ್ಯೋಗದಿಂದ ತಳ್ಳಲ್ಪಟ್ಟಿರುವರು. ಇವರು ಈಗ ತಮಗೆ ಅಲ್ಲಿ ಯಾವ ಗತಿಯೂ ತೋರದೆ ಹಿಂದೂಸ್ಥಾನಕ್ಕೆ ಬರಲು ಯತ್ನ ಮಾಡುತ್ತಿರುವರು. ಸರ್ ಸಿ. ವಿ. ರಾಮನ್ ಇವರಿಗೆ ಈ ೬೦೦ ಮಂದಿಗಳ ಒಂದು ಮನವಿಯು ಬಂದಿರುತ್ತದೆ. ತಮಗೆ ಹೇಗಾದರೂ ಮಾಡಿ ಹಿಂದೂಸ್ಥಾನದ ಶೋಧನಾಲಯಗಳಲ್ಲಾಗಲೀ ವಿಶ್ವವಿದ್ಯಾಲಯ ಗಳಲ್ಲಾಗಲೀ ಉದ್ಯೋಗಗಳನ್ನು ಕೊಡಿಸಬೇಕಾಗಿ ಬೇಡಿರುವರು. ಈ ವಿದ್ವಾಂಸರಿಗೆ ಸಹಾಯವನ್ನೀಯುವುದಕ್ಕಾಗಿ ಸ್ವಿಟ್ಜರ್‌ಲೇಂಡ್ ಪ್ರಾಂತದಲ್ಲೊಂದು ವಿದ್ಯಾಲಯವನ್ನು ಸ್ಥಾಪಿಸುವರೆಂದು ತಿಳಿಯಲಾ ಗಿದೆ.

++++

ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಕಳೆದ ತಾ ೨೦ನೇ ದಿನ ಮಡಿಕೇರಿ ಬೋರ್ಡು ಆಫೀಸಿನಲ್ಲಿ ನಡೆಯಿತು. ರಾವ್ ಸಾಹೇಬ್ ಪಿ ಚಂಗಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಬೋರ್ಡಿನ ಕಾರ್ಯ ಕ್ರಮವನ್ನು ಪ್ರಾರಂಭಿಸುವ ಮೊದಲು ಮಿ। ರಾಮಶೆಟ್ಟಿ ಯವರು ಬೋರ್ಡಿನ ಪ್ರೆಸಿಡೆಂಟರಿಗೆ ಸರಕಾರದವರು ರಾವ್ ಸಾಹೇಬ್ ಬಿರುದನ್ನು ಕೊಟ್ಟದ್ದಕ್ಕೆ ಬೋರ್ಡಿನ ವಂದನೆಯನ್ನು ಸರಕಾರದವರಿಗೆ ತಿಳಿಸುವಂತೆ ಪ್ರೆಸಿಡೆಂಟರನ್ನು ಕೇಳಿಕೊಳ್ಳುತ್ತೇನೆಂದರು. ಮಿ। ಟಿಪ್ಪಿಂಗ್ ಮತ್ತು ರಾವ್ ಬಿ ಶ್ರೀಪತಿರಾಯರೂ ಒತ್ತಾಸೆಯಾಗಿ ಮಾತಾಡಿದರು. ಬೋರ್ಡಿನ ಮೆಂಬರರಾದ ಮಿ। ಎಂ ರಸೂಲ್ ಖಾನರವರು ಮೃತ ಪಟ್ಟದ್ದಕ್ಕಾಗಿ ಬೋರ್ಡಿನವರ ವ್ಯಸನವನ್ನು ಅವರ ಕುಟುಂಬಕ್ಕೆ ತಿಳಿಸ ಬೇಕೆಂಬ ಠರಾವನ್ನು ಶ್ರೀ ರಾಮಶೆಟ್ಟಿಯವರು ಸಭೆಯ ಮುಂದಿಟ್ಟರು. ಎಲ್ಲರೂ ಎದ್ದು ನಿಂತು ಠರಾವನ್ನು ಪಾಸುಮಾಡಿದರು. ೧೯೩೩–೩೪ ರಲ್ಲಿ ಫ್ರೇಜರ ಪೇಟೆಯಲ್ಲಿ ಪ್ಲೇಗು ಇದ್ದುದರಿಂದ ಟೋಲ್ ಗೇಟ್ ಕಂಟ್ರೈಕ್ಟುದಾರನಿಗೆ ರೂ ೩೦೦ ರಿಮಿಷನ್ ಕೊಡಬೇಕೆಂದು ಅಸಿಸ್ಟೆಂಟ್ ಕಮಿಶನರು ಬರೆದ ಕಾಗದ ಓದಲಾಗಿ ಚರ್ಚೆಯಿಂದ ರೂ. ೧೫೦ ರಿಮಿಶನ್ ಕೊಡುವಂತೆ ತೀರ್ಮಾನವಾಯಿತು.

ಸ್ವೀಕಾರ

ಮಹಾತ್ಮಾ ಗಾಂಧಿ ಬೆಳಗಾಂವಿಯ ಕುಂಟೆರ ಕಂಡದ ಒಂದಾಣೆ ಮಾಲೆಯ ಬಹುಮಾನ ಪುಸ್ತಕ. ಮಕ್ಕಳ ಸಲುವಾಗಿ ಬರೆಯಲ್ಪ ಟ್ಟಿದು ಬೆಲೆ ನಾಲ್ಕಾಣೆ ಬಿಡಿಸುಡಿಯಿಂದ ರಸಯುಕ್ತ ಭಾವಭಂತವಾಗಿ ಬರೆಯಲ್ಪಟ್ಟಿದು. ಇದರಿಂದ ಕಥಾಕುಂಜವೆಂಬ ಮಾಸಿಕ ಪತ್ರಿಕೆ ಯು ಹೊರಡಲಿದೆ. ಕನ್ನಡಿಗರು ನೆರವಾಗಲಿ.

ಖಾದಿಯೇ ಬಡವರ ಕಾಮಧೇನು. ನೂತನ ಸಾಮಾಜಿಕ ನಾಟಕ. ಲೇಖಕರು ಶ್ರೀ ಎಂ ಡಿ ಆಳ್ವಾರ್ ಅಯ್ಯಂಗಾರ್ ಕ್ರಯ ಎರಡಾಣೆ. ಚಲೋ ಪುಸ್ತಕ. ಎಲ್ಲರೂ ಓದಿ ಖಾದೀ ಸೇವೆ ಮಾಡುವಂತಾಗಲಿ. ಶ್ರೀ ರಾಮ ಸೇವಾ ಭಕ್ತ ಮಂಡಲಿ ಮಲ್ಲೇ ಶ್ವರಂ ಬೆಂಗಳೂರು ಪ್ರಕಾಶಕರು.

ನೋಟೀಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟನಲ್ಲಿ

O S No 197/1933

ಯಸ್ ಯು ನಾರಾಯಣಾಚಾರ್ಯ—ವಾದಿ

ಮತ್ತು

ತಿಮ್ಮ ಪೂಜಾರಿ ಕೂಡಾ—ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ ಸಪ್ಲಿಮೆಂಟ 4ನೇ ಪ್ರತಿವಾದಿ ದುರ್ಗಿ ಪೂಜಾರ್ತಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಯವರಿಗೆ 1–2ನೇ ಪ್ರತಿವಾದಿರು ಚಾಲಗೇಣಿ ಹಕ್ಕಿ ನಿಂದ ಅನುಭವಿಸುವ ಆಸ್ತಿಯ ಸ್ವಾಧೀನತೆಗೂ ಗೇಣಿ ಬಾಕಿಗೆ ಕೂಡಾ ದಾಕಲು ಮಾಡದ ಸದ್ರಿ ವ್ಯಾಜ್ಯದಲ್ಲಿ 1ನೆ ಪ್ರತಿವಾದಿ ಮೃತಪಟ್ಟದರಿಂದ 3, 4, 5, 6ನೇ ಪ್ರತಿವಾದಿರನ್ನು ಸಪ್ಲಿಮೆಂಟ ಪ್ರತಿಕಕ್ಷಿ ಕೊಡಿಸಬೇಕಾಗಿ ವಾದಿ ಕೊಟ್ಟ R I A. 1015 33ನೇ ಅರ್ಜಿ ವ ಸದ್ರಿ ವ್ಯಾಜ್ಯ ವಿಚಾರಣಾ 11–11–33 ಕ್ಕೆ ತಪ್ಪಿಗೆ ಇಟ್ಟಿದೆ. ಈ ದಿವಸ ಹಗಲು 10 ಗಂಟೆಗೆ ಸಪ್ಲಿಮೆಂಟ 4ನೇ ಪ್ರತಿವಾದಿರು ದುರ್ಗಿ ಪೂಜಾರ್ತಿ ಆಕ್ಷೇಪ ಇದ್ದರೆ ಸ್ವತಃ ಯಾ ಪ್ಲೀಡರರ ಮೂಲಕ ಹಾಜರಾಗಿ ಕೋರ್ಟು ಮುಂದೆ ಆಕ್ಷೇಪಿಸಿಕೊಳ್ಳತಕ್ಕದ್ದು. ತಪ್ಪಿದರೆ ಅವರ ಗೈರುಹಾಜರಿ ಯಿಂದ ತೀರ್ಮಾನಿಸಲ್ಪಡುವದೆಂದು ಎಂಬ ಸಂಗ್ತಿ ಈ ಮೂಲಕ ತಿಳಿಸಿದೆ.

ಉಡುಪಿ
೨೮–೧೦–೩೩

M Vittal Kamath,
Vakil for Plaintiff

++ ++

ಬೇಕಾಗಿದೆ.

ಮನೆಯಲ್ಲಿ ಕೆಲವು ಬಾಲಕಿ ಮ ಬಾಲರಿಗೆ ಇಂಗ್ಲೀಷ್, ಕನ್ನಡ ಮತ್ತು ಹಿಂದಿಯಲ್ಲಿ ಖಾಸಗಿ ಪಾಠಗಳನ್ನು ಹೇಳಿ ಕೊಡು ವರೆ ಅನುಭವಸ್ಥ ಉಪಾಧ್ಯಾಯ, ಮ ಉಪಾಧ್ಯಾಯಿನಿಯು ಚುನಾಯಿಸಲ್ಪಟ್ಟವರಿಗೆ ಧರ್ಮಾರ್ಥ ಊಟದ ಮತ್ತು ವಾಸದ ಅನುಕೂಲತೆಗಳುಂಟು. ಉಮೇದ್ವಾರರು ಯೋಗ್ಯತಾ ಪತ್ರ ಗಳೊಂದಿಗೆ ಕನಿಷ್ಟಮಿತಿಯಿಂದ ತಿಂಗಳೊಂದರ ಎಷ್ಟು ಸಂಬಳ ಸಿಕ್ಕಬೇಕೆಂಬದನ್ನು ಸೂಚಿಸಿ ಕೆಳಗಿನ ವಿಳಾಸಕ್ಕೆ ಅರ್ಜಿಗಳನ್ನು ಬರೆದುಕೊಳ್ಳಬಹುದು.

ಕಂಜರ್ಪಣೆ ಗೋಪಾಲಕೃಷ್ಣಯ್ಯ,
ಸುಳ್ಯ ಪೋಸ್ಟ್, ದಕ್ಷಿಣ ಕನ್ನಡ

[illegible]

([illegible])

ತಾರೀಕು	ವಾರ	[illegible]	[illegible]	[illegible]	[illegible]	[illegible]	ಸೂರ್ಯ ಉ	ಸೂರ್ಯ ಅ
4	ಶನಿ	[illegible]	[illegible]	[illegible]	[illegible]	[illegible]	6.26	6. 6
5	ರವಿ	[illegible]	[illegible]	[illegible]	[illegible]	[illegible]	6.25	6. 5
6	ಸೋಮ	[illegible]	[illegible]	[illegible]	[illegible]	[illegible]	6 25	6 5
7	ಕುಜ	[illegible]	[illegible]	[illegible]	[illegible]	[illegible]	6.25	6. 4
8	ಬುಧ	[illegible]	[illegible]	[illegible]	[illegible]	[illegible]	6.25	6. 4
9	ಗುರು	[illegible]	[illegible]	[illegible]	[illegible]	[illegible]	6.26	6. 3
10	ಶುಕ್ರ	[illegible]	[illegible]	[illegible]	[illegible]	[illegible]	6 26	6 3

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಶಾಖ) Maximum ಹೆಚ್ಚಿನ	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
26	85— 6	72— 2	0—15	—
27	83— 7	72— 3	0—20	—
28	84— 6	73— 8	—	—
29	87— 2	73— 9	—	—
30	88— 3	74— 9	—	—
31	89— 9	74— 1	0—02	—
1	90— 2	77— 2	—	158—22

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ ...	3— 6	3— 8
ಮುಸ್ಕ್ರಿ ...	5— 4	5—12
ಗುಡ್ಡ ...	4— 4	5— 0
ಸುಗ್ಗಿ ...	4— 4	4—14
ಊರ ಅವ್ವಲ್ ಬೆಲ್ಲಿಗೆ ...	4—10	5— 4
ನಂಗೂಡು ಬೆಳ್ತಿಗೆ ಗೋಣಿ ಒಕ್ಕೆ ...	5—12	6— 8
ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ ...	4— 0	4— 4
ಗೋಧಿ ಗೋಣಿ ಒಕ್ಕೆ ...	11— 8	12— 8
ತೊಗರಿ ಗೋಣಿ ಒಕ್ಕೆ ...	9— 8	12— 0
ಹುರುಳಿ ಗೋಣಿ ಒಕ್ಕೆ ...	5—10	5—12
ಕಡಲೆ ಗೋಣಿ ಒಕ್ಕೆ ...	9— 8	12— 8
ಕೊಗಂಬೇಳೆ ಗೋಣಿ ಒಕ್ಕೆ ...	10— 8	18— 0
ಉದ್ದು ಗೋಣಿ ಒಕ್ಕೆ ...	8— 8	9— 0
ಹೆಸರು ಗೋಣಿ ಒಕ್ಕೆ ...	8— 0	9— 0
ಊರುಬೆಲ್ಲ ಖಂಡಿ ಒಕ್ಕೆ ...	31— 8	40— 0
ಉಪ್ಪು ಗೋಣಿ ಒಕ್ಕೆ ...	5— 8	5—12
ಕೊಬ್ರಿ ಖಂಡಿ ಒಕ್ಕೆ ...	52— 0	65— 0
ಕೊಬ್ರಿ ಹಿಂಡಿ ಖಂಡಿ ಒಕ್ಕೆ ...	16— 8	17— 0
ಎಳ್ಳಿಂಡಿ ಖಂಡಿ ಒಕ್ಕೆ ...	20— 0	21— 4
ಕೊಬ್ರಿ ಎಣ್ಣೆ ಮುಡಿ ಒಕ್ಕೆ ...	3— 7	4— 6
ಎಳ್ಳೆಣ್ಣೆ ಮುಡಿ ಒಕ್ಕೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕೆ ...	7— 4	8—12
ಮೋರಿಸ ಸಕ್ಕರೆ ಮುಡಿ ಒಕ್ಕೆ ...	3—15	4— 0
ಹೊಸ ಮೆಣಸು ...	7— 0	8— 8
ಸಾಸಿವೆ ಮುಡಿ ಒಕ್ಕೆ ...	5— 0	5— 4
ಕಾಳುಮೆಣಸು ಖಂಡಿ ಒಕ್ಕೆ ...	140— 0	160— 0
ಮೆಂತ್ಯೆ ಮುಡಿ ಒಕ್ಕೆ ...	19— 0	22— 8
ಜೀರುಜೀಗೆ ಮುಡಿ ಒಕ್ಕೆ ...	3— 0	3— 2
ಕಲ್ಲುಪ್ಪು ಖಂಡಿ ಒಕ್ಕೆ ...	35— 8	40— 5
ನಾಂಡ್ಯ ಒಣಗಿದ ಮುಡಿ ಒಕ್ಕೆ ...	10— 0	10— 8
ನಾಂಡ್ಯ ಪಾತ್ರಗಳು ಮುಡಿ ಒಕ್ಕೆ ...	13— 8	14— 8
ಜೀರಿಗೆ ಸೇರು ಒಕ್ಕೆ ...	14—12	15— 0
ಒಣ್ಣ ಕೊತ್ತು ಮುಡಿ ಒಕ್ಕೆ ...	9— 0	9— 8
ಹುಣಸೆ ಒಕ್ಕೆ ...	20— 0	20— 8
ಹುರಿಕಿ ಹುಳಿ ಖಂಡಿ ಒಕ್ಕೆ ...	35— 0	45— 0
ಪ್ಲಾಂಟೇಶನ್ ಕಾಫಿ ಖಂಡಿ ಒಕ್ಕೆ ...	200— 0	250— 0
ಚೆರೀ ಕಾಫಿ ಖಂಡಿ ಒಕ್ಕೆ ...	260— 0	270— 0
ಹಳೆ ಅಡಿಕೆ ...	130— 0	140— 0
ಹೊಸ ಅಡಿಕೆ ...	120— 0	130— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆಂದರೆ ಪ್ರತಿದಿನವೂ ನಾಲ್ಕು ಸಾರಿ ಉಡುಪಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಉಚಿತ ಪಾರ್ಟೀ ಕಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಲ್ಲಿ ನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲುಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಪ್ರಡಹೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲಕ್ಕ ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ಬೇಲೂರಿಗೆ, ಸುಬ್ರಹ್ಮಣ್ಯಕ್ಕೆ.

ಕಿಫಾಯತಿನ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಕೊಳ್ಳಿರಿ.

ನವಯುವಕರ ಸಂಘದ ವಿಶಂತಿ.

ಅಜಮೀರದಿಂದ ಬರೆದು ಬಂದುದು.

ತಾರೀಖು ತಾ. ೧೫—೧೧—೩೩.

ಅಜಮೀರದಲ್ಲಾಗುತ್ತಿರುವ ದಯಾನಂದ ನಿರ್ವಾಣ ಅರ್ಧ ಶತಾಬ್ದಿ ಉತ್ಸವಕ್ಕೆ ಲಾಹೋರಿನ "ನವಯುವಕ ಹಿಂದೂ ಸಂಘ"ದವರು ಈ ಕೆಳಗಿನಭಿಪ್ರಾಯದ ಒಂದು ಪ್ರಾರ್ಥನಾಪತ್ರವನ್ನು ರವಾನಿಸಿರುವರು

"ನವಯುವಕ ಹಿಂದೂ ಸಂಘ"ದ ಸದಸ್ಯರೆಲ್ಲರೂ ದೇಶದ ಸಮಸ್ತ ಮುಖಂಡರ ಧ್ಯಾನವನ್ನು ಭಾರತ ವರ್ಷದಲ್ಲಿ ನಿರುದ್ಯೋಗಿ ಹಿಂದೂ ನವಯುವಕರ ಕಡೆಗೆ ಇಡಬೇಕೆಂದು ಇಚ್ಛಿಸುತ್ತಾರೆ ಹಿಂದೂ ಜಾತಿಯಲ್ಲಿ ನವಯುವಕರು ನಿರುದ್ಯೋಗಿಗಳಾಗಿರುವಷ್ಟು ಬೇರೆ ಯಾವ ಜಾತಿಯಲ್ಲಿಯೂ ಇಲ್ಲ ಒಂದುವೇಳೆ ಶಿಕ್ಷಣ ಪದ್ಧತಿಯಲ್ಲಿ ಸ್ವಲ್ಪ ಪರಿವರ್ತನೆ ಮಾಡಿದರೆ ನಿರುದ್ಯೋಗ ಸಮಸ್ಯೆಯು ದೂರವಾಗುತ್ತದೆ. ಈ ಬಗ್ಗೆ ಆರ್ಯಸಮಾಜವು ಸರ್ವತ್ರವೂ ಪ್ರಯತ್ನವನ್ನು ಮಾಡಿ ನವ ಯುವಕರ ನಿರುದ್ಯೋಗನಿವಾರಣೆಗೆ ಅಲ್ಲಲ್ಲಿ ಸಂಸ್ಥೆಗಳನ್ನು ತೆರೆದು ಯಾವುದಾದರೊಂದು ವೃತ್ತಿಯನ್ನು ಯುವಕರಿಗೆ ಕಲಿಸುವ ಏರ್ಪಾಡು ಮಾಡಬೇಕು.

ಹಿಂದೂಗಳ ಶಾರೀರಿಕ ಶಕ್ತಿಯು ದಿನೇ ದಿನೇ ಕ್ಷೀಣಿಸುತ್ತಿದೆ ಅಜಮೀರದಲ್ಲಿ ಏಕತ್ರಿತರಾಗುವ ನಮ್ಮ ಹಿಂದೂ ಮುಖಂಡರಲ್ಲಿ ನಾವು ಕೇಳಿಕೊಳ್ಳುವುದೇನೆಂದರೆ ಹಿಂದೂಗಳ ಶಾರೀರಿಕ ಶಕ್ತಿಯ ವೃದ್ಧಿಗೂ ಯಾವುದಾದರೊಂದು ಉತ್ತಮ ಉಪಾಯವನ್ನು ಮಾಡಬೇಕು ನಮ್ಮ ಧಾರ್ಮಿಕ ಪ್ರಚಾರಕಾರ್ಯವು ದೇಶದಲ್ಲಿಯೂ ವಿದೇಶದಲ್ಲಿಯೂ ಬಹಳ ನಿಧಾನವಾಗಿ ಆಗುತ್ತಿದೆ. ಈ ಕಾರ್ಯವನ್ನು ಇನ್ನಷ್ಟು ತೀವ್ರ ರೀತಿಯಿಂದ ಮುಂದೊತ್ತಬೇಕು"

ಹಿಂದೂ ಮಹಾಸಭೆ.

"ಹಿಂದೂ ಸೇವಾಸಂಘ"ಕ್ಕೆ ಅಪೂರ್ವದಾನ

ಅಜಮೀರ್, ಒಕ್ಟೋಬರ ೩೦ ೧೬

ಹಿಂದೂ ಮಹಾಸಭೆಯ ನಿನ್ನೆಯ ಅಧಿವೇಶನದಲ್ಲಿ ೧೪ ಪ್ರಾಮುಖ್ಯ ಠರಾವುಗಳು ಮಂಜೂರಾದವು ಈ ಠರಾವುಗಳ ಮೂಲಕ ಶುದ್ಧಿ ಮತ್ತು ಸಂಘಟನೆಯ ಕಾರ್ಯವನ್ನು ಪುನಃ ಸಮರ್ಥಿಸಲಾಯಿತು "ಅಖಿಲ ಭಾರತ ಹಿಂದೂ ಸೇವಾಸಂಘ"ವನ್ನು ಸ್ಥಾಪಿಸುವ ಠರಾವೂ ಮಂಜೂರಾಯಿತು ಇದರ ಮುಖ್ಯ ಕಾರ್ಯಾಲಯವು ದಿಲ್ಲಿಯಲ್ಲಿರುವುದು ಹಿಂದೂ ಮಹಾಸಭೆಯ ಉದ್ದೇಶಗಳನ್ನು ಪ್ರಚಾರ ಮಾಡುವುದು ಇದರ ಮುಖ್ಯ ಉದ್ದೇಶವಾಗಿರುವುದು ಈ ಸಂಘಕ್ಕೆ ಕೆಳಗೆ ಹೆಸರು ಕಾಣಿಸಿದ ಮಹನೀಯರು ಅಪೂರ್ವವಾದ ದಾನವ ನ್ನಿತ್ತರು

೧	ಭಾಯಿ ಪರಮಾನಂದ ಎಮ್ ಎ ರೂಪಾಯಿ		೩೫,೦೦೦
೨	ಶ್ರೀಯುತ ಜುಗಲ್ ಕಿಶೋರ್ ಬಿರಲಾ	,,	೧೦,೦೦೦
೩	ರಾಯ್ ಬಹದ್ದೂರ್ ಸೇವಕರಾಮ್	,	೨೦೦೦
೪	ಶ್ರೀ ನಾನಕಚಂದ	,,	೧೦೦೦
೫	ಶ್ರೀಯುತ ನಾರಂಗ	,,	೧೦೦೦
೬	ರಾಜಾ ನರೇಂದ್ರನಾಥ	,	೧೫೦೦
೭	ಕೇಪ್ಟನ್ ಭಂಡಾರಿ	,,	೫೦೦
೮	ಶ್ರೀ ಭಗವಾನ್‌ದಾಸ್ ಅಪ್ಟೀ	,,	೫೦೦
೯	ಇನ್ನೊಬ್ಬ ಮಹನೀಯರು	,	೫೦೦
	ಇತರ ಚಿಲ್ಲರೆ ವಂತಿಗೆ ಮಾಡಿ	,	೧೦೦೦

ಈ ಪ್ರಕಾರ ೫೩,೦೦೦ ರೂಪಾಯಿಗಳು ನರೆದ ಸಭೆಯಲ್ಲಿಯೇ ಶೇಖರಿಸಲ್ಪಟ್ಟವು

ಬರುವ ಅಧಿವೇಶನವು ಲಖನೌವಿನಲ್ಲಿ.

ಹಿಂದೂ ಮಹಾಸಭೆಯ ಬರುವ ಅಧಿವೇಶನವು ಆಗ್ರಾ ಅಥವಾ ಲಖನೌವಿನಲ್ಲಿ ಸೇರುವುದು ನವೀನ ಕಾರ್ಯಕಾರಿಣೀ ಸಮಿತಿಯಲ್ಲಿ ಈ ಕೆಳಗಿನ ಮಹನೀಯರು ಆರಿಸಲ್ಪಟ್ಟಿದ್ದಾರೆ—೧ ಉಪಾಧ್ಯಕ್ಷರು ಡಾ. ಮುಂಜೆ, ೨ ರಾಜಾ ನರೇಂದ್ರನಾಥ, ೩ ರಮಾನಂದ ಚಟರ್ಜಿ, ೪ ಡಾ। ರಾಧಾಕುಮುದ ಮುಖರ್ಜಿ, ೫ ಎನ್ ಸಿ ಕೇಳ್ಕರ್

ಪ್ರಧಾನ ಕಾರ್ಯದರ್ಶಿಯವರು—೧ ಶ್ರೀ ಪದ್ಮರಾಜ ಜೈನ್, ೨. ಶ್ರೀ ಜಗತನಾರಾಯಣಲಾಲ್, ೩ ಗೌರಿಶಂಕರ ಮಿಶ್ರ,

ಆಫೀಸು ಸೆಕ್ರೆಟರಿ—೧. ಶ್ರೀ ಗಣಪತಿರಾಯ, ೨ ಜ್ಯೋತಿಶಂಕರ ದೀಕ್ಷಿತ ಕೋಶಾಧಿಕಾರಿ—ಶ್ರೀಯುತ ನಾರಾಯಣ ದತ್ತ ಇವರ ಹೊರತು ಪ್ರಮುಖ ಮುಖಂಡರಲ್ಲಿ ೧೨ ಮಂದಿ ಆರಿಸಲ್ಪಟ್ಟಿರುವರು.

ಕಲ್ಕತ್ತಾ ಸಮಾಚಾರ.

ತಾ. ೧೪ ಮತ್ತು ೧೯ನೇ ಒಕ್ಟೋಬರ

ಭವಾನಿಪುರ ಆರ್ಯಸಮಾಜದಲ್ಲಿ ಋಷಿ ದಯಾನಂದರ ನಿರ್ವಾಣೋತ್ಸವವು ಇಲ್ಲಿಯ ಪ್ರಸಿದ್ಧ ಮುಖಂಡರೂ ದಾನಶೂರರೂ ಆಗಿರುವ ಸರ್, ಭಾಊರಾಮ ಚೌಧುರಿಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಲ್ಲಿ ಜರಗಿತು.

ಸಮಾಜದ ಪ್ರಧಾನರಾದ ಎಸ್ ಎಲ್. ಪುರಿ ಮೊದಲಾದವರೂ ಇತರ ಮಹನೀಯರಾದ ಪ್ರೊ। ರಮೇಶಚಂದ್ರ ಬೆನರ್ಜಿ ಎಮ್ ಎ, ಪಿ ಹಂಸರಾಜ ಎಮ್ ಎ ಎಲ್. ಎಲ್. ಬಿ, ಪಂಡಿತ ರಾಮ್ ಮುಂತಾದ ಮಹನೀಯರೂ (ಆರ್ಯಸಮಾಜವು ೫೦ ವರ್ಷದಲ್ಲಿ ಮಾಡಿದ ಕಾರ್ಯಗಳನ್ನು ವಿವರಿಸಿ ದೇಶದ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಂದಕ್ಕೆ ಸಮಾಜವು ಕೈಕೊಳ್ಳತಕ್ಕ ಕಾರ್ಯಗಳನ್ನು ಚೆನ್ನಾಗಿ ವಿಶದಗೊಳಿಸಿದರು. ಮಧ್ಯೆ ಮಧ್ಯೆ ಭಜನೆ ಕಾರ್ಯಕ್ರಮ ಮತ್ತು ಲಕ್ಷ್ಮೀದೇವಿ ವಿದ್ಯಾರ್ಥಿಯವರ ಭಾಷಣಗಳೂ ಆದುವು.

ಆರ್ಯಮಿತ್ರ.

ಉಪಾಧ್ಯಾಯರ ಗ್ರೇಡುಗಳೂ, ಇಲಾಖೆಯ ವಿವಿಧ ಹುಕುಮುಗಳೂ.

ಟ್ರೈನಿಂಗ್ ಆದ ಅಧ್ಯಾಪಕರು ಲೋವರ್ ಗ್ರೇಡಿನಿಂದ ಹಾಯರಿಗೂ, ಹಾಯರ್ ಗ್ರೇಡಿನಿಂದ ಸೆಕೆಂಡ್ರಿಗೂ, ತಮ್ಮ ಗ್ರೇಡಿನಲ್ಲಿ ಭಡ್ತಿ ಹೊಂದುವಂತೆ ಯಾವುದಾದರೊಂದು ವಿಧದ ಏರ್ಪಾಡನ್ನು ಕಲ್ಪಿಸಿ ಕೊಡಬೇಕಾಗಿ ನಾವು ಹಲವು ವರ್ಷಗಳಿಂದ ಸರಕಾರಕ್ಕೆ ಮೊರೆ ಇಡುತ್ತಿದ್ದೆವು. ಅದರ ಫಲರೂಪವಾಗಿ ಮಾನ್ಯ ಡೈರೆಕ್ಟರ್ ಧೊರೆಗಳವರು ಲೋವರ್ ಟ್ರೈನ್ಡ್ ಆದ ಉಪಾಧ್ಯಾಯರು ಆನೇ ದರ್ಜೆಯಲ್ಲಿ ಒಂದು ವರ್ಷ ವಿದ್ಯಾರ್ಜನೆಯನ್ನು ಮಾಡಿ ಡಿಪ್ಯುಟಿ ಇನ್ಸ್‌ಪೆಕ್ಟರಿಂದ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟನ್ನು ಪಡೆದರೆ 'ಅವರಿಗೆ ಹಾಯರ್ ಗ್ರೇಡು ಟ್ರೈನ್ಡ್ ಸರ್ಟಿಫಿಕೇಟು ಕೊಡಬಹುದಾಗಿ ತಾ ೨೮—೬—೩೧ರಲ್ಲು ಹುಕುಂ ದಯಪಾಲಿಸಿದರು. ಆ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಆನೇ ದರ್ಜೆಯ ಸ್ಪೆಶಲ ರಾತ್ರಿಶಾಲೆಗಳು ತೆರೆಯಲ್ಪಟ್ಟು ಮಂಜೂರಾತಿಯನ್ನು ಪಡೆದು, ಉಪಾಧ್ಯಾಯರಿಗೆ ಶಿಕ್ಷಣೆಯನ್ನು ಕೊಡಹತ್ತಿದವು ಈ ರಿಯಾಯತಿಯಿಂದ ಈ ಜಿಲ್ಲೆಯಲ್ಲಿ ಸುಮಾರು ೧೩೦ ಮಂದಿ ಲೋವರ್ ಟ್ರೈನ್ಡ್ ಉಪಾಧ್ಯಾಯರು ಆನೇ ದರ್ಜೆ ಸರ್ಟಿಫಿಕೇಟನ್ನು ಪಡೆದರು ಇವರನ್ನು ಡಿಪ್ಯುಟಿ ಇನ್ಸ್‌ಪೆಕ್ಟರರು ತಿರಿಗಿ ಪ್ರೇಕ್ಟಿಕಲ್ ಟೆಸ್ಟ್ ಮಾಡಿ, ಟ್ರೈನ್ಡ್ ಸರ್ಟಿಫಿಕೇಟನ್ನೂ ಆನೇ ದರ್ಜೆಯ ಸರ್ಟಿಫಿಕೇಟನ್ನೂ ವಿದ್ಯಾ ಇಲಾಖಾ ಸೆಕ್ರೆಟರಿಯವರಿಗೆ ಕಳುಹಿಸಿದ್ದಲ್ಲಿ, ಇವರಿಗೆ ಸೆಕ್ರೆಟರಿಯವರಿಂದ ಹಾಯರ್ ಗ್ರೇಡು ಟ್ರೈನ್ಡ್ ಸರ್ಟಿಫಿಕೇಟು ಬರುತ್ತಿತ್ತು ಆದ್ದರಿಂದ ಆನೇ ದರ್ಜೆ ಸರ್ಟಿಫಿಕೇಟು ಪಡೆದ ಉಪಾಧ್ಯಾಯರು ತಮ್ಮನ್ನು ಆದಷ್ಟು ಬೇಗನೇ ಟೆಸ್ಟ್ ಮಾಡಿ ಕಂಪ್ಲೀಟ್ ಸರ್ಟಿಫಿಕೇಟು ತರಿಸಿಕೊಡುವ ಬಗ್ಗೆ ಡಿಪ್ಯುಟಿ ಇನ್ಸ್‌ಪೆಕ್ಟರರಿಗೆ ಅರ್ಜಿಗಳನ್ನು ಮಾಡಿಕೊಳ್ಳುತ್ತಿದ್ದರು ಆ ಪ್ರಕಾರ ಅರೆವಾಸಿ ಜನರಿಗೆ ಹಾಯರ್ ಟ್ರೈನ್ಡ್ ಕಂಪ್ಲೀಟ್ ಸರ್ಟಿಫಿಕೇಟು ದೊರೆಯಲಾಯಿತು ಆದರೆ ಇನ್ಸ್‌ಪೆಕ್ಟರರಿಗೆ ಕೆಲವರ ಶಾಲೆಗಳನ್ನು ಸಂದರ್ಶಿಸಲಿಕ್ಕೆ ಅನುಕೂಲವು ದೊರೆಯದ್ದರಿಂದ ಅವರ ಅರ್ಜಿಗಳಿಗೆ ಶಾಲೆಯ ವರ್ಷಾವಧಿ ಪರೀಕ್ಷೆಯ ಸಂದರ್ಭದ ಕಾಲದಲ್ಲಿ ಪ್ರೇಕ್ಟಿಕಲ್ ಟೆಸ್ಟ್ ಮಾಡಲಾಗುವುದು ಎಂತ ಹುಕುಂ ಕೊಟ್ಟದ್ದರಿಂದ ಹೆಚ್ಚಿನ ವಿಳಂಬಕ್ಕೆ ಆಸ್ಪದವುಂಟಾಯಿತು

ಡೈರೆಕ್ಟರ್ ಧೊರೆಗಳವರು ತಾರೀಕು ೨೦—೫—೩೩ರ ತಮ್ಮ ಹುಕುಮಿನಲ್ಲಿ ನೈಟ್‌ಸ್ಕೂಲಿನ ಉಮೇದ್ವಾರಿಗಳು ಪರೀಕ್ಷೆಗೆ ನಿಲ್ಲಬೇಕಾದ ಶಿಕ್ಷಣಾವಧಿಯನ್ನು ೧ ವರ್ಷದಿಂದ ೨ ವರ್ಷಕ್ಕೆ ಹೆಚ್ಚಿಸಿಯದೆಂದು ತಿದ್ದುಪಡಿ ಮಾಡಿದರು ಅಷ್ಟರಲ್ಲಿ G O. No 1581/4 9 33ನೇ ಸರಕಾರಿ ಹುಕುಂ ಮೇರೆಗೆ ಮುಂದಕ್ಕೆ ಲೋವರ್ ಟ್ರೈನ್ಡ್ ಉಪಾಧ್ಯಾಯರು, ಹಾಯರ್ ಟ್ರೈನ್ಡ್ ಆಗ್ಬೇಕೆಂದಾದರೆ, ಹಾಯರ್ ಗ್ರೇಡು T S L. C ಪರೀಕ್ಷೆಯಲ್ಲಿ (ಸರಕಾರಿ ಟ್ರೈನಿಂಗ್ ಪರೀಕ್ಷೆಯಲ್ಲಿ) ಪಾಸಾಗಬೇಕಾಗಿ ರೂಲು ತಿದ್ದುಪಡಿ ಮಾಡಲಾಯಿತು ಇದರಿಂದ ಉಪಾಧ್ಯಾಯರಿಗೆ ಮೇಲಿನಂತೆ ಆನೇ ದರ್ಜೆ ಸರ್ಟಿಫಿಕೇಟನ್ನು ಕೊಡುವ ಡಿಪ್ಯುಟಿ ಇನ್ಸ್‌ಪೆಕ್ಟರರ ಅಧಿಕಾರವನ್ನು ಹಿಂತೆಗೆದಂತಾಯಿತು ಸರಕಾರೀ ಹುಕುಂ ಹೀಗಿದ್ದರೂ ಡೈರೆಕ್ಟರರಿಂದ ತಾ ೨೦—೫—೩೩ರ ಹಿಂದೆ ಸರ್ವೀಸು ಮಾಡಿದವರಿಗೆ ಇನ್ಸ್‌ಪೆಕ್ಟರರು ಹಿಂದಿನಂತೆ ೧ ವರ್ಷದಲ್ಲಿಯೇ ಆನೇ ದರ್ಜೆ ಸರ್ಟಿಫಿಕೇಟು ಕೊಡಬಹುದಾಗಿ ತಿರಿಗಿ ತಾ ೧೩—೯—೩೩ರಲ್ಲು ಉಪಸೂಚನೆಯ ಹುಕುಂ ದೊರೆಯಿತು ಈ ಉಪಸೂಚನೆಯಂತೆ ಡಿಪ್ಯುಟಿ ಇನ್ಸ್‌ಪೆಕ್ಟರರಿಗೆ ಮುಂದೆಯೂ ಸದ್ರಿ ಸರ್ಟಿಫಿಕೇಟುಗಳನ್ನು ಕೊಡುವ ಅಧಿಕಾರವಿದೆ ಎಂದು ಸ್ಪಷ್ಟವಾಗುತ್ತದೆ

ಒಟ್ಟಾರೆ ಮುಂದಕ್ಕೆ ಗ್ರೇಡು ಬದಲಾವಣೆಯ ಕುರಿತು ಡೈರೆಕ್ಟರರ ಮತ್ತು ಸರಕಾರದ ಹುಕುಮುಗಳು ಪರಸ್ಪರ ವಿರೋಧಾಭಿಪ್ರಾಯಗಳನ್ನು ಹುಟ್ಟಿಸುವಂಥವುಗಳಾಗಿದ್ದರೂ, ಸರಕಾರೀ ಹುಕುಮಿನ ತಾ ೪ ೯—೩೩ರ ಹಿಂದೆ ಆನೇ ದರ್ಜೆಯ ಸರ್ಟಿಫಿಕೇಟು ಹೊಂದಿದ ಉಪಾಧ್ಯಾಯರಿಗೆ ಯಾವ ತೊಂದರೆಯೂ ಉಂಟಾಗಲಿಕ್ಕಿಲ್ಲವೆಂಬದು ಈ ಮೊದಲೇ ಅರೆವಾಸಿಯವರಿಗೆ ಹಾಯರ್ ಟ್ರೈನ್ಡ್ ಕಂಪ್ಲೀಟು ಸರ್ಟಿಫಿಕೇಟು ದೊರೆತಿರುವ ಕಾರಣದಿಂದಲೂ ಮತ್ತು ಯಾವ ಸರಕಾರೀ ಹುಕುಮಿನ ಸಾಧಕಬಾಧಕಗಳಾದರೂ ಆ ತಾರೀಕಿನ ಹಿಂದೆ ಅನ್ವಯಿಸಲಿಕ್ಕಿಲ್ಲವೆಂಬ ದೆಸೆಯಿಂದಲೂ, ಮಾತ್ರವಲ್ಲದೆ ಡೈರೆಕ್ಟರರಿಂದ ಬಂದ ತಾ ೨೦—೫—೩೩ರ ೨ ವರ್ಷದ ಅವಧಿಯು ಆ ತಾರೀಕಿನ ಹಿಂದಿನವರಿಗೆ ಲಗಾವಾಗುವುದಿಲ್ಲವೆಂಬದಾಗಿ ತಿರಿಗಿ ತಾ ೧೩—೯ ೩೩ರಲ್ಲು ಹುಕುಂ ಬಂದದ್ದರಿಂದಲೂ ಸಹಾ G O No 1581/4—9—33ರ ಸರಕಾರೀ ಹುಕುಂ ಆ ತಾರೀಕಿನ ಹಿಂದೆ 8ನೇ ದರ್ಜೆ ಸರ್ಟಿಫಿಕೇಟನ್ನು ಪಡೆದು ಡಿಪ್ಯುಟಿ ಇನ್ಸ್‌ಪೆಕ್ಟರರ ಅನಾನುಕೂಲತೆಯಿಂದ ಕಂಪ್ಲೀಟು ಸರ್ಟಿಫಿಕೇಟಿಗೆ ವಿಳಂಬವಾಗಿರುವ ಅಧ್ಯಾಪಕರಿಗೆ ಅನ್ವಯಿಸಲಾರದು ಎಂದು ಭರವಸೆಪಡುವಂಥಾದ್ದಾಗಿತ್ತು

ಪರಂತು ಪರಿಸ್ಥಿತಿ ಹೀಗಿದ್ದರೂ ಇನ್ಸ್‌ಪೆಕ್ಟಿಂಗ್ ಆಫೀಸರರಿಂದ ಪ್ರೇಕ್ಟಿಕಲ್ ಟೆಸ್ಟ್ ಮಾಡಲ್ಪಟ್ಟು ಕಂಪ್ಲೀಟ್ ಸರ್ಟಿಫಿಕೇಟಿನ ಬಗ್ಗೆ ಗವರ್ನಮೆಂಟು ಸೆಕ್ರೆಟರಿಗಳ ಬಳಿಗೆ ಇತ್ತೀಚೆಗೆ ಕಳುಹಿಸಲ್ಪಟ್ಟ ಕೆಲವು ಉಪಾಧ್ಯಾಯರ ಸರ್ಟಿಫಿಕೇಟುಗಳು ಹಾಯರ್ ಟ್ರೈನ್ಡ್ ಸರ್ಟಿಫಿಕೇಟುಗಳಾಗಿ ಮಾರ್ಪಡಿಸಲಾರದೆ, ಮಾನ್ಯ ಸೆಕ್ರೆಟರಿಯವರಿಂದ ತಾ. ೪—೯—೩೩ರ ಗವರ್ನಮೆಂಟ್ ಹುಕುಮಿನ ಪ್ರಕಾರ T S L C. ಪರೀಕ್ಷೆಗೆ ನಿಲ್ಲಬೇಕೆಂಬದಾಗಿ ಹುಕುಂ ಸಹಿತ ವಾಪಾಸ್ ಬಂದಿರುತ್ತದೆಂಬ ವರ್ತಮಾನವನ್ನು ಕೇಳುವಾಗ್ಯೆ ಸಮ್ಮಂಧಪಟ್ಟ ಉಪಾಧ್ಯಾಯರಿಗೆ ಅಂಥಾ ಅನ್ಯಾಯವು ಉಂಟಾದ್ದಕ್ಕಾಗಿ ಕುರಿತು ವಿಷಾದಪಡಬೇಕಾಗಿ ಯದೆ. ಈ ಅನ್ಯಾಯವು ಉಂಟಾದ ವಿಚಾರವು ತಾ. ೧೬ ೧೦—೩೩

ಪತ್ರವ್ಯವಹಾರ.

(ಚರ್ಚಾರ್ಹ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ, ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳದ್ದು ಯುಕ್ತ ಶೈಲಿಯುಳ್ಳದ್ದಾಗಿರತಕ್ಕದು. (ಸಂ. ಸ್ವ)

ಬಸ್ಸು ಮ್ಯಾನೇಜರರು ಗಮನಿಸಬೇಕಾದ ವಿಷಯ

ಸ್ವಚಾರಿನಿಂದ ಚೊಕ್ಕಾಡಿ ಕಟ್ಟೆಗಾಗಿ ಅಯ್ಯನಕಟ್ಟೆಗೆ ಹೋಗುವ ರಸ್ತೆಯಲ್ಲಿ ಪ್ರಕೃತ ಒಂದು ಟೇಕ್ಸಿಯನ್ನು ಸರ್ವಿಸಾಗಿ ಇಟ್ಟು ಬೆಳಗ್ಯೆ ಪಂಜದಿಂದ ಹೊರಟು ಬರುವ ಬಸ್ಸಿನಲ್ಲಿ ಸುಳ್ಯ, ಮಡಿಕೇರಿ, ಕಾಸರಗೋಡು, ಕುಂಬಳೆ ವಗೈರೆ ಸ್ಥಳಗಳಿಗೆ ಹೋಗುವ ಪ್ರಯಾಣಿಕರನ್ನು ಅಯ್ಯನ ಕಟ್ಟೆಯಿಂದ ಈ ಟೇಕ್ಸಿಯವರು ತೆಗೆದುಕೊಂಡು ಚೊಕ್ಕಾಡಿಗೆ ಬಂದು ಅಲ್ಲಿಂದಲೂ ಮೇಲೆ ಕಾಣಿಸಿದ ಸ್ಥಳಗಳಲ್ಲದೆ ಪುತ್ತೂರು, ಮಂಗಳೂರಿಗೆ ಕೂಡಾ ಹೋಗಲಿರುವ ಪ್ರಯಾಣಿಕರ ಸಮೇತ ಸುಳ್ಯಕ್ಕೆ ಹೋಗಿ ಸಮ್ಮಂಧಪಟ್ಟ ಬಸ್ಸುಗಳಿಗೆ ಕೊಡುವುದಲ್ಲದೆ, ಅಲ್ಲಿಂದ ಸಂಜೆ ಮೋರ್ನಿಂಗ್ ವಗೈರೆ ಬಸ್ಸುಗಳಲ್ಲಿ ಚೊಕ್ಕಾಡಿ, ಅಯ್ಯನಕಟ್ಟೆ, ಬೆಳ್ಳಾರೆ, ಪಂಜ ಕಲ್ಮಡ್ಕ ಸುಬ್ರಹ್ಮಣ್ಯ, ವಗೈರೆ ಸ್ಥಳಗಳಿಗೆ ಹೋಗುವ ಪ್ರಯಾಣಿಕರನ್ನು ತೆಗೆದುಕೊಂಡು ಸಂಜೆ ಬೆಳ್ಳಾರೆ ರಸ್ತೆಯಲ್ಲೇ ಪಂಜಕ್ಕೆ ಹೋಗುವ ಬಸ್ಸಿಗೂ ಕನೆಕ್ಷನು ಕೊಡುವಂತೆ ಮಾಡುವುದಾದರೆ ಪ್ರಯಾಣಿಕರಿಗೆ ಅನುಕೂಲವೂ ಬಸ್ಸು ಮಾಲೀಕರಿಗೆ ಪ್ರಯೋಜನವೂ ಸಿಗುವಂತಾಗುತ್ತಿತ್ತು

ಅಲ್ಲದೆ ರಸ್ತೆಯ ವರ್ಷಾವಧಿ ರಿಪೇರಿ ಕೆಲಸವನ್ನು ತಾಲೂಕು ಬೋರ್ಡಿನವರು ಪಂಚಾಯತ ಬೋರ್ಡುಗಳಿಗೇನೇ ಬಿಟ್ಟುಕೊಟ್ಟಿರುವ ಕಾರಣ ಒಳ್ಳೇ ರೀತಿಯಿಂದ ದುರಸ್ತಿ ಮಾಡಿಸುವರೆ ಅನುಕೂಲ ಮಾತ್ರವಲ್ಲದೆ, ಈ ವರ್ಷದ ರಿಪೇರಿ ಕೂಡ ತಕ್ಕ ಮಟ್ಟಿಗೆ ಒಳ್ಳೆದಾಗಿರುವದರಿಂದ ಈಗಲೇ ಸಮ್ಮಂಧಪಟ್ಟವರು ಆಲೋಚಿಸುವುದು ಅವಶ್ಯವಾಗಿರುತ್ತದೆ.

"ಊರವ"

ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ ಒಂದು ಮಾತು.

ಲೋವರ್ ಎಲಿಮೆಂಟರಿ ಗ್ರೇಡಿನ ಪರೀಕ್ಷೆ ಪಾಸಾಗಿ ಪ್ರೆಕ್ಟಿಕಲ್ ಸಹ ಪಾಸಾದ ಉಪಾಧ್ಯಾಯರು ಹಾಯರ್ ಎಲಿಮೆಂಟರಿ ಗ್ರೇಡ್ ಆಗುವುದಕ್ಕಾಗಿ ಟ್ರೈನಿಂಗ್ ಶಾಲೆಯಲ್ಲಿ ಜರಗುವ ಹಾಯರ್ ಎಲಿಮೆಂಟರಿ ಗ್ರೇಡಿನ ಪರೀಕ್ಷೆಗೆ ಖಾಸಗಿಯಿಂದ ಕೂತುಕೊಳ್ಳಬೇಕೆಂದೂ ಪರೀಕ್ಷೆ ಫೀಸು ರೂ ೩ನ್ನು ಇದೇ ನವಂಬರ ತಿಂಗಳ ೨ನೇ ತಾರೀಕಿನೊಳಗೆ ಖಜಾನೆಗೆ ಕಟ್ಟಿ ತಾವು ಪಾಸಾದ ಲೋವರ್ ಎಲಿಮೆಂಟರಿ ಗ್ರೇಡಿನ ಸರ್ಟಿಫಿಕೇಟ ಹಣ ಕಟ್ಟಿದ ಚಲನು, ಅವರು ಕಲಿಸುವ ಶಾಲೆಯ ಮುಖ್ಯ ಉಪಾಧ್ಯಾಯರ ಯಾ ಇತರ ಮಹನೀಯರ ಗನದ ಸರ್ಟಿಫಿಕೇಟು, ಅರ್ಜಿ ಈ ನಾಲ್ಕನ್ನು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫಿಸಿಗೆ ಕಳುಹಿಸಬೇಕಾಗಿ ಹುಕುಂ ಬಂದದೆ. ಅವರು ಅದನ್ನು ಶಿಫಾರಸಿನೊಂದಿಗೆ ಪರೀಕ್ಷೆ ಕಮಿಶನರಿಗೆ ಮದ್ರಾಸಿಗೆ ಕಳುಹಿಸುವರು ಕಲಿಯುವ ಪಾಠಗಳೂ ಟೆಕ್ಸ್ಟ್ ಪುಸ್ತಕಗಳೂ ಪರೀಕ್ಷೆ ಸಾಮಾನ್ಯಗಳೂ ಹಾಯರ್ ಎಲಿಮೆಂಟರಿ ಗ್ರೇಡಿನವರದೇ ಆಗಿರುತ್ತವೆ ಪರೀಕ್ಷೆಯು ಮಾರ್ಚಿ ತಿಂಗಳ ತಾರೀಕು ೧೩ ೧೪ ೧೫ರಲ್ಲಿ ನಡೆಯುವುದು ಫೋರ್ಮುಗಳು ಎಜ್ಯುಕೇಶನಲ್ ಆಫೀಸರರ ಆಫೀಸಿನಲ್ಲಿ ಸಿಕ್ಕುವುವು ಟ್ರೈನಿಂಗ್ ವಿದ್ಯಾರ್ಥಿಗಳ ಫೋರ್ಮು ಅಲ್ಲ ಬೇರೆಯಾಗಿವೆ

ಉಪಾಧ್ಯಾಯ

← — ⊢ —

ರಲ್ಲು ಮಂಗಳೂರಲ್ಲಿ ನನ್ನ ತಿಳುವಳಿಕೆಗೆ ಬಂದ ಕೂಡಲೇ ಹಾಯರ್ ಟ್ರೈನ್ಡ್ ಸರ್ಟಿಫಿಕೇಟು ಮಾರ್ಪಡದೆ ಉಳಿದಿರುವ ನಮ್ಮ ಜಿಲ್ಲೆಯ ಸುಮಾರು ೪೦ ಮಂದಿ ಅಧ್ಯಾಪಕರ ಬಗ್ಗೆ ಈ ಎಲ್ಲಾ ವಿಚಾರಗಳನ್ನು ಕಾಣಿಸಿ ನ್ಯಾಯವನ್ನು ಕಾಪಾಡಬೇಕಾಗಿ ಡೈರೆಕ್ಟರ್ ಧೊರೆಗಳವರಿಗೂ, ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರಿಗೂ, ಎಮ್ ಎಲ್ ಸಿ ಯವರಿಗೂ ಮನವಿಗಳನ್ನು ಕಳುಹಿಸಿರುತ್ತೇನೆ

ಆದ್ದರಿಂದ ಮುಂದಕ್ಕೆ ನೈಟ್‌ಸ್ಕೂಲಿನಲ್ಲಿ ಕಲಿಯುತ್ತಿದ್ದ ಲೋವರ್ ಟ್ರೈನ್ಡ್ ಉಪಾಧ್ಯಾಯರು ಆನೇ ದರ್ಜೆ ಸರ್ಟಿಫಿಕೇಟಿನ ಪ್ರಯೋಜನದ ಆಶೆಯನ್ನು ಬಿಟ್ಟು ಹಾಯರ್‌ಗ್ರೇಡು T S L C ಪರೀಕ್ಷೆಗೆ (ಟ್ರೈನಿಂಗ್ ಪರೀಕ್ಷೆಗೆ) ನಿಲ್ಲುವುದಕ್ಕೆ ಪ್ರಯತ್ನಿಸಬೇಕಾಗಿಯೂ ಆನೇ ದರ್ಜೆ ಸರ್ಟಿಫಿಕೇಟು ಪಡೆದು ಹಾಯರ್ ಟ್ರೈನ್ಡ್ ಸರ್ಟಿಫಿಕೇಟು ದೊರೆಯದಿದ್ದವರು G O No 1581/4 9-33ನೆ ಹುಕುಂ ತಮಗೆ ಅನ್ವಯಿಸದಂತೆ ನ್ಯಾಯ ಕಾಪಾಡಬೇಕಾಗಿ ತಮ್ಮ ತಮ್ಮ ಸೆಂಟರು, ಯಾ ತಾಲೂಕು ಸಂಘಗಳ ಸಭೆಗಳಲ್ಲಿಯಾಗಲೀ, ಇಲ್ಲವೇ ವ್ಯಕ್ತಿಶಃವಾಗಲೀ ಮನವಿಗಳನ್ನು ತಯಾರಿಸಿ, ಮೇಲೆ ಕಾಣಿಸಿದಂತೆ ಸಮ್ಮಂಧಪಟ್ಟ ಆಫೀಸರರಿಗೆ ಕಳುಹಿಸುವುದಲ್ಲದೆ, ಅದರ ಒಂದು ಕಾಪಿಯನ್ನು ನನಗೆ ಕಳುಹಿಸಬೇಕಾಗಿಯೂ ಅಪೇಕ್ಷಿಸುತ್ತೇನೆ

ಕುರುಕಾಲು ಗಣಪಯ್ಯ ಶೆಟ್ಟಿ,

ಪ್ರೆಸಿಡೆಂಟ್ ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘ.

[illegible]

[illegible]

[illegible] ತಾ. 10-6-31ರಲ್ಲಿ [illegible] ಅದರ [illegible] ನನ್ನ [illegible] ಸದ್ರಿ ಮೋಹಿನಿಯನ್ನು ಸದ್ರಿ ಕೃಷ್ಣ ನ್ಯಾಕರ [illegible] ಸದ್ರಿ ಮೋಹಿನಿಯು [illegible] ಎಲ್ಲಾ ಕೆಲಸಗಳನ್ನು ನಮ್ಮ ಮನೆಯಲ್ಲಿಯೇ ನನ್ನ ಸ್ವಂತ ಖರ್ಚಿನಿಂದ ನಡಿಸಿಕೊಂಡು ಬರು [illegible] ಸದ್ರಿ ಮೋಹಿನಿಯು ತಂದೆ ಮನೆಗೆ ಹೋಗುವ ಅಗತ್ಯವಿದ್ದ ಸಮಯದಲ್ಲಿ ನಾನು ಮೋಹಿನಿಯೊಂದಿಗೆ ಹೋಗಿ ನನ್ನ [illegible] ಕರಕೊಂಡು ಬರುತ್ತಿದ್ದೆ. ಹೀಗಿರುತ್ತಾ ತಾ. 31-8-33ರಲ್ಲಿ ನನ್ನ ತಂದೆಯವರಾದ ಅಂಣಪ್ಪೆಗಳು ಮನೆಯಲ್ಲಿ ಹಾಜರಿಯಿಲ್ಲದ ಸಮಯ ಸದ್ರಿ ಮೋಹಿನಿಯ ತಂದೆ ಅರ್ಥ ಕೃಷ್ಣನಾಯ್ಕರು ಮತ್ತು ಅಕ್ಕ ಅಣ್ಣಾ ಬಾಯಿ ಕೂಡಾ ಎರಡು ಜನರು ನಮ್ಮ ಕಡಂದಲೆ ಮನೆಗೆ ಬಂದು ಸದ್ರಿ ಮೋಹಿನಿಗೆ ದುರ್ಬೋಧಿಸಿ ನಾನು ಎಷ್ಟು ವಿಧವಾಗಿ ಹೇಳಿದ್ದಾಗ್ಯೂ ಕೇಳದೆ ಬಲಾತ್ಕಾರದಿಂದ ಸದ್ರಿ ಮೋಹಿನಿಯನ್ನು ವ ಸುಮಾರು 7 ತಿಂಗಳು ಪ್ರಾಯದ ಬಾಲ ಕೃಷ್ಣ ಎಂಬ ಗಂಡು ಮಗುವನ್ನೂ ವ ಮೋಹಿನಿಯ ಮೈಮೇಲಿದ್ದ ಸುಮಾರು 200 ರೂಪಾಯಿ ಮಿಕ್ಕ ಕ್ರಯಬಾಳುವ ನಮ್ಮ ಬಾಬ್ತು ಚಿನ್ನಾಭರಣ ಸಮೇತ ಹೊರಡಿಸಿಕೊಂಡು ಹೋಗಿರುತ್ತಾರೆ. ತಾ. 2-9-33ರಲ್ಲಿ ನನ್ನ ತಂದೆಯವರಾದ ಅಂಣಪ್ಪೆಗಳು ಸದ್ರಿ ಕೃಷ್ಣ ನ್ಯಾಕರಿಗೆ ನಿವೃತ್ತಿ ಬಗ್ಗೆ ರಿಜಿಸ್ತ್ರಿ ನೋಟೀಸು ಮೂಲಕ ತಿಳಿಸಿದ್ದಕ್ಕೆ ನೀತಿಗೂ ನ್ಯಾಯಕ್ಕೂ ವಿರುದ್ಧವಾದ ಸುಳ್ಳು ಸಂಗತಿಗಳನ್ನು ಕಾಣಿಸಿ ಸದ್ರಿ ಕೃಷ್ಣನ್ಯಾಕರು ರಿಜಿಸ್ತ್ರಿ ನಿಶಿ ಉತ್ತರ ಬರೆದ್ದಾಗ್ಯೂ ಕೂಡಾ ಕಳೆದ ತಾ. 21-9-33ರಲ್ಲಿ ನಾನು ಸದ್ರಿ ಕೃಷ್ಣ ನ್ಯಾಕರಿಗೆ ಸದ್ರಿ ಮೋಹಿನಿಯನ್ನು ಮಗು ವ ಚಿನ್ನಾಭರಣಗಳ ಸಮೇತ ರವಾನಿಸಿ ಕೊಡಬೇಕಾಗಿ ಬಿಟ್ಟ ರಿಜಿಸ್ತ್ರಿ ನೋಟೀಸಿಗೆ ಕೂಡಾ ಜವಾಬು ಇಲ್ಲದೆಯೂ ಯಾ ಸದ್ರಿ ಮೋಹಿನಿಯನ್ನು ಚಿನ್ನಾಭರಣಗಳ ವ ಮಗು ಸಮೇತ ತಂದು ಬಿಡದೆಯಿದ್ದುದರಿಂದ ತಾ 7-10-33ರಲ್ಲಿ ಪುನಹಾ ಸದ್ರಿ ಕೃಷ್ಣ ನ್ಯಾಕರಿಗೂ ಮತ್ತು ಮೋಹಿನಿಗೂ ಬೇರೆ ಬೇರೆ ಅಫಿದಾವಿತ್ ನಿಶಿ ಸಂಪೂರ್ಣವಾಗಿ ನಾನು ಮೋಹಿನಿಯನ್ನು ಬಿಟ್ಟ ಬಗ್ಗೆ ರಿಜಿಸ್ತ್ರಿ ನೋಟೀಸುಗಳನ್ನು ಬಿಟ್ಟಿರುತ್ತೇನೆ. ಆದುದರಿಂದ ತಾ 31-8-33ರ ಆರಭ್ಯಾತು ಸದ್ರಿ ಮೋಹಿನಿಯು ಹಿಂದೂಧರ್ಮದ ವಿಧಿಗೂ, ನೀತಿಗೂ, ನ್ಯಾಯಕ್ಕೂ ವಿರುದ್ಧವಾಗಿ ನನಗೂ ವ್ಯತಿರಿಕ್ತವಾಗಿ ನಡಕೊಂಡು ನನ್ನ ಮನೆಗೆ ಬಾರದೆ ತನ್ನ ಸ್ವಯಿಚ್ಛೆಯಂತೆ ದುರ್ನಡತೆಯಲ್ಲಿರುವುದರಿಂದ ನಾನು ಸದ್ರಿ ಮೋಹಿನಿಯನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿರುತ್ತೇನೆ. ತಾರೀಕು 31-8-33ರ ಆರಭ್ಯಾತು ಜೀವನಾಂಶ ವಗೈರೆ ನನ್ನಿಂದ ಸಿಕ್ಕಬೇಕೆಂತ ಕೇಳಲಿಕ್ಕೂ ವ ತಾ. 31-8-33ರ ನಂತರ ಸದ್ರಿ ಮೋಹಿನಿಗೆ ಮಕ್ಕಳು ಹುಟ್ಟಿದ್ದಲ್ಲಿ ಅಂಥಾ ಮಕ್ಕಳು ನನಗೆ ಜನಿಸುವಂತಾದ್ದು ಅಲ್ಲವೆಂತಲೂ ಯಾ ಸದ್ರಿ ಮೋಹಿನಿಗಾಗಲೀ ಅಂಥಾ ಮಕ್ಕಳಿಗೆ ಕೂಡ ನಾನು ಮಾಡಬಹುದಾದ ಸ್ಥಿರ ಚರ ಸೊತ್ತುಗಳಲ್ಲಿ ಏನೊಂದು ತರದ ಹಕ್ಕು ಸಂಬಂಧಗಳು ಇರುವುದಿಲ್ಲ ಎಂತ ಈ ಮೂಲಕ ತಿಳಿಸಿರುತ್ತೇನೆ

ಕಡಂದಲೆ
[illegible] } ಸಂಜೀವ ಶೈ ರುಜು

ಕುಂದಾಪುರ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ.

S. O S 720/1933

ವೆಂಕಪ್ಪ ಉಳ್ಳೂರ—ವಾದಿ.

ಮತ್ತು

1. ಕೂಸರಾಮು, ಅಬ್ಬು ಮಗ, 2. ಕೂಸವಿತ, ಯಂಕು ಮಗ ಕಂಬದಕೋಣೆ ಗ್ರಾಮದಲ್ಲಿರುವವರು—ಪ್ರತಿವಾದಿರು.

ಇವರೊಳಗೆ

ಮೇಲ್ಕಂಡ ಪ್ರತಿವಾದಿಯರಿಗೆ ತಿಳಿಯಪಡಿಸುವುದೇನೆಂದರೆ—

ವಾದಿಗೆ ಪ್ರತಿವಾದಿರು ತಾ. 15-9-30ರಲ್ಲಿ ಬರೆದುಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಕೂಡಿ ರೂಪಾಯಿ 101-2-9ನ್ನು ಬರಬಾಕಿ ಕೊಳ್ಳುವರೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಹಾಜಿರ ದಾವೆಯನ್ನು ತಾ. 13-11-33ಕ್ಕೆ ಅಪ್ಪೀರು ತಗ್ಗಿಗೆ ಇಟ್ಟಿರುತ್ತದೆಯಾಗಿ, ಉದಾಹರಣೆಯಿರುವುದಾದರೆ ಸದರಿ ಪ್ರತಿವಾದಿರು ತಾ. 13-11-33ಕ್ಕೆ ಪೂರ್ವಾಹ್ನ 11 ಗಂಟೆಗೆ ಮುಜ್ಕೂರು ಕೋರ್ಟಿನಲ್ಲಿ ಹಾಜರಾಗಿ ಅಪ್ಪೀರು ಮಾಡಿಕೊಳ್ಳತಕ್ಕದೆಂದೂ, ಇಲ್ಲವಾದರೆ ಸದರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆಂದೂ ಈ ಮೂಲಕ ತಿಳಿಯ ತಿಳಿಯಪಡಿಸಿದೆ.

ಕುಂದಾಪುರ
26-10-33 } H. L. HANDE,
Advocate for Plaintiff.

ಒಂದು ಸುಂದರ ಕೂಸು

ಸೆನಿಟರಿ ಇನ್ಸ್‌ಪೆಕ್ಟರು

"ನಾನು ನಿಮ್ಮ ಹೆಸರುಳ್ಳ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದೆನು. ಆದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು.

ಎಸ್. ನಟರಾಜ ಮುದಲಿಯಾರ್,
ಸೆನಿಟರಿ ಇನ್ಸ್‌ಪೆಕ್ಟರ್,
ಮಾಟೂರು, ಮದುರಾ.

ನಿಮ್ಮ ಕೆಮಿಸ್ಟರರ ಹತ್ತಿರ ಕೇಳಿರಿ.

ಅಥವಾ

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಶೀಘ್ರ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ.

ಬೆಂಗಳೂರು ಏಜಂಟ್—ಧಿ ಫೊಪಟ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.
ಮದ್ರಾಸು ಸಂಸ್ಥಾನದ ಏಜಂಟರು:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್,
ಮಂಗಳೂರು ,, ದಿ ಕ್ಯಾಲಿಕಟ್ ವಾರ್ಹೌಸ್ ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಪಡಿಯೇಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ರಾಅ ಪಿ. ಪ. ರಾಮನ್, ಎಲ್. [illegible] ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟ ಅಶಕ್ತತೆ ಕಡಿಮೆಯಾಗಿರುವುದು, ಕೂಳತ್ತ ಕಡಿಮೆಯಾಗಿರುವುದು, ಇತ್ಯಾದಿ ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅವರ ಫಲಿತಾಂಶಗಳೆಲ್ಲವೂ ತೃಪ್ತಿಕರವಾಗಿವೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತ

ಪಂಡಿತ
ಡಿ. ಗೋಪಾಲಾಚಾರ್ಯರವರ
ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)
ಆಯುರ್ವೇದಾಶ್ರಮಂ, [illegible] ಬಾಕ್ಸ್ ನಂ. [illegible] ಮದ್ರಾಸು.
[illegible] ಏಜಂಟರು:—ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, [illegible] ಬೆಂಗಳೂರು. [illegible]
ದಕ್ಷಿಣ ಕನ್ನಡ ಏಜಂಟರು—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾ. ಕಾ. ನಂಬ್ರ 370/1933.

ಅನಂತ ಭಟ್ಟ—ವಾದಿ.

ಮತ್ತು

ಕೆ. ರಂಗಪ್ಪ ಭಟ್ಟ, ರಾಮಕೃಷ್ಣ ಯಾನೆ ಕುಟ್ಟಿಂಜ ಭಟ್ರ ಮಗ. ಉಡುಪಿ ತಾಲೂಕು ಮಣಿಪುರ ಗ್ರಾಮದ ಕನಂಗಿಯಲ್ಲಿರುವವ—ಪ್ರತಿವಾದಿ.

ಇವರೊಳಗೆ

ವಾದಿಗೆ ಪ್ರತಿವಾದಿಯು ತಾ. 21—6—1930ರಲ್ಲು ರೂಪಾಯಿ 150ಕ್ಕೆ ಬರೆಸಿಕೊಟ್ಟ ಡಿಮಾಂಡ ನೋಟಿನ ಬಾಬ್ತು ಬಾಕಿ ಉಳಿದ ರೂ. 74-2-0ಕ್ಕೆ ಮಾಡಿದ ವ್ಯಾಜ್ಯವು ತಾ. 6-11-33ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯಕ್ಕೆ ಆಕ್ಷೇಪ ಇದ್ದರೆ ಸದ್ರಿ ತಾರೀಕಿನ ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಪ್ರತಿವಾದಿಯು ಹಾಜರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

Udipi, South Kanara. 29—10—1933.

B. Srinivasa Rao,
Advocate for Plaintiff.

Notice

This is to inform the public that my younger son Nellikai Sunder Rao died in the year 1924 leaving no debts but leaving behind him his widow, Susila Bai, daughter of Mr. C. Vedaji Rao Saheb of Bangalore and also immoveable properties yielding an annual income of about Rs. 7000. The said Susila Bai, though a mere life interest holder, besides selling about Rs. 70,000 worth of immoveable properties with the consent of my elder son on the pretext of satisfying her husband's debts is alleged to have further incurred a debt of about Rs. 20,000 by maintaining a motor car and lavishly spending under the influence of and to accomodate her relations. Though the said Susila Bai has even today a net annual income of about Rs. 5,000, she is intending to incur further debts on the pretext of paying my maintenance decree and assuring the creditors that by so lending they obtain a charge on corpus of her husband's estate. The public is therefore warned against dealing with the estate.

(ನೆಲ್ಲಿಕಾಯಿ) ಶ್ರೀಂಗಾರಮ್ಮನ ರುಜು.
Nearest Reversioner.

ಎಲ್ಲಾ ಜನರಿಗೆ ಎಚ್ಚರಿಕೆ.

ನನ್ನ ಕಿರೀ ಮಗ ನೆಲ್ಲಿಕಾಯಿ ಸುಂದರರಾಯನು, ನನ್ನ ಹಿರೀ ಮಗನಿಂದ 1917ನೇ ಇಸವಿಯಲ್ಲಿ ಹಿಸ್ಸೆ ಪಡೆದು ನಂತರ ಬೆಂಗಳೂರು ಸಿ. ವೇದಾಜಿ ರಾವ್ ಸಾಹೇಬರ ಪ್ರಥಮ ಪುತ್ರಿ ಸುಶೀಲಾಬಾಯಿಯನ್ನು ವಿವಾಹ ಮಾಡಿಕೊಂಡು, ಸಾಲಿಯಾನ್ ಸುಮಾರು 7000 ರೂಪಾಯಿ ಹುಟ್ಟುವಳಿಯ ಸ್ಥಿರ ಸ್ವಲ್ಪ ಆಸ್ತಿಯನ್ನು ಮಾರಾಟಮಾಡಿ ತಾನಿಗೆ ಬಂದ ಸಾಲವನ್ನು ಸಂದಾಯ ಮಾಡಿ 1924ನೇ ಇಸವಿಯಲ್ಲಿ ಕಾಲಾಂತರದಿಂದ ಮೃತಪಟ್ಟನು. ನಂತರ ಸದ್ರಿ ಸುಶೀಲಾಬಾಯಿಯು ತನ್ನ ಜೀವಮಾನದ ಹಕ್ಕಿನಿಂದ ಅನುಭವಿಸಬರುತ್ತಿದ್ದ ಆಸ್ತಿಯನ್ನು ಗಂಡನ ಸಾಲಕ್ಕೆಂದು ಕಲ್ಪಿಸಿಕೊಂಡು ನನ್ನ ಹಿರೀ ಮಗನ ಕೂಡುವಿಕೆಯಿಂದ ಸುಮಾರು 70,000 ರೂಪಾಯಿಗಳ ಆಸ್ತಿಯನ್ನು 1929ನೇ ಇಸವಿಯ ವರೆಗೂ ಮಾರಾಟ ಮಾಡುತ್ತಿದ್ದಳು. ಅಲ್ಲದೆ ಸದ್ರಿ ಸುಶೀಲಾ ಬಾಯಿಗೆ ಈಗಿನ ದರದಲ್ಲಿ ಸುಮಾರು 5 00 ರೂಪಾಯಿ ಹುಟ್ಟುವಳಿ ಇದ್ದರೂ ಇವಳ ಸಂಬಂಧಿಕರ ಪೋಷಣೆಗಾಗಿ ಮೋಟಾರ್ ಕಾರ್ ವಗೈರೆ ಇಟ್ಟು ಖರ್ಚುವೆಚ್ಚಗಳನ್ನು ಹೆಚ್ಚಿಸಿ ಪುನಹ ಸಾಲಗಳನ್ನು ಅನಾವಶ್ಯಕವಾಗಿ ಕಲ್ಪಿಸಿಕೊಂಡು ನನ್ನ ಅಶನಾರ್ಥದ ಬಾಕಿ ಎಂತ ಕಾಣಿಸಿ ಈದು, ನೋಟು ವಗೈರೆಗಳಿಂದ ಸುಮಾರು 20000 ರೂಪಾಯಿ ವರೆಗೆ ಸಾಲ ಮಾಡಿರುತ್ತಾಳೆಂದು ತಿಳಿದುಬರುತ್ತದೆ. ನ್ಯಾಯವಾಗಿ ಹುಟ್ಟುವಳಿಯಿಂದಲೇ ನನ್ನ ಅಶನಾರ್ಥವನ್ನು ಕೊಡಬೇಕಾಗಿದ್ದರೂ, ಅದನ್ನು ಬೇಕೆಂದು ಬಾಕಿ ಮಾಡಿಕೊಂಡು ಇದರ ಗರ್ಜಿನ ಕಾರಣವಾಗಿ ತೋರಿಸಿ ನೋಟು ವಗೈರೆ ಬರೆಕೊಟ್ಟು ಈ ಹಣಕ್ಕೆ ಆಸ್ತಿ ಜವಾಬ್ದಾರಿ ಉಂಟೆಂದು ನಂಬಿಸಿ ಅನೇಕ ಜನರಿಂದ ಸಾಲ ಪಡೆದು ಸಾಲವನ್ನು ವೃದ್ಧಿಪಡಿಸುತ್ತಿದ್ದಾಳೆ. ನನ್ನ ಅಶನಾರ್ಥದ ಗರ್ಜು ಕಾಣಿಸಿದ ಮಾತ್ರದಿಂದ ಸದ್ರಿ ಸಾಲಗಳಿಗೆ ಕಾನೂನು ಪ್ರಕಾರ ಆಸ್ತಿ ಜವಾಬ್ದಾರಿ ಆಗುವುದಿಲ್ಲವೆಂಬುದನ್ನು ಸರ್ವ ಜನರು ಈ ಮೂಲಕ ತಿಳಿದಿರತಕ್ಕದ್ದು. ಅಲ್ಲದೆ ಇನ್ನು ಸಾಲ ಕೊಡತಕ್ಕವರು ಆ ಆಸ್ತಿ ಸ್ವಾಧೀನತೆ ಮಾಡಿಕೊಳ್ಳತಕ್ಕವರು ಕಾಲಕ್ರಮೇಣ ಗಂಡಾಂತರಕ್ಕೆ ಒಳಪಡಬೇಕಾದೀತು ಎಂತ ಸಹಾ ಈ ಮೂಲಕ ತಿಳಿಯಪಡಿಸಿದೆ.

(ನೆಲ್ಲಿಕಾಯಿ) ಶ್ರೀಂಗಾರಮ್ಮನ ರುಜು.
Nearest Reversioner.

Hydrocele and Hernia

'ಹೈಡ್ರೊಸಿಲ್' ಮತ್ತು ಅಂಡವಾಯುವಿಗೆ ಅಮೋಘ ಔಷಧಿ.

Aksir—A. Fota ಎಂಬುದು ಹೈಡ್ರೊಸಿಲ್ ಮತ್ತು ಅಂಡವಾಯುವನ್ನು ಗುಣಪಡಿಸಲು ದಿವ್ಯೌಷಧ! ಒಪರೇಶನ್ ಅಗತ್ಯವಿಲ್ಲ. ಎಷ್ಟು ಕಾಲದ ರೋಗವೇ ಆಗಿರಲಿ, ಎಷ್ಟು ವಿಷಮ ರೋಗವೇ ಆಗಿರಲಿ, ಅಂಡದಲ್ಲಿ ನೀರು ಗಟ್ಟಿ ಕಟ್ಟಿರಲಿ, ಯಾವ ಮದ್ದಿನಿಂದಲೂ ಗುಣಮುಖ ಹೊಂದದಿರಲಿ, ಈ ಔಷಧವನ್ನು ಪ್ರಯೋಗಿಸಿದೊಡನೆ ಅಂಡದಿಂದ ನೀರು ಹೊರಬಂದು ಹರ್ನಿಯಾವನ್ನು ಅದರ ಮೊದಲ ಸ್ಥಿತಿಯಲ್ಲಿ ನಿಲ್ಲಿಸುತ್ತದೆ. ಈ ಔಷಧಿಯನ್ನು ಒಮ್ಮೆ ಸರಿಯಾಗಿ ಉಪಯೋಗಿಸಿದಲ್ಲಿ ಈ ಮಹಾರೋಗವು ದೃಢವಾಗಿ ಮಾಯವಾಗುತ್ತದೆ. ಇನ್ನೊಮ್ಮೆ ಕಾಣದೊರುವುದೇ ಇಲ್ಲ. ಈ ಔಷಧವು ಒಂದು ಬಗೆಯ ಹುಡಿ (ಪೌಡರ್) ಯಂತಿದೆ. ಇದನ್ನು ನೀರಿನೊಡನೆ ಕಲಸಿ ಅಂಡಕ್ಕೆ ಹಾಕಬೇಕು. ಏಳೇ ಏಳು ದಿನಗಳೊಳಗೆ ಹೈಡ್ರೋಸೀಲನ್ನು ಗುಣಪಡಿಸುತ್ತದೆ. ಕ್ರಯ ಪೆಟಿಗೆ ರೂ 3. ಪೋ. 8 ಆಣೆ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Hamdard Dawakhana,
Kushak, MUTTRA.

Self Indian
Buy Indian
Be Indian

By Using

"LADCO"

Vegetable Toilet and Washing Soaps

FREE FROM ANIMAL FAT

Bath Soap, Glycerine Transparent Soap, Bar Soap Cubes, Cakes.

Agents for South Kanara, Malabar & Coorg—

PAI PHARMACY,
Car Street, MANGALORE.

Stockists:—

JAYAVANT SHANTARAM & BROS. *Merchants.*
I under, Mangalore, S. K.

1—9—33

1—9—33

ಒಂದೇ ಸಲ ಇಷ್ಟು ಪ್ರಯೋಜನಕಾರಿಯಾಗಿರುವ ಮದ್ದನ್ನು ಇಷ್ಟರ ತನಕ ನಾನು ಕಂಡಿಲ್ಲ.

ಮಲೇರಿಯಾ ಇನ್‌ಫ್ಲೂಯೆಂಜಾಕ್ಕೆ ಇದು ಉತ್ತಮ ಔಷಧಿ. ನಾನು ಸಂಚಾರಕ್ಕೆ ಹೋಗುವಾಗ ಒಂದೆರಡು ಬಾಟ್ಲಿಗಳನ್ನು ಹಿಡಿದು ಕೊಳ್ಳದೆ ಹೋಗುವುದಿಲ್ಲ. ಪ್ರೊ. ಸೊ. ಬಿ. ಎ. ಸ್ಕೂಲ್ ಇನ್ಸ್‌ಪೆಕ್ಟರ್ ಸೆಕೆಂಡರಿ, ಬನಾರ್.

"...ಬಾಟ್ಲಿಗಳನ್ನು ರವಾನಿಸಿರಿ. ನನ್ನ ... ಕೂಲಿಯವರು ಜ್ವರ ಪೀಡಿತರಾಗಿದ್ದಾರೆ. ಈ ಮದ್ದು ಅವರಿಗೆ ಹಿತಕರ."

ಎರಡು ವರ್ಷಗಳಿಂದ ಈ ಮದ್ದನ್ನು ನನ್ನ ಮಿಲ್ಲಿನಲ್ಲಿ ಉಪಯೋಗಿಸುತ್ತಿದ್ದೇವೆ. ಒಂದು ಡೋಜಿನಲ್ಲಿ ಆಶ್ಚರ್ಯಕರವಾಗಿ ನಿಂತಿದೆ. ಎಲ್ಲಾ ಜ್ವರಗಳಿಗೆ ಇದು ದಿವ್ಯೌಷಧ, ಸಂಶಯವಿಲ್ಲ. ಜೆ. ಎಚ್. ಟೂಕೀ ಮೆನೆಜರ್, ಹುಸೇನ್ ಮಿಲ್, ಅಹ್ಮದಾಬಾದ್.

MADON SONS & CO., Bombay 2.

ಸಾ ವರ್ಷ ಒಂದಕ್ಕೆ ರೂಪಾಯಿ ೩-0-0 Registered No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ ೪-1೮-0.

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುರ್ಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುದುಕ ಬರುತಿರುವ ॥
ಗರಲಕೆವರಂಜಿದರೆ! ಸುಧೆಯನು । ಮರಿತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೭. ಮಂಗಳೂರು ತಾ ೧೦ನೇ ಶುಕ್ರವಾರ ನವಂಬರ ೧೯೩೩ (10-11-'33) ಸಂಚಿಕೆ ೪೪

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras.**
ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.
ನಿಯಮಿತ ಮೂಲಧನ ರೂ. 3,50,000. ಹಂಚು ಕಾಗದಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST OCTOBER, 1933.

	Capital and Liabilities.			Property and Assets	
1	Paid up Capital	Rs. 2,25,000-0-0	1	Bank Premises, Buildings, Furniture etc.	Rs. 66,920-0-4
2	Reserve and other funds	„ 2,35,000-0-0	2	Investment on Gvt. securities	„ 3,00,560-8-6
3	Deposits	„ 21,91,744-5-8	3	Authorised Investments	„ 23,02,701-4-1
4	Due to Bankers	„ 21,649-2-3	4	Bills per contra	10,547-3-9
5	Sundries	„ 84,330-2-6	5	Sundries	„ 28,997-6-1
6	Bills per contra	10,547-3-9	6	Cash on hand & with bankers.	„ 58,544-7-5
	Total	27,68,270-14-2		Total	27,68,270-14-2

UDIPI 6-11-'33. **N. ANANDA RAO,**
Secretary & Manager.

(Regd.)

ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಚ್ಚುಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯು, ಬಹು ಶೀತ, ಸಹಿಸಲಸದಳವಾದ ಚೇಳು, ಕೈಕಾಲು ಮುರಗಟ್ಟುವುದು, ಉಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ। ಡಜನಿಗೆ ರೂ. 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು— ಪಾ ಕಂಪೆನಿ, ಮಂಗಳೂರು.

ಓದಲಿಕ್ಕೂ, ಜಾಹೀರಾತ ಕೊಡಲಿಕ್ಕೂ
ಮಕ್ಕಳಿಗೂ, ದೊಡ್ಡವರಿಗೂ, ಹಳ್ಳಿಯವರಿಗೂ, ಪೇಟೆಯವರಿಗೂ, ವಿದ್ಯೆ
ಇದ್ದವರಿಗೂ, ಇಲ್ಲದವರಿಗೂ
ಬೇಕಾದ,
ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ
ಪತ್ರಿಕೆ
'ಸ್ವದೇಶಾಭಿಮಾನಿ'
27 ವರ್ಷಗಳ ನವತರುಣ!

ದಣುವನ್ನಾರಿಸಿ ಸ್ನಾಯುಗಳನ್ನು ಬಲಪಡಿಸುತ್ತದೆ.

ನಿಮ್ಮ ನರಗಳು ನಿಮಗೆ ಬಾಧಕವನ್ನುಂಟುಮಾಡುತ್ತಿದೆಯಾದರೆ, ನಿಮಗೆ ನಿದ್ರೆಯು ಬರುವುದಿಲ್ಲವಾದರೆ, ಅಥವಾ ವಿಶ್ರಾಂತಿಯು ಸಿಗುವುದಿಲ್ಲವಾದರೆ, ನೀವು "ಓವಲ್ಟಿನ್"ನ್ನು ಕುಡಿಯಬೇಕು.

ಓವಲ್ಟಿನ್ನು ನರಗಳಿಗಗತ್ಯವಿರುವ ಪೋಷಣೆಯನ್ನೀಯುತ್ತದೆ. ಈ ಪಾನೀಯವು ಅವುಗಳನ್ನು ಆರೋಗ್ಯದಾಯಕವಾಗಿ ಮಾಡಿ, ಅವುಗಳು ಮುಂದಕ್ಕೆ ಹಾನಿಯನ್ನುಂಟುಮಾಡದಂತೆ ಮಾಡುತ್ತದೆ. ರಾತ್ರಿಯಲ್ಲಿ ಒಂದು ಕಪ್ ರುಚಿಕರವಾದ ಓವಲ್ಟಿನ್ನು ವಿಶ್ರಾಂತಿಕರ ನಿದ್ರೆಯನ್ನು ಕೊಡುತ್ತದೆ.

[illegible] ಓವಲ್ಟಿನ್ನು [illegible] ಬಾರ್ಲಿ ಮಾಲ್ಟ್, ದನದ ದಪ್ಪ ಹಾಲು, ಕೋಳಿಮೊಟ್ಟೆಗಳನ್ನುಪಯೋಗಿಸಿದೆ. ಇದು ಪ್ರಕೃತಿಸಿದ್ಧವಾದ ಟಾನಿಕ್ ಆಹಾರ. ಇದನ್ನು ತಯಾರಿಸುವಾಗ ಹಸ್ತಸ್ಪರ್ಶವಾಗುವುದಿಲ್ಲ.

OVALTINE
TONIC FOOD BEVERAGE

ವಿಶ್ರಾಂತಿಕರ ಮತ್ತು ಸ್ವಭಾವಸಿದ್ಧ ನಿದ್ರೆಯನ್ನು ಕೊಡುತ್ತದೆ.

ಬಜಾರದ ಎಲ್ಲಾ ಕೆಮಿಸ್ಟರುಗಳಲ್ಲಿಯೂ ದೊರೆಯುತ್ತದೆ.

ಏಜಂಟರು—ಜೇಮ್ಸ್ ರೈಟ್, 85ಎ. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸ್, ರಂಗೂನುಗಳಲ್ಲಿ.

OV/139

ಪಂಡಿತ ಬಿ. ಆರ್. ಗೋವಿಂದ ರಾಜುಲು ನಾಯುಡುಯವರ

ಮೇಹ ಸಂಜೀವನಿ ಎಣ್ಣೆ.

ಪತಿವ್ರತೆಯಾದ ಕನ್ನ ಹೆಂಡತಿಯಲ್ಲಿಯೇ ಅತಿಸಂಭೋಗ ಮಾಡುವುದರಿಂದ ಅನರ್ಥಕರವಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟ ಸ್ತ್ರೀಯರಲ್ಲಿ ತಮ್ಮ ಪ್ರಾಯವೆಂಬ ಅಮೋಘ ವಸ್ತುವನು ಧಾರೆಯೆರೆದು ಹಾಳುಮಾಡಿಕೊಂಡು ಮೇಹವು, ಬಿಳುಪು ಭಗಂದರ, ತೊಡೆವಾಳ, ಟಾಕಿ ಮುಂತಾದ [illegible] ರೋಗಗಳನ್ನು [illegible] ಹತ್ತುತ್ತಿರುವ ನಮ್ಮ ದೇಶೀಯರು [illegible] ಈ ಔಷಧವು [illegible] ಪತ್ನೀ ಕಲ್ಪಿಸಲ್ಪಟ್ಟಿರುವುದು. ಈ ಔಷಧ [illegible] ರೋಗವು [illegible] ಹಬ್ಬುತ್ತಾ ತನ್ನ [illegible] ಆ ವಂಶದಲ್ಲಿ ನೆಲೆಗೊಳ್ಳುವುದೆಂಬುದೇ ವೈದ್ಯ ಶಾಸ್ತ್ರಜ್ಞರ ತಾತ್ಪರ್ಯವಾಗಿದೆ. ಇಂತಹ ಮಹಾ ಭಯಂಕರ ಮೇಹರೋಗವೆಂಬ ವೃಕ್ಷಕ್ಕೆ ಕುಠಾರಸದೃಶವಾದ ಈ ಔಷಧವನ್ನು ವೈದ್ಯ ಶಾಸ್ತ್ರಗಳ ಆಧಾರದಿಂದ ಮಹಾ ಮೂಲಿಕೆಗಳ ಸಂಯೋಜನದಿಂದ ನಾವು ನಿರ್ಮಿಸಿ, ಸಾವಿರಾರು ಜನರನ್ನು ಗುಣಪಡಿಸಿರುವ ಸರ್ಟಿಫಿಕೇಟುಗಳು ನಮ್ಮ ವೈದ್ಯ ಶಾಲೆಯಲ್ಲಿ ಸರ್ವರ ಅವಗಾಹನೆಗಾಗಿ ಇಟ್ಟಿರುತ್ತೇವೆ. ಈ ಮೇಹ ಸಂಜೀವನಿ ಎಣ್ಣೆಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸಿರುವ ಬಿಳುಪು, ಕೆಂಪು, ಹಸರು ಮುಂತಾದ ೧೮ ವಿಧ ಪ್ರಮೇಹರೋಗಗಳು, ಉರಿ ಮೂತ್ರ, ಮುಸುಕು ಹುಣ್ಣು, ಮೇಹ ಗಳಲೆಗಳು, ಮೇಹ ಪಟ್ಟೆಗಳು, ಸಾಧಾರಣ ಮೇಹ ವಾಯು, ತೊಡೆವಾಳ, ಭಗಂಧರ, ಟಾಕಿ, ಪಡಿತ್ರ ಮುಂತಾದ ಜಾಡ್ಯಗಳು ಬುಡದೊಂದಿಗೆ ನಾಶವಾಗುವುದಲ್ಲದೆ, ಈ ಎಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ [illegible] ಅತ್ಯಧಿಕ [illegible], ಮುಟ್ಟುಶೂಲೆ, ಪ್ರದರ ಮುಂತಾದ ರೋಗಗಳು ನಿರ್ಮೂಲವಾಗುವುವು. ಕ್ರಯ ಸೀಸೆ ೧ಕ್ಕೆ ರೂ. ೨-೦-೦. ಎಲ್ಲೆಲ್ಲಿಯೂ ಏಜೆಂಟರು ಬೇಕಾಗಿದ್ದಾರೆ.

ಯೋಗ್ಯತಾ ಪತ್ರಗಳು:—೧. ನಿಮ್ಮ ಮೇಹ ಸಂಜೀವಿನೀ ತೈಲವನ್ನು ತರಿಸಿ ಉಪಯೋಗಿಸಿ ನೋಡಿದರಲ್ಲಿ ತುಂಬಾ ಪ್ರಯೋಜನವಿತ್ತೆಂದು ತಿಳಿದೆನು. ಕೆ. ಎಸ್. ಗೋವಿಂದ ಶಾಸ್ತ್ರಿ, ಆಯುರ್ವೇದ ಭೂಷಣ, ಆರೋಗ್ಯಾಶ್ರಮ, ಕೊಡಿಯಾಲ್‌ಬೈಲ್ ಪೋಸ್ಟ್, ಮಂಗಳೂರು. ೨. ನಿಮ್ಮ ಪ್ರಮೇಹ ಸಂಜೀವಿನೀ ಎಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಗಳ ಕೃತಜ್ಞತೆಗೆ ಪಾತ್ರನಾಗಿರುವೆನು. [illegible] ವೈದ್ಯ [illegible] ಗ್ರಾಮ, ಬಿಟರ್ ಪೋಸ್ಟ್, ಪಶ್ಚಿಮ ಕನ್ನಡಾ.

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು, ಆಂಗ್ಲೋ ಭಾರತೀ ವೈದ್ಯ ಶಾಲಾ, 491 ಹಲಸೂರು ಪೇಟೆ, ಬೆಂಗಳೂರು ಸಿಟಿ.

ರೂಟರನು ಕ್ಷಮೆ ಬೇಡಿದನು!

"Reuter" ನ [illegible]

× × × ×

ಈ ರೂಟರನು ಇಂಗ್ಲೀಷರ ವಾರ್ತೆಗಳನ್ನು ಹಿಂದೂಸ್ಥಾನಕ್ಕೆ ರವಾನಿಸುವಾಗ ಹೆಚ್ಚಾಗಿ ಬಣ್ಣ ಬಣ್ಣದ [illegible]—ಹೊಗಳಿಕೆಯ ರಂಗುಗಳು! ಹಿಂದೀಯರ ವಾರ್ತೆಗಳನ್ನು ಇಂಗ್ಲೆಂಡಿಗೆ ರವಾನಿಸುವಾಗ ಅವುಗಳಲ್ಲಿ ದೋಷಾರೋಪಣೆಗಳ ಮಸಿಗಳು—ಛದ್ಮಗಳು! ನಮ್ಮ ಗ್ರಹಗತಿ!

× × × ×

ಶೌಕತಾಲಿಯವರು ಅಮೇರಿಕಕ್ಕೆ ಹೋಗಿ ಮಾಡಿದ ಭಾಷಣಗಳಲ್ಲಿ ಅವರು ಗಾಂಧಿಯನ್ನು ದೂಷಿಸಿದ್ದು ಏನಾದರಿದ್ದರೆ, ಅದರ ಸವಿಸ್ತರ ವರದಿಯು ಮರುಕ್ಷಣವೇ ಹಿಂದೂಸ್ಥಾನಕ್ಕೆ ಬರುತ್ತದೆ. ಭೂಲೋಕದಲ್ಲಿ ಹುಟ್ಟುವವನು, ಗಾಂಧಿಯನ್ನು ಯಾರಾದರೂ ಸರಿ, ಎಷ್ಟು ದೊಡ್ಡವನೇ ಇರಲಿ, ಹೊಗಳಿದನೆಂದರೆ ಅವರ ಭಾಷಣವು ರಾಯಟರನಿಗೆ ಸಿಗುವುದೇ ಇಲ್ಲ!

× × ×

ದಿವಂಗತ ವಿ. ಜೆ. ಪಟೇಲರು ಹೋದ ಕಡೆ ಅಮೇರಿಕಕ್ಕೆ ಹೋಗಿ ಹಿಂದೀಯರ ಸ್ಥಿತಿಗತಿಗಳನ್ನು ಅಲ್ಲಿಯವರಿಗೆ ತಿಳಿಸಿದರು. ಉತ್ತಮ ಭಾಷಣಗಳನ್ನು ಕೊಟ್ಟರು. ಅಂತಹ ಪ್ರಭಾವಶಾಲಿಗಳ ಮಾತಿನ ವಾರ್ತೆಗಳು ರಾಯಟರನಿಗೆ ಎಲ್ಲಿಯೂ ಸಿಗಲಿಲ್ಲ!

× × × ×

ಚರ್ಚಿಲ್ಲ ಸಾಹೇಬರು ಹಿಂದೂಸ್ಥಾನವನ್ನು ದೂರಿ, ಹಿಂದೀಯರು ನಿರುಪಯೋಗಿಗಳೆಂದು ಹೇಳಿದೊಡನೆ ರಾಯಟರನು ನಿದ್ರೆ ಕೂಡಾ ಮಾಡದೆ ಆ ವಾರ್ತೆಯನ್ನು ಸವಿಸ್ತರ ಪ್ರಸಂಗಕ್ಕೇನೆ ರವಾನಿಸುವನು.

× × × ×

ಸಾಮುವೇಲ್ ಹೋರರು ಹಿಂದೀಯರ ಮೇಲೆ ಗದೆಯನ್ನೆತ್ತಿದರೆ ಸರಿ! ರೂಟರನ ಬಾಡಿದ ಮುಖ ಅರಳುವುದು. ಒಬ್ಬ ಬ್ರಿಟಿಷನಿಗೆ ಸ್ವಲ್ಪ ನೋವಾದರೆ ಅವನಿಗೆ ವರ್ಷಗಟ್ಟಲೆ ಬೇಸರ!—ಆದರೆ ಸಾವಿರ ಹಿಂದೀಯರು ಸತ್ತರೆ ಅವನ ಕಂಬನಿ ಗಾಣದು.

× × × ×

ಎಲ್ಲಿಯಾದರೂ ಬ್ರಿಟಿಷನಿಗೆ ಕಷ್ಟವೊದಗಿದೆಯೆಂದು ತಿಳಿದೊಡನೆ ರೂಟರನು ದಿನಂಪ್ರತಿ ವಾರ್ತೆಗಳನ್ನು ರವಾನಿಸ ತೊಡಗಿದನು! ಆದರೆ ಜರ್ಮನಿಯಲ್ಲಿ ಹಿಂದೀಯರು ಸಂಕಷ್ಟಕ್ಕೀಡಾಗಿರುವರೆಂದು ತಿಳಿದ ರೂಟರನಿಗೆ ಕುಂಭಕರ್ಣನ ನಿದ್ರೆ! ದೇಶವಾತ್ಸಲ್ಯವೆಂದರೆ ಇದಲ್ಲವೇ?

× × × ×

ಹಿಂದೂಸ್ಥಾನದಲ್ಲಿ ಎಷ್ಟು ಪ್ರಬಲ ಚಳವಳವಾದರೂ ನಡೆಯಲಿ! ಈ ವಾರ್ತೆಯನ್ನು ಉಪಾಯವಿಲ್ಲದೆ ಇಂಗ್ಲಾಂಡಿಗೆ ರವಾನಿಸುವುದಾದರೆ ರೂಟರನು "೧೨ ಅಥವಾ ೧೫ ಜನರು ದಂಗೆಯೆದ್ದಿದ್ದಾರೆ—ಇಷ್ಟೇ ಸಂಗತಿ!" ಎಂದೆನ್ನುವನು. ಇಂಗ್ಲಾಂಡಿನಲ್ಲಿ ೪೦ ಜನರು ಚಳವಳಿಸಿದರೆ ಆ ವಾರ್ತೆಯು ಹಿಂದೂಸ್ಥಾನಕ್ಕೆ 'ಭಯಂಕರ ಚಳವಳ' [illegible] ಎಂದೇ ಬರುವುದು. ಜೈ! ರಾಯಟರ್!

× × × ×

"ಟರ್ಕಿನಲ್ಲಿ ಇರಾಕಿನ ಕಿಂಗ್ ಫೈಸಲ್‌ರವರು ಮರಣಹೊಂದುವಾಗ ಅವರ ಬಳಿ ಅತಿಥಿಯಾಗಿದ್ದ ಮಿಸ್. ಬೇಟ್ಸಿ ಪಟ್ರಿ ಎಂಬವಳು ಮಾತ್ರ ಇದ್ದಳು" ಎಂದು ಸಪ್ಟಂಬರದಲ್ಲಿ ಹೇಳಿದ್ದ ರೂಟರನು "most sincere regret" ಎಂದು ಪಶ್ಚಾತ್ತಾಪ ತೋರಿಸಿ "ಫೈಸಲರು ಸಾಯುವಾಗ ಅವಳ ಬಳಿ ಪಟ್ರಿಯು ಇದ್ದುದಲ್ಲದೆ, ಅವಳ ಸಹೋದರ ಡಾ॥ ಪಾಲ್ ಪಟ್ರಿ ಎಂಬವರೂ ಇದ್ದರೆ"ಂದು ಹೇಳಿದ್ದಾನೆ. ಈ ರೀತಿಯ ಕ್ಷಮಾಯಾಚನೆಗೆ ಕಾರಣವೇನು?—ರೂಟರನೇ!

× × × ×

ಈ ಕ್ಷಮೆಯಾಚನೆಯಾದ ಮೇಲಾದರೂ ರೂಟರನಿಗೆ ಹಿಂದೀಯರ ಮೇಲೆ ಸಂಪೂರ್ಣ ಕರುಣೆ ಹುಟ್ಟಲಿ!

× × × ×

ರೂಟರನ ನೀತಿಯಿಂದ ಹಿಂದೂಸ್ಥಾನಕ್ಕೆ ಕೆಟ್ಟದಕ್ಕಿಂತ ಒಳ್ಳೆಯದೇ ಆಗಿದೆಯೆಂದೆನ್ನಿ. ಹಿಂದೂಸ್ಥಾನದ ವಿರುದ್ಧ ಪ್ರಚಾರದಿಂದ ಹಿಂದೀಯರು ಗೆದ್ದರೇ ವಿನಹ ಸೋಲಲಿಲ್ಲ ಎಂದು ರೂಟರನೂ ತಿಳಿದಿರುವನು.

× × × ×

ಶ್ರೀ. ವಿ. ಜೆ. ಪಟೇಲರ ಕುರಿತಾಗಿ ಆಂಗ್ಲ ಪತ್ರಿಕೆ ಏನು ಹೇಳಿದೆ ಎಂದು ರೂಟರನು ಹೆಚ್ಚಾಗಿ ಹೇಳಿರುವುದಿಲ್ಲ. ಹೇಗೆ ಹೇಳುವುದು?

× × × ×

ವ್ಯಾಪಾರದ ಚಳವಳವು ಇಂಗ್ಲಾಂಡಿನಲ್ಲಿ ಎದ್ದು ಬಿಟ್ಟಿತೆಂದರೆ ರೂಟರನ ಲೇಖನಿಗೆ ಪುರುಸೊತ್ತೇ ಇಲ್ಲ. ಊರೂರುಗಳ ಅಲ್ಪರ ಪ್ರತಿನಿಧಿಗಳಿಗೆ ನಿದ್ದೆಯೇ ಇಲ್ಲ!

× × × ×

ಈ ನಿದ್ದೆಗೆಟ್ಟ ಪರಿಣಾಮವಾಗಿ ರೂಟರನು ಈಗ ಕ್ಷಮೆ ಬೇಡಬೇಕಾಯಿತು.

× × × ×

ರೂಟರನಿಗೆ ಇನ್ನಾದರೂ ಸದ್ಬುದ್ಧಿಯನ್ನು ದೇವರು ಕೊಡಲೆಂದು ಹಾರೈಸುವ.

Canara Bank Limited.

Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—Bunder, Mangalore Local Office:—City & Bunder.

BRANCHES:— Bombay, Cochin, Calicut, Ernaculam, Alleppey, Chikmagalur, Gangull, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

ಮಂಗಳೂರು,
12—7—33.

A. Madhava Pai,
Secretary.

East & West Insurance Company Ltd.,

(Incorporated in India 1913).

Head Office:—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus
Declared
Rs. 15 Per 1000
On whole life &
Endowment Policies.

For particulars and Agency terms apply to:—
H. S. Nayak, *Organiser, Secretary,* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ
1000 ಬಹುಮಾನ.

ಸಾಬೂನು ಪಡೆಯುವಾಗ "   " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

[illegible]

[illegible]

[illegible]

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರು:—ಸನ್ ಬ್ರಾಂಡ್ ಕೊಡೆಯ ಖ್ಯಾತಿಯ ಸೇಟ್ ನಾನಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರತಿನಿಧಿಗಳು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Choukhamba, Benares City.

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ದೇಶಾಭಿಮಾನಿಗಳು ತ್ವರಿತವಾಗಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಣಿಗಳೂ, ಶೀರೆಗಳೂ ಅಂಚುಗಳುಳ್ಳವೆಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಬನಾರಸೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಸ್ವಾಮಿಗೆ ಮಿಶ್ರನ್, ಮಣಿ ಧಾರೀ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕ್ಯಾಲೆಂಡರ್, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)

— ಗಡಿಯಾಳ ಪ್ರಕಟ —

[illegible]

King George Coronation,
BOBMAY 4.
16—6—33. (Head Office—Kotah, Rajputana)

(11—8)

DOCTOR. HAKIM. VAIDYA

ಡಾಕ್ಟರು ಹಕೀಮರು ವೈದ್ಯರು
ಇವರೆಲ್ಲ ಏಕಾಭಿಪ್ರಾಯದ
French Barqi Water
"ಫ್ರೆಂಚ್ ಬಾರ್ಕಿ ವಾಟರಿನಿಂದಾಗಿ"

[illegible]

Bargi Depot,
Kothe No. 44. Kushak St. MUTTRA.

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.

ಸ್ಫುಟವಿಚಾರಗಳು:—

ಬೃಹನ್ಮಹಾರಾಷ್ಟ್ರದ ಪರಿಷತ್ತು, ಇಂಗ್ಲಿಷ ಸ್ತ್ರೀಯರ ಪ್ರಲಾಪ, ಬೇಡವಾದ ಅಧಿಕಾರಿಗಳ ಬಡತಿ, ಹತ್ತೀ ಬಟ್ಟೆಯ ಕರಾರು, ಶ್ರೀಯುತ ನರಿಮನ್‌ರವರು, ದುಷ್ಕಾಲಕ್ಕೆ ಎರಡು ಕಾರಣಗಳು.

ಬೃಹನ್ಮಹಾರಾಷ್ಟ್ರದ ಪರಿಷತ್ತು

ಹಿಂದೆ ನಡೆದ ಚುನಾವಣೆಯಲ್ಲಿ ಸೇರಿದ ಕಾಂಗ್ರೆಸ್ ಪಕ್ಷದವರಲ್ಲಿ ಕೌನ್ಸಿಲು ಪ್ರವೇಶಕ್ಕೆ ಸ್ವಾತಂತ್ರ್ಯರಕ್ಷಕರ ಸಭೆಗೆ ಮಹಾರಾಷ್ಟ್ರೀಯರೇ ಹೆಸರು ಕೊಟ್ಟಿರುವರು. ಏಕೆಂದರೂ ಇಲ್ಲಿನವರು ಮೇಲಾಗಿ ಇಡೀ ದೇಶಕ್ಕೆ ಒಂದು ಹೊಸರೀತಿ ರಾಜಕೀಯ ಸಂಸ್ಥೆಯೆಂದು ಕಾಂಗ್ರೆಸ್ ಸಭೆ ಇತ್ತು. ಅದು ಸತ್ತಿಲ್ಲ; ಆದರೂ ಸಮಾಧಿಸ್ಥಿತಿಯಲ್ಲಿದೆ. ಅತ್ತ, ಹೊಸ ಸುಧಾರಣೆಗಳೆಂಬವು ಎಂದಿಗೆ ಬರುವುವು ಎಂಬುದೂ ಯಾರಿಗೂ ತಿಳಿಯದ ವಿಷಯವಾಗಿದೆ. ಆಯುಷ್ಯ ಮುರಿಯುವ ವ್ರತವನ್ನು ಯಾರೂ ಕೈಕೊಳ್ಳಲೊಲ್ಲದವರಾದರೂ, ವ್ಯಕ್ತಿಗಳು ಕೆಲವರು ಹಾಗೆ ಮಾಡುತ್ತಾರೆ. ಕಾಂಗ್ರೆಸ್ ಮುಖಂಡರು ಸಭೆ ಕರೆದಿಲ್ಲ, ಸೇರಿಲ್ಲ. ಅಷ್ಟರಲ್ಲೇ ಉತ್ಸಾಹಿಗಳಾಗಿ ಕೆಲವು ಕಾಂಗ್ರೆಸ್ ಧುರೀಣರು, ಹೊಸ ಕೌನ್ಸಿಲುಗಳಲ್ಲಿ ಸೇರಿಯೇ ಸೇರುವುದು ಶ್ರೇಯಸ್ಕರವೆಂದು [illegible] ಸಾರಿ, ಸೇರಿ, ತೀರ್ಮಾನಿಸಿ ಆಯಿತು. ಆಗಲಿ, ದೇಶದಲ್ಲಿರುವ ನೂರಾರು ಪಕ್ಷಗಳಲ್ಲಿನ ಪ್ರಮುಖರಾದರೂ ಒಂದು ಸಭೆಗೂಡಿ, ಎಲ್ಲರೂ ಒಪ್ಪಬಹುದಾಗಿರುವ ಕಾರ್ಯಕ್ರಮವೊಂದನ್ನು ಚರ್ಚಿಸಿ, ಈ ಪಕ್ಷವನ್ನು ಕಟ್ಟಿಕೊಂಡರೆ, ಅದೂ ಒಂದು ಕ್ರಮವೆನ್ನಬಹುದಾಗಿತ್ತು. ಆಗ ತಾನೆ ಇಡೀ ಜನಾಂಗಕ್ಕೆ ಹಿತಕರವಾದ ಕಾರ್ಯಕ್ರಮವನ್ನು ಸಾರಿ, ದೇಶೋನ್ನತಿ ಸಾಧಿಸಬಹುದಾಗಿತ್ತು. ಮಹಾರಾಷ್ಟ್ರೀಯರೂ ಮಧ್ಯಪ್ರಾಂತ್ಯದ ಕೆಲವರೂ ಸೇರಿ ಈ ಪಂಗಡ ಮಾಡಿಕೊಂಡಿರುವರು. ಹಾಗೆಂದು ಮದ್ರಾಸಿನವರೇನೂ ಹಿಂದೆ ಬೀಳರು; ಕೂಡಲೆ, ಇಲ್ಲಿಯೂ ಬೀಸಿದ್ದ ಗಾಳಿಗೇ ಹಾಯಿ ಬಿಡಿಸುವುದುತ್ತಮವೆಂದು ಇವರೂ ಸಿದ್ಧರು. ಕಾಯಿದೇ ಭಂಗವನ್ನು ಯಾರೂ ಒಪ್ಪುವುದಿಲ್ಲ; ಕ್ರಾಂತಿಯೂ ಬೇಡವಾಗಿದ್ದ್ಯೆ; ನಾವೂ ಕೌನ್ಸಿಲಲ್ಲಿ ಸೇರಿ ಹೆಣಗುವುದು ಈಗ ಹೆಣಗದಂತೆ ಬಿದ್ದುಕೊಂಡಿರುವುದಕ್ಕಿಂತಲೂ ಮೇಲಲ್ಲವೆ? ಎಂದೇ ಈ ಪಕ್ಷದವರ ಪ್ರಶ್ನೆ.

ಇಂಗ್ಲಿಷ ಸ್ತ್ರೀಯರ ಪ್ರಲಾಪ

ಇಂಗ್ಲಿಷ ಹೆಣ್ಣುಮಕ್ಕಳು ಹಿಂದೀಯರನ್ನು ವಿವಾಹ ಮಾಡಿಕೊಳ್ಳುವುದರಿಂದ, ಅವರಿಗೆ ಮುಂದೆ ಜನ್ಮಾಂತರದ ವರೆಗೂ ಕಾಟ ಸಂತಾಪಗಳು ಉಂಟಾಗುವುವು ಎಂದೂ ಅವರನ್ನು ಪತಿಮುಂದಿಂದಲ್ಲಿ ಗಣನೆಗೆ ತಾರದೆ ನೋಯಿಸುವರೆಂದೂ ಮೊದಲಾಗಿ ಬುದ್ಧಿವಾದವನ್ನು ಕೊಡುತ್ತಾ, ಆದರೆ ಹಿಂದೀ ಕ್ರೈಸ್ತರನ್ನು ಅವರು ವಿವಾಹವಾಗಬಹುದೆಂದೂ ಸೂಚಿಸಿ, ಆಂಗ್ಲ ವೈದಿಕರೊಬ್ಬರ ಧರ್ಮಪತ್ನಿಯವರು ಧರ್ಮೋಪದೇಶವನ್ನೂ ಮಾಡಿರುವರು. ಹಿಂದೀಯರು ಯುರೋಪಿಯನ್ನು ವಿವಾಹವಾಗಬೇಕೆಂದು ಸಾರುವ ಅಥವಾ ಚಳವಳ ಮಾಡುವ ವ್ಯಕ್ತಿಗಳಾಗಲಿ, ಪಂಗಡಗಳಾಗಲಿ ನಮ್ಮ ದೇಶದಲ್ಲಿಲ್ಲವಷ್ಟೆ. ಹಿಂದೀಯರನ್ನು ವಿವಾಹವಾದಲ್ಲಿ ಉಂಟಾಗುವ ಯಾತನೆಗಳನ್ನು ವಿವರಿಸಿರುವ ವೈದಿಕ ಧರ್ಮಪತ್ನಿಯವರು, ಇಂಗ್ಲೆಂಡಿನಲ್ಲೇ ದಾಂಪತ್ಯ ವಿಚ್ಛೇದಕ್ಕಾಗಿ ನಡೆವ ಕಚೇರಿ ವ್ಯಾಜ್ಯಗಳ ತೀರ್ಮಾನಗಳನ್ನೂ ರುಜುವಾತುಗಳನ್ನೂ ಒಮ್ಮೆ ಓದಿ ನೋಡಿದ್ದರೆ, ತಾಜಾ ಇಂಗ್ಲಿಷರನ್ನೇ ಮದುವೆಯಾದ ತಾಜಾ ಇಂಗ್ಲಿಷ ಹೆಣ್ಣುಮಕ್ಕಳ ದುಃಸ್ಥಿತಿಯೂ ದಾಂಪತ್ಯ ಸುಖವೂ ಎಷ್ಟಿದೆ ಎಂದಾದರೂ ತಿಳಿಯುತ್ತಿರಲಿಲ್ಲವೆ? ಅಕ್ರೈಸ್ತ ಹಿಂದೀಯರನ್ನು ವಿವಾಹವಾದ ಇಂಗ್ಲಿಷ ಯುವತಿಯರು ಆ ತಾಜಾ ಇಂಗ್ಲಿಷರನ್ನು ವಿವಾಹವಾದವರಿಗಿಂತ ಸಾವಿರ ಪಾಲು ಹೆಚ್ಚಿನ ಸುಖ ಪಡೆದೇ ಇರುವರು ಎಂದು ಅಮೃತ ಬಜಾರ ಪತ್ರಿಕೆ ಎನ್ನುತ್ತಿದೆ.

ಬೇಡವಾದ ಅಧಿಕಾರಿಗಳ ಬಡತಿ

ಈ ಪ್ರಶ್ನೆಯು ಈಗಲೆ ಸೈನ್ಯಾಧಿಕಾರಿಗಳನ್ನು ಕಾಡತೊಡಗಿದೆ. ಅರುವತ್ತು ವರ್ಷ ವಯಸ್ಸಿನ ಸೇನಾನಾಯಕರು (ಇವರು ಆರೋಗ್ಯವಂತರೇ ಅಹುದು) ಇನ್ನೂ ಇನ್ನೂ ಬಡ್ತಿ ಹೊಂದುತ್ತ ಅತ್ಯಧಿಕ ಸಂಬಳದ ಹುದ್ದೆಗಳನ್ನು ಅನುಭವಿಸುವುದು ನ್ಯಾಯವಾಗಿಲ್ಲವೆಂದು, ಸೈನ್ಯಕ್ಕೆ ಸಂಬಂಧಪಟ್ಟ ಪತ್ರಿಕೆಗಳಲ್ಲಿಯೂ ಇತರ ಪತ್ರಿಕೆಗಳಲ್ಲಿಯೂ ಟೀಕಿಸುತ್ತ ಬಂದರೂ, ಮಾಮೂಲಿನಂತೆ ಸಾಗುತ್ತಲೇ ಇದೆ. ಈ ಮಧ್ಯೆ, ಕೆಳ ತರಗತಿಯಿಂದ ಕಾಲಾವಧಿಗೆ ತಕ್ಕಂತೆ ಮೇಲ್ತರಗತಿಗೆ ಏರುವವರ ಸಂಖ್ಯೆ ಹೆಚ್ಚುತ್ತಲಿದೆ. ಇಂಗ್ಲೆಂಡಿನಲ್ಲಿ ಸೈನ್ಯಕ್ಕೆ ಸೇರಿ ಕೆಳತರಗತಿಯಲ್ಲೇ ಮುದುಕರಾಗುವರು; ಅದೇ ಹಿಂದೀ ಸೈನ್ಯದಲ್ಲಾದರೆ ವರ್ಷ ಕಳೆದಂತೆ ಬಡ್ತಿ ನಿಶ್ಚಯವಾಗಿರುವ ಕಾರಣ, ಇಂಗ್ಲಿಷ ಸೈನ್ಯಕ್ಕೆ ಸೇರುವ ಬದಲಾಗಿ, ಹಿಂದೀ ಸೈನ್ಯ ವಿಭಾಗಕ್ಕೆ ಆತುರದಿಂದ ಬರುವವರ ಸಂಖ್ಯೆ ಹೆಚ್ಚಾಗಿದೆ. ಜರ್ಮನ್ ಯುದ್ಧಕಾಲದಲ್ಲಿ ಸೇರಿದ ಎಂತವರನ್ನಾದರೂ ಬಡ್ತಿ ಪ್ರಕಾರ ಮೇಲೇರಿಸಿ ತರಬೇಕಾದ ಕಾರಣ ಸೈನಿಕರಿಗಿಂತ ಆಫೀಸರರ ಸಂಖ್ಯೆಯೇ (ರೋಗಿಗಳಿಗಿಂತ ಡಾಕ್ಟರರ ಸಂಖ್ಯೆ) ಹೆಚ್ಚುತ್ತ ಬರುವುದೋ ಎಂಬ ಅಂಜಿಕೆ ಇದೆ. ೧೯೩೫ರಲ್ಲಿ ನೇಮಕ ಹೊಂದಿದ ೩೫೦ ಮಂದಿ ಆಫೀಸರರು ಬರುವ ವರ್ಷ ಮೇಜರರಾಗುವರು; ೩೫೦ ಮಂದಿ ಅದರ ಮುಂದಣ ವರ್ಷವೇ, ೧೯೩೬—೩೭ರಲ್ಲಿ ಇನ್ನೂ ೪೦೦ ಮಂದಿಯೂ ಬಡ್ತಿ ಹೊಂದಿಯೇ ಹೊಂದಬೇಕಾಗಿದೆ. ೧೯೩೭ರಲ್ಲಿ ಈ ಆಫೀಸರುಗಳ ಸಂಖ್ಯೆ ಮಾತ್ರ ಕೊನೆಯ ಪಕ್ಷ ೬೦೦ ಆಗುವಾಗ, ಹಿಂದೀ ಸೈನ್ಯಕ್ಕೆ ಬೇಕಾದ ಎಲ್ಲ ಆಫೀಸರರ ಸಂಖ್ಯೆಯು ೫೦೦ಕ್ಕೆ ಮಿಕ್ಕುವುದಿಲ್ಲ. ೧೯೪೦ರಲ್ಲಂತೂ ಸುಮಾರು ದುಪ್ಪಟ್ಟು ಸಂಖ್ಯೆಯ ಆಫೀಸರರು ಬೇಡವಾಗುವರು. ಆದರೆ ಇವರನ್ನು ಮನೆಗೆ ಕಳುಹಿಸುವುದು! ೧೯೩೦ರಿಂದ ಎಂದಾವರ್ತಿ ಆಫೀಸರುಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಈ ಸಂಕಟವಲ್ಲ ಇನ್ನೂ ಕಳೆಯಬೇಕಾಗಿ ಬಂದಿದೆ, ಇಲ್ಲದಿದ್ದರೆ ನಿರ್ವಾಹವಿಲ್ಲ. ಸೈನಾಧ್ಯಕ್ಷರು ಈ ವಿಧಿಯನ್ನು ನೋಡಿ ಕಂಗಾಲಾಗಿರುವರು. ಏನು ಮಾಡುವಂತೆ!

ಹತ್ತೀ ಬಟ್ಟೆಯ ಕರಾರು

ಸರಾಸರಿಯಾಗಿ ಹಿಂದೀಯರು ೩೬೦೦ ಮಿಲ್ಲಿಯ ಯಾರ್ಡು ಬಟ್ಟೆಯನ್ನು ಪ್ರತಿವರ್ಷ ಕೊಳ್ಳುವರು. ಇದರಲ್ಲಿ ಗಿರಣಿಗಳಲ್ಲಿ ೨೦೦೦ ಮಿಲ್ಲಿಯ ಯಾರ್ಡುಗಳಿಗೆ ಕಡಿಮೆಯಾಗದೆ; ೩೨೦೦ ಮಿಲ್ಲಿಯ ಯಾರ್ಡುವರೆಗೆ ಬಟ್ಟೆಯು ತಯಾರಾಗುತ್ತದೆ. ಹೀಗಾಗಿ ಬರೇ ೪೦೦—೫೦೦ ಮಿಲ್ಲಿಯ ಯಾರ್ಡು ಬಟ್ಟೆ ಮಾತ್ರ ಪರದೇಶಗಳಿಂದ ಇತ್ತ ಬರುತ್ತಿದೆ. ಗಿರಣಿಗಳೂ ಕೈಮಗ್ಗಗಳೂ ಸ್ವಲ್ಪ ಹೆಚ್ಚಾಗಿ ಕೆಲಸಮಾಡಿದರೆ, ಅತ್ತಲೇ ಇಷ್ಟನ್ನು ತಯಾರಿಸಬಹುದು. ಈ ಬಟ್ಟೆಯ ರಾಶಿಯಾದರೂ ಒಂದೇ ಬಗೆಯಾಗಿ ಬೆಳೆವುದಿಲ್ಲ. ೧೯೧೩ರಲ್ಲಿ ಜನರು ೪೦೦೦ ಮಿಲ್ಲಿಯ ಯಾರ್ಡು ಉಪಯೋಗಿಸಿದ್ದರು; ಅಲ್ಲಿಂದೀಚೆಗೆ ಸುಮಾರು ೩೦ ಕೋಟಿ ಜನರು ಹೆಚ್ಚಿರುವರು. ಹೀಗಾಗಿ, ಇನ್ನೂ ಆರ್ಥಿಕ ಸ್ಥಿತಿ ಉತ್ತಮವಾದರೆ, ಜನರು ಹೆಚ್ಚು ಹೆಚ್ಚಾಗಿ ಬಟ್ಟೆ ಖರೀದು ಮಾಡಬಹುದು. ಆಗ ತಾನೆ ಪರದೇಶೀ ಬಟ್ಟೆಗೆ ದಾರಿತೋರಬಹುದು. ಅಂತಹ ಸ್ಥಿತಿಯು ಇನ್ನೆರಡು ವರ್ಷಗಳಲ್ಲಿ ಉಂಟಾಗಬಹುದೆಂದು ಲಂಕೇಶಿಯರು ಎಣಿಸಿಯದೆ, ಜಾಪಾನೂ ಎಣಿಸಿಯದೆ. ಆದಕ್ಕಾಗಿ ಇಷ್ಟೆಲ್ಲ ಅಂತರಂಗ ಸಂಭಾಷಣೆ, ಮೈತ್ರಿ ಎನ್ನುವವರಿದ್ದಾರೆ. ೧೯೩೦ರಲ್ಲಿ ಲಂಕೇಶಿಯರ ಮೇಲೆ ಹೊರಿಸಿರುವ ಹೆಚ್ಚಿನ ಸುಂಕವನ್ನು ರದ್ದು ಮಾಡಬಹುದಾಗಿ ಬೊಂಬಾಯಿ ಗಿರಣಿಗಾರರು ಒಪ್ಪಿರುವರು. ಇಲ್ಲಿನ ಹತ್ತಿಯನ್ನು ಹೆಚ್ಚಾಗಿ ಕೊಂಡುಕೊಳ್ಳುವುದೇ ಹೊರತು, ಎಲ್ಲೆಲ್ಲಿಯೂ ಮಾರಲಾಗುವ ಹಾಗೆ ಅವರು ಸಾಧಿಸಲು ಒಪ್ಪಿರುವರು. ಒಂದು ಮಿಲ್ಲಿಯ ಕಟ್ಟು ಹತ್ತಿಯನ್ನು ಜಾಪಾನು ಪಡೆದು ನಮಗೆ ೪೦೦ ಮಿಲಿಯ ಯಾರ್ಡು ಬಟ್ಟೆ ಮಾರಲೊಪ್ಪಿರುವುದದು. ಜಾಪಾನು ಇತರ ಎಷ್ಟೋ ಸರಕನ್ನು ಇಲ್ಲಿ ತಂದು ತುಂಬಿಸುತ್ತಿದೆ ಎಂದು ಗಲಭೆ ಎದ್ದಿದೆ.

ಶ್ರೀಯುತ ನರಿಮನ್‌ರವರು

ಜೈಲಿನಿಂದ ಹೊರ ಬರುತ್ತಲೇ, ಸದ್ಯ ಸ್ಥಿತಿಯನ್ನು ವಿಮರ್ಶಿಸ ತೊಡಗಿ, "ಕಾಂಗ್ರೆಸ್ ಸದಸ್ಯರಲ್ಲಿ ಕೆಲವರು ವ್ಯಕ್ತಿಗಳನ್ನು ಸಂಘಕ್ಕಿಂತ ಹೆಚ್ಚಿನವರೆಂದೂ ಭಾವಿಸುವ ಹಾಗೂ ಬಹುಮತವನ್ನು ಆಧರಿಸಿ ನಡೆವ ಬದಲಾಗಿ ಪಕ್ಷಗಳನ್ನು ಕಟ್ಟಿಕೊಂಡು ನಡೆವುದೇ ಹಿತವೆಂದು ಎಣಿಸಿರುವುದನ್ನು" ಖಂಡಿಸಿರುವರು. ಕಾಂಗ್ರೆಸ್ಸಿನ ಮೂಲ ಸೂತ್ರಗಳನ್ನು ಎಂದೆಂದಿಗೂ ಭಗ್ನಮಾಡಬಾರದಾಗಿಯೂ, ತಪ್ಪು ಮಾಡುವ ಹಕ್ಕು ಎಲ್ಲರಿಗೂ ಇದೆ ಎಂದು ಹೇಳಿರುವ ಮಹಾತ್ಮರು ಇತರರೂ ತಪ್ಪು ಮಾಡುವರಾದರೆ ಮಾಡಲೆಂದು ತಾವೂ ಅನುಜ್ಞೆ ಕೊಡಬೇಕಾಗಿಯೂ, ಮುಂದಾಳುತನವು ಕಾಂಗ್ರೆಸ್ಸಿಗೆ ವಿಧೇಯವಾಗಿರತಕ್ಕದೆಂದೂ ಸರ್ವ ಮುಂದಾಳುಗಳು ಬಹಳವಾಗಿ ಆಲೋಚಿಸಿ ಪುನಃ ಒಂದಾಗಬೇಕೇ ಹೊರತು ಪಂಗಡ ಕಟ್ಟಿಕೊಳ್ಳಬಾರದೆಂದೂ ಅವರ ಸೂಚನೆಗಳಾಗಿವೆ. ಮಹಾತ್ಮರು ಹೇಳಿದಂತೆ ನಡೆವ ರೀತಿಯನ್ನು ಬಿಟ್ಟು ಸ್ವಂತ ವಿವೇಕವನ್ನು ನಿರ್ವಂಚನೆಯಿಂದ ಉಪಯೋಗಿಸಲು ಕಲಿಯಬೇಕೆಂದು ಅವರು ಎಲ್ಲರಲ್ಲೂ ವಿನಂತಿ ಮಾಡಿಕೊಂಡಿರುವರು.

ದುಷ್ಕಾಲಕ್ಕೆ ಎರಡು ಕಾರಣಗಳು

ಲಂಡನಿನಿಂದ ಇತ್ತ ಚಿಕಿತ್ಸೆ ಭಾಷಣ ಕೊಡುತ್ತಿರುವ ಡಾ| ನೊರ್ವುಡ್ ಎಂಬ ಆಂಗ್ಲ ವೈದಿಕರು, ತ್ರಿವೇಂದ್ರಮಿನಲ್ಲಿ ಭಾಷಣ ಮಾಡುತ್ತಾ,—ಜಗತ್ತೆಲ್ಲ ದುಷ್ಕಾಲಕ್ಕೆ ಒಳಗಾಗಿದೆ. ಆದರೆ ಇದು ಬಡತನದ ದೆಸೆಯಿಂದಲ್ಲ, ದುರ್ಬಲತೆಯಿಂದಲ್ಲ, ಆದರೆ ಧನಾಧಿಕ್ಯದಿಂದ ಮತ್ತು ಅಧಿಕಾರಾಧಿಕ್ಯದಿಂದ! ಮಹಾಮಾರಿ ರೋಗ, ಮಹಾಯುದ್ಧ, ಮಹಾ ಕ್ಷಾಮಗಳಿಂದ ಮಾನವರು ಹಿಂದೆ ನರಳಿರುವರಾದರೂ, ಇಂದಿನ ನಮ್ಮ ನರಳಿಕೆಗೆ ಹಿಂದಿನ ಯಾವ ದುಷ್ಕಾಲಗಳೂ ಎಣೆಯಾಗಲಾರವು. ವಿಜ್ಞಾನದ ಬೆಂಬಲದಿಂದಲೂ ಈಗ ಉತ್ಪನ್ನಗಳು ಧಾರಾಳವಾಗಿವೆ. ಉತ್ಪನ್ನಗಳನ್ನು ಕೊಂಡುಕೊಳ್ಳುವವರಿಲ್ಲ. ಹಣಕ್ಕೆ ಬೆಲೆ ಏರಿದೆ; ಮೋಹದಿಂದಲೂ ಲೋಭತ್ವದಿಂದಲೂ ಹಣ ಕೂಡಿಸಿಟ್ಟು, ಬಡವರಿಗೆ ಅನ್ನವಸ್ತ್ರಗಳೆರಡನ್ನೂ ಸಲ್ಲಿಸುವವರಿಲ್ಲವಾಗಿದೆ. ಆಫ್ರಿಕದ ಪೂರ್ವದಲ್ಲಿ ಮಹಾ ಕ್ಷಾಮವುಂಟಾಗಿದೆ; ಜನರ ದುಃಖಾಪತ್ತ್ಯಯಾದಿಗಳಿಗೆ ಮಿತಿ ಇಲ್ಲ. ಆದರೆ ಅಲ್ಲೇ ಇರುವ ವಜ್ರದ ಗಣಿಗಳು ಸುಭಿಕ್ಷವಾಗಿವೆ. ಹೀಗೆ ಒಂದೊಂದು ಕಡೆ; ವಜ್ರ ಚಾ ರಬ್ಬರು ಕಾಫಿ ಇತ್ಯಾದಿಗಳು ವಿಶೇಷ ದೊರೆವಾಗ, ಬಡವರು ಇವುಗಳ ಹುಟ್ಟಿನ ಪ್ರಯೋಜನ ದೊರೆಯದೆ ಕಂಗಾಲಾಗಿಯೆ ಇರುವಂತಾಗಿದೆ. ಹಿಂದೂ ದೇಶವು ಸುಖಮಯವಾಗಬೇಕಾದರೆ,—ಕೈಗಾರಿಕೆಗೆ ಹಣವು ಗುಲಾಮನಾಗಿರಬೇಕು, ಸರ್ವರೂ ಸೋದರ ಭಾವದಿಂದ ಪರಸ್ಪರ ಪ್ರೀತಿಯಿಂದ ಇರಬೇಕು,—ಇವೇ ದುಷ್ಕಾಲ ನಿವಾರಣೆಗೆ ಎರಡೇ ಉಪಾಯಗಳು ಎಂದು ಬೋಧಿಸಿದರು.

NOTES...
ನೋಟಗಳು.

ಬರ್ಮವನ್ನು ಹೇಗೂ ಮಾಡಿ ವಿಂಗಡಿಸಬೇಕೆಂದು ನಿರ್ಧಾರವಾಗುತ್ತ ಬರುವಾಗಲೇ, ಉತ್ತರ ಬರ್ಮವನ್ನು ಅಸ್ಸಾಂ ಪ್ರಾಂತ್ಯಕ್ಕೆ ಸೇರಿಸಬೇಕೆಂದೂ ಸೂಚನೆಯಾಗುತ್ತಿದೆ. ಅದು ಅಖಂಡ ಕಾಡು, ಕಾಡು ಜನರ ಬೀಡು. ಮೊದಲೇ ಖಜಾನೆ ಬರಿದಾದ ಅಸ್ಸಾಮು ಈ ಕಾಡನ್ನೂ ಕಾಡು ಜನರನ್ನೂ ಸೇರಿಸಿಕೊಂಡು ಬರ್ಮದ ಖರ್ಚು ಕಡಿಮೆ ಮಾಡಿದರೆ, ಉಳಿದ ಬರ್ಮದ ಸಂಪತ್ತು ಅನುಭವಿಸುವುದಕ್ಕೆ ಅನುಕೂಲತೆ ಅವಕಾಶಗಳು ಹೆಚ್ಚುವುವಲ್ಲವೆ?

* * * *

ದನಗಳ ಹಾಲು ಹೆಚ್ಚಾಗಬೇಕಾದರೆ, ಹುಲ್ಲು ತಿನ್ನುವಾಗ ಅವುಗಳು ಬಾಲ ಬೀಸುವುದನ್ನು ಕಡಿಮೆಮಾಡುವಂತಾಗಬೇಕಂತೆ. ನುಸಿನೊಣಗಳು ಮೈಮೇಲೆ ಕೂತು ಕಚ್ಚದಂತಾದಲ್ಲಿ, ದಿನಕ್ಕೆ ಮೂರುವರೆ ರಾತಲು ಹಾಲು ಹೆಚ್ಚುವುದೆಂದೂ ಕಂಡು ಹಿಡಿದಿದ್ದಾರೆ.

* * * *

ಕಾವ್ಯರಂಜನ ಮತ್ತು ವಿರಾಯಂಜನ ಕಾಲಗಳಲ್ಲಿ, ತಲೆಯಲ್ಲಿ ಹೇನೂ ಕೂತಲ್ಲಿ ತಗುಣೆಯೂ, ಸುತ್ತಲೂ ನುಸಿಗಳೂ ಸುಳಿದಾಡದಂತೆ ಮಾಡಿದರೆ,—ಅದರ ಮತ್ತು ಇದರ ರಸ ಎರಡೂ ಸರಿಯಾದಾವು ಎಂಬುದಕ್ಕೆ ಗೋರಸದ ಮೇಲಣ ಟೀಕೆಯು ಸ್ಪಷ್ಟಗೊಳಿಸುವುದು.

* * * *

ಕೆಲವೇ ವರ್ಷಗಳಲ್ಲಿ ನಾವು ಬತ್ತ ಬೆಳೆಸುವುದನ್ನು ಬಿಟ್ಟುಬಿಡಬೇಕಾಗುವುದು. ಇಲ್ಲಿನ ಬತ್ತದ ಬೆಲೆಗೆ ನಮಗೆ ಅಕ್ಕಿ ಸಿಗುವ ಹಾಗಾದರೆ, ಬತ್ತ ಬೆಳೆಸುವವರಾರು? ಜಾಪಾನು ಇಲ್ಲಿ ಅಕ್ಕಿ ತಂದು ಇಳಿಸುವುದು! ಬರ್ಮಾ ಬೇರೆಯಾದ ಮೇಲೆ ಇಂಗ್ಲಿಷ ವರ್ತಕರು ಅಲ್ಲಿಂದ ಇಲ್ಲಿಗೆ ಅಕ್ಕಿ ತಂದು ರಾಶಿ ಹಾಕುವರು. ಈಗಲೇ ಮೂವತ್ತು ವರ್ಷದ ಹಿಂದಣ ಬೆಲೆಗೂ ಕಡಿಮೆಗೆ ಅಕ್ಕಿ ಇಲ್ಲಿ ಸಿಗುವಾಗ, ಇಲ್ಲಿನ ಅಕ್ಕಿಗೆ ಬೆಲೆಯೇ ಇಲ್ಲದ ದಿನಗಳೂ ಬಂದಿಕ್ಕಿವೆ.

* * * *

ಆದರೂ ಜಾಪಾನಿನಲ್ಲಿ ಎಕ್ರೆಗೆ ನಾಲ್ಕಾಣೆ, ಅಮೇರಿಕದಲ್ಲಿ ೮ ಆಣೆಯಂತೆ ಸರಕಾರದ ಕೃಷಿ ಇಲಾಖೆ ವ್ಯಯಿಸಿ, ಹೊಸ ರೀತಿಯ ಸುಲಭ ಕ್ರಮಗಳನ್ನು ಪ್ರಕಟಿಸುತ್ತದೆ; ಇಲ್ಲಿ, ೮ ಆಣೆಯ ವ್ಯಯವಾಗುವುದಾದರೂ, ಉತ್ತಮ ಕ್ರಮಗಳನ್ನು ಸರಕಾರವು ಕಂಡು ಹಿಡಿಯುವುದಾದರೂ ಜನರಿಗೆ ಅವು ತಿಳಿದೇ ಬರುವ ಹಾಗಿಲ್ಲ.

* * * *

ಸರಕಾರದ ಕೃಷಿಕ್ಷೇತ್ರದಲ್ಲಿ ಉತ್ತಮ ಗೋದಿಯು ಎಕ್ರೆಗೆ ೪೭|| ಮಣ ಬೆಳೆಸ ಬರುವಂತಾಗಿದೆ. ಜನರು ಇದನ್ನು ಬೆಳೆಸ ತೊಡಗಿದರೆ, ದೇಶಕ್ಕೆ ಹಲವು ಕೋಟಿ ರೂಪಾಯಿಗಳ ಲಾಭವುಂಟು. ಆದರೆ ಇನ್ನೂ ಈ ವಿಷಯ ಮಾಹಿತಿಯು ಪ್ರಕಟವಾಗಿಯೇ ಇಲ್ಲವಲ್ಲ!

* * * *

ನಮ್ಮ ಪಟೇಲರು ಸ್ವದೇಶಕ್ಕಾಗಿ ಹೋರಾಡಿ ಪರದೇಶದಲ್ಲಿ ಮಡಿದು ಪ್ರಪಂಚದಲ್ಲೆಲ್ಲ, ಈ ದೇಶದ ಹೆಸರು ಮತ್ತು ಅವರ ಕೊನೆಯ ಸಂಕಟದ ಕಾರಣಗಳು ತಿಳಿಯುವಂತೆ ಮಾಡಿದರು. ಲಂಡನಿನ ಟೈಮ್ಸ್ ಪತ್ರಿಕೆಯೊಂದು "ಇವರು ಸಾಯುವಂತಿಲ್ಲ. ಸುಮ್ಮನೆ ಸಾಯುವರಂತೆ ಎಂದೇ ಹೋಗಿ ಜಗತ್ತೆಲ್ಲ ಇವರ ಮಹತ್ವ ಕೊಂಡಾಡುವಂತೆ ಮಾಡುತ್ತಾರೆ" ಎಂದಿತು.

\+ ++ +

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

M A N G A L O R E.

'ಪಟೇಲರ ಶವ ಸಂಸ್ಕಾರಕ್ಕೆ ಚೌಪಾಟಿಯನ್ನು ಕೊಡೆವು'

ಸರ್ದಾರ ವಲ್ಲಭಭಾಯಿಯವರ ಬಿಡುಗಡೆ?

ಕಮಲಾದೇವಿ ಚಟ್ಟೋಪಾಧ್ಯಾಯರನ್ನು ಜಾಮೀನಿನ ಮೇಲೆ ಬಿಟ್ಟರು

ತಾ. ೯

ದಿವಂಗತ ವಿ. ಜೆ. ಪಟೇಲರ ಕಳೇಬರವು ಈ ದಿನ ಮುಂಬಾಯಿಯ ಬಂದರವನ್ನು ತಲುಪುವುದು. ಅವರ ಶವಸಂಸ್ಕಾರವನ್ನು ಮುಂಬಾಯಿಯ ಚೌಪಾಟಿಯಲ್ಲಿ ಮಾಡಲೆಡೆಗೊಡಬೇಕೆಂದು ಸಂಸ್ಕಾರ ಬೋರ್ಡಿನವರು ಮುನಿಸಿಪಲ್ ಕಮಿಶನರರಿಗೆ ಬರೆದುಕೊಂಡರು. ಆ ಮನವಿಯನ್ನು ಅವರು ಮುಂಬಾಯಿ ಸರಕಾರದ ಸಲಹೆಗಾಗಿ ಕಳುಹಿಸಿದರು. ಕೆಲವು ದಿನಗಳ ಮೇಲೆ "ಶ್ರೀ ಪಟೇಲರ ಶವ ಸಂಸ್ಕಾರಕ್ಕೆ ಚೌಪಾಟಿಯಲ್ಲಿ ಸ್ಥಳ ದೊರೆಯಲಾರದು. ಒಬ್ಬ ಪ್ರಸಿದ್ಧ ಹಿಂದುವಿನ ಶವ ಸಂಸ್ಕಾರದ ಕುರಿತು ಸರಕಾರವು ಸ್ಥಳ ನಿಶ್ಚೈಸುವುದು ಅಪೇಕ್ಷಣೀಯವಲ್ಲ" ವೆಂಬ ಉತ್ತರವು ಸಿಕ್ಕಿತು. ಸಂಸ್ಕಾರ ಕಮಿಟಿಯು ಈ ಉತ್ತರವನ್ನು ಪರ್ಯಾಲೋಚಿಸಿ ಸರಕಾರವು ಪುನಃ ಚೆನ್ನಾಗಿ ಪುನರ್ವಿಮರ್ಶಿಸಿ, ತಮಗೆ ಸಹಾಯ ಮಾಡಬೇಕಾಗಿ ಕೇಳಿತು. ಶ್ರೀ ಪಟೇಲರ ಅಂತ್ಯಸಂಸ್ಕಾರಕ್ಕೆ ಸರಕಾರವು ಚೌಪಾಟಿಯನ್ನು ಏಕೆ ಕೊಡಲಾಗುವುದಿಲ್ಲವೆಂದು ಹೀಗೆ ವಿವರಿಸಿ ಹೇಳಿರುತ್ತದೆ:— ಬಾಲಗಂಗಾಧರ ತಿಲಕರ ಶವ ಸಂಸ್ಕಾರಕ್ಕೆ ಚೌಪಾಟಿಯನ್ನು ನಾವು ಬಿಟ್ಟು ಕೊಟ್ಟುದರಿಂದಾಗ ಈಗ ಇನ್ನೊಂದು ಉದಾಹರಣೆಯು ದೊರಗಾಗಲು ಕಾರಣವಾಯಿತು. ಶ್ರೀ ತಿಲಕರ ಅಂತ್ಯಸಂಸ್ಕಾರಕ್ಕೆ ಚೌಪಾಟಿಯನ್ನು ಅಂದು ಬಿಟ್ಟು ಕೊಡುವಾಗ ಸರಕಾರವು ಹೆಚ್ಚಿನ ಆಲೋಚನೆಯನ್ನು ಮಾಡಲು ಸಾಧ್ಯವಾಗಲಿಲ್ಲ. ಹೆಚ್ಚಿನ ಸಮಯವಿಲ್ಲದಿದ್ದುದರಿಂದ ಅದರ ಸಾಧಕ ಬಾಧಕಗಳನ್ನು ಪುನರಾಲೋಚಿಸದೆ ಆ ಸಮಯದಲ್ಲಿ ಚೌಪಾಟಿಯನ್ನು ಕೊಡಲಾಯಿತು. ಚೌಪಾಟಿಯನ್ನು ಶವ ಸಂಸ್ಕಾರದ ಬಗ್ಗೆ ಬಿಟ್ಟು ಕೊಟ್ಟ ಮೇಲೆ ಮುಂದಕ್ಕೆ ಆ ಸ್ಥಳವು ಇದೇ ವಿಷಯಕ್ಕಾಗಿ ದುರ್ಪಯೋಗಿಸಲ್ಪಟ್ಟಿತೆಂದು ವಾರ್ತೆಯು ಹರಡಿತು. ತಿಲಕರ ಸಂಸ್ಕಾರವು ನಡೆದಾದ ಮೇಲೆ ಸ್ಮಾರಕದ ಸುತ್ತಲೂ ಬೇಲಿಯನ್ನು ಹಾಕಬಾರದಾಗಿ ಮೊದಲು ಹೇಳಿದ್ದಿತು. ಆದರೆ ಕ್ರಮೇಣ ಈ ಶರ್ತವನ್ನು ಕಾಪಾಡಿಕೊಳ್ಳಲಾಗಲಿಲ್ಲ. ಹೀಗಿರುವುದರಿಂದ ಈಗ ಪಟೇಲರ ಶವ ಸಂಸ್ಕಾರಕ್ಕೆ ಈ ಸ್ಥಳವನ್ನು ವನ್ನು ಕೊಟ್ಟರೆ ಮುಂದಕ್ಕೆ ಒಂದು ಸ್ಮಾರಕದ ಬಗ್ಗೆ ಜನರ ಬೇಡಿಕೆಯಾಗದಿರದೆಂದು ಸರಕಾರದ ಅನುಭವ. ಹೀಗಾದ ಪಕ್ಷದಲ್ಲಿ ಸಾರಕಾರವು ಆ ಬೇಡಿಕೆಯನ್ನು ಸಲ್ಲಿಸಲು ಅಸಾಧ್ಯವೆಂದಾಗುವುದು. ಹಿಂದೂ ಧುರೀಣರೊಬ್ಬರ ಶವ ಸಂಸ್ಕಾರಕ್ಕೆ ಮುಂಬಾಯಿಯಂತಹ ಪ್ರಾಂತ್ಯದ ಚೌಪಾಟಿಯಂತಹ ಸ್ಥಳ ಕೊಟ್ಟರೆ, ಇಲ್ಲದೆ ಮುಂದಕ್ಕೂ ಕೂಡಾ ಹಿಂದೂ ಧುರೀಣರ ಬಗ್ಗೆ ಇದೇ ರೀತಿಯ ಕೇಳಿಕೆಗಳಾದರೆ ಅದರಿಂದ ಅಪಾಯವಿರದಿರಲಿಕ್ಕಿಲ್ಲವೆಂದು ಸರಕಾರದ ಊಹನೆ. ರಾಜಕೀಯ ಧುರೀಣರೊಬ್ಬರಿಗಾಗಿ ಚೌಪಾಟಿಯನ್ನು ಕೊಟ್ಟರೆ ಮುಂದಕ್ಕೆ ಸಾಮಾಜಿಕ, ಕೈಗಾರಿಕೆ ಧುರೀಣರ ಬಗ್ಗೂ ಚೌಪಾಟಿಯನ್ನು ಕೇಳಿದರೆ ಸರಕಾರವು ಮಾಡುವುದೇನು? ಹೀಗಾದರೆ ಸರಕಾರವು ಎಡೆಯಲ್ಲಿ ಸಿಕ್ಕಿದಂತಾಗುವುದು. ಅಲ್ಲದೆ ಮುಂದಕ್ಕೆ ಹೀಗೆ ಹಿಂದೂ ಧುರೀಣರನ್ನೇ ಚೌಪಾಟಿಯಲ್ಲಿ ಸಂಸ್ಕರಿಸುತ್ತ ಹೋದರೆ ಚೌಪಾಟಿಯಂತಹ ಸಾರ್ವಜನಿಕ ಸ್ಥಳವು ಹಿಂದೂ ವರ್ಗಕ್ಕೆ ಮಾತ್ರ ಸೇರಿದುದೆಂಬ ಅಭಿಪ್ರಾಯವು ಪ್ರಸಾರಗೊಂಡೀತು. ಆದುದರಿಂದ ಚೌಪಾಟಿಯನ್ನು ಈ ವಿಷಯಕ್ಕಾಗಿ ಮುಂದಕ್ಕೆ ಕೊಡಲು ಸಾಧ್ಯವಿರುವುದಿಲ್ಲ. ಚೌಪಾಟಿಯ ಉಪಯೋಗವನ್ನು ಮಾಡದೆ ಹಿಂದೂ ಮುಖಂಡರಿಗೆ ಬೇರೆ ಸ್ಥಳದಲ್ಲೂ ಕೂಡಾ ಗೌರವವನ್ನು ಪ್ರದರ್ಶಿಸಬಹುದೆಂದು ಸರಕಾರದ ಅಭಿಪ್ರಾಯ.' ಈ ಉತ್ತರವನ್ನು ನೋಡಿ ಶ್ರೀಮತಿ ಸರೋಜಿನಿ ದೇವಿಯವರು ಸರಕಾರವು ಮತ ಭೇದ ವಿಷಯವನ್ನೆತ್ತಿ ಒತ್ತಿ ಹಿಡಿದು ಚೌಪಾಟಿಯನ್ನು ಕೊಡಲು ತಿರಸ್ಕರಿಸಿದುದಕ್ಕಾಗಿ ವ್ಯಸನ ಸೂಚಿಸಿದರು. ಆದರೂ ಸರಕಾರವು ಪುನರಾಲೋಚಿಸಬಹುದೆಂದು ಅವರು ಆಶೆಗೊಂಡರು. ಇದಕ್ಕೂ ಉತ್ತರವಾಗಿ ಸರಕಾರವು "ಅದು ಸಾಧ್ಯವೇ ಇಲ್ಲ"ವೆಂದು ಹೇಳಿತು. ಈ ದಿನ ಮಧ್ಯಾಹ್ನ ಶವವು ಮುಂಬಾಯಿಗೆ ತಲುಪುವುದೆಂದು ತಿಳಿಯಲಾಗಿದೆ. ತಲುಪಿದೊಡನೆ ಅದನ್ನು ಅಲ್ಲಿಯ ಜಿ. ಟಿ. ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ನಾಳೆಯ ತನಕ ಇಡುವರು. ಆ ಮೇಲೆ ಅದನ್ನು ಶ್ರೀ ಪಟೇಲರ ಬಾಂಧವರಿಗೆ ಬಿಟ್ಟು ಕೊಡಲಾಗುವುದು. ನಾಸಿಕ ಮಾರ್ಚ ತಿಂಗಳಲ್ಲಿ ಶ್ರೀ ಪಟೇಲರು ಯುರೋಪ ಪ್ರವಾಸಕ್ಕೆ ತೆರಳುವ ಮೊದಲು ೩ ದಿನಗಳ ವರೆಗೆ ಇದೇ ಆಸ್ಪತ್ರೆಯಲ್ಲಿದ್ದರು. ಸ್ಯಾಂಡ್ ರೋಡಿನ ಬಳಿಯಿರುವ ದಹನ ಭೂಮಿಗೆ ಶವವನ್ನು ಮೆರವಣಿಗೆಯೊಡಗೂಡಿ ಕೊಂಡೊಯ್ಯುದೇಕಾಗಿ ನಿರ್ಧಾರವಾಗಿದೆ. ಈ ದಿನ ವಿದಾರು ಘಂಟೆಗಳ ತನಕ ಎಲ್ಲಾ ವಾಹನಗಳು ನಿಲ್ಲುವುವು. ಸ್ವಯಂಸೇವಕರ ದಳಗಳು ವ್ಯವಸ್ಥೆಗಳನ್ನು ಮಾಡುವುವು. ಮುಂಬಾಯಿಯ ಅನೇಕ ಆಫೀಸುಗಳಿಗೆ ರಜೆ ದೊರೆಯುವುದು. ಶ್ರೀ ಪಟೇಲರ ಶವ ಸಂಸ್ಕಾರವನ್ನು ಅವರ ತಮ್ಮನಾದ ಶ್ರೀ ವಲ್ಲಭಭಾಯಿ ಪಟೇಲರು ನೆರವೇರಿಸಬೇಕೆಂದು ಹೆಚ್ಚಿನವರ ಆಶೆ. ಶ್ರೀ ವಲ್ಲಭಭಾಯಿಯವರನ್ನು ಬಂಧವಿಮುಕ್ತಗೊಳಿಸಬೇಕೆಂದು ಮುಖಂಡರ ವಿಜ್ಞಾಪನೆಗಳು ಸರಕಾರಕ್ಕೆ ತೆರಳಿವೆ. ಪೆರೋಲಿನ ಮೇಲೆ ಶ್ರೀ ವಲ್ಲಭಭಾಯಿಯವರು ಹೊರಗೆ ಬರಲಾರರೆಂದು ಊಹನೆ.

ದಿವಂಗತ ವಿ. ಜೆ. ಪಟೇಲರು.

ವಿಠಲ ವಿಯೋಗಂ

ಶ್ರೀಮದ್ಭಾರತ ಸರ್ದಾ ।
ಗ್ರಾಮಾಧಿಪನಂತೆ ಮೆರೆದ ಹಿರಿಯ ಪಟೇಲಂ ॥
ಪ್ರೇಮಮಯಂ ಶ್ರೀ ವಿಠಲ ಸ ।
ನಾಮಂ ಸುರಲೋಕಪದವಿಯಂ ಬಯಸಿದನೇ ॥ ೧ ॥
ನ್ಯಾಯಸಭಾಧ್ಯಕ್ಷಯಶ ।
ಶ್ರೀಯುರಸಂ ರಾಜಪದವಿಯಡನುಳಿಯುತ್ತಂ ॥
ರಾಯನ ಬಂಧನ ಖಂಡಿಸಿ ।
ಸಾಯುಜ್ಯಾಸ್ಪದವ ಬಗೆದನೆ ಶಿವನಾ ॥ ೨ ॥
ಆ ನೆಹರು-ಲಾಲ ಮುಖ್ಯ ಸ ।
ಭಾನಾಯಕನಾಗಿ ನಲಿದ ರಾಷ್ಟ್ರಾಧ್ಯಕ್ಷಂ ॥
ಮಾನವ ತಿಲಕರ ನೋಡಲ್ ।
ತಾನೇ ಸುರಪುರದ ಯಾತ್ರೆಯಂ ಬಯಸಿದನೇ! ॥ ೩ ॥
ವೀರಶ್ರೀವಲ್ಲಭ-ಸರ ।
ದಾರ ಶ್ರೀವಲ್ಲಭಾಗ್ರಜಂ-ನಿಜವೆನುತಂ ॥
ಧಾರಿಣಿಯೊಳ್ ಜಸವಡೆದಾ ।
ಭಾರತ ಜನನೀ ಕುಮಾರ ವಿಠಲನೆ ಧನ್ಯಂ ॥ ೪ ॥
ಭಾರತಭೀಷ್ಮಂ ರಾಷ್ಟ್ರ ವಿ ।
ಚಾರಂಗಳನರ್ಜುನಾದಿಗಳಿಗೊರೆಯುತ್ತಂ ॥
ಸಾರಿದ ಶರದೊಳ್ ವಿಠಲಂ ।
ಶೂರ ಸುಭಾಷಾದ್ಯರೊಡನೆ ಸುಡಿದಂ ನಡೆದಂ ॥ ೫ ॥
ಆ ದೇಶಬಂಧು ಸಿಂಹನಿ ।
ನಾದಂ ಹಿಂದೇಸ್ವರಾಜ್ಯಭಟರೊಳಗನಿಶಂ ॥
ಆದರದಿಂ ಮೊಳಗಲಿ! ಗತ ।
ಮೋಧಾಶೀರ್ವಾದವಿಳೆಗೆ ಲಭಿಸಲಿ ಸತತಂ ॥ ೬ ॥

"ಶ್ರೀಧರ"

ಶ್ರೀ ಪಟೇಲರ ದೇಹವನ್ನು ಬಹಳ ಸುವ್ಯವಸ್ಥೆಯಿಂದ ಕಾಪಾಡಿಕೊಂಡಿರುತ್ತಾರೆ. ಯಾವ ರೀತಿಯಲ್ಲೂ ದೇಹವು ಹಾಳಾಗದಂತೆ ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಳ್ಳಲಾಗಿದೆ.

ಗುಡಿವಾಡಾ ಎಂಬಲ್ಲಿ ಭಾಷಣ ಮಾಡಿದಾಗ ಸೌ|| ಕಮಲಾದೇವಿ ಚಟ್ಟೋಪಾಧ್ಯಾಯರನ್ನೂ ವಾತ್ರಿಬ್ಬರು ಸಂಗಡಿಗರನ್ನೂ ಕಳೆದ ಶನಿವಾರ ದಿನ ಬಂಧಿಸಿ ಕಾರಾಗೃಹದಲ್ಲಿಟ್ಟಿದ್ದರು|—ಅವರನ್ನು ಜಾಮೀನಿನ ಮೇಲೆ ಬಿಡಬೇಕೆಂದು ಕೇಳಿಕೊಂಡರೂ ಅಲ್ಲಿಯ ಅಧಿಕಾರಿಗಳು ಸಮ್ಮತಿಸಲಿಲ್ಲ. ಈಗ ಮುಸಲೀಪಟ್ಟಣದ ಸೆಶನ್ಸ್ ಜಡ್ಜರು ನವಂಬರ ತಾ ೨ನೇ ದಿನ ಅವರನ್ನು ಜಾಮೀನಿನ ಮೇಲೆ ಬಿಟ್ಟಿರುವರೆಂದು ತಿಳಿದು ಬಂದಿದೆ. ಶ್ರೀಮತಿಯವರು ಮದ್ರಾಸಿಗೆ ತೆರಳಿರುವರು. ಅಲ್ಲಿಂದ ಅವರು ಮುಂಬಾಯಿಗೆ ಹೋಗುವರು.

ತಾ. ೧೦

ಶ್ರೀ ಸುಭಾಷ್ಚಂದ್ರ ಭೋಸರು ದಿವಂಗತ ಪಟೇಲರ ಸ್ವಾತಂತ್ರ್ಯಾಸಕ್ತಿ, ಅಪ್ರತಿಮ ದೇಶ ಪ್ರೇಮವನ್ನು ಪ್ರಶಂಸೆಗೈಯುತ್ತಾ "ಶ್ರೀ ಪಟೇಲರು ಸ್ವಾತಂತ್ರ್ಯ ಮೂರ್ತಿ. ಅವರು ನ್ಯಾಯ ವಿಧಾಯಕ ಸಭೆಯಲ್ಲಾಗಲೀ, ಇನ್ನಿತರ ಯಾವ ಸಂಸ್ಥೆಯಲ್ಲಾಗಲೀ ಮಾಡಿದ ಅವರ ಸೇವೆಯು ಗಣ್ಯವಲ್ಲ. ಅವರು ಅನವರತವೂ ಭರತಖಂಡದ ಹಿತಕ್ಕಾಗಿಯೇ ದುಡಿದು, ಮರಣಶಯ್ಯೆಯಲ್ಲೂ ಅದನ್ನೇ ಹೇಳಿ ವೀರಸ್ವರ್ಗವನ್ನು ಸೇರಿದುದು ಎಲ್ಲರ ಹೃದಯವನ್ನು ಕದಡಿಸಿಡುವ ಮಹತ್ವದ ವಿಷಯವಾಗಿದೆ. ಅವರು ಯಾವುದನ್ನು ಆಶಿಸಿದರೋ, ಯಾವುದಕ್ಕಾಗಿ ಹೆಣಗಾಡಿ ಅಂತ್ಯಗೊಂಡರೋ ಅದನ್ನು ನಾವು ಅವರ ಹಿಂಬಾಲಕರು, ಹೊಂದಲು ದೀರ್ಘಯತ್ನವನ್ನು ಮಾಡುವುದು ಕರ್ತವ್ಯವಿದೆ" ಎಂದರು. ಶ್ರೀ ಸುಭಾಸರು, ಪಟೇಲರ ಮೃತ ಶರೀರದೊಡನೆ ಮಾರ್ಸೆಲ್ಸ್ ವರೆಗೂ ಪ್ರಯಾಣ ಮಾಡಿ, ಮತ್ತು ಜಿನವಾಕ್ಕೆ ಹಿಂದಿರುಗಿದರು. ಅವರ ದೇಹಸ್ಥಿತಿಯು ಬಹುಮಟ್ಟಿಗೆ ಕೆಟ್ಟಿರುತ್ತದೆಯಾಗಿ ತಿಳಿದುಬಂದಿದೆ. ಅವರು ಕೂಡಲೇ ಸ್ವಿಜರ್ಲೆಂಡಿಗೆ ಹೋಗಿ ದೇಹಾರೋಗ್ಯವನ್ನು ಸಂಪಾದಿಸಿಕೊಳ್ಳದಿದ್ದರೆ ಮಹಾಪಾಯವು ಸಂಭವಿಸುವುದು ಎಂದು ವೈದ್ಯರು ಅಭಿಪ್ರಾಯಪಟ್ಟಿರುವರು. ಅವರ ಕಾರ್ಯಕ್ರಮವು ಹೇಗಿರುತ್ತದೆಂದು ಇಷ್ಟರ ತನಕ ತಿಳಿದಿರುವುದಿಲ್ಲ.

ಶ್ರೀ ಪಟೇಲರ ಶವದಹನ ಕಾರ್ಯಕ್ಕೆ ಚೌಪಾಟಿಯಲ್ಲಿ ಎಡೆಗೊಡದಿರುವ ಸಂಬಂಧವಾಗಿ ಸರಕಾರವು ಹೆಚ್ಚಿನ ಪತ್ರಿಕೆಗಳ ಟೀಕೆಗೆ ಗುರಿಯಾಗಿದೆ. ಸರಕಾರವು ಈ ವಿಷಯಕ್ಕೆ ಜಾತೀಯತೆಯ ಬಣ್ಣ ಕೊಟ್ಟು ಆತಂಕ ಪಡಿಸಿರುವುದು ಎಷ್ಟು ಮಾತ್ರಕ್ಕೂ ಸಹನೀಯ ವಿಷಯವಲ್ಲವೆಂದು ಪತ್ರಿಕೆಗಳು ಅಭಿಪ್ರಾಯ ಪಡುತ್ತಿವೆ. ಶ್ರೀಮತಿ ಸರೋಜಿನಿ ನಾಯಡುರವರು ಈ ವಿಷಯವಾಗಿ ಹೆಚ್ಚಿನ ವ್ಯಥೆಗೊಳಗಾಗಿರುವರು. ಮುಂಬಾಯಿ ಕಾರ್ಪೊರೇಶನಿನ ಕೆಲವರು ಈ ವಿಷಯದಲ್ಲಿ ಸಾಹಸಪಟ್ಟರೂ ಫಲಕಾರಿಯಾಗಲಿಲ್ಲ; ಸರಕಾರದ ಘೋಷಣೆಯನ್ನು "ನವಯುಗವು" "ಮುಂಬಾಯಿಯ ಚೌಪಾಟಿಯಲ್ಲಿ ದಿವಂಗತ ಪಟೇಲರ ಶವ ಸಂಸ್ಕಾರ ಮಾಡಿಬಿಡುವ ವಿಷಯದಲ್ಲಿ ಮುಂಬಾಯಿ ಸರಕಾರದ ಧೋರಣೆಯು ನೌಕರ ಶಾಹಿಯ ಯಾಂತ್ರಿಕ ವರ್ತನೆಯ ದ್ಯೋತಕವಿದೆ. ಹಿಂದು ಪ್ರಮುಖರಲ್ಲೊಬ್ಬರಾದ ಪಟೇಲರ ಶವ ಸಂಸ್ಕಾರವನ್ನು ನಡೆಯಬಿಡುವುದು ಅವರಿಗೆ ಅನುಚಿತ ನಿದರ್ಶವಾಗಿ ಹೋಗಿರುವುದು. ಸರಕಾರವು ಇದೇನೂ ಹೊಸತಾಗಿ ನಿದರ್ಶನ ಹಾಕಿ ಕೊಡುವುದಿಲ್ಲ. ಈ ಮೊದಲು ಲೋಕಮಾನ್ಯ ತಿಲಕರ ಶವ ಸಂಸ್ಕಾರವು ಇಲ್ಲೇ ನಡೆದಿರುವುದು. ಮತ್ತು ಪಟೇಲರಂತಹ ಅಖಿಲ ದೇಶಮಾನ್ಯ ವ್ಯಕ್ತಿಗಳು ಪ್ರತಿದಿನ ನಿಧನ ಹೊಂದುವಂತಿಲ್ಲ" ಎಂದು ಟೀಕೆ ಮಾಡಿದೆ.

(Latest News) ನೋಡುವುದು.

If you want FULL VALUE for your money
Insist on Swastik Products.

ನಿಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ
ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ
ಸಾಮಾನುಗಳನ್ನೇ ಕೊಂಡುಕೊಳ್ಳಿರಿ.

Swastik 777 Bar soap & Swastik Cake & Cube Soaps best in washing Soaps.



ಬಟ್ಟೆ ಒಗೆಯಲು ಸ್ವಸ್ತಿಕಾ 777 ... ಉತ್ತಮವಾದವು.

Swastik Double boiled & Raw Linseed Oils.

SWASTIK
THE MARK OF QUALITY

available in 5 gallon drums, 1 gallon tin.

Swastik CASTOR OIL (medicinal)
(Cold drawn)
Packed in gallon tins & 4 oz, 8 oz, 1 lb bottles
ಸ್ವಸ್ತಿಕಾ ಹರಳೆಣ್ಣೆ
4 ಔನ್ಸು, 8 ಔನ್ಸು, 1 ರಾತಲು ಬಾಟ್ಳಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವದು.



ಯಾವತ್ತೂ ... ಸ್ವಸ್ತಿಕಾ ... ದೊರೆಯುವವು.
ಸ್ವಸ್ತಿಕಾ ಕಡ್ಲೆಎಣ್ಣೆ, ಎಳ್ಳೆಣ್ಣೆ, ವಾರ್ನಿಶು, ...

Swastik Oil Mills Ltd. Bombay.
Chairman—Seth Ambalal Sarabhai,
Directors—Sir Purushothamdas Thakurdas,
„ Mr. F. E. Dinshaw.
„ Mr. C. S. Patel. & others.

ಮಲಬಾರು ಮತ್ತು ಕನ್ನಡ ಜಿಲ್ಲೆಗೆ ಏಜಂಟರು:—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
... ಮತ್ತು ... ವನಸ್ಪತಿಗಳಿಂದ ತಯಾರಿಸಲ್ಪಟ್ಟ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು
ಭಂಗಾರದ ಮೆಡಲು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ದಶಾಕರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಇದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡತಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನ ದೋಷದಿಂದ ಅಥವಾ ಬೇರೆ ಯಾವುದೇ ಪ್ರಕಾರದಿಂದ ಬಂದ ಅಶಕ್ತತೆಯಿಂದ ... ಉರಿಯು ... ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋವಳಿ ಬರೋಣ, ಶೌಚಕ್ಕೆ ಸಾವು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಜಠರಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ... ಮತ್ತು ... ರೋಗಗಳೆದ್ದರೂ ಅವುಗಳೆಲ್ಲ ಗುಣವಾಗಿ ... ಈ ಔಷಧ ... ಬಾಟ್ಲಿಗಳನ್ನು ಸೇವನೆ ಮಾಡಿದರೆ ... ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦, ... ಬಾಟ್ಲಿಗೆ ... ದರ್ಜನ ಬಾಟ್ಲಿಗಳ ... ದೊರಕುತ್ತದೆ.
ಪ್ರಸಿದ್ಧ ಕೆಮಿಸ್ಟ್ ಮತ್ತು ಸ್ಟೋರ್ಸ್‌ಗಳಲ್ಲಿ ... ಸಿಗುವುದು.
ಮುಖ್ಯ ಕಛೇರಿ:— ದ್ರಾಕ್ಷಾಮೃತ ಕಾರ್ಯಾಲಯ, ... (ಬೆಳಗಾಂವಿ)
ಸಿಕ್ಕುವ ಸ್ಥಳ:— ಮಂಗಳೂರು—ಗಣೇಶನ ಮೆಡಿಕಲ್ ಹಾಲ್ ಮತ್ತು ... ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಕೆಮಿಸ್ಟ್. ಉಡುಪಿ—... ಫಾರ್ಮಸಿ, ... ಕಾರ್ಕಳ—ಎ. ವಿ. ಶೆಣೈ. ಪುತ್ತೂರು—... ನಾರಾಯಣ ಪೈ ಮತ್ತು ... ಕಾಸರಗೋಡು—ಕೆ. ರಾಮಾ ನಾಯ್ಕ್, ... ಪಂಟ್ವಾಳ—ಡಿ ... ಪೈ.

2–6–'38

Seventyseven Years!

Two generations of approved service enables us to pick and choose what is cheap lasting & good to suit the pockets & the tastes of our longstanding wide circle of



CUSTOMERS
who know our

Premier House for Swadeshi.
Mill Yarns—Handloom Cloths,
Dhoties—Saries—Cintzesh etc

Shrinivas Ranga Pai,
Sawkar Mahal,
Car Street, MANGALORE.

For neat and nice Printing
Please call at
THE SHARADA PRESS,
Car Street, MANGALORE.

ಶಿರ್ತಾಡಿ(?)ಹಳ್ಳಿ ಸಮಾಚಾರ

ಮಳೆಯು ದಿನೇ ದಿನೇ ಕಡಿಮೆಯಾಗುತ್ತಿದೆ. ಗದ್ದೆ ತೋಟಗಳಿಗೆ ಅನುಕೂಲವಾಗುತ್ತಿದೆ. ಊರಿನಲ್ಲಿ ಹಗಲೂ ರಾತ್ರಿಯೂ ರಸ್ತೆಗಳ ಮೇಲೆ ಸ್ವೇಚ್ಛೆಯಾಗಿ ತಿರುಗುತ್ತಿರುವ ಜಾನುವಾರುಗಳಿಗೆ ಸ್ಥಳೀಯ ಪೋಲೀಸು ಇಲಾಖೆಯವರು ತಕ್ಕ ಬಂದೋಬಸ್ತು ಮಾಡಿರುವುದು ಬಹಳ ಅನುಕೂಲವಾಗಿದೆ. ಮುನ್ಸಿಪಲ್ ರಸ್ತೆಗಳ ರಿಪೇರಿಯು ನಡೆಯುತ್ತಿದೆ. ಕ್ರಮವಾಗಿ ಮಾಡಿಸುವುದು ಒಳ್ಳೆಯದು. ಶ್ರೀಕೃಷ್ಣ ರಾಜೇಂದ್ರ ರೀಡಿಂಗ್ ರೂಮ್ ಹಿಂದಿನಂತೆ ಕ್ರಮವಾಗಿ ನಡೆಯುತ್ತಿದೆ. ಸೆಕ್ರೆಟರಿಯವರ ಒಳ್ಳೆಯ ಮುತುವರ್ಜಿಯಿಂದ ಕೆಲಸ ನಡೆಸುತ್ತಿದ್ದಾರೆ. ಓದುಗರು ಹೆಚ್ಚುತ್ತಿದ್ದಾರೆ. ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸವಾದ್ದರಿಂದ ದೀಪಾದಿಗಳಿಂದ ... ಸೇವೆ ನಡೆಯುತ್ತಿದೆ. ದ್ಯಾಮೂರಿನ ವೃದ್ಧ ಪಿಠಾಪುರ(?) ವೆಂಕಟಕೃಷ್ಣಯ್ಯನವರ ಇಹಲೀಲೆ ಬಗ್ಗೆ ಜನಗಳು ಕಳವಳಗೊಂಡಿದ್ದರು. ಶ್ರೀದೇವರ ಅನುಗ್ರಹದಿಂದ ದಿನೇ ದಿನೇ ಕಡಿಮೆಯಾಗುತ್ತಿರುವುದನ್ನು ಕೇಳಿ ಸಂತೋಷವಾಗಿದೆ. ಇಲ್ಲಿ ಹೈಸ್ಕೂಲ್ ಮತ್ತು ಮಿಡಲ್ ಸ್ಕೂಲುಗಳಲ್ಲಿ ಶಿಕ್ಷಣವು ಚೆನ್ನಾಗಿ ನಡೆಯುತ್ತಿದೆ. ಸ್ಕೌಟ್ ಬಾಲಕರು ಮತ್ತು ಉಪಾಧ್ಯಾಯರುಗಳು ಧಾರವಾಡಕ್ಕೆ ಹೋಗಿರುತ್ತಾರೆ. ಟವನ್ನಿನಲ್ಲಿ ಮೋಟಾರುಗಳನ್ನು ರಾತ್ರಿ ವೇಳೆಯಲ್ಲಿ ನಡು ರಸ್ತೆಯಲ್ಲಿ ಲೈಟ್ ಆರಿಸಿ ನಿಲ್ಲಿಸುತ್ತಾರೆ. ಜನರೂ ಗಾಡಿಗಳೂ ತಿರುಗಾಡಲು ಬಹಳ ಅಡ್ಡಿಯಾಗುತ್ತದೆ. ಮುನ್ಸಿಪಾಲಿಟಿಯವರು ನಿಗಾ ತೆಗೆದುಕೊಳ್ಳಬೇಕು. ಎರಡು ವಾರಗಳಿಂದ ಶ್ರೀ ಬಾಲರಾಮ ಸೇವಾಸಂಘವು ಪ್ರತಿ ಶನಿವಾರವೂ ಭಜನೆ ಮತ್ತು ಕೀರ್ತನೆಗಳಿಂದ ಸಾಂಗವಾಗಿ ನಡೆಯುತ್ತಿದೆ.

—:—

ಅಖಿಲ ಕರ್ನಾಟಕ ೧೯ನೇ ಸಾಹಿತ್ಯ ಪರಿಷತ್ತು ಹುಬ್ಬಳ್ಳಿ.

ಬರುವ ಡಿಶಂಬರ ತಿಂಗಳ ಅಂತ್ಯವಾರದಲ್ಲಿ ಹುಬ್ಬಳ್ಳಿಯಲ್ಲಿ ಜರಗುವ ಅಖಿಲ ಕರ್ನಾಟಕ ೧೯ನೇ ಸಾಹಿತ್ಯ ಪರಿಷತ್ತಿಗೆ ಸಾಹಿತ್ಯ ಸೇವೆಯನ್ನು ಮಾಡಿದ ಯೋಗ್ಯರಿಂದ ಅಧ್ಯಕ್ಷರನ್ನು ಆರಿಸಬೇಕಾಗಿದೆ. ಆದ್ದರಿಂದ ಎಲ್ಲಾ ಭಾಗದ ಜನರು ತಮಗೆ ಗೊತ್ತಿದ್ದವರ ಹೆಸರನ್ನು ಅವಶ್ಯವಾಗಿ ನಮ್ಮ ಕಡೆಗೆ ಕಳಿಸಿದರೆ ಸ್ವಾಗತ ಸಂಘದಲ್ಲಿ ಆರಿಸಲು ಅನುಕೂಲವಾಗುತ್ತದೆ. ಕಾರಣ ಇದೇ ೧೯ನೇ ತಾರೀಕಿನೊಳಗೆ ತಿಳಿಸಬೇಕೆಂದು ವಿನಂತಿಯುಂಟು. ಸಾಹಿತ್ಯ ಪರಿಷತ್ತಿನ ಕೂಡ ಕವಿ ಸಮ್ಮೇಲನವೂ ಆಗುತ್ತದೆ. ಆದ್ದರಿಂದ ಕವಿ ಸಮ್ಮೇಲನದ ಅಧ್ಯಕ್ಷರು ಯಾರಿರಬೇಕೆಂಬುವ ಸೂಚನೆಯನ್ನು ಕಳುಹಿಸಬೇಕು. ಜನರಲ್ ಸೆಕ್ರೆಟರಿ ಚಂದ್ರಶೇಖರ ಶಾಸ್ತ್ರಿ, ವ್ಯಾಕರಣ ತೀರ್ಥ ೧೯ನೇ ಸಾಹಿತ್ಯ ಪರಿಷತ್ತು ಹುಬ್ಬಳ್ಳಿ.

ಪರಿವಿಡಿ

[illegible]
[illegible]
[illegible]
[illegible]
[illegible]
[illegible] ಅನೇಕ ವರ್ತಮಾನ,
[illegible]
[illegible] ಹರ್ಮನ್ಯ, ಸ್ಟೇಟ್ಸ್, ಮುಲ್ಕಿ, [illegible] ಕಂಬಾಳಪುರ, ಬೆಂಗಳೂರು, ಚನ್ನಪಟ್ಟಣ [illegible]
[illegible] ಸಂಸ್ಥಾನದ [illegible] ಚೌಕಾಟಿಯನ್ನು [illegible]!
[illegible] ೧೪
[illegible] ಸ್ವರಾಜ್ಯ [illegible] ಬಿಟ್ಟರು! ೧೫
[illegible] ಗ್ರಾಮಾಭಿವೃದ್ಧಿ A
[illegible] B

ಸ್ವದೇಶಾಭಿಮಾನಿ.

ತಾ. ೧೦ನೇ ಶುಕ್ರವಾರ ನವಂಬರ ೧೯೩೩.

ಜಪಾನ ಮತ್ತು ಲಂಕಾಶಯರ ವ್ಯಾಪಾರೀ ಮಂಡಲದ ಭೇಟಿ.

ಈ ಎರಡು ಮಂಡಲಗಳು ಹಿಂದೂಸ್ಥಾನಕ್ಕೆ ಭೇಟಿಯನ್ನು ಕೊಟ್ಟವು. ಹಿಂದೂಸ್ಥಾನದ ಹತ್ತಿಯ ಕೈಗಾರಿಕೆಯು ಬಹಳ ಕಷ್ಟದ ಪರಿಸ್ಥಿತಿಯಲ್ಲಿದೆ; ಗಿರಣಿಗಳು ಒಂದರ ಹಿಂದೆ ಒಂದಾಗಿ ಮುಚ್ಚಲ್ಪಡುತ್ತಾ ಬರುತ್ತಿವೆ. ನಿರುದ್ಯೋಗಿಗಳ ಸಂಖ್ಯೆಯು ಬೆಳೆಯುತ್ತಾ ಬರುತ್ತದೆ. ಇಂತಹ ಕಠಿಣವಾದ ಸಂದರ್ಭದಲ್ಲಿ ಮೇಲೆ ಹೇಳಿದ ಈ ಎರಡು ಮಂಡಲಗಳು ಹಿಂದೂಸ್ಥಾನಕ್ಕೆ ಬರುವುದರಲ್ಲಿ ನ್ಯಾಯವಿರಲಿಲ್ಲ. ಬರುವುದಾದರೂ ಏಕೆ? ಹಿಂದೀ ಕೈಗಾರಿಕೆಗಳಿಗೆ ಸಹಾಯವನ್ನು ಕೊಡುವುದು ಅವರ ಉದ್ದೇಶವಾಗಿರುವುದಿಲ್ಲ. ಅಂತಹ ಸಹಾಯವನ್ನೀಯಲಿಕ್ಕೆ ಅವರು ಸಮರ್ಥರೂ ಅಲ್ಲ; ಅವರು ತಮ್ಮ ತಮ್ಮ ವ್ಯಾಪಾರಗಳ ಅಭಿವೃದ್ಧಿಗಾಗಿ, ತಮ್ಮ ತಮ್ಮ ಲಾಭಗಳನ್ನು ಹೆಚ್ಚಿಸಲಿಕ್ಕಾಗಿ, ತಮ್ಮ ತಮ್ಮ ದೇಶದ ನಿರುದ್ಯೋಗಿಗಳ ಸಂಖ್ಯೆಯನ್ನು ತಗ್ಗಿಸಲಿಕ್ಕಾಗಿ ಬಂದಿದ್ದರು. ನಮ್ಮ ದೇಶದ ಕೈಗಾರಿಕೆಯ ಪರಿಸ್ಥಿತಿಯೇ ಕೆಟ್ಟದಿರುವಾಗ, ತಮ್ಮ ದೇಶದ ಕೈಗಾರಿಕೆಗಳಿಗೆ ಸಹಾಯವನ್ನು ಕೋರಿ ಈ ಮಂಡಲಗಳು ಹಿಂದೂಸ್ಥಾನಕ್ಕೆ ಬಂದುದು, ಹಿಂದೂಸ್ಥಾನವು ಪರಕೀಯ ಅಧಿಕಾರದಲ್ಲಿದೆಯೆಂಬ ಒಂದೇ ಧೈರ್ಯದಿಂದಲ್ಲದೆ ಬೇರಾವ ಆಧಾರವೂ ಅವರಿಗಿರಲಿಲ್ಲ. ಹಿಂದೂಸ್ಥಾನವು ಸ್ವತಂತ್ರವಿದ್ದುದಾದರೆ ಅವರು ಎಷ್ಟು ಮಾತ್ರಕ್ಕೂ ಈಗ ಬಂದ ರೀತಿಯಲ್ಲಿ ಬರುತ್ತಿರಲಿಲ್ಲ. ಬಂದಿದ್ದರೆ ಹಿಂದೂಸ್ಥಾನವು ಬಂದ ಹಾದಿಯನ್ನು ಅವರಿಗೆ ವಾಪಸು ತೋರಿಸುತ್ತಿತ್ತು.

ಆದರೆ ಇಂದಿಗೆ ಅದು ಸಾಧ್ಯವಿಲ್ಲ. ಏಕೆಂದರೆ ಹಿಂದೂಸ್ಥಾನದ ಸುಖದುಃಖಗಳ ನಿರ್ಮಾಣಕರ್ತರು ಇತರರಾಗಿರುತ್ತಾರೆ. ಅವರು ತಮ್ಮ ಸುಖದುಃಖಗಳ ಸಮಸ್ಯೆಯನ್ನು ಬಿಟ್ಟು ಹಿಂದೂಸ್ಥಾನದ ಸುಖಕ್ಕಾಗಿ ಪ್ರಯತ್ನ ಪಡಲಾರರು. ಸಾಮ್ರಾಜ್ಯ ಪರಿಷತ್ತಿನ ಕತೆಯೂ ಅದೆ.. ಇಂದಿನ ಜಪಾನ್ ಲಂಕಾಶಯರಗಳ ಭೇಟಿಯ ಕತೆಯೂ ಅದೆ. ಇಂಗ್ಲೆಂಡು ತನ್ನ ಸಾಮ್ರಾಜ್ಯದ ಇತರ ಕಡೆಗಳಲ್ಲಿ ತನ್ನ ಅಧಿಕಾರಗಳ ಸ್ವಲ್ಪ ಕಳಕೊಂಡಿರುತ್ತದೆ. ಸಾಮ್ರಾಜ್ಯದ ಇತರ ಅಂಗಗಳು ತಮ್ಮ ತಮ್ಮ ಹಿತವನ್ನೇ ಮೊದಲಾಗಿ ನೆನಸಿ ಸಾಮ್ರಾಜ್ಯವನ್ನು ಲಕ್ಷಿಸುತ್ತಿವೆ. ಹಿಂದೂಸ್ಥಾನಕ್ಕೆ ತನ್ನ ಹಿತವೆಂಬುದಿಲ್ಲ. ಕ್ರಯಕ್ಕೆ ಕೊಂಡ ದಾಸಿಯಂತೆ ಇಂಗ್ಲೆಂಡಿನ ಸೇವೆಯನ್ನೂ, ಸಾಮ್ರಾಜ್ಯದ ಸೇವೆಯನ್ನೂ ಆತ್ಮಾಭಿಮಾನವನ್ನು ಬಿಟ್ಟು [illegible] ಲಕ್ಷಿಸದೆ ಮಾಡುವುದು ಅದರ ಪಾತ್ರಯದ ಕೆಲಸವಿದೆ.

[illegible] (Empire Preference) ಎಂದು ದೇಶದ [illegible] ವ್ಯಾಪಾರವು [illegible] ಹೆಚ್ಚಾಯಿತು. Empire Preferenceನ ಮೂಲಕ ಇತರ ಜನಾಂಗಗಳ [illegible] ವ್ಯಾಪಾರವು ಕಡಿಮೆಯಾಗಿ ಅವರಿಗೆ ನಾವು ಮಾರುತ್ತಿದ್ದ ದವಸಗಳ [illegible] ಕಡಿಮೆಯಾಯಿತು. ದೇಶದ [illegible] [illegible] ಹೊರಗೆ ಸಾಗಿ [illegible] ದೇಶದ [illegible] ಬರುವ ಬದ[illegible]

[illegible] ಪ್ರತಿಯೊಂದು [illegible] ಬಂದುಮುಟ್ಟಿತು. ಈ ಒಪ್ಪಂದ [illegible] ಇದರಿಂದ [illegible] ಎಲ್ಲದೇಶಗಳ ಸರಕುಗಳ ದುಬಾರಿಯಾಗಿ [illegible]

ಇವರಿಗೆ ನ್ಯಾಯವಾಗಿ ಬರಬೇಕಾದ [illegible] ಪದ್ಧತಿಯ ಧಾರಣೆಯನ್ನು [illegible] ೧೮-೮-೦ ಕ್ಕೆ ತಗ್ಗಿಸಿ ಆ ಮೂಲಕವೂ ಹಿಂದೂಸ್ಥಾನದ ವ್ಯಾಪಾರವು ಇಂಗ್ಲೆಂಡಿನೊಡನೆ ಹೆಚ್ಚಾಗುವಂತೆ ಮಾಡಿದ್ದಾರೆ. ಅಂದರೆ ಹಿಂದೂಸ್ಥಾನವು ಹೊರಗಿನಿಂದ ತರಿಸಬೇಕಾದ ಸಾಮಗ್ರಿಗಳನ್ನು ಇಂಗ್ಲೆಂಡಿನಿಂದಲೇ ತರಿಸಬೇಕಲ್ಲದೆ ಬೇರೆ ಕಡೆಯಿಂದ ತರಿಸಲಾಗುವುದಿಲ್ಲ. ಈ ಮೂಲಕವೂ ಇತರ ದೇಶದೊಡನೆ ಹಿಂದೀ ವ್ಯಾಪಾರವು ತಗ್ಗಿಯದೆ. ಈಗಿನ ಅಖಿಲ ಲೋಕದ ಆರ್ಥಿಕ ದುಸ್ಥಿತಿಯಲ್ಲಿ ಪ್ರತಿ ಜನಾಂಗವೂ ಅಗತ್ಯವಿರುವ ನಿರ್ಬಂಧನೆಗಳಿಂದ ದೇಶದ ದ್ರವ್ಯವು ಹೊರಗೆ ಹೋಗದಂತೆ ನೋಡಿಕೊಳ್ಳುತ್ತಿರುವಾಗ, ಹಿಂದೂಸ್ಥಾನದಲ್ಲಿ ಮಾತ್ರ, ಅದೇ ಉದ್ದೇಶದ ನಿರ್ಬಂಧಗಳು ರಚಿಸಲ್ಪಡುವುದಿಲ್ಲ, ಮಾತ್ರವಲ್ಲದೆ ಇದ್ದ ನಿರ್ಬಂಧಗಳೂ ಸಡಿಲಿಸಲ್ಪಡುತ್ತವೆ.

ಜಪಾನ್-ಲಂಕಾಶಯರ ವ್ಯಾಪಾರ ಮಂಡಲಗಳ ಭೇಟಿಯು ದೇಶದಲ್ಲಿ ಈ ಶೋಚನೀಯ ಸ್ಥಿತಿಯನ್ನು ಮತ್ತೂ ಕಂಗೆಡಿಸುತ್ತಿದೆ. ಲೋಕ ವ್ಯಾಪಾರವೇ ಕೆಟ್ಟು ಹೋಗಿರುವಾಗ ಇಂತಹ ವ್ಯಾಪಾರಿ ಮಂಡಲಿಗಳ ಭೇಟಿಯು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಬೇರೆ ಯಾವ ಕಡೆಯಲ್ಲಿಯೂ ಹೋಗಿರುವುದಿಲ್ಲ. ಎಲ್ಲರ ಸಾಮಾನ್ಯ ಹಿತಕ್ಕೆಂದು ಲಂಡನಿನಲ್ಲಿ ಜರಗಿದ (World Economic Conference) ಎಂದರೆ ಸಮಸ್ತ ಜನಾಂಗಗಳ ಸಾಂಪತ್ತಿಕ ಪರಿಷತ್ತು ಕೃತಕಾರ್ಯವಾಗದೆ ಬಿದ್ದು ಹೋಗಿಯದೆ. ಬೆಳೆಯುವ ಕೈಗಾರಿಕೆಯುಳ್ಳ ಜಪಾನು ಹಿಂದೂಸ್ಥಾನಕ್ಕೆ ತನ್ನ ಲಾಭಕ್ಕಾಗಿ ಬರಬಹುದಲ್ಲದೆ, ಹಿಂದೂಸ್ಥಾನಕ್ಕೆ ಯಾವ ಲಾಭವನ್ನು ಕೊಟ್ಟೀತು?

ಮುಖ್ಯವಾಗಿ ಬ್ರಿಟಿಷ ಜಪಾನಿನ ಸಾಂಪತ್ತಿಕ ವ ರಾಜಕೀಯ ಪಗಡೆಯಾಟದಲ್ಲಿ ಹಿಂದೂಸ್ಥಾನವು ಒಂದು ವಸ್ತು ಮಾತ್ರ; ಅದರಲ್ಲಿ ಬ್ರಿಟಿಷ ಜಪಾನಿನ ಯುಕ್ತಿ ಪೋಟ್ಟಿಗಳು ನಡೆಯುತ್ತಿವೆ. ಬ್ರಿಟಿಷರಿಗೆ ಜಪಾನಿನ ಅನ್ಯೋನ್ಯವು ಬೇಕಾಗಿದೆ. ಹಿಂದೂಸ್ಥಾನವು ಜಪಾನನ್ನು ಬಹಿಷ್ಕರಿಸಿದರೆ ಆ ಅನ್ಯೋನ್ಯಕ್ಕೆ ಭಂಗಬರುತ್ತದೆ. ಬಹಿಷ್ಕರಿಸದಿದ್ದರೆ ಲಂಕೇಶಯರ ವ್ಯಾಪಾರಕ್ಕೆ ಬಾಧೆ ಬರುತ್ತದೆ. ಜಪಾನಿಗೆ ನಷ್ಟವಾಗದಂತೆಯೂ ಲಕೇಶಯರಿನ ವ್ಯಾಪಾರವು ಕಡಿಮೆಯಾಗದಂತೆಯೂ ಹಾಗೆ ಮಾಡಬಹುದೆಂಬುದನ್ನು ನೋಡಲಿಕ್ಕಾಗಿಯೇ ಈ ಉಭಯರು ಬಂದಿದ್ದಾರೆ. ಜಪಾನಿಗೂ ಲಂಕೇಶಯರಿಗೂ ನಷ್ಟವಾಗದಂತೆ ನೋಡಬೇಕಾದರೆ ಒಂದೇ ಉಪಾಯವಿರುತ್ತದೆ—, ಹಿಂದೀ ಹತ್ತಿಯ ಕೈಗಾರಿಕೆಗೆ ಅಂದರೆ ವಸ್ತ್ರದ ಗಿರಣಿಗಳಿಗೆ ತಿಲಾಂಜಲಿಯನ್ನೀಯುವುದು. ಹಿಂದೀ ಕೈಗಾರಿಕೆಗಳು ಹಾಳು ಬಿದ್ದರೆ ಬ್ರಿಟಿಷರಿಗೇನು? ಲಂಕೇಶಯರಿಗೆ ಇನ್ನೂ ಸುಖ.

ಹಿಂದೂಸ್ಥಾನವು ಸ್ವತಂತ್ರವಿದ್ದುದಾದರೆ ಎರಡೂ ವ್ಯಾಪಾರ ಮಂಡಲಿಗಳನ್ನು ಸುಧಾರಿಸುವುದು ಬಹಳ ಸುಲಭವಿತ್ತು. ಹಿಂದೂಸ್ಥಾನಕ್ಕೆ ಸಾಂಪತ್ತಿಕ ಶಿಕ್ಷಣ ಕೊಡಲಿಕ್ಕೆ ಜಪಾನನೂ ಅಗತ್ಯವಿಲ್ಲ; ಲಂಕೇಶಯರೂ ಅಗತ್ಯವಿಲ್ಲ. ಬಂದ ಹಾದಿ ಹಿಡಿದು ಹಿಂದೆ ಹೋಗಿ ಎಂದು ಸ್ಪಷ್ಟವಾಗಿ ಬಂದ ಕೂಡಲೇ ಹೇಳುವುದೇ ಅವರಿಗೆ ತಕ್ಕುದಾದ ಜವಾಬು ಇತ್ತು. ಆದರೆ ಹಾಗೆ ಹೇಳಲಿಕ್ಕೆ ನಮ್ಮ ದೇಶದಲ್ಲಿ ನಾವಾರು?

++ ++

ವಿದೇಶ ವರ್ತಮಾನ.

ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕಾದಲ್ಲಿ ರೈತರ ಮುಷ್ಕರವು ಎದ್ದಿದೆ. ಎರಡು ಮಿಲಿಯ ಜನರು ಅಧ್ಯಕ್ಷರೆದುರು ನಿಂತಿರುವರು.

ಲಂಡನಿನಲ್ಲಿ ೧೫೦,೦೦೦ ಯೆಹೂದಿಯರ ೫೦೦ ಮಂದಿ ಪ್ರತಿನಿಧಿಗಳು ಸಭೆ ಸೇರಿ ಜರ್ಮನಿಯ ಯಾವ ಸಾಮಾನನ್ನೂ ಯೆಹೂದಿಯರು ಮುಟ್ಟಬಾರದೆಂದು ಠರಾವು ಮಾಡಿಕೊಂಡರು.

ಇಂಗ್ಲೆಂಡಿನ ದೊಡ್ಡ [illegible] ಅಧ್ಯಕ್ಷರು [illegible] ನಾವು [illegible] ನಾವು [illegible] ಯೆಹೂದಿಯರನ್ನು ಇಂಗ್ಲೆಂಡಿನವರು [illegible] ನಾವು ಮಾಡುವುದು [illegible] [illegible] ಒಂದು [illegible] ಸುತ್ತಿದ್ದರು.

ಶ್ರೀ [illegible] [illegible] ಆಗಿದ್ದಾರೆ.

[illegible]ದೇಶ ವರ್ತಮಾನ

[illegible] ೫೦೦ ಮಂದಿ ಯಾತ್ರಿಕರು [illegible] ೧೦೦ [illegible] ಸತ್ತರು. [illegible] ಜನರು ಪೆಟ್ಟಾಗಿರುವರು.

ನವಂಬರ ೧೧ನೇ ದಿನ ೧೧ ಗಂಟೆಗೆ ಆರ್ಮಿಸ್ಟಿಸ್ ಸಲುವಾಗಿ ಬ್ರಿಟಿಷ ಸಂಸ್ಥಾನದಲ್ಲಿ ಎರಡು ಮಿನಿಟುಗಳ [illegible] ಬೇಕೆಂದು [illegible] ಅಪ್ಪಣೆಯಾಗಿದೆ.

[illegible] ಒಂದು [illegible] [illegible]

ಕಲ್ಕತ್ತಾದ ಶ್ರೀ [illegible] ಕೃಷ್ಣ ಮುಖರ್ಜಿಯವರು ತನ್ನ ಯುರೋಪ ಪ್ರವಾಸದಿಂದ ಹಿಂತಿರುಗಿ ಮುಂಬಾಯಿಯಲ್ಲಿ ಇದು ಬೇಗನೆ ಒಂದು ವಿಶ್ವ ವ್ಯಾಪಿ ಸಮರವು ಕಳೆದೋರಲಿದೆ" ಎಂದು ಭವಿಷ್ಯ ನುಡಿದಿರುವರು.

ಎಸೆಂಬ್ಲಿಯ ಅಧ್ಯಕ್ಷರಾದ ಸರ್ ಆರ್. ಕೆ. ಷಣ್ಮುಗಂ ಚೆಟ್ಟಿಯಾರರು ಗಡಿನಾಡಿಗೆ ವಿಮಾನ ಮೂಲಕ ಹಾರಿದರು.

ಮುಂಬಾಯಿಯ ಮಲಬಾರ್ ಹಿಲ್ಸಿನ ಬಳಿಯ ಒಂದು ಮಂದಿರಕ್ಕೆ ಬೆಂಕಿ ಬಿದ್ದು ಅರ್ಧ ಲಕ್ಷ ರೂಪಾಯಿ ನಷ್ಟವಾಗಿದೆ.

ನಾಗಪುರದ ನ್ಯೂ ಇಂಗ್ಲಿಷ್ ಹೈಸ್ಕೂಲಿನ ಸಂಸ್ಕೃತಾಧ್ಯಾಪಕರನ್ನು ಕೆಲಸದಲ್ಲಿ 'ಸಸ್‌ಪೆಂಡ್' ಮಾಡಿದುದಕ್ಕಾಗಿ ಎಲ್ಲಾ ವಿದ್ಯಾರ್ಥಿಗಳೂ ಮುಷ್ಕರ ಹಿಡಿದು ಪೊರವಣಿಗೆ ಮಾಡಿದರು.

ಮಧುರೆಯಲ್ಲಿ ೨೫ ವರ್ಷ ಪ್ರಾಯದ ಭಿನ್ನ ಭಿನ್ನ ಜಾತಿಯ ಇಬ್ಬರು ತರುಣಿಯರು ತಮ್ಮ ಗೃಹಕೃತ್ಯದ ಕುರಿತು ಬೇಸರಪಟ್ಟು ಇಬ್ಬರೂ ತಮ್ಮ ಜಡೆಗಳನ್ನು ಒಂದಾಗಿ ಕಟ್ಟಿ ಬಾವಿಗೆ ಹಾರಿ ಪ್ರಾಣ ಬಿಟ್ಟರು.

ಮುಂದಕ್ಕೆ ಸಿಗರೇಟು ಕಂಪೆನಿಗಳ ಸ್ಪರ್ಧೆಯನ್ನು ನಿಲ್ಲಿಸಿ ಸಿಗರೇಟು ವ್ಯಾಪಾರವನ್ನು ಹೊಸ ರೀತಿಯಿಂದ ನಡೆಸಬೇಕೆಂದಾಗಿ ಇಂಗ್ಲಾಂಡಿನ ಕಂಪೆನಿಗಳು ನಿರ್ಧರಿಸಿವೆ.

ಮುಂಬಾಯಿಯ ನಾಲ್ಕು ಗಿರಣಿಗಳಲ್ಲಿ ಆಹಾರದ ಎಲೋವೆನ್ಸ್‌ಗಳನ್ನು ಕಡಿಮೆ ಮಾಡಿರುವುದಕ್ಕಾಗಿ ೩೫೦೦ ಜನರು ಕೈಕಟ್ಟಿ ಸುಮ್ಮಗಾಗಿರುವರು.

Stop Press.

ಶ್ರೀ ಸುಭಾಷ್ಚಂದ್ರ ಬೋಸರು ವಿಠ್ಠಲಭಾಯಿ ಪಟೇಲರ ಶವಸಂಸ್ಕಾರ ಸಮಿತಿಗೆ ಬರೆದ ಪತ್ರವು ಹೀಗಿದೆ:—ಪಟೇಲರ ಕಳೇಬರವನ್ನು ಬಹು ಜಾಗ್ರತೆಯಿಂದ ಪೆಟ್ಟಿಗೆಯೊಳಗಿರಿಸಲಾಗಿದೆ. ಅದರ ಬಾಯಿಯನ್ನು ಬಹಳ ಜಾಗ್ರತೆಯಿಂದ ತೆಗೆಯಬೇಕು. ಮೇಲಿನ ಪೆಟ್ಟಿಗೆಯನ್ನು ಮೊದಲು ಮೆಲ್ಲನೆ ಒಡೆಯಿರಿ ಅದರೊಳಗೆ ಮರದ ಪೆಟ್ಟಿಗೆ ಇದೆ. ಅದರ ಮುಚ್ಚಳವನ್ನು ಬಹು ಜಾಗ್ರತೆಯಿಂದ ತೆಗೆಯಬೇಕು. ಅದರೊಳಗೆ ಶವವು ಇರುವುದು. ಶವವನ್ನು ಕಾಶ್ಮೀರ ಶಾಲಿನಿಂದ ಜಾಗ್ರತೆಯಿಂದ ಸುತ್ತಿದೆ. ಶವದ ಎದೆಯ ಮೇಲೆ ಭಗವದ್ಗೀತೆಯೊಂದು ಇರಿಸಲ್ಪಟ್ಟಿದೆ. ಶವವನ್ನು ಹೊರಗಿಂದ ಮುಚ್ಚಿರುವುದಿಲ್ಲ. ಶವವನ್ನು ಎಷ್ಟು ವರ್ಷಗಳು ಬೇಕಾದರೂ ಹಾಗೆಯೇ ಇಡಬಹುದು. ಅದುದರಿಂದ ಶವಸಂಸ್ಕಾರದಲ್ಲಿ ಅವಸರವಿಲ್ಲ. ಶವವನ್ನು ಕೆಲವು ದಿನಗಳ ತನಕ ಸಾರ್ವಜನಿಕ ದರ್ಶನಕ್ಕಾಗಿ ಇಡಬಹುದು. ತನ್ನನ್ನು ಲೋಕಮಾನ್ಯರ ಬಳಿ ಚೌಪಾಟಿಯಲ್ಲೇ ಸುಡಬೇಕೆಂದು ವಿಠಲ್ ಭಾಯಿಯವರ ಅಂತ್ಯ ಆಶೆಯಾಗಿದ್ದಿತು.

ಗಾಂಧೀಜೀಯವರು ನಾಗಪುರಕ್ಕೆ ತಲ್ಪಿದರು ೫೦೦೦ ಜನರು ಅವರನ್ನು ಸ್ವಾಗತೀಕರಿಸಿದರು. ಹಣ ಥೈಲಿಗಳು ಅವರಿಗೆ ಅರ್ಪಿಸಲ್ಪಟ್ಟುವು. ಹರಿಜನರೂ, ಹಾಡಮಾಲಿಗಳೂ ಅವರಿಗೆ ಮಾನಪತ್ರ ವನ್ನರ್ಪಿಸಿದರು. ಶ್ರೀಮತಿ ರಮಾಬಾಯಿ ಅಭ್ಯಂಕರರು ತನ್ನ ಕೈಬಳೆಗಳನ್ನು ತೆಗೆದು ಗಾಂಧೀಜೀಯವರಿಗೆ ಕೊಟ್ಟಾಗ ಗಾಂಧೀಜೀಯವರು ಸ್ವೀಕರಿಸಿ ಹೇಳುತ್ತಾ ತಾನು ಅವಳ ನಿರಿದಂತ ಹಿಂದೀಯರನ್ನು ಬಡವರನ್ನಾಗಿ ಮಾಡಿರುತ್ತೇನೆಂದರು.

ಮೈಸೂರಿನ ವೃದ್ಧ ಪಿತಾಮಹ ಶ್ರೀ. ಎಂ. ವೆಂಕಟಕೃಷ್ಣಯ್ಯನವರು ಕೆಲವು ದಿನಗಳಿಂದ ಅಸ್ವಸ್ಥರಾಗಿದ್ದು, ಇದೇ ತಾ. 8ನೇ ದಿನ ಬೆಳಗ್ಗೆ 7 ಘಂಟೆಗೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಾಲವಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಮೂರು ತಿಂಗಳುಗಳ ಹಿಂದೆ ಇವರ 90ನೇ ವರ್ಷೋತ್ಸವವು ಮೈಸೂರಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶಾಸ್ತ್ರಯ್ಯನವರು ಸಮಗೆ ಅಗಾಗ್ಗೆ ಲೇಖನಗಳನ್ನು (ಎಂ. ವಿ.) ಎಂಬ ಸಂಕೇತನಾಮದಿಂದ ಕಳುಹಿಸುತ್ತಿದ್ದರು. ಬಹಳ ತತ್ವಜ್ಞರೂ, ಪರೋಪಕಾರಿಯೂ, ದೇಶಸೇವಾತತ್ಪರರೂ ಆಗಿದ್ದರು. ಇವರ ಆತ್ಮಕ್ಕೆ ಶಾಂತಿ ಇರಲಿ.

(ಲೇಖನ [illegible] ಬರುವ ಸಂಚಿಕೆಯಲ್ಲಿ ಬರುವುದು)

ಮನ್ನ ಮುನ್ಸಿಪಾಲ್ಟಿಯವರು ಕೆಲವು ರಾಜಗಳಿಂದ ಅಸ್ಪೃಶ್ಯರಾಗಿದ್ದವರಿಗೆ ಸ್ವಲ್ಪ ಸುಖಗೋಚರವಿದ್ದಾರೆ.

ಮದ್ರಾಸಿನ ನ್ಯಾಯವಿಧಾಯಕ ಸಭೆಯನ್ನು ಗವರ್ನರರು ಒಂದು ವರ್ಷದ ಅವಧಿಗೆ ಮುಂದರಿಸಿದ್ದಾರು.

ಕೇರಳದ ಗುಡ್ಡೆ ಎಂಬಲ್ಲಿ ಶ್ರೀ. ವಿ. ಎಸ್. ಬಹದ್ದೂರ ಚೆಟ್ಟಿಯಾರ್ ಎಂಬ ಮುನಿಸಿಪಲ್ ಕೌನ್ಸಿಲರ ಅಂಗಡಿಯಿಂದ ೧೪,೬೮೦ ರೂಪಾಯಿಗಳ ನೋಟುಗಳೂ, ೨೦೦೦ ರೂಪಾಯಿ ಕ್ರಯದ ಒಂಟಿ ಮೋಳು, ೪೦೦ ರೂಪಾಯಿ ನಗದಿಯೂ ಒಟ್ಟುಗೂಡಿ ಒಟ್ಟೆಯ ಕಳುವಾಗಿದೆ. ಪೊಲೀಸ್ ಪೋಲೀಸರು ತನಖಿನಡೆಸುತ್ತಿರುವರು.

ದಕ್ಷಿಣ ಕನ್ನಡ

ಮಂಗಳೂರು:— ಮಂಗಳೂರು ಸ್ವದೇಶಿ ಸ್ಟೋರ್ಸ್ಸಿನಿಂದ ನಡೆಸಲ್ಪಡುವ "ಖಾದಿ ಪ್ರಾಕ್ಟ ಟಿಕೆಟ್ ಫಂಡ್"ನ ಪ್ರಥಮ ಸೋಡಿ ತೆಗೆಯಲಾಗಿ ಈ ತಿಂಗಳ ಬಹುಮಾನವು ಡಾಕ್ಟರ್ ಯು. ನರಸಿಂಹ ನಾಯಕ್ರ ಇವರಿಗೆ ಸಿಕ್ಕಿರುತ್ತದೆ.

ತಾ. ೩೪ ಮತ್ತು ೨೭ನೇ ದಿನಗಳಲ್ಲಿ ಸೀನಿಯರ್ ಜೂನಿಯರ್ ಮತ್ತು ಓಪನ್ ಕ್ಲಾಸ್ ಪಂದ್ಯವನ್ನು ಏರ್ಪಡಿಸಲಾಗುವುದೆಂದೂ, ಪ್ರವೇಶ ಫೀಸು ಜೂನಿಯರಿಗೆ ರೂ. ೩ ಉಳಿದವುಗಳಿಗೆ ರೂ. ೫ದೆಂದೂ ಬಹುಮಾನ ದಾನವನ್ನು ಮಿ. ಡಬ್ಲ್ಯು. ಎರ್ಲೆಂಸ್ಮಿತ್ ಎಮ್. ಎ.ಯವರು ತಾ. ೨೫ರಲ್ಲಿ ಕೊಡುವರೆಂದೂ ಡಿಸ್ಟ್ರಿಕ್ಟ್ ಎಕ್ಲಟಿಕ್ ಸಂಘದವರು ತಿಳಿಸುತ್ತಾರೆ.

ತಾ. ೨೪ಕ್ಕೆ ಅಂತ್ಯವಾದ ಮುನಿಸಿಪಾಲಿಟಿಯ ರಿಪೋರ್ಟಿನ ಮೇರೆಗೆ ಒಟ್ಟು ೧೯ ಮರಣಗಳೂ ೫೫ ಜನನಗಳೂ ಆಗಿದೆಯೆಂದು ತಿಳಿಯಲಾಗಿದೆ.

ಇದೇ ನವಂಬರ ತಾ. ೨೫ನೇ ದಿನ ಗವರ್ನಮೆಂಟ್ ಕಾಲೇಜಿನ ವರ್ಧಂತ್ಯುತ್ಸವವು ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್‌ರಾದ ಮಿ| ಡಬ್ಲ್ಯು. ಎರ್ಲೆಂಸ್ಮಿತ್ ಎಮ್. ಎ.ಯವರ ಅಧ್ಯಕ್ಷತೆಯಲ್ಲಿ ಜರಗುವುದು. ಹಳೇ ವಿದ್ಯಾರ್ಥಿಗಳಿಗೆ ಸ್ವಾಗತವಿದೆ. ಕಾಲೇಜ್ ಡೇ ಫಂಡಿಗೆ ವಂತಿಗೆಯನ್ನು ಪ್ರಿನ್ಸಿಪಾಲರು ಸ್ವೀಕರಿಸುವರು.

ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳು ತಾ. ೧೯ನೇ ದಿನ ಸಂಸ್ಥಾಪಕರ ದಿನವನ್ನು ಆಚರಿಸುವರು. ಆ ರಾತ್ರೆ ೮–೩೦ಕ್ಕೆ ಒಂದು ಭೋಜನವಿರುವುದು. ಎಂಟ್ರಾಣ ಕೊಟ್ಟಲ್ಲಿ ಶ್ರೀ. ಯು. ವಾಸುದೇವ ಭಟ್ ಇವರಿಂದ ತಾ. ೧೫ರೊಳಗೆ ಟಿಕೇಟು ಪಡೆಯಬಹುದು.

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ. ೯–೧೧–'೩೩ರಿಂದ ವನ್ ವೆ ಟ್ರೈಲ್ ಎಂಬ ಚಿತ್ರವನ್ನೂ, ತಾ. ೧೨ರಿಂದ ಸತಿ ಅನುಸೂಯ ಎಂಬ ಮಾತಾಡುವ ಚಲಚಿತ್ರವನ್ನೂ ಪ್ರದರ್ಶಿಸಲಾಗುವುದು. ಈ ಚಿತ್ರದಲ್ಲಿ ಜಂಡಾ, ಮುಸ್ತಾರಿ, ಜೆವ್ ಶಿಡ್ಡಿ ಮೊದಲಾದವರು ಅಭಿನಯಿಸಿರುವರು. ಇದು ಪುರಾಣಪ್ರಸಿದ್ಧವಾದ ಭಕ್ತಿರಸಪ್ರದಾಯಕವಾದ ಚಿತ್ರವಾಗಿದೆ. ಅಲಿಂರಾವಹನ ಮತ್ತು ಭಕ್ತ ಕಾಳಿದಾಸ್ ಅತಿ ಬೇಗನೇ ಬರುತ್ತದೆ.

ಇದೇ ತಾ. ೧೧ನೇ ಶನಿವಾರದಿಂದ ಹಿಂದುಸ್ಥಾನ ಸಿನೆಮ ಕಂಪೆನಿ ಲಿಮಿಟೆಡ್‌ನಲ್ಲಿ ಟಾರ್ಜನ್ ದಿ ಏಪ್ ಮೆನ್ ಎಂಬ ಭಯಂಕರವೂ ಚಿತ್ರವಿಚಿತ್ರವೂ ಆದ ಚಲಚಿತ್ರವು ಪ್ರದರ್ಶಿಸಲ್ಪಡುವುದು. ಈ ಚಿತ್ರದಲ್ಲಿ ಟಾರ್ಜನನು ಸಿಂಹ, ಮೊಸಳೆ, ಹಿಪ್ಪೊಪೊಟಮಸ್ ಮೊದಲಾದ ಕ್ರೂರ ಪ್ರಾಣಿಗಳೊಡನೆ ಹೋರಾಡುವನು. ಟ್ರೇಡ್. ಹೋರ್ನ್‌ಗಿಂತಲೂ ಘಟನಾವಳಿಗಳುಳ್ಳ ಚಿತ್ರ.

ಕಾರ್ಕಳ— ತಾ. ೫–೧೦–೧೯೩೩ನೇ ಸಾಯಂಕಾಲ ೫–೩೦ ಗಂಟೆಗೆ ದಿವಂಗತ ವಿ. ಜೆ. ಪಟೇಲರ ನಿಧನದಿಂದುಂಟಾದ ದುಃಖವನ್ನು ಸೂಚಿಸಲಿಕ್ಕೆ ಇಲ್ಲಿಯ ಕ್ಲಬ್ಬಿನಲ್ಲಿ ಮಿ. ಎಚ್. ಎಸ್. ಹುಸ್ಸೇನ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೃತರ ಕುಟುಂಬ ಮತ್ತು ಪಟೇಲರ ಆತ್ಮಕ್ಕೆ ಶಾಂತಿಯನ್ನು ಕೋರುವ ಠರಾವನ್ನು ಸಭೆಯವರು ಎದ್ದು ನಿಂತು ಮಂಜೂರು ಮಾಡಿದರು.

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಕಳೆದ ಸಪ್ಟಂಬರ ತಿಂಗಳಲ್ಲಿ ಕಾರ್ಕಳ ಕೇಂದ್ರದಲ್ಲಿ ನಡೆದ ಪ್ರಾಥಮಿಕ ಪರೀಕ್ಷೆಗೆ ಕೂತುಕೊಂಡ ೮, ಮಧ್ಯಮಾ ಪರೀಕ್ಷೆಗೆ ಕೂತುಕೊಂಡ ೮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗೆ ಕೂತುಕೊಂಡ ೨ ಹೀಗೆ ಒಟ್ಟು ೧೮ ಮಂದಿ ಪರೀಕ್ಷಾರ್ಥಿಗಳಲ್ಲಿ ಮಧ್ಯಮಾ ಪರೀಕ್ಷೆಯ ಒಬ್ಬನನ್ನು ಬಿಟ್ಟು ಉಳಿದವರೆಲ್ಲರೂ ತೇರ್ಗಡೆಗೊಂಡಿರುವರೆಂದು ತಿಳಿಸಲು ಸಂತೋಷವಾಗುತ್ತದೆ.

ಮೂಲ್ಕಿ:— ಇಲ್ಲಿಯ ಯೂನಿಯನ್ ಕ್ಲಬ್ಬಿನಲ್ಲಿ ಇದೇ ಕಳೆದ ತಾ. ೨೩–೧೦–'೩೩ನೇ ಸೋಮವಾರ ಅಪರಾಹ್ನ ಗಂಟೆ ೪–೩೦ಕ್ಕೆ ಮುಂಬಾಯಿಂದ ಇತ್ತೀಚೆಗೆ ಊರಿಗೆ ಬಂದಿದ್ದ ರಾ| ಕೆ. ಆರ್. ಎಮ್. ಶೆಟ್ರು "ಮುಂಬಾಯಿ ಕಾಮಗಾರಿ ಚಳವಳಿ"ಯ ಕುರಿತಾಗಿ ಇಂಗ್ಲಿಷಿನಲ್ಲಿ ಭಾಷಣ ಕೊಟ್ಟರು.

ಸ್ಥಳೀಯ ಬೋ. ಹಾ. ಎ. ಶಾಲೆಯ ವಿದ್ಯಾರ್ಥಿಗಳ ತರ್ಕ ಸಂಘದ ಆದೊಂದು ಸಭೆಯು ಕಳೆದ ತಾ. ೨೧–೧೦–'೩೩ನೇ ಶನಿವಾರ ಪೂರ್ವಾಹ್ನ ಗಂಟೆ ೮ಕ್ಕೆ ಶ್ರೀ. ಪಾಂಡುರಂಗ ಪೈ ಬಿ. ಎ.ರವರ ಅಧ್ಯಕ್ಷತೆಯಲ್ಲಿ ಕೂಡಿ ಬಂದು "ಪ್ರಾಚೀನ ಮತ್ತು ಆಧುನಿಕ ನಾಗರಿಕತೆ"ಯ ಕುರಿತು ಉಪನ್ಯಾಸ ಭಾಷಣ ಇತ್ಯಾದಿಗಳು ನಡೆದುವು.

ಉಡುಪಿ— ಕಳೆದ ಹಿಂದೀ ಪರೀಕ್ಷೆಯಲ್ಲಿ ಇಲ್ಲಿಂದ ಕುಳಿತುಕೊಂಡ ೨೧ ವಿದ್ಯಾರ್ಥಿಗಳಲ್ಲಿ ಎಲ್ಲರೂ ಜಯಶೀಲರಾಗಿರುವರಲ್ಲದೆ ಶ್ರೀಮತಿ ಎಚ್. ಲಲಿತಾಬಾಯಿಯವರು ಮತ್ತು ಪಿ. ರತ್ನಕುಮಾರಿ ಇವರು ರಾಷ್ಟ್ರಭಾಷಾ ಮತ್ತು ಪ್ರಾಥಮಿಕ ಪರೀಕ್ಷೆಗಳಲ್ಲಿ ಕರ್ನಾಟಕದಲ್ಲಿ ಪ್ರಥಮ ಸ್ಥಾನವನ್ನೂ, ಸಮಸ್ತ ದಕ್ಷಿಣ ಭಾರತದಲ್ಲಿ ದ್ವಿತೀಯ ಸ್ಥಾನವನ್ನೂ ಅನುಕ್ರಮವಾಗಿ ಪಡೆದಿರುವರೆಂಬುದು ಅಭಿನಂದನೀಯವಾಗಿದೆ. ಈ ಭಾಗದಲ್ಲಿ ಹಿಂದೀ ಪ್ರಚಾರಕರಾದ ಶ್ರೀ ಕೆ. ರಾಘವಾಚಾರ್ ಮತ್ತು ಶ್ರೀಮತಿ ಎಚ್. ಲಲಿತಾಬಾಯಿಯವರ ಅವಿಶ್ರಾಂತ ಶ್ರಮವು ಸ್ತುತ್ಯಾರ್ಹವಾಗಿದೆ.

ಇದೇ ತಿಂಗಳ ಅಂತ್ಯದಲ್ಲಿ ಇಲ್ಲಿ ಹಿಂದೀ ಕಾನ್ವೊಕೇಶನ್ ಜರಗಲಿರುವುದೆಂದೂ ಆ ಸಂದರ್ಭದಲ್ಲಿ ಹಿಂದೀ ವಿದ್ಯಾರ್ಥಿನಿಯವರು ಹಿಂದೀ ನಾಟಕವನ್ನು ಆಡಿ ತೋರಿಸುವರೆಂದೂ ತಿಳಿಯಲಾಗಿದೆ.

ಕಟಪಾಡಿ ಕೇಂದ್ರದಿಂದ ಪರೀಕ್ಷೆಯಲ್ಲಿ ಕುಳಿತ ೫ ಮಂದಿ ಪರೀಕ್ಷಾರ್ಥಿಗಳೂ ಉತ್ತೀರ್ಣರಾಗಿರುವರಲ್ಲದೆ ಪ್ರಾಥಮಿಕ ಪರೀಕ್ಷೆಯಲ್ಲಿ ಸಮ್ಮಿಲಿತರಾದ ನಾಲ್ವರೂ ಪ್ರಥಮ ಶ್ರೇಣಿಯನ್ನು ಪಡೆದಿರುವರು.

ಇದೇ ಕಾರ್ತಿಕ ಶು| ೧೨ರಿಂದ ೧೫ರ ವರೆಗೆ ವಾಡಿಕೆಯಂತೆ ಶ್ರೀ ಕೃಷ್ಣ ಸನ್ನಿಧಿಯಲ್ಲಿ ದೀಪೋತ್ಸವವು ನಡೆಯಿತು.

ಕುಂದಾಪುರ— ಕಳೆದ ಸಪ್ಟಂಬರ ತಾ. ೧೦ರಲ್ಲಿ ನಡೆದ ಹಿಂದೀ ಪರೀಕ್ಷೆಗಳಲ್ಲಿ ಕುಂದಾಪುರ ಕೇಂದ್ರದಲ್ಲಿ ಪ್ರಾಥಮಿಕಕ್ಕೆ ಕುಳಿತ ೧೨ ಮಂದಿಯೂ ಮತ್ತು ಮಧ್ಯಮಾದಲ್ಲಿ ಕುಳಿತ ೯ರಲ್ಲಿ ೮ ಮಂದಿಯೂ ಉತ್ತೀರ್ಣರಾಗಿರುತ್ತಾರೆ. ಇವರಲ್ಲಿ ಪ್ರಾಥಮಿಕದಲ್ಲಿ ೬ ಮತ್ತು ಮಧ್ಯಮಾದಲ್ಲಿ ೩ ಮಂದಿ ಪ್ರಥಮ ತರಗತಿಯಲ್ಲಿ ತೇರ್ಗಡೆಯಾಗಿರುತ್ತಾರೆ.

ಕಳೆದ ಅಕ್ಟೋಬರ ತಾ. ೧೧ರಿಂದ ಸ್ಥಾನೀಯ ಕೆಥೋಲಿಕ್ ಸ್ಕೂಲಿನಲ್ಲಿಯೂ, ತಾಲೂಕು ಬೋರ್ಡು ಹುಡುಗಿಯರ ಶಾಲೆಯಲ್ಲಿಯೂ ಮತ್ತು ಹಿಂದೀ ಪಾಠಶಾಲೆಯಲ್ಲಿಯೂ ಒಟ್ಟಿಗೆ ೧೮ ಮಂದಿ ಪುರುಷರೂ, ಮತ್ತು ೩೦ ಮಂದಿ ಮಹಿಳೆಯರೂ ಹಿಂದೀ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಆದುದರಿಂದ ಇನ್ನು ಮುಂದಕ್ಕೆ ಇದೂ ಒಂದು ಹಿಂದೀಯ ಕೇಂದ್ರವಾಗಿ ಪರಿಣಮಿಸೀತೆಂದು ತೋರುತ್ತದೆ.

ಬೆಳ್ತಂಗಡಿ:— ೧೯೩೩ನೇ ಜನವರಿಯಿಂದ ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹಿಂದೀ ಕ್ಲಾಸು ವಾರಕ್ಕೊಮ್ಮೆ ನಡೆಸಲಾಗುತ್ತಿತ್ತು. ಕ್ರಮದಂತೆ ಇದೇ ಕಳೆದ ಸಪ್ಟಂಬರ ತಾರೀಕು ೧೦ಕ್ಕೆ ಜರಗಿದ ಪ್ರಾಥಮಿಕ ಪರೀಕ್ಷೆಯಲ್ಲಿ ೧೭ ಮಂದಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕೂತಿದ್ದರು. ಅದರಲ್ಲಿ ಉತ್ತೀರ್ಣರಾದವರು ೧೫ ಮಂದಿ.

ಕೋಟೇಶ್ವರ— ಇಲ್ಲಿಯ ದೀಪೋತ್ಸವದ ದಿವಸ (ತಾ. ೧೫–೧೧–೧೯೩೩ನೇ ಬುಧವಾರ) ಸ್ಥಳೀಯ ಶ್ರೀ ಕೋಟಿ ಲಿಂಗೇಶ್ವರ ಪ್ರಸಾದಿತ ಸಂಗೀತ ನಾಟಕ ಮಂಡಳಿಯವರು, ಹೊಸತಾಗಿ ಅಭ್ಯಾಸಿಸಿದ "ನಿರ್ಭಾಗ್ಯ–ಭಾರತಿ" ಎಂಬ ನೂತನ ಸಾಮಾಜಿಕ ನಾಟಕವನ್ನು ಅಭಿನಯಿಸುತ್ತಾರಾಗಿ ತಿಳಿದುಬರುತ್ತದೆ. ಕೇವಲ ಸಮಾಜ ಸೇವೆಗಾಗಿ ಹೊರಟ ಈ ಬಡ ಮಂಡಳಿಗೆ ಭಾಷಾಭಿಮಾನಿಗಳು ತಕ್ಕ ಪ್ರೋತ್ಸಾಹವನ್ನು ಕೊಡುವರಾಗಿ ನಂಬಿಗೆ.

ಧರ್ಮಸ್ಥಳ— ಇಲ್ಲಿಯ ವಸ್ತು ಪ್ರದರ್ಶನಕ್ಕೆ ಸಾಮಾನುಗಳನ್ನು ಕಳುಹಿಸಿಕೊಡುವ ವ್ಯಾಪಾರಿಯು ಈ ಮೊದಲೇ ಕಳೆದುಹೋದುದರಿಂದ ಮತ್ತು ಇನ್ನು ಮುಂದೆ ತರಬಹುದಾದ ವಸ್ತುಗಳನ್ನು ಪ್ರದರ್ಶಿಸುವುದಕ್ಕೆ ತಕ್ಕಷ್ಟು ಸ್ಥಳ ದೊರೆಯುವುದು ಕಷ್ಟವಾಗಿರುವುದರಿಂದ ಆ ವಿಷಯದಲ್ಲಿ ಇನ್ನು ಬರಬಹುದಾದ ಪತ್ರವ್ಯವಹಾರಗಳಿಗೆ ನಿಗಾಕೊಡೋದಾಗಲಿಕ್ಕಿಲ್ಲ. ಆಯುರ್ವೇದ ಸಂಬಂಧವಾದ ವಿಷಯಗಳಲ್ಲಿ ಭಾಷಣ ಕೊಡುವ ದಿನ (ತಾ. ೧೫) ಮಂಗಳೂರು ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿಗಳವರು ಅಧ್ಯಕ್ಷಸ್ಥಾನವನ್ನು ವಹಿಸುವರು.

ವಿವಿಧ ಧರ್ಮ ಸಮ್ಮೇಳನವು ಈ ಮೊದಲು ತಿಳಿಸಿದಂತೆ ನವಂಬರ ತಾ. ೧೬, ೧೭ನೇ ಗುರುವಾರ ಮತ್ತು ಶುಕ್ರವಾರ ದಿವಸಗಳಲ್ಲಿ ಜರಗಿಸಲ್ಪಡುವುದು. ಒಂದನೇ ದಿವಸ ಮೈಸೂರು ಶ್ರೀಮಾನ್ ಬಸವರಾಜ ಅರಸು, ಎಂ. ಎ. ಎಲ್. ಎಲ್. ಬಿ. ಇವರೂ, ಎರಡನೇ ದಿವಸದ ಸಮ್ಮೇಳನಕ್ಕೆ ಮೈಸೂರು ಸಂಸ್ಕೃತ ಕಾಲೇಜ್ ವಿದ್ವಾನ್ ಎಚ್. ಡಬ್ಲ್ಯು. ರಾಘವೇಂದ್ರಾಚಾರ್ಯ, ಎಂ. ಎ. ಇವರೂ ಅಧ್ಯಕ್ಷ ಸ್ಥಾನವನ್ನು ವಹಿಸಲಿಕ್ಕಿರುವರು.

ಸಕಲೇಶಪುರದ ವಾರ್ತೆ.

ಸ್ಥಳೀಯ ಮುನ್ಸಿಪಲ್ ಕೌನ್ಸಿಲರರ ಇಲೆಕ್ಷನ್ ಇದೇ ಬರುವ ತಾ. ೧೫–೧೧–'೩೩ನೇ ಬುಧವಾರ ದಿವಸ ನಡೆಯಲಿರುವುದಾಗಿಯೂ ೧೧ ಸ್ಥಾನಗಳಿಗೆ ೧೫ ಜನ ಉಮೇದ್ವಾರರು ನಿಂತಿರುವರಾಗಿಯೂ ತಿಳಿದುಬರುತ್ತದೆ.

ಸ್ಥಳೀಯ ಅಮಲ್ದಾರ್ ರಾ. ಎಮ್. ವಿನ್. ಇವರ ಬದಲಿಗೆ ರಾ. ಪುಟ್ಟಸ್ವಾಮಿ ಎಂಬವರು ನೇಮಿಸಲ್ಪಟ್ಟಿರುತ್ತಾರೆ.

ಸುಬ್ರಹ್ಮಣ್ಯ ಜಾತ್ರೆಯ ಸಮಯ ಸಕಲೇಶಪುರದಿಂದ ಬಿಸಿಲೆ ಘಾಟಿಯಾಗಿ ಸ್ಪೆಶಲ್ ಸರ್ವಿಸು ಪೆಸೆಂಜರರ ಸೌಕರ್ಯಕ್ಕಾಗಿ ಮೋಟಾರು ನಂತರ ಬಿಡುತ್ತಿರುವರಾಗಿ ತಿಳಿದುಬರುತ್ತೆ.

ಕಳೆದ ವರ್ಷ ಬಿಸಿಲೆ ಚತ್ರದಲ್ಲಿ ಯಾತ್ರಾರ್ಥಿಗಳಿಗೆ ಧರ್ಮಾರ್ಥವಾಗಿ ಊಟ ಉಪಚಾರ ಏರ್ಪಾಡು ಮಾಡಿರುವ ಶ್ರೀಯುತ ಉದ್ದಂಗೆ ನರಸಿಂಹಯ್ಯನವರು ಈ ವರ್ಷವೂ ಧರ್ಮಾರ್ಥವಾಗಿ ಊಟ ಉಪಚಾರದ ಏರ್ಪಾಡು ಮಾಡಲಿರುವರಾಗಿ ತಿಳಿದುಬರುತ್ತದೆ.

ಏಲಕ್ಕಿ ಧಾರಣೆಯು ಬಹಳ ಕಲೇ ಇರುವುದರಿಂದ ವ್ಯಾಪಾರವು ವಿಷಮಾವಸ್ಥೆಯಲ್ಲಿದೆ.

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ).

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಿಂಟ್ಯಾನ್, ಇಂಕ್ಸ್,

ಚ್ಯವನಪ್ರಾಶ, ಸ್ನೋ ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

Managing Director—**Venkatraya Annappa Baliga**

Jubilee year! Jubilee year!

The Bombay Life Assurance Co. Ltd.,

Bombay—Established 1908.

Chairman:—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need appl Right opportunity to those who desire independant and respectable vocation.

Applications should reach the undersigned by 25th September 1933, giving full qualifications a whether they can guarantee business.

Apply to:—

KOCHIKAR BROTHERS,
Madras Branch Secretaries.

Vishveshwarapuram Circle, *Bangalore City.* — Udipi, *South India.* — *or* — Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Malabar) who will be touring.

(25-8-33)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬. ಔನ್ಸ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ ಬಾಟ್ಲಿ ೧ಕ್ಕೆ ರೂ. 2. ಅಶೋಕಾರಿಷ್ಟ ೧೬ ಔನ್ಸ ಬಾಟ್ಲಿ ೧ಕ್ಕೆ ರೂ. 1-4-0. ಚ್ಯವನಪ್ರಾಶಲೇಹ ೧ ರಾತ್ತಲಿಗೆ ರೂ. 2-8-0. ಅಭಯಾಮಲಕಿ ೧ ರಾತ್ತಲಿಗೆ ರೂ. 2. ಚಂದ್ರಮುಖ್ (ವಿಶೂಚಿಕೆಗೆ ರಾಮಬಾಣ) ನಾಲು ಔನ್ಸಿಗೆ ರೂ. 0-5-0. ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ರು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ. 0-4-0. ಕೃಷ್ಣಾರಕ ೧ ಔನ್ಸಿಗೆ ರೂ. 0-6-0. ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ. 0-8-0. ಮಹಾ ಚಿತ್ರಕ ತೊಲೆ ೧ಕ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ ಬಾಟ್ಲಿ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ ಬಾಟ್ಲಿ ೧ಕ್ಕೆ ರೂ. 1-0-0. ಶ್ರೀ ಗೋಪಾಲ ತೈಲ ೫ ಔನ್ಸ ಬಾಟ್ಲಿ ೧ಕ್ಕೆ ರೂ. 3-8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಬೈಂದೂರು—ಕೆ. ಪುತ್ತು ಕಾಮತ್‌ ಶಾನುಭಾಗ. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ. ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮೆಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ವಿ. ವಿ. ಶೆಣೈ. ಶಿರ್ಸಿ—ಡಾಕ್ಟರ್ ಬಿ. ಕೆ. ದೇಶಾಯಿ ಡಿಸ್ಪೆನ್ಸರಿ. ಬಟ್ಕಳ—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಶೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 1,00,000. Subscribed Capital Rs. 1,00,000. Paid up Capital Rs. 20,000

STATEMENT OF AFFAIRS OF THE SYNDICATE AS ON 31ST September 1933.

Liabilities.		Assets.	
Paid up Capital	Rs. 20,000-0-0.	Loans on Land mortgage	Rs. 2,75,298—12—6
Reserve & other funds	„ 20,250—0—0.	Loans on Valuable Securities	„ 2,23,792—13—5
Deposits	„ 10,54,933—10—11.	Loans on Bills of Exchange, Hundis and Promissory Notes	4,59,985—8—4.
Due to Bankers	„ 48,335—7—6.	Investment on Shares of other Companies	„ 43,575—0—0.
		On Deposits with other Bankers	„ 1,15,000—0—0
Bills for Collection	„ 22,631—3—7.	Bills for collection (per contra)	„ 22,631—3—7
Sundries	„ 1,22,321—13—5.	Sundries	„ 1,14,721—4—9.
		Cash in hand & with Bankers	„ 33,467—8—10.
Total Rs.	12,88,472-3-5	Total Rs.	12,88,472-3-5.

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 7-10-1933. **P. A. Pai Bros.,** *Managing Agents.*

ಬಹಿಷ್ಕರಿಸಲ್ಪಟ್ಟಿತು.

ಶಿವ್ನಹಳ್ಳಿಯು ಬಳಿ ಧೀರಸಂಧಿಯಾಸಹಟಿಯದ್ ಎಂಬ ಹಳ್ಳಿಗೆ ಒಂದು ರೈಲ್ವೆಸ್ಟೇಶನನ್ನು ತೆರೆಯಲಾಯಿತು. ಅದರೆ ಅದಕ್ಕೆ ಅದ್ಯೆಕಲ ಪುರ ಎಂಬ ಹೆಸರನ್ನಿಟ್ಟಿರುವುದರಿಂದ ಆ ಹಳ್ಳಿಯ ಜನರು ರೈಲ್ವೆ ಸ್ಟೇಶನನ್ನು ಬಹಿಷ್ಕರಿಸಿ ತಮ್ಮ ಹಳ್ಳಿಯ ಹೆಸರನ್ನೇ ಅದಕ್ಕೆ ಇಡಬೇಕೆಂದರು. ರೈಲ್ವೆ ಬೋರ್ಡು ಮಧ್ಯಸ್ಥಿಕೆಗೆ ಬಂದು ಆ ಎರಡು ಹೆಸರುಗಳನ್ನೂ ಸೇರಿಸಿ ಹೊಸ ಹೆಸರನ್ನಿಟ್ಟಿತು. ಜನರು ಅದಕ್ಕೂ ಒಪ್ಪಲಿಲ್ಲ! ತಿರು ಗೆಂದೂರು ರೈಲ್ವೆ ಸ್ಟೇಶನಿಗೆ ಹೋಗಲು ಅನುಕೂಲವಾಗುವಂತೆ ೨೫,೦೦೦ ರೂಪಾಯಿ ವೆಚ್ಚ ಮಾಡಿ ಒಂದು ಸಂಕವನ್ನೂ ೭೦೦೦ ರೂಪಾಯಿ ವೆಚ್ಚ ಮಾಡಿ ಒಂದು ಮಾರ್ಗವನ್ನೂ ಮಾಡಲು ಹಳ್ಳಿಯ ಜನರು ನಿರ್ಧರಿಸಿರುವರು. ಮಾರ್ಗ ರಚನೆಗೆ ಹಳ್ಳಿಗರು ಭೂಮಿಯನ್ನೂ ಹಣವನ್ನೂ ಕೊಟ್ಟರು. ಅಂತೂ ರೈಲ್ವೆಸ್ಟೇಶನು ಬಹಿಷ್ಕರಿಸಲ್ಪಟ್ಟಿತು

ಅಮರನಾಥ!

ಹಿಮಾಲಯದ ಪರ್ವತದ ಮೇಲೆ ೧೬೦೦೦ ಅಡಿಗಳ ಮೇಲೆ ಹಿಮದ ದೊಡ್ಡ ಲಿಂಗವಿದೆ, ಈ ಲಿಂಗವು ಸದಾ ಸರ್ವದಾ ಹಿಮ ದಿಂದ ಮುಚ್ಚಿಕೊಂಡಿರುತ್ತದೆ. ಇದರಡಿಯಲ್ಲಿ ಒಂದು ಭಯಂಕರ ಗುಹೆಯಿದೆ. ಪ್ರತ್ಯಬ್ದಿ ಸಾವಿರಾರು ಹಿಂದೂಗಳು ಈ ಗುಹೆಯ ದರ್ಶನವನ್ನು ಮಾಡುವರು ಜುಲಾಯಿ ಅಗೋಸ್ತು ತಿಂಗಳುಗಳಲ್ಲಿ ಯಾತ್ರಿಕರು ಅಲ್ಲಿಗೆ ತೆರಳುವರು. ಏಳು ಮೈಲುಗಳ ವರೆಗೆ ಗುಡ್ಡವನ್ನು ಹತ್ತಬೇಕು ಎಷ್ಟೋ ಜನರು ಇದನ್ನು ಏರಲಾರದೆ ಅರ್ಧದಲ್ಲೆ ಹಿಂದಿರುಗುವುದಿದೆ. ಈ ಏಳು ಮೈಲುಗಳನ್ನು ಹತ್ತಿದ ನಂತರ ಅದ ಕ್ಕೆ ಕೆಳಲೂ ಎತ್ತರವೂ ಇಲ್ಲದಾರೂ ಆಗಿರುವ ವನ ಪ್ರದೇಶಗಳೂ ವ ಲಿ ಗಳೂ ಕಾಣಸಿಗುತ್ತವೆ. ಇವುಗಳನ್ನು ದಾಟಿ ಶಿಶಿರವ ನಾಗ ಎಂಬಲ್ಲಿಗೆ ತಲುಪುತ್ತಲೇ ೧೬೦೦೦ ಅಡಿ ಮೇಲೇರಿದಂತಾಗುವುದು ಇಲ್ಲಿ ಸಮತಳ ವಾದ ಸ್ಥಳವೊಂದಿದೆ ಇಲ್ಲಿ ಪ್ರವಾಸಿಕರು ತಂಗಿ ಆಯಾಸವನ್ನು ನೀಗುವರು ಇಲ್ಲಿ ಮೋಡವೂ ಹಿಮವೂ ತಾಂಡವವಾಡುವುವು. ಹಿಮಾಲಯದ ಈ ಶಿಖರದಲ್ಲಿ ವಿಚಿತ್ರ ರೀತಿಯ ನೈಸರ್ಗಿಕ ಗುಹೆಗಳೂ ಸುರಂಗಗಳೂ ಕಾಣ ಸಿಗುವುವು ಅಮರನಾಥ ಗುಹೆಯನ್ನು ಹತ್ತ ಲಾರದ ನಿಶ್ಶಕ್ತ ಪ್ರವಾಸಿಕರು ೧೨೬೦೦ ಅಡಿಗಳ ಮೇಲಿರುವ ಒಂದು ಸಣ್ಣ ಗುಹೆಯಲ್ಲಿ ತಮ್ಮ ಪೂಜಾ ವಿಧಿಗಳನ್ನು ತೀರಿಸಿ ಹಿಂದಿರುಗುವರು. ಅಮರನಾಥ ಗುಹೆಯನ್ನು ಸೇರಿದೊಡನೆ ಮನುಷ್ಯನಿಗೆ ಹಸಿವು ಆಹಾರ ಗಳ ಗೋಜಿಯು ಮರೆತುಹೋದಂತಾಗುವುದು ಶೀತಲ ಗಾಳಿಯಿಂದಲೂ ವಾತಾವರಣದಿಂದಲೂ ದೇಹವು ಶಾಂತಿಯನ್ನು ಹೊಂದುವುದು ನಿಶ್ಶಬ್ದತೆಯು ಹೆಚ್ಚಿದಷ್ಟಕ್ಕೆ ಮನುಷ್ಯನ ಚಿತ್ತವು ಶಾಂತಿಗಾಗಿ ಹೋರಿ ಯಿಡುವುದು ಧ್ಯಾನವೂ ಭಕ್ತಿಯೂ ತಾವೇ ತಾವಾಗಿ ಬರುವುವು ಈ ಅಮರನಾಥ ಗುಹೆಯ ಮೇಲೆ ಪಂಚತರಣಿ ಎಂಬ ಶಿಖರವಿದೆ, ಇದರ ತುದಿಯಲ್ಲಿ ಹಿಮಗಡ್ಡೆಗಳು ಸಾಲು ಸಾಲಾಗಿ ನಿಂತುಕೊಂಡಿವೆ. ಈ ಶಿಖರದ ಬಳಿಯಿರುವ ಒಂದು ಗುಹೆಯಲ್ಲಿ ಕುಳಿತು ನೋಡಿದರೆ ಆಗಾಗ್ಗೆ ಹಿಮಗಡ್ಡೆಗಳು ತಮ್ಮಷ್ಟಕ್ಕೆನೆ ಹೋರಳಿ ಬೀಳುವುದು ಕಾಣು ವುದು ಇವುಗಳು ಬೀಳುವಾಗ ಅಡಿಗೆ ಬಿದ್ದರೆ ದೇಹವು ಯಾವುದೋ ಹಿಮದ ಖಣಿಗೆ ಬಿದ್ದು ಮಾಯವಾಗುವುದು. ಹಿಮಾಲಯದಲ್ಲಿ ಇದ ಕ್ಕಿಂತಲೂ ವಿಚಿತ್ರ ವಿಷಯಗಳಿವೆ

Notice.

The Canara Banking Corporation, Udipi, Ltd., Mangalore

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನು ಆಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರಿಗೆ ಪಾವತಿ ಆಗದೆ ಇರುವ ಕಾರಣದಿಂದಲೂ, ಈ ಮೂಲಕ ತಿಳಿಯಪಡಿಸುವು ದೇನಂದರೆ— ಸದರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ ಐವಜು, ರಿಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ವ ಬಡ್ಡಿಗೆ ಬಡ್ಡಿ ಕೂಡಿಸಿ ಇದೇ 1933ನೇ ಇಸವಿ ನವಂಬರ ತಿಂಗಳ ತಾ. 30ನೇ ಗುರುವಾರದ ಒಳಗೆ ತಂದುಕೊಟ್ಟು, ಅಡವಿಟ್ಟ ನಗಗಳನ್ನು ಸದರಿಯವರು ಬಿಡಿಸಿ ಕೊಂಡು ಹೋಗದೆ ಇದ್ದರೆ, ಸದರಿಯವರು ಈಡಾಗಿಟ್ಟ ನಗ ಗಳನ್ನು ಇದೇ 1933ನೇ ಇಸವಿ ದಶಂಬರ ತಿಂಗಳ ತಾ. 2ನೇ ಶನಿವಾರ ದಿವಸ ಮಧ್ಯಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು.

ಸಾಲದ ನಂಬ್ರ J. L. 1228/30. ಈಡಿಟ್ಟ ಅಸಾಮಿಯ ಹೆಸರು ಮತ್ತು ವಿಳಾಸ Thyampa Mendon, nephew of Manjanna Mendon, At Bengre, Mangalore ಸಾಲದ ಮೊಬಲಗು ರೂ. 140—0—0

Office of the Corporation, Mangalore, 6—11—1933. | K. Vittal Bhandary, Agent.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ಸಂಬ್ರ 326/1933.

ಲೋಕನಾಥ್ಯ—ವಾದಿ.

ಮತ್ತು

1. ಶೇಠಿ ಹೆಂಗಸು, 2. ಕೆ. ಕೊರಗ, ನೂಕ್ಕ ಹೆಂಗ ಸಿನ ಮಕ್ಕಳು— ಉಡುಪಿ ತಾಲೂಕು ಪಡುಗ್ರಾಮದಲ್ಲಿ ಇರು ವವರು—ಪ್ರತಿವಾದಿರು.

ಇವರೊಳಗೆ

ವಾದಿಗೆ ಪ್ರತಿವಾದಿರು ತಾರೀಕು 1—6—1930ರಲ್ಲಿ ರೂಪಾಯಿ 54ಕ್ಕೆ ಬರಸಿಕೊಟ್ಟ ಡಿಮಾಂಡ ನೋಟಿನ ಅಸಲು ಬಡ್ಡಿ ಐವೇಜು ರೂಪಾಯಿ 74—8—6ಗೆ ಮಾಡಿದ ವ್ಯಾಜ್ಯವು ತಾರೀಕು 17-11-'33ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದರಿ ವ್ಯಾಜ್ಯಕ್ಕೆ ಆಕ್ಷೇಪವಿದ್ದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟಿನಲ್ಲಿ ಪ್ರತಿವಾದಿರು ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು

Udipi, South Kanara 7—11 1933 | B Srinivasa Rao, Advocate for Plaintiff.

ನೋಟೀಸು

ಉಡುಪಿ ಕಸಬೆಯಲ್ಲಿರುವ ತೋನ್ಸೆ ಶಾಂತ ಮೂರ್ತ್ಯರವ ನವರ ಮಗ ತೋನ್ಸೆ ವಿಠಲರಾಯನು ಯಾವತ್ತು ಜನರಿಗೆ ಶ್ರುತ ಪಡಿಸುವದೇನೆಂದರೆ—ನಾನು ತಾರೀಕು 6—11—33ನೇ ಸೋಮವಾರ ದಿನ ಬೆಳಿಗ್ಗೆ 6 ಘಂಟೆಗೆ ಉಡುಪಿಯಿಂದ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಹೋಗತಕ್ಕ ಸಿ ಪಿ ಸಿ ಕಂಪೆನಿಯ ಮೋಟರ ಬಸ್ಸಿನಲ್ಲಿ ಉಡುಪಿಯಿಂದ ಕಾರ್ಕಳಕ್ಕೆ ಹೋಗುತ್ತಾ ನನ್ನ ಅಂಗಿ ಕಿಸೆಯಲ್ಲಿ ಇಟ್ಟುಕೊಂಡಿದ್ದ ಈ ಕೆಳಗೆ ಕಾಣಿಸಿದ ರಿಕಾರ್ಡು ವಗೈರೆ ಉಡುಪಿಯಿಂದ ಕುಕ್ಕುಂದೂರು ವರೆಗಿನ ಮಧ್ಯಮಾರ್ಗದಲ್ಲಿ ಎಲ್ಲಿಯೊ ಕಿಸೆಯಿಂದ ಕಳಚಿಬಿದ್ದು ಹೋಗಿಯದೆ. ಸದರಿ ರಿಕಾರ್ಡು ವಗೈರೆ ಸಿಕ್ಕಿದವರು ಅವುಗಳನ್ನು ದಯಮಾಡಿ ಉಡುಪಿಯಲ್ಲಿರುವ ನನಗಾಗಲೀ ಅಂಡಾರಸಯ್ಯದ ಅಬ್ಬಾಸ ಸಾಹೇಬರ ಮಗ ಕಾರ್ಕಳದಲ್ಲಿರುವ ವಕೀಲ್ ಹಾಜಿಸಯ್ಯದ ಹುಸೇನ ಸಾಹೇಬರಿಗಾಗಲೀ ಪಾವತಿ ಮಾಡಿಸಿದ್ದಲ್ಲಿ ಅಥವಾ ಆ ಕುರಿತು ಟಪ್ಪಾಲು ಮೂಲಕ ತಿಳಿಸಿದ್ದಲ್ಲಿ ಅಂಥವರಿಗೆ ರೂಪಾಯಿ 2—0—0 ಎರಡು ರೂಪಾಯಿ ಇನಾಮು ಕೊಡಲ್ಪಡುವದು ಮತ್ತು ಅವರ ಮಹದುಪಕಾರವನ್ನು ನಾನು ಸದಾ ಸ್ಮರಿಸುತ್ತೇನೆ.

ಬಿದ್ದು ಹೋದ ರಿಕಾರ್ಡು ವಗೈರೆಯ ವಿವರ.

(1) ತಾ 26—1—31ರಲ್ಲು ಕಾರ್ಕಳದಲ್ಲಿರುವ ಅಂಡಾರ ಸಯ್ಯದ ಅಬ್ಬಾಸ ಸಾಹೇಬರ ಮಗಂದಿರು ಹಾಜಿ ಸಯ್ಯದ ಹುಸೇನ ಸಾಹೇಬ ಸಯ್ಯದ ಅಬ್ದುಲ್ ಖಾದರ್ ಸಾಹೇಬ ಸಹ 2 ಜನರು ತಮ್ಮೊಳಗೆ ಮಾಡಿಕೊಂಡ ಕಾರ್ಕಳ ಸ ರಿ ಆ I 152—247—259 ನಂಬ್ರ 79/31ಕ್ಕೆ ರಿಜಿಸ್ಟ್ರಿಯಾದ ಅಸ್ಲು ವಿಭಾಗ ಪತ್ರ

(2) ತಾ 19—12—1928ರಲ್ಲು ಖಾನ ಬಹದೂರ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ವಗೈರೆ ೬ ಜನರು ತಮ್ಮೊಳಗೆ ಮಾಡಿಕೊಂಡ ಉಡುಪಿ ಸ ರಿ ಆ I 360—195—219 ನಂಬ್ರ 52/1929ಕ್ಕೆ ರಿಜಿಸ್ಟ್ರಿಯಾದ ವಿಭಾಗ ಪತ್ರದ ಕೈ ನಕ್ಲು ಈ 2 ದಸ್ತೈವಜುಗಳ ವಟ್ಟಿಗೆ ಒಂದೇ ಲಕೋಟೆಯಲ್ಲಿ ಇದ್ದವುಗಳು

(3) ಬ್ಯಾಂಡು ಇಲ್ಲದ ಕಾಲು ತಾಂವಿನ ಸ್ವಾಜಿನ ಲೆಖ್ಖದ ಪುಸ್ತಕ 1 (ಇಡೀ ಪುಸ್ತಕದಲ್ಲಿ ಲೆಖ್ಖ ಬರೆದಿರುತ್ತದೆ)

(4) ಪಚ್ಚೆ ಬ್ಯಾಂಡಿನ ಮೇಲೆ ಎಕ್ಸರಸೈಜ್ ಬೂಕ್ ಎಂತ ಛಾಪಿಸಿರುವ ಕಾಲು ತಾವು ಸ್ವಾಜಿನ ಲೆಖ್ಖ ಪುಸ್ತಕ 1 ಸಹ ಆಗಿರುತ್ತದೆ— ಇದರಲ್ಲಿ ಕೆಲವು ಕಾಗ್ದಗಳಲ್ಲಿ ಮಾತ್ರ ಲೆಖ ಬರೆಯಲ್ಪಟ್ಟಿದೆ—ಮಿಕ್ಕುಳಿದ ಕಾಗ್ದಗಳು ಖಾಲಿ ಇರುತ್ತವೆ

ಉಡುಪಿ ತಾ. 7—11—'33 | Tonse Vittal Rao

Attur Vaikunta Prabhu Bank Mangalore.

ಅತ್ತೂರು ವೈಕುಂಠ ಪ್ರಭು ಬೇಂಕ್, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನಾಗಲೀ, ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗದೆಯೂ, ಕೆಲವು ಜ್ಯಾರಿಯಾಗಿಯೂ ಬಂದಿರುವುದರಿಂದಲೂ, ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ ಸಂ| 1933ನೇ ಇಸವಿ ನವಂಬರ ತಿಂಗಳ ತಾ 18ನೇ ಶನಿವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಇದೇ ನವಂಬರ ತಾ 25ನೇ ಶನಿವಾರ ದಿವಸ ಮಧ್ಯಾಹ್ನ 2 ಘಂಟೆ ತರುವಾಯ ಯಾ ಬೇಂಕಿನವರಿಗೆ ಯುಕ್ತ ತೋರುವ ಮುಂದಾ ತಾರೀಕು ಯಾ ತಾರೀಕುಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

	ಸಾಲದ ನಂಬ್ರ	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಅಸಲು ರೂಪಾಯಿ
1	1265/32	ಭಾಸ್ಕರ ರೈ, ರಾಮಯ್ಯ ಆಳ್ವರ ಅಳಿಯ ವಿದ್ಯಾರ್ಥಿ, ಕೊಡಿಯಾಲಗುತ್ತು ಕೊಡಿಯಾಲಬೈಲು	15—0—0
2	1651/32	ಡಿ ಡಿ ಡಿ ಡಿ	10—0—0
3	191/33	ಯಂ ಮುಕುಂದ ಪ್ರಭು, ಮುಲ್ಕಿ ಸುಬ್ರಾಯ ಪ್ರಭುಗಳ ಮಗ, ಸರಾಫ್ ಗೋಕಶೆಟ್ಟಿ ಬಜಾರ್ ಮಂಗಳೂರು.	275—0—0
4	1169/32	ಕೆ ವಾಮಯ್ಯ ಶೆಟ್ಟಿ ಮುತ್ತಯ್ಯ ಶೆಟ್ಟಿ ಅಳಿಯ c/o ಕೆನರಾ ಛಾಪಖಾನೆ ಹಂಪನಕಟ್ಟೆ, ಮಂಗಳೂರು	30—0—0
5	2160/32	ಡಿ ಡಿ ಡಿ ಡಿ	32—0—0
6	1488/32	ಪುದ್ದು ತುಕ್ರನ ಮಗ, ಕೂಲಿ ಕೆಲಸ, ಬೈತಂಡಿ ಉರುವ ಮಂಗಳೂರು	9—0—0
7	1568/32	ಶೀರೂರು ಪಾಂಡುರಂಗ ರಾವ್, ಶೀರೂರು ವೆಂಕಟ್ರಾಯರ ಮಗ ವಕೀಲ್ ರಾಮಮೋಹನ ರಾಯರ ಗುಮಾಸ್ತ ಕೋರ್ಟು ರೋಡ್ ಮಂಗಳೂರು	16—0—0
8	473/32	ಅಬ್ದುಲ್ ಖಾದ್ರಿ ಬ್ಯಾರಿ ಬೆಯ್ಯಬ್ಯಾರಿಗಳ ಮಗ, ಅಡ್ಯಾರ ಕಣ್ಣೂರು ಗ್ರಾಮ ಪೋ ಫರಂಗಿಪೇಟೆ	6—0—0
9	1023/32	ಯಂ ಅಬ್ದುಲ್ ರೈಮಾನ, ಶೇಕ್ ಬುಡಾನ್ ಸಾಹೇಬರ ಮಗ, ಕುದ್ರೋಳಿ ಜೋಡುಪಳ್ಳಿ ಬಳಿ, ಮಂಗಳೂರು.	5—0—0
10	1165/32	ಇ ಡಿ ಎಂಡ್ರೂಸ್, ಡೇನಿಯಲ್ ಎಂಡ್ರೂಸರ ಮಗ, ರಿಟಯರ್ಡ್ ಕ್ಲಾರ್ಕ್, ಜಪ್ಪು ಮಾರ್ಕಟ್ಟೆ ಬಳಿ, ಶಂಕರನಾರಿ ಪೋಸ್ಟ್	8—0—0
11	458/32	ಬಿ ಅಬ್ದುಲ್ ಲತೀಫ್, ಅಬ್ದುಲ್ ಕರೀಮರ ಮಗ, ಉಪಾಧ್ಯಾಯ, ಮುಹಮ್ಮದನ್ ಹಯರ್ ಎಲಿಮೆಂಟ್ರಿ ಶಾಲೆ ಕಸ್ಬಾಗಲ್ಲಿ, ಮಂಗಳೂರು	14—0—0
12	1526/32	ಯಸ್ ಪರೇರ, ಇಗ್ನಾಸ ಪರೇರರ ಮಗ ಟಿಪ್ಪಾಲ ಪೇಟೆ ಮಂಗಳೂರು.	10—0—0

A. V. P. BANK, ಮಂಗಳೂರು, 8—11—33.

ಈ ನೋಟೀಸಿನ ಖರ್ಚು ಅಲ್ಲಾದಾ.

A. Vaikunta Prabhu, Proprietor.

[illegible]

(ಸಾವಿರದ ... — ...)

							ಸೂರ್ಯ	
							ಉ	ಅ
11	[illegible]	[illegible]	[illegible]	[illegible]	[illegible]	[illegible]	6.26	6. 6
12	[illegible]	[illegible]	[illegible]	[illegible]	[illegible]	[illegible]	6.25	6. 5
13	[illegible]	[illegible]	[illegible]	[illegible]	[illegible]	[illegible]	6 26	6 6
14	[illegible]	[illegible]	[illegible]	[illegible]	[illegible]	[illegible]	6 26	6 4
15	[illegible]	[illegible]	[illegible]	[illegible]	[illegible]	[illegible]	6 26	6 4
16	[illegible]	[illegible]	[illegible]	[illegible]	[illegible]	[illegible]	6.26	6. 5
17	[illegible]	[illegible]	[illegible]	[illegible]	[illegible]	[illegible]	6 26	6 3

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿವಸದ ಮಳೆ	ಒಟ್ಟು ಮಳೆ.
2	86—4	74—0	—	—
3	83—7	72—3	—	—
4	84—6	73—8	—	—
5	87—2	73—9	—	—
6	88—3	74—9	—	—
7	89—9	74—1	—	—
8	90—2	77—2	—	158-22

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಬೊಳ್ತರಾಟಿ ಅಕ್ಕಿ	...	3— 6	3— 8
ಹಳೆಮುಷ್ಠಿ	...	5— 4	5—12
ಗುಡ್ಡು	...	4— 4	5— 0
ಕುಗ್ಗಿ	...	4— 4	4—12
ಊರ ಅವ್ವಲ್ ಬೆಳ್ತಿಗೆ	...	4—10	5— 4
ರಂಗೂನು ಬೆಳ್ತಿಗೆ ಗೋಣಿ ಒಳ್ಳೆ	...	5— 8	6— 0
ಎಲ್ಲೂರು ಬೆಳ್ತಿಗೆ ಮುಡಿ ಒಳ್ಳೆ	...	4— 0	4— 4
ಗೋದಿ ಗೋಣಿ ಒಳ್ಳೆ	...	11— 8	12— 8
ತೊಗರಿ ಗೋಣಿ ಒಳ್ಳೆ	...	9— 4	11— 0
ಹುರುಳಿ ಗೋಣಿ ಒಳ್ಳೆ	...	5—10	5—12
ಕಡಲೆ ಗೋಣಿ ಒಳ್ಳೆ	...	9— 8	12— 8
ತೊಗರಿಬೇಳೆ ಗೋಣಿ ಒಳ್ಳೆ	...	10— 8	18— 0
ಉದ್ದು ಗೋಣಿ ಒಳ್ಳೆ	...	8— 8	9— 0
ಹೆಸರು ಗೋಣಿ ಒಳ್ಳೆ	...	8— 0	9— 0
ಊರುಬೆಲ್ಲ ಖಂಡಿ ಒಳ್ಳೆ	...	36— 8	40— 0
ಉಪ್ಪು ಗೋಣಿ ಒಳ್ಳೆ	...	5— 8	5—12
ಕೊಬ್ರಿ ಖಂಡಿ ಒಳ್ಳೆ	...	52— 0	60— 0
ಕೊಬ್ರಿ ಹಿಂಡಿ ಖಂಡಿ ಒಳ್ಳೆ	...	16— 8	17— 0
ಎಳ್ಳಿಂಡಿ ಖಂಡಿ ಒಳ್ಳೆ	...	20— 0	21— 4
ಕೊಬ್ರಿ ಎಣ್ಣೆ ಮಣ ಒಳ್ಳೆ	...	3— 7	4— 6
ಎಳ್ಳೆಣ್ಣೆ ಮಣ ಒಳ್ಳೆ	...	5— 0	6— 0
ಚಿಮಣಿಎಣ್ಣೆ ಪೆಟ್ಟಿಗೆ ಒಳ್ಳೆ	...	7— 4	8—12
ಜೋನಿ ಸಕ್ಕರೆ ಮಣ ಒಳ್ಳೆ	...	3—15	4— 0
ಬೊಳ್ಳ ಮೆಣಸು	...	7— 0	8— 8
ಸಾಸಿವೆ ಮುಡಿ ಒಳ್ಳೆ	...	5— 0	5— 4
[illegible] ಖಂಡಿ ಒಳ್ಳೆ	...	140— 0	160— 0
[illegible] ಮಣ ಒಳ್ಳೆ	...	19— 0	[illegible]— 8
[illegible] ಮುಡಿ ಒಳ್ಳೆ	...	2—14	3— 0
[illegible] ಖಂಡಿ ಒಳ್ಳೆ	...	42— 0	44— 0
[illegible] ಮಣ ಒಳ್ಳೆ	...	9—15	10— 0
[illegible] ಮಣ ಒಳ್ಳೆ	...	13— 8	14— 8
[illegible] ಒಳ್ಳೆ	...	14—12	15— 0
[illegible] ಮಣ ಒಳ್ಳೆ	...	9— 0	9— 8
[illegible] ಒಳ್ಳೆ	...	20— 0	20— 8
[illegible] ಖಂಡಿ ಒಳ್ಳೆ	...	35— 0	45— 0
[illegible] ಖಂಡಿ ಒಳ್ಳೆ	...	200— 0	250— 0
[illegible] ಖಂಡಿ ಒಳ್ಳೆ	...	250— 0	260— 0
[illegible]		105— 0	110— 0
[illegible]		120— 0	130— 0

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವವು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವರಾದರೆ ಪ್ರತಿದಿವಸ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಯಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕು ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

ಸುಬ್ರಹ್ಮಣ್ಯಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧|| ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲುಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ.

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯುವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ-
—ಮೂಡಿಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ

ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಪತ್ರಗಳು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ಲೇಖಕರ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ರೀತಿಯಲ್ಲಿರತಕ್ಕದ್ದು (ಸಂ. ಸ್ವ.)

ಬೈಲೂರು ಸೆಂಟರಿನ ಅಧ್ಯಾಪಕರ ಸಂಘದ ಅದೊಂದು ಸಭೆಯಲ್ಲಿ ಟ್ರೈನಿಂಗ್ ಮೀಟಿಂಗು ನಡೆಯುವ ಪೇಟೆ ಬಿಟ್ಟು ಒಂದು ಮೈಲು ದೂರದ ಒಂದು ಎಲಿಮೆಂಟರಿ ಶಾಲೆಯಿಂದ, ಪೇಟೆಯಲ್ಲಿರುವ ಹಯರ್ ಎಲಿಮೆಂಟರಿ ಶಾಲೆಗೆ ಮೀಟಿಂಗು ಬದಲಾವಣೆ ಮಾಡಬೇಕೆಂದು ಸರ್ವಾನುಮತದಿಂದ ಮಂಜೂರಾಯಿತು. ಆ ಠರಾವು ಕಾರ್ಕಳ ತಾಲೂಕು ಸೆಕ್ರಟರಿಯವರಿಗೆ ಕಳುಹಿಸಲಾಯಿತು. ಈ ಸಭೆ ಜರಗುವಾಗಲೆಯೂ ಅಧ್ಯಕ್ಷರೇ ಬೈಲೂರು ಸೆಂಟರಿನ ಕಾರ್ಯದರ್ಶಿಗಳು. ತಾಲೂಕು ಸೆಕ್ರಟರಿಯವರು ಠರಾವನ್ನು ಮಂಜೂರು ಮಾಡಲೊಪ್ಪಲಿಲ್ಲ. ಪಕ್ಷಪಾತಿಗಳಾದ ಬೈಲೂರು ಸೆಂಟರಿನ ಕಾರ್ಯದರ್ಶಿಗಳು ತಮ್ಮ ಒಬ್ಬನ ಹಿತವನ್ನು ಬಯಸಿ ಬಹುಮತಕ್ಕೆ ವಿರೋಧವಾಗಿ ವರ್ತಿಸಿದುದು ಶೋಚನೀಯ. ಬದಲಾಯಿಸಬೇಕೆಂದಿರುವ ಶಾಲೆಯು ಪೇಟೆಯ ಮಧ್ಯೆ ಇದ್ದು, ಉಪಾಧ್ಯಾಯರಿಗೆ ಬಹಳ ಅನುಕೂಲವಾಗಿದ್ದು, ಕಾರ್ಕಳ ತಾಲೂಕು ಸೆಕ್ರಟರಿಯವರು ಮತ್ತು ಅವರ ಕಮಿಟಿಯವರು, ಬೈಲೂರು ಸೆಂಟರಿನ ಅಧ್ಯಾಪಕರ ಬಹುಮತಕ್ಕೆ ಲಕ್ಷ್ಯ ಕೊಡದೆ, ಸೆಂಟರ ಸೆಕ್ರಟರಿಯವರೊಬ್ಬರ ಮತಕ್ಕೆ ಪ್ರಾಧಾನ್ಯ ಕೊಟ್ಟುದು [illegible]ದಕರ! ಅವರು ಹೀಗೆ ವರ್ತಿಸಿದುದು ಸೆಂಟರಿನ ಅಧ್ಯಾಪಕರಿಗೆ ಬಹಳ ಬೇಸರದ ವಿಷಯ.! ತಾಲೂಕು ಸೆಕ್ರಟರಿಯವರು ಮತ್ತು ಕಮಿಟಿಯವರು ಪುನಃ ಪರ್ಯಾಲೋಚಿಸದಿದ್ದರೆ ಸೆಂಟರಿನ ಅಧ್ಯಾಪಕರ ಸಭೆಯಲ್ಲಿ ಸದಾ ಅಹಿತಕರವಾದ ಹೋರಾಟಗಳೂ, ದ್ವೇಷಗಳೂ, ಕಲಹಗಳೂ ಹೆಚ್ಚುವವೆಂಬುದು ನಿರ್ವಿವಾದ ಸಂಗತಿ.

ಬೈಲೂರು, ?—೧೧ ೩೩ — "ಯೆ" ಅಧ್ಯಾಪಕರಲ್ಲೊಬ್ಬ

ಬೆಳ್ತಂಗಡಿ—ಇಲ್ಲಿಯ ಅಮರಪಡ್ನೂರು ಪಂಚಾಯತ ಕೋರ್ಟು ಸ್ಥಾಪನೆಯಾಗುವಾಗ ಪ್ರತಿ ಹದಿನೈದು ದಿವಸಕ್ಕೊಮ್ಮೆ ಘಂಟೆ ೧೧ರಿಂದ ಕೋರ್ಟು ಕೆಲಸವು ಪ್ರಾರಂಭಿಸಲ್ಪಡುವುದೆಂದು ಅಲ್ಲಲ್ಲಿ ತುಂಬಾ ನೋಟೀಸುಗಳು ಹೊರಟಿದ್ದವು.

ಸ್ವಲ್ಪ ಸಮಯದಲ್ಲೇ ಸದರಿ ನೋಟೀಸುಗಳು ಹೇಗೆ ಮಾಯವಾಗ ತೊಡಗಿದವೋ ಹಾಗೆಯೇ ಕೋರ್ಟಿನ ಕೆಲಸವು ಕೂಡಾ ಹಿಂದರಿಯುತ್ತಾ ಬಂದು ಹದಿನೈದು ದಿವಸದ ಮಾತಂತಿರಲಿ, ಅಂಥಾ ದಿವಸಗಳು ಮೂರಾವರ್ತಿ ಕಳೆದರೂ ಸಹ ಕೋರ್ಟಿನ ಕೆಲಸವೇ ನಡೆಸಲ್ಪಡದಿರುವುದು ತುಂಬಾ ಶೋಚನೀಯವೇ ಸರಿ.

ಕಕ್ಷಿಗಾರರೂ ಮೆಂಬರರ ಪೈಕಿ ಒಬ್ಬರೂ ಬಂದು ಅದೇ ದಿವಸ ಕಾದು ಕೂತು. ಅಂತಯೇ ಹಿಂದೆ ಹೋಗಬೇಕಾದ ಸಂದರ್ಭವು ಬಂದೊದಗಿದೆ.

ಆದ್ದರಿಂದ ಈ ವಿಷಯದಲ್ಲಿ ಸಂಬಂಧಪಟ್ಟವರೂ, ಮೇಲಾಧಿಕಾರಿಗಳೂ ಸ್ವಲ್ಪ ನಿಗಾ ತೆಗೆದುಕೊಳ್ಳುತ್ತಿದ್ದರೆ ತುಂಬಾ ಉಪಕಾರವಾಗುತ್ತಿತ್ತು.

ಪ್ರತ್ಯಕ್ಷದರ್ಶಿ

«ಕಂಡಂತೆ ಬರೆದರೆ ಕೆಂಡದಂಥ ಉತ್ತರವೇ?»

ಸ್ವದೇಶಾಭಿಮಾನಿಯ ಪ್ರಿಯ ನಿಷ್ಪಕ್ಷಪಾತಿಕ [illegible]!

ಶ್ರೀಯುತ ಸತ್ಯಾರ್ಥಿ ಸಿದ್ಧಾಂತ ವಿಶಾರದ ಮುಂಬಯಿ ಎಂಬವರೊಬ್ಬರು ವಿಚಾರಿಯ ಪರವಾಗಿ ರಾಷ್ಟ್ರಬಂಧುವಿನಲ್ಲಿ ಬರೆದಿದ್ದ ನನ್ನ ಅದೊಂದು ಲೇಖನವನ್ನು ಶಂಕಿಸಿ ಪ್ರಶ್ನಿಸಿ ಬರೆದ ಆಕ್ಷೇಪಣೆಯನ್ನೂ— ಅದಕ್ಕೆ ಪ್ರತಿಯಾಗಿ ನಾನು ಬರೆದ ಸಮಾಧಾನೋತ್ತರವನ್ನೂ ತಾವು ಈ ಮೊದಲೇ ಓದಿರುತ್ತೀರಿ!

ನನ್ನ ಉತ್ತರಕ್ಕೆ ಪ್ರತ್ಯುತ್ತರವಾಗಿ ಸ್ವದೇಶಾಭಿಮಾನಿಯ ಗತ ಅಕ್ಟೋಬರ ತಾ ೧೩ರ ಸಂಚಿಕೆಯಲ್ಲಿ ಸದರಿ ಸತ್ಯಾರ್ಥಿಗಳು ವಕ್ರವಾಗಿ ಬರೆದ ಲೇಖನದ ಸಂಕ್ಷಿಪ್ತ ಹಾಗೂ ನಿಷ್ಪಕ್ಷ ವಿಮರ್ಶೆಯೇ ಪ್ರಕೃತ ನನ್ನ ಲೇಖನಿಯ ವಿಶಿಷ್ಟ ಧ್ಯೇಯವಾಗಿರುವುದು. ಸತ್ಯಾರ್ಥಿಗಳ ಅಂಧೋಽಪಂತ ಸತ್ಯಾಸತ್ಯ ನಿರ್ಣಯದಿಂದ ಶಬ್ದಭಿಪ್ರಾಯವನ್ನು ಹೊರಗಲಾಡಿಸುವುದೇ ಎಲ್ಲರೊಂದಿಗೆ ನನ್ನ ಕರ್ತವ್ಯವೂ ಆಗಿದೆ ಎಂಬುದನ್ನು ಯಾರೂ ಮರೆಯಲಾಗದು.

"ಮಂತ್ರಬ್ರಾಹ್ಮಣಯೋಃ ವೇದನಾಮಧೇಯಂ"

ಎಂಬೀ ಸುಪ್ರಸಿದ್ಧ ಕಾತ್ಯಾಯನ ಸೂತ್ರದಿಂದ 'ವೇದ'ಶಬ್ದವು ಯಾವ ಅರ್ಥದಲ್ಲಿ ಉಪಯೋಗಿಸಲ್ಪಡುತ್ತದೆಂಬುದು ಅಲ್ಪಸ್ವಲ್ಪ ಸಂಸ್ಕೃತ ಬಲ್ಲ ಸರ್ವಸಾಮಾನ್ಯ ವ್ಯಕ್ತಿಗಳಿಗೂ ಸರಳವಾಗಿ ಹೊಳೆಯುವಂತಿದೆ. ಮಂತ್ರಗಳಿಗೆ ಅಲ್ಲದೇ ಅವುಗಳ ಬ್ರಾಹ್ಮಣ (ಟೀಕೆ) ಗಳಿಗೆ ವೇದವೆಂಬ ಹೆಸರು ಎಂಬುದೇ ಮೇಲಿನ ಸೂತ್ರದ ಲೋಕಪ್ರಸಿದ್ಧ ಹಾಗೂ ಸುಲಭಗ್ರಾಹ್ಯ ಅರ್ಥವಾಗಿದೆ. ವೇದಮಂತ್ರಗಳನ್ನೂ ಅವುಗಳಿಗೆ ಟೀಕೆಗಳನ್ನೂ ಬರೆದವರು ಬ್ರಹ್ಮಾನುಯಾಯಿಗಳಾದ ಪ್ರಾಚೀನ ಬ್ರಾಹ್ಮಣಮಹರ್ಷಿಗಳೆಂಬುದು ರೂಢಿಗತವಾದ ಆ ಶಬ್ದದಿಂದಲೇ ವ್ಯಕ್ತವಾಗುವುದು.

ಪ್ರಪಂಚಪ್ರಸಿದ್ಧವಾದ ಸರಳಾರ್ಥಕ್ಕೆ ತಪ್ಪು ಹಾಗೂ ವಿಪರೀತಾರ್ಥವನ್ನು ಕಲ್ಪಿಸುವ ಪರಿಪಾಠಿಯೂ ಶ್ರೀಯುತ ಸತ್ಯಾರ್ಥಿಗಳಿಗೆಲ್ಲಿಂದ ಬಂತು?

"ಯೋ ವೈ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ"

ಈ ಶ್ಲೋಕದ ಮಂತ್ರದಲ್ಲಿ "ಪ್ರಹಿಣೋತಿ ತಸ್ಮೈ" ಎಂಬ ಅವಶಿಷ್ಟ ಭಾಗದ ಅಭಿಪ್ರಾಯವು ಸ್ವಯಂದ್ಯೋತಕವಾಗಿರುವುದರಿಂದ ಅದನ್ನು ಉಲ್ಲೇಖಿಸುವುದರಲ್ಲಿ ಹೆಚ್ಚಿನ ಮಹತ್ವವೇನೂ ತೋರಲಿಲ್ಲ. ತೋರುವುದಿಲ್ಲ. ದೋಷಗ್ರಾಹೀ ಸತ್ಯಾರ್ಥಿಗಳಂಥವರಿಗೆ ತೋರಿದರೂ ತೋರಬಹುದು.

ಇನ್ನು ಸತ್ಯಾರ್ಥಿಗಳು ಈಶ್ವರನೇ ಆದಿವೇದ ಪ್ರಕಾಶಕನೆಂದು ಸಿದ್ಧಪಡಿಸುವುದಕ್ಕಾಗಿ ವೇದವನ್ನೇ ಪ್ರಮಾಣವಾಗಿ ಕೊಡ ಬಯಲಾದ ಭರದಲ್ಲಿ ತನ್ನನ್ನು ಬೆನ್ನುಹಿಡಿದು ಹಿಂಬಾಲಿಸಿ ಬಂದಿರುವ "ಅಸಿದ್ಧಸಾಧನ"ವೆಂಬ ದೋಷಪಿಶಾಚವನ್ನು ಕಾಣದಿದ್ದುದು ಆಶ್ಚರ್ಯವಲ್ಲ. ವೇದವನ್ನು ಈಶ್ವರನೇ ಬರೆದನೆಂಬುದಕ್ಕೆ ವೇದವೇ ಪ್ರಮಾಣವಂತೆ! ಒಳ್ಳೆಯ ಪ್ರಮಾಣ! ತಾನು ಕದ್ದಿಲ್ಲವೆಂಬುದಕ್ಕೆ ತಾನೇ ಯಾ ತನ್ನ ಮಾತೇ ಸಾಕ್ಷಿಯೆಂದ ಹಾಗಾಯಿತು.

ಸಾತ್ವಿಕ ದೃಷ್ಟಿಯಿಂದ ವಿಮರ್ಶಿಸಿ ನೋಡಿದರೂ ವೇದಗಳನ್ನು ಈಶ್ವರನು ಬರೆದಿಲ್ಲವೆಂಬುದಕ್ಕೆ ವೇದಗಳಲ್ಲಿ ಅಲ್ಲಲ್ಲಿ ಕಾಣಬರುವ ಯಾಜ್ಞಿಕ ಹಿಂಸೆಯೇ ಪ್ರತ್ಯಕ್ಷ ನಿದರ್ಶನವಾಗಿರುವುದು. ಸರ್ವಹಿತೈಷೀ ಈಶ್ವರನು ಪಶುಬಲಿ ಪೋಷಕನೆಂಬ ಮಾತು ಸರ್ವಥಾ ಸಲ್ಲುವುದಿಲ್ಲ. ಪಶುಯಜ್ಞ ವಿಧಾನವು ವೇದದಲ್ಲಿ ವಿಧಿಸದಿರುತ್ತಿದ್ದರೆ ಇತ್ತೀಚೆಗೆ ಕೆಲವು ತಿಂಗಳುಗಳ ಮೊದಲು ಮೈಸೂರು ರಾಜಧಾನಿಯಲ್ಲಿ ವೇದೋಕ್ತ ಅಜಯಾಗದ ಸಂಬಂಧವಾಗಿ ಎರಡು ಆಡುಗಳು ಸ್ವಾಹಾರ್ಪಣೆಯಾಗುತ್ತಿರಲಿಲ್ಲ. ಇದೊಂದು ಉಜ್ವಲ ಉದಾಹರಣೆಯಾಗಿದೆ. ಇನ್ನೊಂದು ಜ್ವಲಂತ ದೃಷ್ಟಾಂತವೆಂದರೆ ಮಹಾತ್ಮಾ ಗಾಂಧೀಜೀಯವರು ಸ್ವಯಂ ಪಶುಯಜ್ಞ ವಿಧಾನವನು ವಿಧಿಸುವ ವೇದಭಾಗಗಳು ತನಗೆ ಗ್ರಾಹ್ಯವಲ್ಲವೆಂದು ಹೇಳಿರುವುದೇ ಆಗಿದೆ.

ಅಶ್ವಮೇಧ ಯಾಗದಲ್ಲಿ ಅಶ್ವಗಳನ್ನು ಆಹುತಿಯಾಗಿ ಕೊಡುವ ಕ್ರಮವು ಋಗ್ವೇದದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟದೆ ನೋಡಿರಿ!

ಚತುಸ್ತ್ರಿಂಶದ್ವಾಜಿನೋ। ದೇವಬಂಧೋರ್ವಂಕ್ರೀರಶ್ವಸ್ಯ ಸ್ವಧಿತಿಃ ಸಮೇತಿ।
ಅಚ್ಛಿದ್ರಾ ಗಾತ್ರಾ ವಯುನಾ ಕೃಣೋತ ಪರುಷ್ಪರುರನುಘುಷ್ಯಾ ವಿಶಸ್ತ॥
(ಋಗ್ವೇದ I ೧೬೨ ೧೮)

ಭಾವಾರ್ಥ—ವೇಗವುಳ್ಳ ದೇವತೆಗಳಿಗೆ ಪ್ರಿಯವಾಗಿರುವ ಕುದುರೆಯ ೩೪ ಪಕ್ಕೆಲುಬುಗಳನ್ನು ಚೆನ್ನಾಗಿ ತಿವಿಯಬೇಕು. ಆದರೆ ಅತ್ಯಂತ ಜಾಗರೂಕತೆಯಿಂದ ಆ ಎಲುಬುಗಳು ಹಾಳಾಗದಂತೆ ಅಶ್ವದ ಮೈಯಿಂದ ಕೀಳಬೇಕು.

ಪ್ರೊ। ಮೆಕ್ಸ್ ಮುಲ್ಲರರ ಮಾತುಗಳಿಂದ ವೇದಗಳು ಪ್ರಾಚೀನವೆಂದೇ ಹೇಳಬಹುದಾಗುತ್ತದಲ್ಲದೆ ಈಶ್ವರೋಕ್ತಿಗಳೆಂಬ ಸತ್ಯಾರ್ಥಿಗಳ ಪಕ್ಷವು ಸಿದ್ಧಿಸುವುದಿಲ್ಲ. ವೇದವೇ ಅತಿ ಪ್ರಾಚೀನ ಹಾಗೂ ಸರ್ವಶ್ರೇಷ್ಠವೆಂಬ ಮಾತಿನ ವಿಮರ್ಶೆಯು ಪ್ರಕೃತಕ್ಕೆ ಪ್ರಾಮುಖ್ಯವಲ್ಲವಾದರೂ ಮೆಕ್ಸ್ ಮುಲ್ಲರರ ಈ ಅಭಿಪ್ರಾಯಗಳಿಗೆ ವಿರುದ್ಧಾಭಿಪ್ರಾಯವನ್ನು ಹುಟ್ಟಿಸುವಂತಹ ಪ್ರಮಾಣಗಳು ಇತರಾ ಪ್ರಸಂಗದಲ್ಲಿ ಬೇಕಾದಷ್ಟಿವೆಯೆಂದು ಹೇಳಲೇ ಬೇಕಾಗುವುದು. ಸತ್ಯಾರ್ಥಿಗಳು ಇದನ್ನು ಕೇಳಿ ಆಶ್ಚರ್ಯ ಪಡಲೂ ಬಹುದು.

ಸತ್ಯಾರ್ಥಿಗಳ ಕೊನೆಯ ಆಕ್ಷೇಪಣೆಯು ವಿಚಾರಿಗೆ ನಾನು ಭಾವ ಹಿಂಸೆಗೈದುದು ತಪ್ಪೆಂಬುದರ ಕಡೆಗಾಗುವುದು. ಈ ಆಕ್ಷೇಪಣೆಗೆ ಸರಿಸ್ಸಾದ ಸಮಾಧಾನವನ್ನು ಹಿಂದಿನ ಲೇಖದಲ್ಲೇ ಬರೆದಿರುವೆನು. ಚರ್ವಿತ ಚರ್ವಣವನ್ನೇ ಮಾಡಿ ಕಾಗದ ತುಂಬಿಸಲು ಹವಣಿಸುವುದರಿಂದೇನು? ಬೇರೊಬ್ಬರು ಭಾವಹಿಂಸೆಗೈಯಬಹುದಂತೆ ನಾವು ಮಾತ್ರ ಕೈಕಟ್ಟಿ ಬಾಯ್ಮುಚ್ಚಿ ಕುಳಿತಿರಬೇಕಂತೆ! ಪ್ರತಿಯಾಗಿ ಬರೆಯಬಾರದಂತೆ! ನೋಡಿದಿರೋ ಸತ್ಯಾರ್ಥಿಗಳ ನಿಷ್ಪಕ್ಷಪಾತತೆಯನ್ನು! ಈ ತರಹದ ಸಹನಶೀಲತೆಯ ಪರಾಕಾಷ್ಠತೆಯು ಸತ್ಯಾರ್ಥಿಗಳಿಗಿದ್ದರೂ ನನಗಿಲ್ಲವೆಂಬುದನ್ನು ಇನ್ನೊಂದು ದಾರಿ ಸೂಚಿಸಲಿಚ್ಛಿಸುತ್ತೇನೆ ಇತಿ—ಭವದೀಯ

ಜೆ ತಿರುಪಾಲ ಪಾರ್ಶ್ವನಾಥ ಶಾಸ್ತ್ರೀ,
"ವ್ಯಾಖ್ಯಾನ ವಿಚಕ್ಷಣ" ಮೂಡಬಿದ್ರೆ, ದ ಕ.

(ಈ ಪತ್ರವ್ಯವಹಾರವನ್ನು ಇಲ್ಲಿಗೆ ಕೊನೆಗಾಣಿಸಲಾಗಿದೆ—ಸಂ ಸ್ವ)

ಅಯ್ಯಾ ಸ್ವದೇಶಾಭಿಮಾನಿಯೇ!

ಕಳೆದ ಸಲ ನಿಮ್ಮ ದಿವ್ಯದೃಷ್ಟಿಯು ಸಲಹೆಯನ್ನಿತ್ತ ಮೇರೆಗೆ ಮೈದಾನಿನ ಯಾವ ಅಕ್ಕಪಕ್ಕದಲ್ಲೂ ಮೂತ್ರ ವಿಸರ್ಜನೆಗೆ ಬೇಕಾದ ಒಂದು ಪಾಯಖಾನೆಯು ಇರದಿರುವುದು ಮಹಾ ಲೋಪವೇ ಸರಿ. ಮೈದಾನಿನಲ್ಲಿ ವರ್ಷವಿಡೀ ಆಗುವ ಆಟನೋಟಗಳ ಸಮಯದಲ್ಲಿ ಎಷ್ಟೋ ಸಾವಿರಾರು ಜನರಿಗೆ ಮೂತ್ರ ವಿಸರ್ಜನೆಯ ಅನಾನುಕೂಲವು ಸ್ವಾಭಾವಿಕವಾಗಿ ಉಂಟಾಗುವುದೆಂದು ಯಾರಿಗೂ ತಿಳಿಯದ ಸಂಗತಿಯಲ್ಲ. ನಮ್ಮ ಮುನಿಸಿಪಾಲಿಟಿಯವರು ಎಲ್ಲದರೊಡನೆ ಇದೊಂದು ಸಣ್ಣ ಕಾರ್ಯವನ್ನು ಮಾಡಿಬಿಟ್ಟರೆ ತುಂಬಾ ಉಪಕಾರವಾಗುತ್ತಿತ್ತು. ಮಾನ್ಯ ಚಿಯರ್ಮೆನರೇ, ಈ ವಿಚಾರವಾಗಿ ತಾವು ಗಮನಕೊಡಬೇಕಾಗಿ ನನ್ನ ವಿನಂತಿ. ಎಷ್ಟೋ ಜನರು ಕೋಟುಗಳ ಬದಿಗಳಲ್ಲಿಯೂ ಮೈದಾನಿನಲ್ಲಿಯೂ ಮೂತ್ರ ಹೊಯ್ದು ಪೋಲೀಸರ ದಂಡನೆಗೆ ಒಳಗಾಗುವುದು ನಿತ್ಯ ಸಂಗತಿ. ಆದುದರಿಂದ ದಯವಿಟ್ಟು ಆಲೋಚಿಸಿರಿ. ಇತಿ

ಅನುಭವಿತ.

ಸಾರ್ವಜನಿಕರಲ್ಲಿ ವಿಜ್ಞಾಪನೆ.

ಮೊಗವೀರ ವ್ಯವಸ್ಥಾಪಕ ಮಂಡಳಿಯು ನಡೆಸಿಕೊಂಡು ಬರುವ ಮೊಗವೀರ ಧರ್ಮಾರ್ಥ ರಾತ್ರಿಶಾಲೆಯ ಧ್ಯೇಯವು ಜಾತಿಭೇದವಿಲ್ಲದೆ ಎಲ್ಲರಿಗೂ ವಿದ್ಯೆಯನ್ನು ಪ್ರಸಾರಮಾಡಬೇಕೆಂಬುದೆಂದು ವಿದಿತವಾಗಿರುವುದು. ಈ ಶಾಲೆಯ ಸಹಾಯಾರ್ಥವಾಗಿ ಮುಂಬಯಿಯ ಶ್ರೀ ಭಕ್ತಿಲೋಕ ನಾಟಕ ಸಮಾಜದವರು ಇದೇ ಬರುವ ನವಂಬರ ತಾ. ೧೧ಕ್ಕೆ "ಸಂಸಾರ ಸಾಗರ" ಎಂಬ ಸಾಮಾಜಿಕ ನಾಟಕವನ್ನು ಕಲ್ಬಾದೇವಿ ರಸ್ತೆ, ಭಾಂಗ್ವಾಡಿ ಪ್ರಿನ್ಸೆಸ್ ಥಿಯೇಟರಿನಲ್ಲಿ ಅಭಿನಯಿಸಿ, ತನ್ನ ಲಾಭದ ಹಣವನ್ನು ಕೊಡಲಿಕ್ಕಿರುವರು. ಆದುದರಿಂದ ವಿದ್ಯಾಭಿಮಾನಿಗಳೂ, ದಾನಶೀಲರೂ ಉದಾರಮನಸ್ಸಿನಿಂದ ಟಿಕೇಟುಗಳನ್ನು ಪಡೆದು, ಪ್ರೋತ್ಸಾಹಿಸಬೇಕಾಗಿ ಕೃತಜ್ಞತಾಪೂರ್ವಕ ವಿನಂತಿಸುತ್ತೇವಲ್ಲದೆ ಅವರಿಗೆ ವಿದ್ಯಾದಾನ ಮಾಡಿದ ಪುಣ್ಯವು ಲಭಿಸಲೆಂದು ಹಾರೈಸುತ್ತೇವೆ.

ಕಾರ್ಯದರ್ಶಿಗಳು.

VIIIನೇ ದರ್ಜೆ ಸರ್ಟಿಫಿಕೇಟು ಪಡೆದ ಲೋವರ್ ಟ್ರೈನ್ಡ್ ಉಪಾಧ್ಯಾಯರ ಅವಗಾಹನೆ ಬಗ್ಗೆ.

VIIIನೇ ದರ್ಜೆ ಸರ್ಟಿಫಿಕೇಟು ಪಡೆದು ಹಾಯರ್ ಟ್ರೈನ್ಡ್ ಸರ್ಟಿಫಿಕೇಟುಗಳಿಗೆ ಮಾರ್ಪಡಿಸದೆ ಉಳಿದಿರುವ ಸುಮಾರು ೫೦ ಮಂದಿ ಲೋವರ್ ಟ್ರೈನ್ಡ್ ಉಪಾಧ್ಯಾಯರ ಪರವಾಗಿ ಮಾನ್ಯ ಡೈರೆಕ್ಟರ್ ದೊರೆಗಳವರಿಗೂ, ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಿಗೂ, ತಾ. ೧೬—೧೦—೩೩ರಲ್ಲು ನಾನು ಮನವಿಗಳನ್ನು ಬರೆಕೊಂಡ ವಿಚಾರವು ಗತವಾರದ ಪತ್ರಿಕೆಗಳ ಮುಖಾಂತರ ವಿದಿತವಾಗಿರಬಹುದಷ್ಟೆ! ಆ ವ್ಯಕ್ತಿ ಮಾನ್ಯ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಿಂದ ನನಗೆ ಉತ್ತರವಾಗಿ ಬಂದ ಆರ್ ಸಿ. ನಂಬ್ರ ೫೦೫/೩೦—೧೦—೩೩ರ ಹುಕುಮಿನ ಸಾರಾಂಶವನ್ನು ಈ ಕೆಳಗೆ ಪ್ರಕಟಿಸುತ್ತೇನೆ

"ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘದ ಪ್ರೆಸಿಡೆಂಟರಿಂದ ಬಂದ ತಾ ೧೬—೧೦—೩೩ರ ಕಾಗದವನ್ನೂ, ಮದ್ರಾಸು ವಿದ್ಯಾ ಇಲಾಖಾ ಡೈರೆಕ್ಟರಿಂದ ಬಂದ ಡಿ. ನಂಬ್ರ ೨೩೩೦/೨೪—೧೦—೩೩ರ ಎಂಡೋರ್ಸ್‌ಮೆಂಟನ್ನೂ ಓದಲಾಯಿತು - ಜಿ. ಓ. ನಂಬ್ರ ೧೫೫೧/೪—೯—೩೩ರ ಹುಕುಮಿನ ಮೇರೆಗೆ, ಹಾಯರ್ ಗ್ರೇಡ ಟ್ರೈನಿಂಗ್ ಪರೀಕ್ಷೆಯಲ್ಲಿ ಪಾಸಾಗದ ವಿನಹಾ ಲೋವರ್ ಗ್ರೇಡ ಟ್ರೈನ್ಡ್ ಉಪಾಧ್ಯಾಯರ ಸರ್ಟಿಫಿಕೇಟುಗಳನ್ನು ತಾರೀಕು ೪—೯—೩೩ರ ನಂತರ ಹಾಯರ್ ಗ್ರೇಡಿಗೆ ಮಾರ್ಪಡಿಸಲಿಕ್ಕಿಲ್ಲವೆಂದು ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘದ ಪ್ರೆಸಿಡೆಂಟರಿಗೆ ತಿಳಿಸಲಾಗುತ್ತದೆ"

ಪರಂತು ತಾ ೪—೯—೩೩ ಹಿಂದೆ VIIIನೇ ದರ್ಜೆ ಸರ್ಟಿಫಿಕೇಟನ್ನು ಹೊಂದಿ, ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರರ ಅನಾನುಕೂಲತೆಗಳಿಂದಲೇ ಹಾಯರ್ ಟ್ರೈನ್ಡ್ ಸರ್ಟಿಫಿಕೇಟುಗಳಾಗಿ ಮಾರ್ಪಡದೆ ಉಳಿದಿರುವ ಅರಿವಾತಿ ೫೦ ಲೋವರ್ ಟ್ರೈನ್ಡ್ ಉಪಾಧ್ಯಾಯರಿಗೆ ಮಾತ್ರ ಸದರಿ ಗವರ್ನಮೆಂಟ್ ಹುಕುಮನ್ನು ಲಗುವಾಗದಂತೆ ಮಾಡಬೇಕಾಗಿ ಮಾನ್ಯ ಡೈರೆಕ್ಟರರಿಗೂ ತಾ. ೧೬—೧೦—೩೩ರಲ್ಲಿ ನ ಮನವಿಯನ್ನು ಬರೆಕೊಂಡದ್ದಲ್ಲದೆ ಮಾನ್ಯ ಡೈರೆಕ್ಟರರು ಈ ತಿಂಗಳಲ್ಲಿ ಮಂಗಳೂರಿಗೆ ಚಿತ್ತೈಸಿದಾಗ್ಯೂ ಈ ಕುರಿತು ಅಲಾಹಿದಾ ಬಿನ್ನವತ್ತಳೆಯನ್ನು ಅರ್ಪಿಸಬೇಕಾಗಿದೆ. ಆದ್ದರಿಂದ ಸಮ್ಮಂಧಪಟ್ಟ ಲೋವರ್ ಟ್ರೈನ್ಡ್ ಉಪಾಧ್ಯಾಯರು ತಂತಮ್ಮ ಮನವಿಗಳನ್ನು ಡೈರೆಕ್ಟರರಿಗೆ ನೇರಾ ಕಳುಹಿಸುವುದಲ್ಲದೆ, ಆ ದಿನ ಮಂಗಳೂರಲ್ಲಿ ನನ್ನೊಡನೆ ಸಹಕರಿಸುವ ಬಗ್ಗೆ ಬಾಲಸಹಾಯ ಮಂಡಲದ ಆಫೀಸಿನಲ್ಲಿ ಹಾಜರಾಗಬೇಕಾಗಿ ವಿನಂತಿ.

ಕುರುಕಾಲು ಗಣಪಯ್ಯ ಶೆಟ್ಟಿ,

ಬೇಕಾಗಿದೆ!

ಇಂಗ್ಲಿಷ್ ಮತ್ತು ಕನ್ನಡ ಡಿಪಾರ್ಟ್‌ಮೆಂಟಿಗೆ ಕಂಪೋಜಿಟರರು ಬೇಕಾಗಿದ್ದಾರೆ. ಯೋಗ್ಯತೆಗೆ ತಕ್ಕ ಸಂಬಳವು ದೊರೆಯುವುದು.

"ಈಗಲೇ ಅರ್ಜಿಗಳನ್ನು ಬರೆದುಕೊಳ್ಳಿರಿ —

ಮೆನೇಜರ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

Wanted

A young and energitic clerk knowing Kanarese, who can travel to the Ghauts and other places and keep business accounts. Pay according to qualifications with travelling allowance exclusively. Start with four months' service. After approval confirmation of post.

Apply to –
"Z"
C/o. Swadeshabhimani,
Mangalore

1934

Sharda Diaries

Ready! Ready!

SMALL SIZE—BIG SIZE

ಶಾರದಾ ಡೈರಿಗಳು

ಸಿದ್ಧವಾಗಿವೆ!

ಚಿಕ್ಕ ಸೈಜು— —ದೊಡ್ಡ ಸೈಜು.

Sharada Press, Mangalore.

INSIST ON USING ONLY

KOHINUR INK

For All Your Pens.

The A 1 ink that will Suit your taste.

Ask your Stationer to supply you a bottle and you will never accept ANY other Substitute.

Wanted agents in all principal Towns.

Apply to.—

The Kohinur Industrials, (India)
Kallianpur P. O. (S India)
or
The General Stores
Hospital Road, Udipi

Notice.

Take notice that the order of the High Court and the minute in O P. No 172 of 1933 reducing the share capital of the Udipi Bank Ltd. have been registered this 1st day of November 1933 by the Registrar of Joint Stock Companies

Minute

The Capital of the Udipi Bank Limited hereafter stands as

(a) Reduced authorised and issued Capital Rs 1,89,200/ divided into 3784 shares of Rs 50/ each

(b) Reduced Subscribed Capital Rs. 65,950/- divided into 1319 shares of Rs 50/- each, and

(c) Reduced paid up Capital Rs 48,550/ instead of (a) authorised and issued capital of Rs 2,00,000/- divided into 4000 shares of Rs. 50/ each (b) Subscribed capital of Rs 76,750/- divided into 1535 shares of Rs 50/- each, and (c) The paid up capital of Rs 56,820/-

At the time of the registration of these minutes on 1035 shares Rs 40/ are paid and deemed to have been paid up on each share; on 150 shares Rs 30/ are paid and deemed to have been paid up on each share, and on 134 shares Rs 20/- are paid and deemed to have been paid up on each share.

(*Sd*) **L. S. Nayak,**
Manager, Udipi Bank Ltd Udipi.

ಒಂದು ಸುಂದರ ಕೂಸು

ಸಾನಿಟರಿ ಇನ್ಸ್‌ಪೆಕ್ಟರರು

"ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದೆನು. ಅದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,
ಸಾನಿಟರಿ ಇನ್ಸ್‌ಪೆಕ್ಟರ್,
ಮಾಲೂರು, ಮದುರಾ

ನಿಮ್ಮ ಕೆಮಿಸ್ಟರರ ಹತ್ತಿರ ಕೇಳಿರಿ.

ಅಥವಾ

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬೈಗಳು.

ಬೆಂಗಳೂರು ಏಜಂಟ್—ದಿ ಪೊಪಟ್ಲಾಲ ಕಂಪೆನಿ, ೫೧ ಅರ್ಕಾಟ ಶ್ರೀನಿವಾಸಾಚಾರ ಸ್ಟ್ರೀಟ್.
ಮದ್ರಾಸು ಸಂಸ್ಥಾನದ ಏಜಂಟರು—ದಾಮೋದರ ಮತ್ತು ಕಂಪೆನಿ, 78 ಬ್ರಾಡ್ವೇ ರೋಡ್,
ಮಂಗಳೂರು ,, ದಿ ಉಲನ್ ಮಾರ್ಟ್ ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ನಮ್ಮ ಹಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರಾದ ಡಾ. ಪಿ. ಬಿ. ರಾವ್ಸ್, ಎಂ. ಆರ್., ಸಿ. ಎಸ್. ಅವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರುವ ಹಸಿವು ಕಡಿಮೆಯಾಗಿರುವುದು, ಶೂಲವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವರಿಗೆ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೦೮, ಮದ್ರಾಸು.

ಸೋಲ್ ಏಜಂಟರು:—ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೧೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P No 104

ಪ್ರೇಮಾನಂದರ ಪುಣ್ಯಸ್ಮರಣ

... ಶ್ರೀಯು ಶಿರಷ್ಟುಕರ ಎಂ. ಎ. ಎಲ್. ಎಲ್. ಬಿ. ಧಾರವಾಡ.

ಪ್ರೇಮಾನಂದರನ್ನು ನಾನು ಮೊದಲು ನೋಡಿದ್ದು ಕಾರವಾರ ...ಜೈಲಿನಲ್ಲಿ. ಅಲ್ಲಿ ಅವರು ಹಿಂದೀ ಭಾಷೆಯ ಕ್ಲಾಸಿನ ...ಶಿಕ್ಷಕರಾಗಿದ್ದರು. ಅವರು ಮಂಗಳೂರ ಜಿಲ್ಲೆಯಲ್ಲಿಯ ...ಸ್ಥಾನಕ್ಕೆ ಸೇರಿದವರು. ಕಾಲೇಜಿನ ಶಿಕ್ಷಣವನ್ನೂ ಕೆಲ ...ಕಾಲ ಪಡೆದಿದ್ದರು. ಮುಂಬಯಿಯಲ್ಲಿಯೇ ತಮ್ಮ ಶಕ್ತಿ...ಯಿಂದ ರಾಷ್ಟ್ರಸೇವೆಯನ್ನು ಮಾಡುವುದರಲ್ಲಿ ತೊಡಗಿದರು. ...ಚಳವಳಿಯ ಫೆಬ್ರುವರಿ ತಿಂಗಳಲ್ಲಿ ಅವರು ಸಿದ್ದಾಪುರಕ್ಕೆ ಹೋಗಿ ಅಲ್ಲಿ ೧ ವರ್ಷದ ಶಿಕ್ಷೆಯಾಗಿ ಕಾರವಾರ ಜೈಲಿಗೆ ಕಳುಹಿಸಲ್ಪಟ್ಟರು. ಮುಂದೆ ೩ ತಿಂಗಳಲ್ಲಿ ಇತರರೊಂದಿಗೆ ವಿಸಾಪುರಕ್ಕೆ ಕಳುಹಿಸಲ್ಪಟ್ಟರು.

ಸಾಮಾನ್ಯವಾಗಿ ಅವರ ದೇಹ ಪ್ರಕೃತಿಯು ಒಳಿತಾ...ಗಿತ್ತು. ಅವರ ನಿತ್ಯಕ್ರಮವೂ ನಿಯಮಿತವಾಗಿತ್ತು. ಪ್ರೇಮಾನಂದರಿಗೂ ಜುಲೈ ಆಗೋಸ್ಟದಲ್ಲಿ ೧-೨ ಸಲ ಅನಾರೋಗ್ಯ...ದಿಂದಾಗಿ ಅವರು ಶಕ್ತಿಹೀನರಾದರು. ನಿಃಶಕ್ತಿಯ ಮೂಲಕ ಅವ...ರಿಗೆ ನಡೆಯುವ ತ್ರಾಣ ಕೂಡ ಉಳಿಯಲಿಲ್ಲ. ಇದೇ ಸುಮಾರಕ್ಕೆ ...ವಿಷಮ ಜ್ವರದ ಪಿಡುಗು ವಿಸಾಪುರದಲ್ಲಿ ಬಂದುದರಿಂದ ಅಲ್ಲಿಯ ...ರ್ವರೂ ಹಾಹಾಕಾರ ಹೊಡೆಯಹತ್ತಿದ್ದರು. ಜೈಲಿನೊಳಗಿನ ...ರೋಗಿಗಳ ಶುಶ್ರೂಷೆ ಮುಂತಾದುವುಗಳ ಸುದ್ದಿಯು ಹೊರಗೆ ...ಹೋಗಬಾರದೆಂದು ಉದ್ದೇಶದಿಂದ ಬಹಳೇ ಶಕ್ತಿಯ ನಿಯಮ...ಗಳನ್ನು ಮಾಡಿದರು. ಈ ಸುಮಾರಕ್ಕೆ ಮುಂಬಯಿಯ ...ರಾನೊಳಕರರೆಂಬವರೂ ವಿಷಮದಿಂದಲೇ ತೀರಿದ್ದರು. ಸೆಪ್ಟೆಂಬರ...ದ ಮೊದಲನೆಯ ವಾರದಲ್ಲಿ ಪ್ರೇಮಾನಂದರಿಗ ಮಾತ್ರ ...ಅಧಿಕ ಜ್ವರ ಬಂದಿತು. ಇಂತಹ ಪ್ರಸಂಗದಲ್ಲಿ ಯಾರು ...ಯಾರ ಮೇಲೆ ಜೋಕೆ ಹಾಕಬಲ್ಲರು? ಡಾಕ್ಟರರು ಪ್ರೇಮಾನಂದರನ್ನು ಲಕ್ಷ್ಯಕೊಟ್ಟು ನೋಡಿದ ದಿನ ಪ್ರೇಮಾನಂದರು ಪರಲೋಕದ ದಾರಿಯನ್ನು ಹಿಡಿದಿದ್ದರು. ಅವರ ...ಮೈಯೆಲ್ಲಾ ಕಂಪಿಸ ಹತ್ತಿತ್ತು. ಅದೇ ಸ್ಥಿತಿಯಲ್ಲಿ ಅವರನ್ನು ಅಹಮದನಗರ ಆಸ್ಪತ್ರೆಗೆ ಕಳುಹಿಸಿದರು. ಅಧಿಕಾರಿಗಳು ಶಕ್ಯವಿದ್ದುದೆಲ್ಲವನ್ನೂ ಮಾಡಿದರು. ಕೊನೆಗೆ ದೈವವೇ ಬಲಿಷ್ಠವಾಗಿ ತಾ. ೨೫ ಸಪ್ಟಂಬರ ದಿನ ಪ್ರೇಮಾನಂದರನ್ನು ನಮ್ಮೊಳಗಿಂದ ಕಸಿದೊಯ್ದು ಬಿಟ್ಟಿತು. ಕರ್ನಾಟಕ ದೇವಿಯ ಮುಕುಟದೊಳಗಿನ ತೇಜಸ್ವಿ ರತ್ನವೊಂದು ಕಳಚಿ ಬಿದ್ದುಹೋಯಿತು.

ಪ್ರೇಮಾನಂದರ ಹೆಸರು ವರ್ತಮಾನ ಪತ್ರದಲ್ಲಿ ದೊಡ್ಡ ಅಕ್ಷರಗಳಲ್ಲಿ ಹೊಳೆದಿಲ್ಲ. ಆದರೆ ಅವರ ನೆನಪು ಅವರನ್ನು ನೋಡಿದವರ ಅಂತಃಕರಣದಲ್ಲಿ ಯಾವಾಗಲೂ ಸ್ಥಿರವಾಗಿರುವದೆಂಬುದರಲ್ಲಿ ಸಂದೇಹವಿಲ್ಲ. ಅವರು ಕರ್ತವ್ಯ ಪರಾಯಣರಿದ್ದರು. ಕೀರ್ತಿಲೋಲುಪರಿದ್ದಿಲ್ಲ. ಅವರಿಗೆ ತಂದೆ ತಾಯಿ ಹೆಂಡತಿ ಮಕ್ಕಳು ಮುಂತಾದ ಬಳಗವಿದ್ದಿಲ್ಲವಾದರೂ ಅವರನ್ನು ಪ್ರೀತಿಸುವವರ ಸ್ನೇಹಿಗಳ ಬಳಗವು ದೊಡ್ಡದಾಗಿದ್ದಿತು. ಎರಡನೆಯವರ ಮನಸ್ಸು ನೋಯಿಸುವಂತಹ ಮಾತು ಅವರ ಬಾಯಿಂದ ಎಂದೂ ಹೊರಡಲಿಲ್ಲ. ಅಹಂಭಾವವು ಅವರ ಮನಸ್ಸನ್ನು ಮುಟ್ಟಿರಲಿಲ್ಲ. ಸ್ವಾತಂತ್ರ್ಯದ ಪವಿತ್ರ ತೇಜವು ಅವರ ಮೋರೆಯ ಮೇಲೆ ಕಂಗೊಳಿಸುತ್ತಿದ್ದಿತು. ಪ್ರೇಮಾನಂದರಂತಹ ನಿಷ್ಕಪಟ ಅಂತಃಕರಣದವರೂ ಸ್ವಾರ್ಥತ್ಯಾಗಿಗಳೂ ಕರ್ತವ್ಯನಿಷ್ಠರೂ ನಿರಹಂಕಾರಿಗಳೂ ಎಲ್ಲಿಯಾದರೂ ವಿರಳವೇ ಸರಿ. ಜನಾಂಗಕ್ಕಾಗಿ ತಮ್ಮ ದೇಹವನ್ನು ಸವೆಸಿ ಪ್ರೇಮಾನಂದರ ಪುಣ್ಯಸ್ಮೃತಿಯನ್ನು ನಾವು ಯಾವ ರೀತಿಯಿಂದ ಕಾಯಬಲ್ಲೆವು? ಅವರ ದೇಹವಂತೂ ಅವರ ಹೆಸರೂ ಗೊತ್ತಿಲ್ಲದ ಪ್ರದೇಶದಲ್ಲಿ ಮಣ್ಣುಪಾಲಾಗಿ ಹೋಯಿತು. ಅವರ ನೆನಪನ್ನು ಮಾತ್ರ ದೊಡ್ಡ ಸಂಪತ್ತಿನಂತೆ ಕಾಯ್ದುಕೊಳ್ಳುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಜನಾಂಗದ ಜೀವನವು ಪ್ರೇಮಾನಂದರಂತಹ ತರುಣರ ಮೇಲೆಯೇ ಪೂರ್ಣವಾಗಿ ಅವಲಂಬಿಸಿದೆ. ಪ್ರೇಮಾನಂದರಲ್ಲಿ ವಾಸಿಸಿದ ಸದ್ಗುಣಗಳ ಲೇಶವಾದರೂ ನಮ್ಮಲ್ಲಿ ತಂದುಕೊಂಡು ನಾವೂ ಅವರಂತೆಯೇ ನಮ್ಮ ನಮ್ಮ ಕಾರ್ಯಕ್ಷೇತ್ರಗಳಲ್ಲಿ ಕರ್ತವ್ಯವನ್ನು ಮಾಡುವದೇ ಪ್ರೇಮಾನಂದರ ಆತ್ಮಕ್ಕೆ ಶಾಂತಿಯನ್ನು ಕೊಡುವ ಉತ್ತಮವಾದ ಮಾರ್ಗವಾಗಿದೆ.

ಕೆ. ಪಿ. ಡಿ

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಅಗ್ಗದ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಾಂಡವಲದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ — ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸಾತಾರ ಜಿಲ್ಲಾ) ಇವರಿಗೆ ಬರೆಯಿರಿ

ಸ್ಟೊಕಿಸ್ಟ್ಸ — ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಕ್ಟ್ ಡಿಪೊಜಿಟರಿ ಕೊ., ಮಂಗಳೂರು

ಜ್ವರವು ಹೋಯಿತು...

ನಿಮ್ಮ ಕಳೆದು ಹೋದ ಶಕ್ತಿಯನ್ನು ಪುನಃ ಸಂಪಾದಿಸಿರಿ

ಹೊರ್ಲಿಕ್ಸ್ ತೆಗೆದುಕೊಳ್ಳುವುದರಿಂದ ಆರೋಗ್ಯವು ಶೀಘ್ರವಾಗಿ ಬರುವುದು



ನೀವು ಜ್ವರದಲ್ಲಿರುವಾಗ ನಿಮ್ಮ ನರಗಳ ಶಕ್ತಿಯು ವೆಚ್ಚವಾಗುತ್ತದೆ. ನೀವು ಈಗ ಗುಣ ಹೊಂದುತ್ತಿರುವಾಗ, ಕಳೆದು ಹೋದ ಆ ಶಕ್ತಿಯನ್ನು ಪುನಃ ಸಂಪಾದಿಸಿ ಹೊಸ ಚೈತನ್ಯವು ಬರುವಂತೆ ಮಾಡಬೇಕು.

ಆದರೆ ಅಶಕ್ತತೆಯಿಂದಿರುವ ಜೀರ್ಣ ಶಕ್ತಿಗೆ ಹದಮೀರಿ ಕೆಲಸ ಕೊಡಬಾರದು. ತೆಗೆದುಕೊಳ್ಳುವ ಆಹಾರವು ಸುಲಭವಾಗಿ ಜೀರ್ಣ ಹೊಂದುವಂತಿರಬೇಕು. ಆದಕ್ಕಾಗಿಯೇ ಡಾಕ್ಟರರು ಹೊರ್ಲಿಕ್ಸ್ ಮೋಲ್ಟೆಡ್ ಹಾಲನ್ನು ಶಿಫಾರಸು ಮಾಡುವರು. ಹೊರ್ಲಿಕ್ಸನ್ನು ದನದ ಕೆನೆ ಹಾಲಿನಿಂದಲೂ, ಬೆಳೆದ ಬಾರ್ಲಿಯ ಸಾರದಿಂದಲೂ ತಯಾರಿಸಿದ್ದಾಗಿರುತ್ತದೆ. ಅದು ಸುಲಭ ಜೀರ್ಣ ಶಕ್ತಿಯನ್ನು ದೇಹಕ್ಕೆ ಕೊಡುತ್ತದೆ. ಸುಲಭವಾಗಿ ಜೀರ್ಣ ಹೊಂದುತ್ತದೆ.

ಹೊರ್ಲಿಕ್ಸನ್ನು ಬಿಸಿ ಅಥವಾ ತಣ್ಣಗಾಗಿ ತೆಗೆದುಕೊಳ್ಳಬಹುದು. ಕೆಳಗಿನ ಕೂಪನನ್ನು ರವಾನಿಸಿದರೆ, ಸವಿವರ ಕರಪತ್ರವೊಂದು ಧರ್ಮಾರ್ಥವಾಗಿ ರವಾನಿಸಲ್ಪಡುತ್ತದೆ. ಅಶಕ್ತರಿಗೆ ಬೇಕಾದ ಪಾನೀಯವನ್ನು ಹೇಗೆ ತಯಾರಿಸಬಹುದೆಂದು ಅದು ಹೇಳುತ್ತದೆ.

‘ಹೊರ್ಲಿಕ್ಸ್’

ಮೂಲಭೂತ ಮೋಲ್ಟೆಡ್ ಹಾಲು,

ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ.

ಕೆಲವು ಸೆಕೆಂಡುಗಳಲ್ಲಿ ರಕ್ತ ವೃದ್ಧಿಸುವ ರುಚಿಕರವಾದ ಪಾನೀಯವನ್ನು ತಯಾರಿಸಬೇಕಾದರೆ ಹೊರ್ಲಿಕ್ಸ್ ಮಿಕ್ಸರನ್ನು ಉಪಯೋಗಿಸಿರಿ. ಎಲ್ಲಾ ಸ್ಟೋರುಗಳಲ್ಲಿ ಯಾ ಅಥವಾ ಟಪೆ 2229 ಕಲ್ಕತ್ತಕ್ಕೆ 14 ಅಣೆ ಅಂಚೆ ಚೀಟು ರವಾನಿಸಿದರೆ ಸಿಗುತ್ತದೆ.



ಟಪೆ 2229 ಕಲ್ಕತ್ತ

ಹೊರ್ಲಿಕ್ಸ್ ಇನ್ ಕನ್ವಲಸೆನ್ಸ್ ಎಂಬುದರ ಕುರಿತು ಧರ್ಮಾರ್ಥ ಸವಿವರ ಪತ್ರವನ್ನು ನನಗೆ ಕಳುಹಿಸಿರಿ

ಹೆಸರು . . . .

ವಿಳಾಸ . . . . No. S. D. 107 . . .

ಹೊರ್ಲಿಕ್ಸ್ ಮಿಕ್ಸರ್ ಬೇಕಾಗಿದ್ದರೆ 14 ಅಣೆ ಅಂಚೆ ಚೀಟು ರವಾನಿಸಿರಿ.

[illegible] ಗ್ರಾಮಾಭಿವೃದ್ಧಿ

[illegible] ನಮ್ಮ [illegible] ವೃದ್ಧರಲ್ಲೊಬ್ಬರು [illegible] ವರ್ಷಗಳ ಹಿಂದೆ [illegible] ನೋಡುತ್ತ, ಇಂದಿಗೂ ಎಂದಿಗೂ [illegible] ಹಿಂದೆ ಒಂದು [illegible] ಅಭಿವೃದ್ಧಿ [illegible] ಗ್ರಾಮಗಳು [illegible] ಒಂದು ಸ್ವಪ್ನವಿದೆ" ಎಂಬುದೇ ನಮ್ಮ ಹಿಂದಿನ ವೃದ್ಧರಲ್ಲಿ ಅವರ ಕಲ್ಪನೆಯು. ಹಳ್ಳಿಗಳನ್ನು ಕಂಡೇ ಆಗುತ್ತಿತ್ತು. ಹಾಗೆಯೇ ಇಂದಿನ ಹಿಂದೀಯರ ಹೀನ ಸ್ಥಿತಿಯಲ್ಲಿ—ಅವರ ನಿಧಾನ ಯಾ ಶೀಘ್ರ ಚಳುವಳಿಯನ್ನು ಹುಡುಕಲು, ಯಾವುದೇ ಒಂದು ವಿಶೇಷ ಗ್ರಂಥದ ಅಧ್ಯಯನವಾಗಲೀ, ದೊಡ್ಡ ರಾಜನೀತಿಜ್ಞನ ಸಹವಾಸವಾಗಲೀ, ವಿಶ್ವವಿದ್ಯಾಲಯದಲ್ಲಿ ಪ್ರವೇಶವಾಗಲೀ ಅಗತ್ಯವಿಲ್ಲ. ನೆರೆಯೂರ ಒಂದೇ ಒಂದು ಹಳ್ಳಿಯನ್ನು—ಪೂರ್ಣ ಮನೋಭಾವದಿಂದ ಅಧ್ಯಯನ ಮಾಡಿದರೆ ಹಿಂದೀ ರಾಷ್ಟ್ರದ ಅಧ್ಯಯನದ ಮೊದಲನೆಯ ಅಧ್ಯಾಯವನ್ನು ಓದಿ ಕಲಿತಂತೆಯೇ ಸರಿ. ಈ ತತ್ವವನ್ನು ಐತಿಹಾಸಿಕವಾಗಿ ಹಲವರು ಹೇಳುತ್ತಾರೆ. ಮಹಾತ್ಮಾಜೀಯವರಂತಹ ಮಹಾನ್ [illegible]ರಂತೆ ಈ ತತ್ವವನ್ನು ಆಚರಿಸಲು ಪ್ರಯತ್ನಿಸುವವರು ಕೆಲವರೇ ಇರಬಹುದು.

'ಉಗ್ರ—ಮಂದ'ವೆಂಬ ವಿರುದ್ಧ ಕೋಟಿಗಳನ್ನು ಬಿಟ್ಟು ಒಮ್ಮೆ ನಾವು ಮಧ್ಯಬಿಂದುವಿಗೆ ಬಂದೆವೆಂದರೆ, ಇದ್ದಲ್ಲಿಯೇ ಸುಧಾರಿಸಿಕೊಂಡು ಮುಂದಿನ ಏಳಿಗೆಯನ್ನು ಸಾಧಿಸುವವರನ್ನು ನಮ್ಮ ಇಡೀ ದೇಶದಲ್ಲಿ ಬೆರಳೆಣಿಸಬಹುದು, ಜಿಲ್ಲೆಯಲ್ಲಿ ಕೆಲವರಿರಬಹುದು. ಆದರೆ ನಮ್ಮ ತಾಲೂಕಿನಲ್ಲಿ ಇರುವ ಕೆಲವರಲ್ಲಿ ಶ್ರೀಯುತ ಮೊಳಹಳ್ಳಿ ಶಿವರಾಯರು ನಮಗೆಲ್ಲ ಹೆಚ್ಚಿನ ಪರಿಚಿತರೆಂಬುದನ್ನು ಎಲ್ಲರೂ ತಿಳಿದಿರುತ್ತಾರೆ.

ನಮ್ಮ ಪುತ್ತೂರು ತಾಲೂಕಿನ ವಿಸ್ತೀರ್ಣ ಹೆಚ್ಚು. ಕಾಡುಗಳು ಗುಡ್ಡಗಳೂ ಬಹಳ. ಮಲೇರಿಯಾ ಮೊದಲಾದ ಬೇನೆಗಳೂ ವಿಶೇಷ. ಊರಲ್ಲಿಲ್ಲದ ರೋಗಗಳು ಪೈರುಗಳಿಗೆ ಬಂದು ತಗಲುವುದೂ ಇಲ್ಲಿಯ ಪ್ರಾಕೃತಿಕವಲ್ಲದಿದ್ದರೂ ಪರಿಸ್ಥಿತಿಜನ್ಯವಾದ ರೂಢಿ. ಹೀಗಿರುತ್ತ ಯಾವ ವಿಧದಲ್ಲೂ ಕೆಳಗಿನ ತರಗತಿಯದಾದ ಈ ತಾಲೂಕಿನಲ್ಲಿ ವಿದ್ಯಾವಂತರಿದ್ದರೂ ಪ್ರವೃತ್ತಿಯ ಅರಿವಿಲ್ಲ. ಶ್ರೀಮಂತರಿದ್ದರೂ ಬೇನೆಯನ್ನು ಚಿಕಿತ್ಸಿಸುವ ಉತ್ಸಾಹವಿಲ್ಲ. ಹೀಗೆಲ್ಲ ನಿಶ್ಚಿತ ಧೋರಣವಿಲ್ಲದೆ ಇರುವಾಗ ತಪ್ಪಿಟ್ಟಾಗಿ ಇದ್ದುದನ್ನೂ ಕಳಕೊಳ್ಳುವ ಅಧೀರತೆಯೂ ಒಂದು ದೋಷವಿದ್ದರೆ ಹೆಚ್ಚೇನು?

ಅಂತಹ ಪರಿಸ್ಥಿತಿಯಲ್ಲಿ ಸ್ವರಾಜ್ಯ ಸ್ಥಾಪನೆಯು ದೂರ ಉಳಿಯಿತು. ಈಗಿನ "ಸ್ಥಿತಿಸ್ಥಾಪಕತೆ"ಯ ಪ್ರಶ್ನೆಯೇ ಬಿಗುವಾಗಿರುವ ಈ ಪ್ರಾಂತ್ಯದಲ್ಲಿ ಸಾಧಾರಣ ೬—೮ ವರ್ಷಗಳಿಂದೀಚೆಗಿನ ಇತಿಹಾಸವನ್ನು ನೋಡಿದರೆ, ಪುತ್ತೂರು ತಾಲೂಕಿನ ಹಳ್ಳಿಗಳು—ಒಂದು ಮಾದರಿಯ ಹೊಸ ಜೀವನವನ್ನು ಹೊಂದಿವೆ. ಏಳಿಗೆಯ ಹಾದಿಯಲ್ಲಿ ಬೆಳಕನ್ನು ನೋಡಿದ್ದಾವೆ. ತಮ್ಮ ಸುಧಾರಣೆಗಳ ಪೂರ್ತಿ ತಮ್ಮ ಕೈಗೇ ಬರಬೇಕೆಂಬ ಮಹತ್ವಾಕಾಂಕ್ಷೆಯು ಮೂಡಿದೆ. ಹೊರಗಿನವರ ಸಹಾನುಭೂತಿಯು ಸುಖ ಕಾಲದ ಉಪಚಾರ ಮಾತ್ರವೆಂಬ ಅರಿವೂ ಮೆಲ್ಲ ಮೆಲ್ಲನೆ ಆಗುತ್ತ ನಡೆದಿದೆಯೆಂಬುದನ್ನು ಕಾಣಬಹುದು. ಇದರ ಕಾರಣವೇನು? ಈ ಪರಿವರ್ತನದ ಹಿಂದೆ ಯಾವ ವ್ಯಕ್ತಿಯ ಮೆದುಳು ದುಡಿಯುತ್ತಿತ್ತು? ಎಂಬುದನ್ನು ಅನುಮಾನಿಸುವುದೂ ಈಗಿನ ಸ್ವಭಾವ ಯುಗದಲ್ಲಿ ಅಪಾಯರಹಿತವಾದ್ದಲ್ಲವೆಂದು ತಿಳಿದಿದ್ದರೂ— ಸತ್ಯ ಕಥನದ ಉತ್ಕಟ ಅಭಿಲಾಷೆಯಿಂದ ಶ್ರೀ ಎಂ. ಶಿವರಾಯರದೇ ಆ ಮೆದುಳು" ಎಂದು ಅನುಮಾನಿಸುತ್ತೇನೆಂಬುದನ್ನು ಹೇಳುತ್ತೇನೆ.

ನಾನೀಗ ಈ ಬರಹದಲ್ಲಿ ಮುಖ್ಯತಃ ಪ್ರತಿಪಾದಿಸಲಿರುವ ವಿಷಯವು ಶ್ರೀ ಶಿವರಾಯರ ಕಾರ್ಯಪದ್ಧತಿಯ ನಿಕಟಸಮುದಾದುದರಿಂದ ಅವರ ಹೆಸರನ್ನು ಉಲ್ಲೇಖಿಸದಿರಲು ಸಾಧ್ಯವಿಲ್ಲದುದಾಯಿತು. ಇದನ್ನು ಅವರು ಯಾ ವಾಚಕರು 'ಸ್ತುತಿ' ಎಂದು ತಿಳಿಯದೆ 'ಸತ್ಯ ಕಥನ'ವೆಂದಿಷ್ಟೇ ತಿಳಿದು ನನ್ನನ್ನು ಕ್ಷಮಿಸಲೆಂದು ಪ್ರಾರ್ಥಿಸುತ್ತೇನೆ. ಕಾರಣ, ಶ್ರೀ ಶಿವರಾಯರು ತಮ್ಮ 'ಸ್ತುತಿ'ಯನ್ನು ದೊಡ್ಡ ಆಪತ್ತೆಂದೇ ಭಾವಿಸುತ್ತಾರೆಂದು ನಾನು ಕೇಳಿದ್ದೇನೆ. ಆದುದರಿಂದ ಮೇಲಿನ ವಾಕ್ಯವನ್ನಿಲ್ಲಿ ಬರೆಯಬೇಕಾಯಿತು.

ಅಷ್ಟೊಂದು ಹಿಂದಿನ ಸಾಲಿನಲ್ಲಿ ನಿಂತವರಾದರೂ ಈ ಹಳ್ಳಿಗರಲ್ಲಿ ಪರಿಸ್ಥಿತಿಯು ಆವೇಶವನ್ನುಂಟುಮಾಡಿದೆ. ಸಾಮಂತ—ಸಂಪೂರ್ಣ ಸ್ವರಾಜ್ಯಗಳೆಂಬ ಶಬ್ದಗಳು ಅವರಲ್ಲಿ ಮೊದಲು ಭಯವನ್ನೂ ನಂತರ ಕೆಲವಟ್ಟಿನ ವಿಚಾರಾಂಶದಲ್ಲಿ ಆಶ್ಚರ್ಯವನ್ನುಂಟುಮಾಡುತ್ತವೆ. ಆದರೆ ಇದು ಕ್ಷಣಿಕಭಾವನೆ ಸರಿಯಾದ ಶಿಕ್ಷಣದಿಂದ ಸಿದ್ಧವಾದ ಯೋಜನೆಯಲ್ಲ. ಆದುದರಿಂದಲೇ ನಾನೆಂದುದು ಕ್ಷಣಿಕ ಸ್ಫೂರ್ತಿಯೆಂದು!

ಪ್ರಸ್ತುತದ ಸ್ಥಿತಿಯಲ್ಲಿ—ಇಡೀ ದೇಶಕ್ಕೆ ಹೇಳುವ ಸಾಹಸವನ್ನು ನಾನು ಮಾಡಲಾರೆ, ಆದರೆ ನಮ್ಮ ನಾಡಿನ ಮಟ್ಟಿಗೆ ಅದು ದೂರದ—ಅಪಾರ ಸಮುದ್ರ ಯಾತ್ರಿಕನ ಧ್ರುವ ತಾರೆ [illegible] ಮುಂಬಾಯಿ, ಮುದ್ರಾಸಿನಂತಹ ಹೊಂದಬೇಕಾದ ರೀತಿಯಲ್ಲ. ನಮ್ಮೂರ ಹಳ್ಳಿಗರೆಲ್ಲ ಶಿಕ್ಷಣವಿಲ್ಲದಿದ್ದುದರಿಂದ ಅವರ ಸ್ಥಿತಿಯೇ ನಿರಾಶೆಯ ಅಲೆಗಳಲ್ಲಿ ಮುಳುಗೇಳುತ್ತಿದೆ. ಸಾರ್ವಜನಿಕ ಕೆಲಸಗಳಲ್ಲಿ ತಲೆ ಹಾಕಲೂ ಮನೆ ಸಂಬಂಧ ವ್ಯಾಜ್ಯಗಳ ದೆಸೆಯಿಂದ ಪುತ್ತೂರಿನ, ದಿವಿಜನ ಮಟ್ಟಿಗೆ ಬೆಳ್ತಂಗಡಿಯ ವಕೀಲರಲ್ಲಿಯ ಕಾರ್ಯಭಾರದಿಂದ ಪುರ್ಸತ್ತೇ ಸಿಗುವುದಿಲ್ಲ. ಇದ್ದೊಂದು ತರಗತಿಯ ಹಳ್ಳಿಯವರು. ಇದಕ್ಕಿಂತ ಕೀಳು—[illegible] ಭಾವಿಸುತ್ತಾರೆ [illegible] ಮಟ್ಟಿಗೆ ಮಾತ್ರ—ಮುಖ್ಯವು [illegible] ಹಳ್ಳಿಗರು ಶಿಕ್ಷಿತರಿರುವ ನಾಡಿನಲ್ಲಿ—ಅವರ ಮನಸ್ಥಿತಿಯನ್ನು ಎಷ್ಟೇ ಬಣ್ಣಿಸಿ ಬರೆದರೂ ಯಾ ಹೇಳಿದರೂ ಹೆಚ್ಚಿನ ಪ್ರಯೋಜನವಿಲ್ಲ. ಉಪಾಧ್ಯಾಯನು ಹೇಳುವುದು ಇಂಗ್ಲೀಷಿನಲ್ಲಿ—ಶಿಷ್ಯರು ಕೇಳುವುದು, [illegible] ಹೃದಯ [illegible]ತವಗಳಿಂದ. ಇದೊಂದು ಅಲ್ಪ ಚಿಹ್ನೆಯು ಉಪಹಾಸ ಮಾತ್ರವಲ್ಲದೆ, ಬೇರೆ ಅಲ್ಲ. ನಮ್ಮ ಕೆಲಸವು ಈ ತರಗತಿಯ ಮುಖಾಂತರದಿಂದ ಆಗಬೇಕಾಗಿಲ್ಲ. ನಮ್ಮ ಊರಿನ, ನಮ್ಮ ಹೊಲಗದ್ದೆಗಳನ್ನು ತಿಳಿದು ಒರೆದು ಮೂಲೆಯಿಂದ ಇನ್ನೊಂದು ಮೂಲೆಯ ವರೆಗಿನ ಪರಿಸ್ಥಿತಿಯನ್ನು ತನ್ನ ಹೃದಯದಲ್ಲಿ ಇಟ್ಟುಕೊಳ್ಳಬಲ್ಲ ಕಾರ್ಯಕರ್ತರೇ ಹಳ್ಳಿಗರ ಆಶಾಸ್ಥಾನ. ಅವರಿಂದಲೇ ನಮ್ಮ ನಿಶ್ಚಿತ ಸಿದ್ಧಿಯೆಂಬ ಭಾವನೆಯು ಮೂಡಿರುವ ಈ ಪ್ರಾಂತ್ಯದಲ್ಲಿ, ಮುಖ್ಯವಾಗಿ ಗ್ರಾಮಾಭಿವೃದ್ಧಿಯಲ್ಲಿ ಬಗೆಬಗೆಯ ಸಾಧನಗಳಿಂದ ಪ್ರಯತ್ನಿಸಿರುವ ಶ್ರೀ ಶಿವರಾಯರನ್ನು ಗೌರವಿಸುವುದು ಅಸಂಗತವಲ್ಲ. ಈ ತನಕ ಅಶಿಕ್ಷಿತರಾದರೂ ಗೌರವಪೂರ್ಣರೆಂಬುದರಿಂದ ಕೆಲವರ ಕೈಗಾದರೂ ಸಿಕ್ಕಿರುವ ಸಾರ್ವಜನಿಕ ಸಂಸ್ಥೆಗಳೆಂದರೆ—ಸಹಕಾರ ಸಂಘಗಳು, ಪಂಚಾಯತ ಕೋರ್ಟುಗಳು, ನಂತರ ಪಂಚಾಯತ ಬೋರ್ಡುಗಳು. ಮೊದಲನೆಯ ಮತ್ತು ಎರಡನೆಯವುಗಳ ವಿವರವನ್ನು ತಿಳಿದರೆ ಆಶೆಯೊಂದಿಗೆ ಕೆಲವೊಮ್ಮೆ ಉದ್ವೇಗವೂ ಆಗದೆ ಇರುವುದಿಲ್ಲ. ಇದರ ಜವಾಬ್ದಾರಿಯು ಆ ಹಳ್ಳಿಯವರದ್ದು. ನಮ್ಮ ಸಮಾಧಿಯ ಗುಳಿಯನ್ನು ನಾವೇ ತೋಡಿದಂತೆ ಮಾಡುವ ದೂರ [illegible]ಯದು. ಅದು ಇರುವ ತನಕ ನಮಗೆ ಮೋಕ್ಷವಿಲ್ಲ. ಆದರೆ ಅದು ಸಿಗುವುದು ಯಾವಾಗ? ಬಗೆ ಹೇಗೆ? "ರಾಜು" ಹಾಕುವ ಬದಲು [illegible] ಎಂದು ಬರೆಯುವ [illegible] ಹಳ್ಳಿ [illegible] ಈ ಮುಂದಿನ ಏಳಿಗೆಯು [illegible] ತರಬಲ್ಲುದೇ? ಅದಲ್ಲ [illegible] ವ್ಯಕ್ತಿಗಳು [illegible] ಕಾಂಗ್ರೆಸಿನ ಸಾಧನ ಮಾತ್ರ. ಹಾಗೆಂದು ಮನುಷ್ಯನ [illegible] ಗುಣವು [illegible] ರಷ್ಯದಂತಹ ಸ್ವಾಧೀನ ರಾಜ್ಯಗಳಲ್ಲಿ [illegible] ಮಾಡಿದರು. [illegible] ಅದಲ್ಲ [illegible] ದೃಷ್ಟಾಂತ. ನಮ್ಮವರ ಅಧೋಗತಿಯ ದರ್ಶನ ಅನೇಕದಿಂದ ಫಲವಿಲ್ಲ. ಅವುಗಳ ಅಂತರಗಳ ನಡುವೆ ನಮ್ಮೂರ ಹಳ್ಳಿಗರಿಗೆ—ಸ್ವಾತಂತ್ರ್ಯದ ನೇರದ ಮೊದಲನೆಯ ದರ್ಶನದಂತಿರುವ ಪಂಚಾಯತ ಬೋರ್ಡುಗಳಿಂದಾದರೂ ಅಭಿವೃದ್ಧಿಯ ಲಾಭವಾಗಲಿ! ಪ್ರತಿಬಿಂಬವನ್ನು ಕಂಡಾದರೂ ವಸ್ತುವಿನ ಕಲ್ಪನೆಯಾಗಲಿ. ನಮ್ಮೂರ ಆವಶ್ಯಕತೆಗಳೇನು? ಅವನ್ನು ಪೂರೈಸುವ ಬಗೆ ಹೇಗೆ? ಎಂಬುದನ್ನು ಸಹಾಯಕರೊಡನೆ ಕುಳಿತು ಯೋಚಿಸುವ ಪ್ರಯತ್ನ ನಡೆಯಲಿ. ಬೇಕಾದಾಗ—ಅದಕ್ಕಾಗಿ ನಿಯಮಿಸಲ್ಪಟ್ಟಿರುವ ಕಾರ್ಯಕರ್ತರಿಂದ ಸಲಹೆಗಳನ್ನು ಹೊಂದಿ ಮುಂದುವರಿಯಲಿ. ಅವರೆಲ್ಲರನ್ನೂ ಮೇಲಿನ ಸಂಸ್ಥೆಗಳೂ, ಸರಕಾರವೂ ಆದರಿಸಲಿ. ಇವೇ ಮೊದಲಾದ ಕಲ್ಪನೆಯೇ ಈ ಪಂಚಾಯತ ನಿರ್ಮಾಣದ ಈಗಿನ ಇತಿಹಾಸವೆನ್ನಬಹುದು. ಈ ಪಂಚಾಯತಗಳ ಸ್ಥಾಪನೆಯು ಮೊದಲಾದುದು ನಮ್ಮ ಬೆಳ್ತಂಗಡಿ ಡಿವಿಜನಲ್ಲಿ—[illegible]ನೇ ಇಸ್ವಿಯಲ್ಲಿ. ಅಂದಿನಿಂದ ಇಂದಿನ ತನಕ ಈ ಬೋರ್ಡುಗಳ ಮೂಲಕ ಗ್ರಾಮಸ್ಥರು ಎಷ್ಟು ಉನ್ನತಿಯನ್ನು ಸಾಧಿಸಿದರು? ಎಂಬುದನ್ನು ಸಾಧಾರಣವಾಗಿ ಸ್ಪಷ್ಟಪಡಿಸಬೇಕೆಂದಿದ್ದೇನಲ್ಲದೆ ಇದರಲ್ಲಿರುವ ಗುಣ ದೋಷಗಳನ್ನೂ, ನಮ್ಮ ಹಳ್ಳಿಗರ ಮುಂದಣ ಕರ್ತವ್ಯದ ವಿಚಾರವನ್ನೂ ಬರುವ ಸಂಚಿಕೆಗಳಲ್ಲಿ ಬರೆಯಬೇಕೆಂದಿದ್ದೇನೆ.

—ಸಾರಸ್ವತ

Sell Indian
Buy Indian
Be Indian

By Using

"LADCO"

Vegetable Toilet and Washing Soaps

FREE FROM ANIMAL FAT

Bath Soap, Glycerine Transparent Soap, Bar Soap
Cubes, Cakes.

Agents for South Kanara, Malabar & Coorg—

PAI PHARMACY,
Car Street, MANGALORE.

Stockists.—

JAYAVANT SHANTARAM & BROS *Merchants,*
Bunder, Mangalore, S K

1—9—33

'ಸ್ವದೇಶಾಭಿಮಾನಿ'ಗೆ ಇಂದೇ ಚಂದಾದಾರರಾಗಿರಿ!

ಗುಣ ಹೊಂದಲು ಒಂದು ಡೋಜು ಸಾಕು

ಇದು ಏನೂ ದೋಷಕರವಲ್ಲ. ಎಲ್ಲಾ ಪ್ರಾಯಸ್ಥರಿಗೂ ಮಲೇರಿಯಾ, ಇನ್‌ಫ್ಲುಯೆಂಜಾ ಆಗ್ಯು, ಇತ್ಯಾದಿಗಳ ಪರಿಹಾರಾರ್ಥವಾಗಿ ಕೊಡಬಹುದು. ಕೆಳಗೆ ಕೊಟ್ಟ ಶಿಫಾರಸಿನಿಂದ ಈ ಮದ್ದು ನಲ್ವತ್ತು ವರ್ಷಗಳಿಂದ ಎಷ್ಟು ಪ್ರಸಿದ್ಧವಾಗಿವೆಯೆಂಬುದನ್ನು ತೋರಿಸುವುದಕ್ಕೆ ಮುದ್ರಿಸಲಾಗಿದೆ. ಈ ಸ್ಕ್ವಿಬ್ಸ್ ಸ್ಪೆಸಿಫಿಕನ್ನು ಜ್ವರಪೀಡಿತರಾದ ಮಿಲಿಯಾವಧಿ ಜನರು ಕುಡಿದು ಗುಣ ಹೊಂದಿರುತ್ತಾರೆ.

"ಎರಡು ವರ್ಷಗಳಿಂದ ನಮ್ಮ ಮಿಲ್ಲಿನಲ್ಲಿ ಈ ಔಷಧಿಯನ್ನುಪಯೋಗಿಸುತ್ತೇವೆ. ಒಂದು ಡೋಜಿನಲ್ಲಿ ಜ್ವರ ನಿಂತಿದೆ. ಎಲ್ಲಾ ಜ್ವರಗಳಿಗೂ ಇದು ಗುಣಕಾರಿ. ಅದಕ್ಕೆ ಸಂದೇಹವಿಲ್ಲ" ಜೆ. ಎಚ್. ಟೂಕ್, ಮೆನೇಜರ್—ಹತಿಸಿಂಗ್ ಮಿಲ್ ಅಹ್ಮದಾಬಾದ್

'ಸ್ಕ್ವಿಬ್ಸರ ಅಗ್ ಸ್ಪೆಸಿಫಿಕ್' ಆಶ್ಚರ್ಯವನ್ನೇ ಉಂಟುಮಾಡುತ್ತದೆ. ಅದನ್ನು ಉಪಯೋಗಿಸಿದವರು ಧರವಸೆ ಕೊಡುತ್ತಾರೆ.

ಜೆ ಜೆ ಫೇಸ, ಟೋಕೊ ಡಿಪೋ, ಎ ಎಂಡ್ ಬಿ ರೈಲ್ವೆ. ಅಸ್ಸಾಮ್.

ಮದನ್ ಸನ್ಸ್ ಎಂಡ್ ಕೋ, ಬೊಂಬಾಯಿ 2.

Madon Sons & Co, Bombay 2.

"ನಮ್ಮ ದಕ್ಷಿಣ ಕನ್ನಡ"

ಎಲ್ಲಿ ಭಾರ್ಗವ ಬೀಸೆ ಕೊಡಲಿಯು ಕಡಲ ಒಡಲಿಂ ಬಂದುದೋ?
ಎಲ್ಲಿ ಗಿರಿಕಂದರದ ಶಾಮಲ ದೃಶ್ಯ ಕಣ್ಣಿಗೆ ಕಾಂಬುದೋ?
ಎಲ್ಲಿ ನೇತ್ರಾವತಿ ಪಯಸ್ವಿನಿ ಮುಖ್ಯ ನದಿಗಳು ಹರಿವವೋ?
ಎಲ್ಲಿ ಭೂಮಿಯು ಹಸುರು ಹಚ್ಚಡ ಹೊದ್ದ ತೆರ ಹೊಲವಿರುವುದೋ?
ಅದುವೆ ದಕ್ಷಿಣ ಕನ್ನಡ !
ಇದರ ಹುಡಿಯದು ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಮೂರ್ತಿ ಶಿಲ್ಪದ ಕಾರುಕಾರ್ಯದ ಕೀರ್ತಿ ಕಾಯವ ಪಡೆದುದು,
ಬಾರಕೂರಿತ ಮೂಡಬಿದರೆಯ ಭಾರಿ ವೈಭವ ನೆರೆದುದು,
ವೀರ ವೈಷ್ಣವ ಮತವನೆರೆಯಿಸಿದ 'ಮಾಧ್ವ' ಜನ್ಮವ ಪಡೆದುದು
ಧೀರ ಭಕ್ತನು ಕನಕದಾಸನು ಹುಟ್ಟಿ ಭಜನೆಯ ಗೈದುದು.
ಇದುವೆ ದಕ್ಷಿಣ ಕನ್ನಡ !
ಕಲೆಯ ದಕ್ಷಿಣ ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಸ್ಥಾಪಿಸಿದರೋ ಮಾಧ್ವಗುರುಗಳು ಮೊದಲು ಕೃಷ್ಣನ ವಿಗ್ರಹ
ವೆಲ್ಲಿ? ಭೈರಸ, ಪಾಂಡ್ಯರಾಜರು ಗೈದರುಗ್ರಹ ನಿಗ್ರಹ,
ರಾಜ್ಯವಾಳುತ ಶೋಭಿಸಿದರೋ? ರಸದ ಬಾವಿಯ ಕೀರ್ತಿಯು,
ಭೂಮಿ ಸೊಬಗಿಂ ಮೆರೆವುದೋ ಮೂಕಾಂಬಿಕಾವರಮೂರ್ತಿಯು.
ಇದುವೆ ದಕ್ಷಿಣ ಕನ್ನಡ !
ಹಳೆಯ ದಕ್ಷಿಣ ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಬಂದ ಯಾತ್ರಿಕ ಭಕ್ತ ಜನರಿಗೆ ಧರ್ಮ ನಡೆಯುವ ಸ್ಥಾನವು
ಸೌರ್ಮಂಗಲ ಮಂಗಲಾಂಬೆಯ ಕಾರಣಿಕವರ ವಾಸವು.
ಮಧ್ವ ಸರಸಿಯು ರಾಮ ಜಲಧಿಯು ಗೋಮಟೇಶ್ವರ ಪ್ರತಿಮೆಯು
ನೀರನೆರಚಿ ತೋರಿ ಬರುತಿಹ ಮೂಲಿಕಾ ಒಳಲಂಕೆಯು
ಇರುವ ದಕ್ಷಿಣ ಕನ್ನಡ !
ಮೆರೆವ ದಕ್ಷಿಣ ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಕಾಪು ಮಂಜುನಾಥ ಶೇಣೈ.

ಎದೆಯುರಿ

॥ ೧ ॥

ಅರಳಿ ಹೂವಾಗದೆಯೆ,
ಪರಿಮಳವ ಬೀರದೆಯೆ,
ಧರೆಗೊರಗಿದೆ,
ದೇವಿ' ಕಲೆ ಮರೆಸಿದೆ

॥ ೨ ॥

ಕಂದಿರದ ನಿನ್ನ ಮೊಗ
ಚಂದಿರನ ಹಳಿವ ಸೊಗ-
ವಿಂದು ಎಲ್ಲಿ?
ನಿನ್ನ ಹುಡುಕಲಿಲ್ಲಿ?

॥ ೩ ॥

ಎಳೆತನದಿ ಒಂದಾಗಿ,
ಬಳೆದಿಹೆವು ಸೊಗಸಾಗಿ,
ಆದರೇನು?—
ಎನ್ನ ತೊರೆದೆಯೇನು?

॥ ೪ ॥

ಮರುಗುತಿಹೆ ನೀನಿರದೆ,
ಮರವಕ್ಕಿ ಗೆಲವಿರದೆ,
ಬಾರೊ ದೇವಿ!
ದಯದಿ, ತೋರು ದೇವಿ!

॥ ೫ ॥

ಹಾದಿ ಕೋರದು ಎನಗೆ,
ಸಾದರದಿ ಬಾ ಬಳಿಗೆ,
ದೇವಿ ನೀನು!
ಎನ್ನ ಜೀವ ನೀನು!!

ಕಂದಕ ಈಶ್ವರ.

ಶಾರದಾ ಛಾಪಖಾನೆ, ಮಂಗಳೂರು

ಸಾಹಿತ್ಯ ಸ್ವದೇಶಾಭಿಮಾನಿ ಸಂಚಿಕೆ.

ಸಂಪುಟ ೨ ನವಂಬರ ೧೦—೧೧—೧೯೩೩. ಸಂಚಿಕೆ ೯

— ಅನುಕ್ರಮಣಿಕೆ —

	ಪುಟ
ಬಾಲಕರಿಗೆ ತಕ್ಕ ಸಾಹಿತ್ಯ	1
ಲೇಟಿನ್ ಸಾಹಿತ್ಯದ ಚರಿತ್ರೆ	2
ಕಳಿಂಗದ ಗಂಗರಾಜ ವಂಶ	3
ರಣಭೇರಿ	5
ಸತಿ	,,
ಹಳ್ಳಿಯ ಹಾಡು	7
ನಮ್ಮ ದಕ್ಷಿಣ ಕಾಡು	8
ಎದೆಯುರಿ	,,
ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?	6.

ನವಂಬರ ತಾರೀಕು ೧೦ನೇ ಶುಕ್ರವಾರ ೧೯೩೩.

ಬಾಲಕರಿಗೆ ತಕ್ಕ ಸಾಹಿತ್ಯ.

ಕನ್ನಡ ಸಾಹಿತ್ಯವು ಎಷ್ಟರ ಮಟ್ಟಿಗೆ ಪ್ರಗೃತಿ ಹೊಂದಿದೆ ಎಂದುತಿಳಿಯಬೇಕಾದರೆ ಬಾಲಕರಿಗೆ ತಕ್ಕದಾದ ಸಾಹಿತ್ಯವು ಎಷ್ಟು ಹುಟ್ಟಿದೆ ಎಂದು ನೋಡಿಕೊಳ್ಳಬೇಕಾಗುವುದು ಮನುಷ್ಯರ ಜ್ಞಾನವು ಹೇಗೆ ಬಾಲ್ಯಾವಸ್ಥೆಯಿಂದ ವೃದ್ಧಿಯಾಗುತ್ತದೊ ಅದೇ ರೀತಿಯಲ್ಲಿ ಸಾಹಿತ್ಯಕ್ಷೇತ್ರವೂ ಬೆಳೆಯುತ್ತ ಹೋಗಬೇಕು ಜನರ ಪ್ರಾಯ ಪ್ರಾಯಕ್ಕೆ ಒಪ್ಪುವಂತಹ ಬರವಣಿಗೆಗಳು ಹೆಚ್ಚಾದಂತೆ ಸಾಹಿತ್ಯದ ಉಪಯುಕ್ತತೆಯೂ ಹೆಚ್ಚುವುದು ಚಿಕ್ಕ ಬಾಲಕರ ಮನಸ್ಸಿಗೆ ಆಹಾರವಾಗಿ ತೋರುವ ಕವನಗಳಾಗಲಿ, ಕಥೆಗಳಾಗಲೀ ದೊಡ್ಡವರಿಗೆ ಹಾಸ್ಯಾಸ್ಪದವೆಂತಲೂ, ಅರ್ಥಗರ್ಭಿತವಾಗಿರುವುದಿಲ್ಲವೆಂದೂ ತೋರಬಹುದು, ಆದರೆ ಅಂಥವುಗಳು ಆ ಪ್ರಾಯದವರಿಗೆ ಅಗತ್ಯವೆಂದು ಪ್ರತಿ ದೇಶದ ಕವಿಗಳಿಗೆ ತಿಳಿದ ವಿಷಯವಾಗಿರುವುದು.

ಇಂಗ್ಲಿಷ ಭಾಷೆಯನ್ನು ದೃಷ್ಟಾಂತವಾಗಿ ತೆಗೆದುಕೊಂಡರೆ,— ತೊಟ್ಟಿಲ ಮಕ್ಕಳಿಗೆ ತಕ್ಕದಾದ ಆಹ್ಲಾದವನ್ನು ಕೊಡುವ ನರ್ಸರಿ ರ್ಹೈಮ್ಸ್ ಎಂದು ಅರ್ಥವಿಲ್ಲದ ಆದರೆ ತಾಳ ತಪ್ಪದ ಅನೇಕಾನೇಕ ರಾಗದಲ್ಲಿ ಹೇಳುವ ಚಿಕ್ಕ ಹಾಡುಗಳಿರುತ್ತವೆ. "Sleep baby sleep" "To market to market" "Ba Ba black sheep" "Naughty boy" ಎಂಬ ಹಾಡುಗಳು ಎಷ್ಟು ಮಕ್ಕಳನ್ನು ತೊಟ್ಟಿಲಿನಲ್ಲಿ ಮಲಗಿಸುತ್ತವೆ? ಮಾತಾಡಲು ಕಲಿತ ಮೇಲ ಬಾಲಕರು ಅವುಗಳನ್ನು ಹಾಡುತ್ತಲೇ ಕುಣಿಯುವರು. ಹೀಗಾಗಿ ತೊಟ್ಟಿಲಿನಿಂದಲೂ ಈ ಮಕ್ಕಳೊಳಗೆ ಹಾಡುಗಳಲ್ಲಿ ಪ್ರೀತಿಯನ್ನು ಇವುಗಳು ಹುಟ್ಟಿಸುತ್ತವೆ. ಇಂತಹ ಪದ್ಯಗಳಲ್ಲಿ ಅರ್ಥವೇನೂ ಇರುವುದಿಲ್ಲ. ತಾಳ ಮಾತ್ರೆಗಳು ಮಾತ್ರ ಇರುವುವು ಶಬ್ದಗಳ ರಾಗವೇ ಇವುಗಳ ತಿರುಳು. ಅದೇ ಅವರಿಗೆ ಬೇಕಾದುದು

ಈ ರೀತಿಯ ಪದ್ಯಗಳು ಕನ್ನಡ ಭಾಷೆಯಲ್ಲಿ ಪ್ರಾಚೀನ ಕಾಲದಿಂದಲೂ ಕಡಿಮೆಯೆಂದೇ ಹೇಳಬೇಕು. ನಮ್ಮ ಹೆಂಗುಸರು ಮಕ್ಕಳನ್ನು ತೊಟ್ಟಿಲಲ್ಲಿ ಮಲಗಿಸುವಾಗ ಪುರಂದರದಾಸರ ಹಾಡುಗಳಾಗಲೀ ಪುರಾಣ ಕಥೆಗಳ ಹಾಡುಗಳಾಗಲೀ ಹೇಳುತ್ತಾರೆ. ಇವುಗಳು ಮಕ್ಕಳೊಳಗೆ ಭಾಷಾಭಿರುಚಿಯನ್ನು ಎಷ್ಟರ ಮಟ್ಟಿಗೆ ಬೆಳಸುವುವ ಎಂದು ನಾವೇ ಊಹಿಸಿಕೊಳ್ಳಬಹುದು.

ಈಗೀಗ ಕೆಲವರು ಅಂಥಹ ಹಾಡುಗಳನ್ನು ಕಟ್ಟಲು ಪ್ರಯತ್ನಿಸುತ್ತಾರೆ. ಆದರೆ ಅನೇಕವುಗಳಲ್ಲಿ ಮಕ್ಕಳಿಗೆ ಗ್ರಹಿಸಲು ಕಠಿಣವಾದ ವಿಚಾರಗಳನ್ನಾಗಲೀ ಕಥೆಗಳನ್ನಾಗಲೀ ಹಾಕಲು ಪ್ರಯತ್ನಪಟ್ಟಂತೆ ಕಾಣುವುದರಿಂದ ಅವುಗಳ ಸ್ವಾರಸ್ಯವು ಕೆಟ್ಟು ಹೋಗುವಂತಿದೆ. ಮಕ್ಕಳ ಪದ್ಯಗಳು ಹಾಡಲಾಗಬೇಕಲ್ಲದೆ ತಿಳಿಯುವಂತವುಗಳಾಗಬಾರದು. ಕುಣಿಯಲು ಪ್ರೇರೇಪಿಸುವಂತವುಗಳಾಗ ಬೇಕಲ್ಲದೆ ಅವರಲ್ಲಿ ಆಲೋಚನೆಗಳನ್ನು ಹುಟ್ಟಿಸುವಂತವುಗಳಾಗಬೇಕಾಗಿರುವುದಿಲ್ಲ. ಆ ಹಾಡುಗಳು ಪ್ರತಿ ಬಾಲಕನಿಗೆ ಪ್ರೇರೇಪಣೆಯನ್ನು ಹುಟ್ಟಿಸುತ್ತಿದ್ದರೆ ಅವುಗಳಿಂದ ನಮ್ಮ ಬಾಲಕರಿಗೆ ಎಷ್ಟೆ ಒಳ್ಳಿತಾಗುವುದು.

ಇನ್ನೊಂದು ರೀತಿಯ ಕೊರತೆ ನಮ್ಮ ಬಾಲಕರ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಈಗೀಗ ಪ್ರಚಾರದಲ್ಲಿರುವ ಕೆಲವು ಹಾಡುಗಳು ಒಬ್ಬೊಬ್ಬರೆ ಹೇಳುವಂತವುಗಳಾಗಿವೆ. ಆದರೆ ಅಂತಹ ಪದ್ಯಗಳಿಗಿಂತ, ಅನೇಕ ಬಾಲಕರು ಒಟ್ಟುಗೂಡಿ ಹಾಡುತ್ತ ಕುಣಿಯುತ್ತ

ಹೇಳುವ ಪದ್ಯಗಳಿದ್ದರೆ ಅವುಗಳ ಪ್ರಯೋಜನ ಹೆಚ್ಚು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇಂಗ್ಲಿಷಿನಲ್ಲಿ "Chorus Songs" ಎಂದಿರುವಂತಹ [illegible] ಹಾಡುಗಳು ಏಕೆ ಇರಬಾರದು!

[illegible]ಕರಿಗೆ ಒಪ್ಪುವ ಬೇರೆ ಹಾಡುಗಳೆಂದರೆ, ಚಿಕ್ಕ ಕಥೆಗಳನ್ನು ಹೇಳುವ ಪದ್ಯಗಳು. ಇವುಗಳಲ್ಲಿ ಕಥೆಯು ಬಹಳ ಸುಲಭವಾಗಿರಬೇಕು ಮತ್ತು ಬಾಲಕರ ಮನಸ್ಸಿಗೆ ನಾಟುವಂತಹ ಕಥೆಗಳಿರಬೇಕು. [illegible] ಕಥೆಯಂತಹ ಸುಂದರ ಕಥೆಗಳು ನಮಗೆ ಬೇಕಾಗಿರುವವು. ಈ ರೀತಿಯ ಕಥಾ ಕವನಗಳು ಹೆಚ್ಚಿದರೆ ಬಾಲಕರಿಗೆ ಬಹಳ [illegible] ದೊರಕುವುದರಲ್ಲಿ ಏನೂ ಸಂಶಯವಿರಲಾರದು

ಹೀಗಾಗಿ ನರ್ಸರಿ ರೈಮ್ಸ್ ಗಳೆಂಬ ಮೊದಲನೆಯ ಮೆಟ್ಟಲನ್ನು ದಾಟಿ ಬಾಲಕರು ಕಥಾಕವನಗಳನ್ನು ಕಲಿತರೆ ಸಾಹಿತ್ಯದ ರುಚಿಯು ಬಾಲಕರಲ್ಲಿ ಬೇರೂರುವಂತಾಗುವುದು. ಕನ್ನಡ ನಾಡಿನ ಈಗಿನ ಸ್ಥಿತಿಯಲ್ಲಿ ಕನ್ನಡ ರುಚಿಯನ್ನು ಬಾಲಕರಲ್ಲಿ ಹುಟ್ಟಿಸಿದರೆ ಮುಂದೆ [illegible] ಸಾಹಿತ್ಯಾಭಿಮಾನವು ಅವರಲ್ಲಿ ಅಂಟಿ ಹೋಗುವುದು ಸಹಜವಾಗಿರುತ್ತದೆ. ಹಾಗೆ ಅಭಿರುಚಿಯನ್ನು ಚಿಕ್ಕಂದಿನಿಂದಲೇ ಅವರಲ್ಲಿ [illegible]. ಆದಕ್ಕಾಗಿಯೇ ನಾವು ಅವರ ಕ್ಷೇತ್ರದಲ್ಲಿ ಇಳಿದು, [illegible] ಮನಸ್ಸಿನ ರೀತಿಯನ್ನು ವಿಚಾರ ಮಾಡಿ ಅದಕ್ಕೆ ತಕ್ಕಂತೆ [illegible] ಕವನಗಳನ್ನು ಕೊಟ್ಟರೆ ಇವುಗಳಿಂದಾಗುವ ಸಾಹಿತ್ಯಸೇವೆಯು ಬೇರೆ ಯಾವುದರಿಂದಲೂ ಆಗಲಾರದೆಂದು ನಮ್ಮ ಅಭಿಮತವು.

ಲ್ಯಾಟಿನ್ ಸಾಹಿತ್ಯದ ಚರಿತ್ರೆ

[illegible]—ಬಿ. ಶಂಕರ ಭಟ್ಟ, ಸೈಂಟ್ ಆಗ್ನೆಸ್ ಹೈಸ್ಕೂಲ್, ಮಂಗಳೂರು

(ಶ್ರೀ [illegible] ಪ್ರಸಾದರ ಹಿಂದೀ ಲೇಖದ ಆಧಾರದಿಂದ)

ಲ್ಯಾಟಿನ್ ಸಾಹಿತ್ಯವನ್ನು ನಾವು ಗ್ರೀಕ್ ಸಾಹಿತ್ಯದ ಅನುಕರಣ [illegible] ಹೇಳಬಹುದು. ಲ್ಯಾಟಿನ್ ಸಾಹಿತ್ಯದ ಪ್ರಾರಂಭವು ಕ್ರಿ. ಪೂ. ೨೦೦ರಲ್ಲಿ ಪ್ರಾರಂಭವಾಗಿತ್ತು. ಆ ಸಮಯದಲ್ಲಿ ರೋಮನರು ಗ್ರೀಕ [illegible]ದೊಂದಿಗೆ ಸಂಬಂಧ ಬೆಳಸಿ ಸಾಹಿತ್ಯದ ಅಧ್ಯಯನ ಮಾಡಿ [illegible] ವಿಕಾಸದ ಕಡೆಗೆ ಮುಂದುವರಿಯುತ್ತಿದ್ದರು. ಈ ಪ್ರಯತ್ನ [illegible] ಲ್ಯಾಟಿನ್ ಸಾಹಿತ್ಯದ ನಿರ್ಮಾಣವಾಯಿತು ಈ ನಿರ್ಮಾಣ [illegible] ನಾವು ಮೂರು ಕಾಲಗಳಾಗಿ ವಿಂಗಡಿಸಬಹುದು ಪ್ರಥಮ [illegible]ಯುಗ. ಕ್ರಿ. ಪೂ. ೨೪೦ರಿಂದ ಕ್ರಿ. ಪೂ. ೮೦ರ ವರೆಗೆ. ಈ [illegible]ದಲ್ಲಿ ಕಲೆಯ ವಾಸ್ತವಿಕ ಉನ್ನತಿಯಾಗದಿದ್ದರೂ ಭವಿಷ್ಯದ [illegible] ಚಿಹ್ನೆಗಳು ಅಲ್ಲಲ್ಲಿ ತೋರುತ್ತಿದ್ದುವು. ದ್ವಿತೀಯ ಕಾಲವು [illegible]ಯುಗ ಕ್ರಿ. ಪೂ. ೮೦ರಿಂದ ಕ್ರಿ. ಶ. ೧೪ರ ವರೆಗೆ ಈ [illegible] ಗದ್ಯ ಪದ್ಯಗಳೆಂಬ ಸಾಹಿತ್ಯ ಪುರುಷನ ಎರಡು ಅಂಗಗಳೂ [illegible] ಉನ್ನತಿಯನ್ನು ಹೊಂದಿದುವು. ಕಲಾ ಕೌಶಲವು [illegible] ಹೊಂದಿತು. ಮತ್ತು ಭಾಷೆ, ಭಾವಗಳಲ್ಲಿ ಒಂದು ನವೀನ ಓಜಸ್ಸಿನ ಪ್ರಾದುರ್ಭಾವವಾಯಿತು ಈ ಸ್ವರ್ಣ ಯುಗದ ಸ್ವಲ್ಪ ಕಾಲಕ್ಕೆ ಹಿಂದೆ ಅಗಸ್ಟಸ್ ಎಂಬ ರಾಜನಿದ್ದುದರಿಂದ ಈ ಕಾಲಕ್ಕೆ ಅಗಸ್ಟನ್ ಯುಗವೆಂದು ಕೂಡ ಹೇಳುತ್ತಾರೆ. ತೃತೀಯ ಕಾಲವಾದ ರೌಪ್ಯ ಯುಗದಲ್ಲಿ ಸ್ವೇಚ್ಛಾಚಾರಿಗಳಾದ ರಾಜರುಗಳು ಭಾವ ಪ್ರಕಾಶನದ ಸ್ವಾಧೀನತೆಯನ್ನಪಹರಿಸಿ ಸಾಹಿತ್ಯವನ್ನು ಉನ್ನತಿಯ ಶಿಖರದಿಂದ ಮುಗುಚಿ ಹಾಕಿದರು ಈ ಕೃತ್ಯವು ಕ್ರಿ. ಶ. ೧೪ರಿಂದ ೧೩೦ರ ವರೆಗೂ ನಡೆಯಿತು

ಲೋಹಯುಗ–ಸುಖಾಂತ ಮತ್ತು ದುಃಖಾಂತ—"ಪ್ಲಾಟಸ್ (Plautus 254—184 B C) "ಟೆರೆನ್ಸ್" (Terence 185—159 B C) ಇವರ ಸುಖಾಂತ ರಚನೆಗಳ ಅತಿರಿಕ್ತ (ಇವುಗಳ ಮೇಲೆ ಗ್ರೀಕ ಸಾಹಿತ್ಯದ ಪ್ರಭಾವವು ಬೇಕಾದಷ್ಟು ಬಿದ್ದಿತ್ತು) ಬೇರೆ ಮಹತ್ವಪೂರ್ಣ ಗ್ರಂಥಗಳು ಈ ಲೋಹ ಯುಗದಲ್ಲಿ ದೃಷ್ಟಿಗೋಚರವಾಗುವುದಿಲ್ಲ ಪ್ಲಾಟಸ್ಸಿನ ವಕ್ತೃತ್ವ ಶಕ್ತಿಯೂ ಹಾಸ ಪರಿಹಾಸವೃತ್ತಿಯೂ ಬಹಳ ಪ್ರಚುರವಾಗಿದೆ ಮತ್ತು ಈತನ ಕೆಲ ನಾಟಕಗಳು ಭವಿಷ್ಯದ ನಾಟಕಕಾರರಿಗೆ ವಸ್ತು ನಿರ್ಮಾಣ ಕಾರ್ಯದಲ್ಲಿ ವಿಶೇಷ ಸಹಾಯ ಮಾಡಿವೆ ಶೇಕ್ಸ್ಪಿಯರನ "ಕಾಮಿಡಿ ಆಫ್ ಎರರ್ಸ್" (Comedy of Errors) ಇವನ 'ಮೆನಾಕಿಮಿ' (Menachemi)ಯ ಮತ್ತು ಮೋಲಿಯರನ "ದಿ ಮೈಸರ್" (The Miser) ಇವನ "ಅಲೂಲರಿಯಾ" (Aulularia)ದ ಅನೇಕ ಅಂಶಗಳಲ್ಲಿ ಛಾಯಾ ಮಾತ್ರವಾಗಿದೆ. ಟೆರೆನ್ಸಿನ ಗ್ರಂಥಗಳಲ್ಲಿ ಸಾಹಿತ್ಯವೂ ಭಾವವೂ ಅಧಿಕವಾಗಿವೆ ದೋಷಗಳು ಕಡಮೆ ಆದರೆ ಈ ಯುಗದಲ್ಲಿಯ ದುಃಖಾಂತ ನಾಟಕಗಳ ದೃಷ್ಟಾಂತವು ಗ್ರಂಥ ರೂಪದಲ್ಲಿ ಇಷ್ಟರ ವರೆಗೂ ಉಪಲಬ್ಧವಾಗಲಿಲ್ಲ.

ಸ್ವರ್ಣಯುಗ—ಈ ಯುಗದ ಸರ್ವ ಶ್ರೇಷ್ಠ ಗದ್ಯಲೇಖಕ ಹಾಗೂ ಅತುಲನೀಯವಕ್ತೃವಾದ "ಸಿಸೆರೋವು" (106–43 B.C) ಮಹಾನ್ ಪ್ರತಿಭಾಶಾಲಿ ವ್ಯಕ್ತಿಯಾಗಿದ್ದನು ವಸ್ತುತಃ ಇವನ ರಾಜನೈತಿಕ ಭಾಷಣಗಳಲ್ಲಿ ಮಾನಸಿಕವಿಕಾಸ, ಸ್ವದೇಶ ಪ್ರೇಮ, ಸುಂದರ ಭಾವನೆಗಳು, ಮಧುರವಾದ ಶೈಲಿಗಳು ಬೇಕಾದಷ್ಟು ದೊರಕುತ್ತವೆ ಈತನ ದಯಾಪೂರ್ಣ ಸ್ವಭಾವ, ಉದಾರ ಹೃದಯ, ಭಾವಗಾಂಭೀರ್ಯಗಳನ್ನು ಪೂರ್ಣವಾಗಿ ತಿಳಿಯಲಿಕ್ಕೆ ಇವನು ಅಟಿಕಸ್ಸನಿಗೆ ಬರೆದ ಪತ್ರವೊಂದೇ ಸಾಕು ಈತನು ಸುಲಲಿತ ಮತ್ತು ಆಕರ್ಷಕ ಭಾಷೆಯಲ್ಲಿ ಬರೆದ ಜೂಲಿಯಸ್ ಸೀಸರನ (102–44 B C) ಸಮಾಲೋಚನೆಗಳು (Commentaries) ಎಂಬ ಪುಸ್ತಕಕ್ಕೆ ವಿದ್ವನ್ಮಂಡಲಿಯಲ್ಲಿ ಎಂದೆಂದಿಗೂ ಮಹತ್ವದ ಸ್ಥಾನವಿದೆ.

ಪದ್ಯ ವಿಭಾಗದಲ್ಲಿ ಕೆಟುಲಸ್ಸನ (Catullus 84–54 B. C) ಹೆಸರೇ ಮುಂದೆ ಬರುತ್ತದೆ. ಈತನು ಅನೇಕ ಪ್ರೇಮಗೀತೆಗಳನ್ನೂ ಬರೆದಿದ್ದಾನೆ ಲ್ಯೂಕ್ರೆಟಿಯಸ್ಸನ (Lucretius 96–55 B C) "ಡಿ ರೀರಮ್ ನೆಚೂರಾ" (De Rerum Natura) (On the nature of things) ಎಂಬ ದಾರ್ಶನಿಕ ಕಾವ್ಯಕ್ಕೆ ಸಮಾನವಾದ ಕಾವ್ಯವೇ ಉತ್ಪನ್ನವಾಗಲಿಲ್ಲ. ಈ ಕಾವ್ಯದ ಭಾವ, ಅನುಭವ, ಭಾಷಾ ಲಾಲಿತ್ಯ, ಮಧುರ ಧ್ವನಿ, ಸುಂದರ ಸಮನ್ವಯಗಳಿಂದ ಕವಿಯ ಬಲಿಷ್ಠ ಭಾವ ಪ್ರಭಾವವು ಪ್ರಕಟವಾಗುತ್ತದೆ

ಗೋಚರಿಯಾದರೂ ಏಕೆ? ಕಲಿಕುದನ್ನು ಮರೆಯಬೇಕೆಂದು ಯತ್ನಿಸುವವರೂ ಇದ್ದಾರೆಂದರೆ ಅದೊಂದು ಅತಿಯೊಕ್ತಿಯೇ? ಇನ್ನು ಸುಶಿಕ್ಷಿತ ವರ್ಗದವರ ಪಾಡಾದರೂ ಏನು? ಆಂಗ್ಲ ಪತ್ರಿಕೆಗಳಲ್ಲದೆ ಕನ್ನಡ ಪತ್ರಿಕೆಗಳ ಚಂದಾದಾರರಾಗುವುದೆಂದರೆ ಅದು ಅವರಿಗೆ ತೀರ ಮಾನನಷ್ಟವೆಂದೇ ಭಾವಿಸುವರು "ಕನ್ನಡವನ್ನು ಶಾಲೆಗಳಲ್ಲಿ ಕಲಿತು, ಸಿಕ್ಕಿಬಿದ್ದೆನಲ್ಲಾ" ಎಂದು ಪಶ್ಚಾತ್ತಾಪ ಪಡುವವರಾದರೂ ಏಕೆ ಇಲ್ಲ? ಹೀಗಾಗಿ ಕನ್ನಡ ವಾಙ್ಮಯ ವೃಕ್ಷವು ರೆಕ್ಕೆ ಬಿಡಿಸಿಕೊಂಡು ಹಾರಾಡಲಿಡೆಯಿಲ್ಲದೆ ಕಣ್ಕಟ್ಟು ಅಲ್ಲೇ ಮುದುಡಿಕೊಂಡು ಬೀಳುವ ಪ್ರಸಂಗವು ಬಂದು ನಿಂತಿದೆ ಅಂದ ಮೇಲೆ ಕರ್ನಾಟಕದ ಅಡಿಗಲ್ಲು ಸ್ಥಿರವಾಗಿ ನಿಲ್ಲಲು ಅವಕಾಶವಾದರೂ ಎಲ್ಲಿ?

ಜನರೊಳಗಣ ಪ್ರತ್ಯೇಕದ ಸಂಕುಚಿತ ಸ್ವಭಾವವು ಕ್ರಮೇಣ ವಿಕಾಸಹೊಂದಿ ಅವರು ಶುದ್ಧಾಶುದ್ಧವೆಂದರೇನು? ನ್ಯಾಯಾನ್ಯಾಯಗಳೆಂದರೇನು? ಲೋಕ ವ್ಯವಹಾರವು ಹೇಗಿದೆ? ತಾನು ಈ ಜೀವನ ಸಾಗರದಲ್ಲಿ ಧಾವಿಸುತ್ತಿರುವುದಾದರೂ ಎಲ್ಲಿಗೆ? ಸ್ವಜನರಿಗಾಗಿ, ಸ್ವದೇಶಕ್ಕಾಗಿ ತಾನು ಎಷ್ಟು ಕಾರ್ಯಗಳ ಭಾರವನ್ನು ಹೊತ್ತುಕೊಳ್ಳಬೇಕು? ಎಂಬಿವೇ ಮೊದಲಾದ ವಿಷಯಗಳನ್ನು ವಿವೇಚನೆಯಿಂದ ತಿಳಿಯಬೇಕಾದರೆ, ಮೊದಲಾಗಿ ನಾಡಿಗರಲ್ಲಿ ಸುಶಿಕ್ಷಿತರಾದವರಿಗೆ ಜೀವನದ ಜೀವಾಳದ ಅರಿವು ಉಂಟಾಗಬೇಕು ಅದರಿಂದ ಸಾಹಿತ್ಯೋನ್ನತಿಯುಂಟಾಗಬೇಕು ಸಾಹಿತ್ಯ ಪ್ರಚಾರದಿಂದ ನಾಡಿಗರಲ್ಲಿ ಎಚ್ಚರಿಕೆಯುಂಟಾಗಬೇಕು. ಸಮಾಜ ಸುಧಾರಣೆಯಿಂದ ಹೃದಯದ ಸಂಕುಚಿತ ಸ್ವಭಾವವು ನೀಗಿ, ವಿಶಾಲವಾಗಬೇಕು ವಿಶಾಲ ಹೃದಯವು ದೃಷ್ಟಿಸಂಕೋಚನವನ್ನು ಹೋಗಲಾಡಿಸಿ, ದೂರದೃಷ್ಟಿಯನ್ನೀಯಬೇಕು ಹೀಗಾದ ಪಕ್ಷದಲ್ಲಿ ಮತ್ತೇನುಳಿಯಿತು? ಕರ್ನಾಟಕದ ಉದ್ಧಾರವೇ ಆಯಿತು

ಇದಕ್ಕಾಗಿ ಎಲ್ಲರೂ ಪತ್ರಿಕೆಗಳನ್ನೋದುವ ಅಭ್ಯಾಸವನ್ನು ಮಾಡಬೇಕು ಮಕ್ಕಳು ಮರಿಗಳನ್ನು ಕೂಡಾ ಈ ವಿಷಯದಲ್ಲಿ ಎಚ್ಚರಗೊಳಿಸಿ ಎದೆಯುಬ್ಬುವ ಸಂಗತಿಗಳನ್ನಿತ್ತಿ ಹಿಡಿದು ಹೇಳಿ, ಅವರನ್ನು ಹುರಿದುಂಬಿಸಬೇಕು ಪ್ರತಿ ಶಾಲಾ ವಿದ್ಯಾರ್ಥಿಯೂ ಪತ್ರಿಕೆಗಳನ್ನೋದಬೇಕು ಅಲ್ಪಸ್ವಲ್ಪ ವಿದ್ಯಾವಂತರನ್ನೂ ನಿರಾಶೆಯಾಗಗೊಡದೆ ಉತ್ಸಾಹಿಸಬೇಕು ಎಂದರೆ ಮಾತ್ರ ಕನ್ನಡ ಜನಾಂಗ ಜಾಗ್ರತಿಯು ಶೀಘ್ರವಾಗಿಯೇ ಆಗುವುದು

ಮ ಜಾ

ಹಳ್ಳಿಯ ಹಾಡು.

ನೆಮ್ಮೂರ ಬಯಲಲ್ಲಿ ಹನ್ನೆರಡು ಕೊಡ ಕಂಡೆ
ನಮ್ಮಣ್ಣನವ್ರು ಬರುವದು, ಅತ್ತಿಗೆ
ಸಣ್ಣಕ್ಕಿ ಎಸರಿಡು ಬೇಗ ॥ ೧ ॥

ಅಣ್ಣನಮ್ಮವನವ್ರು ಅತ್ತಿಗೆ ನಮ್ಮವಳಲ್ಲ
ಬಂದೆಯ ಕೇಳ ಮಳೆ ಕೊಡ,
ಮನೆ ಕೊಡದ ಅತ್ತಿಗೆ ಅಣ್ಣ ಬಾರದೆ ಉಳಿಲ್ಲೇಳ ॥ ೨ ॥

ಅತ್ತಿಗೆ ಕಾಯಲ್ಲ ಹಿತ್ತಾಳಿ ಚನ್ನಲ್ಲ
ಹತ್ತಿ ಬಂದಡಿಕೆ ಮರನಲ್ಲ—
ಹೆಣ್ಣು ಮಕ್ಕಳಿಗೆ ಹುಟ್ಟಿದ ಮನೆಯುಸ್ಥಿರವಲ್ಲ ॥ ೩ ॥

ಅಣ್ಣ ತಮ್ಮಗೆ ವೈರಿ, ಎಣ್ಣೆ ಕಣ್ಣಿಗೆ ವೈರಿ
ಬೆಣ್ಣಿಂಗೆ ವೈರಿ ಬಿಸಿ ನೀರು, ಬಡವಂಗೆ
ತನ್ನಯ ನೆಳಲೇ ತಾ ವೈರಿ. ॥ ೪ ॥

ಅತ್ತೆ ಒಳ್ಳೆಯವಳಾಗಿ ಪುತ್ರ ಸಣ್ಣವನಾಗಿ
ಅತ್ತೆ ಮಾವನು ಹಿತರಾಗಿ ಇದ್ದರೆ
ಪುತ್ರಿ ಸಣ್ಣವಳನು ಕೊಡಲಕ್ಕು ॥ ೫ ॥

ಕೂಸು ಸಣ್ಣಕ್ಕನ ದೂರಿಲ್ಲ ಕೊಡಲಾಗ
ಮೂಡಣ ಕೇರಿಯ ಕುವರಂಗೆ ಕೊಟ್ಟರೆ
ಹೊಗಲಕ್ಕು ನಮಗೆ ಬರಲಕ್ಕು ॥ ೬ ॥

* * * * *

ಅರಸುಗಳ ಮಕ್ಕಳಿಗೆ ಕಲಿಸೇಡ ಬುದ್ಧಿಯ
ಕಲಿಸಿಕ್ಕು ದೇವ ಗರ್ಭದಲೆ ॥ ೭ ॥

ಒಳ್ಳೆಯವರ ಸೇರಿದರೆ ಒಳ್ಳೇ ಬುದ್ಧೀಯುಕ್ಕು
ಮರನ ಸೇರಿದರೆ ನೆಳಲಕ್ಕು ॥ ೮ ॥

ಬಂಗಾರು ತಾ ಮುದ್ದು ಬೆಳ್ಳಿ ತಾವರೆ ಮುದ್ದು
ಹಣ್ಣಾಳ್ಳ ವನಕೆ ಗಿಳಿ ಮುದ್ದು. ॥ ೯ ॥

ಕಣ್ಣಿಲ್ಲದ ಕುರುಡೇಗೆ ಚಿನ್ನದ ಹೆಂಡತಿಯೇಕೆ
ಎಣ್ಣೆ ಮಾರುವೋಂಗೆ ಮಡಿಯೇಕೆ ॥ ೧೦ ॥

ಸಂಗ್ರಾಹಕ—"ಪದ್ಮನಾಭ"

"ತಾಯಿಯೇ! ಈ ರೀತಿಯಲ್ಲಿ ಸುಂದರವಾದ ಉಡುಪುಗಳನ್ನು ಏತಕ್ಕೆ ಧರಿಸಿರುವೆ?" ಎಂದು ಕೇಳಿದನು.

"ನನ್ನ ಪ್ರೀತಿಯ ಗಂಡನೊಡನೆ ನಾನು ಪರಲೋಕವನ್ನು ಸೇರಲು ಇಚ್ಛೆವುಳ್ಳವಳಾಗಿದ್ದೇನೆ" ಎಂದು ಆಕೆಯು ಹೇಳಿದಳು.

"ತಾಯಿಯೇ! ಈ ಲೋಕವನ್ನು ಬಿಟ್ಟು ಪರಲೋಕವನ್ನು ಸೇರಲು ಇಷ್ಟು ಆತುರವೇಕೆ? ಈ ಎಲ್ಲ ಲೋಕಗಳೂ ಪರಮಾತ್ಮನಿಂದ ನಿರ್ಮಿತವಾದವುಗಳಲ್ಲವೆ?"

ಆ ಪತಿವ್ರತಾ ಸ್ತ್ರೀಗೆ ಏನೋ ಮನಸ್ಸಿನಲ್ಲಿ ಹೊಳೆಯಿತು. ಕೆಲ ಹೊತ್ತು ಆಲೋಚಿಸುತ್ತ "ಪರಲೋಕದಲ್ಲಿ ಏನಿದೆ. ಅದರಾಶೆಯು ನನಗಿಲ್ಲ. ನನ್ನ ಗಂಡನು ನನಗೆ ಬೇಕಾದ ಅವನೊಡನೆ ಇರ ಬೇಕೆಂಬುದೇ ನನಗೆ ಆಶೆ. ನನ್ನ ಗಂಡನು ನನಗೆ ಒಂದು ತಿಂಗಳೊಳಗೆ ಪುನಃ ದೊರಕುವನೊ ಎಂದು ನೋಡುವೆನು" ಎಂದು ಹೇಳಿ ಕಷ್ಟದಿಂದ ಇಳಿದು ಹೊರಟು ಹೋದಳು.

ತುಳಸಿ ದಾಸನು ಆ ದಿನ ರಾತ್ರಿಯಲ್ಲಿ ಆ ನದಿಯ ದಂಡೆಯ ಮೇಲೇ ಏನೊ ಆಲೋಚಿಸುತ್ತ ಮಲಗಿಕೊಂಡನು. ಆತಳ ಆತ್ಮಕ್ಕೆ ಆವನು ಯಾವ ರೀತಿಯ ಶಾಂತತೆಯನ್ನು ಕೊಡುತ್ತಿರುವನೆಂದು ಯಾರಿಗೂ ತಿಳಿದಿರಲಿಲ್ಲ. ಅವಳೂ ಕಠಿಣವಾದ ತಪಸ್ಸಿನಲ್ಲಿಯೇ ಇರುತಿದ್ದಳು.

ಆ ತಿಂಗಳು ಮುಗಿದ ಕೂಡಲೆ ಸುತ್ತು ಮುತ್ತಲಿನ ಜನರು ಅವಳ ಲ್ಲಿಗೆ ಬಂದು "ನಿನ್ನ ಕಳೆದು ಹೋದ ಗಂಡನು ನಿನಗೆ ಪುನಃ ದೊರಕಿ ದನೆ?" ಎಂದು ಆತುರದಿಂದ ಕೇಳಿದರು.

"ಅವನು ನನಗೆ ಸಿಕ್ಕಿರುವನು" ಎಂದಳು. ಅವಳ ಮುಖವು ಸಂತೋಷದಿಂದ ಅರಳಿದ್ದಿತು.

"ಅವನೆಲ್ಲಿರುವನು?"

ಆಕೆಯು ಹೇಳಿದಳು, "ರಾತ್ರಿ ಹಗಲೂ, ಅವನು ನನ್ನ ಹೃದಯ ದಲ್ಲಿ ವಾಸಿಸಿರುತ್ತಾನೆ"

ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?

— ೧ —

ಕರ್ನಾಟಕದಲ್ಲಿ ಈಗಾಗಲೇ ಹಲಕೆಲವು ಪತ್ರಿಕೆಗಳು, ಜನಿಸಿ ಯೌವನಾವಸ್ಥೆಯನ್ನು ಹೊಂದಿರುವುವಾದರೂ, ಅವುಗಳು ತಮ್ಮ ಪ್ರಾಯಕ್ಕೆ ತಕ್ಕುದಾದ ಉತ್ತೇಜನದಿಂದಲೂ, ಚಟುವಟಿಕೆಯಿಂದಲೂ ಕೆಲಸವನ್ನು ನಿರ್ವಹಿಸುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಮೊದ ಲೊಮ್ಮೆ ಮೇಲಿನ ವಿಷಯವು ಕರ್ನಾಟಕದ ಹಲವರ ಮನಸ್ಸನ್ನಾ ಕರ್ಷಿಸಿ ಅವರನ್ನು ಹಲಕೆಲವು ಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತಾದರೂ ಪತ್ರಿಕೆಗಳ ಪರಿಚಾಲನೆಯೆಂಬ ಆಕಾಶವು ಇನ್ನೂ ಮೋಡದಿಂದ ಮುಚ್ಚಿಕೊಂಡಿದೆ. ಅದು ಶುಭ್ರವಾಗಿ ಬೆಳಗಿ ದೇಶಬಾಂಧವರನ್ನು ಯಾವಾಗ ಉದ್ದೀಪಿಸುವುದೋ ಯಾರು ಬಲ್ಲ? ಎಷ್ಟೋ ಪತ್ರಿಕೆಗಳು ಜನಿಸುತ್ತಿರುವುವು. ಆದರೆ ಕರ್ನಾಟಕದ ದುರ್ದಶೆ ಯೆಂದೇ ಹೇಳಬೇಕು—ಕೆಲವು ತ್ವರಿತದಲ್ಲೇ ಅವಸಾನ ಹೊಂದುತ್ತಿರುವುವು; ನುರಿತಿರುವ ಸಂಪಾದಕ, ಚಾಲಕರ ಬೆಂಬಲವು ದೊರೆ ತರೂ ಕೂಡ ಹೆಚ್ಚಿನ ಪತ್ರಿಕಾ ಶಿಶುಗಳು ಎದ್ದು ನಿಂತುಕೊಳ್ಳುವಷ್ಟು ಚೈತನ್ಯವುಳ್ಳವುಗಳಾಗುವುದಿಲ್ಲ.

ಇದೇಕೆ ಹೀಗಾಯಿತು?—ಸಾಮಾನ್ಯ ಮನುಷ್ಯನಿಗೆ ಪತ್ರಿಕೆಯ ರುಚಿಯ ಅರಿವು ಇನ್ನೂ ಆಗಿರುವುದಿಲ್ಲ. ಅದನ್ನೋದುವುದಕ್ಕೆಂದು ವೆಚ್ಚ ಮಾಡುವ ಅವನ ಸಮಯವು ಅವನಿಗೆ ಮುಂದಕ್ಕೆ ಉತ್ತಮ ಫಲ ದಾಯಕವಾಗುವುದೆಂಬುದನ್ನು ಅವನು ಮರೆತೇ ಬಿಡುವನು. ಅಲ್ಲದೆ ಸದ್ಬೋಧನೆಯ ರೂಪದಿಂದ ಅದರ ಸತ್ಪ್ರಯೋಜನವನ್ನು ಅವನಿಗೆ ತಿಳಿಯಲೆಳಸುವವರೂ ಇಲ್ಲ. ಹೀಗಾಗಿ ನಮ್ಮ ಕರ್ನಾಟಕ ಪತ್ರಿಕಾ ಪರಿಚಲನಾ ಕಾರ್ಯವು ಮೂಲೆಗೊತ್ತಿಡಲ್ಪಟ್ಟು, ಅವನತಿಯ ಕಡೆಗೆ ಇಣಿಕಿ ನೋಡುತ್ತಾ ಇದೆ.

ವರ್ತಮಾನ ಪತ್ರಿಕೆಗಳ ಓದುವಿಕೆಯಿಂದ ದೊರೆಯುವ ಲಾಭ ಗಳನ್ನು ಆಂಗ್ಲೇಯರ ಆಬಾಲವೃದ್ಧರೆಲ್ಲರೂ ಸಂಪೂರ್ಣ ಮನಗಂಡಿ ರುವರು. ಪತ್ರಿಕಾ ವಾಚನವು ಅವರ ದಿನನಿತ್ಯದ ಅಭ್ಯಾಸಗಳಲ್ಲಿ ಒಂದಾಗಿ ಹೋಗಿರುತ್ತದೆ ಎಂದ ಮೇಲೆ ರಾಷ್ಟ್ರಾಭಿವೃದ್ಧಿಗೆ ಕುಂದೇನು?

ಆಂಗ್ಲೇಯರಲ್ಲಿ ಪ್ರಬಲವಾದ ಸ್ವಾತಂತ್ರ್ಯಾಸಕ್ತಿಯ ಬೆಳಕು ಉಜ್ವಲವಾಗಿ ಬೆಳಗುತ್ತಾ, ಇತರ ದೇಶಗಳನ್ನು ಜರೆಯುತ್ತಿರಲು ಕಾರ ಣವೇನು? ಅಲ್ಪ ಜನಸಂಖ್ಯಾತರಾದ ಅವರ ಜನಾಂಗವು ಬಹು ಸಂಖ್ಯಾತರಾದ ನಮ್ಮ ಮೇಲೆ ಅಧಿಕಾರವನ್ನು ತೋರಿಸಿ, ಮೆರೆಯಲು ಕಾರಣವೇನು? ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ ಗಳೆಂಬ ಉಚ್ಚ, ಉಚ್ಚತರ ಮತ್ತು ಉಚ್ಚತಮವಾದ ಗುಣಗಳು ಅವರ ಸ್ತ್ರೀ, ಬಾಲ, ವೃದ್ಧರಲ್ಲಿ ನೆಲೆಗೊಂಡಿರಲು ಕಾರಣವೇನು? ವ್ಯಾಪಾರ ವ್ಯವಹಾರಗಳಲ್ಲೂ, ಬುದ್ಧಿಕುಶಲತೆಗಳಲ್ಲೂ ಅವರನ್ನು ಅಗ್ರಗಣ್ಯರನ್ನಾಗಿ ಮಾಡಿದ ಆ ಯಂತ್ರವಾವುದು? ಬರೀ ಲೋಕ ವ್ಯವಹಾರ ಜ್ಞಾನ! ಪತ್ರಿಕಾ ವಾಚನದಿಂದ ಗಳಿಸಿದ ವಿವಿಧ ತಿಳು ವಳಿಕೆಯ ಅವರ ಆದೊಂದು ವಾಸನೆ—ಅಲ್ಲದೆ ಪುಸ್ತಕದ ಬದನೆ ಕಾಯಿಗಳು ಅವರಿಗೆ ಶ್ರೇಯಸ್ಸನ್ನುಂಟು ಮಾಡಲಿಲ್ಲ. ಪತ್ರಿಕೆಗಳ ಪ್ರಚಂಡ ಪ್ರಭಾವದ ಹೆದರಿಕೆಯಿದ್ದುದರಿಂದಲೇ ಸರಕಾರವು ಆರ್ಡಿ ನೆನ್ಸುಗಳನ್ನು ಮುದ್ರಣಾಲಯಗಳ ಮೇಲೆ ಹೇರುತ್ತವೆ. ಆಂಗ್ಲೇಯರಲ್ಲಿ ಎಂತಹ ದರಿದ್ರನೇ ಇರಲಿ!— ಅವನು ವರ್ತಮಾನ ಪತ್ರಗಳನ್ನು ಓದದಿಲ್ಲ; ಕೂಲಿಯಾಳುಗಳಿಂದ ಮೊದಲುಗೊಂಡು ಅರಸನ ವರೆಗೂ ಎಲ್ಲರೂ ಪತ್ರಿಕೆಗಳ ಮಧ್ಯೆಯೇ ಬೆಳೆಯುತ್ತಿರುವರು. ಪತ್ರಿಕಾ ವಾಚನವಲ್ಲ!—ಪಠನೆಯೇ ಅವರಲ್ಲಿನ ಚಟ! ಇದಕ್ಕೆ ಅವರ ರಾಷ್ಟ್ರೀಯ ಭಾಷೆಯೂ ಧಾರಾಳವಾಗಿ ಸಹಾಯವನ್ನೀಯುತ್ತದೆ. ಆದರೆ ಕರ್ನಾಟಕದಲ್ಲೋ? ಓದು ತಿಳಿಯದವನಿಗೆ ವರ್ತಮಾನ ಪತ್ರಿಕೆಗಳೆಂದರೇನೆಂದು ತಿಳಿಯದು. ಮಾತ್ರವಲ್ಲದೆ ಅವೇನೆಂದು ತಿಳಿಯಬೇಕೆಂಬ ಲವಲವಿಕೆಯೂ ಕೂಡ ಅವನಲ್ಲಿಲ್ಲ,— ಹೋಗಲಿ! ಅಲ್ಪಸ್ವಲ್ಪ ವಿದ್ಯಾವಂತರಾದರೋ?—ಅವರು ಪತ್ರಿಕೆಗಳ ಓದುವಿಕೆಯ ಕಡೆಗೆ ಸಂಪೂರ್ಣ ಅಲಕ್ಷ್ಯರಾಗಿಯೇ ಇರುವರು. ಏಕೆ? ಜ್ಞಾನಾಭಿ ವೃದ್ಧಿಯನ್ನು ಮಾಡಲು ಎಳ್ಳಷ್ಟು ಕುತೂಹಲವಿಲ್ಲದವರಿಗೆ ಇದರ

ಆದರೆ ಅಗಸ್ಟಿನ್ ಯುಗದ ವಿಭೂತಿಗಳಾದ "ವರ್ಜಿಲ್" (Virgil) "ಹೋರೆಸ್" (Horace) "ಲಿವೀ" (Livy) ಈ ಮೂವರು ಲೇಟಿನ್ ಸಾಹಿತ್ಯಕ್ಕೆ ಗೌರವಪ್ರಾಯರಾಗಿದ್ದಾರೆ. ಅಗ ಸ್ಟಿನ್ ಯುಗದ ಜನಜೀವನವೂ, ರಾಜನೀತಿಯೂ ಶಾಂತಿಮಯ ವಾತಾ ವರಣವೂ ಇವರ ಕೃತಿಗಳಲ್ಲಿ ಪ್ರತಿಬಿಂಬಿತಗಳಾಗಿವೆ. ಇವರ ಅಭಿ ವೃದ್ಧಿಗೂ ಅಗಸ್ಟಿನನೇ ಕಾರಣನಾಗಿರುತ್ತಾನೆ. ಈ ಮಹಾನ್ ವ್ಯಕ್ತಿ ಗಳ ಅನಂತರ "ಪ್ರೋಪರ್ಟಿಯಸ್" (Propertius) "ಓವಿಡ್" (Ovid) "ಟೀಬೂಲಸ್" (Tibullus) ಈ ಮೂವರು ವಿಶೇಷ ವಾಗಿ ಉಲ್ಲೇಖನೀಯರು. ಇವರೆಲ್ಲರಲ್ಲಿಯೂ ಸರ್ವ ಶ್ರೇಷ್ಠ ಮೇಧಾ ವಿಯೂ ಕಲೆಯ ಮೂರ್ತಿಯೂ ಆದ ವರ್ಜಿಲನು "ಏನಿಡ್" (Aeneid B. C.) ಎಂಬ ಗ್ರೀಕ್ ಕಾವ್ಯವನ್ನು ಬರೆದನು. ಈ ಕಾವ್ಯವು ಇಂದಿಗೂ ಜಗತ್ತಿನ ಮುಖ್ಯ ಕಾವ್ಯಗಳಲ್ಲಿ ಗಣಿಸಲ್ಪಡುತ್ತದೆ. "ಇಕ್‌ಲೋಗಸ್" (Eclogues) ಮತ್ತು "ಜೋರ್ಜಿಕ್ಸ್" (Georgics) ಇವರು ತಮ್ಮ ಕಾವ್ಯಗಳಲ್ಲಿ ಗ್ರಾಮಜೀವನದ ಉಜ್ವಲ ಚಿತ್ರ ಗಳನ್ನು ಚಿತ್ರಿಸಿದ್ದಾರೆ.

"ಹೋರೆಸ್" (Horaces 68–8 B. C.)ನ ಲೇಖನಗಳು ಹಾಸ್ಯ ಮಯ ಮೋಹಪ್ರದಗಳಾಗಿವೆ. ಈತನ ಲೇಖನಗಳಲ್ಲಿ ಆ ಕಾಲದ ಸಮಾಜದ ರೀತಿ, ರಿವಾಜುಗಳು ಸುಂದರವಾಗಿ ಚಿತ್ರಿತವಾಗಿವೆ. ಈ ಕೃತಿಗಳು ಈತನ ಅಮರಕೀರ್ತಿ ಸ್ತಂಭಗಳಾಗಿವೆ.

'ಓವಿಡನು' ಆ ಕಾಲದ ಉತ್ತಮ ಕವಿಗಳ ಗಣನೆಗೆ ಬಾರದಿದ್ದರೂ ಈತನ ಕೃತಿಗಳ ಪ್ರಭಾವವು ಚಾಸರ್, ಮಾರ್ಲೋ, ಸ್ಪೆನ್ಸರ್, ಶೇಕ್ಸ್ ಪಿಯರ್, ಮಿಲ್ಟನ್, ಡ್ರಾಯಡೆನ್, ಎಡಿಸನ್ ಮೊದಲಾದವರ ಕೃತಿ ಗಳಲ್ಲಿ ಚೆನ್ನಾಗಿ ಕಂಡುಬರುತ್ತಿವೆ.

ರೌಪ್ಯಯುಗ—ಈ ಯುಗದಲ್ಲಿ "ಸೀನೆಕಾ" (Seneca 5 B. C.–65 A. D.) "ಟಸಿಟಸ್" (Tacitus 54–120 A. D.) "ಜೂವೆನಲ್" (Juvenal 60–140 A. D.) ಮೊದಲಾದವರ ಹೆಸರುಗಳು ಉಲ್ಲೇಖನೀಯವಾಗಿವೆ. ಈ ಯುಗದ ರಾಜನೀತಿಕ, ಸಾಮಾಜಿಕ, ಮಾನಸಿಕ, ನೀತಿಗಳು ಇವರ ಕೃತಿಗಳಲ್ಲಿ ಪ್ರತಿಬಿಂಬಿತ ಗಳಾಗಿವೆ. ಸೀನೇಕನು ಗ್ರೀಕ್ ನಾಟಕಗಳ ಆಧಾರದಿಂದ ಹಲವು ದುಃಖಾಂತ ನಾಟಕಗಳನ್ನು ಬರೆದನು. ಮಧ್ಯ ಕಾಲದಲ್ಲಿ ಈತನು ಬರೆದ ಪತ್ರಗಳು ಸದಾಚಾರ, ನೀತಿಗಳ ವಿಷಯವಾಗಿ ಬಹಳ ಪ್ರಚ ಲಿತವಾಗಿದ್ದುವು. ಜುವೆನಲನು ತನ್ನ ಕವಿತೆಯಲ್ಲಿ ಆ ಕಾಲದ ರೋಮಿನ ಭೋಗವಿಲಾಸ, ಚಾರಿತ್ರ ಹೀನತೆ, ಪಾಪಾಚರಣೆ, ಅನೀತಿ ಮೊದಲಾದುವುಗಳನ್ನು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಿದ್ದಾನೆ.

ಈ ಕಾಲದ ಗದ್ಯ ಮತ್ತು ಇತಿಹಾಸ ಲೇಖಕರಲ್ಲಿ "ಟಸಿಟಸ್"ನು ಗಣ್ಯನಾದವನು. ಮಧುರ ಭಾಷೆ, ಕವಿತ್ವಪೂರ್ಣ ಕಲ್ಪನಾ ಶಕ್ತಿ, ಪ್ರಭಾವಶಾಲೀ ಚರಿತ್ರ ಚಿತ್ರಣಗಳಲ್ಲಿ ಈತನಿಗೂ ಕಾರ್ಲಾಯಿ'ಲನಿಗೂ ಅನೇಕ ಸಮಾನತೆಗಳಿವೆ. ಈತನ ಪ್ರಧಾನ ಗ್ರಂಥವು "ಎನ್ನಾಲಸ್" (Annals) ಇದರಲ್ಲಿ ಕ್ರಿ. ಪೂ. 14ರಿಂದ 68ರ ವರೆಗೆ ರೋಮಿನ ಇತಿ ಹಾಸವು ಬರೆಯಲ್ಪಟ್ಟಿದೆ. ಇದರ ಅನಂತರ ನವೀನ ಕಾಲವು ಪ್ರಾರಂಭವಾಗಿ 14ನೆಯ ಶತಮಾನದ ವರೆಗೂ ಲೇಟಿನ್ ಸಾಹಿತ್ಯವು ಜೀವಂತವಾಗಿತ್ತು. ಸಾಹಿತ್ಯ ದೃಷ್ಟಿಯಿಂದ ಮಧ್ಯಕಾಲವೇ ಮಹತ್ವ ದ್ದಾಗಿದ್ದು ಈ ಕಾಲದಲ್ಲಿ ಭಾಷೆ ಮತ್ತು ಸಾಹಿತ್ಯದಲ್ಲಿ ಸಾಕಷ್ಟು ಪ್ರಗತಿಗಳಾಗಿವೆ. 10ನೆಯ ಶತಮಾನದ ವರೆಗೆ ಫ್ರಾನ್ಸ್, ಇಟಲಿ, ಸ್ಪ್ಯಾನಿಶ್ ಗಳ ಲಿಖಿತ ಭಾಷೆಯು ಲೇಟಿನೇ ಆಗಿತ್ತು. 12ನೆಯ ಶತಮಾನಕ್ಕಾಗುವಾಗ ಈ ದೇಶಗಳು ತಂತಮ್ಮ ಭಾಷೆಗಳನ್ನು ರಚಿಸಿ ಕೊಂಡು ಅವುಗಳಲ್ಲೇ ಭಾವಪ್ರಕಾಶನ ಮಾಡತೊಡಗಿದುವು. 18ನೆಯ ಶತಮಾನಕ್ಕಾಗುವಾಗ ಇಂಗ್ಲಿಷ್ ಕೂಡಾ ಸಾಹಿತ್ಯ ರಚನೆಗೆ ಯೋಗ್ಯ ವಾಯಿತು. ಈಗ ಲೇಟಿನ್ ಭಾಷೆಯು ಸಮಸ್ತ ಯುರೋಪಿ ನಲ್ಲಿಯೂ ಪ್ರಸಿದ್ಧವಾಗಿದ್ದು ಭಾರತೀಯರಿಗೆ ಸಂಸ್ಕೃತವು ಹೇಗೋ ಹಾಗೆಯೇ ಪಾಶ್ಚಾತ್ಯರಿಗೆ ಪವಿತ್ರ ಭಾಷೆಯಾಗಿ ನಿಂತಿದೆ.

ಕಳಿಂಗದ ಗಂಗರಾಜ ವಂಶ.

ಲೇಖಕ:—ಬಿ. ಶಂಕರ ಭಟ್, ಸೈಂಟ್ ಆಗ್ನೆಸ್ ಹೈಸ್ಕೂಲು ಮಂಗಳೂರು.

ಐದನೇ ಶತಮಾನದ ಅಂತ್ಯದಲ್ಲಿ ದಕ್ಷಿಣ ಭಾರತದಲ್ಲಿ ಗಂಗ ವಂಶದ 81ನೇ ಯುವನಾದ ನರಸಿಂಹನು ಗಂಗವಾಡಿಯ ಕೋಲಾಹ ಲದಲ್ಲಿ ಶಾಸಕನಾಗಿದ್ದನು. ಈತನ ಮರಣನಂತರ ಈತನ ತಮ್ಮನು ತನ್ನ ಅಣ್ಣನ ಐವರು ಪುತ್ರರನ್ನೂ ಓಡಿಸಿ, ತಾನೇ ರಾಜಗದ್ದುಗೆಯನ್ನೇ ರಿದನು. ಕಾಮಾರ್ಣವ, ಗುಣಾರ್ಣವ, ದಾನಾರ್ಣವ, ವಜ್ರಹಸ್ತ ನರಸಿಂಹರೆಂಬ ಈ ಐವರು ಅಣ್ಣತಮ್ಮಂದಿರು ಚಿಕ್ಕತಂದೆಯಿಂದ ಹೊರಡಿಸಲ್ಪಟ್ಟವರಾಗಿ ತಮ್ಮ ತಾಯಿಯ ಸಮೇತ ಹೊರಟು ತಮ್ಮದೇ ಒಂದು ಸ್ವಂತ ರಾಜ್ಯವನ್ನು ಸ್ಥಾಪಿಸುವ ಇಚ್ಛೆಯಿಂದ ಉತ್ತರ ದಿಕ್ಕಿಗೆ ಪ್ರಯಾಣ ಬೆಳೆಸಿದರು. ಆ ಕಾಲದಲ್ಲಿ ಮಾದರವಂಶದ ಅಂತಿಮ ರಾಜನಾದ ಸಬಲಾದಿತ್ಯನು ಕಳಿಂಗದೇಶದ ಶಾಸಕನಾಗಿದ್ದನು. ಈ ಐವರೂ ಅಣ್ಣತಮ್ಮಂದಿರು ಸಬಲಾದಿತ್ಯನನ್ನು ಸೋಲಿಸಿ ಕಳಿಂಗದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ಮಹೇಂದ್ರವೆಂಬ ಪರ್ವತ ಶಿಖರದಲ್ಲಿ ವಾಸಿಸ ತೊಡಗಿದರು. ಸುತ್ತುಮುತ್ತಿನ ಹಳ್ಳಿಗಾಡಿನ ಜನರು ಇವರನ್ನು ಪಂಚಪಾಂಡವರೆಂದೂ ಇವರ ತಾಯಿಯನ್ನು ಕುಂತಿ ಎಂದೂ ತಿಳಿಯ ತೊಡಗಿದರು. ಪರ್ವತ ಶಿಖರದಲ್ಲಿರುವ ಅನೇಕ ದೇವಮಂದಿರಗಳಲ್ಲಿ ಗೋಕರ್ಣೇಶ್ವರನ ಮಂದಿರವು ಮುಖ್ಯವಾದುದು. ಈ ದೇವಮಂದಿರಗಳು ಈ ಅಣ್ಣತಮ್ಮಂದಿರ ಪೂರ್ವಾಧಿಕಾರಿಗಳಿಂದ ನಿರ್ಮಿಸಲ್ಪಟ್ಟವೆಂಬ ಜನಶ್ರುತಿ ಇದೆ. ಇದಕ್ಕನುಸಾರವಾಗಿ ಯುಧಿ ಷ್ಠಿರ, ಭೀಮ, ಕುಂತಿಯವರ ಹೆಸರಿನಲ್ಲಿ ಮಂದಿರಗಳಿದ್ದು ಅರ್ಜುನನ ಹೆಸರಿನಲ್ಲಿ ಮಂದಿರವಿಲ್ಲದಿರುವುದರಿಂದ ಮಂದಿರ ನಿರ್ಮಾಣ ಕಾಲ ದಲ್ಲಿ ಅರ್ಜುನನು ಎಲ್ಲಿಯೋ ಹೊರಹೋಗಿದ್ದನೆಂದೂ ಜನರ ಅಭಿ ಪ್ರಾಯವಿದೆ. ಅಲ್ಲಿಯ ಜನರು ಯುಧಿಷ್ಠಿರನೆಂದು ತಿಳಿಯುತ್ತಿದ್ದ ಕಾಮಾರ್ಣವನಿಗೂ, ಅರ್ಜುನನೆಂದು ತಿಳಿಯುತ್ತಿದ್ದ ದಾನಾರ್ಣವನಿಗೂ ಏನೋ ಜಗಳ ಉಂಟಾಗಿ ದಾನಾರ್ಣವನು ಹೊರಗೆ ಹೋಗಿದ್ದನು. ಈ ಅಣ್ಣತಮ್ಮಂದಿರೂ ಒಗ್ಗಟ್ಟಿನಲ್ಲಿರುವಾಗ ಗೋಕರ್ಣೇಶ್ವರನನ್ನೇ ಪೂಜಿಸುತ್ತಿದ್ದರು. ಜಗಳ ಬಂದ ಮೇಲೆ ಇವರು ತಮ್ಮ ತಮ್ಮ ಹೆಸರಿ ನಲ್ಲಿ ಪೂಜೆಗಾಗಿ ಬೇರೆ ಬೇರೆ ದೇವ ಮಂದಿರಗಳನ್ನು ನಿರ್ಮಿಸಿ

ಹಳು— ಕಡೆಗೆ ಈ ದೇವಮಂದಿರಗಳೇ ಪಾಂಡವರ ಮತ್ತು ಕುಂತಿಯ ಹೆಸರಿನಿಂದ ಪ್ರಸಿದ್ಧವಾಗಿರಬೇಕು.

ಹಿರಿಯವನಾದ ಕಾಮಾರ್ಣವನು ದಂತಪುರವನ್ನು ರಾಜಧಾನಿಯನ್ನಾಗಿ ಮಾಡಿ ಕಳಿಂಗ ರಾಜ್ಯವನ್ನು ಆಳಿದನು. ದಂತಪುರವೆಂದು ಹೆಸರು ಬರಲಿಕ್ಕೆ, ತತ್ಕಾಲೀನ ಕಳಿಂಗ ರಾಜನೊಬ್ಬನು ಬುದ್ಧದೇವನ ಒಂದು ದಂತವನ್ನು ಮಂಜೂಷ (ಪೆಟ್ಟಿಗೆ) ದೊಳಗಿಟ್ಟು ಒಂದು ಸ್ತೂಪದಲ್ಲಿ ಸ್ಥಾಪಿಸಿದನು. ಈ ಕಾರಣದಿಂದ ದಂತಪುರವೆಂಬ ಹೆಸರು ಬಂತು. ಈ ದಂತಪುರವು ಈಗಿನ ಮಂದ ಸಾ (ಯಾ ಮಂಡ ಸಾ) ಆಗಿರಬೇಕು. ಏಕೆಂದರೆ ಮೊದಲಿಗೆ ಮಂಜೂಪುರವೆಂಬ ಕೂಡ ಹೆಸರಿದ್ದು ಅದರ ಅಪಭ್ರಂಶವೇ ಮಂದಸವಾಗಿರಬೇಕು. ಮಂದಸವು ಈಗ ಒಂದು ಸಣ್ಣ ಗ್ರಾಮವಾಗಿದ್ದರೂ ಆ ಕಾಲದಲ್ಲಿ ಮಂದಸದಿಂದ ದಕ್ಷಿಣಕ್ಕೆ ಮಹೇಂದ್ರತನಯಾ ನದಿಯ ವರೆಗೂ ಮಂದಸ ಪಟ್ಟಣವು ಹರಡಿತ್ತು. ಮಹೇಂದ್ರತನಯಾ ತೀರದಲ್ಲಿರುವ ಪಟೇಶ್ವರ ಮಂದಿರದಲ್ಲಿ ಸಿಕ್ಕಿದ ಶಿಲಾಲೇಖದಲ್ಲಿ ಈ ಭೂಮಿಯ ವಿಸ್ತಾರವು ಮಹೇಂದ್ರ ಪರ್ವತದಿಂದ ಈಗಿನ ಮಂದಸದ ಸಮುದ್ರ ತಟದ ವರೆಗೂ ಹರಡಿತ್ತು. ಇದಕ್ಕೆ ದಂತಪುರವೆಂಬ ಹೆಸರಿತ್ತೆಂದು ಗೊತ್ತಾಗುತ್ತದೆ. ಬೌದ್ಧ ಇತಿಹಾಸದಲ್ಲಿ ಹೇಳಿದ ದಂತಪುರವೂ ಈ ಶಿಲಾಲೇಖದಲ್ಲಿ ಹೇಳಿದ ದಂತಪುರವೂ ಒಂದೇ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

೪೪೪೭ ಕಲಿಯುಗಾಬ್ದದಲ್ಲಿ (1297 ಶಕಾಬ್ದ ಅರ್ಥಾತ್ 1375 ಇಸವಿ) ಅಥವಾ ವೀರಭಾನುವಿನ ಆಳಿಕೆಯ 29ನೇ ವರ್ಷದಲ್ಲಿ ಈ ಶಿಲಾಲೇಖವು ಕೆತ್ತಲ್ಪಟ್ಟಿದೆ. ಈ ಶಿಲಾಲೇಖದಲ್ಲಿ ದಂತಪುರದಲ್ಲಿ ಆಳುತ್ತಿದ್ದ ವೀರಭಾನುವು ದಂತಿ ಎಂಬ ಗ್ರಾಮವನ್ನು ಪಟೇಶ್ವರ ದೇವರಿಗೆ ಕಾಣಿಕೆ ಬಿಟ್ಟನೆಂದೂ ಉತ್ಕಲ ಭಾಷೆಯಲ್ಲಿ ಬರೆದಿದೆ. ಈ ಶಿಲಾಲೇಖದಲ್ಲಿ ಹೇಳಿದ ಸ್ಥಾನವೇ ಗಂಗರ ದಾನಾರ್ಣವನ ರಾಜಧಾನಿಯಾದ ದಂತಪುರವೆಂಬುದರಲ್ಲಿ ಸಂಶಯವಿಲ್ಲ. ಕೆಲವರ ಅಭಿಪ್ರಾಯದಲ್ಲಿ ಜಗನ್ನಾಥ ಪುರಿಯೇ ದಂತಪುರವೆಂದಿದೆ. ಆದರೆ ಹೀಗಾಗಲು ಸಂಭವವಿಲ್ಲ.

ಈ ಐವರು ಅಣ್ಣತಮ್ಮಂದಿರು ಸಂಪೂರ್ಣ ಕಳಿಂಗವನ್ನು ಸ್ವಾಧೀನ ಮಾಡಿಕೊಂಡರು. ಹಿರಿಯವನಾದ ಕಾಮಾರ್ಣವನು ಈ ರಾಜ್ಯವನ್ನು ತನ್ನ ನಾಲ್ವರು ತಮ್ಮಂದಿರಿಗೆ ಹಂಚಿಕೊಟ್ಟನು. (1) ಕಂಠಿಕಾ ಮಂಡಲ [illegible]ವನ್ನು ದಾನಾರ್ಣವನಿಗೆ ಕೊಟ್ಟನು. ಈ ಸ್ಥಾನವು ವರ್ತಮಾನ ಸಮಯದ ಮುಖಲಿಂಗಮ್ಮಿನಿಂದ ವಿಶಾಖ ಪಟ್ಟಣದ ವರೆಗೆ ಇರುವ ಭಾಗವಾಗಿತ್ತು. ಮುಖಲಿಂಗಮ್ಮಿನ ಸಮೀಪದ ನಾಗರ ಯಾ ನಗರ (Nagari, Catack)ಯು ಇವನ ರಾಜಧಾನಿಯಾಗಿತ್ತು. (2) ಗುಣಾರ್ಣವನಿಗೆ "ಬಬ್ಬದೀ" ರಾಜ್ಯವನ್ನು ಕೊಟ್ಟನು. ಇದೇ ಬಬ್ಬದೀ ಎಂಬ ಹೆಸರು ಪರಿವರ್ತನೆ ಹೊಂದಿ ಬಿಹಾರ್ ಪ್ರಾಂತ್ಯದ ವರ್ತಮಾನ ಬಮುಂಡಾ ಯಾ [illegible] ಎಂಬುದಾಗಿರಬೇಕು. ಇವನ ರಾಜಧಾನಿಯು ದೇವದುರ್ಗ ಯಾ ದೇವಗಡವಾಗಿತ್ತು. (3) ವಜ್ರಹಸ್ತನಿಗೆ "ಕಂಟಕವರ್ತಿನಿ"ಯನ್ನು ಕೊಟ್ಟನು. ಇದು ಒರಿಸಾ, ಬಿಹಾರ್ ಪ್ರಾಂತ್ಯದಲ್ಲಿರುವ ವರ್ತಮಾನ "ಕಾಲಾಹಂಡಿ"ಯೇ ಆಗಿರಬೇಕು. ಇವನ ರಾಜಧಾನಿಯು "ಭವಾನಿ ಪಟ್ಟಣ"ವಾಗಿತ್ತು. ಈ ನಾಲ್ವರ ತಮ್ಮಂದಿರ ಪಟ್ಟಣಗಳಲ್ಲಿಯೂ ಗೋಕರ್ಣೇಶ್ವರನ ಮಂದಿರಗಳಿವೆ.

ಈ ಪ್ರಕಾರವಾಗಿ ಐವರು ಅಣ್ಣತಮ್ಮಂದಿರು ಬೇರೆ ಬೇರೆ ಕಡೆ ಆಳ ತೊಡಗಿ ಕಡೆಗೆ ಒಬ್ಬರಿಗೊಬ್ಬರು ಸ್ವತಂತ್ರರಾಗಿ (1) ಕ್ಷತ್ರಪತಿ (2) ಗಜಪತಿ (3) ನರಪತಿ (4) ಅಶ್ವಪತಿ (5) ಭೂಪತಿ ಎಂಬ ಬಿರುದುಗಳನ್ನು ಧರಿಸಿಕೊಂಡರು.

ಕಾಮಾರ್ಣವನು ೩೬ ವರ್ಷಗಳ ವರೆಗೆ ಕಳಿಂಗವನ್ನಾಳಿ ದಿವಂಗತನಾದನು. ಇವನ ಸ್ಥಾನವನ್ನು ಇವನ ತಮ್ಮನಾದ ದಾನಾರ್ಣವನು ಕಳಿಂಗವನ್ನು ತೆಗೆದುಕೊಂಡು ಆಳತೊಡಗಿದನು. ಕಾಮಾರ್ಣವನ ಪುತ್ರರು ಅಲ್ಪ ವಯಸ್ಕರೂ ದುರ್ಬಲರೂ ಅಯೋಗ್ಯರೂ ಆದುದರಿಂದ ದಾನಾರ್ಣವನು ಕಳಿಂಗ ರಾಜ ಗದ್ದಿಯ ಮೇಲೆ ಕುಳಿತನೆಂದು ಚೋಡ್ಗಂಗೆಯ "ಕರ್ಣೀ" ತಾಮ್ರ ಪತ್ರದಲ್ಲಿ ಬರೆದಿದೆ. ಇದಕ್ಕೆ ಮೊದಲು ದಾನಾರ್ಣವನೂ ತನ್ನ ಅಣ್ಣನಿಂದ ದೊರಕಿದ 'ಕಂಠಿಕಾವಂಥುರಾಕಂಠ'ವನ್ನು ೩೬ ವರ್ಷಗಳ ವರೆಗೆ ಅಗತ್ಯವಾಗಿ ಆಳಲೇಬೇಕು. ದಾನಾರ್ಣವನು ನಾಲ್ಕು ವರ್ಷಗಳ ವರೆಗೆ ಕಳಿಂಗವನ್ನಾಳಿದನು. ಅಂತು ದಾನಾರ್ಣವನು ೪೦ ವರ್ಷಗಳ ವರೆಗೆ ರಾಜ್ಯವಾಳಿ ಪರಲೋಕ ಯಾತ್ರೆಯಾದನು. ಈತನು ೪೦ ವರ್ಷಗಳ ವರೆಗೆ ರಾಜ್ಯವಾಳಿದನೆಂದು ಅನಂತವರ್ಮನ ಚೋಡ್ಗಂಗೆಯ ಕರ್ಣೀ ತಾಮ್ರ ಪತ್ರದಲ್ಲಿ ಬರೆದಿದೆ. ಇವನ ಮರಣಾನಂತರ ಇವನ ವಂಶದವರು ಕಳಿಂಗವನ್ನು ಆಳಿದರು. ಆದರೂ ಕಳಿಂಗ ನಗರದ ದಕ್ಷಿಣದ ಮಹೇಂದ್ರಗಿರಿಯ ಉತ್ತರದ ಕೆಲವು ಭಾಗವನ್ನು ಆಳುತ್ತಿದ್ದರೆಂದು ತಿಳಿದು ಬಂದಿದೆ. ಕಾಮಾರ್ಣವನ ವಂಶಜರ ಪ್ರತಿಯೊಂದು ದಾನ ಪತ್ರಗಳಲ್ಲಿಯೂ ವರ್ಮನೆಂಬ ಉಪಾಧಿಯೂ ಗೋಕರ್ಣೇಶ್ವರೋಪಾಸಕ, ಗಂಗವಂಶೋದ್ಭವ, ಕಳಿಂಗ ರಾಜ ಎಂಬ ಉಪಾಧಿಗಳೂ ಉಲ್ಲೇಖಿಸಲ್ಪಟ್ಟಿವೆ. ಈ ಗಂಗ ವಂಶಜರು ೧೧೦೪ರ ವರೆಗೂ ಕಳಿಂಗ ರಾಜ್ಯವನ್ನಾಳಿದರು. ಗಂಗವಂಶದ ಪ್ರತಾಪೀ ರಾಜನೊಬ್ಬನಾದ ೯೯೯ ಶಕಾಬ್ದ ೩ ಫಾಲ್ಗುಣ ಶನಿವಾರ (೧೭ ಫೆಬ್ರವರಿ ೧೦೭೮)ದಂದು ಚೋಡ್ಗಂಗ ದೇವಕೇಸರೀ ವಂಶದ ಉತ್ಕಲವನ್ನಾಳುತ್ತಿದ್ದ ಅಂತಿಮ ರಾಜನಾದ ಸ್ವರ್ಣ ಕೇಸರೀ ಮುಕುಂದ ದೇವನನ್ನು ಸೋಲಿಸಿ ಉತ್ಕಲವನ್ನಾಳುತ್ತಿದ್ದ ಅಂತಿಮರಾಜನಾದ ಸ್ವರ್ಣ ಕೇಸರಿ ಮುಕುಂದ ದೇವನನ್ನು ಸೋಲಿಸಿ ಉತ್ಕಲ, ಕಳಿಂಗಗಳ ಅಧೀಶ್ವರನಾಗಿ ಕಟಕದಲ್ಲಿ ರಾಜಧಾನಿಯನ್ನಾಗಿ ಮಾಡಿದನು. ಈತನು ಉತ್ಕಲವನ್ನು ಗೆದ್ದ ಮೇಲೆ ವೈಷ್ಣವಮತಾವಲಂಬಿಯಾಗಿ ಪುರಿಯ ಜಗನ್ನಾಥ ಸ್ವಾಮಿಯ ಭಕ್ತನಾಗಿ ರಾಜ್ಯವಾಳಿದನು.

ರಣಭೇರಿ.

(ಲೇಖಕ:—ಪಿ. ಸದಾನಂದ ನಾಯಕ್.)

ಅಂದು ರವಿವಾರ ರವಿರಥವು ಭರದಿಂದ ಪಡುವಣ ಕಲತ್ತಡ ಸಾಗಿತು. ಮುಸ್ಸಂಜೆಯು ಕಳೆದು ಕತ್ತಲೆಯು ಕವಿಯಿತು. ನಾನು 'ಸಿಂಹಗಡ' ಸಿನೆಮವನ್ನು ನೋಡಿ ಮನೆಗೆ ಹಿಂದಿರುಗಿದೆನು. ಉಂಡು ಕೋಣೆಯನ್ನು ಸೇರಿದೆನು. ಆರಾಮ ಕುರ್ಚಿಯಲ್ಲಿ ಒರಗಿ, ಅಲ್ಲೇ ಮೇಜಿನ ಮೇಲೆ ಬಿದ್ದಿದ್ದ ಅಂದಿನ ವಾರ್ತಾ ಪತ್ರಿಕೆಯನ್ನು ಓದ ತೊಡಗಿದೆನು. ಕಣ್ಣು ಕೂರಿತು. ಅವಸರದಿಂದ ಹಾಸಿಗೆಯನ್ನು ಹಾಸಿ, ದೀಪವನ್ನು ನಂದಿಸಿ ಮಲಗಿಕೊಂಡೆನು. ಬಹಳ ದಣಿದಿದ್ದ ಕಾರಣ್ಯದಿಂದ ನಿದ್ರಾಂಗನೆಯು ಬೇಗನೆ ಒಲಿದಳು.

ಮಧ್ಯ ರಾತ್ರಿ ಗಂಟೆ ಹನ್ನೆರಡಾಗಿರಬಹುದು. ಎಲ್ಲೆಲ್ಲಿಯೂ ನೀರವ. ನಟ್ಟಿರುಳ ನಿಶ್ಶಬ್ದತೆಯನ್ನು ನಶಿಸಿ ಕಗ್ಗತ್ತಲೆಯ ಕರಾಳತೆಯನ್ನು ಹೆಚ್ಚಿಸುವಂತೆ ರಣಭೇರಿಯು ಹೊಡೆಯಲ್ಪಟ್ಟಿತು. ಎಲ್ಲರೂ ಎಚ್ಚತ್ತರು. ನಾನೂ ಎದ್ದೆನು. ಇದೇನು ಕೋಲಾಹಲ! ಶತ್ರುಗಳು ದಾಳಿಯಿಟ್ಟರೇ? ಅಂತೆಯೇ ಇರಬೇಕು. ಇಲ್ಲದಿದ್ದಲ್ಲಿ ಅಂಥ ಕೋಲಾಹಲವಾದರೂ ಏತಕ್ಕೆ ಇದ್ದೀತು? ಮಾತೃಭೂಮಿಯ ರಕ್ಷಣೆಗಾಗಿ ಪ್ರಾಣವನ್ನು ಈಯಲೇ ಬೇಕು; ಇಂತೆಂದು ಭಯವನ್ನು ಬಿಟ್ಟು ಕವಚವನ್ನು ತೊಟ್ಟು, ಕುಲಾಯಿಯನ್ನಿಟ್ಟು, ಸಶಸ್ತ್ರರಾಗಿ ಅಶ್ವಾರೂಢರಾಗಿನಾನೂ ನನ್ನ ಮಿತ್ರ ರಮಾನಂದನೂ ಯುದ್ಧಕ್ಕನುವಾಗಿ ತ್ವರೆಯಿಂದ ರಣರಂಗದತ್ತ ಹೋದೆವು. ಸಾವಿಗಂಜದ ಸಾವಿರಾರು ಸೈನಿಕರು ಸುಸಜ್ಜಿತರಾಗಿ ಸೇರಿದ್ದರು. ನಾಯಕನು ಸೇನಾ ನಿರ್ಮಾಣ ಕಾರ್ಯವನ್ನು ತ್ವರಿತದಿಂದ ಮಾಡಿದನು. ರಣವಾದ್ಯವು ಮೊಳಗಲು, ಕುದುರೆಗಳು ಕೆನೆಯಲು, ಉತ್ಸಾಹವು ಉಕ್ಕಿ ಎಲ್ಲೆಯನ್ನು ಮೀರಲು, ಸಾವು ಗೆಲವನ್ನದೆ ನಾವೆಲ್ಲರೂ ಯುದ್ಧಕ್ಕೆ ಸಿದ್ಧರಾಗಿ ನಿಂತೆವು. ಸೂಚನೆಯನ್ನು ಕೊಡಲು ಯುದ್ಧಾರಂಭವಾಯಿತು.

ಅಂದಿನ ಕದನದ ಭೀಕರತೆಯನ್ನು ಮಾತುಗಳು ಹೇಳಿ ಮುಗಿಸಲಾರವು. ವೀರರನೇಕರು ರಣಘೋಷವನ್ನು ಮಾಡುತಿದ್ದಂತೆ ಭೂಸ್ಥಾಯಿಯಾದರು. ಕತ್ತಿಯ ಕಡಿತದಿಂದಾದ ಕೆನ್ನೀರ ಪ್ರವಾಹವು ಹರಿದು ಹಳ್ಳಗಳಾದವು. ರಮಾನಂದನು ನಾನು ನೋಡುತ್ತಿದ್ದ ಹಾಗೆ ಅರಿಭಟನೊಬ್ಬನ ಖಡ್ಗಕ್ಕೆ ಬಲಿಯಾದನು. ಮಿತ್ರನ ಮರಣದಿಂದ ನೊಂದು ಬೆಂದು ನಾನು ಅರಿವಿಗೆ ಬರುವ ಮುನ್ನ ಶತ್ರುಸೈನಿಕನೊಬ್ಬನು ಕೂರಸಿಯನಾಂತು ನನ್ನತ್ತ ಬರುತಿದ್ದನು. ಕೈದುವನ್ನೆತ್ತೋಣವೆಂದರೆ ನನ್ನಲ್ಲಿ ಶಕ್ತಿಯಿಲ್ಲ, ಧೈರ್ಯವಿಲ್ಲ. ಆತನು ನನ್ನನ್ನು ಸಮೀಪಿಸಿ, ಖಡ್ಗವನ್ನು ನನ್ನೆದೆಗೆ ಸರಿಯಾಗಿ ಹಿಡಿದು "ಶರಣಾಗತನಾಗು, ಇಲ್ಲವೇ ಸಾಯಲು ಸಿದ್ಧನಾಗು" ಎಂದು ಕಠಿಣೋಕ್ತಿಯನ್ನಾಡಿದನು. ಹಾ! ದೇವರೇ ಇದೇನು ಪ್ರಯಾದ! ಶರಣಾಗತನಾಗಲೇ? ಛೆ! ಅದೆಂದಿಗೂ ಕೂಡದು. ಧೈರ್ಯವನ್ನು ಮಣ್ಣುಪಾಲು ಮಾಡಿ ಶರಣಾಗತನಾಗಿ, ಮರಣಕ್ಕಿಂತಲೂ ಭಯಂಕರವಾದ ದುಷ್ಕೀರ್ತಿಯ ಮಡುವಿನಲ್ಲಿ ನಿಮಿಷ ನಿಮಿಷಕ್ಕೂ ಹೆದರುತ್ತ ಮುಳುಗುವುದಕ್ಕಿಂತಲೂ ಧೈರ್ಯದಿಂದ ಯುದ್ಧ ಮಾಡಿ ವೀರ ಪುರುಷನಂತೆ ಈ ದೇಹವನ್ನು ರಣರಂಗದಲ್ಲಿ ಬಿಟ್ಟು ಶಾಶ್ವತವಾದ ಕೀರ್ತಿ ವಿಮಾನವನ್ನೇರಿ ಮುಕ್ತಿಯನ್ನು ಪಡೆಯುವುದು ಶ್ರೇಯಸ್ಕರವಲ್ಲವೇ? ಆದರೆ ನಾನು ಅನುಭವಿಸುತ್ತಿರುವ ಲೌಕಿಕ ಸುಖ ಸಂಪತ್ತುಗಳನ್ನು ಬಿಟ್ಟು ಹೋಗುವುದಾದರೂ ಅದೆಂತು? ಇಂತೀ ಪರಿಯ ಭಾವನೆಗಳಿಂದ ನಾನು ತತ್ತರಿಸುತ್ತಿರಲು ಥಟ್ಟನೆ ಎಚ್ಚರವಾಯಿತು. ಮೈ ಬೆವರಿತ್ತು! ಕೈಕಾಲುಗಳು ತಣ್ಣಗಿದ್ದುವು, ಬೆಳಕು ಮೂಡಿತ್ತು. ಇದೇನು ಅದೊಂದು ಬರಿಯ ಕನಸು.

ವಿದ್ಯಾಲಯದ ತರ್ಕ ಸಭೆಗಳಲ್ಲಿ "ಯುದ್ಧ ಮೇಲೋ, ಶಾಂತಿ ಮೇಲೋ?" ಎಂಬ ಚರ್ಚಾಸ್ಪದ ವಿಷಯದಲ್ಲಿ ಕೂಡ ಯುದ್ಧ ಕ್ಕಿಂತ ಶಾಂತಿಯೇ ಎಂದೆಂದಿಗೂ ಮೇಲಾಗಿರುವುದೆಂಬುದಾಗಿ ಉದ್ದುದ್ದ ಭಾಷಣಗಳನ್ನು ಮಾಡುತಿದ್ದ ನಾನು ಯುದ್ಧವನ್ನು ಮಾಡುವೆನೆಂತು? ಯುದ್ಧದ ಭೀಕರತೆಗೆ ಮನಸ್ಸಿನಲ್ಲಿ ಇಂಬಿಲ್ಲವೇ ಕೂಡದಿದ್ದ ನಾನು ರಣದ ವಿಷಯ ಕನವರಿಸುವುದಾದರೂ ಅದೆಂತು? ಇಂತೀ ಬಗೆಯ ಭಾವನಾತರಂಗಗಳಿಂದ ಅಂತರಂಗದ ಅಂತರಾಳವು ಅಲೆದಾಡುತ್ತಿರಲು ರಮಾನಂದನು ಕೋಣೆಯನ್ನು ಪ್ರವೇಶಿಸಿದನು. ನನ್ನ ಕನಸಿನ ವಿಷಯವನ್ನೆಲ್ಲಾ ಅವನೊಡನೆ ಹೇಳಿಬಿಟ್ಟೆನು. ಅವನು ನಗುತ್ತ "ಏನು ಸದಾನಂದ! ಅಂದು ಹಂಪನಕಟ್ಟೆಯಲ್ಲಿ "ಲಾಠಿ ಛಾರ್ಜ್" ಆಗುವಾಗ ನೀನು ಹೆದರಿ ಓಡಿ ಹೋದುದನ್ನು ಮರೆತಂತಿದೆ. ನೀನು ಕನಸಿನಲ್ಲಾದರೂ ಯುದ್ಧ ಮಾಡಿದೆಯೆಂದರೆ ಅದು ಕೇವಲ ಅಸಂಬದ್ಧ ಪ್ರಲಾಪವು. ನಿನ್ನೆ ಮಲಗುವ ಮುಂಚೆ ವಾಲ್ಮೀಕಿ ರಾಮಾಯಣದ ಯುದ್ಧ ಕಾಂಡವನ್ನು ಓದಿದ್ದೆಯೇ? ಹೋ! ಈಗ ನೆನಪಿಗೆ ಬಂತು. ನಿನ್ನೆ 'ಸಿಂಹಗಡ' ಸಿನೆಮಕ್ಕೆ ಹೋಗಿದ್ದೆಯಷ್ಟೆ! ನಿನ್ನೀ ಕನಸು 'ಸಿಂಹಗಡ'ದ ಫಲಿತಾಂಶವು" ಎಂದನು.

"ಭಲಾ! ರಮಾನಂದ! ಚೆನ್ನಾಗಿ ಊಹಿಸಿದೆ. ಸಿಂಹಗಡದಲ್ಲಿ ಮಾಳವರು ಮೊಗಲರೊಡನೆ ಮಾಡಿದ ಯುದ್ಧದ ಭೀಕರತೆಯೂ ತಾನಾಜಿಯು ತೋರಿದ ಅಸಮಾನ ಸಾಹಸವೂ ನಾನು ಮಲಗುವ ಮೊದಲು ಮನಸ್ಸನ್ನು ಆವರಿಸಿದ್ದುವು" ಎಂದೆನು.

ಇಂತು 'ಸಿಂಹಗಡ'ವೇ ನನ್ನ ಕನಸಿಗೆ ಕಾರಣವೆಂದರಿತು ಚಿತ್ತ ಸ್ವಾಸ್ಥ್ಯವನ್ನು ಪಡೆದೆನು.

ಸತಿ

ತನ್ನ ಗಂಡನ ಶವದ ಕಾಲಿನ ಹತ್ತಿರ ಕಾಷ್ಠದ ಮೇಲೆ ಅವಳು ಕುಳಿತಿದ್ದಳು. ಸುಂದರವಾದ ಸೀರೆಯನ್ನು ಉಟ್ಟುಕೊಂಡಿದ್ದಳು. ಹಣೆಯ ಮೇಲೆ ದೊಡ್ಡದಾದ ತಿಲಕವನ್ನು ಇಟ್ಟಿದ್ದಳು. ಮದುವೆಯ ಚಪ್ಪರಕ್ಕೆ ಹೋಗುವಂತೆ ಅವಳು ತೋರುತ್ತಿದ್ದಳು. ಬ್ರಾಹ್ಮಣರು ಕಾಷ್ಠದ ಸುತ್ತಲೂ ನಿಂತುಕೊಂಡಿರುವರು. ಅವರಲ್ಲೊಬ್ಬನು ಅದಕ್ಕೆ ಬೆಂಕಿಯನ್ನು ಕೊಡಲು ಸಿದ್ಧನಾಗಿದ್ದನು.

ಆಗ ಸಂತ ತುಳಸಿದಾಸನು ಆ ಮಾರ್ಗವಾಗಿ ಹೋಗುತ್ತಿದ್ದನು. ಇದನ್ನು ನೋಡಿ ಅಲ್ಲಿಗೆ ಹೋದನು. ಸತಿಯು ಸಂತನನ್ನು ಕಂಡು ನಮಸ್ಕರಿಸಿದಳು.

ಕಾಂಗ್ರೆಸ್ ಸ್ವರಾಜ್ಯ ಪಕ್ಷವು ಮಹಾತ್ಮರನ್ನು ಬಿಟ್ಟಿತು!!!

"ಕಣ್ಣಿದ್ದೂ ಕುರುಡರಂತೆ ಗಾಂಧಿಯವರನ್ನನುಸರಿಸದಿರಿ!"

ಅಥವಾ

"ದಣಿದ ಕುದುರೆಯಿಂದ ಕೆಳಗಿಳಿಯೋಣ"

ಕಾಂಗ್ರೆಸ್ ಪಕ್ಷೀಯರಲ್ಲಿ ದಿನೇ ದಿನೇ ಭಿನ್ನಾಭಿಪ್ರಾಯಗಳು ಹೆಚ್ಚಾಗುತ್ತಿವೆ. ಮಹಾತ್ಮರನ್ನು ಅಲಕ್ಷಿಸಿ ನಡೆಯಬೇಕೆಂದೆನ್ನುವವರೊಳಗೂ ಅವರನ್ನನುಸರಿಸಬೇಕೆಂದೆನ್ನುವವರೊಳಗೂ ಅಭಿಪ್ರಾಯ ಭೇದಗಳುತ್ಪನ್ನವಾಗಿವೆ. ಈ ವಾರದ ರಾಜಕೀಯ ವಾತಾವರಣವು ವಿಶೇಷವಾಗಿ ಬದಲಾಗಿರುವುದಿಲ್ಲ. ಮಹಾತ್ಮರು ತಮ್ಮ ಭಾರತ ಸಂಚಾರದ ಸಿದ್ಧತೆಯಲ್ಲಿರುವರು. ಪಂಡಿತ ಜವಾಹರಲಾಲರು ಕಾಂಗ್ರೆಸ್ಸಿನ ಸಂಪೂರ್ಣ ಸ್ವಾತಂತ್ರ್ಯವಾದವನ್ನು ಪದೇ ಪದೇ ಬಯಲಿಗೆಳೆಯುತ್ತಿರುವಾಗ, ಅವರು ಮಿ। ಎಚ್. ಕೆ. ಹೇಲ್ಸ್ ಎಂಬವರ ಪತ್ರಕ್ಕೆ ಉತ್ತರಕೊಡುತ್ತಾ, ವೈಟ್ ಪೇಪರನ್ನು "ನಿಷ್ಪ್ರಯೋಜಕ ಧೋರಣೆ" ಯೆಂದೂ, "ಕಾಂಗ್ರೆಸ್ಸನ್ನು ಅನ್ಯ ಜನಾಂಗೀಯರ ಕೈಯಲ್ಲಿ ಕೊಡುವುದು ಹಿಂದೀಯರ ಧರ್ಮವಲ್ಲ" ವೆಂದೂ "ಇಂಗ್ಲಿಷರು ತಪ್ಪಿದರೆ ಹಿಂದೀಯರು ಅಧೋಗತಿಗಿಳಿಯುವರೆಂಬ ಮಾತಿಗೆ ಅರ್ಥವಿರುವುದಿಲ್ಲ" ವೆಂದೂ ಹೇಳಿರುವರು. ಜವಾಹರಲಾಲರ ಮತದಂತೆ ಹಿಂದೂಸ್ಥಾನವು ಪ್ರಜಾಗಣದ ಬಹುಮತದ ಮೇಲೆಯೇ ಆಳಲ್ಪಡಬೇಕೆಂದು ಅಗಿದೆ. ದೇಶದ ಸಣ್ಣ ಸಣ್ಣ ಪಂಗಡಗಳವರನ್ನು ಆರ್ಜಗಳಿಂದ ಯಾವ ಫಲವಿಲ್ಲವೆಂದೂ, ಸಕಾರಣವಾಗಿ ವಾದಿಸಿ, ಕಾಂಗ್ರೆಸ್ಸಿನ ಮುಂದಿನ ನಡೆಯನ್ನು ನಿರ್ಧರಿಸಲು ಸಿದ್ಧರಾಗುವ ಯಾವುದೇ ನೆಯೂ ತಾನು ಆಲೋಚಿಸುವೆನೆಂದೂ ಶ್ರೀ ಜವಾಹರಲಾಲರು ಹೇಳಿರುವರು. ಶ್ರೀಯುತ ನರಿಮಾನರೂ ಮೊನ್ನೆ ಬಿಡುಗಡೆ ಹೊಂದಿದ ಮೇಲೆ ಮುಂಬಾಯಿಯಿಂದ ಒಂದು ಪ್ರಕಟಣೆಯನ್ನು ಹೊರಡಿಸಿ ಕಾಂಗ್ರೆಸ್ಸಿನ ಮುಂದಿನ ಚಲನವಲನವು ಹೇಗಿರಬೇಕೆಂದು ಹೇಳಿರುವರು. ಶ್ರೀ. ನರಿಮಾನರು ಹೇಳುವುದೇನೆಂದರೆ:—"ಕಾಂಗ್ರೆಸ್ಸನ್ನು ಮುರಿಯಬಾರದು. ಅದನ್ನು ಬಿಟ್ಟು ಹೋಗಬಾರದು. ಅದರೊಳಗಿದ್ದು ರಾಷ್ಟ್ರ ಸೇವೆಗಾಗಿ ಹೆಣಗಾಡಬೇಕು. ಮಹಾತ್ಮಾಜೀಯವರ ಮುಂದಾಳುತ್ವವು ನಮಗೆ ಅತ್ಯಗತ್ಯವೆಂಬುದೇನೂ ನಿಜವಾದ ಮಾತು. ಆದರೆ ನಮ್ಮ ಜನರಿಗೆ ಅವರೆಂದರೆ ಪೂಜಾಪಾತ್ರರಾಗಿದ್ದಾರೆ ತಮ್ಮ ಆತ್ಮಪ್ರೇರಣೆಯನ್ನು ದುರ್ಲಕ್ಷಿಸಿ ನಾವು ಮಹಾತ್ಮಾಜೀಯವರನ್ನನುಸರಿಸುವುದು ದೇಶಕ್ಕೆ ಹಿತ ರವಲ್ಲ. ಮಹಾತ್ಮರಲ್ಲಿ ಒಂದು ತರನಾದ ವಶೀಕರಣ ಶಕ್ತಿಯಿದ್ದರೂ ರಾಜಕೀಯ ಹಿತವನ್ನು ಬಯಸುವವರು ಅದರಿಂದ ಹೊರಗಿನ್ನು ವರ್ತಿಸಬೇಕಾಗಿದೆ" ಶ್ರೀ ನರಿಮಾನರು ಗಾಂಧೀಜಿಯವರ ಧುರೀಣತ್ವವನ್ನು ಬಹಳವಾಗಿ ಶ್ಲಾಘಿಸುತ್ತಿದ್ದು ಕಾಂಗ್ರೆಸ್ಸಿನ ಹಿತದೃಷ್ಟಿಯಿಂದ ಮಾತನಾಡುವುದರಿಂದ ಅವರ ಈ ಸಲಹೆಗಳು ಅನುಚಿತವೆಂದು ಹೆಚ್ಚಿನ ರಾಷ್ಟ್ರೀಯ ಪತ್ರಿಕೆಗಳು ಹೇಳುವುದಿಲ್ಲ. ಆದರೆ ಮದ್ರಾಸ್ ಮತ್ತು ಮಧ್ಯಪ್ರಾಂತ್ಯಗಳಲ್ಲಿ ತಲೆಯೆತ್ತಿರುವ ಕೆಲವು ಪಾರ್ಟಿಗಳು ಯಾರ ಅನುಮೋದನೆಗೂ ಪಾತ್ರವಾಗಿರುವುದಿಲ್ಲ. ಮದ್ರಾಸಿನ ಕಾಂಗ್ರೆಸ್ ಸ್ವರಾಜ್ಯ ಪಾರ್ಟಿಯೆಂಬುದು ಗಾಂಧೀಜಿಯವರನ್ನೂ ಕಾಂಗ್ರೆಸ್ಸನ್ನೂ ಅಲ್ಲಗಳೆದು ಮುಂದೆ ನಡೆಯಲು ಹವಣಿಸುತ್ತಿರುವುದನ್ನು ಕಂಡು ರಾಷ್ಟ್ರೀಯ ಪತ್ರಿಕೆಗಳೂ ದೂರದೃಷ್ಟಿಗಳೂ ಅಂತಹ ಸಂಸ್ಥೆಯನ್ನು ಟೀಕಿಸಗೆಳದಿರುತ್ತಾರೆ. ಜವಾಹರಲಾಲರೂ ನರಿಮಾನರೂ ಮದ್ರಾಸಿನ ಈ ಪಾರ್ಟಿಗಳನ್ನು ವಿಶ್ವಾಸಪ್ರಿಯರಾಗಿ ಕಾಣುವುದಿಲ್ಲ. ಕಾಂಗ್ರೆಸ್ಸಿನವರು ಕಾಂಗ್ರೆಸ್ಸಿಗೆ ವಿರುದ್ಧರಾಗಿ ನಿಲ್ಲುವರು ಅಹಿತವಿರುವುದರಿಂದ ಈ ಪಾರ್ಟಿಗಳವರು ಸ್ಥಿತಿಗತಿಗಳನ್ನು ಸಮಾಲೋಚಿಸಿಕೊಳ್ಳುವುದು ಯೋಗ್ಯವಿದೆಯೆಂದು ಅರಿಕೆಗಳು ಆಗಿವೆ.

ಗುಂಟೂರಿನಲ್ಲಿ ಕಾಂಗ್ರೆಸ್ ಸ್ವರಾಜ್ಯ ಪಾರ್ಟಿಯವರು ಒಂದು ಅರಿಕೆಯನ್ನು ಹೊರಗೆಡವಿ, ತಾವು ಸದ್ಯಕ್ಕೆ ಏಕೆ ಕಾಂಗ್ರೆಸ್ಸಿನ ಹೊರಗೆ ನಿಂತಿರುವೆವೆಂದು ವಿವರಿಸಿರುವರು. ಕಾಯಿದೆಭಂಗ ಚಳವಳದಲ್ಲಿ ತಮಗೆ ಮೊದಲು ಭರವಸೆಯಿದ್ದಿತೆಂದೂ, ಆದರೆ ಅದು ಈಗಿನ ಪರಿಸ್ಥಿತಿಯಲ್ಲಿ ಪ್ರಯೋಜನರಹಿತವಾಗದೆಂದೂ ಅವರ ಮಾತು. ಸ್ವಾತಂತ್ರ್ಯ ಸಂಪಾದನೆಯ ಉದ್ಯಮದಲ್ಲಿ ಶಾಸನೋಲ್ಲಂಘನಾ ಚಳವಳವು ಕೊನೆಯವರೆಗೆ ಯುಕ್ತವಾಗದೆಂದೂ, ಅದು ನಿರ್ಬಲರೂ ನಿಶ್ಶಸ್ತ್ರರೂ ಅನುಸರಿಸುವ ಕಾರ್ಯಕ್ರಮವೆಂದೂ ಅವರ ಹೇಳಿಕೆ. ಕಾಂಗ್ರೆಸ್ ಸ್ವರಾಜ್ಯ ಪಾರ್ಟಿಯು ಕೌನ್ಸಿಲು ಪ್ರವೇಶವನ್ನು ನಿರ್ಧರಿಸಿರುವುದಿಲ್ಲವೆಂದು ಈಗ ಪ್ರಕಟಿಸಿರುತ್ತಾರೆ. ಅಲ್ಲದೆ ಕೌನ್ಸಿಲು ಪ್ರವೇಶವು ಇನ್ನು ೩ ವರ್ಷಗಳಿಗೆ ಸಾಧ್ಯವಿಲ್ಲವೆಂದೂ ಹೇಳುತ್ತಾರೆ. ಮದ್ರಾಸಿನ ಈಗಿನ ನ್ಯಾಯ ವಿಧಾಯಕ ಸಭೆಗೆ ಗವರ್ನರರು ಪುನಃ ೧ ವರ್ಷದ ಜೀವನವನ್ನು ಕೊಟ್ಟಿರುವುದರಿಂದ ಈ ಪಾರ್ಟಿಯು ಈಗ ಈ ರೀತಿ ಹೇಳಿರುತ್ತದೆಂದು ಒಂದು ಪತ್ರಿಕೆಯ ಮಾತು. ನ್ಯಾಯ ವಿಧಾಯಕ ಸಭೆಗಳಿಗೆ ಪ್ರವೇಶಿಸಬೇಕೆಂದು ದಿನೇ ದಿನೇ ಆರ್ಭಟಿಸುತ್ತಿದ್ದ ಈ ರಾಷ್ಟ್ರೀಯವಾದಿಗಳ ಗುಲ್ಲು ಈಗ ಸ್ವಲ್ಪ ಕಡಿಮೆಯಾಗಿದೆ. ಕೌನ್ಸಿಲಿಗೆ ಇನ್ನೊಂದು ವರ್ಷದ ಜೀವನವನ್ನು ದಾನ ಮಾಡಿರುವುದರಿಂದ ಈ ಪಾರ್ಟಿಗಳ ಉಸಿರು ಕಟ್ಟಿದಂತಾಗಿದೆ. ಕಾಂಗ್ರೆಸ್ಸಿನ ಕೆಲವು ಅನುಯಾಯಿಗಳು ಮಹಾತ್ಮರ ಮೇಲೆ ಭಕ್ತಿಯುಳ್ಳವರಾಗಿ ತಮ್ಮ ಗುರಿಯನ್ನೇ ಮರೆಯುತ್ತಿರುವುದರಿಂದ ದೇಶದ ಹೆಜ್ಜೆಯು ತಪ್ಪುತ್ತಿದೆಯೆಂದು ಈ ಸ್ವರಾಜ್ಯ ಪಾರ್ಟಿಯವರ ವಾದ. ಈ ಪಾರ್ಟಿಯವರ ಮೊದಲಿನ ಗುರಿಯು ತಪ್ಪಿಹೋದುದರಿಂದ ಮುಂದಕ್ಕೆ ತಾವು ಶ್ವೇತಪತ್ರ ಸಿರೋಧವನ್ನು, ಕರಾಚಿ ಕಾಂಗ್ರೆಸ್ಸಿನ ಠರಾವಿನ ಪರವಾಗಿ ಪ್ರಚಾರ ಕಾರ್ಯವನ್ನೂ ಮಾಡುವೆವೆಂದಿರುವರು. ಇವರ ಈ ಕಾರ್ಯಗಳು ಎಷ್ಟರವರೆಗೆ ಜಯಶೀಲವಾಗುವುವೆಂದು ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ. ಇಷ್ಟರ ತನಕ ಇವರ ಪಕ್ಷಕ್ಕೆ ಜನಮತವು ದೊರೆತಿರುವುದಿಲ್ಲ. ಶ್ರೀ ಸತ್ಯಮೂರ್ತಿಯವರೂ ಕೂಡಾ ಕೌನ್ಸಿಲು ಪ್ರವೇಶ ಮಾಡಬೇಕೆಂದು ಇಷ್ಟರ ತನಕ ಹೇಳುತ್ತಿದ್ದರು. ಆದರೆ ಗವರ್ನರರ ಪ್ರಕಟಣೆಯು ಅವರನ್ನೂ ನಿಲ್ಲಿಸಿರುತ್ತದೆ. ಶ್ರೀ ಅವಸ್ಥಾದಾಸ ಮೇಧಾವಿಯವರೂ ಶ್ರೀ ಸತ್ಯಮೂರ್ತಿಯವರಂತೆಯೇ ಆಲೋಚನೆಗೆ ಬಲಿ ಬಿದ್ದಿರುವರು. ಒಂದು ವೇಳೆ ಈ ಸಲ ಹೊಸ ಕೌನ್ಸಿಲು ಚುನಾವಣೆಯು ನಡೆಯುತ್ತಿದ್ದರೆ ರಾಷ್ಟ್ರ ಪಕ್ಷೀಯರಲ್ಲಿ ಕೆಲವರಿಗಾದರೂ ಸ್ಥಾನಗಳು ದೊರೆಯುತ್ತಿದ್ದುವು. ಕಾಂಗ್ರೆಸ್ ಪಕ್ಷೀಯರು ಕೌನ್ಸಿಲುಗಳನ್ನು ಪ್ರವೇಶಿಸಿದರೆ ಕೌನ್ಸಿಲುಗಳ ನೆಮ್ಮದಿಯು ತಪ್ಪುವುದೆಂದೇ ಭಾವಿಸಿ ಇಂತಹ ಸರಕಾರವು ಕೌನ್ಸಿಲನ್ನು ಇನ್ನೊಂದು ವರ್ಷ ಮುಂದಕ್ಕೆ ಹಾಕಿತೆಂದು ಮದ್ರಾಸಿನ ಪತ್ರಿಕೆಗಳನ್ನುತ್ತಿವೆ.

ಭಾಗಲಪುರದ ನಿವಾಸಿಗಳು ಶ್ರೀ ಸಚ್ಚಿದಾನಂದ ಸಿಂಹರವರಿಗೊಂದು ಮಾನ ಪತ್ರವನ್ನರ್ಪಿಸಿದರು. ಶ್ರೀ ಸಿಂಹರು ಮಾತನಾಡುತ್ತಾ ಪ್ರಸ್ತುತ ರಾಜಕೀಯ ಸ್ಥಿತಿಯನ್ನು ವಿವರಿಸಿ "ರಾಷ್ಟ್ರಪಕ್ಷೀಯರೊಳಗೆ ಭಿನ್ನ ಮತಗಳು ತಲದೋರಿದರೆ ದೇಶಕ್ಕೆ ಮಹಾ ವಿಪತ್ತು ಸಂಭವಿಸುವುದು. ಎಲ್ಲಾ ಪಂಗಡಗಳವರು ವಿಶಾಲ ಮನಸ್ಸಿನಿಂದ ಒಂದಾಗಿ ಕಲೆತು ಬಂದ ಸಂಕಷ್ಟವನ್ನು ಪರಿಹರಿಸಲು ನೋಡಬೇಕು. ಹಳೆಯ ವಿಧಾನಗಳು ಫಲಕಾರಿಯಾಗದಿದ್ದರೆ ಹೊಸ ವಿಧಾನಗಳನ್ನು ಹೂಡಿ ಮುಂದೊತ್ತುವ ಸಾಹಸಿಗರು ಈಗ ಬೇಕಾಗಿದ್ದಾರೆ. ನಿಷ್ಫಲವಾಗಿರುವುದಾದರೂ ಹಳೆಯ ಕ್ರಮಗಳನ್ನೇ ಅನುಸರಿಸಿ ನಡೆಯಬೇಕೆನ್ನುವುದು ಯಾವ ದೃಷ್ಟಿಯಿಂದಲೂ ಸುಖದಾಯಕವಲ್ಲ. ಪಕ್ಷದ ಗೌರವವನ್ನುಳಿಸುವುದಕ್ಕಾಗಿ ರಾಷ್ಟ್ರದ ಏಳಿಗೆಯನ್ನು ಬಲಿಗೊಡುವುದು ಅಸಂಗತ" ವೆಂದು ಹೇಳಿದರು. ಸ್ವರಾಜ್ಯ ಪಾರ್ಟಿಯವರ ಚಟುವಟಿಕೆಗಳ ಮೇಲೆ ಸಿಂಹರು ವಿಶ್ವಾಸವಿದ್ದಂತೆ ಮಾತನಾಡಲಿಲ್ಲ. ಕಲ್ಕತ್ತದಲ್ಲೂ

> ### ಸ್ವಕೀಯ ನೋಟಗಳ ಬಾಣ!
>
> ಕಳೆದ ಆದಿತ್ಯವಾರ ಸಂಜೆ ಕೆನರಾ ಹೈಸ್ಕೂಲಿನಲ್ಲಿ "ಸುಗ್ರೀವ ಪಟ್ಟ" ಮತ್ತು "ಅಂಗದ ಸಂಧಾನ"ವೆಂಬ ಯಕ್ಷಗಾನವು ನಡೆಯಿತು. ಜಿಲ್ಲಾ ಜಡ್ಜರವರೂ ದಯಮಾಡಿಸಿದ್ದರು! ಪುತ್ತೂರಿನ "ನಾಡ ಹಬ್ಬ"ದಲ್ಲಿನ ಮೋಡವು ಕಾಣಲಿಲ್ಲವಷ್ಟೆ!
>
> † † † †
>
> ಪ್ರೊಫೆಸರ್ ಸುದರ್ಶನದಾಸ್ ಎಂ. ಎಸ್‌ಸಿ. ಇವರು ಇಲ್ಲಿಯ ಗವರ್ನಮೆಂಟ್ ಕಾಲೇಜಿನಲ್ಲಿ ಅಧ್ಯಾಪಕ ಕೆಲಸವನ್ನು ತೊರೆದು ಸ್ವೀಡನ್ ದೇಶವನ್ನು ಪಡೆಯ ಬಯಸಿರುವರು. ವಿಷಯದ ಮಾತು ... ಅನು ... ತಿಳಿದು ಬಂದಿದೆ
>
> † † † †
>
> ... ಹನುಮಂತನು ಲಂಕೆಗೆ ಹಾರಿದಂತೆ ಸಲ್ಲವೇ?
>
> † † † †
>
> ಕುದ್ರೋಳಿ ದೇವಸ್ಥಾನದ ಸಮೀಪ, ಹಿಂದೂಸ್ಥಾನೀ ಹುಡುಗರ ಶಾಲೆಯ ಬಳಿ ಮುನಿಸಿಪಾಲಿಟಿಯವರು ಔದಾರ್ಯದಿಂದ ಒಂದು ಗ್ಯಾಸ್ ಲೈಟನ್ನು ಇರಿಸಿದ್ದಾರೆ! ಸ್ತುತ್ಯ! ಆದರೆ ಅವರ ಔದಾರ್ಯತೆ ಏನು ಮಾರಾಯ ಸ್ತ್ರೀಯರೂ ಔದಾರ್ಯದಿಂದಲೇ ಒಟ್ಟೊಟ್ಟು ದೀಪಗಳನ್ನಿಟ್ಟು ರಾತ್ರಿ ೧೦ ಗಂಟೆಯ ವರೆಗೂ ಮಾರುತ್ತಾರೆ. ಹಲ್ತಾಸೀಸರರ ಅಪ್ಪಣೆಯಿದೆಯೋ?
>
> ++ ++

ಸ್ವರಾಜ್ಯ ಪಾರ್ಟಿಯವರು ಚಳವಳಾರಂಭಿಸಿರುವರು. ಡಾಕ್ಟರ್ ಬಿಧಾನ್ ಚಂದ್ರ ರಾಯ್‌ರವರು ಸ್ವರಾಜ್ಯ ಪಾರ್ಟಿಯವರ ಕಾರ್ಯದ ಮೇರೆಗೆ ಕೆಲಸಮಾಡಲಾರಂಭಿಸಿರುವರು. ಬಹು ಮತವು ಬಲವಾಗಿದ್ದಲ್ಲಿ ಬಂಗಾಳದ ಸ್ವರಾಜ್ಯ ಪಾರ್ಟಿಯು ಪುನರುಜ್ಜೀವನಗೊಳ್ಳುವುದು. ರಾಯ್‌ರವರು ಪ್ರಮುಖ ಧುರೀಣರೊಡನೆ ವ್ಯವಹಾರ ನಡೆಸಿ ಸ್ವರಾಜ್ಯ ಪಾರ್ಟಿಯ ಕಾರ್ಯ ಭಾರಗಳನ್ನು ಅನುಮೋದಿಸಬಹುದೋ ಎಂದು ಕೇಳಿರುವರು. ಈ ಸಲದ ಬಂಗಾಳ ಸ್ವರಾಜ್ಯ ಪಾರ್ಟಿಯು ಹಿಂದಿನ ಯಶಸ್ಸಿಗೆ ಬರಲಿದೆಂಬ ಭರವಸೆಯಿಲ್ಲದಲ್ಲಿದೆ. ಸಾಮ್ಯವಾದಿಗಳ ಪಂಗಡಗಳು ಪ್ರಬಲವಾಗಿರುವುದರಿಂದ ಸ್ವಾತಂತ್ರ್ಯವಾದಿಗಳ ಧ್ವನಿಯು ಗೀತೆಂದು ಊಹಿಸಿಕೊಳ್ಳಲಾಗಿದೆ.

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್.

ಗಣಪತಿ ಹೈಸ್ಕೂಲ್ ರಸ್ತೆ, ( ) ಮಂಗಳೂರು, ದ. ಕನ್ನಡ.

ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜೀನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನೆಷ್ಟೋ ಬಗೆಯ ನೂತನ ತಿಂಡಿತಿನಸುಗಳು—ಚಹಾ, ಕಾಫಿ, ಕೋಕ್ಕೋ, ಇತ್ಯಾದಿ ಎಲ್ಲ ತರದ ಪಾನೀಯಗಳು.— ಅನುಭವಸ್ಥರಿಂದ ತಯಾರಿಸಲ್ಪಡುವುವು

ಆಯಾಯಾ ತರಗತಿಯವರಿಗನುಕೂಲವಾಗುವಂತೆ ಸ್ಥಳ-ಸೌಕರ್ಯವಿದೆ.

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ ತೃಪ್ತಿ ಪಡೆಯಿರಿ.

[ವಿ. ಸೂ—ಟೀಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿ ತಿನಸು—ಪಾನೀಯಗಳನ್ನು ಒದಗಿಸಲಾಗುವುದು. ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿ ತಿಳಕೊಳ್ಳುವುದು.]

ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷದ ಕೊಟ್ಟು ರಕ್ಷಿಸಿರಿ!



ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮಿನಿಂದ ಪಾರುಮಾಡಿಯದೆ. ಮಹದುಪಕಾರಕವಾದ ಈ ರೋಗನಿವಾರಕಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧವನ್ನೇ ಪ್ರಯೋಗಿಸುತ್ತಾರೆ

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ ಕೂಮಿನ್' ಇದು ದಿವ್ಯಔಷಧವಾಗಿದೆ ಕ್ರಯ 1-8-0

ಮದ್ರಾಸಿನಲ್ಲಿ ದಿ ಒರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್-

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co Ltd
64, 3rd Cross Road, Srirampur Extn
Malleswaram Post, BANGALORE.

OR

The Managing Agents,
The S I, G A. Co. Ltd
55 Poonamallee High Road, Kilpauk MADRAS.

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್ ರೋಲ್‌ಗಳು

ಮೂರು ಸ್ಸಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

ಡಾಕ್ಟರ್ ವಾಮನ ಗೋಪಾಳರವರ



ಜಗದ್ವಿಖ್ಯಾತ ...

ಕೆಟ್ಟ ರಕ್ತಕ್ಕೆ ಪರಮೌಷಧ ... ವರ್ಷದ ಅನುಭವ ಪ್ರಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ ಫೋಸ್ಪರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕೂರದ್ವಾರ, ಮುಂಬಾಯಿ ೨ ... ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

ಕೋ-ಒಪರೇಟಿವ್ ಸೊಸೈಟಿಗಳಿಗೆ/

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರ‍್ಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

THE SOUTH INDIA CO-OPERATIVE INSURANCE SOCIETY LIMITED MADRAS

LOCAL BOARD:—

THE SOUTH CANARA CENTRAL CO OPERATIVE BANK LTD, MANGALORE

Applications are invited for Sub Agents from capable and energetic persons and Co-operative Institutions to canvass business on behalf of the Local Board of the Society at Mangalore

FOR TERMS APPLY TO—

The Secretary,
South Canara Central Co-operative Bank, Ltd, KODIALBAIL P O (Mangalore
SOUTH CANARA

Hydrocele and Hernia

'ಹೈಡ್ರೊಸಿಲ್' ಮತ್ತು ಅಂಡವಾಯುವಿಗೆ ಅಮೋಘ ಔಷಧಿ.

Aksir-A Fota ಎಂಬುದು ಹೈಡ್ರೊಸಿಲ್ ಮತ್ತು ಅಂಡವಾಯುವನ್ನು ಗುಣಪಡಿಸಲು ದಿವ್ಯಾಷಧ' ಒಪರೇಶನ್ ಅಗತ್ಯವಿಲ್ಲ, ಎಷ್ಟು ಕಾಲದ ರೋಗವೇ ಆಗಿರಲಿ, ಎಷ್ಟು ವಿಷಮ ರೋಗವೇ ಆಗಿರಲಿ ಅಂಡದಲ್ಲಿ ನೀರು ಗಟ್ಟಿ ಕಟ್ಟಿರಲಿ, ಯಾವ ಮದ್ದಿನಿಂದಲೂ ಗುಣವಾಗದಿರಲಿ, ಈ ಔಷಧವನ್ನು ಪ್ರಯೋಗಿಸಿದೊಡನೆ ಅಂಡದಿಂದ ನೀರು ಹೊರಬಂದು ಪರ್ಯಾಯವಾಗಿ ಅದರ ಮೊದಲ ಸ್ಥಿತಿಯು ನಿಲ್ಲುತ್ತದೆ. ಈ ಔಷಧಿಯನ್ನು ಒಮ್ಮೆ ಸರಿಯಾಗಿ ಉಪಯೋಗಿಸಿದ್ದಲ್ಲಿ ಈ ಮಹಾರೋಗವು ದೃಢವಾಗಿ ಮಾಯವಾಗುತ್ತದೆ, ಇನ್ನೊಮ್ಮೆ ಕಾಣಿಸಿಕೊಳ್ಳುವುದೇ ಇಲ್ಲ. ಈ ಔಷಧವು ಒಂದು ಬಗೆಯ ಹುಡಿ (ಪೌಡರ್) ಯಾಗಿದೆ. ಇದನ್ನು ನೀರಿನೊಡನೆ ಕಲಸಿ ಅಂಡಕ್ಕೆ ಹಾಕಬೇಕು. ಏಳೇ ಏಳು ದಿನಗಳೊಳಗೆ ಹೈಡ್ರೋಸೀಲನ್ನು ಗುಣಪಡಿಸುತ್ತದೆ. ಕ್ರಯ ಪೆಟ್ಟಿಗೆ ರೂ 3 ಕ್ಕೂ 8 ಆಣೆ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ,

Hamdard Dawakhana,
Kushak, MUTTRA

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು ನಮೂದಿಸಬೇಕು ಅವುಗಳಿಲ್ಲದ ಪತ್ರಗಳಿಗೆ ಸರಿಯಾದ ಶಿಗಾ ಸಿಗುವುದಿಲ್ಲ.

ಮೆನೇಜರ್.

EDITED, PRINTED & PUBLISHED BY V S KUDVA AT THE SHARADA PRESS, MANGALORE

...ಶಾಭಿಮಾನಿ.

(...ಕೀಯ ಪಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

... ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

... ನ ಭೇಜಿರೇ ಧೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧

... ಸುರರ್ಗಗಳು ಸಾ ... ಗರವ ಮಥಿಸಲು ಸುರರ್ಗಗದರಿಂ । ಹರುಷವಾಯಿತೆ, ಮತ್ತೆ ವಿಷದ ಸುಡುತ ಬರುತಿರುವ ॥

ಗರಳಕೆ ... ಸುಧೆಯನು ... ಕ್ಷುದ್ರರ ಕೆರದ ... । ಕೆರಳ ಬಲ್ಲರೆ ಕೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಮಂಗಳೂರು ತಾ. ೧೭ನೇ ಶುಕ್ರವಾರ ನವಂಬರ ೧೯೩೩ (17 – 11 – 33) ಸಂಚಿಕೆ ೪೫

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Goondapoor, Mangalore, Shimoga & Madras**

ಹೆಡ್ ಆಫೀಸು—ಉಡುಪಿ. ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000-

ನಿಯಮಿತ ಮೂಲಧನ ರೂ. 3,50,000- ವಂತಾ ಹಾಕಲಿಕ್ಕೆ ಅಪ್ಪಿಸಿದ ವ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST OCTOBER, 1933.

Capital and Liabilities.		Property and Assets	
1 Paid up Capital	Rs. 2,25,000-0-0	1 Bank Premises, Buildings, Furniture etc Rs	66 920 0 4
2 Reserve and other funds	„ 2,35,000-0-0	2 Investment on Gvt securities	„ [illegible]
3 Deposits	„ 21,91,744-5-8	3 Authorised Investments	23 02 [illegible] 4 1
4 Due to Bankers	„ 21,649- 2-3	4 Bills per contra	10 547 [illegible]
5 Sundries	„ 84,330 2 6	5 Sundries	„ 26 997 6 1
6 Bills per contra	10,547-3 9	6 Cash on hand & with bankers	58 544 7 [illegible]
Total	27,68,270-14 2	Total	27 68 270 14 -

UDIPI 6—11—'33.

N. ANANDA RAO,
Secretary & Manager

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಟ್ಟುಕೊಡುವ ವಾತ, ಭಾರಿ ನೋವು, ವಿಶೇಷ ಕೆಮ್ಮು, ಅಸಹನೀಯ ಹಲ್ಲುನೋವು, ವಿಪರೀತ ಛಾಯು, ಇಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗಿ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು—ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ದಿವಸದೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಹುಡುಗರ ಸುದಾಸ್ತಿ

ಡೋಂಗರೆ

ಇವರ

ಬಾಲಾಮೃತ

ಓದಲಿಕ್ಕೂ, ಚಾಹೀರಾತು ಕೊಡಲಿಕ್ಕೂ ಮಕ್ಕಳಿಗೂ, ದೊಡ್ಡವರಿಗೂ, ಹಳ್ಳಿಯವರಿಗೂ, ಪೇಟೆಯವರಿಗೂ, ವಿದ್ಯೆ ಇದ್ದವರಿಗೂ, ಇಲ್ಲದವರಿಗೂ ಬೇಕಾದ,

ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ ಪತ್ರಿಕೆ

ಸ್ವದೇಶಾಭಿಮಾನಿ

27 ವರ್ಷಗಳ ನವತರುಣ!

Buy Indian
Be Indian
By Using
"LADCO"
Vegetable Toilet and Washing Soaps
FREE FROM ANIMAL FAT
Bath Soap, Glycerine Transparent Soap, Bar Soap
Cubes, Cakes
...gents for South Kanara, Malabar & Coorg—
PAI PHARMACY,
Car Street, MANGALORE.
...tockists:—
JAYAVANT SHANTARAM & BROS *Merchants*
Bunder, Mangalore, S K
—9—33

'ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ'

ಗುಣ ಹೊಂದಲು ಒಂದು ಡೋಜು ಸಾಕು

ಇದು ಏನೂ ದೋಷವಿಲ್ಲ. ಎಲ್ಲಾ ಪ್ರಾಯಸ್ಥರಿಗೂ ಮಲೇರಿಯಾ, ಇನ್‌ಫ್ಲುಯೆಂಜಾ ಅಗ್ನು, ಇತ್ಯಾದಿಗಳ ಪರಿಹಾರಾರ್ಥವಾಗಿ ಕೊಡಬಹುದು ... ಈ ಮದ್ದು ನಲ್ವತ್ತು ವರ್ಷಗಳಿಂದ ಎಷ್ಟು ಪ್ರಸಿದ್ಧವಾಗಿವೆಯೆಂಬುದನ್ನು ತೋರಿಸುವುದಕ್ಕೆ ಮುದ್ರಿಸಲಾಗಿದೆ ಈ ಸ್ಟ್ರೀಟ್ಸ್ ಸ್ಪೆಸಿಫಿಕನ್ನು ಪೀಡಿತರಾದ ಮಿತಿಯಾವಧಿ ಜನರು ... ಗುಣ ಹೊಂದಿರುತ್ತಾರೆ

... ವರ್ಷಗಳಿಂದ ... ಈ ಔಷಧಿಯನ್ನು ಪ್ರಯೋಗಿಸುತ್ತೇವೆ ... ಇದು ಗುಣಕಾರಿ ಅದಕ್ಕೆ ಸಂದೇಹವಿಲ್ಲ ...



'ಸ್ಟ್ರೀಟ್ಸ್ ಅಗ್ ಸ್ಪೆಸಿಫಿಕ್' ... ಕೊಡುತ್ತಾರೆ

ಮದನ್ ಸನ್ಸ್ ಎಂಡ್ ಕೋ, ಬೊಂಬ್ಯಾ 2
Madon Sons & Co Bombay 2

ಪಂಡಿತ ಬಿ ಆರ್ ಗೋವಿಂದರಾಜುಲು ನಾಯುಡುಯವರ
ಮೇಹ ಸಂಜೀವನಿ ಎಣ್ಣೆ.

ಪತಿವ್ರತೆಯಾದ ಕನ್ಯೆ ... ಅನೇಕ ರೋಗಗಳು ... ವೈದ್ಯ ಶಾಸ್ತ್ರಜ್ಞರ ತಾತ್ಪರ್ಯವಾಗಿದೆ ಇಂತಹ ಮಹಾ ಭಯಂಕರ ಮೇಹರೋಗವೆಂಬ ವೃಕ್ಷಕ್ಕೆ ಕುಠಾರಸದೃಶ್ಯವಾದ ಈ ಔಷಧವನ್ನು ವೈದ್ಯ ಶಾಸ್ತ್ರಗಳ ಆಧಾರದಿಂದ ಮಹಾ ಮೂಲಿಕೆಗಳ ಸಂಯೋಜನದಿಂದ ನಾವು ಏರ್ಪಡಿಸಿ ಸಾವಿರಾರು ಜನರನ್ನು ಗುಣಪಡಿಸಿರುವ ಸರ್ಟಿಫಿಕೇಟುಗಳು ನಮ್ಮ ವೈದ್ಯ ಶಾಲೆಯಲ್ಲಿ ಸರ್ವರ ಅವಗಾಹನೆಗಾಗಿ ಇಟ್ಟಿರುವೆವು ಈ ಮೇಹ ಸಂಜೀವಿನಿ ಎಣ್ಣೆಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸಿರುವ ... ಭಗಂದರ ... [illegible]

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು, ... ವೈದ್ಯ ಶಾಲೆ, ... [illegible]

[illegible]

ಸತ್ತಿತು ಕೇಳಿರೇ!
ನಿನ್ನಯ ಮಾಟ—
ನಿನೆಗಿದು ಆಟ
ಕಲಿಸುವೆ ಪಾಠ!
ನನಗಿದು ನೋಟ—ಫೋ ಫೋ, ಫೋ ಫೋ ಫೋ

× × × ×

ವಾಚಕ ಮಹಾಶಯರೇ, ಸಾಯ್ಬನ ಪದಕ್ಕೆ ಭಾರಿ ಗಿರಾಕಿ ಕಾಣ್ರಿ! ಒಂದೆರಡು ಸಲ ಸಾಯ್ಬನು ಪದ ಹೇಳಲು ಮರೆತು ಬಿಟ್ಟರೆ, ಕೂಡಲೆ ಒಂದೆರಡು ಕಾರ್ಡುಗಳು ಅವನಿಗೆ ಬರುವುವು. "ಸಾಯ್ಬನು ಪದ ಏಕೆ ಹಾಡೋದಿಲ್ಲಾ?" ಎಂಬುದೇ ಎಲ್ಲರ ಪ್ರಶ್ನೆ! ಅವರ ಆಶೆಗಾಗಿ ನನ್ನ ಈ ಮೇಲಿನ ಪದ ಹಾಡಿದೆ. ರುಚಿಸಿದವರು ಓದಿ, ಇಲ್ಲದಿದ್ದರೆ ಸಾಯ್ಬನಿಗೆ ಬೈದು ಬಿಡಿ

× × × ×

ತಾರೀಖು ಎಂಟನೇ ದಿನ ಗಾಂಧೀ ಮುದುಕ ತನ್ನ ಹರಿಜನ ಸೇವಾ ಕಾರ್ಯಕ್ಕಾಗಿ ವಾರ್ಧಾದಿಂದ ಹೊರಟ ನೋಡಿ! "ಹರಿಜನೋದ್ಧಾರ" ಎಂಬ ದೊಣ್ಣೆ ಮಾತ್ರ ಅವನ ಕೈಯಲ್ಲೇ ಇದೆ. ನಾಗಪುರಕ್ಕೆ ಹೋಗಿ ಅಲ್ಲಿ ಈ ದೊಣ್ಣೆಯು ಗೆದ್ದಿತಂತೆ. ಕೆಲವು ದೇವಸ್ಥಾನಗಳು ಹರಿಜನರಿಗಾಗಿ ತೆರೆಯಲ್ಪಟ್ಟುವಂತೆ

× × × ×

ಗಾಂಧೀ ಹೊರಟನೆಂಬುದನ್ನು ಕೇಳಿದೊಡನೆ ದೇಶದ ಎಲ್ಲಾ ಸನಾತನಿಯ ದೇವಾಲಯಗಳಿಗೆ ಹೊಸ ಹೊಸ ದಪ್ಪ ದಪ್ಪ ಬಾಗಿಲುಗಳನ್ನು ಮಾಡಿಸಲಾರಂಭಿಸಿದ್ದಾರೆ. ಕೆಲವು ಕಡೆಗಳಲ್ಲಿ (ನಮ್ಮೂರ ಶ್ರೀ ಕೃಷ್ಣ ದೇವಸ್ಥಾನದವರು ಮಾಡಿದಂತೆ) "ಅಸ್ಪೃಶ್ಯ ಜನರು ಒಳಗೆ ಪ್ರವೇಶಿಸಕೂಡದು" ಎಂಬ ಬೋರ್ಡುಗಳನ್ನೂ ತೂಗ ಹಾಕಲಾರಂಭಿಸಿದ್ದಾರೆ. ದೇವಸ್ಥಾನಗಳ ಅಧಿಕಾರಿಗಳಿಗೆ ಈ ಗಾಂಧಿಯ ಉಪದ್ರವದಿಂದಾಗಿ ಎಷ್ಟು ಕಷ್ಟ! ನಷ್ಟ!—ನೋಡಿ!

× × × ×

ಎಲೆ ಗಾಂಧಿರಾಯ, ಈ "ಹರಿಜನೋದ್ಧಾರ" ಎಂಬುದು ನಿನಗೆ ಆಟವಾಗಿ ಕಂಡೀತು ನೋಡು! ಲೋಕದ ಶಾಂತಿಗಳಾದ ಸನಾತನ ವಾದಿಗಳಿಗೆ ಇದು ಬಹಳ ಸಂಕಟ ದಿನ ಕಾಣು! ಹರಿಜನರೆಂದರೆ ಕುರಿ ಜನರೆಂದು ಭಾವಿಸುವ ಅವರಿಗೆ ಸುಖವುಂಟೇ!

× × × ×

ಅಯ್ಯಾ ಗಾಂಧಿಯೇ ಎಷ್ಟೋ ಕಡೆಗಳಲ್ಲಿ ಸನಾತನ ರಾಯರುಗಳು ನಿನ್ನ ವಿರೋಧವಾಗಿ ಪ್ರಕಟಿಸಲು ಕರಪತ್ರಗಳನ್ನೂ, ಪೇಪರ್‌ಗಳಿಗೆ ಆರ್ಟಿಕಲ್ಲುಗಳನ್ನೂ ಬರೆಯಲು ತೊಡಗಿರುವುದು ನಿನಗೆ ತಿಳಿದಿರುವುದೇ? ದಕ್ಷಿಣ ಕನ್ನಡದ ದೇವಸ್ಥಾನಗಳ ಕೆಲವರ ಶಾಯಿ ಬಾಟ್ಲಿಯೂ ಕಾಗದ ರಾಶಿಗಳೂ ಬರಿದಾದುದು ನಾಲ್ಕು ಕಿಲ್ಲಿಗಳಿರುವ ನಿನಗೆ ತಿಳಿದಿದೆಯೋ? ಹಾಗಾದರೆ ಸಾಯ್ಬನೊಡನೆ ವಿಚಾರಿಸಬಾರದೆ?

× × × ×

ಒಬ್ಬರು ಶಾಸ್ತ್ರಿಗಳಿಗೆ ರಾತ್ರಿ ಇಡೀ ನಿದ್ದೆ ಬೀಳುವುದಿಲ್ಲವಂತೆ. ಗಾಂಧಿ ಯಾವಾಗ ಊರಿಗೆ ಬರುತ್ತಾನೆ—ಊರಿನವರು ಏನು ಮಾಡುತ್ತಾರೋ—ತನ್ನ ದಕ್ಷಿಣೆಗೆ ಎಲ್ಲಿ ಕುತ್ತು ಬೀಳುತ್ತದೋ ಎಂಬುದೇ ಅವರ ಶಂಕೆಯಂತೆ!—ಆಲೋಚನೆಯಂತೆ! ಅಯ್ಯ ಗಾಂಧಿಯೆ ಈ ಶಾಸ್ತ್ರಿಗಳ ದೇಹ ತಣ್ಣಗಾಗಲೆಂದಾದರೂ ದೇವರೊಡನೆ ಪ್ರಾರ್ಥಿಸಬಾರದೇ!

× × × ×

ಅಯ್ಯಾ ಗಾಂಧಿ ರಾಜಾ, ನೀನು ದಕ್ಷಿಣ ಕನ್ನಡಕ್ಕೆ ಬರುವುದಾದರೆ ಬರಬಹುದು—ಮಾತ್ರ ದಕ್ಷಿಣ ಕನ್ನಡಕ್ಕೆ ಬರಬಾರದು. ಕನ್ನಡಕ್ಕೆ ಬಂದರೂ ಇಲ್ಲಿಗೆ ಬರಬಾರದು!—ಇಲ್ಲಿಗೆ ಬಂದರೂ ... [illegible]

Canara Bank Limited.

Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,050—0—0
Reserves	4,31,000—0—0

Head Office—Bunder Mangalore Local Office City & Bunder

BRANCHES— Bombay, Cochin, Calicut, Ernaculam, Alleppey, Chikmagalur, Ganguli Coondapoor Udipi Karkal, Puttur Kasaragod, & Buntwal Out-agency

Interest is allowed on Current Fixed and Saving Bank Accounts rates of which may be ascertained on application Advances made on approved securities at easy rates All kinds of Banking business transacted. Rules of business on application

ಮಂಗಳೂರು,
13—7—33.

A Madhava Pai,
Secretary

East & West Insurance Company Ltd.

(Incorporated in India 1913)

Head Office—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders
&
Wide popularity
Economic Management
Sound investment
That is why you should select East & West
Ere you invest in the rest

Interim Bonus
Declared
Rs 15 Per 1000
On whole life &
Endowment Policies

For particulars and Agency terms apply to —

R S Nayak, *Organiser Secretary* for West Coast Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ **1000** ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸದೇ ಇಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸ್ಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೆಳುವಂದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಾಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್—ಸನ್ ಬ್ರೆಂಡ್ ಕೊಡೆಯ ಮಾತೃಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು.



ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ, 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3—12—0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದ, ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರಿತಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕ್ಯಾಮೆರಾ ಮಿಶ್ಶನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯರ ಮತ್ತು ಕಂಪೆನಿ, ಚೌಖಾಂಬಾ ಬೆನಾರೆಸ್ (ಕಾಶೀ)

— ಗಡಿಯಾಳ ಪ್ರಕಟಣೆ —

ದರು ವಿನಾಶಕ ಮುಲಾಮು—ಗಜಕರ್ಣ, ಕಜ್ಜಿ ಇಸಬ ನಾಯಟ ಮುಂತಾದ ಎಲ್ಲಾ ಕೃಚಿರೋಗದ ಮೇಲೆ ವಂದೇ ರಾಮಬಾಣ ಔಷಧಿ ೨೪ ತಾಸಿನಲ್ಲಿ ಗುಣಬರುತ್ತದೆ. ಸಾವಿರಾರು ಜನರು ಶಿಫಾರಸು ಮಾಡಿರುತ್ತಾರೆ. ಕಿಮ್ಮತ್ತು ಡಬ್ಬಿ ೧ರ ಆಣೆ ೦—೪—೦ ೧೨ರ ಮೇಲೆ ಟೈಂಪೀಸು ೧೮ರ ಮೇಲೆ ಅಲಾರ್ಮ್ ಟೈಂಪೀಸು ೨೪ರ ಮೇಲೆ ರಾಸ್ಕೋಪ, ೩೬ರ ಮೇಲೆ ರಿಸ್ಟ್‌ವಾಚ್ ಪ್ರಕಟ ಸಿಗುವುದು. ಕೂಡಲೇ ಬರೆಯಿರಿ. ಪತ್ರವ್ಯವಹಾರ ಮರಾಠಿ ಯಾ ಇಂಗ್ಲಿಷಿನಲ್ಲಿ

King George Coronation,
BOBMAY 4

16—6—33 (Head Office—Kotah Rajputana)

ಬೇಕಾಗಿದೆ

ಇಂಗ್ಲಿಷ್ ಮತ್ತು ಕನ್ನಡ ಡಿಪಾರ್ಟ್‌ಮೆಂಟಿಗೆ ಕಂಪೋಜಿಟರರು ಬೇಕಾಗಿದ್ದಾರೆ. ಯೋಗ್ಯತೆಗೆ ತಕ್ಕ ಸಂಬಳವು ದೊರೆಯುವುದು

ಕೂಡಲೇ ಅರ್ಜಿಗಳನ್ನು ಬರೆದುಕೊಳ್ಳಿರಿ—

ಮೆನೇಜರ್,
ಶಾರದಾ ಛಾಪಖಾನೆ ರಥಬೀದಿ ಮಂಗಳೂರು

1934

Sharada Diaries

Ready! Ready!

SMALL SIZE—BIG SIZE

ಶಾರದಾ ಡೈರಿಗಳು

ಸಿದ್ಧವಾಗಿವೆ!

ಸಣ್ಣ ಸೈಜು— —ದೊಡ್ಡ ಸೈಜು

Sharada Press Mangalore

LOOK HERE!

We have got for sale all kinds of freshly prepared Exercise books, Note books and Diaries etc,

SHARADA PRESS,
Car Street, Mangalore.

ಅಫಘಾನದ ಪ್ರಭುವನ್ನು ಕೊಲೆ ಮಾಡಿದರು!!

ಗಾಂಧೀಜೀಯವರಿಗೆ ಸನಾತನಿಗಳ ವಿಘ್ನ

ದಕ್ಷಿಣದಲ್ಲಿ ಮಳೆ, ನೆರೆಯ ಹಾವಳಿ

ಒಸ್ಟ್ರಿಯಾದಲ್ಲಿ ಮಾರ್ಷಲ್ ಲೋ ಜ್ಯಾರಿ

ಕ್ಯೂಬಾದಲ್ಲಿ ೨೦೦ ಜನರನ್ನು ಕೊಂದರು!

ಜರ್ಮನಿಯಲ್ಲಿ ಚುನಾವಣೆ!!!

ಅಫಘಾನಿಸ್ಥಾನದ ಅರಸರಾದ ನಾದಿರ್ ಷಹಾರನ್ನು ಕಳೆದ ಬುಧವಾರ ಆರ್ಕ್ ಅರಮನೆಯಲ್ಲಿ ಅಬ್ದುಲ್ ಖಾಲಿಕ್ ಎಂಬ ವಿದ್ಯಾರ್ಥಿಯು ಕೊಂದಿಕ್ಕಿದನೆಂದು ತಿಳಿದು ಬಂದಿದೆ.

ಪೇಶಾವರದಿಂದ ಬಂದ ವಾರ್ತೆಯಿಂದ—ನಾದಿರಷಹಾರು ಬೆಳಗ್ಗೆ ತನ್ನ ಕೋಣೆಯಿಂದ ಹೊರಗೆ ಬರುತ್ತಲೇ ಮೊದಲು ಅಬ್ದುಲ್ಲನು ಅವರಿಗೆ ಗುಂಡು ಹಾರಿಸಿದನೆಂದೂ ಆ ಮೇಲೆ ಒಡನೆ ಅರಮನೆಯ ಕೆಲಸಗಾರರು ಕೆಲವರು ಅವರ ಮೇಲೆ ಬಿದ್ದು ಅವರನ್ನು ಕತ್ತಿಗಳಿಂದ ತಿವಿದು ಕೊಂದರೆಂದೂ ಗೊತ್ತಾಗಿದೆ. ಈ ವಾರ್ತೆಯು ಅರಮನೆಯಲ್ಲಿ ಬೆಂಕಿಯಂತೆ ಹರಡಿತು ಪೋಲೀಸರು ಬಂದು ಅಪರಾಧಿಗಳನ್ನು ಸೆರೆಹಿಡಿದರು ಈ ಸುದ್ದಿಯು ಪ್ರಥಮದಲ್ಲಿ ಹರಡಿದೊಡನೆ ಜನರು ತಮ್ಮ ಕಿವಿಗಳನ್ನು ತಾವು ನಂಬಲಾರದಾದರು. ಅಫಘಾನಿಸ್ಥಾನವೆಲ್ಲಾ ಒಮ್ಮೆ ದಂಗು ಬಡೆಯಲ್ಪಟ್ಟಂತಾಯಿತು ಆಫೀಸು ಅಂಗಡಿಗಳು ಮುಚ್ಚಲ್ಪಟ್ಟುವು. ಕ್ರಾಂತಿಯು ತಲೆದೋರುವುದೆಂದು ನಿಮಿಷ ನಿಮಿಷಕ್ಕೆ ಭಯವುತ್ಪನ್ನವಾಯಿತು ಇಷ್ಟರಲ್ಲಿ ನಾದಿರ್ ಶಹರ ಮಗನಾದ ಮಹಮ್ಮದ್ ಜಹೀರ್ ಷಾರನ್ನು ಸಿಂಹಾಸನಕ್ಕೇರಿಸಿದರು. ಇದನ್ನು ತಿಳಿದ ಜನಾಂಗವು ಸಮಾಧಾನಗೊಂಡಿತು ಜಹೀರ್‌ಷಹಾರು ಒಳ್ಳೆಯ ವಿದ್ಯಾವಂತರೂ ಗುಣವಂತರೂ ಆಗಿರುವುದರಿಂದ ಆಡಳಿತೆಯವರಿಗೂ ಜನರಿಗೂ ಅವರ ಮೇಲೆ ಹೆಚ್ಚಿನ ಗೌರವವಿದೆಯೆಂದು ತಿಳಿಯಲಾಗಿದೆ ಮಾಜಿ ಅರಸರಾದ ಅಮಾನುಲ್ಲರು ರೋಮಿನಲ್ಲಿರುವರು ನಾದಿರ್‌ಶಹಾರ ಮೇಲೆ ಇವರಿಗೆ ದ್ವೇಷವಿದೆಯೆಂದೂ ಅಂತಹ ದ್ವೇಷದ ಪರಿಣಾಮವಾಗಿ ಈ ಕೊಲೆಯಾಯಿತೋ ಎಂದು ಕೆಲವು ವಿದೇಶೀಯ ಪತ್ರಿಕೆಗಳು ಅಭಿಪ್ರಾಯ ಪಡುತ್ತಿವೆ ರೋಮಿನ ಇಸ್ಸನ್ ಬುಲ್ ಎಂಬಲ್ಲಿ ಅಮಾನುಲ್ಲಾ ಖಾನರನ್ನು ಒಬ್ಬ ಪತ್ರಿಕಾ ಪ್ರತಿನಿಧಿಯು ಭೇಟಿಯಾಗಿ ಪ್ರಶ್ನಿಸಿದುದಕ್ಕೆ ಅಮಾನುಲ್ಲರು ಹೇಳಿದ ಮಾತು ಹೀಗಿದೆ—"ಅಫಘಾನರು ನನ್ನ ಬರುವಿಕೆಯನ್ನು ಆಶಿಸುವುದಾದರೆ ನಾನು ನನ್ನ ದೇಶವನ್ನು ನನ್ನ ಶಕ್ತಿ ಪ್ರಕಾರ ನನ್ನ ಕ್ರಮ ಪ್ರಕಾರ ಆಳಲು ಕೂಡಲೇ ಬರುವೆನು ನಾದಿರ್ ಷಹಾನ ರಾಜ್ಯಾಡಳಿತವು ರಾವಣ ರಾಜ್ಯಾಡಳಿತವಾಗಿತ್ತು ಎಷ್ಟೋ ಪಂಡಿತರನ್ನು ಸಿಕ್ಕಸಿಕ್ಕಂತೆ ಕೊಂದಿಕ್ಕಿದರು ನಾದಿರ ಷಹಾನು ಮರಣ ಪಟ್ಟುದರಿಂದ ನನಗೆ ಸಂತೋಷವೇ ಆಗಿದೆ ಅಲ್ಲದೆ ಅವನು ಅಫಘಾನನಾಗಿದ್ದು ಮರಣ ಹೊಂದಿರುವುದರಿಂದ ನನಗೆ ಮತ್ತಷ್ಟು ಸಂತೋಷವೆನಿಸಿದೆ ನಾದಿರಷಹಾನು ಅವನ ಜನರಿಗೆ ಅಪಾಯಕರನಾಗಿದ್ದನಲ್ಲದೆ ಅವನು ಅಫಘಾನಿಸ್ಥಾನದ ನೆರೆಹೊರೆಯ ರಾಜ್ಯಗಳಿಗೂ ಅಪಾಯಕರನಾಗಿದ್ದನು" ಎಂದರು. ಹತ್ತು ವರ್ಷಗಳ ತನಕ ತಾನು ಅಫಘಾನರ ಮುಂದಾಳುವಾಗಿದ್ದುದರಿಂದ ಇನ್ನಾದರೂ ಜನರು ತನ್ನನ್ನೇ ಬರಮಾಡುವುದು ನ್ಯಾಯವಿದೆಯೆಂದು ಅಮಾನುಲ್ಲಖಾನರ ಆಶೆ ಅಫಘಾನದ ಮಂತ್ರಿಯವರು ಲಂಡನಿನಲ್ಲಿದ್ದರು. ಅವರು ಮಹಾರಾಜ್ಞಿಯವರನ್ನು ಕಂಡರು ಅಷ್ಟರಲ್ಲಿ ಕೊಲೆಯ ವಾರ್ತೆಯು ತಲಪಿತು. ಒಡನೆ ಅವರು ಪೆರಿಸ್ ಮಾರ್ಗವಾಗಿ ಅಫಘಾನಿಸ್ಥಾನಕ್ಕೆ ವಿಮಾನದ ಮೂಲಕ ಹೋದರು. ಅಮಾನುಲ್ಲಾ ಖಾನರನ್ನು ಅಫಘಾನಿಸ್ಥಾನದಲ್ಲಿ ಯಾರೂ ಆಶಿಸುವಂತಿಲ್ಲ ಮಂತ್ರಿಯಾದ ವಾಲಿಖಾನರು ಪ್ರಕೃತದ ಸರಕಾರವು ಅಮನುಲ್ಲರ ಕೈವಶವಾಗಲಾರದು" ಎಂದಿರುವರು. ಅಮಾನುಲ್ಲಖಾನರು ಹೇಗೂ ಮಾಡಿ ತನ್ನ ದ್ವೇಷವನ್ನು ತೀರಿಸಿಕೊಂಡಾರೆಂದು ಕೆಲವರ ಹೇಳಿಕೆ. ನಾದಿರಷಹಾರು ೧೮೮೦ನೇ ಎಪ್ರಿಲ್ ೯ರಲ್ಲಿ ಜನಿಸಿದರು ಅಮೀರ ಹಬಿಬುಲ್ಲರ ಆಡಳಿತದ ಸಮಯದಲ್ಲಿ ಇವರು ಮೆಲ್ಲ ಮೆಲ್ಲಗೆ ಕೀರ್ತಿಯುತರಾಗಿ ರಾಜತಂತ್ರ ನೈಪುಣ್ಯವನ್ನು ಹೊಂದಿದರು ೧೯೧೯ರ ಅಫಘಾನ ಯುದ್ಧದಲ್ಲಿ ನಾದಿರ ಷಹಾರು ತೋರಿಸಿದ ಧೈರ್ಯೋತ್ಸಾಹಗಳ ಪರಿಣಾಮವಾಗಿ ಅಫಘಾನಿಸ್ಥಾನವು ಸ್ವಾತಂತ್ರ್ಯವನ್ನು ಪಡೆಯುವಂತಾಯಿತು. ಇವರು ಕಮಾಂಡರ್ ಇನ್ ಚೀಫರಾಗಿ ಅಮಾನುಲ್ಲಾಖಾನರ ರಾಜ್ಯವನ್ನು ಸಂರಕ್ಷಿಸಿದರು. ೧೯೨೪ರಲ್ಲಿ ಇವರು ಪೆರಿಸ್‌ನಲ್ಲಿ ಅಫಘಾನ ಮಂತ್ರಿಯರಾಗಿ ನೇಮಕ ಹೊಂದಿದರು. ಅಮಾನುಲ್ಲರಿಗೂ ಇವರಿಗೂ ಮನಃಕ್ಲೇಶವುಂಟಾಗಿ ಇವರು ತನ್ನ ಪದವಿಗೆ ರಾಜಿ ಕೊಟ್ಟು ನಡೆದರು. ಬಚ್ಚೈಸಕ್ಕನು ದೇಶವನ್ನು ನುಂಗಲಾರಂಭಿಸಿದಾಗ ೧೯೨೯ನೇ ಒಕ್ಟೋಬರ ೭ರಲ್ಲಿ ಇವರು ಕಾಬೂಲನ್ನು ಗೆದ್ದು ಅರಸರಾದರು ಅಮಾನುಲ್ಲಾ ಖಾನರು ಊರು ಬಿಟ್ಟು ಓಡಬೇಕಾಯಿತು. ರಾಜ್ಯವು ವ್ಯವಸ್ಥೆಗೆ ಬಂದ ಮೇಲೆ ನಾದಿರ ಷಹಾರವರು ಹೊಸ ಸುಧಾರಣೆಗಳನ್ನು ಹೊರ ತಂದು ಜನರಲ್ಲಿ ವಿದ್ಯೆ, ಕೈಗಾರಿಕೆಯ ಜ್ಞಾನವನ್ನು ಹರಡಿದರು ಅವರ ೪ ವರ್ಷಗಳ ಅಲ್ಪಾವಧಿಯ ಆಡಳಿತವು ಅವರನ್ನು ಲೋಕ ಪ್ರಸಿದ್ಧರಾಗಿ ಮಾಡಿತು ಅಮಾನುಲ್ಲ ಖಾನರಿಂದ ತನಗೆ ಅಪಾಯವು ಇಂದಲ್ಲ ಒಂದು ದಿನ ಸಮೀಪಿಸಬಹುದೆಂದು ಅವರು ತಿಳಿದಿದ್ದರೂ, ತನ್ನ ಅಂತ್ಯವು ಇಷ್ಟು ಬೇಗನೇ ಆಗುವುದೆಂದು ಅವರು ತಿಳಿದಿರಲಿಲ್ಲ ಆಂಗ್ಲ ಪತ್ರಿಕೆಗಳೆಲ್ಲ ನಾದಿರ ಷಹಾರ ಮರಣಕ್ಕಾಗಿ ಬಹಳವಾಗಿ ಶೋಕಿಸಿ, ಬ್ರಿಟಿಷ ಸಂಸ್ಥಾನವು, ಸಾಹಸಿಗರೂ ಪ್ರಭಾ ಶಾಲಿಗಳೂ ಆದ ಮಿತ್ರನೊಬ್ಬನನ್ನು ಕಳೆದುಕೊಂಡಿತು ಎಂದು ಹೇಳುತ್ತಿವೆ

ಮಹಾತ್ಮಾ ಗಾಂಧಿಯವರು ತಾ ೮ನೇ ದಿನ ತನ್ನ ಹರಿಜನ ಸೇವಾ ಸಂಚಾರವನ್ನಾರಂಭಿಸಿ ವಾರ್ಧಾ, ನಾಗಪುರಗಳಲ್ಲಿ ಕೆಲವು ದೇವಸ್ಥಾನಗಳನ್ನು ಹರಿಜನರಿಗಾಗಿ ತೆರೆಯಿಸಿದರು ನಾಗಪುರದಿಂದ ತಾ. ೧೧ನೇ ದಿನ ವಾರ್ಧಾಗಂಜ್ ಎಂಬಲ್ಲಿಗೆ ಹೋದರು ಅವರನ್ನು ಸೇಟ ಜಮ್ನಾಲಾಲ್ ಬಜಾಜ್ ಮತ್ತು ಇವರ ಧರ್ಮ ಪತ್ನಿ ಮೊದಲಾದವರು ಸ್ವಾಗತೀಕರಿಸಿದರು. ಈ ಪಟ್ಟಣದಿಂದ ದಿಯೊಲಿ ಎಂಬಲ್ಲಿಗೆ ಗಾಂಧಿಜೀಯವರು ಶ್ರೀ ತಕ್ಕರ್ ಗಂಗಾಧರ ರಾವ್ ದೇಶ ಪಾಂಡೆ ಮೊದಲಾದವರೊಡನೆ ಕಾರಿನಲ್ಲಿ ಕುಳಿತು ಹೋದರು ದಿಯೊಲಿನಲ್ಲಿ ಅವರು ಒಂದು ಮಹಾಸಭೆಯನ್ನು ಜರಗಿಸಿ ಮಾತನಾಡಿದರು ಇಲ್ಲಿ ಒಂದು ವಿಚಿತ್ರ ಘಟನೆಯು ನಡೆಯಿತು ಆ ಹಳ್ಳಿಯಲ್ಲಿ ವೈಷ್ಣವ ಸಂತರ ಸ್ಮರಣಾರ್ಥವಾಗಿ ಕಟ್ಟಿಸಿದ ಒಂದು ದೇವಸ್ಥಾನವಿದೆ ಈ ದೇವಸ್ಥಾನವನ್ನು ಹರಿಜನರಿಗಾಗಿ ತೆರೆದಿಡಬೇಕೆಂಬುದಾಗಿ ಗಾಂಧಿಜೀಯವರು ಸಭೆಯಲ್ಲಿ ಹೇಳಿದರು ಸಭೆಯಲ್ಲಿದ್ದ ಸವರ್ಣ ಹಿಂದೂಗಳು ತಾವು ಮಹಾತ್ಮರ ಆಶೆಯನ್ನು ಈಡೇರಿಸಲು ಸದಾ ಸಿದ್ಧರೇ ಇರುವೆವೆಂದೂ, ಆದರೆ ಆಡಳಿತೆಯವರೂ, ನೆರೆಹೊರೆಯ ಸವರ್ಣ ಹಿಂದೂಗಳೂ ಒಪ್ಪಬೇಕು ಎಂದರು ಒಡನೆ ೧೩ ಹಳ್ಳಿಗಳವರ ವೋಟನ್ನು ಪಡೆಯಬೇಕೆಂದು ಹೇಳಿದರು ಅಲ್ಲಿದ್ದವರಲ್ಲಿ ಎಷ್ಟು ಮಂದಿ ಹರಿಜನ ಪ್ರವೇಶಕ್ಕೆ ಅನುಕೂಲ ಮತ್ತು ಎಷ್ಟು ಮಂದಿ ಪ್ರತಿಕೂಲವೆಂದು ಮಹಾತ್ಮರು ವಿಚಾರಿಸಿದರು ಸಾಧಾರಣ ೮೦೦೦ ಸವರ್ಣ ಹಿಂದೀಯರು ನೆರೆದಿದ್ದರು. ಒಡನೆ ೬೦ ಜನರಲ್ಲದೆ ಮತ್ತೆಲ್ಲರೂ ಮೇಲೆ ಕೈಯೆತ್ತಿ ಕೈಗಳ ಕಾಡನ್ನೇ ತೋರಿಸಿದರು. ಎಲ್ಲರೂ ಹರಿಜನರ ಪ್ರವೇಶಕ್ಕೆ ಅನುಕೂಲರಾಗಿಯೇ ಇದ್ದರು. ಮಹಾತ್ಮರು ಇದನ್ನು ಕಂಡು ಸಂತೋಷಗೊಂಡು ಈ ಸಭೆಯಲ್ಲಿ ದೇವಸ್ಥಾನದ ಟ್ರಸ್ಟೀಸರು ಇರುವರೋ ಎಂದು ಪ್ರಶ್ನಿಸಿದರು. ಸಂದರ್ಭವಶಾತ್ ಅವರಲ್ಲಿ ಇಬ್ಬರು ಸಭೆಯಲ್ಲಿದ್ದರು. ಅವರು ತಮ್ಮ ಮಿಕ್ಕುಳಿದ ಆಡಳಿತೆದಾರರ ಒಪ್ಪಿಗೆಯಿಲ್ಲದೆ ಏನೂ ಸಾಧ್ಯವಿಲ್ಲವೆಂದರು ಗಾಂಧಿಜೀಯವರು ಆಡಳಿತೆದಾರರ ವಿರೋಧವಿದ್ದರೂ ಜನತೆಯ ಅನುಕೂಲವಿದೆ, ಜನರು ಆಶಿಸಿದಂತೆ ಆಡಳಿತೆದಾರರು ವರ್ತಿಸಲು ಸಿದ್ಧವಿಲ್ಲವೆಂದು ಈಗ ಇದೊಂದು ನಿದರ್ಶನ. ಆದರೂ ವ್ಯಸನವಿಲ್ಲ ಆಡಳಿತೆದಾರರು ತಮ್ಮ ಅತ್ಮ ವಿರುದ್ಧವಾಗಿ ಘಕ್ಕನೆ ಆಚರಿಸುವುದು ನನಗೂ ಕೂಡಾ ಬೇಡವಾಗಿದೆ. ಆಡಳಿತೆದಾರರನ್ನು ತಗ್ಗಿಸುವ ಭಾರವು ಜನರ ಮೇಲಿದೆಯಾದುದರಿಂದ ತಾನು ಬಲಾತ್ಕಾರ ಪಡಿಸಲಾರೆ" ಎಂದರು. ಅಷ್ಟರಲ್ಲಿ ಸಭೆಯಲ್ಲಿ ಗಲ್ಲಿದ್ದಿತು ಕೆಲವು ಸನಾತನಿಗಳು ಬೊಬ್ಬಿಟ್ಟು ಗಾಂಧಿಯವರು ದೇವಸ್ಥಾನ ಪ್ರವೇಶವನ್ನು ಮಾಡಿಸುವರಾದರೆ ಕೆಲವು ದೇವಸ್ಥಾನದೆದುರು ಉದ್ದಂಡ ಮಲಗಿ ತಡೆಯುವೆವೆಂದರು ಅಲ್ಲಿದ್ದ ಪೋಲೀಸರು ಅವರೆಲ್ಲರನ್ನು ಕೂಡಲೇ ಕೈದು ಮಾಡಿದರು.

ದಕ್ಷಿಣ ಮಲಬಾರಿನಲ್ಲಿ ವಿಪರೀತ ಮಳೆಗರೆಯಿತು. ಕಳೆದ ಶನಿವಾರ ರಾಮ್ನಾಡ್ ಜಿಲ್ಲೆಯ ಬಳಿ ಸತ್ತೂರಿಗ ವೈಪರ್ ನದಿಯ ನೀರಿನಿಂದ ಉಕ್ಕಿ ನೀರು ಪಟ್ಟಣಕ್ಕೆ ಹರಿಯಿತು, ಡಿಸ್ಟ್ರಿಕ್ಟ್ ಬೋರ್ಡ್ ಆಫೀಸ, ಪೋಸ್ಟಾಫೀಸು, ತಂತಿ ಆಫೀಸು ಪೋಲಿಸ್ ಸ್ಟೇಶನ್‌ಗಳೊಳಗೆ ನೀರು ಹರಿಯಿತು ರಕಾಡ್ರ್ ನೀರು ಸಾಲಾದುದು ಇಬ್ಬರು ಬಾಲಕರನ್ನು ನೀರು ಕೊಚ್ಚಿಕೊಂಡೊಯ್ದಿತು ಸುಮಾರು ೧೦ ಲಕ್ಷಕ್ಕಿಂತಲೂ ಹೆಚ್ಚಿನ ನಷ್ಟವು ಉಂಟಾಗಿದೆ ಸಾವಿರಾರು ಜನರು ನಿರಾಶ್ರಿತರಾಗಿರುವರು ನೂರಾರು ಮನೆಗಳು ನಾಶವಾದುವು.

ಒಸ್ಟ್ರಿಯಾದಲ್ಲಿನ ರಿಪಬ್ಲಿಕ್ ವರ್ಷೋತ್ಸವವೂ ಮತ್ತು ಜರ್ಮನ್ ಚುನಾವಣೆಯೂ ತಾ ೧೨ಕ್ಕೆ ಒಂದೇ ದಿನ ಬಿದ್ದಿರುವುದರಿಂದ ದೇಶದಲ್ಲಿನ ವಿರುದ್ಧ ಪಕ್ಷಗಳು ತಲೆ ಹಾಟಾಡಿಸಿಕೊಳ್ಳದಂತೆ ಒಸ್ಟ್ರಿಯಾ ಸರಕಾರವು ಮಾರ್ಷಲ್ ಲೋ ಜಾರಿಮಾಡಿ ಯಾರೂ ಕೊಲೆ, ಹೊಡೆತಗಳಿಗೆ ಕೈ ಹಾಕಬಾರದೆಂದು ಡಂಗುರ ಹೊಡೆದಿರುತ್ತದೆ.

ಕ್ಯುಬಾದಲ್ಲಿ ದಂಗೆಯು ಉಪಶಮನವಾಗಿರುವುದಿಲ್ಲ. ಈ ತಿಂಗಳಲ್ಲಿ ಒಟ್ಟು ೨೦೦ ಮಂದಿಗಳು ಮಡಿದರು. ಮಾಜಿ ಅಧ್ಯಕ್ಷನಾದ ಸೆಸ್ಪೆಡಸನು ವಿದೇಶೀಯ ಕುದುರು ಒಂದರಲ್ಲಿ ಆಶ್ರಯ ಪಡೆದಿರುವನು

ಜರ್ಮನಿಯಲ್ಲಿ ಜನರಲ್ ಇಲೆಕ್ಷನ್ ಆಯಿತು. ೩೦ ಮಿಲಿಯ ಜನರು ಹರ್‌ಹಿಟ್ಲರ ಬೆಂಬಲವಾಗಿ ನಿಂತರು. ಕಳೆದ ಚುನಾವಣೆಯಲ್ಲಿ ೧೭ ಮಿಲಿಯ ಜನರು ಇವನ ಸಹಾಯಕ್ಕೆ ನಿಂತರು. ಹಿಟ್ಲರ ಸರಕಾರವು ಪ್ರಬಲವಾಗುವುದೆಂದು ಈಗ ಖಚಿತವಾಗಿರುತ್ತದೆ

++ ++

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿ ಮುಟ್ಟು, ಬಾಳ್ವಿಕೆ ಮತ್ತು ಪ್ರಾಶಸ್ತಿಯ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ ಅದವು ಬಳಗೆ ನೀರು ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟಾಕಿಸ್ಟ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ ಡಿಪೊ ಕಂಪೆನಿ ಲಿ., ಮಂಗಳೂರು ದ. ಕ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

[illegible]

[illegible] ದಲ್ಲಿನ ಹಿಂದೂ-ಮುಸ್ಲಿಮ [illegible] ಕಲಹಗಳ ವಿಷಯ [illegible] ಸಂಪೂರ್ಣ ಮಾಹಿತಿಯುಳ್ಳ ಹಲವು [illegible] ಪ್ಯಾಲೆಸ್ಟೈನದ ರಾಜ್ಯಭಾರದಲ್ಲಿ ಸೇರಿರಲು [illegible] ಸಕಾಲದಲ್ಲಿ ಅದರ ಪರಿಣಾಮ [illegible] ಅಲ್ಲಿನ ಅರಬರು ಯಹೂದ್ಯರು [illegible] ಊರೆಲ್ಲವೂ ಯಹೂದಿಗಳಿಂದ ತುಂಬುವ [illegible] ಒಂದು ಮೆರವಣಿಗೆ ಪ್ರಾರಂಭ [illegible] ಕೂಡದೆಂದಾಯಿತು. ಯಹೂದ್ಯರ ತಾ. [illegible] ಯೊಂದು ಶಹರಲ್ಲಿ ಈ ಮೆರವಣಿಗೆ ನಡೆಯಿತು. ಸರಕಾರದವರೇ ಹೇಳುವಂತೆ, ೧೧ ಮಂದಿ ಅರಬರು ಸತ್ತರು, ೩೦ ಮಂದಿಗೆ ಗಾಯಗಳಾದುವು. ಅರಬ ಮುಖಂಡರನ್ನು [illegible] ಮಾಡಲಾಯಿತು. ಈ ಕೃತ್ಯ ಮಾಡಿದವರನ್ನು ಮತ್ತೊಂದು [illegible] ದಲ್ಲಿ ಇಳಿಸುವಾಗ, ಸ್ಟೇಶನಿಗೆ ಅರಬರು ನೆರೆದರೆಂದು ಅವರ ಮೇಲೆ ಗುಂಡು ಹಾರಿಸಲಾಯಿತು. ಅರಬರನ್ನು [illegible] ಮಾಡಿರುವರೆಂದು ವಾರ್ತೆ ಬಂದಿದೆ; ಸತ್ತವರೆಷ್ಟೋ ತಿಳಿದಿಲ್ಲ. ಅರಬರು ಗುಂಡಿನೇಟಿಗೆ ಆಹುತಿಯಾಗುವ ಮೊದಲು ಕಲ್ಲುಚಂಟಿಗಳನ್ನು ಪೋಲೀಸರ ಮೇಲೆ ಎರಚಿದರೆಂದು ಇದುವರೆಗೆ ಪ್ರಕಟವಾಗಿಲ್ಲ. ಇನ್ನೆಲ್ಲವೂ ಶಾಂತವಾಗಿದೆ ಎಂದು ಕೆಲ ದಿನಗಳಲ್ಲಿ ಪ್ರಕಟವಾಗುವುದು-ಎಂದು ಬಂಗಾಳದ ಅಮೃತ ಬಜಾರ ಪತ್ರಿಕೆ ನುಡಿದಿದೆ.

ಚಿನ್ನವನ್ನು ಕೂಡಿಸುವರೇಕೆ?

ಯುನೈಟೆಡ್ ಸ್ಟೇಟ್ಸ್ ಸರಕಾರವು ಇತರ ಯಾರಿಗೂ ಚಿಕ್ಕಾಸನ್ನೂ ತೆರುವ ಸಾಲವನ್ನಿಟ್ಟುಕೊಂಡಿಲ್ಲ. ಇತರರು ಕೊಡಬೇಕಾಗಿರುವ ಯುದ್ಧ ಸಾಲವನ್ನಾದರೂ ತೆರದಿದ್ದರೂ ಈ ರಾಜ್ಯಕ್ಕೆ ಬೇರೆ ವಹಿವಾಟುಗಳಿಂದಾಗಿ ಇತರರು ತೆರಬೇಕಾಗಿರುವ ಹಣವು ಅಪಾರವಾಗಿದೆ. ಚಿನ್ನವೂ ಬೇಕಾದಷ್ಟು ಅದೇ ರಾಜ್ಯದಲ್ಲಿ ಧಾರಾಳ ಸಿಗುತ್ತದೆ. ಹಾಗಿದ್ದರೂ, ಚಿನ್ನವನ್ನು ದೇಶದಿಂದ ಹೊರಗೆ ಕಳುಹಬಾರದೆಂದು ಅಲ್ಲಿ ಕಾನೂನು ಮಾಡಿರುವರು. ಅಂಥ ಸಂಪನ್ನ ರಾಜ್ಯವೆಲ್ಲಿ? ನಮ್ಮ ಹಿಂದೂದೇಶವೆಲ್ಲಿ? ಆದರೂ ಇಲ್ಲಿಂದ ಚಿನ್ನವು ಇಷ್ಟರಲ್ಲೇ ೧೫೦ ಕೋಟಿ ರೂಪಾಯಿಗಳ ಮೌಲ್ಯದಷ್ಟು ಪರದೇಶಗಳಿಗೆ ಹೋಗಿದೆ. ರೂಪಾಯಿಯ ಬೆಲೆ ಇಳಿದಿದೆ. ಚಿನ್ನದ ರಫ್ತನ್ನು ತಡೆವವರೇ ಇಲ್ಲ, ಹೊರಕ್ಕೆ ಹೋದಷ್ಟು ಸುಖವೆನ್ನುತ್ತಾರೆ. ಅದೇಕೆ? ನಾವು ಯಾರಿಗೂ ಕೊಡಬೇಕಾದ ಸಾಲವಿಲ್ಲವೆ? ಇಲ್ಲಿ ಅಷ್ಟು ಚಿನ್ನ ದೊರೆಯುತ್ತದೆಯೆ? ನಾವು ಅಮೇರಿಕಗಿಂತಲೂ ಸಂಪನ್ನರೆಂದು ಸರಕಾರವು ತಿಳಿದಿರುವುದೆ?

ಮಹಾಯುದ್ಧ ಮುಗಿದ ೧೫ನೆಯ ವರ್ಷ

ಇದೇ ನೊವೆಂಬರು ತಾ. ೧೧ರಲ್ಲಿ ವಾಡಿಕೆಯಂತೆ, ಯುದ್ಧದಲ್ಲಿ ಹತರಾದವರ ಆತ್ಮಶಾಂತಿಯನ್ನು ಬಯಸಿ, ಅವರ ಮಹದುಪಕಾರಗಳನ್ನು ಸ್ಮರಿಸಿ, ಎರಡು ಕ್ಷಣಗಳನ್ನು ನಿಸ್ತಬ್ಧತೆಯಲ್ಲಿ ಸಾಮ್ರಾಜ್ಯವಾಸಿಗಳೆಲ್ಲರು ಕಳೆದರು. ಈ ವರ್ಷದಲ್ಲಿ ಪ್ರತಿಯೊಂದು ಜನಾಂಗವೂ ತನ್ನ ಏಳಿಗೆಯನ್ನು ಮುಂದಿಟ್ಟುಕೊಂಡು ಆತ್ಮೋದ್ಧಾರದ ಮಂತ್ರವನ್ನೆ ಜಪಿಸುತ್ತಲಿದೆ. ಎಲ್ಲೆಡೆಗಳಲ್ಲೂ ಜನರು ಹತಾಶರಾಗಿರುವರು. ಇನ್ನು ಬಳಸಿಸಬಾರದೆಂದು ಬದಿಗಿಟ್ಟ ಖಡ್ಗವು, ಅದೇಕೋ ಪುನಃ ಕಣ್ಣೆದಿರಲ್ಲೇ ಪ್ರತಿಯೊಂದು ಕಡೆ ಕುಣಿಯ ತೊಡಗಿದೆ. ಹೀಗೆ ಅತಿ ಉದ್ರೇಕಗೊಂಡ ಮಾನಸಿಕತೆಯು ಎಲ್ಲೆಲ್ಲಿಯೂ ಕಾಣುತ್ತಿರುವಾಗ, ಅತಿಶಾಂತಿಗೂ ಪ್ರಯತ್ನಿಸಲು ಏಕಾಗ್ರತೆಯಿಂದ ಭಾವಿಸಬೇಡವೆ? ಪ್ರತಿಯೊಂದು ಕಡೆ, ಸಂಶಯ ಸಂದೇಹ ಭಯ ಯುದ್ಧ ಸಿದ್ಧತೆಗಳೇ ತೋರುತ್ತಿವೆ. ಇಷ್ಟು ಗಲಿಬಿಲಿ ಹೊಂದಿರುವವರಿಗೆ ಶಾಂತ ಚಿತ್ತಗಳನ್ನು ದೇವರೇ ಕರುಣಿಸಬೇಕು. ಜನಾಂಗಗಳಲ್ಲಿ ಔದಾರ್ಯವು ಹರಡಬೇಕು. ಸರ್ವರೂ ಶಾಂತಿಗಾಗಿ ಹೆಣಗಬೇಕು. ಯುದ್ಧದಲ್ಲಿ ಶಾಂತಿಗಾಗಿ ಮಡಿದವರೆಂತೂ ಮಡಿದರು. ಅವರ ಬಲಿದಾನಕ್ಕಾಗಿ ಶಾಂತಿಯುಂಟಾಗುವಂತೆ ಘಟಿಸಿ ಕೆರುವುದೂ ಬದುಕಿರುವವರಿಗೆ ಕಷ್ಟವಾಗಿಂಬೇಕೆ?

ಸುಳ್ಳಿನಿಂದಾದ ಅನ್ಯಾಯ ಅಪಹಾಸ್ಯಗಳು

ಏನು ಸೂಚಿಸುತ್ತಿವೆ? ನಮ್ಮ ವೈಸ್ರಾಯ ಪುತ್ರರ ಮನೆಯ ಮೇಲೆ (ಇಂಗ್ಲೆಂಡಿನಲ್ಲಿ) ಯಾರೋ ಒಬ್ಬನು ನಡು ಮಧ್ಯಾಹ್ನ ಕತ್ತಿ ದುಬಾಯಿಯಲ್ಲಿ ಕತ್ತಿ, ಕೈಯಲ್ಲಿ ಪಿಸ್ತೂಲು ಧರಿಸಿ, ಮನೆಯೊಳಗೆ ನುಗ್ಗಿ ಅವರನ್ನು ಕೊಲ್ಲಲೆಳಸಿದ್ದನೆಂದೂ ಅವನು ಭಾರತೀಯನೆಂದೂ ಒಂದು ಭ್ರಾಂತಿ ಹಿಡಿದ ಹುಡುಗ ಹೇಳಿದನೆಂದು ಇಂಗ್ಲಿಷ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಪೋಲೀಸರು [illegible] ಸುಳ್ಳು, ಭಾರತೀಯರಾರೂ ಅತ್ತ ಸುಳಿದಿಲ್ಲ, ಗೃಹಸ್ಥರು ಮನೆಯಲ್ಲೇ ಇದ್ದಿಲ್ಲ ಎಂದು ಪ್ರಕಟಿಸಿದರು. ಆದರೂ ಮುಕಾತಿರ್[illegible] ಭಾರತ ವಿರೋಧಿಗಳು ಗಳು [illegible] ಮೊದಲಿನ ಸುಳ್ಳು. ಹಿಂದೆ ಈ ಲೋಫರ್ರು ಹಿಂದೂದೇಶದಲ್ಲಿದ್ದಾಗ ಇವರನ್ನು ಕೊಲೆ ಮಾಡಲು ಪ್ರಯತ್ನಗಳು ಸಾಗಿದ್ದುವು; ಈಗ ಇವರನ್ನು ಕಡೆಗೆ ಕಾವಲಿನಲ್ಲಿರಿಸಿದ್ದರಲ್ಲದೆ, ವಿಮಾನ ಮೂಲಕ ಮಾತ್ರ ಪ್ರಯಾಣ ಮಾಡಬೇಕೆಂದು ಗೊತ್ತುಮಾಡಲಾಗಿತ್ತು” ಎಂದು ಪ್ರಕಟಿಸಿದರು. ಸುಳ್ಳಿನ ಮೂಲಕ ಭಾರತೀಯರನ್ನು ಹಿಂಸಾಕಾರರೆಂದು ದೂರಲು ನಾಲಗೆ ತುರಿಸುವವರಿಗೆಲ್ಲ ಇಂಥ ಒಂದೊಂದು ಸಂದರ್ಭ ದೊರೆತರೆ, ದೇವರೇ ಹೆದರಬೇಕು.

ಮೊಟ್ಟೆಗಳ ಅಕ್ಷತೆ

ಮಹಾತ್ಮಾಜೀಯವರು ನಾಗಪುರದಲ್ಲಿ ಹರಿಜನೋದ್ಧಾರಕ್ಕಾಗಿ ಭಾಷಣ ಮಾಡುತ್ತಿದ್ದಾಗ, ಕೆಲವರು ಅವರ ಕಡೆಗೆ ಕೊಳೆತ ಮೊಟ್ಟೆಗಳನ್ನು ಎಸೆದರೆಂಬ ಸುದ್ದಿಯು ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಯಿತು. ಅದನ್ನೋದಿ ಮಹಾತ್ಮಾಜೀಯವರು,-“ನನ್ನ ಕಡೆಗೆ ಮೊಟ್ಟೆಗಳನ್ನು ಎಸೆದರೆಂದು ಈಗ ನಿಮ್ಮ ಪತ್ರಿಕೆಯನ್ನು ಓದಿ ತಿಳಿದೆನು. ೧೮೯೬ರಲ್ಲಿ ದಕ್ಷಿಣಾಫ್ರಿಕದಲ್ಲಿ ಯುರೋಪೀಯರು ನನಗೆ ಮೊಟ್ಟೆಗಳನ್ನು ಎಸೆದು ಬಹುಮಾನ ಮಾಡಿದ್ದರು. ಅಂದಿನಿಂದ ಇದುವರೆಗೆ ಅಂಥ ಉಡುಗೊರೆ ದೊರೆತಿಲ್ಲ. ವಾರ್ಧಾದಲ್ಲಿ ಸಭೆ ಶಾಂತವಾಗಿದ್ದಿತು. ಈಗ ನಾಗಪುರದ ಯುನಿವರ್ಸಿಟಿ ಭವನದಲ್ಲಿ ಸಾವಿರಾರು ವಿದ್ಯಾರ್ಥಿಗಳು ನನ್ನನ್ನು ಆದರದಿಂದ ಸತ್ಕರಿಸಿದ ಹಾಗೆಯೆ, ಆಫ್ರಿಕದಲ್ಲಿ ನೂರಾರು ಯುರೋಪೀಯರು ನನ್ನನ್ನು ಉಪಚರಿಸಿ ಮಿತ್ರರಾಗಿದ್ದರು’ ಎಂದು ಬರೆದಿರುವರು. ಲಂಡನಿನ ಸುಳ್ಳು ಜಲು ದೂರದ್ದು, ಇದು ಅದಕ್ಕಿಂತಲೂ ಕಠಿನವಾಯಿತಲ್ಲ!

ನಾದಿರಶಹರ ಕೊಲೆ

ಅಮೀರ ಅಮಾನುಲ್ಲರು ದೇಶಭ್ರಷ್ಟರಾಗುತ್ತಲೆ, ಬಚ್ಚಾ-ಇ-ಸಾಕೋವಿನ ಕೈಯಿಂದ ಅಫಘಾನಿಸ್ಥಾನವನ್ನು ಗೆದ್ದುಕೊಂಡು ಪಟ್ಟವನ್ನೇರಿದ ನಾದಿರಶಹರನ್ನು ಕೊಲೆ ಮಾಡಿದರೆಂಬ ದುರ್ವಾರ್ತೆಯು ದುಃಖಕರವಾಗಿದೆ. ವಾಯವ್ಯ ಸರಹದ್ದಿನಲ್ಲಾದ ಪಿತೂರಿಗಳು, ನಮ್ಮ ಸರಕಾರವು ಕೆಡುಗರನ್ನು ದಂಡಿಸುವುದೆಂದು ಚೆಲ್ಲಿದ್ದ ಬಾಂಬುಗಳು, ಆಗಾಗ ದೇಶವೆಲ್ಲ ಶಾಂತವಾಗಿ ಅಮೀರ ಭಕ್ತವಾಗಿದೆ ಎಂದು ಹರಡಿದ ವಾರ್ತೆಗಳು ಇವನ್ನು ವಾಚಕರು ಓದುತ್ತಿರುವಾಗ, ಈ ವಾರ್ತೆಯೊಂದು ಬಂದು ನಿಜಸ್ಥಿತಿಯು ಹೇಗೋ ಹಾಗೆ ಕಾಣಿಸುತ್ತಿದೆ. ಆ ದೇಶವು ನಮ್ಮ ನೆರೆಯದಾಗಿರುವ ಕಾರಣ ಅಲ್ಲಿ ಶಾಂತಿಯಿದ್ದರೆ ನಮಗೆ ಸುಖವುಂಟು. ಆ ದೇಶವು ಸ್ವತಂತ್ರವಾಗಿದ್ದು, ಬಾಳುತ್ತಿರಲಿ.

ನೌಕರರ ನೇಮಕ

ಇದಕ್ಕಾಗಿ ಪಬ್ಲಿಕ್ ಸರ್ವಿಸ್ ಕಮಿಶನು ಇದೆಯಷ್ಟೆ. ಈ ಕಮಿಶನು ಕಳೆದ ವರ್ಷ ನಡೆಸಿದ ಕಾರ್ಯಭಾರದ ವೃತ್ತಾಂತದಲ್ಲಿ ಹಲವು ಟೀಕೆಗಳಿವೆ. ಇಂಥವನನ್ನು ನೇಮಿಸಬೇಕೆಂಗಿ ನಿಶ್ಚಿತವಾದಾಗ, ನೇಮಕ ಮಾಡುವ ಸೂತ್ರಗಳನ್ನು ಸರಕಾರವು ತಿದ್ದುವುದೂ, ಬ್ರಾಹ್ಮಣರಿಗಾದರೆ ಒಂದು ಬ್ರಾಹ್ಮಣೇತರರಿಗಾದರೆ ಮತ್ತೊಂದು ಎಂಬಂತೆ ಯೋಗ್ಯತೆಗಳನ್ನು ನಿರ್ಧರಿಸುವುದೂ ಸರಕಾರಕ್ಕೆ ಸಲ್ಲದು. ಈ ಕಮ್ಮಿಶನನ್ನು ನೇಮಿಸಿದಾಗ, ಯೋಗ್ಯರೂ ಉತ್ತಮರೂ ಮಾತ್ರ ಸರಕಾರದ ನೌಕರರಿಗೆ ದೊರೆವಂತಾಗಬೇಕೆಂದು ಉದ್ದೇಶವಿತ್ತು, ರಾಜಕೀಯ ಪಕ್ಷಗಳ ಪಕ್ಷಪಾತವಾಗಲಿ, ನೇಮಕಗಳಿಗೆ ತಪ್ಪಿದರೆ ಈ ಉದ್ದೇಶವು ಕೆಡುವುದು,-ಎಂದು ಕಮ್ಮಿಶನು ಹೇಳುವುದು. ಇದನ್ನು ಸರಕಾರದ ಅವಗಾಹನೆಗಾಗಿ ಬರೆದ ಕಮಿಶನು, ತಾನಾಗಿಯೆ ಪಕ್ಷಪಾತಗಳನ್ನು ಮಾಡಿದ್ದಿಲ್ಲವೆಂಬುದು ನಿಜವಾದರೆ, ಕಮ್ಮಿಶನದ ಮಾತಿಗೆ ಪ್ರಜಾಮತದ ಬೆಂಬಲ ದೊರೆದೀತು.

ಪತ್ರಿಯ ಕಾನೂನೇ ಬೇರೆ

ಜರ್ಮನಿಯಲ್ಲಿ ಬ್ರಿಟಿಷ ವಾರ್ತಾಲೇಖಕನೊಬ್ಬನನ್ನು ಸರಕಾರವು ಬಂಧನದಲ್ಲಿಟ್ಟಿತು. ಕೂಡಲೆ ಒಂದು ಭಯಂಕರ ಚಳವಳವಾಯಿತು. ಅವನು ಆಲು ತಾಸುಗಳಲ್ಲಿ ಇಂಗ್ಲೆಂಡಿಗೆ ಹೋಗಬಹುದಾಗಿ ಅವನನ್ನು ಜರ್ಮನರು ಬಿಡುಗಡೆ ಮಾಡಿದರು. ಇದನ್ನು ಕುರಿತೂ ಟೀಕೆಗಳಾಗುತ್ತಿವೆ. “ಅವನು ತಾನು ಕಂಡುದನ್ನು ಯಥಾರ್ಥವಾಗಿ ಬರೆದನು. ಅವರಲ್ಲಿ ಅನ್ಯಾಯವೇನು? ಹಾಗೆ ಬರೆಯ ಕೂಡದೆಂದರೆ ವಾರ್ತಾಲೇಖಕರಾಗಿ ಯಾರು ಕೆಲಸ ಮಾಡುವರು?” ಎಂದು ಬ್ರಿಟಿಷ ಪತ್ರಿಕೆಗಳು ಎನ್ನುತ್ತಿವೆ. ಈ ಸೂತ್ರವು ನಮ್ಮ ದೇಶಕ್ಕೂ ಅನ್ವಯಿಸುತ್ತಿದೆಯೆ? ಅವರಲ್ಲೂ ಇಂಗ್ಲಿಷ ಮತ್ತು ಹಿಂದೀ ಪತ್ರಿಕೆಗಳಿಗೆ ಸಮಾನವಾಗಿ ಅನ್ವಯಿಸುತ್ತಿದೆಯೆ? ಪತ್ರಿಕಾ ಸ್ವಾತಂತ್ರ್ಯವಿರಬೇಕು. ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ರಕ್ಷಾ ಕವಚಗಳಿರಬೇಕು” ಎಂದು ಲಂಡನಿನ ಪತ್ರಿಕಾಕರ್ತರುಗಳು ಸಭೆಯ ನಿರ್ಣಯವು ಮಂಜೂರಾಗಿದೆ. ಈ ಸಂಘವು ಈ ನಿರ್ಣಯದ ನಕಲುಗಳನ್ನು ಬೇರೆ ದೇಶಗಳ ಸರಕಾರಗಳಿಗೆ ಕಳುಹುವ ಹಾಗೆಯೇ ನಮ್ಮ ಸರಕಾರಕ್ಕೂ ದೇಶೀಯ ರಾಜರುಗಳಿಗೂ ಕಳುಹಲು ಹಿಂತೆಗೆಯಬೇಕೆ?

NOTES...
ನೋಟಗಳು.

ಷಡ್ರಸೋಪೇತವಾದ ಭೋಜನಾ ನಂತರ ನವರಸಭರಿತ ಭಾಷಣ ಮಾಡುವುದರಲ್ಲಿ ಸರ್ ಸಾಮುವೇಲ್ ಹೋರ್ [illegible] ನಿಪುಣರು. “ಅಂತರೀಂ ನಿರ್ಮಲ [illegible]” ಎಂಬುದು ಸಾಧುವಿನ ಲಕ್ಷಣ, ಮೊದಲನೆಯದು ಕಠಿಣ, ಎರಡನೆಯದು ಸುಲಭ.

* * * *

ಸಾಧುಗಳಿಗೆ ಇತರರ ಇಂಗಿತವು ತಿಳಿಯುವುದು. ಹಿಂದೀ ಜನತೆಯಲ್ಲಿ ಪ್ರಚಂಡ ಪಂಗಡವೊಂದು ಅವರ ಶ್ವೇತಪತ್ರವನ್ನು ಒಪ್ಪುವುದಾಗಿಯೂ, ವ್ಹೈಟ್ ಹೋಲ್ ಎಂಬ ಇಂಡಿಯಾ ಕಚೇರಿಯ ಆಫೀಸಿನಲ್ಲಿ ಭಾರತ ದ್ವೇಷವೇ ಇಲ್ಲವೆಂದೂ ಅವರು ಉದ್ಗಾರ ಎತ್ತಿದರು.

* * * *

ಕೈತುಂಬಾ ಅದರ ಟೊಳ್ಳಾದ ಹಕ್ಕುಗಳನ್ನು ಭಾರತೀಯರಿಗೆ ಕೊಡುವರು. ಅದೆಲ್ಲ ಶ್ವೇತಪತ್ರದಲ್ಲಿದೆ. ಹಿಂದೀಯರ ಅಂತರಂಗದಲ್ಲಿ ಏನಿದೆ ಎಂದು ತಿಳಿಯುವ ಅಗತ್ಯವೇ ಉಳಿದಿಲ್ಲ.

* * * *

ಉರುಟು ಮೇಜಿನ ಮೇಲೆ ಮೂರು ಸಲ ಕಾಯಿಸಿದ ಆ ಶ್ವೇತಪತ್ರ ಕಾಗದದ ದೋಸೆಯೂ ಭಾರತೀಯರಿಗೆ ರುಚಿಸದಾದರೆ, ನಿಜವಾಗಿಯೂ, ಭ್ರಾಂತ “ಲೋಕೋ ಭಿನ್ನ ರುಚಿ”.

* * * *

ಭಾರತೀಯರಾದರೂ ಪಾಂಡುರಂಗ ಭಕ್ತರೆಂಬುದಕ್ಕೆ ಸಂದೇಹವಿಲ್ಲ. (White=ಪಾಂಡು, hall=ರಂಗ.) ಹೀಗಾದ ಮೇಲೆ ವ್ಹೈಟ್ ಹೋಲ್‌ನಲ್ಲಿಯೂ ಭಕ್ತರ ಮೇಲೆ ದ್ವೇಷವಿಡುವವರಾರು?

* * * *

ಶ್ರೀ ಸತ್ಯಮೂರ್ತಿಯವರು ಮೈಸೂರಿನಲ್ಲಿ ಭಾಷಣ ಮಾಡುವಾಗ, ಕಕ್ಷಿಗಾರರ ಸಂಖ್ಯೆಗಿಂತ ವಕೀಲರ ಸಂಖ್ಯೆ ಹೆಚ್ಚಿರುವುದೆಂಬಂತೆ ಮಾತಾಡಿ, ನ್ಯಾಯ ಪ್ರಕಾರದ ರುಸುಂ ವಸೂಲಾಗದೆ, ಒಬ್ಬರಿಗಿಂತ ಒಬ್ಬರು ಕಡಿಮೆ ರುಸುಮಿಗೆ ವ್ಯವಹರಿಸಲೊಪ್ಪುವುದು ಅನ್ಯಾಯವೆಂದರು. ಸತ್ಯ!

* * * *

ಕಕ್ಷಿಗಾರರು ದಿನೇ ದಿನೇ ವಕೀಲರಿಗೆ ಎದುರಾಡುವುದನ್ನು ತಡೆವುದಕ್ಕೂ, ಮೊದಲಾಗಿ, ವಕೀಲರ ವಿಮೆ ಮಾಡುವ ಸಂಘವನ್ನೂ ಸ್ಥಾಪಿಸಬೇಕೆಂದರು. ಕಕ್ಷಿಗಾರರ ಸಂಖ್ಯೆ ಹೆಚ್ಚುವಂತೆ ಮಾಡಿದರೆ, ವಕಾಲತ್ತುಗಳ ವಿಮೆಯಾಗುವುದು.

* * * *

ಮಿತ ಸಂತತಿಯ ಮಾಹಿತಿಯ ವಿಚಾರವಾಗಿ ಮದ್ರಾಸು ಕೌನ್ಸಿಲಿನಲ್ಲೂ ಚರ್ಚೆಯಾಯಿತು. ‘ಮಿತಸಂತತಿ’ ಎಂದರೆ ಮಕ್ಕಳಕಟ್ಟು. ಅಪ್ಪದವೇನೂ ಇಲ್ಲದಿರುವಲ್ಲಿ ಸಂತಾನ ಸಾವಿರವಾಗಬಾರದು ಎಂದು, ಅದನ್ನು ತಡೆಯುವುದಕ್ಕೆ ಬೇಕಾದ ಮಾಹಿತಿಯನ್ನು ಸರಕಾರವು ಪ್ರಚಾರಗೊಳಿಸುವುದರಲ್ಲಿದೆ ಎಂದು ಕೆಥೊಲಿಕರು ಬಹಿರಂಗವಾಗಿಯೂ, ಮುಸ್ಲಿಮರು ಅಂತರಂಗದಲ್ಲೂ ಆಕ್ಷೇಪ ಎತ್ತಿರುವರು.

* * * *

ಖಾನೆಸುಮಾರಿ ರಿಪೋರ್ಟಿನಲ್ಲಿ, ಜನಸಂಖ್ಯೆ ಅಧಿಕ ಪರಿಮಾಣದಲ್ಲಿ ಬೆಳೆಯುತ್ತಿದೆ ಎಂದು ಸುಪರಿಂಟೆಂಡೆಂಟರ ಸೂಚನೆಯಿಂದ ಇದಕ್ಕೆ ಒಲ ದೇಶವೇ ಹೊರಲಾರದಷ್ಟು ಜನರು ಹೆಚ್ಚಿದರೆ, ಭೂಭಾರವಾಗದೆ? ಈ ಜನರೆಲ್ಲ ಪರದೇಶಗಳಿಗೂ ಹೋಗರೇ? ಇಲ್ಲಿ ಇನ್ನೂ ನಂಳರೇ? ಇತರ ದೇಶದವರೊಡನೆ ಸಂಖ್ಯಾಬಲದಿಂದಲೇ ಪ್ರಬಲರಾಗರೆ? ಇತ್ಯಾದಿ ನಾನಾ ಪ್ರಶ್ನೆಗಳು ಅಲ್ಲಲ್ಲಿ ಕೇಳುತ್ತಿವೆ.

* * * *

ಈ ಮಾಹಿತಿ ಪ್ರಚಾರದ, ಅಥವಾ ಮಾಹಿತಿ ಆಚಾರದ ಖರ್ಚಿಗೂ ಮಿತಿ ಇರಬೇಕಲ್ಲ ಎಂದು ಇತರರ ಸೂಚನೆ.

* * * *

೩೪ ಅಡಿ ಉದ್ದದ ನಳಿಗೆಯೊಳಗೆ ಕೂತು ಒಬ್ಬ ಜರ್ಮನನು ಸಿಡಿಮದ್ದಿನ ಸಹಾಯದಿಂದ ಆಕಾಶ ಬಾಣದಂತೆ ೩೦೦೦ ಫೀಟ್ ಎತ್ತರಕ್ಕೆ ಅಂತರಿಕ್ಷದಲ್ಲಿ ಏರಿ ಸುಖವಾಗಿ ಕೆಳಗಿಳಿದನೆಂದು ತಾ. ೫ರಲ್ಲಿ ವಾರ್ತೆ.

Get your FULL VALUE for your money
Insist on Swastik Products.

ನಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ
ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ
ಸಾಮಾನುಗಳನ್ನೇ ಕೊಂಡುಕೊಳ್ಳಿರಿ.

Swastik 777 Bar soap & Swastik Cake & Cube Soaps best in washing Soaps.



ಶುಭ್ರತೆ ... ಬಟ್ಟೆ ಒಗೆಯುವ ಕೆಲಸಕ್ಕೆ 777 ಇದರಿಂದಾಗಿ ಪ್ರಸಿದ್ಧಿ. ... ಸ್ವಸ್ತಿಕಾ ಅತ್ಯುತ್ತಮ ಸಾಬೂನು ... ಯೋಗ್ಯತೆ ಮಿಗಿಲಾಗಿ ಬೆಲೆ ಕಡಿಮೆ—ವಿಲಾಯತಿಗೆ ಸಾಬೂನಿಗೆ ಸ್ಪರ್ಧಿಸಬಲ್ಲದು.

Swastik Double boiled & Raw Linseed Oils.

SWASTIK
THE MARK OF QUALITY

Available in 5 gallon drums, 1 gallon tin.



ಪೈಂಟ್ ಬಗ್ಗೆ ಸ್ವಸ್ತಿಕಾ ಬೇಯಿಸಿದ ಅತೀ ಉತ್ತಮ ನಾದ ಲೀನ್ ಸೀಡ್ ಎಣ್ಣೆ ೫ ಗೆಲನ್ ಡ್ರಮುಗಳಲ್ಲೂ, ಗೆಲನ್ ಟಿನ್ನುಗಳಲ್ಲೂ ದೊರೆಯುವುವು.
ಕಾಫಿ ಗಿಡಗಳ ಮೇಲೆ ಕ್ರಿಮಿ ಹಿಡಿಯದಂತೆ ಚಿಲ್ಲುವರೆ ಸ್ವಸ್ತಿಕಾ ಹಸಿ ಲಿನ್ ಸೀಡ್ ಎಣ್ಣೆ 5 ಗೆಲನ್ ಡ್ರಮುಗಳಲ್ಲಿ ದೊರೆಯುವುದು.
ವಿಲಾಯತಿ ಎಣ್ಣೆಗಿಂತಲೂ ಸೇಕಡಾ 50ರಷ್ಟು ಹೆಚ್ಚಿನ ಫಲ ಪ್ರಯೋಜನ ಕೊಡುವುದಾಗಿ ಲಂಡನ್ ಇಂಪೀರಿಟ್ ಲೆಬೋರೇಟರಿಯವರು ಸರ್ಟಿಫಿಕೇಟು ಕೊಟ್ಟಿದ್ದಾರೆ.

Swastik CASTOR OIL (medicinal)
(Cold drawn)
Packed in gallon tins & 4 oz, 8 oz, 1 lb bottles
ಸ್ವಸ್ತಿಕಾ ಹರಳೆಣ್ಣೆ
4 ಔನ್ಸ್, 8 ಔನ್ಸ್, 1 ರಾತ್ತಲು ಬಾಟ್ಲಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವುದು.

ಶಾಸ್ತ್ರೀಯ ರೀತಿಯಲ್ಲಿ ಸಿದ್ಧಗೊಳಿಸಿರುವ ಶುದ್ಧವಾದ ಈ ಹರಳೆಣ್ಣೆಯು ವಾಸನೆ ಇಲ್ಲದ್ದು ರುಚಿರಹಿತವಾದದ್ದು.
ಹರಳೆಣ್ಣೆಯಿಂದಾಗುವ ಯಾವತ್ತೂ ಉಪಯೋಗಗಳು ನಾಲಿಗೆಗೂ, ಮನಸ್ಸಿಗೂ ಬೇಸರವಾಗದ ಇಲ್ಲದೆ ಈ ಸ್ವಸ್ತಿಕಾ ಹರಳೆಣ್ಣೆಯಿಂದ ದೊರೆಯುವುವು. ಇವಲ್ಲದೆ—
ಸ್ವಸ್ತಿಕಾ ಕಡ್ಲೆಂಣೆ, ಎಳ್ಳೆಂಣೆ, ವಾರ್ನಿಸು, ಪೈಂಟ್ ಹಾಕುವ ಸಾಬೂನು ವಗೈರೆ ಇವೆ.

Swastik Oil Mills Ltd, Bombay.
Chairman—Seth Ambalal Sarabhai,
Directors—Sir Purushothamdas Thakurdas,
" Mr. F. E. Dinshaw,
" Mr. C. S. Patel, & others.

ಮಲಬಾರ್ ಮತ್ತು ಕನ್ನಡ ಜಿಲ್ಲೆಗೆ ಏಜಂಟರು—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ
ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ ಪರದೇಶದಲ್ಲಿ ಜರ್ಮಾನಿನ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುಪು ಬೀಳೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋವಳಿಕೆ ಬರೋಣ, ಶೌಚಕ್ಕೆ ಸಾವು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಮುದುಕರು ಬಲಶಾಲಿಗಳಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೮-೦, ಡಝನ ಬಾಟ್ಲಿಗೆ ೧೩ ರೂಪಾಯಿ ಟಪಾಲ ಖರ್ಚು ಪೋಷ್ಟೇಜ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸ್‌ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.
ಮ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮೆಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ಎ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮೆಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ.

2-6-'38

ಬಿಪ್ಪತ್ತೆಳು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು
ಅನುಕೂಲತೆಗಳನ್ನು ಇದೇ ಮುತ್ಯಾಲುಕತೆ
ಮಾನದಿಂದ ತಿಳಿದು, ಅವರಿಗೆ ಸುಲಭ ದರದ
ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ
ತರದ ಉಡುಪುತೊಡುಪುಗಳನ್ನು ಒದಗಿ
ಸುವ ನಮ್ಮ ಎರಡು ತಲಾಂತರಗಳ
ಅನುಭವವು ಮುಂದಕ್ಕೂ ಸಂತೃಪ್ತಿ
ಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು
ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್,
ಬಾತ್ ಟುವಾಲುಗಳೂ ಧೋತಿ, ಸೀರೆ—
ಪೈರವಾಸು—ಚೆಕ್ಕ—ಚೀಟು ಇತ್ಯಾದಿ
ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪೈ,
[ಸಾಹುಕಾರ ದುಕಾನ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For — A. & F. Harvey,
Managers: Madura Mills Co, Ltd.

For neat and nice Printing
Please call at
THE SHARADA PRESS,
Car Street, MANGALORE.

ಸ್ಥಳೀಕ ನೋಟಗಳ ಬಾಣ!

ಕಳೆದ ಆದಿತ್ಯವಾರ ಕೆನರಾ ಹೈಸ್ಕೂಲಿನಲ್ಲಿ ಶ್ರೀ ಸುದರ್ಶನದಾಸರು ಸ್ವದೇಶಿ ಪ್ರಚಾರಕ ಸಂಘದ ಸಹಾಯಾರ್ಥವಾಗಿ ಪ್ರದರ್ಶನವೊಂದನ್ನು ಜರಗಿಸಿದರು.

† † † †

ಸಾವಿರಾರು ರೂಪಾಯಿಗಳ ಟಿಕೇಟುಗಳನ್ನು ಮಾರಿದ ಸಂಘದವರು ಪ್ರೇಕ್ಷಕರ ಅನುಕೂಲತೆಗಳನ್ನು ಲಕ್ಷಿಸದೆ ಕೇವಲ ಜನರನ್ನು ಮನಸೋಯುವಂತೆ ಮಾಡಿರುವುದು ಮುಂದಕ್ಕೆ ಅವರಿಗೆ ಸಹಾಯಕರವಲ್ಲ.

† † † †

ನಾಲ್ಕಾಣೆ ಕೊಟ್ಟವರು ೩ ರೂಪಾಯಿಯ ಸೀಟಿನಲ್ಲೂ ... ರೂಪಾಯಿ ಕೊಟ್ಟವರು ... ಪ್ರದರ್ಶನವು ಅದರ ಶುಚಿ ಯನ್ನೂ ಯೋಗ್ಯತೆಯನ್ನೂ ಜನರಿಗೆ ತಿಳಿಸದಂತಾದುದು 'ಸ್ವದೇಶೀ ಸಂಘ'ದವರಿಗೆ ಮುಂದಕ್ಕೆ ಲಾಭಕರವಲ್ಲ.

† † † †

ಖಾದಿ ಧರಿಸಿದ ಪ್ರತಿಯೊಬ್ಬನೂ ವಲಂಟಿಯರನೇ—ಪ್ರತಿಯೊಬ್ಬನೂ ತಾನು ಮುಂದು ತಾನು ಮುಂದೆಂದು ಸಭೆಗೆ ಹೋಗಿ ವ್ಯವಸ್ಥೆ ಮಾಡಿ, ಸುದರ್ಶನದಾಸರ ಬಹುವಂಶ ಪ್ರದರ್ಶನಗಳನ್ನು ಪ್ರೇಕ್ಷಕರು ನೋಡದಂತೆ ಮಾಡಿ ಹಣ ಕೊಟ್ಟವರನ್ನು ಅಳಿಸಿ ಹಿಂಚೆ ಕಳುಹಿಸಿದುದು ಇದೆಂತಹ ವ್ಯವಸ್ಥೆ?

† † † †

ಸುದರ್ಶನದಾಸರು ಹೊಂಡದಲ್ಲಿ ಮಲಗಿದುದನ್ನೂ, ಸ್ಟೀಮ್ ರೋಲರಿನ ಅಡಿಯಲ್ಲಿ ಮಲಗಿದುದನ್ನೂ ಎಲ್ಲರಂತೆ ದಿವ್ಯದೃಷ್ಟಿಯು ಮನಸ್ಸಿನಲ್ಲಿ ನೆನೆದುಕೊಳ್ಳಬೇಕಾಯಿತು. ಹೊರತು ಕಣ್ಣಿಗೆ ಒಂದು ನಿಮಿಷವಾಗಲೀ ನೋಡಲಸಾಧ್ಯವಾಯಿತು.

ಬಹುವಂಶ ಸ್ತ್ರೀಯರು ಬಂದಿದ್ದರು. ಅವರು ಕೊಟ್ಟ ಹಣವೂ ಸಾರ್ಥಕವಾಗಿಲ್ಲವೆಂದು ಅವರೇ ಹೇಳಿದಾಗ ಇದಾರಿಗೆ ಭೂಷಣ?

† † † †

ಅಂತೂ ಇಂತೂ 'ಸ್ವದೇಶಿ ಪ್ರಚಾರಕ ಸಂಘ'ದವರ ವ್ಯವಸ್ಥೆಯು ಎಷ್ಟಕ್ಕೂ ಸಾಲದೆ ಹೋಯಿತೆಂದೂ, ಮುಂದಕ್ಕೆ ಇವರು ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕ ಬೆಂಬಲವನ್ನು ಕೋರುವಾಗ, ಹೆಚ್ಚಿನ ವ್ಯವಸ್ಥೆಯನ್ನು ಮಾಡಿ ಮೊದಲು ಪ್ರೇಕ್ಷಕರ ಅನುಕೂಲತೆ, ಆ ಮೇಲೆ ದುಡ್ಡಿನ ಅನುಕೂಲತೆಯನ್ನು ನೋಡಬೇಕೆಂದೂ ಹೇಳುವ, ನಿಮ್ಮ

ಟಿನ್ನಕ್ಕಿ.

[illegible]
ವರ್ತಮಾನ ಸಂಗ್ರಹಗಳು
[illegible] . . . ೨
ಸ್ವದೇಶ ವರ್ತಮಾನ ವಿದೇಶ ವರ್ತಮಾನ, . . . ೬
ಪತ್ರ ವ್ಯವಹಾರಗಳು . . . ೧೧
[illegible]—ಹುಂಗರಿಯರು, ಉಷಃ, ಪಡುಬಿದ್ರೆ, ಕಲ್ಯಾಣಪುರ,
[illegible] ಎರ್ಮಾಳ್ ನುಲ್ಕಿ ಸುರತ್ಕಲ್ ಮುಲ್ಕಿ ಕಟಪಾಡಿ ೯
[illegible] ಪ್ರಭುವನ್ನು ಕೊಲೆ ಮಾಡಿದರು!! . . . ೬
[illegible]ವಹಾರ . . . ೧೩
[illegible] ಪಕ್ಕೀರರ ಕಾಯುವ ಕನ್ಯೆಯಾಯಿತು!! . . . ೧೫

ಸ್ವದೇಶಾಭಿಮಾನಿ.

ತಾ: ೧೬ನೇ ಶುಕ್ರವಾರ ನವಂಬರ ೧೯೩೪.

ರಾಷ್ಟ್ರೀಯತೆಯೂ ಅಂತರ್ರಾಷ್ಟ್ರೀಯತೆಯೂ

ಲೋಕವು ಸ್ವಾರ್ಥಿಗಳಿಂದ ತುಂಬಿಹೋಗಿರುವುದಾದರೂ, ಲೋಕದಲ್ಲಿ ಧ್ಯೇಯವಾದಿಗಳಿಗೆ ಕಡಿಮೆಯಿಲ್ಲ ಪ್ರತಿ ದೇಶವೂ ಪ್ರತಿ ಜನಾಂಗವೂ ಧ್ಯೇಯವಾದಿಗಳನ್ನು ಜನಿಸಿರುತ್ತದೆ. ಪಾಶ್ಚಾತ್ಯರಲ್ಲಿ ರೋಮೆಯ್ನ ರೋಲೆಂಡ್ ವಿಯ್ಯಸ್ಸ್ಟ್ಯೆನ್ ಮೊದಲಾದ ಹಲವು ಧ್ಯೇಯವಾದಿಗಳಿದ್ದಾರೆ ಹಾಗೆಯೇ ಹಿಂದೂಸ್ಥಾನದಲ್ಲಿ ಶ್ರೀ. ರವೀಂದ್ರನಾಥ ಠಾಕೂರರು, ಮಹಾತ್ಮಾ ಗಾಂಧಿಗಳೂ ಮೊದಲಾದ ಧ್ಯೇಯವಾದಿಗಳಿದ್ದಾರೆ ಇವರಿಂದ ದೇಶಕ್ಕೆ ಹಲವು ಬಾರಿ ಪ್ರಯೋಜನವಾಗುತ್ತದಾದರೂ ಕೆಲವು ಸಮಯದಲ್ಲಿ ಇವರಿಂದ ಸಮಾಜಗಳಿಗೂ ದೇಶಗಳಿಗೂ ಬಾಧಕವುಂಟಾಗದೆ ಇರುವುದಿಲ್ಲ

ಇವರಿಂದ ಆಗಾಗ ಉಂಟಾಗುವ ಬಾಧಕಗಳು ಹೆಚ್ಚಿನ ಮಟ್ಟಿಗೆ ಮರೆ ಹೊಂದುತ್ತಿವೆ ಏಕೆಂದರೆ ಧ್ಯೇಯವಾದಿಗಳಲ್ಲಿ ಹೆಚ್ಚಿನವರು ನಿಸ್ವಾರ್ಥರೂ, ಪರಮ ಪೂಜ್ಯರೂ, ನಿರ್ಮಲ ವರ್ತನವುಳ್ಳವರೂ, ಅಸಮಾನ ಆತ್ಮಯಜ್ಞ ಮಾಡ ಬಲ್ಲವರೂ ಆಗಿರುತ್ತಾರೆ ಈ ಕಾರಣದಿಂದ ಇಡೀ ಮಾನವ ಸಮಾಜವು ಮುಗ್ಧವಾಗಿ ಹೋಗುತ್ತದೆ, ಅವರ ತತ್ವಗಳು ಕಾರ್ಯರೂಪದಲ್ಲಿ—ಐಹಿಕ ಅನುಕರಣದಲ್ಲಿ—ಎಷ್ಟೇ ಬಾಧಕಕರವಾಗಿದ್ದರೂ, ಆ ಬಾಧೆಗಳನ್ನೆಣಿಸುವಷ್ಟು ಸಾಹಸವು ಯಾರಿಗೂ ಇರುವುದಿಲ್ಲ.

ಅಂತೆಯೇ ಶ್ರೀ ರವೀಂದ್ರರು ಒಂದು ಕಡೆಯಿಂದ ಅಂತರ್ರಾಷ್ಟ್ರೀಯತೆಯನ್ನೂ, ಮಹಾತ್ಮಾಜೀಯವರು ಇನ್ನೊಂದು ಕಡೆಯಿಂದ ಅಹಿಂಸೆಯನ್ನೂ ಜೀವನದ ತತ್ವವಾಗಿ ಉಪದೇಶಿಸುವಾಗ ನಾವು ತಲೆ ಬಾಗಿ ನಿಲ್ಲಬೇಕಾಗುತ್ತದೆ ತತ್ವತಃ ಅಂತರ್ರಾಷ್ಟ್ರೀಯತೆಯು ಒಳ್ಳೇಯದು, ಅಂತರ್ರಾಷ್ಟ್ರೀಯತೆಯೇ ಬೇಕೆಂದು ಪ್ರತಿ ರಾಷ್ಟ್ರದ ರಾಜತಂತ್ರಪ್ರವೀಣ (States man) ನು ಕೂಡ ಅನ್ನುವನು ಆದರೆ ಅಂತರ್ರಾಷ್ಟ್ರೀಯತೆಯನ್ನು ಈ ಧ್ಯೇಯವಾದಿಗಳು ಉಪದೇಶಿಸುತ್ತ ಎಂದಂತೆ, ಆದರ ತತ್ವವು ಪರಾಧೀನ ಜನಾಂಗಗಳಲ್ಲಿಯೇ ನೆಲಸುತ್ತದೆಯೇ ಹೊರತು, ಸ್ವಾಧೀನ ಜನಾಂಗಗಳಲ್ಲಿ ಅದಕ್ಕೆ ಬೆಲೆ ಇರುವುದಿಲ್ಲ. ಹೀಗಾಗಿ ಈ ಧ್ಯೇಯವಾದಿಗಳ ಉಚ್ಚ ತತ್ವಗಳು ಅಸಹಾಯಕರೂ ಚೇತನರಹಿತರೂ ಆದ ಪರಾಧೀನ ಜನಾಂಗಗಳ ಜನತೆಯ ಮನಸ್ಸಿನ ಸಮಾಧಾನ ಮಾತ್ರವಾಗಿ ಪರಿಣಮಿಸಿ, ಅವರನ್ನೇ ನಿರ್ವೀರ್ಯರನ್ನಾಗಿ ಮಾಡುತ್ತದೆ

ಅಂತರ್ರಾಷ್ಟ್ರೀಯತೆಯು ಬಹಳ ಒಳ್ಳೆಯದು. ಅದು ರಾಷ್ಟ್ರೀಯತೆ (Nationalism)ನ ವಿಶಾಲ ರೂಪ—ವಿಶಾಲ ರಾಷ್ಟ್ರೀಯತೆ-ಸಾಧ್ಯವಾದರೆ ಒಳ್ಳೇದು—ಆದರೆ ಅದನ್ನು ಸಾರುವ ಮೊದಲು, ಅದು ಸಹ ಪರಾಧೀನ ಜನಾಂಗಗಳಿಗೆ ಸಾರುವ ಮೊದಲು ಅದು ಸಾಧ್ಯವೆ ಎಂದು ನೋಡಬೇಕು. ಅಂತರ್ರಾಷ್ಟ್ರೀಯತೆಯಂತಹ ತತ್ವವು ಹಿಂದೂಸ್ಥಾನಕ್ಕೆ ಪ್ರಯೋಜನವಿರುವುದಿಲ್ಲ; ಹಿಂದೂಸ್ಥಾನಕ್ಕೇನು!—ಪರಾಧೀನವಿರುವ ಯಾವ ಜನಾಂಗಗಳಿಗೂ ಪ್ರಯೋಜನವಿರುವುದಿಲ್ಲ. ಸ್ವಾಧೀನ ಜನಾಂಗ[illegible] ಜಗತ್ತನ್ನು ಅಧಿಕರಿಸುತ್ತಿವೆ; ದಬ್ಬಾಳಿಸುತ್ತಿವೆ; ಉಪವಾಸವಿರಿಸುತ್ತಿವೆ; ಕ್ರೂರವಾಗಿ ದಂಡಿಸುತ್ತಿವೆ; ಪೀಡಿಸುತ್ತಿವೆ; [illegible] ಗಳು ಅವುಗಳು ಕತ್ತಲೆಯವಾದರೂ ಆ ತತ್ವಗಳೂ ಆ ಧ್ಯೇಯಗಳೂ ಅವರಿಗೇನು ಪ್ರಯೋಜನ.

ಎಲ್ಲಾ ತತ್ವಗಳನ್ನೂ ಮೀರುವಂತಹ ಒಂದು ಐಹಿಕ ವಾದವಿದೆ. ಅದು ಅಸ್ತಿತ್ವ. ವಿಶ್ವದ ಪ್ರತಿ ಪರಮಾಣುವೂ ತನ್ನ ಅಸ್ತಿತ್ವವನ್ನು ರಕ್ಷಿಸುವ ಬಗ್ಗೆ ಪ್ರಯತ್ನಿಸುವುದರಿಂದಲೇ ವಿಶ್ವವು ಸ್ಥಾಯಿಯಾಗಿದೆ. ಮತ್ತು - ಅಸ್ತಿತ್ವಕ್ಕಾಗಿ ಹೆಣಗಾಡಬಲ್ಲವನ್ನುವೇ ಸ್ಥಾಯಿಯಾಗಿರುತ್ತದೆ. ಡಾರ್ವಿನ್ನನ Survival of the Fittest ಯೋಗ್ಯರೇ ಬಾಳುವರೆಂಬ ಐಹಿಕ ವಾದವು ಜಂತು ರಚನೆಯ ತತ್ವದಲ್ಲಿ ಮಾತ್ರವಲ್ಲದೆ ಜನಾಂಗ ರಚನೆಯ ತತ್ವದಲ್ಲಿಯೂ ಸಮಾನ ಪ್ರಾಮುಖ್ಯವಾದುದಾಗಿದೆ. ಯೋಗ್ಯರೇ ಬಾಳುವರು ಎಂಬ ತತ್ವವು ಧ್ಯೇಯವಾದಿಗಳಿಗೆ ಕರ್ಕಶವಾಗಿ ಕಾಣುತ್ತದೆ—ಆದರೆ ಪ್ರಕೃತಿಯಲ್ಲಿ ಅಕ್ಷರಶಃ ನಿಜವಾಗಿದೆ.

ಜರ್ಮನಿಯೊಳಗಿನ ಇತ್ತೀಚೆಗಿನ ಕ್ರಾಂತಿಯೂ ಧ್ಯೇಯವಾದದ ಮೇಲಿನ ಪ್ರತಿಕ್ರಿಯೆಯಾಗಿರುತ್ತದೆ ಜರ್ಮನಿಯು ಸೋಲಿಸಲ್ಪಟ್ಟ ರಾಷ್ಟ್ರ, ಅದಕ್ಕೆ ಶಾಂತಿಸ್ಥಾಪನೆ, ಸೌಹಾರ್ದ, ಶಸ್ತ್ರತ್ಯಾಗ, ಮೊದಲಾದುವುಗಳನ್ನು ಉಪದೇಶಿಸುವುದು ಸುಲಭ ಕೆಲಸ ಯುದ್ಧವು ಕೆಟ್ಟದು ಯುದ್ಧವು ಇನ್ನು ನಡೆಯದಂತೆ ಎಲ್ಲರೂ ಪ್ರಯತ್ನಿಸಬೇಕು ಇದಕ್ಕೆ ಶಸ್ತ್ರತ್ಯಾಗ ಮಾಡಬೇಕು ಆದರೆ ಮಾಡಬೇಕು ಯಾರು? ಸೋಲಿಸಲ್ಪಟ್ಟ ಜರ್ಮನಿ ಮಾತ್ರ ಫ್ರಾನ್ಸಿನ ಸೈನ್ಯವು ಬೆಳೆಯುತ್ತಾ ಇರುತ್ತಿದೆ ಇಂಗ್ಲೆಂಡಿನ ನೌಕೆಯು ದೊಡ್ಡದಾಗುತ್ತಿದೆ ಜಪಾನು ಯುದ್ಧದ ಘೋಷಾ ನ್ನೇ ತೊಟ್ಟುಕೊಂಡಿದೆ ಅಮೇರಿಕದ ಸನ್ನಾಹಗಳು ಏರುತ್ತಾ ಬರುತ್ತಿವೆ ಈ ಮಧ್ಯದಲ್ಲಿ ಶಸ್ತ್ರ ತ್ಯಾಗ, ಚೇತನವಿದ್ದ ಯಾವ ಜನಾಂಗವು ಇದನ್ನು ಸಹಿಸಬಲ್ಲುದು?

ಜರ್ಮನಿಯು ಯುದ್ಧದ ಮಾನಸಿಕತೆಯನ್ನು ಜನತೆಯಲ್ಲಿ ಪ್ರೇರಿಸುತ್ತಿದೆಯೆಂದು ರಾಷ್ಟ್ರಗಳ ಆರೋಪ ಆದರೆ ಜಪಾನು ಚೈನಾದ ಮೇಲೆ ದಂಡೆತ್ತಿದಾ ಬೆರಳನ್ನು ಯಾರು ಎತ್ತಿದ್ದಾರೆ? ಐಗುಪ್ತ ಸರಕಾರವು ಬ್ರಿಟಿಷರು ಹೇಳಿದಂತೆ ನಡೆಯದಿದ್ದಾಗ ಬ್ರಿಟಿಷರು ಯುದ್ಧ ಹಡಗುಗಳನ್ನು ಐಗುಪ್ತಕ್ಕೆ ಸಾಗಿಸಿದುದನ್ನು ನೋಡಿ ತಡೆಯಲು ಯಾರು ಮುಂದೆ ಬಂದಿದ್ದಾರೆ? ಮೊರೊಕ್ಕೊದಲ್ಲಿ ಫ್ರಾನ್ಸು ಸೈನ್ಯ ಕಳುಹಿಸಿ ಜೀವ ಹಾನಿ ಮಾಡುತ್ತಿದ್ದಾಗ ಯಾರು ನಿಷೇಧಿಸಿದ್ದಾರೆ? ಯುದ್ಧದ ಉತ್ಸಾಹವೂ, ಪ್ರಾಣ ಹಾನಿಯ ಆಶೆಯೂ ಪಾಶ್ಚಾತ್ಯ ರಾಷ್ಟ್ರಗಳ ಪ್ರತಿ ಅಣುವಿನಲ್ಲಿಯೂ ತುಂಬಿ ಹೋಗಿರುತ್ತದೆ ಯುದ್ಧ ಮಾಡಬೇಡಿ, ಹಾನಿ ಮಾಡಬೇಡಿ, ರಕ್ತ ಚೆಲ್ಲಬೇಡಿ ಎಂದು ತತ್ವ ಬೇಕಾದರೆ ಇತರರಿಗೆ ಉಪದೇಶಿಸಲು ಮುಂದೆ ಬರುತ್ತಾರ

ಯುದ್ಧದ ನಂತರ ಕೈಸರರನ್ನು ದೂಷಿಸಲಿಕ್ಕೂ ರಾಷ್ಟ್ರೀಯತೆಯನ್ನು ಖಂಡಿಸಲಿಕ್ಕೂ, ಯುದ್ಧವನ್ನು ನಿಷೇಧಿಸಲಿಕ್ಕೂ ಶಾಂತಿಯರು ಜರ್ಮನಿಯಲ್ಲಿ ಮುಂದೆ ಬಂದರು ಚೇತನ ತಂದಿರುವ ಜರ್ಮನಿಯಲ್ಲಿ ಪರಾಜಯದ ಮಾನಸಿಕತೆಯನ್ನು ಈ ಮೂಲಕ ನಡಲು ಪ್ರಯತ್ನಗಳು ನಡೆದುವು ಜರ್ಮನಿಯು ಹಿಂದೂಸ್ಥಾನವಲ್ಲ ಅದು ಸಜೀವ, ಸಚೇತನ, ಸಶಕ್ತ ಜನಾಂಗ, ಆದುದರಿಂದಲೇ ಹಿಟ್ಲರನು ಧುರೀಣನಾದ ಜರ್ಮನಿಯ ಹಲವು ಕೃತ್ಯಗಳಲ್ಲಿ ನಮಗೆ ಸಹಾನುಭೂತಿ ಇಲ್ಲದಿರಬಹುದು ಆದರೆ ಅಲ್ಲಿ ಸೋಲಿನ ಮಾನಸಿಕತೆಯ ಎದುರಾಗಿ ಎದ್ದ ಈ ಪ್ರತಿಕ್ರಿಯೆಯು ಹಿಂದೂಸ್ಥಾನಕ್ಕೂ ಆದರ್ಶವಾಗಿರಬಲ್ಲುದು

ವಿದೇಶ ವರ್ತಮಾನ.

ತನ್ನ ಬಿಡುಗಡೆಯಾದ ನಂತರ ಸುಭಾಶ್ಚಂದ್ರಬೋಸರು ಸರಕಾರಕ್ಕೆ ವಿರೋಧವಾಗಿ ಆಚರಿಸುದಕ್ಕೆ ಅವರು ಹಿಂದೂಸ್ಥಾನಕ್ಕೆ ಹಿಂತಿರುಗಿದೊಡನೆ ಪುನಃ ಸೆರೆಹಿಡಿಯಬೇಕೆಂದು ಸರ್ ವಾಲ್ಟರ್‌ಸ್ಮೈಲ್ಸ್ ಎಂಬವರು ಸರ್ ಹೋರರಿಗೆ ಕೊಮನ್ಸ್ ಸಭೆಯಲ್ಲಿ ಸಲಹೆಯನ್ನಿತ್ತರು

ಕೈರೋವಿಗೆ ಬಂದ ಜಪಾನ ವಸ್ತ್ರಗಳಿಗೆ "ಮೇಡ್ ಇನ್ ಮೆಂಚೆಸ್ಟರ್" ಎಂಬ ಸೀಲು ಹೊಡೆದಿದ್ದು ಕಸ್ಟಮ್ಸ ಆಫೀಸಿನವರು ಸಂಬಂಧಪಟ್ಟವರನ್ನು ಸೆರೆಹಿಡಿದಿರುವರು

ಜರ್ಮನಿಯಲ್ಲಿ ಹಿಟ್ಲರನ ನಾಜಿಪಕ್ಷವು ಚುನಾವಣೆಯಲ್ಲಿ ಜಯಶೀಲವಾದುದಕ್ಕಾಗಿ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಿರುತ್ತಾರೆ.

ಶಿಫ್ಸ್‌ಬರಿಯಲ್ಲಿ ಡಾ। ಆರ್. ಎಲ್. ಹೊಡ್ಸ್ ಎಂಬವರು ತನ್ನ ಚಿಕಿತ್ಸೆಯಲ್ಲಿದ್ದ ಸ್ತ್ರೀಯೋರ್ವಳು ಸಾಯು ಹೋಗಾಗ ತನ್ನ ದೇಹದ ರಕ್ತವನ್ನು ತೆಗೆದು ಅವಳ ದೇಹಕ್ಕೆ ಕೊಟ್ಟರು.

ಲಂಡನಿನ ನಿರುದ್ಯೋಗಿಗಳ ಸಹಾಯಾರ್ಥವಾಗಿ ಪತ್ರಿಕ[illegible] ಯವರು ೧೦೦೦ ಪೌಂಡುಗಳನ್ನು ಸಮರ್ಪಿಸಿದಾ[illegible] ಕಳುಹಿಸಿದರು.

[illegible]

ಆಲಜೆಯ ತಿರುಪಲ್ಲದ ಬಂದು ಮಸೀ[illegible] ದರು. ಗೋಡೆಗಳು ಒಡೆದುವು, [illegible] ತನಿಖೆ ನಡೆಯುತ್ತಿದೆ.

ಮಧುರೆಯಲ್ಲಿ ಆಲಗರ್ ಸ್ವಾಮಿ ಎಂಬವನ [illegible] ಅವಸರ ಅವಸರವಾಗಿ ನಡೆಯುವಾಗ ಪೋಲೀಸರು ಬಂದು [illegible] ಕಾಶ್ಯವಿಂದ ಕಳಗಿಳಿಸಿ ಪರೀಕ್ಷೆಗಾಗಿ ಆಸ್ಪತ್ರೆಗೆ [illegible] ಮೃತನಿಗೆ ವಿಷವಿಟ್ಟರೆಂದು ಊಹನೆ

ರಾಮನಾಡಿನ ರೈಲ್ವೆ ಸ್ಟೇಶನಿನ ಬಳಿ ರೈಲ್ವೆ [illegible] ವರ್ಷ ಪ್ರಾಯದ ಹುಡುಗನೊಬ್ಬನ ರುಂಡ ಮಾತ್ರ [illegible] ಮುಂಡವು ಪತ್ತೆಗೆ ದೊರೆತಿಲ್ಲ, ತನಿಖೆಯಾಗುತ್ತಿದೆ.

ಗಾಂಧಿಜೀಯವರನ್ನು ಡಾ। ಅನ್ಸಾರಿಯವರು ಪರೀಕ್ಷಿಸಿ ಅವರ ಆರೋಗ್ಯವು ಸಮರ್ಪಕವಾಗಿದೆಯೆಂದೂ ವಾರ್ಧಾದಲ್ಲಿ ಅವರ ತೂಕವು ಪೌಂಡ್ [illegible] ರಿಂದ ೧೦೮ಕ್ಕೆ ಏರಿದೆಯೆಂದೂ ತಿಳಿಸಿರುವರು.

ಮಧುರೆಯ ಮುನಿಸಿಪಾಲಿಟಿಯು ಕೋಟೆಗಳ ಬಗ್ಗೆ ೫೦ ಮನೆಗಳನ್ನು ಕಟ್ಟಿಸುವುದಕ್ಕಾಗಿ ರೂ ೩೦,೦೦೦ವನ್ನು ಪ್ರತ್ಯೇಕಿಸಿಟ್ಟಿತು.

ತಿನ್ನೆವೆಲ್ಲಿಯಲ್ಲಿ ಕಳೆದ ಆಗೋಸ್ತು ತಿಂಗಳಲ್ಲಿ ತನ್ನ ಪತ್ನಿಯನ್ನು ಕೊಂದು ಗೋಣಿಯಲ್ಲಿ ಕಟ್ಟಿ ಹೂತಿಟ್ಟ ಷಣ್ಮುಗಂ ಆಚಾರಿ ಎಂಬವನಿಗೆ ಫಾಶಿ ಶಿಕ್ಷೆ ವಿಧಿಸಿದರು

ಮುಂಬಾಯಿಯ ಗ್ರೇಂಟ್ ಮೆಡಿಕಲ್ ಕೊಲೇಜಿನ ಮಾಜಿ ಡೀನರಾದ ಡಾ। ಜಿವರಾಜ ಮೇಥಾರವರನ್ನು ಬಿಡುಗಡೆ ಮಾಡಿದರು.

ಮಧುರೆಯಲ್ಲಿ ರೈಲು ಓಡುತ್ತಿದ್ದಾಗ ಪಕ್ಕಾಂಪಿಳ್ಳೈ ಮತ್ತು ಸುಂದರರಾಜ ಅಯ್ಯಂಗಾರ್ ಎಂಬವರ ಮೇಲೆ ಸೋರಿಮುತ್ತು ಎಂಬವನು ಬಿದ್ದು ಅವರನ್ನು ಗಾಯಗೊಳಿಸಿದನು. ಅಷ್ಟರಲ್ಲಿ ಸ್ತ್ರೀಯೋರ್ವಳು ರೈಲಿನ ಚೈನನ್ನು ಎಳೆದು ರೈಲನ್ನು ನಿಲ್ಲಿಸಿದಳು ಅಪಾದಿತನನ್ನು ಸೆರೆಹಿಡಿದಿರುವರು

ದೀನ ಬಂಧು ಸಿ ಎಫ್ ಎಂಡ್ರೂಸರು ತಾ. ೧೧ರಲ್ಲಿ ಇಂಗ್ಲಾಂಡಿಗೆ ಪ್ರಯಾಣ ಬೆಳೆಸಿದರು

ಶ್ರೀಮತಿ ಮೋತಿಲಾಲ ನೆಹರರವರು ಗುಣಹೊಂದುತ್ತಲಿರುವರು. ಒಪರೇಶನಿನಿಂದಾದ ಘಾಯವು ವಾಸಿಯಾಗುತ್ತಿದೆ

ಮುಲ್ತಾನಿನ ಸೆರೆಯಿಂದ ಡಾ। ಸತ್ಯಪಾಲರನ್ನು ಬಿಡುಗಡೆ ಮಾಡಿದರು

ತಾ. ೧೦ನೇ ೯ನ ಅಲ್ಲಹಾಬಾದಿನಲ್ಲಿ ಪಂಡಿತ ಮಾಲವೀಯರು ಸರ ತೇಜಬಹದ್ದೂರ್ ಸಪ್ರೂ ರವರನ್ನು ಕಂಡು ಮುಂದಿನ ರಾಜ್ಯಾಂಗ ರಚನೆಯ ಕುರಿತು ಒಂದು ತಾಸಿನ ತನಕ ಮಾತನಾಡಿದರು.

ಬಿಡ್ನಾಪುರದಲ್ಲಿ ವಕೀಲರಾದ ಶ್ರೀ ಅಂಬಿಕಾ ಪ್ರಸನ್ನ ಸೇನ ಗುಪ್ತರೆಂಬವರೂ ಬಾರ್ ಎಸೋಸಿಯೇಶನಿನ ಅಸಿಸ್ಟೆಂಟ್ ಸೆಕ್ರೆಟರಿಯಾದ ಶ್ರೀ ಪ್ರಮೋಟಿಕ ಚಂದ್ರಗುಪ್ತರೂ ೪೮ ತಾಸುಗಳೊಳಗೆ ಮಿಡ್ನಾಪುರದಿಂದ ಹೊರಗೆ ಹೋಗಬೇಕೆಂದು ಅಪ್ಪಣೆಯಾಗಿದೆ.

"ನಾದಿರ್‌ಷಹರ ಮರಣದಿಂದ ಮುಸ್ಲಿಮ ಪ್ರಪಂಚವು ಹಾನಿಗೊಂಡುದಲ್ಲದೆ ಆಸ್ಯಾ ಖಂಡವೂ ಆಘಾತಕ್ಕೀಡಾಯಿತು" ಮೌಲಾನಾ ಶೌಕತಾಲಿಯವರು ಹೇಳಿರುವರು

ಕೆಂಪು ಕರಪತ್ರಗಳ ಸಂಬಂಧವಾಗಿ ನ್ಯೂಡಿಲ್ಲಿಯಲ್ಲಿ ಅನೇಕ ಮನೆಗಳನ್ನು ಜಡ್ತಿಗೆ ಗುರಿಪಡಿಸಿದರು.

Stop Press.

ರೋಮಿನಲ್ಲಿ ಕೌನ್ಸಿಲ್ ಆಫ್ ಕೋರ್ಪರೇಶನಿನಲ್ಲಿ—ಸೀನಿಯರ್ ಮುಸೋಲಿನಿಯವರು ಭಾಷಣ ಮಾಡುತ್ತಾ 'ಜನಾಂಗ ಸಂಘವು ಬಲಿಷ್ಠ ಪಕ್ಷಗಳನ್ನು ಕಳೆದುಕೊಂಡು ನಿರ್ಬಲ ಮತ್ತು ಹೆಂಟೆಯಂತಾಗಿರುತ್ತದೆ' ಎಂದರು.

ಪೆಲೆಸ್ಟೀನದಲ್ಲಿ ನಡೆದ ಕ್ಷೋಭೆಯಿಂದ ಮರುಗಿದವರು ಅರಬರ ಪರವಾಗಿ ವೈಸರಾಯರಿಗೊಂದು ಮನವಿಯನ್ನು ಮಾಡಿಕೊಂಡರು.

ಜಪಾನರ ಸರಕುಗಳಿಗೆ ಮೆಂಚೆಸ್ಟರಿನ ಸೀಲುಗಳನ್ನು ಹಾಕಿ ಅವುಗಳನ್ನು ಕೈರೋವಿಗೆ ಮಾರಾಟಕ್ಕೆ ತರಿಸಿದವನು ಬ್ರಿಟಿಷನಾಗಿರುವನು.

ಕಲ್ಕತ್ತದ ಕಾಶೀಮಿತ್ರ ಸ್ಮಶಾನದಲ್ಲಿ ಕಾಷ್ಠದ ಮೇಲಿದ್ದ [illegible] ಹೆಂಡತಿಯೊಬ್ಬಳು ಜೀವದಿಂದಿರುವಳೆಂದು ಮರಣಹೆಗೆಯೊಡನೆ [illegible] ರಿಜಿಸ್ಟ್ರಾರರು ಹೇಳಿದರು ವೈದ್ಯರನ್ನು ಕರೆಕಂದು ಇಂಜೆಕ್ಷನ್ [illegible] ಮೃತಳು ಚೇತರಿಸಿ ಎಲ್ಲರನ್ನೂ ಆನಂದಗೊಳಿಸಿದಳು.

ನಾದಿರಷಹಾರು ೨೦೦ ಹುಡುಗರಿಗೆ ದಿಲ್‌ಕುಷ್ ಅರಮನೆಯಲ್ಲಿ ಇನಾಮು ಹಂಚುವಾಗ ಜರ್ಮನ್ ಕಾಲೇಜು [illegible] ಕಾಲೇಜು ಎರಡನೆಯ ಸಾಲಲ್ಲಿ ನಿಂತು ಗುಂಡು ಹಾರಿ[illegible] ಕೊಂದನೆಂದು ನಿಶ್ಚಿತ ವಾರ್ತೆಯೊಂದು ಬಂದಿದೆ.

ದಕ್ಷಿಣ ಕನ್ನಡ

ಮಂಗಳೂರು:—ಇದೇ ಕಳೆದ ಶನಿವಾರ ಸಾಯಂಕಾಲ [illegible] ಆಟದ ರಂಗದಲ್ಲಿ ಸುಪ್ರಸಿದ್ಧರಾದ ಶ್ರೀ ಸುದರ್ಶನ [illegible] ತನ್ನ ಅತ್ಯದ್ಭುತ ದೇಖಾವೆಗಳಿಂದ ಸುಮಾರು ಐದು [illegible] ಬೆರಗುಗೊಳಿಸಿದರು. ಗವರ್ನಮೆಂಟ್ [illegible] ಮೊದಲು ಜರಗಿಸಿದ ತನ್ನ ಪ್ರದರ್ಶನದಿಂದ ದೊರೆತ [illegible] ಲೇಡಿ ಗೋಶನ್ ಆಸ್ಪತ್ರೆಯ ನಿಧಿಗೆ, ಸಿಕ್ಕಿದ ೬೦೦/— [illegible] ೪೦೦/— ರೂಪಾಯಿಯನ್ನು ಕೂಡಿಸಿ ಕೊಡುವುದಕ್ಕೆ ತಾನು [illegible] ಸಿದ್ಧನಿರುವೆನೆಂದೂ, ಇಂದಿನ ಆಟದ ಪೂರ್ಣ ಉತ್ಪನ್ನವನ್ನು [illegible] ಪ್ರಚಾರ ಸಭೆಗೆ ಅರ್ಪಿಸಿಡುವೆನೆಂದೂ ಶ್ರೀ ದಾಸರು [illegible] ಮುಂದೆ ಹೇಳಿದರು. ಇವರ ತ್ಯಾಗಬುದ್ಧಿಯನ್ನೂ ಯೋಗ [illegible] ಶ್ಲಾಘಿಸಿ, ಕೃತಜ್ಞತೆಯನ್ನರ್ಪಿಸಿ ಶ್ರೇಯಸ್ಸನ್ನು ಬಯಸಿ, [illegible] ಎಲ್. ಪಿ. ಅಡಪ್ಪರೂ, ಶ್ರೀ ಪುಣಿಂಚಿತ್ತಾಯರೂ ಸಂದರ್ಭೋಚಿತ [illegible] ಮಾಡಿದರು. ಶ್ರೀ ಸುದರ್ಶನ ದಾಸರ ಪ್ರದರ್ಶನಗಳು [illegible] ಸರಿ.

ಜನಾಬ್ ಕೆ ಎಚ್. ಶೇಕ್ ಫರೀದ್ ಸಾಹೇಬ್ ಮತ್ತು ಅವರ [illegible] ಕೂಡಿ ಮುಸ್ಲಿಂ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮತ್ತು ಕೈಗಾರಿಕೆಯ ಅಭಿವೃದ್ಧಿಗೋಸ್ಕರ ಸರ್ವಜನ ಸಹಾಯದಿಂದ ಕಳೆದ ಅಕ್ಟೋಬರ ತಿಂಗಳ ಅಖೈರ ವರೆಗೆ ಬ್ಯಾಂಕಿನಲ್ಲಿ ಜಮೆ ಇಟ್ಟ ಒಟ್ಟು ರೂ ೧೨೫—೧೨—೨ ಆಗಿರುತ್ತದೆಂದೂ ಇನ್ನು ಮುಂದೆ ಪ್ರತಿ ತಿಂಗಳ ಮೊದಲನೆ ವಾರ ಪತ್ರಿಕೆಯಲ್ಲಿ ಈ ಸಂಘದ ಜಮಾಖರ್ಚಿನ ಲೆಖ್ಖವನ್ನು ಸರ್ವರ ಅವಗಾಹನೆ ಬಗ್ಗೆ ತಿಳಿಸಲಾಗುವುದೆಂದೂ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಕೆನರಾ ಹೈಸ್ಕೂಲಿನ ಶಾಲಾ ವರ್ಷೋತ್ಸವವು ಇದೇ ದಶಂಬರ ತಾ. ೨೨ನೇ ದಿನ ಶುಕ್ರವಾರ ಜರಗಲಿರುವುದು. ಶಾಲಾ ಹಿತಚಿಂತಕರಿಗೂ ಹಳೆ ವಿದ್ಯಾರ್ಥಿಗಳಿಗೂ ಸುಸ್ವಾಗತವಿದೆ

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ ೧೬ರಿಂದ ಮೋರನ್ ಮತ್ತು ಮೆಕ್ ಎಂಬ ಪ್ರಸಿದ್ಧ ಪ್ರಹಸನಗಾರರಿಂದ ಅಭಿನಯಿಸಲ್ಪಟ್ಟ ಹಿಪ್ಪೋ [illegible] ಎಂಬ ಮಾತಾಡುವ ಚಿತ್ರವನ್ನೂ ತಾ ೧೯ರಿಂದ ಶ್ರೀ ಕೃಷ್ಣ ಮೂವಿಟೋನ್ ಕಂಪೆನಿಯವರ ೧ ಲಕ್ಷ ರೂಪಾಯಿ ವೆಚ್ಚವಾದ ಅತ್ಯ ಮೋಹಕವಾದ ಚಿತ್ರವೆಂದು ಪ್ರಖ್ಯಾತಿಪಟ್ಟು, ಶಾಂತಕುಮಾರಿ, ಹೈದರ್ ಮಾಸ್ಟರ್ ಮಹಮ್ಮದ್, ಮಾರುತಿರಾವ್ ಮೊದಲಾದವರಿಂದ ಅಭಿನಯಿಸಲ್ಪಟ್ಟ "ಲಂಕಾದಹನ"ವೆಂಬ ಮಾತಾಡುವ ಚಿತ್ರವನ್ನೂ ಪ್ರದರ್ಶಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘದ ಪರವಾಗಿಯೂ, ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘದ ಪರವಾಗಿಯೂ ಮಾ। ಡೈರೆಕ್ಟರ್ ದೊರೆಗಳವರಿಗೆ ಮಂಗಳೂರಲ್ಲಿ ತಾ ೨೫—೧೧—೩೩ಕ್ಕೆ ರೆಪ್ರೆಸೆಂಟೇಶನುಗಳು ಹೋಗಬೇಕಾಗಿರುವುದರಿಂದ ಅವರ ಮುಂದಿಡತಕ್ಕ ವಿಷಯಗಳನ್ನು ನಿರ್ಣಯಿಸುವ ಬಗ್ಗೆ ತಾ. ೧೯—೧೧—೩೩ನೇ ರವಿವಾರ ಪೂರ್ವಾಹ್ನ ಗಂಟೆ ೧೦ಕ್ಕೆ ಮಂಗಳೂರು ಬಾಲಸಾಹಿತ್ಯ ಮಂಡಲದ ಆಫೀಸಿನಲ್ಲಿ ಸಭೆ ಸೇರಬೇಕಾಗಿ ಆಲೋಚಿಸಿರುವುದರಿಂದ ಅಂದಿನ ಸಭೆಗೆ ಸದ್ರಿ ಎರಡು ಜಿಲ್ಲಾ ಸಂಘಗಳ ಆಡಳಿತ ಮಂಡಳಿಯ ಮೆಂಬರೆಲ್ಲರೂ ದಯ ಮಾಡಿ ತಪ್ಪದೆ ಹಾಜರಾಗಬೇಕಾಗಿಯೂ ಸಭೆಯ ಮುಂದಿಡತಕ್ಕ ವಿಷಯಗಳನ್ನು ಸದ್ರಿ ತಾರೀಕಿನ ಮೊದಲೇ ಕಳುಹಿಸಬೇಕಾಗಿಯೂ ಶ್ರೀ ಗುರುಕಾಲು ಗಣಪಯ್ಯ ಶೆಟ್ಟಿ ಇವರು ತಿಳಿಸುತ್ತಾರೆ

ತಾ ೧೧ಕ್ಕೆ ಅಂತ್ಯವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೧೬ ಮರಣಗಳೂ ೩೮ ಜನನಗಳೂ ಆಗಿವೆ

[illegible] ಎಮ್. [illegible] ಜೀವನ ಚರಿತ್ರೆಯು ಬರುವ ಸಂಚಿಕೆಯಲ್ಲಿ ಬರುವುದು. ಸಂ. ಸ.

ಜನಪ್ರಿಯರಾದ ಜಿಲ್ಲಾ ರಿಜಿಸ್ಟ್ರಾರರಾದ ಶ್ರೀ. ಪಿ. ಜಿ. ಚಂದ್ರಾತ್ರೆ ಇವರ ಧರ್ಮಪತ್ನಿಯವರು ತಮ್ಮ ೪೮ನೇ ವಯಸ್ಸಿನಲ್ಲಿ ಇದೇ ತಾ ೧೧ನೇ ದಿನ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇವರ ಆತ್ಮಕ್ಕೆ ಶಾಂತಿ ಇರಲಿ!

1914ರ ನಂತರ ಯೂರೋಪದ ಯಾವ ರಾಷ್ಟ್ರವೂ ಸುಮ್ಮನಿರಲಿಲ್ಲ. ಈ ಯುದ್ಧದಲ್ಲಿ ಭಾಗವಹಿಸಿದ ರಾಷ್ಟ್ರಗಳಂತೂ ತಮ್ಮ ತಮ್ಮ ರಾಷ್ಟ್ರ ರಕ್ಷಣೆಗಾಗಿ ಕೂಡಿದಷ್ಟು ಯುದ್ಧೋಪಕರಣಗಳನ್ನು ತಯಾರಿಸಿದುವು. ಅದರೊಡನೆ ಇನ್ನಿತರ ನೆರೆಹೊರೆಯ ರಾಷ್ಟ್ರಗಳೂ ಸ್ವರಕ್ಷಣಾರ್ಥವಾಗಿ ಶಸ್ತ್ರಗಳನ್ನು ತಯಾರಿಸಲುಪಕ್ರಮಿಸಿದುವು. ಲೊಕಾರ್ನೊ ಕರಾರು ಆದ ನಂತರ ಫ್ರಾನ್ಸ್ ಶೇಕಡಾ ೫೦ರಷ್ಟು ತುಪಾಕಿಗಳನ್ನೂ, ಬೊಂಬಿಸೆಯುವ ವಿಮಾನಗಳನ್ನೂ ಹೆಚ್ಚಿಸಿತು. ೧೯೧೪ರಲ್ಲಿ ಫ್ರಾನ್ಸಿನಲ್ಲಿ ೩೫೦೦೦ ಟನ್ನುಗಳ ಯುದ್ಧನಾವೆಗಳಿದ್ದುವು. ಈಗ ಅದು ೧೯೭,೦೦೦ ಟನ್ನುಗಳಷ್ಟು ಯುದ್ಧನಾವೆಗಳನ್ನು ತಯಾರಿಸಿಕೊಂಡಿರುತ್ತದೆ. ಸಂಯುಕ್ತ ಅಮೇರಿಕದಲ್ಲಿ ೧೯೧೪ರಲ್ಲಿ ೪೦,೦೦೦ ಟನ್ನುಗಳಷ್ಟಿದ್ದುವು. ಈಗ ಅದು ೨೫೯,೦೦೦ ಟನ್ನುಗಳ ಯುದ್ಧನಾವೆ, ಕವಚ, ಬಂದೂಕು ಮೊದಲಾದ ಶಸ್ತ್ರಗಳನ್ನು ಹೆಚ್ಚಿಸಿಕೊಂಡಿರುತ್ತದೆ. -ಅದು ೧೯೧೪ರಿಂದ ೧೯೩೨ರ ವರೆಗೆ ದ್ವಿಗುಣಿತ ಸಂಖ್ಯೆಯಲ್ಲಿ ಶಸ್ತ್ರಸಿದ್ಧತೆಗಾಗಿ ಬಜೆಟನ್ನು ಪ್ರತ್ಯೇಕಿಸಿಟ್ಟಿತು. ಸಂಯುಕ್ತ ಅಮೇರಿಕವು ಮೊದಲು ೫೫೦ ಮಿಲಿಯ ಡೊಲ್ಲರನ್ನು ಶಸ್ತ್ರಕ್ಕೆ ವೆಚ್ಚ ಮಾಡಿದ್ದಿತು. ಈಗ ಅದು ಶಸ್ತ್ರಸಿದ್ಧತೆಗಾಗಿ ೫೫೦ರಿಂದ ೭೦೯ ಮಿಲಿಯ ಡೊಲ್ಲರನ್ನು ವ್ಯಯಿಸುತ್ತಿದೆ. ಅಂತೂ ಲೊಕಾರ್ನೊ ಒಪ್ಪಂದವು ಪರಿಪಾಲಿಸಲ್ಪಡಲಿಲ್ಲ. ಜರ್ಮನಿಯು ಕೂಡಾ ಸುಮ್ಮಗಿರುವುದಿಲ್ಲ. ಘೋರ ಯುದ್ಧದ ನಂತರ ಅದು ಹಲವು ಉಪಾಯಗಳಿಂದ ತನ್ನ ಶಸ್ತ್ರ ಸಾಮಗ್ರಿಗಳನ್ನೂ ಸೈನ್ಯವನ್ನೂ ಹೆಚ್ಚಿಸುತ್ತಾ ಹೋಯಿತು. ೧೯೧೯ರಿಂದಲೂ ಅದು ಇಂಟರ್‌ನೇಶನಲ್ ಲೇಬರ್ ಒರ್ಗೆನೈಜೇಶನ್‌ನಲ್ಲಿದ್ದಿತಾದರೂ, ಅದು ಲೀಗ್ ಒಫ್ ನೇಶನ್ಸ್‌ಗೆ ಸೇರಿದುದು ೧೯೨೬ರಲ್ಲಿ. ಅಂದಿನಿಂದಲೂ ಅದಕ್ಕೆ ಈ ಸಂಸ್ಥೆಯಲ್ಲಿ ಹೆಚ್ಚಿನ ಗೌರವವೂ, ಸಮಿಾನತೆಯೂ ದೊರೆಯುತ್ತಿದ್ದಿತು. ಅಷ್ಟಾದರೂ ಅದಕ್ಕೆ ಲೀಗ್ ಒಫ್ ನೇಶನ್ಸ್‌ಗೆ ಥಟ್ಟನೆ ಪ್ರವೇಶಿಸಲು ಧೈರ್ಯವಾಗಲಿಲ್ಲ. ಬ್ರಿಟಿಷರ ವಿದೇಶೀಯ ನ್ಯಾಯದ ಮೇಲೆ ಜರ್ಮನಿಗೆ ಭರವಸೆಯು ಇರಲೇ ಇಲ್ಲ. ಇಷ್ಟರ ತನಕವೂ ಜರ್ಮನಿಯು ಅಂತರ್‌ರಾಷ್ಟ್ರೀಯ ರಾಜಕೀಯ ವಾತಾವರಣದ ಮೇಲೆ ದೃಷ್ಟಿಯನ್ನಿಟ್ಟಿತು. ಆದರೆ ಶಸ್ತ್ರವಿನ್ಯಾಸದ ಮಂತ್ರವು ಎಲ್ಲರ ಬಾಯಲ್ಲೇ ಉಳಿದುದನ್ನೂ, ಎಲ್ಲಾ ರಾಷ್ಟ್ರಗಳು ತನ್ನ ಕೈಗುಂದುವುದನ್ನೇ ನೋಡುತ್ತಿದ್ದುದನ್ನೂ ಕಂಡು ಜರ್ಮನಿಯು ಮತ್ತೆ ಸಹಿಸಿಕೊಳ್ಳದಾಯಿತು. ಇಂಟರ್‌ನೇಶನಲ್ ಲೇಬರ್ ಒರ್ಗೆನೈಜೇಶನಿನ ಗವರ್ನಿಂಗ್ ಬೋರ್ಡಿನ ೬೪ನೇ ಅಧಿವೇಶನವು ಒಕ್ಟೋಬರ ೨೩ ಮತ್ತು ೨೭ರ ತನಕ ನಡೆಯಿತು. ಈ ಮಧ್ಯೆ ಜರ್ಮನಿಯು ಈ ಸಂಸ್ಥೆಯಿಂದ ಹೊರಗೆ ಹೋಗುವುದೆಂಬ ವಾರ್ತೆಯು ಹರಡಿದ್ದಿತು. ಅಧಿವೇಶನವು ಕೊನೆಗೊಂಡ ಮರುದಿನ ಅಂದರೆ ೨೮ನೇ ದಿನ ಜರ್ಮನಿಯು ಇ. ಲೇ. ಸಂಘಕ್ಕೆ ರಾಜಿನಾಮೆಯನ್ನು ಕಳುಹಿಸಿಕೊಟ್ಟಿತು. ಈ ರಾಜಿನಾಮೆಯು ಸ್ವೀಕರಿಸಲ್ಪಟ್ಟೊಡನೆ ಅಂತರ್‌ರಾಷ್ಟ್ರೀಯ ವಾತಾವರಣವು ಕ್ಷೋಭಾಮಯವಾಗುವುದೆಂದು ಒಮ್ಮೆ ತಿಳಿಯಲ್ಪಟ್ಟಿದ್ದಿತು. ಆದರೆ ಅಂತಹದೇನೂ ನಡೆಯಲಿಲ್ಲ. ಈ ರಾಜಿನಾಮೆಯ ಪ್ರತಿಫಲವು ಒಂದೆರಡು ವರ್ಷಗಳಲ್ಲೇ ಹೊರಬೀಳುವುದೆಂದು ರಾಜನೀತಿಜ್ಞರು ನಿರ್ಧರಿಸಿರುವರು. ಲೇಬರ್ ಸಂಘದಿಂದ ಜರ್ಮನಿಯು ಹೊರಗಾಗಿರುವುದರಿಂದ ಉಳಿದವರಿಗೆ ನಷ್ಟವಾಗುವುದಕ್ಕಿಂತಲೂ ಅತಿರೇಕವಾಗಿ ಜರ್ಮನಿಗೆ ನಷ್ಟವಿದೆಯೆಂದು ತಿಳಿದುಕೊಳ್ಳಲಾಗಿದೆ. ಜರ್ಮನಿಯು ಹೊರಗೆ ನಡೆದರೂ, ಬ್ರಿಟನ್, ಫ್ರಾನ್ಸ್, ಇಟಲಿ ಅಮೇರಿಕಗಳ ಪ್ರತಿನಿಧಿಗಳು ಜಿನೇವಾದಲ್ಲಿ ತರ್ಕಿಸುತ್ತಿರುವರು. ನವಂಬರ ತಿಂಗಳು ಅಂತ್ಯವಾಗುತ್ತಿದೆಯಾದರೂ ಇಷ್ಟರ ತನಕ ಯಾವ ಕಾರ್ಯಕ್ರಮವೂ ಆಗಿರುವುದಿಲ್ಲ. ಇಂಗ್ಲಾಂಡಿನಲ್ಲಿ ಕನ್ಸರ್‌ವೇಟರಿಗೂ ಸೋಶಿಯಲಿಸ್ಟರಿಗೂ ಸ್ಪರ್ಧೆಯು ನಡೆಯುತ್ತಿದೆ. ತನಗೆ ಶಾಂತಿಯು ಬೇಕೆಂದು ಸರಕಾರವು ಸಾರುತ್ತಿದೆಯಾದರೂ ಕನ್ಸರ್ವೇಟಿವರ ಚಟುವಟಿಕೆಯನ್ನು ಪರಿಶೀಲಿಸುವಾಗ ಅವರು ಯುದ್ಧವನ್ನೇ ಆಶಿಸುತ್ತಿರುವರಾಗಿ ಗೊತ್ತಾಗುತ್ತದೆ. ಸೋಶಿಯಲಿಸ್ಟರು ಕನ್ಸರ್‌ವೇಟಿವರನ್ನು ಖಂಡಿಸುತ್ತಾ ಕನ್ಸರ್‌ವೇಟಿವರು ಯುದ್ಧಕ್ಕೆ ತಯಾರಾಗುತ್ತಿರುವರೆಂದು ಪ್ರಕಟಿಸಿರುತ್ತಾರೆ. ಕಳೆದ ವಾರ "ಡೈಲಿಹೆರೊಲ್ಡ್" ಪತ್ರಿಕೆಯು ಬ್ರಿಟಿಷ ಸರಕಾರವು ಇಷ್ಟರ ತನಕ ತಯಾರಿಸಿದ ಶಸ್ತ್ರಗಳ ಪಟ್ಟಿಯನ್ನೇ ತಯಾರಿಸಿ ತನ್ನ ಎರಡು ಮಿಲಿಯ ವಾಚಕರಿಗೆ ತಿಳಿಸಿ ಯುದ್ಧದ ಭಯವನ್ನು ಹುಟ್ಟಿಸಿ ಬಿಟ್ಟಿತು. ಇದೇ ಪತ್ರಿಕೆಯು ಒಂದು ವ್ಯಂಗ ಚಿತ್ರವನ್ನು ಬಿಡಿಸಿ ಪ್ರಧಾನ ಮಂತ್ರಿಯವರಾದ ಮೆಕ್‌ಡೊನಾಲ್ಡರು ಶಸ್ತ್ರಸಿದ್ಧ ಮಾಡುವ ಕಂಟ್ರಾಕ್ಟರರಿಗೆ ಅನೇಕ ಬಗೆಯ ಶಸ್ತ್ರಗಳ ಬಗ್ಗೆ ಓರ್ಡರು ಕೊಡುತ್ತಾ "ಯುದ್ಧವೆಂದರೆ ನನಗಾಗದು-ಆದರೂ ನೀನು ಶಸ್ತ್ರವನ್ನು ತಯಾರಿಸು" ಎಂದೆನ್ನುವಂತೆ ಮಾಡಿ ಬ್ರಿಟಿಷ ಚಕ್ರಾಧಿಪತಿಗಳು ಎತ್ತ ಸರಿಯುತ್ತಿರುವರೆಂದು ಪ್ರಕಟಿಸಿರುತ್ತದೆ. ಇಂಗ್ಲಾಂಡಿನಲ್ಲೂ, ಏಕೆ ಯೂರೋಪದಲ್ಲೂ, ಬ್ರಿಟನು ರಹಸ್ಯವಾಗಿ ಯುದ್ಧೋಪಕರಣಗಳನ್ನು ತಯಾರಿಸುತ್ತಿದೆ" ಎಂಬ ಗುಲ್ಲು ದಟ್ಟವಾಗಿ ಹರಡಿದೆ. ಈ ಮಾತು ಸರ್ವತೋಮುಖವಾಗಿ ಹಬ್ಬಬಾರದೆಂದು ಬ್ರಿಟಿಷ ಮುತ್ಸದ್ದಿಗಳ ಸತತ ಪ್ರಯತ್ನವು ನಡೆಯುತ್ತಲಿದೆ. ಇದೇ ತಿಂಗಳ ಆದಿಯಲ್ಲಿ ಸಮರ ಸಚಿವರಾದ ಲೋರ್ಡ್ ಹೈಲ್‌ಶೇಮರವರು ಬ್ರಿಟನಿನ ಮೇಲೆ ಹೊರಿಸಲ್ಪಟ್ಟಿರುವ ಈ ಆರೋಪವನ್ನು ಅಳಿಸಿ ಬಿಡುವುದಕ್ಕಾಗಿ ಉದ್ವೇಗದ ಭಾಷಣ ಮಾಡುತ್ತಾ "ಬ್ರಿಟನು ಅಂತಹ ರಹಸ್ಯ ಆಚರಣೆಗೆ ಕೈಕೊಟ್ಟಿರುವುದಿಲ್ಲವೆಂದು ಹೇಳಿದರು. ಬ್ರಿಟನು ಹೆಚ್ಚಿನ ಶಸ್ತ್ರ ಸಾಮಗ್ರಿಗಳಿಗೆ ಹೊಸ ಹೊಸ ಓರ್ಡರುಗಳನ್ನು ಕೊಟ್ಟಿರುವುದಿಲ್ಲವೆಂದೇ ಅವರು ಭರವಸೆಪೂರ್ವಕವಾಗಿ ಹೇಳಿದರು. ಜವಾಬ್ದಾರೀ ಪತ್ರಿಕಾ ಪ್ರತಿನಿಧಿಗಳೊಬ್ಬರು ತಿಳಿಸುವಂತೆ, ಲಂಡನಿನ ಈಸ್ಟ್ ಎಂಡ್‌ನಲ್ಲಿಯ ಒಂದು ದೊಡ್ಡ ಶಸ್ತ್ರ ತಯಾರಿಯ ಕಾರ್ಖಾನೆಯಲ್ಲಿ ರಾತ್ರಿ ಹಗಲು ಕೆಲಸವು ನಡೆಯುತ್ತಿದೆ. ಸ್ಟೆಫೋರ್ಡ್‌ಶಯರಿನ ಒಂದು ಕಂಪೆನಿಯು ಗೆಲ್ವನೈಜಿಡ್ ತಗಡುಗಳನ್ನು ಸಮಯಕ್ಕೆ ಕೊಡದಿದ್ದುದಕ್ಕೆ ಲಂಡನಿನ ಒಂದು ಕಂಪೆನಿಯು ಎಚ್ಚರವಿತ್ತಿತು. ಈ ಎಚ್ಚರಕ್ಕೆ ಉತ್ತರವಾಗಿ ಬರೆಯುತ್ತಾ ಸ್ಟೆಫೋರ್ಡಿನ ಕಂಪೆನಿಯು 'ತಯಾರಿಯಾದ ಸಾಮಾನುಗಳೆಲ್ಲ ಸರಕಾರದ ಶಸ್ತ್ರ ಕಾರ್ಖಾನೆಗಳಿಗೆ ಹೋಗಿವೆಯಾದುದರಿಂದ ತಡವಾಗಲು ಕಾರಣವಾಯಿತು" ಎಂದು ಬರೆದಿದೆ. ಈ ಕಥೆಯು ಸತ್ಯವೆಂದು ತಿಳಿದು ಬಂದುದರಿಂದ, ಬ್ರಿಟಿಷ ಚಾತುರ್ಯವು ಸುಮ್ಮಗಿರುವುದಿಲ್ಲವೆಂದು ಊಹಿಸಲಾಗಿದೆ. ಒಂದು ಕಡೆಯಿಂದ ಬ್ರಿಟನು, ಫ್ರಾನ್ಸ್, ಇಟಲಿ ಅಮೇರಿಕಾಗಳು ಶಸ್ತ್ರವಿನ್ಯಾಸದ ಕುರಿತು ಮಾತನಾಡುತ್ತಿರುವಾಗ, ಇನ್ನೊಂದು ಕಡೆಯಿಂದ ಜಪಾನು ಇದೇ ಶಾ. ೧೯೩೩ರಲ್ಲಿ ೧೯೩೪ರ ಬಜೆಟಿನಲ್ಲಿ ೫೦೧೭ ಮಿಲಿಯ yenಗಳನ್ನು ಶಸ್ತ್ರ ಸಾಮಗ್ರಿಗಳಿಗಾಗಿ ಪ್ರತ್ಯೇಕಿಸಿಟ್ಟಿತು. ಜಪಾನೀಯ ಮಿನಿಸ್ಟರ್ ಒಫ್ ಫೈನಾನ್ಸರವರು ಈ ಬಜೆಟಿನ ಕುರಿತು ಟೋಕಿಯೊದಲ್ಲಿ ಚರ್ಚೆಗಾರಂಭಿಸಿರುವರು. ಜಪಾನದ ಮಿಲಿಟರಿಯನ್ನೂ ನಾವಿಕ ಸೈನ್ಯವನ್ನೂ, ಸಂಪೂರ್ಣಗೊಳಿಸುವುದಕ್ಕೂ ಮತ್ತು ಯುದ್ಧನಾವೆ, ವಿಮಾನಗಳ ತಯಾರಿಗೂ ಈ ಅಪಾರ ದ್ರವ್ಯವು ವ್ಯಯವಾಗುವುದೆಂದು ಸರಕಾರವೇ ಪ್ರಕಟಿಸಿರುತ್ತದೆ. ಜಪಾನು ಹೀಗೆ ಮಾಡುವಾಗ ಲೀಗ್ ಒಫ್ ನೇಶನ್ಸ್‌ನಲ್ಲಿ ಧೋರಣೆಯುತ್ತಿರುವ ಫ್ರಾನ್ಸು ಸುಮ್ಮಗಾದೀತೆ? ಇದೇ ತಿಂಗಳಲ್ಲಿ ಫ್ರಾನ್ಸಿನ ಸೈನ್ಯಖಾತೆ ಮತ್ತು ನಾವಿಕ ಖಾತೆಯಲ್ಲಿ ಪ್ರಯೋಗದಲ್ಲಿರುವ ವಿಮಾನಗಳನ್ನೆಲ್ಲ ಹೊರ ತೆಗೆದು ಎಲ್ಲಾ ವಿಮಾನಗಳ ಪ್ರತ್ಯೇಕ Air Charter ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ೫೩೦ ಜನರು ಚೇಂಬರಿನಲ್ಲಿ ವೋಟು ಕೊಟ್ಟಿರುವರು. ಫ್ರಾನ್ಸಿನ ಈ ಸಂಸ್ಥೆಯು British Air Forceನಂತೆಯೇ ಪ್ರಬಲವಾಗುವುದು. ಫ್ರಾನ್ಸ್ ಎಂದರೆ ಮಿಲಿಟರಿ ವಿಮಾನ ಬಲದಲ್ಲಿ ಯುರೋಪಿನಲ್ಲೇ ಅತ್ಯಂತ ಶಕ್ತಿವಂತವಾದುದು. ಅಷ್ಟಾದರೂ ಸರಕಾರವು ೭೦೦೦ ಫ್ರಾಂಕ್ಸ್‌ಗಳ ಸಬ್ಸಿಡಿಯನ್ನು ಕೊಟ್ಟು ವಿಮಾನಗಳನ್ನು ಹೆಚ್ಚಿಸಬೇಕೆಂದೂ ಎಲ್ಲಾ ಬಲಕ್ಕಿಂತಲೂ ವಿಮಾನ ಬಲವು ತನಗೆ ಆಗತ್ಯವೆಂದೂ ಹೇಳಿ ವೈಮಾನಿಕರನ್ನು ತರಬೇತುಗೊಳಿಸುತ್ತಿದೆ. ಫ್ರಾನ್ಸಿನ ಈ ವರ್ತನೆಯಲ್ಲಿ ಅಂತರ್‌ರಾಷ್ಟ್ರೀಯ ಭಾವಾರ್ಥವು ಅಡಗಿರುತ್ತದೆ. ನೆತ್ತಿಯ ಮೇಲಿರುವ ಇನ್ನೊಂದು ಮಹಾಯುದ್ಧದ ಭಯವು ಅದಕ್ಕೆ ಇದ್ದೇ ಇರುವುದರಿಂದಲೇ ಇಂತಹ ಸನ್ನಾಹಗಳಾಗಲು ಕಾರಣ.

ಅಮೇರಿಕದ ಪ್ರೆಸಿಡೆಂಟರಾದ ರೂಸ್ವೆಲ್ಟರು ಕಳೆದ ತಿಂಗಳ ಆದಿಯಲ್ಲಿ ಜರಗಿದ ಮಹಿಳಾ ಪರಿಷತ್ತಿನ ತೃತೀಯ ಅಧಿವೇಶನದಲ್ಲಿ ರೇಡಿಯೋ ಮೂಲಕ ಮಾತನಾಡುತ್ತಾ "ವಿಶ್ವ ಶಾಂತತೆಗೆ ಸಂಯುಕ್ತ ಅಮೇರಿಕಾದಿಂದ ಅಪಾಯವು ಒದಗದು. ನಾವು ಯುದ್ಧಕ್ಕೆ ವಿರೋಧವಿರುವವರು. ನಮಗೆ ರಾಷ್ಟ್ರ ಶಾಂತಿಯು ಬೇಕು. ನಮ್ಮ ನೆರೆ ಹೊರೆಯವರ ದೇಶಗಳು ನಮಗಾಗಬೇಕೆಂಬ ಆಶೆಯು ನಮ್ಮಲ್ಲಿಲ್ಲ. ನಾವು ಕೆನಡಾವನ್ನು ವಶೀಕರಿಸಲಾರೆವು. ಮೆಕ್ಸಿಕೋವು ನಮಗೆ ಬೇಡ. ಕ್ಯೂಬಾವು ಕೂಡಾ ನಮಗೆ ಆಗತ್ಯವಿರುವುದಿಲ್ಲ. ನಮ್ಮ ಈ ಭಾವನೆಯು ನಮ್ಮ ಕೃತ್ಯಗಳೇನೆಂದು ಪ್ರಕಾಶ ಪಡಿಸುತ್ತವೆ" ಎಂದರು. "ಸಾಮ್ರಾಜ್ಯ ಸ್ಥಾಪನೆಯ ಹಟವುಳ್ಳವರೇ ವಿಶ್ವಶಾ[illegible] ಕಂಟಕ ಪ್ರಾಯರು. ಅವರಿಂದಾಗಿಯೇ ಯುದ್ಧವು ತಲೆದೋರುವುದು" ಎಂದೂ ಅವರು ಹೇಳಿದರು. ಇಷ್ಟು ಹೇಳಿದರೂ, ಅಮೇರಿಕವು ಜನಾಂಗ ಸಭೆಯೊಳಗೆ ವ್ಯವಹಾರ ನಡೆಸುತ್ತಾ ಹೊರಗಿನಿಂದ ಶಸ್ತ್ರಗಳ ಕೋಟೆಯನ್ನು ಕಟ್ಟುತ್ತಲಿದೆ. ಬ್ರಿಟನಿಗೆ ತಿಳಿಯದಂತೆ ಅದಷ್ಟು ಯತ್ನದಿಂದ ಉಸಿರುಗಟ್ಟಿ ಯುದ್ಧನಾವೆಗಳನ್ನು ರಚಿಸುತ್ತಲಿದೆ. ಭಯಂಕರ ವಿಷಗಾಳಿಯ ಪ್ರಯೋಗವು ನಡೆದು ಶೋಧೆಯಾಗುತ್ತಿದೆ. ಪ್ರಾಣ ನಾಶಗೊಳಿಸಲು ಎಷ್ಟು ಸುಲಭ ಸಾಧನಗಳನ್ನು ಕಂಡು ಹಿಡಿಯುವವರಿರುವರೋ ಅವರಿಗೆ ಅಷ್ಟು ಪ್ರೋತ್ಸಾಹವನ್ನು ಸರಕಾರವೇ ಕರುಣಿಸುತ್ತಿದೆ. ಯುದ್ಧ ಸಾಲಗಳ ನೆವನದಿಂದಂತೂ ಅಮೇರಿಕಾವು ಯುರೋಪವನ್ನು ಹಡೆಮುರಿ ಕಟ್ಟಿ ಭಂಗಿಸುತ್ತಿದೆ. ಆರ್ಥಿಕ ಸಂಕಷ್ಟಗಳಿಲ್ಲದಿದ್ದರೆ ಇಂದು ಅಮೇರಿಕದೆದುರು ಬ್ರಿಟನು ಸರ್ವ ಸನ್ನದ್ಧವಾಗಿ ನಿಲ್ಲುತ್ತಿದ್ದಿತು. ಒಂದೆಡೆಯಿಂದ ಜರ್ಮನಿಯೂ ಫ್ರಾನ್ಸೂ ಸ್ಪರ್ಧೆಗಿಳಿದಿರುತ್ತವೆ. ಜರ್ಮನಿಯು ಶಸ್ತ್ರಧಾರಣ ಮಾಡಿದರೆ ಫ್ರಾನ್ಸು ಕೂಡಾ ಅದನ್ನನುಸರಿಸುವುದೆಂದು ಫ್ರಾನ್ಸಿನ ಎಂಬೆಸೊಡರು ಹೇಳಿದರು. ಹರ್ ಹಿಟ್ಲರರು ಫ್ರಾನ್ಸಿನ ಎಂಬೆಸೊಡರವರಿಗೆ ಪತ್ರ ಬರೆದು ಲೀಗ್ ಒಫ್ ನೇಶನ್ಸಿನ ಮಟ್ಟಿಗೆ ಫ್ರಾನ್ಸಿನ ಮತವೇನೆಂದು ವಿಚಾರಿಸಲು ಫ್ರಾನ್ಸಿನ ಎಂಬೆಸೊಡರರು "ನಾವು ಲೀಗ್ ಒಫ್ ನೇಶನ್ಸನ್ನು ಧಿಕ್ಕರಿಸಿ ನಡೆಯಲಾರೆವು. 'ತತ್ವಬಲಗಳು ಹೇಗೆ ಮುಂದುವರಿಯುತ್ತವೋ ಹಾಗೆ ನಾವೂ ಮುಂದರಿಯುವೆವು" ಎಂದಿರುವರು. ಫ್ರಾನ್ಸು ಲೀಗ್ ಒಫ್ ನೇಶನ್ಸಿನ ಮೇಲೆ ವಿಶ್ವಾಸವನ್ನು ತೋರಿಸುತ್ತಿರುವಾಗ ಇಟಲಿಯ ಸರ್ವಾಧಿಕಾರಿಯಾದ ಸೀನಿಯರ್ ಮುಸೊಲಿನಿಯವರು ಇದೇ ನವಂಬರ ೧೫ರಲ್ಲಿ "ಲೀಗ್ ಒಫ್ ನೇಶನ್ಸ್ ಎಂಬುದು ಸುಸೂತ್ರಗಳ ಮೇಲೆ ಸ್ಥಾಪನೆಯಾಯಿತು. ಆದರೆ ಬಲಿಷ್ಠ ಪಕ್ಷಗಳು ಅದರಿಂದ ಹಿಂದೆ ನಿಂತುವು. ಇನ್ನು ಈ ಜನಾಂಗ ಸಭೆಯು ನಿಷ್ಪ್ರಯೋಜಕವೆಂಬುದಕ್ಕೆ ಸಂದೇಹವಿಲ್ಲ. ಸಭೆಯು ಯಾರಿಗಾಗಿ ಉಂಟಾಯಿತೋ ಅವರೇ ಇಲ್ಲದ ಮೇಲೆ ಇನ್ನೇಕೆ ಈ ಸಭೆ?" ಎಂದು ಕಠಿಣ ತರವಾಗಿ ಟೀಕಿಸಿರುವರು. ಅಂತೂ ಇಟಲಿಗೂ ಕೂಡಾ ಈ ಜನಾಂಗ ಸಭೆಯ ಮೇಲೆ ಎಷ್ಟು ಅವಿಶ್ವಾಸವೆಂದು ವಿದಿತವಿದೆ. ಇನ್ನು ರಷ್ಯವಂತೂ ಇವರೆಲ್ಲರ ಮೇಲೆ ದೃಷ್ಟಿಯನ್ನಿಡುತ್ತಾ ಇದೆ. ಜರ್ಮನಿಯ ಸೋಶಿಯಲಿಸ್ಟರು ಕೂಡಾ ನಾಜಿ ಪಕ್ಷಕ್ಕೆ ಸೇರಿ ಹರ್ ಹಿಟ್ಲರರ ಬಲವನ್ನು ಹೆಚ್ಚಿಸಿದುದರಿಂದಾಗಿ ರಷ್ಯದ ಚಟುವಟಿಕೆಗಳೇ ಮಾರ್ಪಟ್ಟು, ರಷ್ಯವೂ ಕೂಡಾ ಹಲವು ಉಪಾಯಗಳನ್ನು ಹೂಡಿ ತನ್ನ ವ್ಯೂಹವನ್ನು ಭದ್ರೀಕರಿಸುತ್ತಿದೆ. ಜರ್ಮನಿಯ ರಾಜಕೀಯ ಪರಿಸ್ಥಿತಿಯು ದಿನೇ ದಿನೇ ಹೇಗೆ ಸಂಚಲಿಸುತ್ತಿದೆಯೆಂದು ರಷ್ಯವು ತನ್ನ ಜನರಿಗೆ ಕೂಲಂಕುಷವಾಗಿ ವಿವರಿಸುತ್ತಿದೆ. ಕಳೆದ ತಿಂಗಳಲ್ಲಿ ಬರ್ಲಿನ್‌ನಲ್ಲಿದ್ದ ಅಮೇರಿಕನ್ ಎಂಬಸಡರು ಜರ್ಮನಿಯ ಫೋರೈನ್ ಆಫೀಸಿಗೊಂದು ಪತ್ರ ಬರೆದು ಜರ್ಮನಿಯಲ್ಲಿ ತಲೆದೋರುತ್ತಿರುವ ನಾಜಿ ರಾಜ್ಯವಾದಿಗಳಿಂದ ತಮ್ಮ ದೇಶಿಗರಿಗೆ ಅಂದರೆ ಅಮೇರಿಕಾನರಿಗೆ ಯಾವ ರೀತಿಯ ಬಾಧಕವೂ ಆಗಬಾರದೆಂದು ಎಚ್ಚರವಿತ್ತಿರುವರು. ಹಾಗೆ ಏನಾದರೂ ಘಟಿಸಿದರೆ ಅದರ ಸವಿವರವನ್ನು ಅಮೇರಿಕಾಕ್ಕೆ ತಿಳಿಸಬೇಕೆಂದು ಹೇಳಿರುವರು. ಅಂತೂ ಯುದ್ಧವಿಲ್ಲವೆನ್ನುವುದು ಹೇಗೆ?

+++ +

ಮ. ಜಾ.

FRESH CONSIGNMENT ARRIVED.

UNEQUAL QUALITY————————EXCEPTIONAL PRICE

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

[illegible]

[illegible]

[illegible] ಮುಂದರಿಯಲಾರದೆಂದು ಹೇಳಿಸಿರುವ ಮೂರು ಮುಖ್ಯ ಕಾರಣಗಳನ್ನು ಸರಕಾರವು ಪ್ರಕಟಿಸಿಯದೆ. [illegible] ಬಗೆದ ಅತ್ತಲ, ಜಾತಿಗಳೊಳಗಣ ವಿವಾದಗಳು, [illegible] ಅವುಗಳಿಂದಾಗಿ ಶಿಕ್ಷಣವು ಪ್ರಚಾರ ಹೊಂದದೆ, ಉಳಿಯಿತು! ಸರಕಾರದ ಉತ್ಸಾಹವು ಭಂಗವಾಗುವುದಕ್ಕಿರುವ [illegible] ಕಾರಣಗಳನ್ನು, ಹೇಳಿದ ಸಂಬಳಗಳನ್ನು ಹುದ್ದೆದಾರರಿಗೆ [illegible] ಕೊಡುವ ಭರದಲ್ಲಿ ಏಕೆ ಎಣಿಸಲಿಲ್ಲ? ಈ ಕಾರಣಗಳಿದ್ದರೂ ಹತ್ತುಗೊಂಡು ಯೂನಿವರ್ಸಿಟಿಯನ್ನು ಸ್ಥಾಪಿಸಿ [illegible]ದಾರರನ್ನು ಹೊರಡಿಸುವ ಗಿರಣಿಗಳು ಕೆಲಸ ಮಾಡುತ್ತಲೇ ಇರುತ್ತಿವೆಯೇ? ಪ್ರಚಂಡ ಉತ್ಸಾಹವನ್ನು ಇತರ ಎಲ್ಲ ವಿಷಯಗಳಲ್ಲಿ ತೋರಿಸುವ ಸರಕಾರವು ಇಲ್ಲೇಕೆ ಗಡ್ಡೆ ಕಟ್ಟಿದಂತೆ ಸುಮ್ಮನಾಗಿದೆ? ಈಗ ಕಾಯದೇ ಭಂಗವಿಲ್ಲ, ಹಿಂದೂ ಮುಸಲ್ಮಾನರ ಸ್ನೇಹವೇನೂ ತೋರಿಲ್ಲ; ಗಗನ ಮಂಡಲದಿಂದ ಚಿನ್ನದ ಮಳೆ ಮಾತ್ರ ಸುರಿದಿಲ್ಲ ಎಂಬೊಂದೇ ಕಾರಣದಿಂದ, ಉತ್ಸಾಹವು ಕಾರಂಜಿ ನೀರಿನಂತೆ ಹಾರದೆ ಉಳಿದಿದೆಯೋ? ಆ ಮಳೆಯಾದರೂ ಎಂದಿಗೆ ಸುರಿದೀತು? ಎಂದು ಅಲ್ಲಿನ ಪತ್ರಿಕೆಯ ಪ್ರಶ್ನೆ

ಅಸ್ಪೃಶ್ಯತಾನಿವಾರಣೆ ಮೊದಲೊ, ಸ್ವರಾಜ್ಯವೊ?

ಎಂಬೀ ಪ್ರಶ್ನೆಯನ್ನು ಮಹಾತ್ಮಾಜೀಯವರಿಗೆ ನಾಗಪುರದಲ್ಲಿ ಪತ್ರಿಕಾ ಪ್ರತಿನಿಧಿಗಳು ಕೇಳಿದರು "ಅಸ್ಪೃಶ್ಯತೆ ಎಂಬುವ ಕೊಡುವ-ಕೊಳ್ಳುವ ಜೀನಸಾಗಿಲ್ಲ" ಭಗವಾನ್ 'ಭಿಕ್ಷಾಂದೇಹಿ' ಎಂದು ಯಾಚಿಸಿದರೆ, ನಮ್ಮ ಆಂಗ್ಲೇಯ ಬೋಗಸಿಯಲ್ಲಿ ಸ್ವರಾಜ್ಯ ಭಿಕ್ಷೆಯನ್ನು ಇಕ್ಕುವವರಿಲ್ಲ. ಹೀಗೆಣಿಸುವುದು ಕೇವಲ ಭ್ರಮೆ. ಸ್ವರಾಜ್ಯವೆಂಬುದು ಕ್ರಮವಾದ ಉತ್ಕ್ರಾಂತಿಯಿಂದ ತಾನೆ ಸಿದ್ಧವಾಗಿ ಬರುವುದು. ಅದರ ಕಡೆಗೆ ನಾವು ದಿನೇ ದಿನೇ ನಡೆಯುತ್ತೇವೆ; ಅಥವಾ ಅಲ್ಲಿಂದ ದಿನೇ ದಿನೇ ಹಿಂದೆ ಕಾಲಿಡುತ್ತೇವೆ ನಮ್ಮ ಜನಾಂಗಿಕವಾದ ಜ್ಞಾನವು ನಮ್ಮಲ್ಲಿ ಹೆಚ್ಚುತ್ತ ಬಂದರೆ, ನಾವೆಲ್ಲ ಕೋಟಿಯೂ ಒಂದೇ ಭಾವನೆ ನಮ್ಮಲ್ಲಿ ಬೆಳೆದರೆ ಆಗ ತಾನೆ ನಿಜವಾಗಿಯೂ ನಾವು ಸ್ವರಾಜ್ಯದ ಕಡೆಗೆ ನಡೆಯುತ್ತೇವೆ. ನಾವು ಜನಾಂಗಿಕತೆಯನ್ನು ಬಿಟ್ಟು ಇನ್ನೂ ಪಂಗಡಗಳಾಗುತ್ತೇವೆ ಎಂತಾದರೆ, ನಾವು ಸ್ವರಾಜ್ಯದಿಂದ ದೂರದೂರಕ್ಕೆ ಹೋಗುತ್ತೇವೆ, ಎಂಬುದೇ ಅವರ ಉತ್ತರ ಸಮ್ಯಗ್ದರ್ಶನವಿದ್ದರೆ ಮಾತ್ರ ಸ್ವತಂತ್ರ ಮಾರ್ಗ, ಸ್ವತಂತ್ರ ರಾಜಕಾರಣ, ಸ್ವತಂತ್ರ ಧೋರಣೆ, ಸ್ವತಂತ್ರ ಧ್ಯೇಯ ಅದಲ್ಲದೆ, ಹೊಸ ಪಕ್ಷ ಹಳೆ ಪಕ್ಷವೆಂದು ಪರಿಪುಷ್ಟವಾದ ಪಕ್ಷಗಳಾವುವೂ ಸ್ವರಾಜ್ಯದ ಕಡೆಗೆ ನಡೆಯಲಾರವು ಜನಾಂಗವೊಂದಾದರೆ ಅಲ್ಲೇ ಸ್ವರಾಜ್ಯ

ಹೊಸ ಪಕ್ಷದ ಪಂಚಾಂಗ

ಕೌನ್ಸಿಲುಗಳಲ್ಲಿ ತಮ್ಮ ಪಕ್ಷದವರನ್ನು ಪ್ರತಿನಿಧಿಗಳನ್ನಾಗಿ ಮಾಡಿಕೊಳ್ಳಬೇಕೆಂಬ ಲವಲವಿಕೆಯಿಂದ ಉಂಟಾದ ಹೊಸ ಪಕ್ಷವು ಪ್ರಾತಿನಿಧಿಕ ಸಂಸ್ಥೆಗಳನ್ನೂ ಮುಂದೆ ತನ್ನ ವಶ ಮಾಡಿಕೊಳ್ಳುವುದಂತೆ 'ಪ್ರಾತಿನಿಧಿಕ ಸಂಸ್ಥೆ' ಎಂದರಾವುದು? ಸರಕಾರವು ತನಗೆ ಅನುಕೂಲವಾಗಿರುವ ಧೋರಣವನ್ನು ರೂಢಿಗೆ ತರುವ ಹಾಗೆ ಮಾಡಿರುವ ನಿಯಮಗಳ ಅರಿಕೆಯಲ್ಲಿ ನಡೆದು ಬರಬೇಕಾಗಿರುವ ಸಂಸ್ಥೆಗಳು ಪ್ರಾತಿನಿಧಿಕ ಸಂಸ್ಥೆಗಳು ಎಂದು ಈ ಪಕ್ಷದವರ ಅಭಿಪ್ರಾಯ ಅಂತಹ ಸಂಸ್ಥೆಗಳನ್ನು ಸೇರಿದರೆ, ಇವರು ಅವನ್ನೆಲ್ಲ ಆಕ್ರಮಿಸಿ ಹಿಡಿದುಕೊಂಡಿರುವರೆಂದು ಅರ್ಥವಾಗುತ್ತಿದೆಯೆ? ಪಂಜರದೊಳಗೆ ಒಂದು ಹಕ್ಕಿಯು ತನಗೆ ಮರ್ಯಾದಿತವಾಗಿರುವಷ್ಟು ಸ್ಥಳದಲ್ಲಿ ರೆಕ್ಕೆಗಳನ್ನು ಒಡೆದರೆ, ಅದು ಪಂಜರವನ್ನು ಆಕ್ರಮಿಸಿಕೊಂಡಂತಾಯಿತೆ ಎಂಬುದು ಕಾಂಗ್ರೆಸ್ ಪಕ್ಷದವರ ಪ್ರಶ್ನೆ. ೧೯೨೦ರ ತನಕ ಸ್ವರಾಜ್ಯ ಪಕ್ಷದವರೂ ನೋಕರ ಪಕ್ಷವೂ ಪ್ರಾತಿನಿಧಿಕ ಸಂಸ್ಥೆಗಳನ್ನು ಸೇರಿ ತಮ್ಮ ರೆಕ್ಕೆ ಹರಡಿಸಿಕೊಂಡು ಏನನ್ನು ಆಕ್ರಮಿಸಿದರಂತೆ? ಇಷ್ಟನ್ನು ತಿಳಿದೂ, ಪುನಃ ಪ್ರಾತಿನಿಧಿಕವೆಂಬ ಕಾರ್ಯ ಮಂಡಲಗಳನ್ನು ಆಕ್ರಮಿಸಲೆಳಸುವರೆ, ಇಂದ್ರ ಧನುಸ್ಸನ್ನು ಕಂಡ ಬಾಲಕನಂತೆ, (My heart leaps up) 'ಕಾಮನ ಬಿಲ್ಲನೆ ಹಾರುವುದೆನ್ನದೆ' ಎಂದು ಹಾರುವ ಈ ಹೊಸ ಪಕ್ಷದ ಬಾಲಕ ಬುದ್ಧಿಯವರು ಎಂತಹರು ಎಂದೇ ಅಚ್ಚ ಕಾಂಗ್ರೆಸಿಗರ ಆಕ್ಷೇಪವಿದೆ.

ಚಿನ್ನದ ದ್ವೀಪಾಂತರವಾಸ

ಇಂಡಿಯದಿಂದ ಚಿನ್ನವು ಹೀಗೆ ೧೫೦ ಕೋಟಿ ರೂಪಾಯಿಗಳ ಬೆಲೆಯಷ್ಟು ರಫ್ತಾಗಿ ಹೋದುದು ಇಲ್ಲಿನ ಜನಗಳ ವ್ಯವಹಾರದ ಸ್ವಾಭಾವಿಕ ಲಕ್ಷಣವೇನೂ ಅಲ್ಲ, ಇನ್ನು ಜನಗಳ ಹತ್ತಿರ ಹೆಚ್ಚು ಚಿನ್ನವೂ ಉಳಿದಿಲ್ಲ. ಇನ್ನು ಚಿನ್ನವಿಲ್ಲವೆಂತಾದ ಬಳಿಕ, ಅದರ ಬೆಲೆಯನ್ನು ಸ್ಥಿರವಾಗಿ ಇಂಡಲು ಸರಕಾರವು ಶಕ್ತವಾಗದೇಕೆ? ನಮ್ಮ ಪರದೇಶೀಯ ವ್ಯಾಪಾರವು ಎಂದಿನಂತೆ ಸಾಗಿ, ನಮ್ಮ ಉದ್ಯೋಗ ಕೈಗಾರಿಕೆಗಳೂ, ಕೃಷಿ ವಾಣಿಜ್ಯಗಳೂ, ಅಭಿವೃದ್ಧಿ ಹೊಂದಿರಬೇಕಾದರೆ, ಅಧಿಕ ಬೆಲೆಯ ರೂಪಾಯಿಯು ಬೆಲೆಯ ಆತಂಕ ಮಾಡುತ್ತಿದೆ. ಏರಿದ ಬೆಲೆಯ ರೂಪಾಯಿಯು ನಮ್ಮೀಗಣ ದುರವಸ್ಥೆಗೆ ಮೂಲ ಕಾರಣವಾಗಿದೆ. ರೂಪಾಯಿಗೆ ೧೮ ಪೆನ್ಸ್ ಬೆಲೆಯೆಂದು ಸರಕಾರವು ನಿರ್ಣಯಿಸಿರುವುದನ್ನು ರದ್ದು ಮಾಡಿ, ೧೬ ಪೆನ್ಸ್ ಬೆಲೆ ಎಂತಿಟ್ಟರೆ, ಪವನಿನ ಬೆಲೆ ಎಷ್ಟಾದರೂ, ವ್ಯಾಪಾರಿಗಳಿಗೆ ನೇಕಡಾ ೧೨½ ನಲೆ ಲಾಭವಿದೆ, ಜೀನಸುಗಳಿಗೂ ಅಷ್ಟೇ ನಲೆಯಲ್ಲಿ ದರ ವೇರುವುದು. ಇತ್ತ ಇದ್ದ ಚಿನ್ನವೂ ದೇಶಾಂತರಕ್ಕೈದಿತು; ಅತ್ತ ಹಲವು ವರ್ಷಗಳಿಂದಲೂ ರೂಪಾಯಿಯ ಬೆಲೆ ಹೆಚ್ಚು ಮಾಡಲಾಗಿ ನಷ್ಟವೂ ಅಪಾರವಾಯಿತು ಎಂದು ಹಿಂದೀ ವ್ಯಾಪಾರಿಗಳೂ ಮಾತ್ರವಲ್ಲದೆ, ವಿವೇಕವುಳ್ಳ ಇಂಗ್ಲಿಷ ಪ್ಲೆಂಟರರೂ ಸರಕಾರಕ್ಕೆ ಜೂರಿಟ್ಟಿರುವರು. ಆದರೆ ಖಜಾನಾ ಮಂತ್ರಿಗಳ ಅಭಿಪ್ರಾಯವು ಗಂಟೆಯ ಸ್ವರದಂತೆ ಎಂದಿನದೇ ಇಂದಿಗೂ ಇದೆ!

೧೯೩೬ರಲ್ಲಿ ಮಹಾ ಯುದ್ಧ

ಎಂದ್ಯೇ ಜಾಪಾನಿನ ಲೆಫ್ಟಿನೆಂಟ್ ಕಮಾಂಡರ್ ಟೋಟಾ ಇಶಿಮಾರು ಎಂಬ ಪ್ರಸಿದ್ಧ ಯೋದ್ಧರು ಬರೆದ ಪ್ರಕಟಿಸಿರುವ ಪುಸ್ತಕದಲ್ಲಿದೆ ಈ ಪುಸ್ತಕದ ೪೫ ಆವೃತ್ತಿಗಳಾಗಿವೆ ಎಂದಾದರೂ ಜಾಪಾನು—ಇಂಗ್ಲೆಂಡುಗಳೊಳಗೆ ಯುದ್ಧವಾದರೆ ಏನಾದೀತು ಎಂದು ಸ್ಫುಟವಾದ ವಿಚಾರಗಳು ಇದರಲ್ಲಿವೆ. ಇದನ್ನು ವಿಮರ್ಶಿಸಿಯೂ ಜಾಹೀರಾತುಗಳನ್ನು ಪ್ರಕಟಿಸಿಯೂ ಇರುವ ಜಾಪಾನು ಪತ್ರಿಕೆಗಳಲ್ಲ, ಜಾಪಾನಿನ ನಾಶಕ್ಕಾಗಿ ಬ್ರಿಟನು ಸಿದ್ಧವಾಗುತ್ತಿದೆ ಎಂದು ಪ್ರಕಟಿಸಲಾಗಿದೆ, ಆವರೂ ತನಗೆ ತಕ್ಕಂತಹ ಅನುಕೂಲತೆಗಳನ್ನು ಉಂಟುಮಾಡಿಕೊಳ್ಳಲು ಮಾತ್ರ ಇಂಗ್ಲೆಂಡು ಕೃತ್ರಿಮ ಸ್ನೇಹವನ್ನಾಚರಿಸುತ್ತಿದೆಯಂತೆ ಜಯವಾರಿಗಾದೀತು? ಎಂಬ ಪ್ರಶ್ನೆಗೆ, ಯುನೈಟೆಡ್ ಸ್ಟೇಟ್ಸ್ ಮತ್ತು ಜಾಪಾನಿಗೆ ಇರುವ ಹಗೆಗಿಂತಲೂ ಅಧಿಕವಾಗಿ ಜಾಪಾನು ಇಂಗ್ಲೆಂಡುಗಳೊಳಗೆ ಹಗೆ ಇರುವುದಾಗಿ ಸೂಚಿಸಿ, ಮುಖ್ಯವಾಗಿ ಚೀನಾ ಇಂಡಿಯಾಗಳೊಳಗಣ ವ್ಯಾಪಾರ ಸಂಬಂಧದಿಂದಾಗಿ ಹಗೆತನಕ್ಕೆ ಪ್ರಾರಂಭವಾಗಿದೆಯೆಂದೂ, ಅದನ್ನರಿತೇ ಜಾಪಾನು ಲೀಗ್ ಒಫ್ ನೇಶನ್ಸನ್ನು ಬಿಟ್ಟು ಹೊರಬಿದ್ದಿದೆ ಎಂದೂ ವಿವರಿಸಲಾಗಿದೆ ಜಗತ್ತಿನ ಶಾಂತಿಗಾಗಿ ಇಂಗ್ಲೆಂಡು ಪ್ರಯತ್ನಿಸುವುದು ಸುಮ್ಮನೆ, ತನ್ನ ದೇಶಕ್ಕೆ ವ್ಯಾಪಾರ ಕುಂದಿ ಪೆಟ್ಟು ತಗಲಿದರೆ ಆಗ ಇಂಗ್ಲೆಂಡು ಏನು ಮಾಡೀತು? ಅದರ ಪರಿಣಾಮವೇನಾದೀತು? ಎಂದೂ ಒಂದು ಪ್ರಶ್ನೆಯನ್ನು ವಿಮರ್ಶಕರು ಕೇಳಿರುವರು ಹೀಗೆಂದು ಹಿಂದೂಸ್ಥಾನ ಟೈಮ್ಸ್ ಪತ್ರಿಕೆಗೆ ಶ್ರೀ ಚಿಮನ್ ಲಾಲರು ಬರೆದಿರುವರು

ಕೆಲವು ಸೈನ್ಯಗಳ ಅಂಕೆಸಂಖ್ಯೆಗಳು

ಯುದ್ಧ ಸನ್ನಾಹತ್ಯಾಗದ ಪರಿಷತ್ತು ಜರ್ಮನಿಯ ದೆಸೆಯಿಂದಾಗಿ ಜೀವಚ್ಛ್ರುತವಾದುದೆಂದ ಬಳಿಕ, ಅಮೇರಿಕ ಸರಕಾರವು—"ಫ್ರಾನ್ಸ್ ಇಂಗ್ಲೆಂಡುಗಳ ಪಕ್ಷವಾಗಿ ನಿಂತು ಜರ್ಮನಿಗೆ ಅಥವಾ ಜರ್ಮನಿಯ ಪರವಾಗಿ ನಿಂತು ಫ್ರಾನ್ಸಿಗೆ ಬುದ್ಧಿ ಹೇಳಲು ಸೇರುವವರು ನಾವಲ್ಲ' ಎಂದು ಸ್ಪಷ್ಟ ನುಡಿದಿದೆ ಲಂಡನಿನಲ್ಲಿ ಆರ್ಥಿಕ ಪರಿಷತ್ತನ್ನು ಸೇರಿದ ಅತಿವ್ಯಯದಿಂದಾಗ ಅತಿನಷ್ಟದ ಪಾಲಿಗೇ, ಈ ಯುದ್ಧತ್ಯಾಗದ ಪರಿಷತ್ತಿನ ಅತಿ ನಷ್ಟವನ್ನು ಕೂಡಿಸಬೇಕಾಗಿದೆ. ಪ್ರಾಮುಖ್ಯ ಜನಾಂಗಗಳಲ್ಲೇ ಸಂದೇಹ, ಬೆದರಿಕೆಗಳು ತುಂಬಿವೆ ಯಾವ ರಾಜ್ಯವೂ ಅಸ್ತ್ರತ್ಯಾಗ ಮಾಡಲು ಒಪ್ಪುವ ಹಾಗಿಲ್ಲ. ಇತರರು ತಮ್ಮ ಪಾಲಿಗೆ ಬಾರದಿರುವಲ್ಲಿ, ತಾವು ಅವರ ಪಾಲನ್ನು ಸೇರಬೇಕೆಂಬುದೇ ಪ್ರತಿಯೊಬ್ಬರ ತರ್ಕವಿದೆ ಅಮೇರಿಕವು ಈಗಲೇ ೩೦ ಮಿಲ್ಲಿಯ ಪವನು ವ್ಯಯಿಸಿ ಹಡಗುಗಳ ಸನ್ನಾಹ ಮಾಡುತ್ತಿದೆ ಅಲ್ಲಿ ಸೈನ್ಯವು ರಾಷ್ಟ್ರಗಳೆಲ್ಲ ೧೩ನೆಯದು; ಸುಸಜ್ಜಿತರೂ ರಿಜರ್ವ ಸೈನ್ಯವೂ ಕ್ರಮವಾಗಿ ೧೩೨೦೦೦ ಮತ್ತು ೩೦೪೦೦೦. ಇಂಗ್ಲೆಂಡಿನದು ಕ್ರಮವಾಗಿ, ೪೫೧೦೦೦ ಮತ್ತು ೭೧೧೦೦೦; ಫ್ರಾನ್ಸ್ ಹಾಗೆಯೆ ೬೪೭೦೦೦ ಮತ್ತು ಆರು ಮಿಲ್ಲಿಯ; ಜಾಪಾನು ಅದರಂತೆ ೨೩೫೦೦೦ ಮತ್ತು ಎರಡು ಮಿಲ್ಲಿಯ. ಇಟಲಿ ರಷ್ಯಾಗಳ ಸೈನ್ಯಗಳೂ ಹೀಗೆಯೆ ಬೆಳೆದಿವೆ. ಇಷ್ಟು ಸೈನ್ಯಗಳು ಸುಸಜ್ಜಿತವಾಗಿರುವಾಗ ಶಾಂತಿಗೆ ಎಷ್ಟು ದಿನ ಏನು ಬೆಲೆ ಬರಬಹುದು?

NOTES

ನೋಟಗಳು

ವಕೀಲರ ಉದ್ಯೋಗಾದಿಗಳ ವಿಷಯ [illegible] ಸಂಘವನ್ನು ಇತ್ತ ಸ್ಥಾಪಿಸಬೇಕಾಗಿ ಶ್ರೀ ಸತ್ಯ [illegible] ಸಲಹೆ ಕೊಟ್ಟುದು ಮೈಸೂರಲ್ಲಿ; ಅಷ್ಟರಲ್ಲೇ ಕಲ್ಕತ್ತೆಯ [illegible] ಗಳೊಳಗೆ ಮನವಿಟ್ಟು ಪರವೂರಿಗೆ ಯಾತ್ರೆ [illegible] ಮಿಡ್ನಾಪುರದ ವಕೀಲರಲ್ಲಿ ಒಬ್ಬೊಬ್ಬರಿಗೇ [illegible] ಗಳು ಆಸ್ಪದ ಕೊಡುತ್ತಿದ್ದಾರೆ.

* * *

ಅಲ್ಲಿಂದ ಹೊರಬಿದ್ದ ವಕೀಲರು ಮೈಸೂರು ವಕೀಲ ವಿಮಾ ಸಂಘದ ಆಶ್ರಯಕ್ಕೆ ಸೇರುವವರಾದರೆ, ಸಂಘದ ಉದ್ದೇಶವು ಸಾಂಗವಾಗಿ ನೆರವೇರಬಹುದು.

* * *

ಗಂಡನು ತರಬೇತು ಮಾಡಿದ ಶ್ರೀಮತಿ [illegible] ದೇವಿಯು ಫರಿದಪುರದಲ್ಲಿ, ವಿಶೇಷ ವ್ಯಾಯಾಮ ಪ್ರದರ್ಶನ ಮಾಡಿ, ಕಬ್ಬಿಣದ ಸರಳನ್ನು ಕೊರಳ ಮೇಲೆ ಬಡೆದು ಒತ್ತಿ ಬಾಗಿಸಿ, ಹೊಸ ಇಸ್ತ್ರೀಪೆಟಿಗೆ ಎಂಬ ದಸ್ತುಗಳನ್ನು ಒಮ್ಮೆಲೇ ಹರಿದು ಚೂರು ಮಾಡಿದಳು

* * *

ಆತ್ತೆಯಂದಿರು ಇನ್ನು ಕೈ ನಾಲಗೆಗಳನ್ನು ತಡೆವುದುತ್ತಮ ಮನೆ ಬಾಧೆಗೆಂದು ಚಿಮ್ಮಿ ಎಣ್ಣೆ ಸುರಿದುಕೊಂಡು ಮೈ ಸುಟ್ಟುಕೊಳ್ಳಬೇಕೆಂದಿರುವ ಬಂಗಾಳದ ಕೋಮಲೆಯರು, ಗಂಡಂದಿರು ವ್ಯರ್ಥವಾಗಿ ಇಸ್ತ್ರೀಡುವುದನ್ನು ನಿಲ್ಲಿಸಿ, ಅವರಿಂದ ಕೊರಳೊತ್ತಿ ಸರಳು ಬಾಗಿಸುವ ವಿದ್ಯೆ ಕಲಿತು, ಅತ್ತೆಗಳ ಕಾಟದಿಂದ ಪಾರಾಗಬಹುದು

* * * *

ಡಾಲ್ಲರು ಅಗ್ಗವಾಯಿತು, ಅಮೇರಿಕದ ಸಾಮಾನು ಮಾರಾಟ ಯೆನ್ ಅಗ್ಗವಾಯಿತು, ಜಾಪಾನು ಸಾಮಾನು ಮಾರಾಟ ಶಿಂಗಪ್ಪಾಯಿ ಡಾಲ್ಲರು ಅಗ್ಗವೆಂದು, ಚೀನೀ ಸಾಮಾನು ಮಾರಾಟ. ಇಂಡಿಯದ ರೂಪಾಯಿಯನ್ನು ಅಗ್ಗ ಮಾಡಬಾರದು ಇಂಡಿಯದ ಸರಕನ್ನು ಇತರರ್ಯಾರೂ ಕೊಂಡುಕೊಂಡಾರು! ಅಚ್ಚ ಸ್ವದೇಶಿ ಎಂದರೆ ಇಷ್ಟು ಪ್ರೇಮ ಪ್ರೋತ್ಸಾಹ

* * * *

ಮಹಂತನೊಬ್ಬನು ತೆರಬೇಕಾದ ತೆರಿಗೆಯಲ್ಲಿ ಆರು ಪೈ ವಸೂಲು ಕೊಡಲಿಲ್ಲ ಮುನ್ಸಿಪಾಲಿಟಿಯು ನ್ಯಾಯಕ್ಕೆ ಹೋಗಿ ೨೦೦ ರೂಪಾಯಿ ವ್ಯಯಿಸಿ, ಕೊನೆಗೆ ತೆರಿಗೆ ವಸೂಲು ಮಾಡಿಕೊಳ್ಳದೆ ವ್ಯಯವನ್ನೆಲ್ಲ ನಷ್ಟ ಮಾಡಿಕೊಂಡಿತು.

* * * *

ಹತ್ತು ವರ್ಷಗಳಿಂದಲೂ ತೆರಿಗೆ ತೆರದೆ ಬಾಕಿಯಲ್ಲಿಟ್ಟಿರುವ ಕೆಲವು ಕೌನ್ಸಿಲರು ಮುಂದಾಯಿ ಮುನ್ಸಿಪಾಲಿಟಿಯಲ್ಲಿರುವಂತೆ ಇವರಿಂದ ಬಹಾ ಹಣಕ್ಕೆ ವ್ಯಾಜ್ಯ ಹೂಡಿದರೆ ಮುನ್ಸಿಪಾಲಿಟಿಯೇ ಬರಿದಾದೀತೆಂದು ಅಲ್ಲಿ ಬೆದರಿಕೆಯುಂಟಲೇ ತೆರಿಗೆ ವಸೂಲಾಗಿಲ್ಲವೆ?

* * *

ಕೇರಳ ಪ್ರಾಂತ್ಯವೊಂದಾಗಬೇಕಾಗಿ ಎಸೆಂಬ್ಲಿಯಲ್ಲಿ ಸೂಚನೆ ಮಂಜೂರಾಗಿದೆ, ಮದ್ರಾಸು ಕೌನ್ಸಿಲಲ್ಲಿ ಮಾತ್ರ ಅದು ಬಿದ್ದುಹೋಗಿದ್ದಿತು ಈಗ ಕರ್ನಾಟಕವೊಂದಾಗಲೆಂದು ಮದ್ರಾಸು ಕೌನ್ಸಿಲು ಒಪ್ಪಿದುದನ್ನು ತಿದ್ದಲು ಎಸೆಂಬ್ಲಿಯಲ್ಲಿ ಒಂದು ಸೂಚನೆ ಮಂಜೂರಾದರೆ?

* * *

ಪೆಲೆಸ್ತೀನದಲ್ಲಿ ಮುಸ್ಲಿಮರಾದ ಅರಬರಿಗೆ ಸರಕಾರವು ಅನ್ಯಾಯ ಮಾಡಿತೆಂದು ಹೇಳಲು ಬರುವ ಮುಸ್ಲಿಮ ಪ್ರತಿನಿಧಿಗಳನ್ನು ವೈಸ್ರಾಯರು ಕಾಣುವರು; ಗದಿನಾಡಿನಲ್ಲಿ ಮುಸ್ಲಿಮರ ಮೇಲೆ ಬಾಂಬು ಚೆಲ್ಲಿದ ವಿಷಯ ಮಾತಾಡಬರುವ ಮುಸ್ಲಿಮ ಪ್ರತಿನಿಧಿಗಳನ್ನು ವೈಸ್ರಾಯರು ಕಾಣಲೊಪ್ಪಲಿಲ್ಲ.

* * *

ಪೆಲೆಸ್ತೀನು ಬಲುದೂರ, ಆ ಸರಕಾರ ಬೇರೆ. ಎಂಬುದೇ ಇದಕ್ಕೆ ಕಾರಣವೇ?

[illegible] FULL VALUE for your money
[illegible] on Swastik Products.

ನಿಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ
ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ
ಸಾಮಾನುಗಳನ್ನೇ ಕೊಂಡುಕೊಳ್ಳಿರಿ.

Swastik 777 Bar soap & Swastik Cake & Cube Soaps best in washing Soaps.



ಕಪ್ಪು, ಕಲೆ, ಕಲ್ಮಷ, ಮೊದಲಾದ ಕರಾರಗಳು ಕಿಂಚಿತ್ತಾದರೂ ಉಳಿಯಬಾರದು—ಆಗ ತಾನೇ ಬೋಕ ಕೈವ. 777 ಇದರಿಂದಾಗಿ ಪ್ರಸನ್ನತೆ. ಕಂಬಿನ ಸ್ವಸ್ತಿಕಾ ಅತ್ಯುತ್ತಮ ಸಾಬೂನು ಸ್ಪರ್ಧೆಯಲ್ಲಿ ಅಗ್ರಗಣ್ಯ, ಬಟ್ಟೆಗಳಿಗೆ, ಇತರ ಸಾಬೂನುಗಳಿಗೆ ಮೇಲ್ಪಂಗಿ ಶುಭ್ರತವವಾಗಿ ಒಗೆಯುವುದು. ಹೆಚ್ಚು ಕಾಲ ಬಾಳ್ವದು. ಯೋಗ್ಯತೆ ಮಿಗಿಲಾಗಿ ಬೆಲೆ ಕಡಿಮೆ—ವಿಲಾಯತಿಗೆ ಸಾಬೂನಿಗೆ ಪ್ರತಿಸ್ಪರ್ಧಿಯಾಗಿದೆ.

Swastik Double boiled & Raw Linseed Oils.

SWASTIK
THE MARK OF QUALITY

available in 5 gallon drums, 1 gallon tin.



ಪೈಂಟ್ ಬಗ್ಗೆ ಸ್ವಸ್ತಿಕಾ ಬೇಯಿಸಿದ ಅತೀ ಉತ್ತಮವಾದ ಲೀನ್ ಸೀಡ್ ಎಣ್ಣೆ 5 ಗೆಲನ್ ಡ್ರಮುಗಳಲ್ಲೂ, ಗೆಲನ್ ಟಿನ್ನುಗಳಲ್ಲೂ ದೊರೆಯುವುವು.
ಕಾಫಿ ಗಿಡಗಳ ಮೇಲೆ ಕ್ರಿಮಿ ಹಿಡಿಯದಂತೆ ಚೆಲ್ಲುವ ಸ್ವಸ್ತಿಕಾ ಹಸಿ ಲಿನ್ ಸೀಡ್ ಎಣ್ಣೆ 5 ಗೆಲನ್ ಡ್ರಮುಗಳಲ್ಲಿ ದೊರೆಯುವುದು.
ವಿಲಾಯಿತಿ ಎಣ್ಣೆಗಿಂತಲೂ ಸೇಕಡಾ 50ರಷ್ಟು ಹೆಚ್ಚಿನ ಫಲ ಪ್ರಯೋಜನ ಕೊಡುವುದಾಗಿ ಲಂಡನ್ ಇಂಪೀರಿಯಲ್ ಲೆಬೋರೇಟರಿಯವರು ಸರ್ಟಿಫಿಕೇಟು ಕೊಟ್ಟಿದ್ದಾರೆ.

Swastik CASTOR OIL (medicinal)
(Cold drawn)
Packed in gallon tins & 4 oz, 8 oz, 1 lb bottles

ಸ್ವಸ್ತಿಕಾ ಹರಳೆಣ್ಣೆ
4 ಔನ್ಸ್, 8 ಔನ್ಸ್, 1 ರಾತಲ್ ಬಾಟ್ಲಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವುದು.

ಶಾಸ್ತ್ರೀಯ ರೀತಿಯಲ್ಲಿ ಸಿದ್ಧಗೊಳಿಸಿರುವ ಶುದ್ಧವಾದ ಈ ಹರಳೆಣ್ಣೆಯು ವಾಸನೆ ಇಲ್ಲದ್ದು ರುಚಿರಹಿತವಾದದ್ದು.
ಹರಳೆಣ್ಣೆಯಿಂದಾಗುವ ಯಾವತ್ತೂ ಉಪಯೋಗಗಳು ನಾಲಗೆಗೂ, ಮನಸ್ಸಿಗೂ ಬೇಸರವಾವುದೂ ಇಲ್ಲದೆ ಈ ಸ್ವಸ್ತಿಕಾ ಹರಳೆಣ್ಣೆಯಿಂದ ದೊರೆಯುವುವು. ಇವಲ್ಲದೆ—
ಸ್ವಸ್ತಿಕಾ ಕಡ್ಲೆಂಡೆ, ಎಳ್ಳೆಂಡೆ, ವಾರ್ನಿಸು, ಮೈಗೆ ಹಾಕುವ ಸಾಬೂನು ವಗೈರೆ ಇವೆ.

Swastik Oil Mills Ltd, Bombay.
Chairman–Seth Ambalal Sarabhai,
Directors–Sir Purushothamdas Thakurdas,
,, Mr. F. E. Dinshaw,
,, Mr. C. S. Patel. & others.

ಮಲಬಾರ್ ಮತ್ತು ಕನ್ನಡ ಜಿಲ್ಲೆಗೆ ಏಜಂಟರು:—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು.

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್.

ಗಣಪತಿ ಹೈಸ್ಕೂಲ್ ರಸ್ತೆ, (ಮಂಗಳೂರು, ದ. ಕನ್ನಡ.)

ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜೀನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನೆಷ್ಟೋ ಬಗೆಯ ನೂತನ ತಿಂಡಿತಿನಸುಗಳು—ಚಹಾ, ಕಾಫಿ, ಕೊಕ್ಕೋ, ಇತ್ಯಾದಿ ಎಲ್ಲ ತರದ ಪಾನೀಯಗಳು— ಅನುಭವಸ್ಥರಿಂದ ತಯಾರಿಸಲ್ಪಡುವುವು.

ಆಯಾಯಾ ತರಗತಿಯವರಿಗನುಕೂಲವಾಗುವಂತೆ ಸ್ಥಳ ಸೌಕರ್ಯವಿದೆ.

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ ತೃಪ್ತಿಪಡೆಯಿರಿ.

[ವಿ. ಸೂ.—ಟೀಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿ ತಿನಸು—ಪಾನೀಯಗಳನ್ನು ಒದಗಿಸಲಾಗುವುದು. ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿ ತಿಳಕೊಳ್ಳುವುದು.]
(10–11–'33.

Seventyseven Years!

Two generations of approved service enables us to pick and choose what is cheap lasting & good to suit the pockets & the tastes of our longstanding wide circle of



CUSTOMERS
who know our
Premier House for Swadeshi.
Mill Yarns—Handloom Cloths,
Dhoties—Saries—Cintzesh etc
Shrinivas Ranga Pai,
Sawkar Mahal,
Car Street, MANGALORE.

For neat and nice Printing
Please call at
THE SHARADA PRESS,
Car Street, MANGALORE.

(B. ಪುಟದಿಂದ ಮುಂದುವರಿದುದು.)

ರದ ಪದಕ, ಬೆಳ್ಳಿ ಪದಕ, ಸರ್ಟಿಫಿಕೇಟು ಸಿಕ್ಕಿದವರ ಹೆಸರಿನ ಪಟ್ಟಿಯನ್ನು ದೇವರ ಮುಂದೆ ಓದಿ ಹೇಳಲಾಯಿತು.

ಮರುದಿನ ೧೦ ಘಂಟೆಗೆ ಗ್ರೂಪ್ ಫೋಟೋ ತೆಗೆಯಲಾಯಿತು. ೧೧ ಘಂಟೆಗೆ ಕಚೇರಿಯಲ್ಲಿ ಪ್ರದರ್ಶನ ಸ್ಟಾಲು ಕೀಪರರ ಮತ್ತು ಸ್ಕೌಟುಗಳ ಸಭೆಯು ಶ್ರೀಮಾನ್ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮಾನ್ ಹೆಗ್ಗಡೆಯವರು ಎಲ್ಲರ ಮನಸ್ಸಿಗೂ ಆನಂದ ಪಡಿಸುವ ರೀತಿಯಲ್ಲಿ ಭಾಷಣವನ್ನು ಕೊಟ್ಟರು. ಸರ್ಟಿಫಿಕೇಟು, ಪದಕ ಸಿಕ್ಕಿದವರಿಗೆ ಅಭಿವಂದನೆ. ಯಾವುದೂ ಸಿಕ್ಕದೆ ಮನ ನೊಂದವರಿಗೆ ಬಿಟ್ಟದಂತಹ ಮಾತುಗಳ ಮತ್ತು ದೇವರ ಆಶೀರ್ವಾದದ ಸತ್ಕಾರ ಮುಂದಿನ ವರುಷದಲ್ಲಿ ಜರಗಲಿರುವ ಪ್ರದರ್ಶನದ ಹಂಚಿನ ಕಾರ್ಯ ಕಟ್ಟಡದ ಯೋಜನೆ, ಮುಂತಾದ ವಿಷಯಗಳು ಈ ಭಾಷಣದಲ್ಲಿ ಅಡಕವಾಗಿದ್ದವು. ನಂತರ ಧನ್ಯವಾದ ಗಳಾದುವು. ಇದಾದ ಬಳಿಕ ಕಾಫಿ ಫಲಾಹಾರಾದಿ ಸತ್ಕಾರ, ಅನಂತರ ದೇವಸ್ಥಾನಕ್ಕೆ ಹೋಗಿ ಶ್ರೀಮುಡಿ ಗಂಧ ಪ್ರಸಾದವನ್ನು ಹಂಚಿ ಸಮಾರಂಭವು ಕೊನೆಗೊಂಡಿತು.

ಕಲೆಕ್ಟರ್ ದೊರೆಗಳವರಿಗೂ ಶ್ರೀಮಾನ್ ಹೆಗ್ಗಡೆಯವರಿಗೂ [illegible] ಅವರಿಗೂ ಪ್ರದರ್ಶನ ಕಮಿಟಿಯವರಿಗೂ [illegible]

ಈ ಕ್ಷೇತ್ರವು ಬಹಳ ಪವಿತ್ರವಾಗಿದ್ದು ಪರ್ವ ದಿವಸಗಳಲ್ಲಿಯೂ ಯಾತ್ರಿಕರು ಬರುತ್ತಲೇ ಇರುವರು. ಇದರ ಅನುಕೂಲತೆಗಾಗಿಯೂ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿರುವ ಹೆಗ್ಗಡೆಯವರೂ, ಪುತ್ತೂರು ತಾಲೂಕನ್ನು ಉದ್ಧಾರ ಮಾಡುತ್ತಲಿರುವ ತಾಲೂಕು ಬೋರ್ಡು ಪ್ರೆಸಿಡೆಂಟರೂ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ ಆದ ಮೆ| ಶಿವರಾಯರೂ ಜಿಲ್ಲಾ ಕಲೆಕ್ಟರ್ ದೊರೆಗಳವರೂ ಕೂಡಿ ಆಲೋಚಿಸಿ ಜಮೆಯಲ್ಲಿರುವ ರೈಲುವೇ ಸೆಸ್ಸಿನಿಂದಲೂ, ಭಂಡಾರದ ಸ್ವಲ್ಪ ಹಣದಿಂದಲೂ ಹೊಳೆಗೆ ಒಂದು ಸೇತುವೆಯನ್ನು ರಚಿಸುವುದು ಅಗತ್ಯ. ಬಂದವರಿಗೆ ಉಳುಕೊಳ್ಳುವುದಕ್ಕಾಗಿ ಈಗಿರುವ ಛತ್ರದಂತೆ ಇನ್ನೊಂದು ಛತ್ರವನ್ನು ಕಟ್ಟಿಸುವುದು ಅಗತ್ಯವಾಗಿದೆ.

ಈಗ ಅನೇಕರು ಮರದಡಿಯಲ್ಲಿ ಅಡಿಗೆ ಮಾಡಿ ಅಲ್ಲಿಯೇ ರಾತ್ರೆ ಮಲಗಬೇಕಾಗುತ್ತದೆ. ಇಲ್ಲಿ ಮಂಜು ಹೆಚ್ಚಾಗಿ ಬೀಳುವುದರಿಂದ ಬಹಳ ಕಷ್ಟಗಳು ಒದಗುತ್ತವೆ. ಮೂರನೆಯದಾಗಿ ಪ್ರದರ್ಶನಕ್ಕೆ ಬರಬೇಕಾದ ವಸ್ತುಗಳು ಇಂಥವೇ ಆಗಬೇಕೆಂಬುದನ್ನು ಮೊದಲೇ ಪತ್ರಿಕೆಗಳ ಮೂಲಕ ತಿಳಿಸುವ ಅಗತ್ಯವಿದೆ. ಇಲ್ಲವಾದರೆ ತಂದ ವಸ್ತುಗಳಲ್ಲಿ ಹಲವುಗಳನ್ನು ಇಡಲಿಕ್ಕೂ ಅಸ್ಥಿಗಳು ಬರುತ್ತಲಿವೆ. ಕಮಿಟಿಯವರು ಅವುಗಳನ್ನು ಗಣನೆಗೆ ತಾರದೆ ತಂದವರ ಮನಸ್ಸು ನೋಯುತ್ತದೆ. ನಾಲ್ಕನೆಯದಾಗಿ ಇಕ್ಕೇರಿ ನಾಯರ ಮತ್ತು ಟಿಪ್ಪು ಸುಲ್ತಾನರ ರಾಜ್ಯಭಾರದ ಅಂತ್ಯ ಕಾಲದ ವರೆಗೆ ಇದ್ದ ಧರ್ಮಸ್ಥಳ—ಕೊಕ್ಕಡ—ಸುಬ್ರಮಣ್ಯ ಮಾರ್ಗದ ಧರ್ಮಸ್ಥಳ ಕೊಕ್ಕಡ ಅಂಶವು ರಿಜರ್ವ ಕಾಡಿನೊಳಗೆ ಸೇರಿ ಧರ್ಮಸ್ಥಳ ಜಾತ್ರೆಯಾದೊಡನೆ ಸುಬ್ರಮಣ್ಯ ಷಷ್ಠಿಗೆ ಹೋಗುವ ಯಾತ್ರಿಕರು ಬಹಳ ದೂರ ದಾರಿಯಿಂದ ಹೋಗಬೇಕಾಗುತ್ತದೆ. ಈ ರಿಜರ್ವ ಕಾಡಿನೊಳಗೆ ಸೇರಿರುವ ಮಾರ್ಗದ ಅಂಶವನ್ನು ಬಿಟ್ಟುಕೊಡುವಂತೆ ಮದ್ರಾಸು ಸರಕಾರಕ್ಕೆ ಬರೆಯುವಂತೆ ಕಲೆಕ್ಟರ ದೊರೆಗಳವರೊಡನೆ, ಕೇಳಿಕೊಳ್ಳುವುದು ಅತಿ ಅಗತ್ಯವಾಗಿದೆ. ಇದನ್ನು ಮಾಡಿಸಿದರೆ ಉಪ್ಪಿನಂಗಡಿ ತಾಲೂಕಿನ ಹೆಚ್ಚಿನ ಭಾಗದಿಂದ ಬರುವ ಯಾತ್ರಿಕರಿಗೂ, ಮೋಟರ ವಹಿವಾಟಕ್ಕೂ ಬಹಳ ಅನುಕೂಲತೆಯಾಗುವುದು. ಮೈಸೂರು ಹಾಸನ ಜಿಲ್ಲೆಯವರಿಗೆ ಧರ್ಮಸ್ಥಳಕ್ಕೆ ಬರಲು ಬಹಳ ಹತ್ತಿರ ದಾರಿಯಾಗುವುದು. ಉಜಿರೆ, ಧರ್ಮಸ್ಥಳ, ಕೊಕ್ಕಡ, ಹಾಸನ, ಸುಬ್ರಮಣ್ಯ ಮೋಟರ್ ಸರ್ವಿಸ್ ಕಾಯಂ ಇಡಲಿಕ್ಕೆ ಬಹಳ ಅನುಕೂಲ. ಶ್ರೀಮಾನ್ ಹೆಗಡೆಯವರು ಎಲ್ಲರ ಪ್ರೀತಿಗೂ ಪಾತ್ರರಾಗಿರುವುದರಿಂದ ಈ ಕೆಲಸವು ಬಹಳ ಬೇಗನೆ ಕೈಗೂಡುವಲ್ಲಿ ಸಂದೇಹವಿಲ್ಲ.

ಎಂ. ಗಣಪತಿರಾವ್ ಐಗಳ್.

[illegible]
[illegible] ೩
[illegible] ಪರ್ತಮಾನ, ೬
[illegible] ೧೧
[illegible], ಉಡುಪಿ, ಮೂಡಬಿದ್ರೆ, ಎರ್ಮಾಳ ೯
[illegible] ಯುದ್ಧವಾಗುವುದೇ? ೪
[illegible] ೧೩
ಗಾಂಧಿಯವರಿಗೆ ಬೊಬ್ಬೆಗಳನ್ನ ಏಕೆ? ೧೫
[illegible] ಕರ್ನಾಟಕ ವಸ್ತು ಪ್ರದರ್ಶನ ಮತ್ತು ವಿವಿಧ
[illegible] ಸಮ್ಮೇಳನ B

ಸ್ವದೇಶಾಭಿಮಾನಿ.

ತಾ. ೨೪ನೇ ಶುಕ್ರವಾರ ನವಂಬರ ೧೯೩೩.

ಮಿತಸಂತತಿ

Birth Control

ಈ ಸಮಸ್ಯೆಯು ಈ ವರೆಗೆ ಬರೇ ಕೆಲವರ ಹುಚ್ಚಾಟದಂತಿದ್ದದ್ದು, ಇತ್ತೀಚೆಗೆ ಹೆಚ್ಚಿನ ಅನುಯಾಯಿ ಗಳನ್ನು ಹೊಂದುತ್ತಿರುತ್ತಿದೆ. ಒಂದು ಸಮಯದಲ್ಲಿ ಮಿತ ಸಂತತಿ ವಾಙ್ಮಯವು ಅಶ್ಲೀಲವೆಂದು ಎಣಿಸಲ್ಪಟ್ಟಿದ್ದು ಈಗ ಶಾಸ್ತ್ರೀಯ ಪ್ರಶ್ನೆಯೆಂದು ತಿಳಿಸಲ್ಪಡುತ್ತಿದೆ. ಇತ್ತೀಚೆಗೆ ಈ ವಿಷಯದ ಮೇಲಿನ ಪುಸ್ತಕಗಳು ತುಂಬಾ ಮಾರಾಟಕ್ಕೆ ದೊರಕುತ್ತಿವೆಯಲ್ಲದೆ, ಬೇಕಾದ ಉಪಕರಣ ಸಾಮಗ್ರಿಗಳೂ ಮಾರಾಟವಾಗುತ್ತಿವೆ.

ಧಾರ್ಮಿಕ ಪ್ರವೃತ್ತಿಯವರೂ, ತಾತ್ವಿಕರೂ, ಮಿತಸಂತತಿಯನ್ನು ಬಹಳವಾಗಿ ನಿಷೇಧಿಸುವರು. ಅದು ದೇವರ ಇಚ್ಛೆಗೆ ವಿರೋಧವೆಂದೂ, ಜನತೆಯಲ್ಲಿ ಸ್ವೇಚ್ಛಾ ಪ್ರವರ್ತನವನ್ನೂ, ವ್ಯಭಿಚಾರವನ್ನೂ ಹೆಚ್ಚಿಸಬಹುದೆಂದೂ ಇತ್ಯಾದಿಯಾಗಿ ದೂಷಿಸುವರು. ಅಲ್ಲದೆ ಸಂತತಿಯ ನಿರ್ಬಂಧವನ್ನು ಸಂಯಮದಿಂದಲೇ ಸಾಧಿಸಬೇಕಲ್ಲದೆ ಇಂತಹ ಕೃತ್ರಿಮ ಉಪಾಯಗಳಿಂದ ಸಾಧಿಸಬಾರದೆಂದು ಹೇಳುವರು.

ಆದರೆ ಧಾರ್ಮಿಕರೂ ತಾತ್ವಿಕರೂ ಎಷ್ಟೇ ಹೇಳಲಿ ಸಂಭೋಗಲಾಲಸೆಯು ಮನಸ್ಯನಲ್ಲಿ ಅರ್ವಾಚೀನ ಕಾಲದಿಂದಲೂ ಬೆಳೆದು ಬಂದ ಸ್ವಭಾವವಾಗಿರುತ್ತದೆ. ಇದರ ಸಂಯಮವೆಂದರೆ ಧರ್ಮದಲ್ಲಿ ಅತ್ಯುತ್ಕೃಷ್ಟ ಸಾಧನೆಯಾಗಿ ಪರಿಗಣಿಸಲ್ಪಟ್ಟಿದೆ; ಆದುದರಿಂದ ಆ ಸಂಯಮವು ಅಷ್ಟೇ ಕಠಿಣವೂ ಆಗಿದ್ದೆಯೆನ್ನಲು ಸಂದೇಹವಿಲ್ಲ. ಧಾರ್ಮಿಕರ ಪುರಾಣಕತೆಗಳೇ ಮನುಷ್ಯನ ಈ ಸ್ವಭಾವದ ಪ್ರಾಬಲ್ಯಕ್ಕೆ ಸಾಕ್ಷಿಯಾಗಿದೆ. ಆದುದರಿಂದ ಸಂಯಮವೆಂದು ಬಾಯಿ ಮಾತೇ ಹೇಳಬಹುದಲ್ಲದೆ ಕಾರ್ಯಕಾರಿಯಾದ ಉಪಾಯ ಅದಾಗಿರುವುದಿಲ್ಲ.

ಹಾಗೆಂದು ಮಕ್ಕಳಾಗುವುದು ದೇವರ ಇಚ್ಛೆ. ಅದರ ವಿಷಯದಲ್ಲಿ ನಾವು ಯೋಚಿಸಬಾರದು ಎಂಬುವುದು ಧಾರ್ಮಿಕ ಮಾತೇ ಅಲ್ಲದೆ ಐಹಿಕ ವಸ್ತುಸ್ಥಿತಿಗೆ ಸರಿಯಾದ ಮಾತಲ್ಲ. ಬಡವರಿಗೆ ಸಂತತಿಯ ಸಮೃದ್ಧಿ ಎಂಬ ಮಾತೇ ಇದೆ. ಹಲವು ಕುಟುಂಬಗಳಲ್ಲಿ ಪೋಷಣೆಗೆ ಅನುಕೂಲತೆಗಳಿಲ್ಲದೇನೇ ಮಕ್ಕಳು ಅಕಾಲ ಮೃತ್ಯುವಿಗೆ ತುತ್ತಾಗುತ್ತಾರೆ. ಇನ್ನು ಹಲವು ಕಡೆಗಳಲ್ಲಿ ಇಡೀ ಕುಟುಂಬವೇ ಪೋಷಣೆಗಿಲ್ಲದೆ ಅಶಕ್ತವೂ, ರೋಗಪೀಡಿತವೂ ಆಗಿ ಅತ್ಯಂತ ದಾರುಣ ಸ್ಥಿತಿಯಲ್ಲಿ ದಿನಗಳೆಯುತ್ತಿದೆ. ಇಂತಹ ಕುಟುಂಬಗಳ ಕಡೆಗೆ ಸಮಾಜವೂ ಯಾವ ತರದ ಲಕ್ಷ್ಯವನ್ನೂ ಕೊಡುವುದಿಲ್ಲ, ಮತ್ತು ಹಿಂದೂಸ್ಥಾನದ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಈ ಕುಟುಂಬಗಳ ಕಡೆಗೆ ಸಮಾಜವು ಯಾವ ಸಹಾಯವನ್ನೂ ಮಾಡಲಾರದು.

ಹಿಂದೂಸ್ಥಾನಕ್ಕೆ ಈಗ ಅಸಂಖ್ಯ ಪ್ರಜಾಗಣಕ್ಕಿಂತಲೂ ಸುಸ್ಥಿತವೂ, ನಿರೋಗಿಯೂ, ಬಲಿಷ್ಠವೂ ಆದ ಕೆಲವೇ ಪ್ರಜಾಕೋಟಿಯಿದ್ದರೆ ಪ್ರಯೋಜನವಾಗುವುದು. ಆದುದರಿಂದ ನ್ಯಾಯವಾದ ಮಾರ್ಗದಲ್ಲಿ ಸಂತತಿಯನ್ನು ನಿರ್ಬಂಧಿಸಲು ಆದರೆ ಅಂತಹ ಹಿತಕರವಾದ ಉಪಾಯಗಳು ಇವೆಯೋ ಎಂಬುದೇ ಈಗಿನ ದೊಡ್ಡ ಪ್ರಶ್ನೆ. ಮಿತಸಂತತಿಯು ಆವಶ್ಯವೆಂದು ನಮಗಾದರೂ ಅನ್ನಿಸುತ್ತಿದೆ. ಆದರೆ ಅನುಕರಣೀಯವಾದ, ಸಂತತಿ ಪ್ರತಿಬಂಧಕ ಉಪಾಯಗಳಿವೆಯೋ ಎಂದು ಶೋಧಿಸಿದ್ದಲ್ಲಿ ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವು ಸಿಕ್ಕುವುದಿಲ್ಲ.

ಮಾತ್ರವಲ್ಲ, ಮಿತಸಂತತಿ ಎಂಬ ಹೆಸರು ಕೆಲವು ವ್ಯಕ್ತಿಗಳಿಗೆ ದುಡ್ಡು ಗಳಿಸಲಿಕ್ಕೊಂದು ಅನುಕೂಲ ಉಪಾಯವಾಗಿ ಪರಿಣಮಿಸಿಯದೆ. ಕೆಲವರು ಈ ಹೆಸರಿನಲ್ಲಿ ಅಶ್ಲೀಲ ಪುಸ್ತಕಗಳನ್ನು ಬರೆದು ಮಾರುತ್ತಾರೆ. ಇನ್ನು ಕೆಲವರು ಈ ಹೆಸರಿನಿಂದ ಜನರಲ್ಲಿ ಉಂಟಾಗುವ ಉತ್ಸುಕತೆಯ ಆಧಾರವಾಗಿ ಕೆಲವು ಚಿಕ್ಕ ಪುಸ್ತಕಗಳನ್ನು ರಚಿಸಿ ಕಂಡಾಬಟ್ಟೆ ಹೆಚ್ಚು ಕ್ರಯ ಮಾಡಿ ಮಾರುತ್ತಾರೆ. ಇನ್ನು ಕೆಲವರು ಈ ಪುಸ್ತಕಗಳೊಡನೆ, ಮಿತಸಂತತಿಯ ಉಪಕರಣಗಳನ್ನು, ಪೇಟೆ ಧಾರಣೆಗಿಂತ ಎರಡು ಬಾರಿ ಮೂರು ಬಾರಿ ಬೆಲೆ ಹಾಕಿ ಮಾರುತ್ತಾರೆ. ಒಬ್ಬರು ತಮಗೆ ಪ್ರೊಫೇಸರರೆಂಬ ಹೆಸರನ್ನು ಹಾಕಿ ಮಿತಸಂತತಿಯ ಉದಾರವೂ ನಿಸ್ವಾರ್ಥವೂ ಆದ ಉದ್ದೇಶವನ್ನು ತೋರ್ಪಡಿಸಿ ಕಾಮುಕ ಪುಸ್ತಕಗಳನ್ನೂ ನಿಷ್ಪ್ರಯೋಜಕ ರಸಾಯನಿಕಗಳನ್ನೂ ಮಾರಿ ದುಡ್ಡು ಮಾಡುತ್ತಾರೆ.

ಇತ್ತೀಚೆಗೆ ಈ ಮಿತಸಂತತಿಯ ವಾಙ್ಮಯವು ಯುವಕರಿಗೆ ಅತ್ಯಂತ ಆಕರ್ಷಕವಾಗಿ ಪರಿಣಮಿಸಿಯದೆ. ಆದರೆ ಇಂತಹ ವಾಙ್ಮಯವು ಹೆಚ್ಚಿನ ಮಟ್ಟಿಗೆ ಜನತೆಯನ್ನು ಮೋಸ ಮಾಡಲಿಕ್ಕೇನೆ ರಚಿಸಲ್ಪಟ್ಟಿಯದೆಂದು ಖಂಡಿತವಾಗಿ ಹೇಳಬಹುದು. ಆದುದರಿಂದ ಯುವಕರು ಇದರ ಬಲೆಗೆ ಬೀಳದೆ ತಮ್ಮ ದುಡ್ಡನ್ನು ಉಳಿಸಿಕೊಳ್ಳುವುದು ಆವಶ್ಯಕ.

ಹಾಗೆಂದು, ಹಲವು ಪ್ರಮುಖರೂ ಮಿತ ಸಂತತಿಯ ಧ್ಯೇಯವನ್ನು ಸಾರುತ್ತಿದ್ದಾರೆ. ಮತ್ತು ಈ ವಿಷಯದ ಅನುಭವವನ್ನು ಆಗತ್ಯವುಳ್ಳವರಿಗೆ ಕೊಡಬೇಕಾಗಿ ನ್ಯಾಯ ವಿಧಾಯಕ ಸಭೆಗಳಲ್ಲೂ, ಮ್ಯುನಿಸಿಪಲ್ ಸಭೆಗಳಲ್ಲೂ ಚರ್ಚಿಸುತ್ತಿದ್ದಾರೆ. ಆದರೆ ಈಗಿನ ಪ್ರಚಲಿತ ವಿಧಾನಗಳು ಸಮಾಜದಲ್ಲಿ ಶ್ರೇಯಸ್ಕರವೆಂಬುದೇ ಸಂದೇಹಕರವಾಗಿರುವುದರಿಂದ ಈ ವಿಧಾನಗಳ ಸರಿಯಾದ ಸಮಾಲೋಚನೆಯನ್ನು ಮಾಡುವದು ಅವಶ್ಯವಾಗಿರುತ್ತದೆ.

ಮುಖ್ಯವಾಗಿ ಈ ಮಿತಸಂತತಿಯ ಹೆಸರಿನಲ್ಲಿ ತುಂಬಾ ಹಾನಿಕಾರಕವಾದ ಪುಸ್ತಕ ಪ್ರಕಟಣೆಯೂ, ಉಪಕರಣ, ವಿಧಾನ ರಾಸಾಯನಿಕಗಳ ಮಾರಾಟವೂ ನಡೆಯುವುದರಿಂದ ಜನಾಂಗದ ಯುವಕರನ್ನು ಈ ಕಡೆಗೆ ನಾವು ಎಚ್ಚರಿಸುವುದು ಅವಶ್ಯವಿದೆ.

++ + +

ವಿದೇಶ ವರ್ತಮಾನ

ಜಪಾನಿನ ಟೋಕಿಯೋದಲ್ಲಿ ಮಾಜಿ ಮಂತ್ರಿಯಾದ ಪಕಟ ಸುಕಿ ಎಂಬವರನ್ನು ಜಪಾನೀಯ ಬೋಕ್ಸರನೊಬ್ಬನು ವಧಿಸಲೆತ್ನಿಸಿ ಪರಾಜಯಗೊಂಡನು.

ಅಫಘಾನಿಸ್ಥಾನದ ರಾಜಕೀಯ ವಾತಾವರಣವು ಸದ್ಯಕ್ಕೆ ಶಾಂತವಾಗಿದೆ. ಎಲ್ಲಾ ಪಂಗಡಗಳು ಹೊಸ ರಾಜನಿಗೆ ವಿಧೇಯತೆಯನ್ನು ಸೂಚಿಸಿರುತ್ತವೆ.

ಜೆರೂಸಲೇಮಿನ ಅತ್ಯಂತ ಎತ್ತರದ ಪರ್ವತದ ಮೇಲೆ ೧೫ ಜನರಿರುವ ವಿಮಾನವು ಬಿದ್ದಿತು. ಒಬ್ಬನಿಗೆ ಜಖಂ ಉಂಟಾಗಿದೆ.

ಚೆಸ್ಟರ್‌ಫೀಲ್ಡಿನಲ್ಲಿಯ ಕಲ್ಲಿದ್ದಲ ಗಣಿಯೊಳಗೆ ಕೆಲಸ ಮಾಡುತ್ತಿದ್ದಾಗ ಒಂದು ಗೋಡೆಯು ಬಿದ್ದು ೩೧ ಜನರಲ್ಲಿ ೧೮ ಜನರು ಮೃತರಾದರು. ಒಂದು ಮೈಲಿನ ಕೆಳಗಡೆ ಈ ಅಪಘಡವಾಯಿತು.

ವಾಹನಗಳ ಶಬ್ದವನ್ನು ಕಡೆದು ಶಬ್ದವೆದ್ದ ವಾಹನಗಳನ್ನು ಸ್ಥೀಪನಿಗೊಯ್ಯುವುದಕ್ಕಾಗಿ ಲಂಡನಿನ ಮಾರ್ಗಗಳಲ್ಲಿ ಪೋಲೀಸರು ನೇಮಕ ಹೊಂದಿರುತ್ತಾರೆ.

ಜರ್ಮನಿಯಲ್ಲಿ ಹಿರಿಯರ ವಿರುದ್ಧಿಗಾಗಿ ವಿವಾಹವಾಗಬಾರದೆಂದು ಶಾಸನ ಮಾಡಲಾಗಿದೆ.

ಫ್ರಾನ್ಸಿನಿಂದ ೬೩೦,೦೦೦,೬೦೦ ಫ್ರಾಂಕ್ಸ್‌ಗಳ ಭಂಗಾರವು ಅನ್ಯ ದೇಶಗಳಿಗೆ ರವಾನೆಯಾಯಿತು.

ಹಿಂದೂಸ್ಥಾನದಿಂದ ಇಂಗ್ಲಾಂಡಿಗೆ ಇಷ್ಟರ ತನಕ ೧೪೯೫೫೧೫೩೩೦ ರೂಪಾಯಿಗಳ ಭಂಗಾರವು ಪ್ರಯಾಣ ಬೆಳಸಿತು.

ಹಿಂಗನ್‌ಘಾಟ್‌ನಲ್ಲಿ ಶ್ರೀಮತಿ ಕಾಶೀಬಾಯಿ ಎಂಬವರು ಸಾವಿರ ಎಕ್ರೆಗಳ ಅಧಿಗಳ ಭೂಮಿಯನ್ನು ಹರಿಜನರ ಪ್ರಯೋಜನಾರ್ಥವಾಗಿ ಮಹಾತ್ಮಾಜೀಯವರಿಗೆ ಕೊಟ್ಟಿರುವರು.

[illegible]

[illegible] ಕಾಲೇಜ [illegible] ಶಾಲೆಗಳ [illegible] ನಲ್ ಮುನ್ಸಿಪಾಲಿಟಿಯೊಡನೆ [illegible]

ನಾಗಪುರದ ಜಿಲ್ಲಾ ಬಾರ್ ಎಸೋಸಿಯೇಶನಲ್ಲಿ [illegible] ಪ್ರವೇಶ ಬಿಲ್ಲು ಸರ್ವ ಸಮ್ಮತವಾಗಿ ಅನುಮೋದಿಸಲ್ಪಟ್ಟಿತು.

ಅಹಮ್ಮದಾಬಾದಿನಲ್ಲಿ ಪ್ಲೇಗು ಮೊದಲಾದುದರಿಂದ ಅಧಿಕಾರಿಗಳು ರೂ. ೪೦,೦೦೦ವನ್ನು ಪ್ಲೇಗ್ ಫೀಟಿಗಾಗಿ ಪ್ರತ್ಯೇಕಿಸಿಟ್ಟರು.

ನ್ಯೂಡಿಲ್ಲಿಯಲ್ಲಿ ಇಂಡೋ ಜಪಾನ ವ್ಯಾಪಾರ ಕರಾರು [illegible] ರೂಪದಲ್ಲಿ ಕೊನೆಗೊಂಡೀತೆಂದು [illegible] ಜಪಾನ ಪ್ರತಿನಿಧಿಗಳು ಕೆಲವರು ಮಲೇರಿಯಾದಿಂದ ಹಾಸಿಗೆ ಹಿಡಿದಿರುವರು.

ಅಹ್ಮದಾಬಾದಿನಲ್ಲಿಯ ಅಯರ್ಸ್ ಗಿರಣಿಯಲ್ಲಿ [illegible] ಕೆಲಸಗಾರರು ಸಂಬಳದ ಕುರಿತಾಗಿ ಮುಷ್ಕರ ಎಬ್ಬಿಸಿರುವರು. ಮಿಲ್ ಮ್ಯಾಲೀಕರ ಸಂಘವು ರಾಜಿಗಾಗಿ ಯತ್ನಿಸುತ್ತಿದೆ.

ಪೇಶಾವರದಲ್ಲಿ 'ಗಡಿನಾಡಿನ ಗಾಂಧಿ'ಯರ ಮಿತ್ರ ಖಾನ್ ಅಬ್ದುಲ್ ಗಫರ್ ಖಾನರೆಂಬವರನ್ನು ಜೈಲಿನಿಂದ ಬಿಡುಗಡೆ ಮಾಡಿರುವರು.

ಮುಲ್ತಾನಿನಲ್ಲಿ ಬಾಬುರಾಜೇಂದ್ರ ಪ್ರಸಾದರು ವಿಶೇಷ [illegible] ಗೊಳಗಾಗಿರುವರು.

ತ್ರಿವೆಂಡ್ರಂನಲ್ಲಿ ಅಸಿಸ್ಟಾಂಟ್ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಇವರು ಬಸ್ಸಿನ ಎದುರು ಸ್ಥಾನದಲ್ಲಿ ಕುಳಿತಿದ್ದಾಗ ಬಸ್ಸು ಉರುಳಿ ಬಿದ್ದು ಅವರಿಗೆ ವಿಶೇಷ ಜಖಂ ಆಗಿರುತ್ತದೆ.

ಮುಂಬಾಯಿಯ ಲೋಕಲ್ ಸೆಲ್ಫ್ ಗವರ್ನಮೆಂಟಿನ ಮಂತ್ರಿಗಳಾದ ಸರ್ ರುಸ್ತುಂ ವಕೀಲರು ದೈವಾಧೀನರಾದುದರಿಂದ ಅವರ ಸ್ಥಾನಕ್ಕೆ ಖಾನ ಬಹದ್ದೂರ್ ಡಿ. ಬಿ. ಕೂಪರ್‌ರವರು ನೇಮಕ ಹೊಂದಿರುತ್ತಾರೆ.

ಶ್ರೀ ದೇವದಾಸ ಗಾಂಧಿಯವರು ಮುಲ್ತಾನ ಸೆರೆಯಲ್ಲಿ ಸದಾರೋಗ್ಯದಿಂದಿರುವರೆಂದು ತಿಳಿದು ಬಂದಿದೆ.

ಮಿಮೆನ್‌ಸಿಂಗ್‌ನಲ್ಲಿ ಅನೇಕ ವಕೀಲರುಗಳ ಮನೆಗಳು ಜಪ್ತಿಗೊಳಗಾಗಿ ೨೪ ಯುವಕರು ದಸ್ತಗಿರಿ ಮಾಡಲ್ಪಟ್ಟರು. ಮಿಲಿಟರಿಯವರೂ ಜಪ್ತಿಯಲ್ಲಿದ್ದರು.

ಸಿಲೋನಿನಲ್ಲಿ ಮಕ್ಕಳ ಮಾರಾಟವಾಗುತ್ತದೆಂದು ವಾರ್ತೆ ಹರಡಿದೊಡನೆ ಹೊರಗಿಂದೊರಗೆ ಸರ್ ಬಿ. ಜಯತಿಲಕರು ವಿಚಾರಿಸಲು ಒಂದು ಉದಾಹರಣೆಯು ಮಾತ್ರ ಬಯಲಾಯಿತು.

ದಿನಾಜಪುರದ ೧೫೦೦೦ ಸಂತಾಲರಿಗೂ ಪೋಲೀಸರಿಗೂ ಕೈ ಹೊಯ್ಯಾಗಿ ಪೋಲೀಸರು ಕ್ರಮ ಪ್ರಕಾರ ಗುಂಡು ಹಾರಿಸಿದರು. ಎಸೋಸಿಯೇಟೆಡ್ ಪ್ರೆಸ್ ವಾರ್ತಾವಾಹಕನಿಗೆ ವಿವರವು ದೊರಕಿರುವುದಿಲ್ಲ.

ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಭಾಯಿ ಪರಮಾನಂದರು ಅಹಮ್ಮದಾಬಾದಿನಲ್ಲಿ ಭಾಷಣ ಕೊಡುತ್ತಾ "ಹಿಂದೀಯರು ಐಕ್ಯರಾಗಿರಬೇಕು" ಎಂದು ತಿಳಿದವರೆಲ್ಲರಿಗೂ ಹೇಳಿದರು.

ಚಿತ್ತಗಾಂಗಿನ ಹಿಂದೂ ಯುವಕರ ಪರಿಚಯ ಕಾರ್ಡಿನ ತನಿಖೆಯನ್ನು ಚಿತ್ತಗಾಂಗಿನಲ್ಲಿ ಪೋಲೀಸರು ಮಾಡುತ್ತಿರುವರು. ಮನ ಬಂದಂತೆ ತರುಣರನ್ನು ನಿಲ್ಲಿಸಿ ವಿಚಾರಿಸುತ್ತಿರುವರು.

ತಾ. ೧೬ನೇ ದಿನ ಮುಂಬಾಯಿಯ ಮಹಾಲಕ್ಷ್ಮಿ ಎಕ್ಸ ಮಿಲ್ಲಿನಲ್ಲಿ ಬೆಂಕಿಯೆದ್ದು ೫೦,೦೦೦ ರೂಪಾಯಿಯ ನಷ್ಟವಾಯಿತು. ಸರಕು ಇನ್ಸೂರಾಗಿದ್ದುದರಿಂದ ನಷ್ಟ ವಿಮೆ ಕಂಪೆನಿಗೆ.

ತನ್ನ ನಾಟಕಗಳನ್ನು ಪ್ರದರ್ಶಿಸುವುದಕ್ಕಾಗಿ ರವೀಂದ್ರನಾಥ ಠಾಗೂರರು ಮುಂಬಾಯಿಗೆ ಬರುವ ವಾರ ತಲಪಲಿರುವುದರಿಂದ ಅಲ್ಲಿಯವರು ಅವರಿಗೆ ಮಾನಪತ್ರಗಳನ್ನರ್ಪಿಸಲು ಸಿದ್ಧರಾಗುತ್ತಿರುವರು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರೊಡನೆ ಸಂಚಾರ ಮಾಡುದುದಕ್ಕಾಗಿ ಶ್ರೀ ಎ. ಕಲೇಶ್ವರರಾವ್ ಇವರನ್ನು ಬೆಜವಾಡದಲ್ಲಿ ಶಿಕ್ಷೆಗೀಡುಮಾಡಿರುವರು.

ಲೀಗ್ ಒಫ್ ನೇಶನ್ಸ್ ಬಾರ್ ಮಾತಿನ ಸಂಘವಾಗುವುದಕ್ಕಿಂತ ಅದನ್ನು ಪುನರ್ರಚಿಸಿದರಾದೀತೆಂದು ಸೀನಿಯರ್ ಮುಸೊಲಿನಿಯವರು ಸೆಕ್ರೆಟರಿ ಜನರಲ್‌ರಿಗೆ ತಿಳಿಸಿರುವರು.

ಫಿಲಡೆಲ್ಫಿಯದಲ್ಲಿ ೧೩೦೦ ಕೈದಿಗಳ ಕೆಲಸವು ನಡೆಯುತ್ತಿದ್ದಾಗ ಅವರೆಲ್ಲರೂ ಒಂದೇ ಉಸಿರಿನಿಂದ ಜೈಲಿನ ಹುಗ್ಗದ ಕಾರ್ಖಾನೆ, ಯಂತ್ರ ಕಾರ್ಖಾನೆಗಳಿಗೆ ಬೆಂಕಿ [illegible] ಇತ್ಯಾದಿ, ೫೦೦ ಜನ ಪೋಲೀಸರು ಸಶಸ್ತ್ರರಾಗಿ [illegible] ಗುಂಡು ಹಾರಿಸಿ ಶಾಂತಿ ಸ್ಥಾಪಿಸಿದರು.

Stop Press.

[illegible] ಅಲ್ಲಿ ಘೋರವಾದ ನೆರೆ ಬಂದು, ಒಂದು [illegible] ಜನರು ಹೊಳೆಯಲ್ಲಿ ಸತ್ತರು, ಪೈರುಗಳು ನಾಶವಾದುವು. [illegible] ಮನೆಗಳು ನೆಲಸಮವಾದುವು.

[illegible] ರೂ. [illegible]ನ್ನು ದುರುಪಯೋಗ ಪಡಿಸಿದುದ[illegible] ಘೋಷ್ ಪಾಸ್ಪರಂಬ ಸತೀಶಚಂದ್ರ ಘೋಷರೆಂಬ [illegible]ಗಳಿಗೆ ೧೦ ೦೦೦ ರೂಪಾಯಿ ಜುಲುಮಾನೆ ವಿಧಿಸಿರು

[illegible]ದಿನಲ್ಲಿ [illegible] ನಾಥರನು ಸಾಲಸೋಲ ಮಾಡಿ [illegible] ಆಭರಣಗಳಿಂದ ಮಬ್ಬಿದನು ಸಾಲಗಾರರು ಎಳೆದಾಗ [illegible] ಸಹಾಯಮಾಡದಿರಲು ಅವಳಿಗೆ ಸ್ಕೃತಿಗೆಯಿಂದ ಹೊಡೆದನು, [illegible]ರಿಗೆ ಆತ್ಮಕಥೆಯನ್ನು ಬರೆದು ಆಳವಾದ ಬಾವಿಯಲ್ಲಿ [illegible]ಯನ್ನು ಹೊಂದಿದನು.

[illegible]ಯಲ್ಲಿನ ಜುಮ್ಮಾ ಮಸೀದಿಯಲ್ಲಿ ಪ್ರಾರ್ಥನೆ ಮಾಡು[illegible] ಕೋಟನ್ನು ಎಬ್ಬಿಸಿದುದಕ್ಕಾಗಿ ಮೆಜಿಸ್ಟ್ರೇಟರಾದ ಶ್ರೀ [illegible] ಎಂಬವರು ಸಯ್ಯದ್ ಅಲಿ ಎಂಬವನಿಗೆ ೫ ವರ್ಷಗಳ [illegible] ಸಜೆಯನ್ನು ಶಾಂತ ರೀತಿಯಿಂದ ದಯಪಾಲಿಸಿದರು

[illegible] ಸರಕಾರವು ಯುವಕ ಯುವತಿಯರಿಗೆ ವಿವಾಹದ ಬಗ್ಗೆ [illegible] ಕೊಡುತ್ತೇವೆಂದು ಪ್ರಕಟವಾದ ಒಂದು ತಿಂಗಳೊಳಗೆ ೧೦ ೦೦೦ [illegible]ಗಳು ಬಂದುವು ಅವುಗಳಲ್ಲಿ ೫೦೦೦ ಮಂಜೂರಾದುವು [illegible] ರಸ್ಕೃತವಾದುವು."

[illegible]ಯನ್ನು ಕೊಂದ ಸಂಬಂಧವಾಗಿ ದಸ್ತಗಿರಿಗೊಳಗಾದ ಶ್ರೀ ಸುಶೀಲಕುಮಾರ ದಾಸ್, ಎಂ ಎಸ್ ಸಿ. ಮತ್ತು ಸತೀಶಚಂದ್ರ ಘೋಷ್, ಬಿ ಕಾಮ ಇವರನ್ನು ಒಮ್ಮೆ ಬಿಡುಗಡೆ ಮಾಡಿ ಪುನಹ ಹಿಡಿದರು

ರಂಗೂನಿನ ನವೀನ ಜೈಲಿನಲ್ಲಿದ್ದ ೫ ಮಂದಿ ಕೈದಿಗಳು ರಾತ್ರಿ ಸಮಯ ಕಳೆ ಮುರಿಸಿ ಪೋಲೀಸರ ಮೂಗಿನಡಿಯ ಮಾರ್ಗವಾಗಿಯೇ [illegible]ದಿರುವರು. ಪತ್ತೆ ಸಿಕ್ಕಿರುವುದಿಲ್ಲ

ಲೋಕಲ್ ಬೋರ್ಡುಗಳನ್ನು ತೆಗೆದು ಹಾಕುವುದೇ ದ್ರವ್ಯ ಉಳಿ[illegible] ಕಾಯದ ಹೆದ್ದಾರಿಯೆಂದು ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ [illegible]ಲೋಚನೆಗೆ ಹೋಗಿ ಈ ವಿಷಯ ತರ್ಕವಿತರ್ಕಗಳು ನಡೆಯುತ್ತಿವೆ.

ಮದ್ರಾಸ್ ಗವರ್ನರರು ಜನವರಿ ತಿಂಗಳಲ್ಲಿ ಗಂಜಾಮಿಗೂ ಕಲ್ಲಿಕೋಟೆಗೂ ಸಂಚಾರ ಮಾಡುವರೆಂದು ಪ್ರಕಟವಾಗಿದೆ.

ಸೌತೆಂಪ್ಟನ್‌ನಲ್ಲಿಯ ಸಕ್ಸಿಲ್ಸ್ ಎಂಬ ಸ್ಟೀಮರಿನಲ್ಲಿದ್ದ ೩೬ ಜನರು ಸ್ಟೀಮರ್ ಸಮೇತ ಕಾಣೆಯಾಗಿರುವರು ಅವರು ಮಧ್ಯ ನೀರಲ್ಲಿರುವಾಗ ಭೀಷಣ ಬಿರುಗಾಳಿಯೆದ್ದಿತು.

ಫ್ರಾನ್ಸಿನ ಬೂವೆ ಎಂಬಲ್ಲಿ ಆರ್ ೧೦೧ ವಿಮಾನವು ಬಿದ್ದಲ್ಲಿಯೇ ಪೆರಿಸ್ ಲಂಡನ್‌ಗಳೊಳಗೆ ಹಾರುತ್ತಿದ್ದ ಒಂದು ವಿಮಾನವು ಬಿದ್ದು ಸುಟ್ಟುಹೋಯಿತು ಒಳಗಿನ ಇಬ್ಬರು ಗಾಳಿಚೀಲದಿಂದ ರಕ್ಷಿತರಾದರು.

ಪಾಮೊರು ಜೂರು — ಸ್ಥಳೀಕ ಅಮೃತೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವಂತೆ ಈ ವರ್ಷವೂ ಭಜನಾ ಮಹೋತ್ಸವವು ಇದೇ ಬರುವ ಮಾರ್ಗಶಿರ ಶು ೧೦ರಿಂದ ಆರಂಭವಾಗಿ ಏಕಾದಶಿ ಸೋಮವಾರ ದಿವಸ (ತಾ. ೨೭—೧೧—೩೦) ಅಹೋರಾತ್ರಿಯೂ ಜರಗಿ ಮರು ದಿವಸ ಮಂಗಲವಾಗಲಿರುವುದು ಈ ಮಹೋತ್ಸವಕ್ಕೆ ಪರಸ್ಥಳದ ಭಜಕವೃಂದವು ಬರಲಿರುವುದು

ದಕ್ಷಿಣ ಕನ್ನಡ

ಮಂಗಳೂರು: — ದಿ. ಕೆನರಾ ಬೇಂಕ್ ಲಿಮಿಟೆಡ್, ಇದರ ಒಂದು ಶಾಖೆಯು ಬೆಂಗಳೂರಲ್ಲಿ ತೆರೆಯಲ್ಪಟ್ಟಿರುವುದೆಂದು ತಿಳಿದು ಬರುತ್ತದೆ.

ಶ್ರೀ ಕೃಷ್ಣಸಿನೆಮ ಮಂದಿರದಲ್ಲಿ ತಾ. ೧೮ರಿಂದ ಪ್ರದರ್ಶಿಸಲ್ಪಡುತ್ತಿರುವ "ಲಂಕಾದಹನ" ಚಿತ್ರವನ್ನು ಅನೇಕರಿಗೆ ನೋಡಲು ಟಿಕೇಟು ದೊರೆಯದಿರುವುದರಿಂದ ಪುನಃ ಮುಂದರಿಸಿರುತ್ತದೆ. ಅನಂತರ ಇಂಪೀರಿಯಲ್ ಕಂಪೆನಿಯವರ "ಪತಿಭಕ್ತಿ" ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು ಜಿಲ್ಲು ಮತ್ತು ಜೆಮ್ ಶೆಡ್ಜಿ ಮೊದಲಾದವರು ಅಭಿನಯಿಸಿರುವರು

ತಾರೀಕು ೧೧—೧೧—೩೦ರಲ್ಲು ದ. ಕ ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯ ಸಹಾಯಾರ್ಥ ಪ್ರೊ ಸುದರ್ಶನದಾಸರು ಕೊಟ್ಟ ತಮ್ಮ ಶಕ್ತಿಯೋಗ ಇತ್ಯಾದಿ ಆಟಪ್ರದರ್ಶನದ ಆಯವ್ಯಯ ಲೆಕ್ಕ ಟಿಕೇಟು ಮಾರಾಟದಿಂದ ಜಮಾ ರೂ ೧೪೨೭—೮—೦ ಖರ್ಚು—ಮುದ್ರಣ ಮತ್ತು ಜಾಹಿರಾತು ಬಗ್ಗೆ ರೂ ೩೮—೧೪—೦, ಮುನಿಸಿಪಲ್ ತೆರಿಗೆ ರೂ ೩೫—೦—೦, ಆಸನ ವ್ಯವಸ್ಥೆ ಬೆಳಕು ಕೂಲಿ ಬಗ್ಗೆ ರೂ ೪೭—೧೪—೦, ಸ್ಥಳ ಬಾಡಿಗೆ ಮತ್ತು ಆವರಣದ ಬಗ್ಗೆ ರೂ ೫೦—೦—೦, ಪ್ರದರ್ಶನದ ಬಗ್ಗೆ ಉಪಕರಣಗಳು ವಾಹನ ಬಾಡಿಗೆ ಇತ್ಯಾದಿ ರೂ. ೩೬—೨—೨, ಪ್ರೊ ದಾಸರಿಗೆ ಪ್ರದರ್ಶನದ ಬಗ್ಗೆ ಸಂದದ್ದು ರೂ ೧೯೩—೦—೦ ಒಟ್ಟು ರೂ ೧೦೩೦—೫—೧೦, ಜಮಾ ರೂಪಾಯಿ ೧೪೨೭—೪—೨ ಆಗಿರುತ್ತದೆ ಪ್ರದರ್ಶನದ ಬಗ್ಗೆ ನಾನಾ ರೀತಿಯಿಂದ ಸಹಾಯಮಾಡಿದ ಎಲ್ಲಾ ಮಹಸೀಯರಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಎಂದು ಬಿ ಕೆ ಭಂಡಾರಿ ಕಾರ್ಯದರ್ಶಿ ಸ್ವದೇಶಿ ಪ್ರಚಾರ ಸಭಾ ಇವರು ತಿಳಿಸುತ್ತಾರೆ

ತಾರೀಕು ೧೮—೧೧—೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೧೮ ಮರಣಗಳೂ ೩೨ ಜನನ ಜನನಗಳೂ ಆಗಿವೆ

ಪ್ರೊಫೆಸರ್ ಸುದರ್ಶನದಾಸರ ಪ್ರದರ್ಶನದಲ್ಲಿ ರೂ. ೮೦೩—೧೪—೦ ರಂತೆ ಲೇಡಿ ಗೋಶನ್ ಆಸ್ಪತ್ರೆಗೂ ಡಿಸ್ಟ್ರಿಕ್ಟ್ ಎತ್ಲೆಟಿಕ್ ಸಂಘಕ್ಕೂ ರೂ ೨೦೧—೧೪—೦ ಪ್ರೊಫೆಸರರಿಗೂ ಹೋಗಿವೆಯೆಂದು ಪ್ರದರ್ಶನ ಚಾಲಕರು ತಿಳಿಸಿರುವರು

ದಕ್ಷಿಣ ಕನ್ನಡ ಜಿಲ್ಲಾ ವರ್ಗದಾರರ ಪ್ರಥಮ ಪರಿಷತ್ತು ದಶಂಬರ ೩ನೇ ತಾರೀಕಿನ ದಿನ ೫ ಗಂಟೆಗೆ ಮದ್ರಾಸಿನ ಶ್ರೀ ಸಾಹು ವೆಂಕಟಾಚಲಂ ಚಟ್ಟಿಯವರ ಅಧ್ಯಕ್ಷತೆಯಲ್ಲಿ ಪುತ್ತೂರಿನಲ್ಲಿ ಜರಗುವುದು

ಇಲ್ಲಿಯ ಕೆಂಟೋನ್‌ಮೆಂಟ್ ರೋಡಿನಲ್ಲಿ ದಿ ನೇಶನಲ್ ಎಂಪೋರಿಯಮ್ (ಇಂಡಿಯಾ) ಲಿಮಿಟೆಡ್ ಎಂಬ ಸಂಸ್ಥೆಯು ಡಾ ವಿಠ್ಠಲಶೆಟ್ಟರ ಅಧ್ಯಕ್ಷತೆಯಲ್ಲಿ ತಾ ೧೨ನೇ ದಿನ ತೆರೆಯಲ್ಪಟ್ಟಿತು

ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಅಧ್ಯಕ್ಷರಾಗಿ ರಾವ್ ಬಹದ್ದೂರ್ ನೆಲ್ಲಿಕಾಯ ವೆಂಕಟರಾಯರು ಚುನಾಯಿತರಾಗಿರುವರು

ಎಮ್ ಸಿ ಸಿ ಗವರ್ನಮೆಂಟ್ ಕೊಲೆಜುಗಳೊಳಗೆ ಆದಿತ್ಯವಾರ ಫೋರ್ಡ್ ಕಪ್ ಮೇಚ್ ನಡೆದು ಎಮ್ ಸಿ ಸಿ ಯವರು ಗೆದ್ದರು ಶ್ರೀ ಅರೂರು ರಾಜಾರಾಮರವರು ೧೦೮ ರನ್ಸ್ ತೆಗೆದು ಕಡೆಯ ವರೆಗೆ ಔಟ್ ಆಗದಿರುವುದು ಆಶ್ಚರ್ಯಕರ

ಇಲ್ಲಿಯ ಸೆಂಟ್ರಲ್ ಕೋಒಪರೇಟಿವ್ ಬೇಂಕಿನಲ್ಲಿ ಹಣದ ಸಂಬಂಧವಾಗಿ ನಡೆದ ಮೊಕದ್ದಮೆಯಲ್ಲಿ ಶಿಕ್ಷಾರ್ಹರಾಗಿದ್ದ ಶ್ರೀಗಳಾದ ಬಿ. ವೇಣುಗೋಪಾಲರಾವ್ ಬಿ. ಕೃಷ್ಣರಾವ್ ಮತ್ತು ಎಚ್ ಆರ್ ಶೆಟ್ಟಿಗಳು ಹೈಕೋರ್ಟಿನಲ್ಲಿ ನಿರಪರಾಧಿಗಳೆಂದು ಬಿಡಲ್ಪಟ್ಟಿರುವರು

[illegible] ಹಸ್ತಾಂತರಿ [illegible] ಮೈದಾನಿನಲ್ಲಿ [illegible]ವನ್ನು ಮುನಿಸಿಪಾಲಿಟಿಗೆ ಕೊಡುವುದಿಲ್ಲವೆಂದು ಸರಕಾರವು ಹೇಳಿದೆ.

ಇಲ್ಲಿಯ ಮುನಿಸಿಪಲ್ ಕೌನ್ಸಿಲಿನಲ್ಲಿ ದಿವಂಗತ ವಿ. ಜೆ. ಪಕ್ಕೇಲರ ತೈಲಚಿತ್ರವನ್ನಿಡಲಿರುವರು.

ಉಡುಪಿ — ಅಖಿಲ ಕರ್ನಾಟಕದಲ್ಲಿ ಮೊದಲನೆಯದಾಗಿಯೂ, ಈ ವರ್ಷ ಕುಂಭಕೋಣದಲ್ಲಿ ಜರಗಿದ ಅಖಿಲ ಭಾರತ ಸ್ವದೇಶೀ ಪ್ರದರ್ಶನ ಮತ್ತು ಮಧುರಾ, ಮೈಸೂರು ಪ್ರದರ್ಶನಗಳಲ್ಲಿಯೂ ಸುವರ್ಣ ಪದಕಗಳನ್ನೂ ಪ್ರಾಶಸ್ತ್ಯ ಪತ್ರಿಕೆಗಳನ್ನೂ ಪಡೆದು ಯಶಸ್ವಿಯಾದ "ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ" ಇದರ ಬ್ರೆಂಚ್ ಆಫೀಸೊಂದು ಇದೇ ತಾ. ೨೩ನೇ ಗುರುವಾರ ಬೊಂಬಾಯಲ್ಲಿ ತೆರೆಯಿತು ಇದರ ವಿಳಾಸವು "ದೇವಕರಣ ಮೆನ್ಶನ್, ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. ೨" ಆಗಿದೆ. ಇದರಲ್ಲಿ ತಯಾರಾದ ಬಿ. ಪಿ ಬಿ. ಪಿ. ಸಿ. ಪ್ರೊಪ್ರೈಟರಿ ಔಷಧಿಗಳೂ, ಆಯುರ್ವೇದೀಯ ಔಷಧಿಗಳೂ ಟ್ಯೊಲೆಟ್ ಸಾಮಗ್ರಿಗಳೂ, ಸಾಬೂನುಗಳೂ ಫೌಂಟನ್‌ಪೆನ್ ಶಾಯಿಗಳೂ ಮುಂತಾದ ಸಾಮಗ್ರಿಗಳು ಬೊಂಬಾಯಿಯಿಂದಲೆ ವಿಕ್ರಿತವಾಗುವ ಏರ್ಪಾಡು ಮಾಡಿರುವುದಾಗಿಯೂ, ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಅಖಿಲ ಕರ್ನಾಟಕದ ಯಾವತ್ತೂ ಬಾಂಧವರು ಕರ್ನಾಟಕ ಕೆಮಿಕಲ್ ಎಂಬ ಹೆಸರನ್ನು ಬೊಂಬಾಯಿ ಹಾಗೂ ಅಖಿಲ ಭಾರತದಲ್ಲಿ ಬಳಕೆಗೆ ತರಬೇಕೆಂದು ಕೋರಲಾಗುತ್ತದೆ

ಇಲ್ಲಿ ೩—೭ ತಿಂಗಳುಗಳಿಂದ ಕ್ಯಾಂಪ್ ಮಾಡಿಕೊಂಡು ತಮ್ಮ ಅಮೋಘವಾದ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳಿಂದ ಹೆಸರುಗೊಂಡ ಶ್ರೀ ವೆಂಕಟರಮಣ ಸ್ವಾಮಿ ಥಿಯೇಟ್ರಿಕಲ್ ಕಂಪೆನಿ, ಕಾರ್ಕಳ ಇವರು ಕುಂದಾಪುರಕ್ಕೆ ಪಯಣ ಹೊರಡುವ ವೇಳೆ ಸ್ಥಳೀಯ ಶ್ರೀ ಲ. ವ ದೇವಳದಲ್ಲಿ ಆ ನಾಟಕಸಭೆಯನ್ನು ಪುರಸ್ಕರಿಸುವರೆ ಜಾತಿಬಾಂಧವರು ಕೂಡಿ ಕಂಪೆನಿಯ ಪ್ರೊಪ್ರೈಟರೂ ಪ್ರಮುಖ ಹಾಗೂ ಸಮರ್ಥ ಪುರುಷ ಪಾತ್ರ ವಹಿಸುವವರೂ ಆಗಿರುವ ಶ್ರೀ ನಾರಾಯಣ ರಾಮಕಮ್ತಿಯರಿಗೊಂದು ಮಾನಪತ್ರವೂ ನಿಧಿಯೂ ಅರ್ಪಿಸಲಾದುವು. ಸಂದರ್ಭೋಚಿತ ಭಾಷಣದೊಡನೆ ಸದರಿ ಕಂಪೆನಿಯು ಇನ್ನೂ ಅಧಿಕ ಶ್ರೇಯಸ್ಸನ್ನೂ ಜನಪ್ರೀತಿಯನ್ನೂ ಸಂಪಾದಿಸಿ ದೀರ್ಘಕಾಲ ಬಾಳಲೆಂದು ಶ್ರೀ ದೇವರಲ್ಲಿ ಪ್ರಾರ್ಥಿಸಲಾಯಿತು

ತಾ ೯ನೇ ಆದಿತ್ಯವಾರ ಇಲ್ಲಿನ ಬೋರ್ಡ್ ಹೈಸ್ಕೂಲಿನಲ್ಲಿ ಉಡುಪಿಯ ಪ್ರಥಮ ಹಿಂದೀ ಕೊನ್ವಕೇಶನ (ಪ್ರಮಾಣಪತ್ರಗಳ ಪ್ರಧಾನ) ಲೆಜಿಸ್ಲೆಟಿವ್ ಎಸೆಂಬ್ಲಿಯ ಮಾಜಿ ಸದಸ್ಯರಾದ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸೀಮ್ ಸಾಹೇಬ ಬಹದ್ದೂರರವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿತು

ತಾ ೧೫—೧೧—೩೦ನೇ ಬುಧವಾರ ರಾತ್ರಿ ಕಡಿಯಾಳಿ ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ದೀಪೋತ್ಸವವು ಬಹಳ ವಿಜೃಂಭಣೆಯಿಂದ ಜರಗಿತು

ಮೂಡಬಿದ್ರೆ ಈ ಸೆಂಟರಿನ ಉಪಾಧ್ಯಾಯರ ಸಂಘದ ೨ನೇ ಸಭೆಯು ಇದೇ ತಿಂಗಳ ತಾ ೧೫ನೇ ಶನಿವಾರ ೨ ಗಂಟೆಗೆ ಇಲ್ಲಿಯ ಬೋರ್ಡ್ ಹುಡುಗರ ಶಾಲೆಯಲ್ಲಿ ಪುತ್ತಿಗೆ ಬೋರ್ಡ್‌ಸ್ಕೂಲ್ ಮುಖ್ಯ ಉಪಾಧ್ಯಾಯರಾದ ಮ ರಾ। ಪಿ ಬಿ ವೆಂಕಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು

ಎಡಪಾಳ: — ಇಲ್ಲಿ ತಾರೀಕು ೧೯—೧೧—೧೯೩೦ರಲ್ಲು ಜರಗಿದ ಕಂಬಳದಲ್ಲಿ ಪಡಿ ಬಿದ್ರೆ ಪಟ್ಟಸೆಟ್ಟಿಮನೆ ಕಣಂಜಾರು ಚಂದಯ್ಯ ಹೆಗ್ಡೇರ ಓಟದ ಕೋಣಗಳು ಹಲಗೆಯಲ್ಲಿಯೂ ಮತ್ತು ಕಲಾಯಿಗುತ್ತು ಸಬ್ಬಯ್ಯ ಶೆಟ್ಟಿಯ ಓಟದ ಕೋಣಗಳು ಹಗ್ಗದಲ್ಲಿಯೂ ಸಭಿಕರನ್ನೇ ನೇತ್ರಾನಂದ ಪಡಿಸಿದವೆಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಿಂಟ್ಯಾನ್, ಇಂಕ್ಸ್,

ಚ್ಯವನಪ್ರಾಶ, ಸ್ನೋ, ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ವಿಕ್ರೇತರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

Managing Director—**Venkatraya Annappa Baliga**

Secure your ... Secure your

The Bombay Life Assurance Co. Ltd.,

Bombay—Established 1908.

Chairman:—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply. Right opportunity to those who desire independent and respectable vocation.

Applications should reach the undersigned by 25th September 1933, giving full qualifications and whether they can guarantee business.

Apply to:—

KOCHIKAR BROTHERS,
Madras Branch Secretaries.

Vishveshwarapuram Circle, *Bangalore City.* or Udipi, *South India.* or Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Malabar) who will be touring.

(25-8-33.)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿಗಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬. ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿಗಕ್ಕೆ ರೂ 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿಗಕ್ಕೆ ರೂ. 1-4-0. ಚವನಪ್ರಾಶಲೇಹ ೧ ರಾತಲಿಗೆ ರೂ. 2-8-0. ಅಭಯಾಮಲಕಿ ೧ ರಾತ್ತಲಿಗೆ ರೂ. 2. ಚಂದ್ರಮುಖ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0-5-0. ದಂತಧಾವನ ಚೂರ್ಣ ತೊಲೆಗಕ್ಕೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿಗಕ್ಕೆ ರೂ 0-4-0. ಕೃಷ್ಣಾರಕ ೧ ಔನ್ಸಿಗೆ ರೂ. 0-6-0. ಚಿತ್ರಕ (ಮಕ್ಕಳ ಗ್ರಹಣೀ ರೋಗಕ್ಕೆ ದಿವ್ಯೌಷಧ) ತೊಲೆಗಕ್ಕೆ ರೂ. 0-8-0. ಮಹಾ ಚಿತ್ರಕ ತೊಲೆಗಕ್ಕೆ ರೂ. 1-0-0. ಪಿಂಡ ತೈಲ ೪ ಔನ್ಸ್ ಬಾಟ್ಲಿಗಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೪ ಔನ್ಸ್ ಬಾಟ್ಲಿಗಕ್ಕೆ 0-12-0. ಹಿಮಸಾಗರ ತೈಲ ೪ ಔನ್ಸ್ ಬಾಟ್ಲಿಗಕ್ಕೆ ರೂ. 1-8-0. ಮಹಾಚಂದನಾದಿ ತೈಲ ೪ ಔನ್ಸ್ ಬಾಟ್ಲಿಗಕ್ಕೆ ರೂ. 1-0-0. ಶ್ರೀ ಗೋಪಾಲ ತೈಲ ೪ ಔನ್ಸ್ ಬಾಟ್ಲಿಗಕ್ಕೆ ರೂ. 3-8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. ಬೈಂದೂರು—ಕೆ. ಪುತ್ತು ಶಾನುಭಾಗ. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ. ಜನಾರ್ಧನ ನಾಯಕ್ ಎಂಡ್ ಕೊ., ಪೈ ಫಾರ್ಮೆಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ಎ. ಪಿ. ಶೆಣೈ. ಕಾಪು—ಡಾಕ್ಟರ್ ಬಿ. ಕೆ. ಬೇಕಲ ಡಿಸ್ಪೆನ್ಸರಿ. ಬಟ್ಕಲ್—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲಿಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,00,000. Paid up Capital Rs. 20,000 Issued Capital Rs. 2,00,000

STATEMENT OF AFFAIRS OF THE SYNDICATE AS ON 31ST October 1933.

LIABILITIES.			ASSETS.		
Paid up Capital	Rs.	20,000-0-0.	Loans on Land mortgage	Rs.	2,74,676—15—11
Reserve & other funds	,,	20,250—0—0.	Loans on Valuable Securities	,,	2,34,925—12—4
Deposits	,,	10,54,224—6—8.	Loans on Bills of Exchange, Hundis and Promissory Notes		4,75,518—6—3
Due to Bankers	,,	85,557—13—10,	Investment on Shares of other Companies	,,	43,575—0—0
			On Deposits with other Bankers	,,	1,15,000—0—0
Bills for Collection	,,	29,202—0—1.	Bills for collection (per contra)	,,	29,202—0—1
Sundries	,,	1,20,760—8—5.	Sundries	,,	1,22,147—6—3
			Cash in hand & with Bankers	,,	34,949—4—2
Total Rs.		13,29,994-13-0	Total Rs.		13,29,994—13—0

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 8-11-1933.

P. A. Pai Bros.,
Managing Agents.

ಹೊಸ ತರದ ಚರಕ

೧೧ ವರ್ಷದವನ ಸಾಹಸ.

[illegible] ದಿನ ಹಾವೇರಿಯಿಂದ ಹುಬ್ಬಳ್ಳಿಗೆ ಮೋಟರ್ [illegible] ಬರುವಾಗ ಕ್ಲೀನರ್‌ನ ಪಕ್ಕದಲ್ಲಿ ಗಿಡದ ಮೇಲಿರುವ ಒಂದು [illegible] ಮೋಟರಿನ ಮೇಲ್ಭಾಗಕ್ಕೆ ಹಾರಿ ಅಲ್ಲಿಂದ ಮೆಲ್ಲನೆ ಒಳಗೆ [illegible] ಎಂಬ ೧೧ ವರ್ಷ ಪ್ರಾಯದ ಹುಡುಗನ ಕೊರಳಿಗೆ [illegible]. ಈ ಸಂಗತಿಯು ಉಳಿದ ಜನರ ಕಣ್ಣಿಗೆ ಬೀಳಲು [illegible] ಚೀರಾಡ ತೊಡಗಿದರು. ಆ ಬೊಬ್ಬೆಗೆ ಡ್ರೈವ[ರ] [illegible] ಮೋಟರನ್ನು ನಿಲ್ಲಿಸಿದನು. ಎಲ್ಲರೂ ಅವಸರದಿಂದ ಕೆಳಗಿಳಿ[ದರು]. ಆದರೆ ಶಾಂತವೀರನು ಮಾತ್ರ ಶಾಂತತನದಿಂದ ಯಾವ ಚಲನೆ [illegible] ಸಂದು ಸಾಧಿಸಿ, ಆ ನಾಗಪ್ಪನ ಬಾಯಿಯನ್ನು [illegible] ಗಟ್ಟಿಯಾಗಿ ಹಿಡಿದು ಸಾವಕಾಶವಾಗಿ ಕತ್ತಿನ ಸುತ್ತ [illegible] ಸುತ್ತುಗಳನ್ನು ಬಿಡಿಸಿ, ಹಾವನ್ನು ನೆಲಕ್ಕೆ ಬಿಸಾಡಿದನು. ಜನರು [illegible] ಅದನ್ನು ಕೊಂದರು. ಶಾಂತವೀರನಿಗೆ ಯಾವ ತರದ ಅಪಾ[ಯ]ವೂ ಆಗಿರುವುದಿಲ್ಲ. ಎಲ್ಲರೂ ಆ ಬಾಲವೀರನ ಸಾಹಸವನ್ನು [ಪ್ರ]ಶಂಸಿದರು. ಮೋಟರು ಮುಂದಕ್ಕೆ ಸಾಗಿತು ಎಂದು ಬೆಳಗಾಂವಿಯ [illegible]ದಲ್ಲಿ ಪ್ರಕಟವಾಗಿದೆ.

ಭೂತಗಳ ಕೆಲಸವೋ!

[ಸ್ವೀ]ಡನ್‌ನಲ್ಲಿ ಒಂದು ವಿಚಿತ್ರ ರೈಲುಬಂಡಿಯು ರಾತ್ರಿ ಸಮಯ [ನ]ಡೆಯುವುದೆಂದು ತಿಳಿದು ಬರುತ್ತದೆ. ರಾತ್ರಿ ೧೨ ತಾಸು ಕಳೆದ ನಂತರ ಈ ರೈಲು ಕಂಬಿಗಳ ಮೇಲೆ ಓಡುವುದು. ಇದನ್ನು ಒಬ್ಬೊಬ್ಬರಾಗಿಯೂ ಗುಂಪುಗೂಡಿಯೂ ಜನರು ನೋಡುತ್ತಿವರು. ಇದನ್ನು ಒಂದು ರಾತ್ರಿ [illegible]ನು ಕಂಡು ಅನೇಕ ಜನರಿಗೆ ತಿಳಿಸಿದನು. ಇದನ್ನು ಕಾಣುವ ಕುತೂಹಲದಿಂದ ರಾತ್ರಿ ಅನೇಕರು ಅಲ್ಲಲ್ಲಿ ಅಡಗಿದ್ದು ಈ ರೈಲು ಓಡುತ್ತಿರುವುದನ್ನು ನೋಡಿರುವರು. ಇದು ಎಲ್ಲಿಂದ ಬರುತ್ತದೆಂಬು ತಿಳಿಯದು. ಎಲ್ಲಿಗೆ ತಲಪುತ್ತದೆಂದೂ ಗೊತ್ತಾಗದು. ರೈಲು ಓಡುವಾಗ ಆಗುವ ಶಬ್ದವೂ ಆಗುವುದು, ಯಂತ್ರವು ನಡೆಯುವುದೂ ಕೇಳುವುದು. ಟ್ರೈನಿನ ಎದುರುಭಾಗದಲ್ಲಿ ದೀಪಗಳೂ ಕಾಣುವವು. ಇದು ಯಾವುದರಿಂದಾಗಿ ಕಾಣುತ್ತದೆಂದು ಇಷ್ಟರ ತನಕ ಯಾರಿಂದಲೂ ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ. ಕೆಲವು ವೈಜ್ಞಾನಿಕರು ಇದು ಒಂದು ತರದ ಮರೀಚಿಯೆಂದು ಅಭಿಪ್ರಾಯ ಪಟ್ಟಿರುವರು.

ಬೇಕೆಂದಲ್ಲ.

ಮಿಲಾನಿನ ಜರ್ಮನ್ ದಂಪತಿಗಳು ತಮಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಕ್ಕಳಾದ ನಂತರ, ಕಾರಣಾಂತರಗಳಿಂದ ವಿವಾಹ ವಿಚ್ಛೇದ ಮಾಡಿಕೊಂಡರು. ತಂದೆಯು ಗಂಡು ಮಗನೊಡನೆ ಜರ್ಮನಿಗೆ ಹೋದನು. ತಾಯಿಯು ಹೆಣ್ಣು ಮಗಳೊಂದಿಗೆ ಮಿಲಾನಿನಲ್ಲಿಯೇ ಉಳಿದುಕೊಂಡಳು. ತಂದೆಯು ತೀರಿಕೊಂಡ ಮೇಲೆ ಗಂಡು ಮಗುವನ್ನು ಹಲ್ಮನೆಂಬವನೊಬ್ಬನು ತನ್ನ ಮಗನಂತೆ ಸಾಕಿ ಸಲಹಿದನು. ಮಿಲಾನಿನಲ್ಲಿ ಹೆಣ್ಣು ಮಗಳೊಡನಿದ್ದ ಅವಳ ತಾಯಿಯು ತೀರಿ ಹೋದಳು. ಹೆಣ್ಣು ಮಗುವನ್ನು ಕುಟುಂಬದವನೊಬ್ಬನು ಸಾಕುತ್ತಿದ್ದನು. ಒಂದು ಕಡೆಯಿಂದ ಹುಡುಗನು ಬೆಳೆದು ಯುವಕನಾದನು. ಹುಡುಗಿಯು ಯುವತಿಯಾದಳು. ಆ ತರುಣನು ಒಂದು ದಿನ ಮಿಲಾನಿಗೆ ವ್ಯಾಪಾರ ಸಂಬಂಧವಾಗಿ ಹೋದಾಗ ತರುಣಿಯಿದ್ದಲ್ಲಿಗೆ ಹೋದನು. ಅಲ್ಲಿ ಆ ತರುಣಿಯನ್ನು ಮೋಹಿಸಿದನು. ಅವಳು ತನ್ನ ತಂಗಿಯೆಂದು ಅವನಿಗೆ ತಿಳಿದಿರಲಿಲ್ಲ. ಅವನು ತನ್ನ ಅಣ್ಣನೆಂದು ಅವಳಿಗೆ ಗೊತ್ತಿರಲಿಲ್ಲ. ಹಲ್ಮನು ತನ್ನ ದತ್ತದ ಮಗನಿಗೆ ವಿವಾಹವನ್ನು ನಿಶ್ಚಯಿಸಿದನು. ಹೆಣ್ಣು ನೋಡುವುದಕ್ಕಾಗಿ ತರುಣನ ಪ್ರಾಣಿಯೊಡನೆ ಮನೆಗೆ ಹೋದರು. ಅಲ್ಲಿ ಮಾತುಕತೆ ನಡೆದು ಗುಟ್ಟು ಬಯಲಾಯಿತು. ವಿವಾಹವು ನಿಲ್ಲಿಸಲ್ಪಟ್ಟಿತು. ತರುಣ ತರುಣಿಯರು ಪಶ್ಚಾತ್ತಾಪಕ್ಕೊಳಗಾದರು.

ಹೊಸ ರೀತಿಯ ಚರಕ

ಶ್ರೀ ರಾಜಗೋಪಾಲ ಮುದಲಿಯಾರ್ ಎಂಬ ಬೆಂಗಳೂರು [illegible]ರೊಬ್ಬರು ಒಂದು ಹೊಸ ಚರಕವನ್ನು ಕಂಡು ಹಿಡಿದಿದ್ದಾರೆ. ಇದು ಖಾದಿ ಪ್ರಪಂಚದಲ್ಲಿ ಒಂದು ಹೊಸ ಪರಿವರ್ತನೆಯನ್ನುಂಟು ಮಾಡುವುದೆಂದು ಊಹಿಸಲ್ಪಟ್ಟಿದೆ. ಇದು ಆಕಾರದಲ್ಲಿ ಒಂದು ಗ್ರಾಮಫೋನಿನಂತಿದೆ. ಇದರಿಂದ ಸಾಮಾನ್ಯ ಚರಕಕ್ಕಿಂತ ಉತ್ತಮ [illegible] ನೂಲನ್ನು ತೆಗೆಯಬಹುದು. ಒಬ್ಬ ಮುದುಕಿಯು [illegible] ದಿನಗಳ ಪರಿಶ್ರಮದಿಂದಲೇ ಒಂದು ದಿನಕ್ಕೆ ೬೦೦೦ ಗಜಗ[ಳ] [illegible] ನೂಲನ್ನು ತೆಗೆಯಬಲ್ಲಳೆಂದು ನಿರ್ಧರಿಸಲಾಗಿದೆ. ನೂಲುವವನ [illegible] ಇದರಲ್ಲಿ ದಪ್ಪ ದಾರವನ್ನಾಗಲೀ ಸಪೂರ ದಾರ[illegible]ಗಲೀ ತಯಾರಿಸ ಬಹುದು. ಅಖಿಲ ಭಾರತ ನೂಲುವ ಸಂಘದ [illegible]ಗಳಾದ ಶ್ರೀ ಶಂಕರಲಾಲ್ ಬ್ಯಾಂಕರರವರು ಬೆಂಗಳೂ[ರಿ]ಗೆ ಬಂದು ಅದನ್ನು ನೋಡಿಕೊಂಡು ಹೋದರು. ಮೈಸೂರು ಕೈಗಾ[ರಿಕೆ] [illegible] ಶ್ರೀ ಎ. ಎ. ರಾಮನಾಥನ್‌ರವರು ಈ [illegible] ಚರಕಗಳನ್ನು ತಯಾರಿಸ ಬದಲವಾಳ ನೂಲುವ [illegible] ಚರಕವಾಗಿ [illegible] ಪ್ರಚಾರ ಮಾಡಲು ಯೋಚಿಸುತ್ತಿದ್ದಾರೆ.

59,000 ಅಡಿ ಮೇಲೇರಿದರು

ರೂಸ್ವೆಲ್ಟರಿಗೆ ನಿದ್ರೆಯಿದೆಯೇ?

ರೂಸ್‌ವೆಲ್ಟರು ಅಮೆರಿಕದ ಅಧ್ಯಕ್ಷರಾದ ಮೊದಲ್ಗೊಂಡು ಅಲ್ಲಿಯ ಜನರಲ್ಲಿ ವಿಚಿತ್ರ ಚೇತನವು ತಲೆದೋರಿದೆ. ಕೈಗಾರಿಕೆ, ವ್ಯಾಪಾರ ವಾಣಿಜ್ಯಗಳೆಂತೂ ಹೊಸ ರೀತಿಯ ಹುರುಪಿನಿಂದ ಮುಂದುವರಿಯುತ್ತಿವೆ. ಸರಕಾರೀ ಅಧಿಕಾರಿಗಳು ತಮ್ಮ ಪೂರ್ವಾಚಾರಗಳನ್ನು ಮರೆತು ನವೀನ ಜೀವನ ಕ್ರಮಕ್ಕೆ ತೊಡಗಿದ್ದಾರೆ. ನಿರುದ್ಯೋಗತೆಯು ದಿನೇ ದಿನೇ ಕಡಿಮೆಯಾಗುತ್ತಿದೆ. ಕಂಪನಿಗಳು ದಿನೇ ದಿನೇ ಕೆಲಸಗಾರರನ್ನು ಸ್ವೀಕರಿಸುತ್ತಿವೆ. ಎಲ್ಲಾ ರೀತಿಯಲ್ಲಿ ಪ್ರಗತಿಪರ ಚಲನೆಗಳಾಗುತ್ತಿವೆಯಾದರೂ ಮದ್ಯಪಾನವೊಂದರಲ್ಲಿ ಅಲ್ಲಿಯವರು ಎಲ್ಲರಿಗಿಂತಲೂ ಮಿಗಿಲೆನಿಸಿಕೊಳ್ಳಲಾರಂಭಿಸಿದ್ದಾರೆ. ರೂಸ್‌ವೆಲ್ಟರು ಪದವಿಗೆ ಬಂದಂದಿನಿಂದ ಕುಡಿಕರು ಹೆಚ್ಚುತ್ತಿರುವರು. ಅಲ್ಲಿ ೧೩ ೦೦,೦೦,೦೦೦ ಜನಸಂಖ್ಯೆ ಇರುತ್ತದೆ. ವರ್ಷಕ್ಕೆ ೧೬,೭೮,೦೦,೦೦೦ ಮದ್ಯವು ವೆಚ್ಚವಾಗುವುದೆಂದು ಲೆಕ್ಕವಾಗಿದೆ. ರೂಸ್‌ವೆಲ್ಟರ ಅಧಿಕಾರವು ಜನರಿಂದ ಪ್ರೇಮಪುರಸ್ಸರವಾಗಿ ಅಂಗೀಕೃತವಾಗಿದೆ. ಸರಾಸರಿ ಅವರಿಗೆ ದಿನಕ್ಕೆ ೮೦೦೦ ಪತ್ರಗಳು ಬರುವುವಂತೆ — ಅವುಗಳಲ್ಲಿ ಒಂದನ್ನಾದರೂ ಬಿಡದೆ ಅವರು ಓದಿ ವ್ಯವಸ್ಥೆ ಮಾಡುವರು. ಅಲ್ಲದೆ ತನ್ನ ನಿತ್ಯ ನೈಮಿತ್ತಿಕಗಳಲ್ಲೂ ಅವರು ಬಹಳ ಎಚ್ಚರದಿಂದ ನಡೆಯುತ್ತಿರುವರು.

ವೃದ್ಧಾಪ್ಯವೇ ಇಲ್ಲ!

ವೃದ್ಧಾಪ್ಯವೆಂದರೆ ದೇಹದ ಬೆಳವಣಿಗೆಯು ಪೂರ್ಣವಾದ ಕಾಲ. ದೇಹದ ಬೆಳವಣಿಗೆಯು ಇಷ್ಟೇ ಕಾಲ ಆಗತಕ್ಕದೆಂದು ಮಿತಿಯಿದೆ. ಅದನ್ನು ದಾಟಿ ಅದು ಮುಂದೆ ಹೋಗಲಾರದು. ಪ್ರಾಣಿಯು ಅಂತಹ ಅಶಕ್ತ ದೇಹವನ್ನು ಧರಿಸಿಕೊಂಡು ಮತ್ತೂ ಉಳಿದರೆ ಜ್ಞಾನವು ಹಿಮ್ಮುಖವಾಗುವುದು. ಬುದ್ಧಿಯು ತಪ್ಪುವುದು. ಕ್ರಮೇಣ ಪ್ರಾಣಿಯು ಬಾಲ್ಯಾವಸ್ಥೆಯನ್ನು ಹೊಂದುವುದು. ಆದರೆ ಪ್ರಕೃತಿ ನಿಯಮವನ್ನು ಜರೆಯುವುದಕ್ಕಾಗಿ ಟರ್ಕಿಯಲ್ಲಿ ಜಾರೋ ಆಗನೆಂಬವನೊಬ್ಬನಿರುವನು. ಇವನು ಇನ್ನೂರು ವರ್ಷ ಪ್ರಾಯವನ್ನು ದಾಟಿರುವನಾದರೂ ಇನ್ನೂ ಮುದುಕನಂತೆ ತೋರುವುದಿಲ್ಲ. ಇನ್ನು ಇಂಗ್ಲೆಂಡಿನಲ್ಲಿಯೂ ಇಂತಹ ಹಳಬರು ಇರದೆ ಇಲ್ಲ. ಅಲ್ಲಿ ವಿನ್ನಿಂಗ್ಟನ್ ಎಂಬ ೧೫೬ ವರ್ಷ ಪ್ರಾಯದ ಒಬ್ಬ ಮುದುಕನಿರುವನು. ಇವನು ತನ್ನ ೮೦ನೇ ವರ್ಷ ಪ್ರಾಯದಲ್ಲಿ ಕೂಡಾ ಬರೇ ತರುಣನಂತಿದ್ದನು. ೮೦ರಲ್ಲಿ ಒಬ್ಬಳು ತರುಣಿಯನ್ನು ವಿವಾಹವಾಗಿ ಅವಳನ್ನು ತನ್ನ ೧೧೧ನೇ ವರ್ಷ ಪ್ರಾಯದಲ್ಲಿ ಕಳೆದುಕೊಂಡನು. ಈ ಪತ್ನಿ ವಿಯೋಗವಾದ ನಂತರ ಅವನು ಪುನಹ ವಿವಾಹವಾದನು. ವಿನ್ನಿಂಗ್ಟನನು ಬಡವನಾಗಿದ್ದರೂ ಅವನ ವಯಸ್ಸಿಗಾಗಿ ಅವನಿಗೆ ರಾಜಗೌರವವು ಸಲ್ಲುವುದು.

59 ಸಾವಿರ ಅಡಿ ಮೇಲೇರಿದರು!

ಕೆಪ್ಟನ್ ಸಿ. ಎಫ್ ಉವಿನ್ ಎಂಬ ಆಂಗ್ಲೇಯನೊಬ್ಬನು ಬಹು ಪ್ರಯಾಸದಿಂದ ವಿಮಾನದ ಮೂಲಕ ೪೭,೪೭೯ ಅಡಿಗಳಿಗೆ ಆಕಾಶಕ್ಕೆ ಹಾರಿದನಷ್ಟೆ! ಅವನನ್ನು ಸೋಲಿಸಬೇಕೆಂದು ವೈಮಾನಿಕರು ಸಾಧಿಸುತ್ತಿದ್ದರು. ಇದೇ ನವಂಬರ ೨೦ ನೇ ದಿನ ನ್ಯೂಯೋರ್ಕಿನಿಂದ ಬಂದ ವಾರ್ತೆಯಿಂದ ಲೆಫ್ಟಿನೆಂಟ್ ಸೆಟ್ಲ್ ಎಂಬವನೊಬ್ಬನು ೫೯೦೦೦ ಅಡಿಗಳ ಮೇಲಕ್ಕೆ ತನ್ನ ಬಲೂನಿನಲ್ಲಿ ಹಾರಿದನೆಂದು ತಿಳಿದುಬರುತ್ತದೆ. ೫೦,೦೦೦ ಅಡಿಗಳ ಮೇಲಕ್ಕೆ ಹಾರುವಾಗ ದೇಹವೆಲ್ಲಾ ಬಿಸಿ ವಾತಾವರಣದಿಂದ ಬೆಂದಂತಾಗುತ್ತದೆಂದು ಅವನ ಹೇಳಿಕೆ. ೬೦೦೦೦ ಅಡಿಗಳಿಗೆ ಹೋದರೆ ಅಲ್ಲಿ ಮನುಷ್ಯನು ಉಷ್ಣದಿಂದ ಬದುಕುವುದೇ ದುರ್ಲಭ. ಸೆಟ್ಲನ ಬಲೂನಿನಲ್ಲಿ ವಿಚಿತ್ರ ತರದ ಏರ್ಪಾಡುಗಳಿದ್ದವು. ಉಸಿರಾಡುವ ಯೋಜನೆಯನ್ನು ಅವನು ಬಹು ಅಗಾಧ ಶೋಧನೆಯ ಸೂತ್ರದಿಂದ ಏರ್ಪಡಿಸಿರುವನು. ಅವನು ಭೂಮಿಗಿಳಿಯುವಾಗ ಲಕ್ಷಗಟ್ಟಲೆ ಜನರು ಅವನನ್ನು ಅಭಿನಂದಿಸಿದರು.

300 ವರ್ಷ ಬದುಕಬಹುದೇ?

ಮನುಷ್ಯನಿಗೆ ೧೦೦ ವರ್ಷ ಆಯುಷ್ಯವೆಂದು ರೂಢಿಯ ಮಾತು. ಆದರೆ ಈಗೀಗ ಆ ನೂರು ವರ್ಷದ ಅವಧಿಯು ಕೂಡ ರೂಢಿಯಲ್ಲೇ ಕಳೆಗೆಡಿದೆ. ಮನುಷ್ಯನು ಸಾಧಿಸಿದರೆ ೩೦೦ ವರ್ಷಗಳ ತನಕವಾದರೂ ಜೀವಿಸಬಹುದೆಂಬುದಕ್ಕೆ ಕೆಲವು ನಿದರ್ಶನಗಳಿರುವವು. ಚೈನಾದಲ್ಲಿ ಲೀಚೇಂಗ್ ಎಂಬ ವೃದ್ಧನೊಬ್ಬ ಇದೇ ವರ್ಷದ ಆದಿಯಲ್ಲಿ ಮೃತನಾದನು. ಸಾಯುವಾಗ ಅವನಿಗೆ ೨೫೬ ವರ್ಷ ಪ್ರಾಯವಾಗಿದ್ದಿತು. ಇವನು ತಾನು ೨೫೦ ವರ್ಷ ಪ್ರಾಯದವನೆಂದು ಹೇಳಿಕೊಳ್ಳುತ್ತಿದುದನ್ನು ಕೇಳಿ ಅವನ ದೇಹವನ್ನು ಮಹಾ ಮಹಾ ದೇಹಶಾಸ್ತ್ರಜ್ಞರು ಪರೀಕ್ಷಿಸಿದರು. ಕೊನೆಗೆ ಚೇಂಗನು ಅಷ್ಟು ಕಾಲ ಬಾಳಿದುದು ಹೌದೆಂದು ತಿಳಿದುಬಂತು. ಚೇಂಗನಿಗೆ ೨೩ ವಿವಾಹಗಳಾಗಿದ್ದುವು. ೨೩ನೇ ಪತ್ನಿಯು ೬೪ನೇ ವರ್ಷ ಪ್ರಾಯಕ್ಕೆ ತಲಪುವಾಗ ಅವನಿಗೆ ಮರಣವು ಸಮೀಪಿಸಿತು. ಮೃತ ದೇಹವನ್ನು ಪರೀಕ್ಷಿಸಿದಾಗ ಅವನಲ್ಲಿ ಯಾವ ರೋಗಬಾಧೆಯೂ ಇರಲಿಲ್ಲವೆಂದು ಕಂಡುಬಂದಿತು. ಅವನ ರಕ್ತವು ನಾಶಹೊಂದುವಷ್ಟು ದುರ್ಬಲವಾಗಿದ್ದಿಲ್ಲವೆಂದೂ, ಅವನು ಮೃತನಾದುದು ಹೃದಯದಲ್ಲಿನ ಯಾವುದೋ ಒಂದು ವಿಚಿತ್ರ ಭಯದಿಂದೆಂದೂ ಶಾಸ್ತ್ರಜ್ಞರ ಹೇಳಿಕೆ. ಚೇಂಗನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಂದು ಅವನಿಗೆ ಒಟ್ಟು ೧೮೦ ಜನ ಸಂಬಂಧಿಕರಿರುವರು. ಸಾಯುವ ತನಕವೂ ಚೇಂಗನ ನೇತ್ರಶಕ್ತಿಯು ಸಾಮಾನ್ಯ ಮನುಷ್ಯರಂತೆಯೇ ಇದ್ದಿತು. ಅವನ ನೆನಹಿನ ಶಕ್ತಿಯೂ ಬಹು ವಿಚಿತ್ರ ರೀತಿಯಾದ ಸುಸ್ಥಿತಿಯಲ್ಲಿದಲೇ ಇದ್ದಿತು. ಚೇಂಗನು ಓದಿದ ದಿವ್ಯ ಗಿಡ ಮೂಲಿಕೆಯಿಂದಾಗಿ ಅಷ್ಟು ದೀರ್ಘ ಕಾಲ ಬಾಳಿದನೆಂದು ಹೆಚ್ಚಿನವರ ಊಹೆ. ಇದಕ್ಕೆ ಅವನು ಔಷಧಿ ಮಿಶ್ರಿತ ಮಾಡುತ್ತಿದ್ದುದು ಕಾರಣ. ಆದರೆ ಚೇಂಗನು ಅಂತಹ ಊಹನೆಯು ಪ್ರಸಕ್ತವಲ್ಲವೆನ್ನುತ್ತಿದ್ದನು. ತಾನು ತನ್ನ ಸದಭ್ಯಾಸಗಳ ಬಲದಿಂದಲೇ ಅಷ್ಟು ಕಾಲ ಬಾಳಿದೆನೆಂದು ಅವನ ಹಕ್ಕಿನ ಮಾತು.

ಕರ್ನಾಟಕನಾಟಕ ಸಮ್ಮೇಲನ, ಬೆಂಗಳೂರು.

ಈ ಕರ್ನಾಟಕ ನಾಟಕ ಸಮ್ಮೇಲನವನ್ನು ಸಾಹಿತ್ಯ ಸಮ್ಮೇಳನದೊಂದಿಗೆ ಪ್ರತಿ ಸಲವೂ ನಡೆಸಬೇಕೆಂಬ ಬಗ್ಗೆ ಅನೇಕ ವರುಷಗಳಿಂದ ಪ್ರಯತ್ನಗಳು ನಡೆಯುತ್ತಿವೆ. ಹಿಂದೆ ಕೆಲವು ವರ್ಷಗಳ ಸಾಹಿತ್ಯ ಪರಿಷತ್ತಿನಲ್ಲಿ ಈ ವಿಷಯದಲ್ಲಿ ಕೆಲವು ಗೊತ್ತುವಳಿಗಳು ಕೂಡ ಆಗಿವೆ. ಈಚೆಗೆ ಬೆಂಗಳೂರಿನಲ್ಲಿ ಶ್ರೀಮಾನ್ ಸದಾಶಿವರಾವ್ ಗರೂಡ್‌ರವರ ಅಧ್ಯಕ್ಷತೆಯಲ್ಲಿ ನಡೆದ ದ್ವಿತೀಯ ಕರ್ನಾಟಕ ನಾಟಕ ಸಮ್ಮೇಲನದಲ್ಲಿ ಕೂಡಾ ಈ ಬಗ್ಗೆ ಠರಾವು ಆಗಿ ಅದರಂತೆ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳನ್ನು ಪ್ರಾರ್ಥಿಸಿದ್ದಾಯಿತು. ಮುಖ್ಯ ನಮ್ಮ ರಂಗವು ಅಭಿವೃದ್ಧಿಗೆ ಬಂದು ನಟರ ಅಂತಸ್ತು ಹೆಚ್ಚಿ ಕರ್ನಾಟಕ ನಾಟಕ ಪದ್ಧತಿಯು ಒಂದು ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ನಾಟಕಾಭಿಮಾನಿಗಳೂ ನಾಟಕವೃತ್ತಿಯಂತರೂ ಮುಂದೆ ಬರಬೇಕಾಗಿಯೂ, ಹುಬ್ಬಳ್ಳಿಯಲ್ಲಿ ಇದೇ ಡಿಸಂಬರ ತಿಂಗಳಿನಲ್ಲಿ ನಡೆಯುವ ಸಾಹಿತ್ಯ ಪರಿಷತ್ತಿನ ಸಮಾರಂಭದಲ್ಲಿ ದ್ವಿತೀಯ ಕರ್ನಾಟಕ ನಾಟಕ ಸಮ್ಮೇಲನವು ನಡೆಯುವಂತೆ ಸಾಹಿತ್ಯ ಪರಿಷತ್ತಿನ ಸ್ವಾಗತ ಸಮಿತಿಯವರು ಪ್ರಯತ್ನಿಸಬೇಕಾಗಿಯೂ ನಾಟಕ ಕಲಾಭಿಮಾನಿಗಳೂ ನಟರೂ ನೆರವಾಗಿ ಈ ಸಮ್ಮೇಲನವನ್ನು ನಡೆಸಬೇಕಾಗಿಯೂ ಪ್ರಾರ್ಥಿಸುವೆನು. ಈ ಸಂದರ್ಭದಲ್ಲಿ, ಸಮ್ಮೇಲನದ ಅಪ್ಪಣೆಯಂತೆ ರಂಗಭೂಮಿಗೆ ಸಂಬಂಧಪಟ್ಟ ಪ್ರಶ್ನಾವಳಿಯು ಸಿದ್ಧವಾಗಿ ಕೆಲವರಿಗೆ ಕಳುಹಿಸಿಕೊಟ್ಟಿರುವೆವು. ಈ ವಿಷಯದಲ್ಲಿ ಅಭಿಮಾನವುಳ್ಳ ಇತರರೂ ಅಪೇಕ್ಷಿಸಿದಲ್ಲಿ ಅವರ ವಿಳಾಸಕ್ಕೆ ಪ್ರಶ್ನಾವಳಿಯನ್ನು ಕಳುಹಿಸಿಕೊಡುವೆವು. ಅದಷ್ಟು ಜಾಗ್ರತೆಯಲ್ಲಿ ಉತ್ತರಗಳನ್ನು ಕಳುಹಿಸಿಕೊಟ್ಟಲ್ಲಿ ಮುಂದೆ ನಡೆಯಬಹುದಾದ ಸಮ್ಮೇಲನಕ್ಕೆ ತುಂಬಾ ನೆರವಾಗುವುವೆಂದು ದ್ವಿತೀಯ ನಾಟಕ ಸಮ್ಮೇಲನದ ಕಾರ್ಯದರ್ಶಿಯವರು ತಿಳುಹಿಸುತ್ತಾರೆ.

ಬಹು ಕಾಲದ ಆವಶ್ಯಕತೆಗೆ

ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯುಳ್ಳವರು. ನಿಮಗೆ ಬೇಕಾದುದು ಇಲ್ಲೇ ಇದೆ

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಧಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ — ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟಾಕಿಸ್ಟ್ಸ್ — ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೇಕ್ಟ್ ಡಿಪೋಸಿಟರಿ ಕೊ., ಮಂಗಳೂರು.

[illegible]	[illegible]	[illegible]	[illegible]	[illegible]	[illegible]	ಉ	ಅ
5	[illegible]	[illegible]	[illegible]	[illegible]	[illegible]	6.33	6.0
6	[illegible]	[illegible]	[illegible]	[illegible]	[illegible]	6.33	6.0
7	[illegible]	[illegible]	[illegible]	[illegible]	[illegible]	6.34	6.0
18	[illegible]	[illegible]	[illegible]	[illegible]	[illegible]	6.34	6.0
19	[illegible]	[illegible]	[illegible]	[illegible]	[illegible]	6 35	6.0
30	[illegible]	[illegible]	ಪ್ರಥಮ	[illegible]	[illegible]	6.35	6.0
[illegible]	[illegible]	[illegible]	[illegible]	[illegible]	[illegible]	6 36	6 0

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದುದು	Minimum ಕಡಿಮೆ	ದಿನದ ಮಳೆ	ಜುಮಲಾ ಮಳೆ.
16	86— 1	72— 6	—	—
17	88— 7	68— 9	—	—
18	86— 5	69— 9	—	—
19	85— 5	72— 9	—	—
20	85— 8	73— 9	—	—
21	89— 7	74— 9	—	—
22	87— 6	75— 1	—	160-25

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ	...	3— 6	3— 8
ಹಳೆಮುಸ್ಕತಿ	...	5— 4	5—12
ಗುಡ್ಡು	...	4— 4	5— 0
ಸುಗ್ಗಿ	...	4— 4	4—12
ಊರ ಅವ್ವಲ್ ಬೆಲ್ಲಗೆ	...	4—10	5— 4
ರಂಗೂನು ಬೆಳ್ತಗೆ ಗೋಣಿ ೧ಕ್ಕೆ	...	5— 8	6— 0
ಎಲ್ಲೂರು ಬೆಳ್ತಗೆ ಮುಡಿ ೧ಕ್ಕೆ	...	4— 0	4— 4
ಗೋಧಿ ಗೋಣಿ ೧ಕ್ಕೆ	...	11— 8	12— 8
ತೊಗರಿ ಗೋಣಿ ೧ಕ್ಕೆ	...	9— 4	11— 0
ಹುರುಳಿ ಗೋಣಿ ೧ಕ್ಕೆ	...	5—10	5—12
ಕಡಲೆ ಗೋಣಿ ೧ಕ್ಕೆ	...	9— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	...	10— 8	18— 0
ಉದ್ದು ಗೋಣಿ ೧ಕ್ಕೆ	...	8— 8	9— 0
ಹೆಸರು ಗೋಣಿ ೧ಕ್ಕೆ	...	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	...	35— 8	40— 0
ಉಪ್ಪು ಗೋಣಿ ೧ಕ್ಕೆ	...	5— 4	5—12
ಕೊಬ್ಬರಿ ಖಂಡಿ ೧ಕ್ಕೆ	...	50— 0	60— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	...	16— 8	17— 0
ಎಳ್ಳೆಂಡಿ ಖಂಡಿ ೧ಕ್ಕೆ	...	20— 0	21— 4
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	...	3— 4	4— 4
ಎಳ್ಳೆಣ್ಣೆ ಮುಡಿ ೧ಕ್ಕೆ	...	5— 0	6— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	7— 4	8—12
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	3—14	4— 0
ಹೊಸ ಮೆಣಸು	...	6—14	8— 0
ಸಾಸಿವೆ ಮುಡಿ ೧ಕ್ಕೆ	...	5— 0	4— 8
ಕಾಳುಮೆಣಸು ಖಂಡಿ ೧ಕ್ಕೆ	...	120— 0	0— 0
ಮೆಂತ್ಯ ಮುಡಿ ೧ಕ್ಕೆ	...	20— 0	25— 0
ಜೀರಿಗೆ ಮುಡಿ ೧ಕ್ಕೆ	...	2—14	3— 0
ಅಡಿಕೆ ಖಂಡಿ ೧ಕ್ಕೆ	...	42— 0	44— 0
ಕಾಂಡ್ಲು ತೆಗಡು ಮುಡಿ ೧ಕ್ಕೆ	...	9—10	9—12
ಕಾಂಡ್ಲು ಸಾಫ್ರಗಲು ಮುಡಿ ೧ಕ್ಕೆ	...	13— 8	14— 8
ಹುಣಸೆ ಸೇರು ೧ಕ್ಕೆ	...	14—12	15— 0
ಹುಣ್ಣಿ ತೆಗಡು ಮುಡಿ ೧ಕ್ಕೆ	...	9— 0	9— 8
ಹಸಮ ೧ಕ್ಕೆ	...	20— 0	20— 8
ಮುಣಿ ಹೊಳೆ ಖಂಡಿ ೧ಕ್ಕೆ	...	35— 0	45— 0
ಸುಟಿವ್ ಕಾಫಿ ಖಂಡಿ ೧ಕ್ಕೆ	...	200— 0	250— 0
ಬಿರೀಂ ಕಾಫಿ ಖಂಡಿ ೧ಕ್ಕೆ	...	250— 0	260— 0
ಹಳೆ ಅಡಿಕೆ	...	105— 0	110— 0
[illegible]	...	120— 0	110— 0

(Established 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರು ಪ್ರತಿದಿನವೂ ನಾಲ್ಕು ಸಾರಿ ಕಂಡಾಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service,

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ - ಮಂಗಳೂರಿಗೆ

ಮಂಗಳೂರಿನಿಂದ - ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು - ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ತಮ [illegible]

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿಯಬಹುದು.

ಪತ್ರವ್ಯವಹಾರ.

ಪತ್ರದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು. (ಸಂ. ಸ್ವ.)

ಸುರತ್ಕಲ್ಲಿನಲ್ಲಿ ಹುಚ್ಚುನಾಯಿಗಳು.

ಸ್ಥಳೀಕ "ಗ್ರಾಮಪಂಚಾಯತ ಸಮಿತಿ"ಯವರು ನವಂಬರ ತಾರೀಖು ೧೦ರಿಂದ ಭಿಕಾರಿ ನಾಯಿಗಳನ್ನು ಕೊಲ್ಲಿಸಲಾಗುವುದೆಂಬ ನೋಟೀಸು ಪ್ರಕಟಿಸಿದುದೇ ವಿನಹಾ ತಾ ೧೫ ಕಳೆದರೂ ಕೊಲ್ಲಿಸುವ ಕಾರ್ಯಕ್ಕೆ ತೊಡಗದಿರುವುದರ ಮರ್ಮವೇನಿರಬಹುದೋ! ದಿನೇ ದಿನೇ ಹುಚ್ಚುನಾಯಿಗಳ ಕಾಟವಂತೂ ಹೆಚ್ಚುತ್ತಿವೆ ಅಲ್ಲಲ್ಲಿ ಜನ ಜಾನುವಾರುಗಳಿಗ್ಗೂ ಕಚ್ಚುತ್ತಿವೆ ಸಮಿತಿಯವರಿಗೆ ಇವೆಲ್ಲಾ ತಿಳಿದೂ ಕಣ್ಣುಮುಚ್ಚಿ ಕುಳಿತಿರುವುದು ಗ್ರಾಮಸ್ಥರ ವ್ಯಸನ ಭಯಗಳಿಗೆ ಕಾರಣವಾಗಿವೆ, ಗ್ರಾಮಕ್ಷೇಮಚಿಂತನಾ ದೃಷ್ಟಿಯು ಇದುವರೆಗೂ ಅಧ್ಯಕ್ಷ ಮಹಾಶಯರಲ್ಲಿದ್ದಷ್ಟು, ಈಗಣ ಅಧ್ಯಕ್ಷರಲ್ಲಿವೆಂಧು ಅಲ್ಲಲ್ಲಿಯ ಹೊಲ್ಲಾಗಿ ಪರಿಣಮಿಸಿದೆ ಇದೀಗ ಶೋಚನೀಯವೇ ಸರಿ! ಈ ವಿಷಯ ಸಂಬಂಧಪಟ್ಟ ಮೇಲಾಧಿಕಾರಿಗಳಾದರೂ ಕಣ್ತೆರೆದು ತಕ್ಕ ವ್ಯವಸ್ಥೆ ಕಲ್ಪಿಸಬೇಕಾಗಿ ಊರವರ ಹಾರೈಕೆ!

ಪಟ್ಟಣಿಗ.

ಉಡುಪಿ ಮಾಧ್ವರ ಉತ್ಥಾನೈಕಾದಶೀ ಗಲಿಬಿಲಿ

ಇದೇ ಶ್ರೀಮುಖ ಸಂವತ್ಸರದ ಕಾರ್ತಿಕ ಬಹುಳ ಏಕಾದಶಿಯು ಉಡುಪಿಯ ಎರಡು ಪಂಚಾಂಗಗಳಲ್ಲಿ ಎರಡು ವಿಧವಾಗಿದೆ ಉಭಯ ಪಂಚಾಂಗ ಪಕ್ಷದವರು ತಮ್ಮ ತಮ್ಮ ಪಂಚಾಂಗಗಳಲ್ಲಿರುವುದು ಶಾಸ್ತ್ರ ಸಮ್ಮತವೆಂದು ಪ್ರಕಟಿಸಿರುವರು. ಮದ್ರಾಡಿ ಜನಾರ್ಧನಾಚಾರ್ಯರಿಂದ ಪ್ರಕಟಿಸಿರುವ ಪ್ರಕಟಣೆಯಲ್ಲಿ ಉಡುಪಿ ಶ್ರೀ ಕೃಷ್ಣಪ್ರಸಾದ ಜ್ಯೋತಿ ಪ್ರಕಾಶಮಂದಿರದ ಪಂಚಾಂಗದಲ್ಲಿ ಬರೆದಿರುವಂತೆ ನವಂಬರ ತಾರೀಕು ೨೮ನೇ ಮಂಗಳವಾರವೆಂತಲೂ, ಈ ವಿಷಯವಾಗಿ ಕಳೆದ ಆಷಾಢ ಮಾಸದಲ್ಲೊಂದು (ಧರ್ಮಶಾಸ್ತ್ರ ಮತ್ತೂ ಜ್ಯೋತಿಶ್ಶಾಸ್ತ್ರ ಪಂಡಿತರ) ಸಭೆಯನ್ನು ಸೇರಿಸಿ ಅದರಲ್ಲಿ ಉಭಯ ಪಕ್ಷದವರಿಂದಲೂ ಪ್ರತ್ಯಕ್ಷೋಪಯೋಗಿಯಾದ ಸೂಕ್ಷ್ಮ ಗಣಿತವನ್ನು ಮಾಡಿಸಿದಾಗ ನವಂಬರ ತಾ. ೧೩ನೇ ಸೋಮವಾರ ದಿನಕ್ಕೆ ದಶಮೀ ವೇಧೆ ಬರುತ್ತದೆಂತಲೂ ಇತ್ಯಾದಿ ಕಾಣುವುದು ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಿತವಾದ ಪ್ರಕಟಣೆಯಲ್ಲಿ ಹತ್ತು ಪಂಚಾಂಗಗಳ ದಶಮ್ಯಾದಿ ದಿನ ತ್ರಯ ಘಟಿಗಳನ್ನು ಕೊಟ್ಟು, ಮತ್ತೂ ಕರಣಪ್ರಕಾಶ, ಪರಹಿತ ವಾಕ್ಯಕರಣ, ಸಾರ್ಥಚಂದ್ರ ಗಣಿತದಿಂದ ಪರಿಶೀಲಿಸಿದಾಗ್ಗೂ ಸೋಮವಾರದ ಏಕಾದಶಿಗೆ ದಶಮೀ ವೇಧೆ ಇಲ್ಲದೆ ಶುದ್ಧೈಕಾದಶಿಯೇ ಆಗಿರುತ್ತದಲ್ಲದೆ ಬಹುಪಂಚಾಂಗಗಳ ಸಮ್ಮತಿ ಇದ್ದುದರಿಂದಲೂ ಸೋಮವಾರವೇ ಉಪವಾಸ ಮಾಡುವುದು ಯುಕ್ತವಾಗಿರುವುದೆಂತಲೂ ಪ್ರಕಟಿಸಿರುವರು ಇವರು ಉದಾಹರಿಸಿದ ಪಂಚಾಂಗಗಳ ತಿಥ್ಯಾದಿಗಳು ಒಂದೊಂದರಲ್ಲಿ ಒಂದೊಂದು ವಿಧವಾಗಿದೆ ಆದರೆ ಅದರಲ್ಲಿ ಕೆಲವು ಪಂಚಾಂಗಗಳು ಪ್ರಾಚೀನ ಸೂರ್ಯಸಿದ್ಧಾಂತ ಕೆಲವು ಪ್ರಾಚೀನದೃಗ್ಗಣಿತ ರೀತಿಯಿಂದಲೂ ಕೆಲವು ಆಧುನಿಕ ಸೂಕ್ಷ್ಮದೃಗ್ಗಣಿತದಿಂದಲೂ ಗುಣಿಸಲ್ಪಟ್ಟಿರುವುದು ಅದರೂ ಎಲ್ಲಾ ಪಂಚಾಂಗದಲ್ಲಿಯೂ ಸರ್ವೈಕಾದಶಿಯೆಂತ ಬರೆದು ಮರುದಿನ ಮಂಗಳವಾರ ಹರಿವಾಸರ ಘಟಿಯನ್ನು ಬರೆದಿರುತ್ತಾರೆ. ಮಂಗಳವಾರವೆ ಏಕಾದಶಿ ನಿಮಿತ್ತ ಉಪವಾಸಮಾಡಬೇಕೆಂದು ಹೇಳುವ ಪಕ್ಷದಿಂದ ಪ್ರಕಟಿತವಾದ ಪ್ರಕಟಣೆಯಲ್ಲಿ ಪ್ರತ್ಯಕ್ಷೋಪಯೋಗಿಯಾದ ಸೂಕ್ಷ್ಮಗಣಿತ ಮಾಡಿಸಿದ್ದಲ್ಲಿ ಎಂತ ಬರೆದಿರುವರು ಅಂದರೆ, ವೈಷ್ಣವರು ಅತಿ ಮುಖ್ಯವಾದ ಏಕಾದಶೀ ವ್ರತಾಚರಣೆಯನ್ನು ಆರ್ಯಭಟೀಯ ರೀತಿಯಿಂದಲೇ ನೋಡುವವರಾದ್ದರಿಂದಲೂ, (ವಿಷ್ಣೋಃ ಜನ್ಮದಿವಸಾನಿಚ ವಾಸರಾಣಿ ವಿಷ್ಣುವ್ರತಾನಿವಿಧಾನಿಚ ವಿಷ್ಣುಭಂಚ । ಕಾರ್ಯಾಣಿ ಆಚಾರ್ಯ ಭಟಮಾರ್ಗತ ಏವಸರ್ವೈಃ ಸ್ಮಾರ್ತೈಶ್ಚ ವೈಷ್ಣವಜನೈಃ ನ ವಿಚಾರ್ಯಮಸ್ತಿ) ಇತ್ಯಾದಿ ಧರ್ಮಶಾಸ್ತ್ರರೀತ್ಯಾ, ಆರ್ಯಭಟಸಿದ್ಧಾಂತದಿಂದ ಗುಣಿಸಿದಾಗ ಸೋಮವಾರದ ಏಕಾದಶಿಗೆ ದಶಮೀವೇಧೆಯು ಬರುವುದೇ ಇಲ್ಲ! ಸೂಕ್ಷ್ಮಗಣಿತವೆಂದರೆ (ಕೇತಕಕರಣ) ರೀತ್ಯಾ ಮಂಗಳವಾರ ಆಚರಿಸಬಹುದು. ಉಡುಪಿ ಶ್ರೀ ಕೃಷ್ಣಪ್ರಸಾದ ಜ್ಯೋತಿಃಪ್ರಕಾಶ ಮಂದಿರದ ಪಂಚಾಂಗವು ಕೇವಲ ಪ್ರಾಚೀನ ಆರ್ಯಭಟೀಯ ಗಣಿತದಿಂದಲೇ ಗುಣಿಸಲ್ಪಟ್ಟಿದ್ದಾಗಿ ಕಾಣುತ್ತದೆ ಹೀಗಿರುವಾಗ ಈ ಕಾರ್ತಿಕ ಕೃಷ್ಣೈಕಾದಶಿಯು ಮಾತ್ರ ಆಧುನಿಕ ಸೂಕ್ಷ್ಮದೃಗ್ಗಣಿತವಾಗಲು ಕಾರಣವಾದರೂ ಏನಿರಬಹುದು? ಇದೇ ಆತ್ಯಾಶ್ಚರ್ಯ. ಇದೇ ಅತಿ ಚಮತ್ಕಾರ ಇದೇ ಅತಿ ಸೋಜಿಗ, ಅದರೆ ವೈಷ್ಣವರಿಗೆ ಏಕಾದಶಿ ವ್ರತವು ಕೇವಲ ನೈಷ್ಠಿಕ ಧರ್ಮವಾದುದರಿಂದ ಇಂಥಾ ಸಂಶಯಾಸ್ಪದವಾದ ಸಂಗತಿಯನ್ನು ಧರ್ಮೈಕ ಪಕ್ಷಪಾತಿಗಳಾದ ಅಷ್ಟಕ ಉಡುಪಿ ಗುರುಪೀಠಸ್ಥ ಆಚಾರ್ಯವರ್ಯರು ಇನ್ನಾದರೂ ಇಂಥಾ ಅನ್ಯವಸ್ಥೆ ಉಂಟಾಗದಂತೆ ಧರ್ಮೈಕ ಪಕ್ಷಪಾತವಾದ ಸಭೆಯನ್ನು ಸೇರಿಸಿ ನಿವೃತ್ತಿಮಾಡುವರೆಂದು ನಂಬುವೆವು.

ಇತಿ ಸಜ್ಜನ ಪ್ರೇಮಕಾಂಕ್ಷಿಯಾದ,

ಪದ್ಮನಾಭ ಉಡುಪ ಜ್ಯೋತಿಷೀ, ಕಂದಾವರ,

+ + + +

ದಿವಂಗತ ವೆಂಕಟಕೃಷ್ಣಯ್ಯನವರು

ಸ್ವರ್ಗಸ್ಥರಾದ ತಾತಯ್ಯನವರ ವಿಷಯವಾಗಿ ಸಂಕ್ಷೇಪವಾಗಿ ಬರೆಯುವುದು ಸಾಧ್ಯವೇ ಇಲ್ಲ. ಅವರ ಜೀವನವು ಒಂದು ಶತಮಾನದ ಜೀವನ, ಆ ಶತಮಾನದ ಪ್ರತಿಯೊಂದು ದಿನವೂ, ಪ್ರತಿಯೊಂದು ಗಂಟೆಯೂ, ಪ್ರತಿಯೊಂದು ನಿಮಿಷವೂ, ಅವರ ಧೈರ್ಯ, ನಿಸ್ವಾರ್ಥ ದೇಶ ಸೇವೆಯಿಂದ ಕೂಡಿದೆ ಅವರು ವಿಶ್ರಾಂತಿಯೆಂಬುದನ್ನೇ ಅರಿಯರು. ಪರಮಾತ್ಮನು ಅವರಿಗೆ ಮೊನ್ನೆಯ ಬೆಳಗಿನಿಂದ ಕೊಟ್ಟ ದೀರ್ಘ ವಿಶ್ರಾಂತಿಯೇ ಅವರ ವಿಶ್ರಾಂತಿ.

ಹಳ್ಳಿಯಲ್ಲಿ ವೈದಿಕ ಕುಲದಲ್ಲಿ ಹುಟ್ಟಿದ ಬಾಲ್ಯದಲ್ಲಿಯೇ ತನ್ನ ಪೋಷಕರನ್ನು ಕಳೆದುಕೊಂಡು ಸ್ವಂತ ಪರಿಶ್ರಮದಿಂದ, ಧೈರ್ಯ ಸಾಹಸ, ಸ್ವಾರ್ಥತ್ಯಾಗಯುಕ್ತ ಚಾರಿತ್ರ್ಯದಿಂದ ಮೆಟ್ಟಿಲು ಮೆಟ್ಟಿಲಾಗಿ ಮೇಲಕ್ಕೆ ಬಂದು ತಮ್ಮ ಜೀವನವನ್ನು ಸ್ವಾರ್ಥದ ಸಂಕುಚಿತ ಕ್ಷೇತ್ರದಲ್ಲಿ ನಿರ್ಬಂಧಿಸದೆ ವಿಶಾಲವಾದ ಪರಾರ್ಥ ಪ್ರವಾಹದಲ್ಲಿ ಬೆರಸಿ, ಪರೋಪಕಾರವೇ ಪುಣ್ಯವೆಂದೂ ಪರಪೀಡೆಯೇ ಪಾಪವೆಂದೂ ತಮ್ಮ ಜೀವಮಾನದಲ್ಲಿ ತೋರಿಸಿ ಸರ್ವರಿಂದಲೂ ಕೊಂಡಾಡಲ್ಪಡುವ ಕೀರ್ತಿಯನ್ನು ಗಳಿಸಿದ ಮಹಾತ್ಮರಿವರು ಅವರು ತಮ್ಮ ಶರೀರವನ್ನು ಗಂಧದ ಕಟ್ಟಿಯಂತೆ ತೇಯಿಸಿ ತೇಯಿಸಿ ಪ್ರಪಂಚದಲ್ಲಿ ಸುಖಶಾಂತಿಯ ಸುಗಂಧ ಪ್ರವಾಹವನ್ನು ಹರಡಿದರು ಅವರು ಸಂಪತ್ತಿನಲ್ಲಿ ಅತ್ಯಂತ ಕೋಮಲ ಹೃದಯವನ್ನು ಪ್ರದರ್ಶಿಸಿದರೂ ವಿಪತ್ತಿನಲ್ಲಿ ವಜ್ರಕಠಿಣತೆಯನ್ನು ತೋರಿಸುತ್ತಿದ್ದರು.

Truth, Justice, Fairplay ಸತ್ಯ, ನ್ಯಾಯ ಮತ್ತು ನಿಷ್ಪಕ್ಷಪಾತಕ್ಕಾಗಿ ಹೋರಾಡಿ ದೇವರು ತನಗೆ ಕೊಟ್ಟಿದ್ದ ವಾಕ್ಶಕ್ತಿಯನ್ನೂ ಲೇಖನ ಶಕ್ತಿಯನ್ನೂ ಅನ್ಯಾಯ ಮಾಡುವವರ ಮೇಲೆ ಅತಿ ತೀಕ್ಷ್ಣ ಖಡ್ಗದಂತೆ ಉಪಯೋಗಿಸುತ್ತಿದ್ದರು ಅವರ ಹೆಸರನ್ನೆತ್ತಿದರೆ ಅನ್ಯಾಯಿಗಳಿಗೂ ಅಧರ್ಮಿಗಳಿಗೂ ಗರ್ಭ ನಿರ್ಭೇದವಾಗುತ್ತಿತ್ತು ಸಂಕಟದಲ್ಲಿರುವವರಿಗೂ, ನಿರ್ಗತಿಕರಿಗೂ, ಅನಾಥರಿಗೂ ಅವರು ತಾಯಿಯಂತೆ ಆಶ್ರಯದಾತರಾಗಿದ್ದರು ಚಿಕ್ಕಂದಿನಲ್ಲಿಯೇ ಮಹಾ ವ್ಯಕ್ತಿಗಳಾದ ದಿವಾನ್ ರಂಗಾಚಾರ್ಲು ಇವರ ಸಹವಾಸವು ಅವರಿಗೆ ದೊರೆತು ಅವರ ಜೀವನವು ಉನ್ನತ ಮಾರ್ಗದಲ್ಲಿ ಹರಿಯತೊಡಗಿತು ಒಂದು ರೀತಿಯಾಗಿ ರಂಗಾಚಾರ್ಲುರವರನ್ನು ಅವರು ಗುರುಗಳಂತೆ ಸ್ಮರಿಸುತ್ತಿದ್ದರು ಅವರು ಹೇಳಿದ ಪ್ರತಿಯೊಂದು ಮಾತೂ, ನಡೆಸಿದ ಪ್ರತಿಯೊಂದು ಕಾರ್ಯವೂ ಅವರಿಗೆ ವೇದಾಧಾರದಂತೆ ಇರುತ್ತಿತ್ತು. ಅಧಿಕಾರಿಗಳಾಗಲೀ, ಅನಧಿಕಾರಿಗಳಾಗಲೀ ಅನ್ಯಾಯದಲ್ಲಿ ತೊಡಗಿದ್ದರೆ ಅವರ ಅನ್ಯಾಯವು ನಿರ್ಮೂಲವಾಗುವ ವರೆಗೆ ಇವರು ಶಸ್ತ್ರವನ್ನು ಕೆಳಗಿಡುತ್ತಿರಲಿಲ್ಲ ಅವರ ವಿರೋಧಿಗಳು ಅವರ ಶಕ್ತಿಯನ್ನು ಚೆನ್ನಾಗಿ ಬಲ್ಲರು ಸಿ ಆರ್ ರೆಡ್ಡಿಯವರಿಗೂ ತಾತಯ್ಯನವರಿಗೂ ನಡೆದ ವ್ಯವಹಾರವನ್ನು ಯಾರೂ ಮರೆಯುವ ಹಾಗಿಲ್ಲ ಹಾಗಿದ್ದಾಗ್ಗೂ ಸಿ ಆರ್ ರೆಡ್ಡಿಯವರು ತಾತಯ್ಯನವರನ್ನು ಲೋಕಮಾನ್ಯ ತಿಲಕರಿಗೆ ಸಮಾನರೆಂದೂ, ಬ್ರಿಟಿಷ ಇಂಡಿಯಾದಲ್ಲಿ ಇವರು ಜೀವನಧಾರಣ ಮಾಡಿದ್ದರೆ ಅವರು ಲೋಕಮಾನ್ಯ ತಿಲಕರಿಗೆ ಸಮಾನರಾಗುತಿದ್ದರೆಂದೂ ಹೇಳಿರುವರು ವಿ ಪಿ ಮಾಧವರಾಯರು ಈಗ ಒಂದು ವರ್ಷದ ಹಿಂದೆ ತಾತಯ್ಯನವರ ಮಹಾ ಮಹಿಮೆಯನ್ನು ಕೊಂಡಾಡಿರುವರು. ಎಷ್ಟೋ ದಿವಾನರುಗಳೂ ಅಧಿಕಾರಿಗಳೂ ತಾತಯ್ಯನವರ ದೊಡ್ಡಸ್ತಿಕೆಯನ್ನು ಅರಿತುಕೊಂಡಿರುವರು. ಸರ್ ವಿಶ್ವೇಶ್ವರಯ್ಯನವರು ಇವರ ನಿಸ್ವಾರ್ಥ ಮತ್ತು ಧೈರ್ಯ ದೇಶಸೇವೆಯನ್ನು ಬಹುವಾಗಿ ಪ್ರಶಂಸೆ ಮಾಡಿರುವರು ನಮ್ಮ ಸಂಸ್ಥಾನದ ಸಾರ್ವಜನಿಕ ಜೀವನಕ್ಕೆ ಇವರು ಜನಕರು ಪತ್ರಿಕೋದ್ಯೋಗಕ್ಕೂ ಇವರು ಮೂಲಕರ್ತರು ವಿದ್ಯಾಭ್ಯಾಸ, ಸಮಾಜ ಸುಧಾರಣೆ, ಸ್ತ್ರೀ ವಿದ್ಯಾಭ್ಯಾಸ ಅಂತ್ಯಜೋದ್ಧಾರ ಈ ಚಳವಳಿಗೆಲ್ಲಾ ಅವರು ಮೂಲಾಧಾರರು ಮೈಸೂರು ಸಂಸ್ಥಾನದಲ್ಲಿ ಅವರ ಸ್ಫೂರ್ತಿಯನ್ನೂ, ಸಹಾಯವನ್ನೂ ಹೊಂದದ ಚಳುವಳಿಯಿಲ್ಲ ಈಗಲೂ, ೯೦ ವರ್ಷ ವಯಸ್ಸಿನಲ್ಲೂ ಸಾರ್ವಜನಿಕ ಸೇವೆಗೆ ಅವರು ತೋರಿಸುತ್ತಿದ್ದ ಉತ್ಸಾಹವು ಅಸದೃಶವಾಗಿತ್ತು ದೊಡ್ಡವರು ಸಣ್ಣವರೆನ್ನದೆ ಸರ್ವರಲ್ಲೂ ಸಮಾನವಾದ ಪ್ರೀತಿಯನ್ನಿಟ್ಟುಕೊಂಡು ಪ್ರೋತ್ಸಾಹಿಸುತ್ತಿದ್ದರು ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ ಅವರು ೪೦ ವರ್ಷಗಳ ಕಾಲ ಹೆಡ್ಮಾಸ್ಟರರಾಗಿ ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿರುವರಲ್ಲದೆ, ಅವರ ಜೀವನ ಪಥಕ್ಕೆ ಸ್ಫೂರ್ತಿಯುತವಾದ ಮಾರ್ಗದರ್ಶನವನ್ನೂ ಮಾಡಿದರು ಅಧಿಕಾರಿಗಳೂ, ಅನಧಿಕಾರಿಗಳೂ, ಎರಡು ಪಂಗಡದವರೂ ಅವರನ್ನು ಗುರುಗಳೆಂದು ಭಾವಿಸುತ್ತಿದ್ದರು ಮರಿಮಲ್ಲಪ್ಪ ಸ್ಕೂಲನ್ನು ಬಿಟ್ಟ ನೇಲೆ, ಶಾರದಾ ವಿಲಾಸ ಹೈಸ್ಕೂಲು, ಸದ್ವಿದ್ಯಾಶಾಲೆ, ಆರ್ಯ ಬಾಲಿಕಾ ಪಾಠಶಾಲೆ ಮುಂತಾದ ವಿದ್ಯಾ ಸಂಸ್ಥೆಗಳು ಅವರಿಂದಲೇ ಮುಂದಕ್ಕೆ ಬಂದವು ಅನಾಥಾಲಯವಂತೂ ಇವರಿಗೆ ತಮ್ಮ ಮಕ್ಕಳು ಮೊಮ್ಮಕ್ಕಳ ಗೃಹದಂತೆ ಅನಾಥಾಲಯದ ಬಾಲಕರನ್ನು ತನ್ನ ಮಕ್ಕಳು ಮೊಮ್ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ರಾಜಕೀಯ ಕ್ಷೇತ್ರದಲ್ಲಿ ಅವರು ನಡೆಸಿರುವಷ್ಟು ಕಾರ್ಯಗಳನ್ನು ವರ್ಣಿಸಲು ಸಾಧ್ಯವಿಲ್ಲ. ಅಸೆಂಬ್ಲಿಯ ಆದ್ಯ ಸಂವತ್ಸರಗಳಲ್ಲಿ ಅವರು ಅನಧಿಕಾರ ವರ್ಗಕ್ಕೆ ಅನೇಕ ಕಾಲ ಏಕೈಕ ಮುಖಂಡರಾಗಿದ್ದರು. ವಿದ್ಯಾಧಿಕಾರಿಗಳೊಂದಿಗೂ ದಿವಾನರೊಂದಿಗೂ ಅವರು ಪ್ರಜೆಗಳಿಗಾಗಿ ಹೋರಾಡದ ದಿನವಿಲ್ಲ ಇತ್ತೀಚೆಗೆ ಕೋಮುವಾರು ಚಳವಳಿಯು ನಮ್ಮಲ್ಲಿ ಉಂಟಾದಾಗ ಕೆಲವು ಸುಳ್ಳು ಪ್ರಚಾರದಿಂದ ಅವರು ಕೇವಲ ಒಂದು ಪಂಗಡದ ಪಕ್ಷಪಾತಿಗಳೆಂದು ಕಾಣದ ಹಾಗೆ ಹೊಗಳಲ್ಪಟ್ಟರು. ವಾಸ್ತವ್ಯವಾಗಿ ಬ್ರಾಹ್ಮಣರು ಬಹಳ ಮರ್ದನೆಗೆ ಬಂದದ್ದರಿಂದ ಅವರ ಪಕ್ಷವನ್ನು ಅವರು ವಾದಿಸಿದರು. ಯಾರಾದರೇನು? ಕಷ್ಟದಲ್ಲಿದ್ದವರನ್ನು ಸಂರಕ್ಷಿಸುವುದು ಅವರ ಉದ್ದೇಶವಾಗಿತ್ತು. ಕಡೆಕಡೆಗೆ ಬೆಂಗಳೂರು ಮೊದಲನೆಯ ಗಲಭೆಯ ಪರಿಣಾಮವಾಗಿ ಅವರು ಮಾಡಿದ ನ್ಯಾಯ ಮತ್ತು ಸತ್ಯ ಟೀಕೆಗಳು ಸರಕಾರಕ್ಕೆ ಸರಿಬೀಳದೆ ಅವರ ಪತ್ರಿಕೆಗಳು ಬಲಾತ್ಕಾರವಾಗಿ ನಿಲ್ಲಿಸಲ್ಪಟ್ಟವು. ಈ ವರ್ತನವು ಅವರ ಕೈಗಳನ್ನು ಮುರಿದಂತೆ ಮಾಡಿತು. ಅವರ ದೇಹಶಕ್ತಿಯೂ ಮನಶ್ಶಕ್ತಿಯೂ ಕ್ರಮೇಣ ಕುಂದುತ್ತಾ ಬಂತು. ಅವರು ಅದೇ ಕೊರಗಿನಲ್ಲಿ ಪ್ರಾಣಬಿಟ್ಟರು. ತಮ್ಮ ಪೇಪರುಗಳು ನಿಂತು ಹೋಯಿತಲ್ಲಾ, ತಮ್ಮ ಕೈಗಳು ಮುರಿದಂತಾಯಿತಲ್ಲಾ ಎಂದು ಅವರು ಕಡೆಯ ವರೆಗೂ ಹೇಳುತ್ತಿದ್ದರು. ಸಾಯುವುದಕ್ಕೆ ಎಂಟು ದಿವಸ ಮುಂದೆ ಅನ್ಯವಾಗಲೂ ಅವರು ಸರಕಾರಕ್ಕೆ ಪ್ರೆಸ್ ಆಕ್ಟನ್ನು ರದ್ದು ಮಾಡಬೇಕೆಂದು ಕಾಗದ ಬರೆಸಿದರು

ತಾತಯ್ಯನವರ ಪವಿತ್ರ ಸ್ಮರಣೆಯು ನಮ್ಮನ್ನು ಅಲ್ಪತ್ವದಿಂದ ಮಹತ್ವಕ್ಕೇರಿಸಲಿ, ದೌರ್ಬಲ್ಯದಿಂದ ಮಹಾಬಲಕ್ಕೇರಿಸಲಿ, ಕೃಪಣತೆಯಿಂದ ಉದಾರತೆಗೆ ಏರಿಸಲಿ, ಸ್ವಾರ್ಥತೆಯಿಂದ ನಿಸ್ವಾರ್ಥಕ್ಕೇರಿಸಲಿ, ಹೇಡಿತನದಿಂದ ಧೈರ್ಯಕ್ಕೇರಿಸಲಿ ಹೆಚ್ಚೇನು? ತಾತಯ್ಯನವರ ಮೃತ್ಪಿಂಡವು ನಮ್ಮಿಂದದೃಶ್ಯವಾಗಿದೆ ಆದರೆ ಅವರ ತಪೋಜ್ವಾಲೆಯು ಜೀವನಜ್ಯೋತಿಯು, ಕೀರ್ತಿಕಾಂತಿಯು, ನಮ್ಮ ಕಣ್ಣ ಮುಂದೆ ಅಂತರಾತ್ಮದಲ್ಲಿ ಯಾವಾಗಲೂ ಪ್ರಜ್ವಲಿಸುತ್ತಿದೆ ತಾತಯ್ಯನವರ ಪವಿತ್ರ ನಾಮವು ಚಿರಕಾಲವಿರಲಿ, ಅಜರಾಮರವಾಗಿರಲಿ, ಅವರ ಆತ್ಮಕ್ಕೆ ಶಾಂತಿಯುಂಟಾಗಲಿ. (ತಾ)

ಸಕಲೇಶಪುರದ ವಾರ್ತೆ

ಇದೇ ತಾ 15ರಲ್ಲಿ ಸ್ಥಳೀಯ ಮುನಿಸಿಪಲ್ ಇಲೆಕ್ಷನಿನಲ್ಲಿ ಉಮೇದವಾರರಾಗಿ ನಿಂತಿರುವ 15 ಜನರ ಪೈಕಿ ರಾ. ಎಸ್. ಬಸಲಿಂಗೇ ಗೌಡ, ಎಸ್ ಎಂ ರಾಮಸ್ವಾಮಿ, ಬಿ ಕೆ ಸೋಮೆ ಗೌಡ, ಬೋಯಿಕೆರೆ ಶಿವೇಗೌಡ, ಅರೆಕೆರೆ ರಾಮೆ ಗೌಡ, ಡಾ! ಕೆ ವಿ ಹೆಗ್ಗಡೆ, ಎಸ್ ಕೆ ಶಣ್ಮುಖಯ್ಯ, ವೆಂಕಟಕೃಷ್ಣಯ್ಯ ಸೈಯದ್ ಹಾಮದ್, ಎಸ್ ಮಂಜಯ್ಯ ಇವರು ಬಹುಮತದಿಂದ ಆರಿಸಲ್ಪಟ್ಟಿರುತ್ತಾರೆ

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P No 111/1933

ಅಮ್ಮುತಾಮತಿ— ಅರ್ಜಿದಾರಳು

ನೇಮಿಂಚ ಸೆಟ್ಟಿ—ಎದ್ರಿ ಅರ್ಜಿದಾರ

ಅರ್ಜಿದಾರಳು ರಂಜಾಳ ಗ್ರಾಮದ ಜಿನರಾಜ್ರಯ ಬರೆದಿಟ್ಟ ವೀಲು ಪ್ರಕಾರ ಸದ್ರಿಯವನ ಸೊತ್ತಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸೋಣಾಗಬೇಕಾಗಿ ಈ ಕೋರ್ಟಿನಲ್ಲಿ ಒದಕೊಂಡ ಸದ್ರಿ ವೀಲಿ ನಮೂದಿಸಿರುವ ಅರ್ಜಿಯ ತನಿಖೆ ಬಗ್ಗೆ ಇದೇ ಬರುವ 15—12—33ಕ್ಕೆ ಇಟ್ಟಿದೆ ಈ ವಿತ ಆಕ್ಷೇಪವುಳ್ಳವರು 1933ನೇ ಇಸವಿ ದಿಶಂಬರ ತಾ 15ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟಿಗೆ ಹಾಜರಾಗಿ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬಹುದು

ಕಾರ್ಕಳ,
೨೦-೧೧-೩೩

K S Bhat,
Counsel for Petitioner

ಪ್ರಕಟಣೆ.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 962/1933

ಮಾಮು ಬ್ಯಾರಿ—ತೋಡಾರ ಅಬ್ದುಲ್ ಖಾದಿರ ಬ್ಯಾರಿ ಮಗ, ಕಾರ್ಕಳ ತಾಲೂಕು ಬಡಗ ಮಿಜಾರ ಗ್ರಾಮದಲ್ಲಿರುವವ —ವಾದಿ. ಮತ್ತು

ಅಕ್ಲಿ ಖಾನ್ ಸಾಹೇಬ—ಪಳ್ಳಿಕಾನ ಹಸನ್‌ಖಾನ್ ಸಾಹೇಬರ ಮಗ, ಕಾಪರಗೋಡ ತಲಂಗರ ಗ್ರಾಮದಲ್ಲಿರುವವ— ಪ್ರತಿವಾದಿ.

ಸದ್ರಿ ಪ್ರತಿವಾದಿಗೆ—ವಾದಿಗೆ ಪ್ರತಿವಾದಿಯು ತಾರೀಕು 4-9-1930ರಲ್ಲು ರೂಪಾಯಿ 65/ ಕ್ಕೆ ಸೇ 12½ರ ಬಡ್ಡಿ ನಿತಿ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಹಣಗಳನ್ನು ವಸೂಲು ಹೊಂದುವರೆ ವಾಡಿದ ಮೇಲಣ ವ್ಯಾಜ್ಯವು ತಾ 30—11—33ಕ್ಕೆ ಪೂರ್ವಾಹ್ನ ಘಂಟೆ 11ಕ್ಕೆ ತನಿಕೆಗೆ ಇಟ್ಟಿರುವುದರಿಂದ ಪ್ರತಿವಾದಿಯು ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸುವರೆ ತಪ್ಪಿದರೆ ಎಕ್ಸ್‌ಪಾರ್ಟಿ ಮಾಡೋಣಾಗಿ ತೀರ್ಮಾನಿಸಲಾಗುವುದು

ಮಂಗಳೂರು
17-11-33

B Srinivasa Pai,
ವಾದಿ ಕಡೆ ವಕೀಲ್.

++ ++

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]	6.33	6. 0
[illegible]	[illegible]	[illegible]	[illegible]	[illegible]	[illegible]	[illegible]	6.33	6. 0
[illegible]	[illegible]	[illegible]	[illegible]	[illegible]	[illegible]	[illegible]	6.34	6. 0
[illegible]	[illegible]	[illegible]	[illegible]	[illegible]	[illegible]	[illegible]	6.34	6. 0
[illegible]	[illegible]	[illegible]	[illegible]	[illegible]	[illegible]	[illegible]	6.35	6. 0
[illegible]	[illegible]	[illegible]	[illegible]	[illegible]	[illegible]	[illegible]	6.35	6. 0
[illegible]	[illegible]	[illegible]	[illegible]	[illegible]	[illegible]	[illegible]	6.36	6. 0

ಮಂಗಳೂರಿನ ವಾಯುಸ್ಥಿತಿ.

Date	Temperature. ಉಷ್ಣ (ಶಾಖ)		Rainfall. ಮಳೆ	
	Maximum	Minimum	ದಿನದ ಮಳೆ	ಜುಮಲಾ ಮಳೆ.
16	86—1	72—6	—	—
17	88—7	68—9	—	—
18	86—5	69—9	—	—
19	85—5	72—9	—	—
20	85—8	73—9	—	—
21	89—7	74—9	—	—
22	87—6	75—1	—	160-25

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ	...	3— 6	3— 8
ಕಳಿಮಸ್ಸು ತಿ	...	5— 4	5—12
ಗುಡ್ಡೆ	...	4— 4	5— 0
ಸುಗ್ಗಿ	...	4— 4	4—12
ಊರ ಅವ್ವಲ್ ಬೆಲ್ಲಗೆ	...	4—10	5— 4
ರಂಗೂನು ಬೆಲ್ತಗೆ ಗೋಣಿ ೧ಕ್ಕೆ	...	5— 8	6— 0
ಎಲ್ಲೂರು ಬೆಲ್ತಗೆ ಮುಡಿ ೧ಕ್ಕೆ	...	4— 0	4— 4
ಗೋದಿ ಗೋಣಿ ೧ಕ್ಕೆ	...	11— 8	12— 8
ತೊಗರಿ ಗೋಣಿ ೧ಕ್ಕೆ	...	9— 4	11— 0
ಹುರುಳಿ ಗೋಣಿ ೧ಕ್ಕೆ	...	5—10	5—12
ಕಡಲೆ ಗೋಣಿ ೧ಕ್ಕೆ	...	9— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	...	10— 8	18— 0
ಉದ್ದು ಗೋಣಿ ೧ಕ್ಕೆ	...	8— 8	9— 0
ಹೆಸರು ಗೋಣಿ ೧ಕ್ಕೆ	...	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	...	35— 8	40— 0
ಉಪ್ಪು ಗೋಣಿ ೧ಕ್ಕೆ	...	5— 4	5—12
ಕೊಬ್ರಿ ಖಂಡಿ ೧ಕ್ಕೆ	...	50— 0	60— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	16— 8	17— 0
ಎಳ್ಳಿಂಡಿ ಖಂಡಿ ೧ಕ್ಕೆ	...	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	...	3— 4	4— 4
ಎಳ್ಳೆಣ್ಣೆ ಮಣ ೧ಕ್ಕೆ	...	5— 0	6— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	7— 4	8—12
ಮೋರಿಸ ಸಕ್ಕರೆ ಮಣ ೧ಕ್ಕೆ	...	3—14	4— 0
ಹೊಸ ಮೆಣಸು	...	6—14	8— 0
ಸಾಸಿವೆ ಮುಡೆ ೧ಕ್ಕೆ	...	5— 0	4— 8
ಕಾಳುಮೆಣಸು ಖಂಡಿ ೧ಕ್ಕೆ	...	120— 0	0— 0
ಯಾಲಕ್ಕಿ ಮಣ ೧ಕ್ಕೆ	...	20— 0	25— 0
ಗೇರುಬೀಜ ಮುಡಿ ೧ಕ್ಕೆ	...	2—14	3— 0
[illegible] ಖಂಡಿ ೧ಕ್ಕೆ	...	42— 0	44— 0
ತಾಂಬ್ರ ತಗಡು ಮಣ ೧ಕ್ಕೆ	...	9—10	9—12
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	13— 8	14— 8
[illegible]	...	14—12	15— 0
[illegible]	...	9— 0	9— 8
[illegible]	...	20— 0	20— 8
[illegible]	...	35— 0	45— 0
[illegible]	...	200— 0	250— 0
[illegible]	...	250— 0	300— 0
[illegible]	...	105— 0	110— 0
[illegible]	...	120— 0	130— 0

(Established 1914)

ಕನರಾ ಪಬ್ಲಿಕ್ ಕನ್ವೆಯನ್ಸ ಕಂಪನಿ. ಲಿಮಿಟೆಡ್

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರಾದರೆ ಪ್ರತಿದಿನವೂ ನಾಲ್ಕು ಸಾರಿ ಕಟಪಾಡಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕು ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ದೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore.

Chikmagalur Public Conveyance Motor Service,

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ತಮ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿಯಬಹುದು.

ಪತ್ರವ್ಯವಹಾರ.

(ಪತ್ರದಾತರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಸುರತ್ಕಲ್ಲಿನಲ್ಲಿ ಹುಚ್ಚುನಾಯಿಗಳು.

ಸ್ಥಳೀಯ "ಗ್ರಾಮಪಂಚಾಯತ ಸಮಿತಿ"ಯವರು ನವಂಬರ ತಾರೀಕು ೧ರಿಂದ ಬೇವಾರಿ ನಾಯಿಗಳನ್ನು ಕೊಲ್ಲಿಸಲಾಗುವುದೆಂಬ ನೋಟೀಸು ಪ್ರಕಟಿಸಿದುದೇ ವಿನಹಾ ತಾ ೧೫ ಕಳೆದರೂ ಕೊಲ್ಲಿಸುವ ಕಾರ್ಯಕ್ಕೆ ತೊಡಗದಿರುವುದರ ಮರ್ಮವೇನಿರಬಹುದೋ! ದಿನೇ ದಿನೇ ಹುಚ್ಚುನಾಯಿಗಳ ಕಾಟವಂತೂ ಹೆಚ್ಚುತ್ತಿವೆ. ಅಲ್ಲಲ್ಲಿ ಜನ ಜಾನುವಾರುಗಳಿಗೂ ಕಚ್ಚುತ್ತಿವೆ. ಸಮಿತಿಯವರಿಗೆ ಇವೆಲ್ಲಾ ತಿಳಿದೂ ಕಣ್ಣು ಮುಚ್ಚಿ ಕುಳಿತಿರುವುದು ಗ್ರಾಮಸ್ಥರ ವ್ಯಸನ ಭಯಗಳಿಗೆ ಕಾರಣವಾಗಿವೆ. ಗ್ರಾಮಕ್ಷೇಮಚಿಂತನಾ ದೃಷ್ಟಿಯು ಇದುವೊದಲು ಅಧ್ಯಕ್ಷ ಮಹಾಶಯರಲ್ಲಿದ್ದಷ್ಟು ಈಗಣ ಅಧ್ಯಕ್ಷರಲ್ಲಿವೆಂಥು ಅಲ್ಲಲ್ಲಿಯ ಸ್ಥಳಗಳಾಗಿ ಪರಿಣಮಿಸಿದೆ. ಇದೀಗ ಶೋಚನೀಯವೇ ಸರಿ! ಈ ವಿಷಯ ಸಂಬಂಧಪಟ್ಟ ಮೇಲಾಧಿಕಾರರಾದರೂ ಕಣ್ತೆರೆದು ತಕ್ಕ ವ್ಯವಸ್ಥೆಯನ್ನೇರ್ಪಡಿಸಬೇಕಾಗಿ ಊರವರ ಹಾರೈಕೆ!

ಪಟ್ಟಣಿಗ.

ಉಡುಪಿ ಪ್ರಾಧ್ವರ ಉತ್ಥಾನದ್ವಾದಶೀ ಗಲಿಬಿಲಿ

ಇದೇ ಶ್ರೀಮುಖ ಸಂವತ್ಸರದ ಕಾರ್ತಿಕ ಬಹುಳ ಏಕಾದಶಿಯು ಉಡುಪಿಯ ಎರಡು ಪಂಚಾಂಗಗಳಲ್ಲಿ ಎರಡು ವಿಧವಾಗಿದೆ. ಉಭಯ ಪಂಚಾಂಗ ಪಕ್ಷದವರು ತಮ್ಮ ತಮ್ಮ ಪಂಚಾಂಗಗಳಲ್ಲಿರುವುದು ಶಾಸ್ತ್ರ ಸಮ್ಮತವೆಂದು ಪ್ರಕಟಿಸಿರುವರು. ಮದ್ರಾಡಿ ಜನಾರ್ಧನಾಚಾರ್ಯರಿಂದ ಪ್ರಕಟಿಸಿರುವ ಪ್ರಕಟಣೆಯಲ್ಲಿ ಉಡುಪಿ ಶ್ರೀ ಕೃಷ್ಣಪ್ರಸಾದ ಜ್ಯೋತಿಃ ಪ್ರಕಾಶಮಂದಿರದ ಪಂಚಾಂಗದಲ್ಲಿ ಬರೆದಿರುವಂತೆ ನವಂಬರ ತಾರೀಕು ೧೪ನೇ ಮಂಗಳವಾರವೆಂತಲೂ, ಈ ವಿಷಯವಾಗಿ ಕಳೆದ ಆಷಾಢ ಮಾಸದಲ್ಲೊಂದು (ಧರ್ಮಶಾಸ್ತ್ರ ಮತ್ತೂ ಜ್ಯೋತಿಃಶಾಸ್ತ್ರ ಪಂಡಿತರ) ಸಭೆಯನ್ನು ಸೇರಿಸಿ ಅದರಲ್ಲಿ ಉಭಯ ಪಕ್ಷದವರಿಂದಲೂ ಪ್ರತ್ಯಕ್ಷೋಪಯೋಗಿಯಾದ ಸೂಕ್ಷ್ಮ ಗಣಿತವನ್ನು ಮಾಡಿಸಿದಾಗ ನವಂಬರ ತಾ. ೧೩ನೇ ಸೋಮವಾರ ದಿನಕ್ಕೆ ದಶಮೀ ವೇಧೆ ಬರುತ್ತದೆಂತಲೂ ಇತ್ಯಾದಿ ಕಾಣುವುದು. ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಿತವಾದ ಪ್ರಕಟಣೆಯಲ್ಲಿ ಹತ್ತು ಪಂಚಾಂಗಗಳ ದಶಮ್ಯಾದಿ ದಿನ ತ್ರಯ ಘಟಿಗಳನ್ನು ಕೊಟ್ಟೂ ಮತ್ತೂ ಕರಣಪ್ರಕಾಶ, ಪರಹಿತ ವಾಕ್ಯಕರಣ, ಸಾರ್ಥಚಂದ್ರ ಗಣಿತದಿಂದ ಪರಿಶೀಲಿಸಿದಾಗ್ಯೂ ಸೋಮವಾರದ ಏಕಾದಶಿಗೆ ದಶಮೀ ವೇಧೆ ಇಲ್ಲದೆ ಶುದ್ಧೈಕಾದಶಿಯೇ ಆಗಿರುತ್ತದಲ್ಲದೆ ಬಹುಪಂಚಾಂಗಗಳ ಸಮ್ಮತಿ ಇದ್ದುದರಿಂದಲೂ ಸೋಮವಾರವೇ ಉಪವಾಸ ಮಾಡುವುದು ಯುಕ್ತವಾಗಿರುವುದೆಂತಲೂ ಪ್ರಕಟಿಸಿರುವರು. ಇವರು ಉದಾಹರಿಸಿದ ಪಂಚಾಂಗಗಳ ತಿಥ್ಯಾದಿಗಳು ಒಂದೊಂದರಲ್ಲಿ ಒಂದೊಂದು ವಿಧವಾಗಿದೆ. ಆದರೆ ಅದರಲ್ಲಿ ಕೆಲವು ಪಂಚಾಂಗಗಳು ಪ್ರಾಚೀನ ಸೂರ್ಯಸಿದ್ಧಾಂತ, ಕೆಲವು ಪ್ರಾಚೀನದೃಗ್ಗಣಿತ ರೀತಿಯಿಂದಲೂ ಕೆಲವು ಆಧುನಿಕ ಸೂಕ್ಷ್ಮದೃಗ್ಗಣಿತದಿಂದಲೂ ಗುಣಿಸಲ್ಪಟ್ಟಿರುವುದು. ಆದರೂ ಎಲ್ಲಾ ಪಂಚಾಂಗದಲ್ಲಿಯೂ ಸರ್ವೈಕಾದಶಿಯೆಂತ ಬರೆದು ಮರುದಿನ ಮಂಗಳವಾರ ಹರಿವಾಸರ ಘಟಿಯನ್ನು ಬರೆದಿರುತ್ತಾರೆ. ಮಂಗಳವಾರವೆ ಏಕಾದಶಿ ನಿಮಿತ್ತ ಉಪವಾಸವಾಗಬೇಕೆಂದು ಹೇಳುವ ಪಕ್ಷದಿಂದ ಪ್ರಕಟಿತವಾದ ಪ್ರಕಟಣೆಯಲ್ಲಿ ಪ್ರತ್ಯಕ್ಷೋಪಯೋಗಿಯಾದ ಸೂಕ್ಷ್ಮಗಣಿತ ಮಾಡಿಸಿದ್ದಲ್ಲಿ ಎಂತ ಬರೆದಿರುವರು. ಅಂದರೆ, ವೈಷ್ಣವರು ಅತಿ ಮುಖ್ಯವಾದ ಏಕಾದಶೀ ವ್ರತಾಚರಣೆಯನ್ನು ಆರ್ಯಭಟೀಯ ರೀತಿಯಿಂದಲೇ ನೋಡುವವರಾದ್ದರಿಂದಲೂ, (ವಿಷ್ಣೋಃ ಜನ್ಮದಿವಸಾನಿಚ ವಾಸರಾಣಿ ವಿಷ್ಣುವ್ರತಾನಿವಿಧಾನಿಚ ವಿಷ್ಣುಧಂಚ । ಕಾರ್ಯಾಣಿ ಚಾರ್ಯ ಭಟಮಾರ್ಗತ ಏವಸರ್ವೈರ್ನಾನ್ಯೈರ್ಹಿ ವೈಷ್ಣವಜನೈರ್ನ ವಿಚಾರ್ಯಮನ್ಯ). ಇತ್ಯಾದಿ ಧರ್ಮಶಾಸ್ತ್ರೋಕ್ತ್ಯಾ ಆರ್ಯಭಟಸಿದ್ಧಾಂತದಿಂದ ಗುಣಿಸಿದಾಗ ಸೋಮವಾರದ ಏಕಾದಶಿಗೆ ದಶಮೀವೇಧೆಯು ಬರುವುದೇ ಇಲ್ಲ! ಸೂಕ್ಷ್ಮ ಗಣಿತವೆಂದರೆ (ಲೀತಕರಣ) ರೀತ್ಯಾ ಮಂಗಳವಾದ ಆಚರಿಸಬಹುದು. ಉಡುಪಿ ಶ್ರೀ ಕೃಷ್ಣಪ್ರಸಾದ ಜ್ಯೋತಿಃಪ್ರಕಾಶ ಮಂದಿರದ ಪಂಚಾಂಗವು ಕೇವಲ ಪ್ರಾಚೀನ ಆರ್ಯಭಟೀಯ ಗಣಿತದಿಂದಲೇ ಗುಣಿಸಲ್ಪಟ್ಟದ್ದಾಗಿ ಕಾಣುತ್ತದೆ. ಹೀಗಿರುವಾಗ ಈ ಕಾರ್ತಿಕ ಕೃಷ್ಣೈಕಾದಶಿಯು ಮಾತ್ರ ಆಧುನಿಕ ಸೂಕ್ಷ್ಮದೃಗ್ಗಣಿತವಾಗಲು ಕಾರಣವಾದರೂ ಏನಿರಬಹುದು? ಇದೇ ಆಶ್ಚರ್ಯ, ಇದೇ ಅತಿ ಚಮತ್ಕಾರ. ಇದೇ ಅತಿ ಸೋಜಿಗ. ಆದರೆ ವೈಷ್ಣವರಿಗೆ ಏಕಾದಶಿ ವ್ರತವು ಕೇವಲ ನೈಷ್ಠಿಕ ಧರ್ಮವಾದುದರಿಂದ ಇಂಥಾ ಸಂಶಯಾಸ್ಪದವಾದ್ದ ಸಂಗತಿಯನ್ನು ಧಾರ್ಮಿಕ ಪಕ್ಷಪಾತಿಗಳಾದ ಅಸ್ತಿಕ ಉಡುಪಿ ಗುರುಪೀಠಸ್ಥ ಆಚಾರ್ಯವರ್ಯರು ಇನ್ನಾದರೂ ಇಂಥಾ ಅವ್ಯವಸ್ಥೆ ಉಂಟಾಗದಂತೆ ಧಾರ್ಮಿಕ ಪಕ್ಷಪಾತವಾದ ಸಭೆಯನ್ನು ಸೇರಿಸಿ ನಿವೃತ್ತಿ ಮಾಡುವರೆಂದು ನಂಬುವೆನು.

ಆತಿ ಸಜ್ಜನ ಪ್ರೇಮಕಾಂಕ್ಷಿಯಾದ,

ಪದ್ಮನಾಭ ಉಡುಪ ಜ್ಯೋತಿಷೀ, ಕಂಬಾವರ.

ದಿವಂಗತ ವೆಂಕಟಕೃಷ್ಣಯ್ಯನವರು.

ಸ್ವರ್ಗಸ್ಥರಾದ ತಾತಯ್ಯನವರ ವಿಷಯವಾಗಿ ಸಂಕ್ಷೇಪವಾಗಿ ಬರೆಯುವುದು ಸಾಧ್ಯವೇ ಇಲ್ಲ. ಅವರ ಜೀವನವು ಒಂದು ಶತಮಾನದ ಜೀವನ. ಆ ಶತಮಾನದ ಪ್ರತಿಯೊಂದು ದಿನವೂ, ಪ್ರತಿಯೊಂದು ಗಂಟೆಯೂ, ಪ್ರತಿಯೊಂದು ನಿಮಿಷವೂ, ಅವರ ಧೈರ್ಯ, ನಿಸ್ವಾರ್ಥ ದೇಶ ಸೇವೆಯಿಂದ ಕೂಡಿದೆ. ಅವರು ವಿಶ್ರಾಂತಿಯೆಂಬುದನ್ನೇ ಅರಿಯರು. ಪರಮಾತ್ಮನು ಅವರಿಗೆ ಮೊನ್ನೆಯ ಬೆಳಗಿನಿಂದ ಕೊಟ್ಟ ದೀರ್ಘ ವಿಶ್ರಾಂತಿಯೇ ಅವರ ವಿಶ್ರಾಂತಿ.

ಹಳ್ಳಿಯಲ್ಲಿ ವೈದಿಕ ಕುಲದಲ್ಲಿ ಹುಟ್ಟಿದ ಬಾಲ್ಯದಲ್ಲಿಯೇ ತನ್ನ ಪೋಷಕರನ್ನು ಕಳೆದುಕೊಂಡು ಸ್ವಂತ ಪರಿಶ್ರಮದಿಂದ, ಧೈರ್ಯ ಸಾಹಸ, ಸ್ವಾರ್ಥತ್ಯಾಗಯುತ ಚಾರಿತ್ರ್ಯದಿಂದ ಮೆಟ್ಟಿಲು ಮೆಟ್ಟಿಲಾಗಿ ಮೇಲಕ್ಕೆ ಬಂದು ತಮ್ಮ ಜೀವನವನ್ನು ಸ್ವಾರ್ಥದ ಸಂಕುಚಿತ ಕ್ಷೇತ್ರದಲ್ಲಿ ನಿರ್ಬಂಧಿಸದೆ ವಿಶಾಲವಾದ ಪರಾರ್ಥ ಪ್ರವಾಹದಲ್ಲಿ ಬೆರಸಿ, ಪರೋಪಕಾರವೇ ಪುಣ್ಯವೆಂದೂ ಪರಪೀಡೆಯೇ ಪಾಪವೆಂದೂ ತಮ್ಮ ಜೀವಮಾನದಲ್ಲಿ ತೋರಿಸಿ ಸರ್ವರಿಂದಲೂ ಕೊಂಡಾಡಲ್ಪಡುವ ಕೀರ್ತಿಯನ್ನು ಗಳಿಸಿದ ಮಹಾತ್ಮರಿವರು. ಅವರು ತಮ್ಮ ಶರೀರವನ್ನು ಗಂಧದ ಕಟ್ಟಿಯಂತೆ ತೇಯಿಸಿ, ತೇಯಿಸಿ, ಪ್ರಪಂಚದಲ್ಲಿ ಸುಖಶಾಂತಿಯ ಸುಗಂಧ ಪ್ರವಾಹವನ್ನು ಹರಡಿದರು. ಅವರು ಸಂಪತ್ತಿನಲ್ಲಿ ಅತ್ಯಂತ ಕೋಮಲ ಹೃದಯವನ್ನು ಪ್ರದರ್ಶಿಸಿದರೂ ವಿಪತ್ತಿನಲ್ಲಿ ವಜ್ರಕಠಿಣತೆಯನ್ನು ತೋರಿಸುತ್ತಿದ್ದರು.

Truth, Justice, Fairplay ಸತ್ಯ ನ್ಯಾಯ ಮತ್ತು ನಿಷ್ಪಕ್ಷಪಾತಕ್ಕಾಗಿ ಹೋರಾಡಿ ದೇವರು ತನಗೆ ಕೊಟ್ಟಿದ್ದ ವಾಕ್ಶಕ್ತಿಯನ್ನೂ ಲೇಖನ ಶಕ್ತಿಯನ್ನೂ ಅನ್ಯಾಯ ಮಾಡುವವರ ಮೇಲೆ ಅತಿ ತೀಕ್ಷ್ಣ ಖಡ್ಗದಂತೆ ಉಪಯೋಗಿಸುತ್ತಿದ್ದರು. ಅವರ ಹೆಸರನ್ನೆತ್ತಿದರೆ ಅನ್ಯಾಯಿಗಳಿಗೂ ಅಧರ್ಮಿಗಳಿಗೂ ಗರ್ಭ ನಿರ್ಭೇದವಾಗುತ್ತಿತ್ತು. ಸಂಕಟದಲ್ಲಿರುವವರಿಗೂ, ನಿರ್ಗತಿಕರಿಗೂ, ಅನಾಥರಿಗೂ ಅವರು ತಾಯಿಯಂತೆ ಆಶ್ರಯದಾತರಾಗಿದ್ದರು. ಚಿಕ್ಕಂದಿನಲ್ಲಿಯೇ ಮಹಾ ವ್ಯಕ್ತಿಗಳಾದ ದಿವಾನ್ ರಂಗಾಚಾರ್ಲು ಅವರ ಸಹವಾಸವು ಅವರಿಗೆ ದೊರೆತು ಅವರ ಜೀವನವು ಉನ್ನತ ಮಾರ್ಗದಲ್ಲಿ ಹರಿಯತೊಡಗಿತು. ಒಂದು ರೀತಿಯಾಗಿ ರಂಗಾಚಾರ್ಲುರವರನ್ನು ಅವರು ಗುರುಗಳಂತೆ ಸ್ಮರಿಸುತ್ತಿದ್ದರು. ಅವರು ಹೇಳಿದ ಪ್ರತಿಯೊಂದು ಮಾತೂ, ನಡೆಸಿದ ಪ್ರತಿಯೊಂದು ಕಾರ್ಯವೂ ಅವರಿಗೆ ವೇದಾಧಾರದಂತೆ ಇರುತ್ತಿತ್ತು. ಅಧಿಕಾರಿಗಳಾಗಲೀ, ಅನಧಿಕಾರಿಗಳಾಗಲೀ ಅನ್ಯಾಯದಲ್ಲಿ ತೊಡಗಿದ್ದರೆ ಅವರ ಅನ್ಯಾಯವು ನಿರ್ಮೂಲವಾಗುವ ವರೆಗೆ ಇವರು ಶಸ್ತ್ರವನ್ನು ಕೆಳಗಿಡುತ್ತಿರಲಿಲ್ಲ. ಅವರ ವಿರೋಧಿಗಳು ಅವರ ಶಕ್ತಿಯನ್ನು ಚೆನ್ನಾಗಿ ಬಲ್ಲರು. ಸಿ ಆರ್ ರೆಡ್ಡಿಯವರಿಗೂ ತಾತಯ್ಯನವರಿಗೂ ನಡೆದ ವ್ಯವಹಾರವನ್ನು ಯಾರೂ ಮರೆಯುವ ಹಾಗಿಲ್ಲ. ಹಾಗಿದ್ದಾಗ್ಯೂ ಸಿ ಆರ್ ರೆಡ್ಡಿಯವರು ತಾತಯ್ಯನವರನ್ನು ಲೋಕಮಾನ್ಯ ತಿಲಕರಿಗೆ ಸಮಾನರೆಂದೂ, ಬ್ರಿಟಿಷ ಇಂಡಿಯಾದಲ್ಲಿ ಇವರು ಜೀವನಧಾರಣ ಮಾಡಿದ್ದರೆ ಅವರು ಲೋಕಮಾನ್ಯ ತಿಲಕರಿಗೆ ಸಮಾನರಾಗುತಿದ್ದರೆಂದೂ ಹೇಳಿರುವರು. ವಿ ಪಿ ಮಾಧವರಾಯರು ಈಗ ಒಂದು ವರ್ಷದ ಹಿಂದೆ ತಾತಯ್ಯನವರ ಮಹಾ ಮಹಿಮೆಯನ್ನು ಕೊಂಡಾಡಿರುವರು. ಎಷ್ಟೋ ದಿವಾನರುಗಳೂ ಅಧಿಕಾರಿಗಳೂ ತಾತಯ್ಯನವರ ದೊಡ್ಡಸ್ತಿಕೆಯನ್ನು ಅರಿತುಕೊಂಡಿರುವರು. ಸರ್ ವಿಶ್ವೇಶ್ವರಯ್ಯನವರು ಇವರ ನಿಸ್ವಾರ್ಥ ಮತ್ತು ಧೈರ್ಯ ದೇಶಸೇವೆಯನ್ನು ಬಹುವಾಗಿ ಪ್ರಶಂಸೆ ಮಾಡಿರುವರು. ನಮ್ಮ ಸಂಸ್ಥಾನದ ಸಾರ್ವಜನಿಕ ಜೀವನಕ್ಕೆ ಇವರು ಜನಕರು. ಪತ್ರಿಕೋದ್ಯೋಗಕ್ಕೂ ಇವರು ಮೂಲಕರ್ತರು. ವಿದ್ಯಾಭ್ಯಾಸ, ಸಮಾಜ ಸುಧಾರಣೆ, ಸ್ತ್ರೀ ವಿದ್ಯಾಭ್ಯಾಸ ಅಂತ್ಯಜೋದ್ಧಾರ ಈ ಚಳವಳಿಗೆಲ್ಲಾ ಅವರು ಮೂಲಾಧಾರರು. ಮೈಸೂರು ಸಂಸ್ಥಾನದಲ್ಲಿ ಅವರ ಸ್ಫೂರ್ತಿಯನ್ನೂ, ಸಹಾಯವನ್ನೂ ಹೊಂದದ ಚಳುವಳಿಯಿಲ್ಲ. ಈಗಲೂ, ೯೦ ವರ್ಷ ವಯಸ್ಸಿನಲ್ಲೂ ಸಾರ್ವಜನಿಕ ಸೇವೆಗೆ ಅವರು ತೋರಿಸುತ್ತಿದ್ದ ಉತ್ಸಾಹವು ಅಸದೃಶವಾಗಿತ್ತು. ದೊಡ್ಡವರು ಸಣ್ಣವರೆನ್ನದೆ ಸರ್ವರಲ್ಲೂ ಸಮಾನವಾದ ಪ್ರೀತಿಯನ್ನಿಟ್ಟುಕೊಂಡು ಪ್ರೋತ್ಸಾಹಿಸುತ್ತಿದ್ದರು. ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ ಅವರು ೪೦ ವರ್ಷಗಳ ಕಾಲ ಹೆಡ್ಮಾಸ್ಟರರಾಗಿ ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿರುವರಲ್ಲದೆ, ಅವರ ಜೀವನ ಪಥಕ್ಕೆ ಸ್ಫೂರ್ತಿಯುತವಾದ ಮಾರ್ಗದರ್ಶನವನ್ನೂ ಮಾಡಿದರು. ಅಧಿಕಾರಿಗಳೂ, ಅನಧಿಕಾರಿಗಳೂ, ಎರಡು ಪಂಗಡದವರೂ ಅವರನ್ನು ಗುರುಗಳೆಂದು ಭಾವಿಸುತ್ತಿದ್ದರು. ಮರಿಮಲ್ಲಪ್ಪ ಸ್ಕೂಲನ್ನು ಬಿಟ್ಟಮೇಲೆ, ಶಾರದಾ ವಿಲಾಸ ಹೈಸ್ಕೂಲು, ಸದ್ವಿದ್ಯಾಶಾಲೆ, ಆರ್ಯ ಬಾಲಿಕಾ ಪಾಠಶಾಲೆ ಮುಂತಾದ ವಿದ್ಯಾ ಸಂಸ್ಥೆಗಳು ಅವರಿಂದಲೇ ಮುಂದಕ್ಕೆ ಬಂದವು. ಅನಾಥಾಲಯವಂತೂ ಇವರಿಗೆ ತಮ್ಮ ಮಕ್ಕಳು ಮೊಮ್ಮಕ್ಕಳ ಗೃಹದಂತೆ. ಅನಾಥಾಲಯದ ಬಾಲಕರನ್ನು ತನ್ನ ಮಕ್ಕಳು ಮೊಮ್ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ರಾಜಕೀಯ ಕ್ಷೇತ್ರದಲ್ಲಿ ಅವರು ನಡೆಸಿರುವಷ್ಟು ಕಾರ್ಯವನ್ನು ವರ್ಣಿಸಲು ಸಾಧ್ಯವಿಲ್ಲ. ಅಸೆಂಬ್ಲಿಯ ಆದ್ಯ ಸಂವತ್ಸರಗಳಲ್ಲಿ ಅವರು ಅನಧಿಕಾರ ವರ್ಗಕ್ಕೆ ಅನೇಕ ಕಾಲ ಏಕೈಕ ಮುಖಂಡರಾಗಿದ್ದರು. ವಿದ್ಯಾಧಿಕಾರಿಗಳೊಂದಿಗೊ ದಿವಾನರೊಂದಿಗೂ ಅವರು ಪ್ರಜೆಗಳಿಗಾಗಿ ಹೋರಾಡದ ದಿನವಿಲ್ಲ. ಇತ್ತೀಚೆಗೆ ಕೋಮುವಾರು ಚಳವಳಿಯು ನೆಲ್ಲೂರಿನಲ್ಲಿ ಉಂಟಾದಾಗ ಕೆಲವು ಸುಳ್ಳು ಪ್ರಚಾರದಿಂದ ಅವರು ಕೇವಲ ಒಂದು ಪಂಗಡದ ಪಕ್ಷಪಾತಿಗಳೆಂದು ಕಾಣುವ ಹಾಗೆ ಮಾಡಲ್ಪಟ್ಟಿತು. ವಾಸ್ತವವಾಗಿ ಬ್ರಾಹ್ಮಣರು ಬಹಳ ಮರ್ದನೆಗೆ ಗುರಿಪಟ್ಟಂದಿನಿಂದ ಅವರ ಪಕ್ಷವನ್ನು ಅವರು ವಾದಿಸಿದರು. ಯಾರಾದರೇನು? ಕಷ್ಟದಲ್ಲಿದ್ದವರನ್ನು ಸಂರಕ್ಷಿಸುವುದು ಅವರ ಉದ್ದೇಶವಾಗಿತ್ತು. ಕಡೆಕಡೆಗೆ, ಬೆಂಗಳೂರು ಪೊಲೀಸ್ ಗಲಭೆಯ ಪರಿಣಾಮವಾಗಿ ಅವರು ಮಾಡಿದ ನ್ಯಾಯ ಮತ್ತು ಸತ್ಯ ಟೀಕೆಗಳು ಸರಕಾರಕ್ಕೆ ಸರಿಬೀಳದೆ ಅವರ ಪತ್ರಿಕೆಗಳು ಬಲಾತ್ಕಾರವಾಗಿ ನಿಲ್ಲಿಸಲ್ಪಟ್ಟವು. ಈ ವರ್ತನವು ಅವರ ಕೈಗಳನ್ನು ಮುರಿದಂತೆ ಮಾಡಿತು. ಅವರ ದೇಹಶಕ್ತಿಯೂ ಮನಶ್ಶಕ್ತಿಯೂ ಕ್ರಮೇಣ ಕುಂದುತ್ತಾ ಬಂತು. ಅವರು ಅದೇ ಕೊರಗಿನಲ್ಲಿ ಪ್ರಾಣಬಿಟ್ಟರು. ತಮ್ಮ ಪತ್ರಿಕೆಗಳು ನಿಂತು ಹೋಯಿತಲ್ಲಾ, ತಮ್ಮ ಕೈಗಳು ಮುರಿದಂತಾಯಿತಲ್ಲಾ ಎಂದು ಅವರು ಕಡೆಯ ವರೆಗೂ ಹೇಳುತ್ತಿದ್ದರು. ಸಾಯುವುದಕ್ಕೆ ಎಂಟು ದಿವಸ ಮುಂಚೆ ಅನ್ನುವಾಗಲೂ ಅವರು ಸರಕಾರಕ್ಕೆ ಪ್ರೆಸ್ ಆಕ್ಟನ್ನು ರದ್ದು ಮಾಡಬೇಕೆಂದು ಕಾಗದ ಬರೆಸಿದರು.

ತಾತಯ್ಯನವರ ಪವಿತ್ರ ಸ್ಮರಣೆಯು ನಮ್ಮನ್ನು ಅಲ್ಪತ್ವದಿಂದ ಮಹತ್ವಕ್ಕೇರಿಸಲಿ, ದೌರ್ಬಲ್ಯದಿಂದ ಮಹಾಬಲಕ್ಕೇರಿಸಲಿ, ಕೃಪಣತೆಯಿಂದ ಉದಾರತೆಗೆ ಏರಿಸಲಿ, ಸ್ವಾರ್ಥತೆಯಿಂದ ನಿಸ್ವಾರ್ಥಕ್ಕೇರಿಸಲಿ, ಹೇಡಿತನದಿಂದ ಧೈರ್ಯಕ್ಕೇರಿಸಲಿ, ಹೆಚ್ಚೇನು? ತಾತಯ್ಯನವರ ಮೃತ್ಪಿಂಡವು ನಮ್ಮಿಂದದೃಶ್ಯವಾಗಿದೆ. ಆದರೆ ಅವರ ತಪೋಜ್ವಾಲೆಯು ಜೀವನಜ್ಯೋತಿಯು, ಕೀರ್ತಿಕಾಂತಿಯು, ನಮ್ಮ ಕಣ್ಣ ಮುಂದೆ ಅಂತರಾತ್ಮದಲ್ಲಿ ಯಾವಾಗಲೂ ಪ್ರಜ್ವಲಿಸುತ್ತಿದೆ. ತಾತಯ್ಯನವರ ಪವಿತ್ರ ನಾಮವು ಚಿರಕಾಲವಿರಲಿ, ಅಜರಾಮರವಾಗಿರಲಿ, ಅವರ ಆತ್ಮಕೆ ಶಾಂತಿಯುಂಟಾಗಲಿ. (ತಾ)

ಸಕಲೇಶಪುರದ ವಾರ್ತೆ

ಇದೇ ತಾ 15ರಲ್ಲಿ ಸ್ಥಳೀಯ ಮುನಿಸಿಪಲ್ ಇಲೆಕ್ಷನಿ ಉಮೇದುವಾರರಾಗಿ ನಿಂತಿರುವ 15 ಜನರ ಪೈಕಿ ರಾ. ಎಸ್. ಬಸಲಿಂಗೇ ಗೌಡ, ಎಸ್ ಎಂ ರಾಮಸ್ವಾಮಿ, ಬಿ ಕೆ. ಸೋಮೆ ಗೌಡ, ಬೋಯಿಕರೆ ಶಿವೆಗೌಡ, ಅರೆಕೆರೆ ರಾಮೆ ಗೌಡ, ಡಾ| ಕೆ. ವಿ ಹೆಗ್ಗಡೆ, ಎಸ್ ಕೆ ಶಣ್ಮುಖಯ್ಯ, ವೆಂಕಟಕೃಷ್ಣಯ್ಯ ಸೈಯದ್ ಹಾಮದ್, ಎಸ್ ಮಂಜಯ್ಯ ಇವರು ಬಹುಮತದಿಂದ ಆರಿಸಲ್ಪಟ್ಟಿರುತ್ತಾರೆ

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟನಲ್ಲಿ.

O. P No 111/1933

ಅಮ್ಮತಿಮಾತಿ—ಅರ್ಜಿದಾರಳು

ನೇಮಿರಾಜ ಸೆಟ್ಟಿ—ಎದ್ರಿ ಅರ್ಜಿದಾರ

ಅರ್ಜಿದಾರಳು ರಂಜಾಳ ಗ್ರಾಮದ ಜಿನರಾಜ್ರಯ ಬರೆದಿಟ್ಟ ವೀಲು ಪ್ರಕಾರ ಸದ್ರಿಯವನ ಸೊತ್ತಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸೋಣಾಗಬೇಕಾಗಿ ಈ ಕೋರ್ಟಿನಲ್ಲಿ ಬರಕೊಂಡ ಸದ್ರಿ ಮೇಲೆ ನಮೂದಿಸಿರುವ ಅರ್ಜಿಯು ತನ್ನ ಬಗ್ಗೆ ಇದೇ ಬರುವ 15—12—33ಕ್ಕೆ ಇಟ್ಟಿದೆ. ಈ ಬಗ್ಗೆ ಆಕ್ಷೇಪವುಳ್ಳವರು 1933ನೇ ಇಸವಿ ದಶಂಬರ ತಾ 15ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟಿಗೆ ಹಾಜರಾಗಿ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬಹುದು

ಕಾರ್ಕಳ, 20—11—33

K S Bhat,
Counsel for Petitioner.

ಪ್ರಕಟಣೆ.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟನಲ್ಲಿ

ಸ್ಮಾಲ್ ನಂಬ್ರ 962/1933.

ಮಾಮು ಬ್ಯಾರಿ—ತೋಡಾರ ಅಬ್ದುಲ್ ಕಾದಿರ ಬ್ಯಾರಿ ಮಗ, ಕಾರ್ಕಳ ತಾಲೂಕು ಬಡಗ ಮಿಜಾರ ಗ್ರಾಮದಲ್ಲಿರುವವ —ವಾದಿ.

ಮತ್ತು

ಅಲ್ಲಿಖಾನ್ ಸಾಹೇಬ—ಪಳ್ಳಿಖಾನ ಹಸನ್‌ಖಾನ್ ಸಾಹೇಬರ ಮಗ, ಕಾಸರಗೋಡ ತಲಂಗರೆ ಗ್ರಾಮದಲ್ಲಿರುವವ—ಪ್ರತಿವಾದಿ

ಸದ್ರಿ ಪ್ರತಿವಾದಿಗೆ—ವಾದಿಗೆ ಪ್ರತಿವಾದಿಯು ತಾರೀಕು 4-9-1930ರಲ್ಲು ರೂಪಾಯಿ 65/-ಕ್ಕೆ ಸೇ. 12½ರ ಬಡ್ಡಿ ನಿಶ್ಚಿತ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಹಣಗಳನ್ನು ವಸೂಲು ಹೊಂದುವರೆ ಮಾಡಿದ ಮೇಲಣ ವ್ಯಾಜ್ಯವು ತಾ. 30—11—33ಕ್ಕೆ ಪೂರ್ವಾಹ್ನ ಘಂಟೆ 11ಕ್ಕೆ ತನಿಕೆಗೆ ಇಟ್ಟಿರುವುದರಿಂದ ಪ್ರತಿವಾದಿಯು ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸುವರೆ ತಪ್ಪಿದರೆ ಎಕ್ಸ್‌ಪಾರ್ಟ್ ಮಾಡೋಣಾಗಿ ತೀರ್ಮಾನಿಸಲಾಗುವುದು

ಮಂಗಳೂರು, 17—11—33

B. Srinivasa Pai,
ವಾದಿ ಕಡೆ ವಕೀಲ್.

Notice.

It is hereby notified that the Company doing business under the name and style of 'R. T. Company' (Ramulu Thakur Co.) has been dissolved by the decree of the Court of the Subordinate Judge of South Kanara, in O. S. No. 64/1930, dated 29th September 1933 and the Plaintiff Mr. G. S. Ramulu has been directed to pay the 1st defendent Mr. N. B. Thakur, the sum of Rs. 83,775 7-3½ with interest at 6 p. c. from the date of the decree till payment. The assets and properties of the said R. T. Company have been sold in the suit to the 1st defendent Mr. N. B. Thakur, who is now the sole owner of all the assets and properties of the R. T. Company as per the sale held in the said suit on 17-9-33 by the Commissioner appointed by the Court and Mr. G. S. Ramulu has no manner of right, title and interest therein. The said Mr. N. B. Thakur is also to discharge all the liabilities of the said R. T. Company.

Mangalore. 17-11-33 **N. B. Thakur**

Tender Notice.

Sealed tenders are invited by the undersigned up to 2 P. M. on the 8th of December 1933 for the work of reconstruction of the Collapsed bridge at Punjalcutta in 27/8 of Mangalore Mysore Trunk road No. A. 22 (one span of 40'0") 28 miles from Mangalore. Approximate cost excluding girders Rs. 10284. Conditions of contract, plan specifications etc, will be supplied at a cost of Rs. 5 per set. These documents can be seen in the District Board Engineer's office on working days between 11 a. m. and 4 p. m.

Mangalore. 13-11-33. **N. Krishna Pillai,** *District Board Engineer, S. K.*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 57/32, R. I. A. 21/33.

R. E. P. No. 1070/1933,

ಶ್ರೀವಿದ್ಯಾಪ್ರಭುದವಮಾನ್ಯ ತೀರ್ಥ ಸ್ವಾಮಿಗಳು—ಉಡುಪಿ,

ಶ್ರೀ ಅದಮಾರು ಮಠಾಧಿಪತಿಗಳು—ಉಡುಪಿ ಕಸಬಾ—

ಅರ್ಜಿದಾರರು.

ಮತ್ತು

ಯಮುನ—ಕೃಷ್ಣರಾಯನ ವಿಧವೆ, ಉಡುಪಿ ತಾಲೂಕು ನೀಲಾವರ ಮಾಗಣೆ ಹೇರೂರು ಗ್ರಾಮದಲ್ಲಿರುವವಳು—ಎದ್ರಿಳು

ಸದರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:— ಮೇಲಿನ ಅಮಲ್‌ಜಾರಿಯಲ್ಲಿ ಅರ್ಜಿದಾರರಿಗೆ ಮೇಲ್ಕಾಣಿಸಿದ ಡಿಕ್ರಿಗಳ ಮೇರೆಗೆ ಖಂತಕ್ಕೆ ಏನೇಜಿನ ಬಗ್ಗೆ ಸದ್ರಿ ಅರ್ಜಿದಾರರು ಡಿಕ್ರಿ ವಿಧಿ ಪ್ರಕಾರ ಆದರಲ್ಲಿರುವ ಎದ್ರಿಳ ಬಾಬ್ತು ಶಿವಳ್ಳಿ ಗ್ರಾಮದ ಆಸ್ತಿಯನ್ನು ಯೇಲಂ ಮಾಡುವರೆ ಇಸ್ತಿಹಾರು ಹಾಜರು ಪಡಿಸಿರುತ್ತಾರೆ. ಸದರಿ ಇಸ್ತಿಹಾರಿನ ಕುರಿತು ಶರ್ತಗಳನ್ನು ನಿರ್ಣಯಿಸುವರೆ ತಾ. 30-11-33ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಇದ್ದ ಪಕ್ಷಕ್ಕೆ ಸದರಿ ದಿವಸ ಸದರಿ ಕೋರ್ಟಿನ ಮುಂದೆ ಹಗಲು 10 ಘಂಟೆಗೆ ಸ್ವತಹ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಎದ್ರಿಳ ಗೈರುಹಾಜರಿಯಿಂದ ತೀರ್ಮಾನ ಮಾಡಲಾದೀತು.

ಉಡುಪಿ, **P. V. Achar.** Vakil for Petitioner

ಒಂದು ಸುಂದರ ಕೂಸು

ಸೆನಿಟರಿ ಇನ್ಸ್‌ಪೆಕ್ಟರರು

"ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದೆನು. ಆದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,

ಸೆನಿಟರಿ ಇನ್ಸ್‌ಪೆಕ್ಟರ್,

ಮಾಲೂರು, ಮದುರಾ.

ನಿಮ್ಮ ಕೆಮಿಸ್ಟರರ ಹತ್ತರ ಕೇಳಿರಿ.

ಅಥವಾ

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,

ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಪ್ರಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯೈ.

ಬೆಂಗಳೂರು ಏಜಂಟ್:— ಬಿ. ಪ್ರೊಪರ್ ಲಾಲ ಕಂಪೆನಿ, ೫೧ ಆರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.

ಮದ್ರಾಸು ಸಂಸ್ಥಾನದ ಏಜಂಟರು:— ದಾಮೋದರ ಮತ್ತು ಕಂಪೆನಿ, 78 ಚೈನ ಬಜಾರ ರೋಡ್,

ಮಂಗಳೂರು ,, ದಿ ಉಲನ್ ಮಾರ್ಟ್. ಧಾರವಾಡ ಏಜಂಟ್— ದಿ ಧಾರವಾಡ ಫಾರ್ಮಸಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿ ಇದ್ದು ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿವೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಧಾರಣವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೦೬, ಮದ್ರಾಸು.

ಸೋಲ್ ಏಜಂಟರು— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೩೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಕೋರ್ಟ್ ಹತ್ತರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

[illegible]

O. P. 49/1933

[illegible], ಮ್ಯಾನರ, ರಕ್ಷಕಳು ತಾಯಿ ಮೀನಾಕ್ಷಿ [illegible]—ಅರ್ಜಿದಾರ

ಮತ್ತು

[illegible] ಕಲ್ಯಾರ ಕೂಡಾ—ಎದ್ರಿರು.

ಇವರೊಳಗೆ.

ಮ್ಯಾನರನ ತಂದೆ ಮೃತಪಟ್ಟ ನಲ್ಸಿಂಹ ಕಲ್ಯಾರನು ದಿಲ್ಲಿ [illegible] ಇನ್ಸೂರೆನ್ಸ ಕಂಪೆನಿ, ಲಿಮಿಟೆಡ್, ಇವರಿಂದ ಪಡೆದ ನಂ. 1036ನೇ ಪೋಲಿಸಿ ಬಾಬ್ತು ರೂ. 1000 ದ ಬಿಕ್ಷಿ ಕೂಡಾ ವಸೂಲು ಮಾಡುವರೆ ಮ್ಯಾನರನ ಬಗ್ಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡದೇಕಾಗಿ ರಕ್ಷಕಳು ಕೊಟ್ಟ ಅರ್ಜಿಯು ತಾ. 26—11—33ಕ್ಕೆ ಇಟ್ಟಿರುತ್ತದೆ ಸದ್ರಿ ಅರ್ಜಿಗೆ ಆಕ್ಷೇಪವುಳ್ಳವರು ಸದ್ರಿ ತಾರೀಕಿನಲ್ಲಿ ಸದ್ರಿ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು,

ಉಡುಪಿ, } **B Srinivasa Rao,**
[illegible] } Advocate for Petitioner

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O. S. NO. 527/1932. R E. P 1247/1933

ಎಂ ಕುಂಞ, ಅಗಸ ಕೊರಗು ಮಗ, ಮೂಡಂಬೈಲು ಬೋರ್ಡು ಶಾಲಾ ಮಾಸ್ತರ್, ಕಾಸರಗೋಡು ತಾಲೂಕು ಮೂಡಂಬೈಲು ಗ್ರಾಮದಲ್ಲಿ—ಅರ್ಜಿದಾರ.

ಮತ್ತು

1. ಪರಮೇಶ್ವರ ಪದ್ಮಂಣಾಯ, ಮೂಡುಮನೆ ನಾರಾಯಣ ಪದ್ಮಂಣಾಯರ ಮಗ. 2 ಕೃಷ್ಣ ಪದ್ಮಂಣಾಯ—ವಾಸುದೇವ ಪದ್ಮಂಣಾಯರ ಮಗ 3. ನಾರಾಯಣ ಪದ್ಮಂಣಾಯ—ವಾಸುದೇವ ಪದ್ಮಂಣಾಯರ ಮಗ 1—2ನೇಯವರು ಮುಳಿಂಜ ಗ್ರಾಮದಲ್ಲಿಯೂ, 3ನೇಯವನು ರಾಮನಾಡು ಡಿಸ್ಟ್ರಿಕ್ಟ್ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಅರ್ಚಕನಾಗಿರುತ್ತಾನೆ —ರೆಸ್ಪೊಂಡೆಂಟರು

ಮೇಲ್ಕಂಡ ಅಮಲ್ಜಾರಿ ವ್ಯವಹರಣೆಯ ಅರ್ಜಿದಾರನು ರೆಸ್ಪಾಂಡೆಂಟರ ಬಾಬ್ತು ಸ್ಥಿರಾಸ್ತಿ ಏಲಂ ಬಗ್ಗೆ ಮತ್ತು ಏಲಂ ಸಮಯ ನಾರು ಕರೆಯುವರೆ ಪರ್ಮಿಶನ್ ಕೊಡಿಸಬೇಕಾಗಿ ವಗೈರೆ ಅಮಲ್ಜಾರಿ ಅರ್ಜಿ ದಾಖಲ್ಲು ಮಾಡಿದ್ದಾನೆ ಆದುದರಿಂದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ಸದ್ರಿ ಅಮಲ್ಜಾರಿಯು ತಾ. 28-11-33ಕ್ಕೆ ಇಟ್ಟಿರುವುದರಿಂದ ಅದರಿಂದ ಆಕ್ಷೇಪ ಉಳ್ಳವರು ಸದ್ರಿ ದಿವಸ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು } **C. M. Kamath,** B A B L
15—11—33 } Vakil for Petitioner

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C. S No 505/1933

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ, ಇದರ ಏಜೆಂಟ್ ತೊನ್ಸೆ ರಘುನಾಥ ಅನಂತ ಪೈ—ವಾದಿ ಮತ್ತು

ಜಿ. ಎಸ್. ಮಾಬೆನ್ ಕೂಡಾ—ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ 3ನೇ ಪ್ರತಿವಾದಿಯಾದ ಉಡುಪಿ ತಾಲೂಕು ಉದಿಯಾವರ ಗ್ರಾಮದಲ್ಲಿರುವ ಸೊಲೊಮನ್ ಫಿಲಿಪ್ಸರ ಮಗ ಇಮ್ಯಾನುವೇಲ್ ಎಡ್ವೇಜರ್ ಫಿಲಿಪ್ಸರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರು ವಾದಿ ಬೇಂಕಿಗೆ ತಾ 6—8—32ರಲ್ಲಿ ರೂ. 200ಕ್ಕೆ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸ್ಲು ಮತ್ತು ತಾ. 8—5—33ರಿಂದ ಸಾ. ಸೇ. 12½ರ ಸಲೆ ಬಡ್ಡಿ ಕೂಡಾ ರೂ. 205—4—4ಕ್ಕೆ ವಾದಿಯು ದಾಖಲ್ಲು ಮಾಡಿದ, ಸದ್ರಿಯು ವ್ಯಾಜ್ಯವು ಅಖೈರ ತನ್ಖಿ ಬಗ್ಗೆ ತಾ. 30—11—33ಕ್ಕೆ ಇಟ್ಟಿರುವದರಿಂದ ಸದ್ರಿ ದಾವೆಗೆ ಉತ್ತರ ಕೊಡುವಗೋಸ್ಕರ ಸದ್ರಿ ಮೂರನೆ ಪ್ರತಿವಾದಿಯು ಸ್ವತಹ ಅಥವಾ ವಕೀಲರ ಮುಖಾಂತರ ಸದ್ರಿ ತಾರೀಕಿನ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗದೆ ಇದ್ದರೆ ಸದ್ರಿ ದಾವೆಯು ಆತನ ಗೈರಹಾಜರಿಯಲ್ಲಿ ಕೇಳಿ ಫೈಸಲ್ ಮಾಡಲಾದೀತೆಂತ ಸದ್ರಿ ಮೂರನೇ ಪ್ರತಿವಾದಿಗೆ ಈ ಮೂಲಕ ತಿಳಿಸೋಣಾಗುತ್ತದೆ.

ಉಡುಪಿ } **H. Keshava Pai,**
20—11—33 } **Vakil for Plaintiff**

ನೋಟೀಸು

ಉಡುಪಿ ತಾಲೂಕು ಪೆರ್ಡೂರು ಕಸಬಾ ಗ್ರಾಮದಲ್ಲಿರುವ ಶೇಷಗಿರಿ ಮಲ್ಯರ ಮಗ 1ನೇ ವಾಮನ ಮಲ್ಯ, ಬಡಗಬೆಟ್ಟು ಮೋನಪ್ಪ ಹೆಗ್ಡೇರ ಮಗ 2ನೇ ದೇಲಂಜೆ ಕೃಷ್ಣಯ್ಯ ಹೆಗಡೆ ಸಹಾ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪೆರ್ಡೂರು ನಾರಾಯಣ ವಿನಾಯಕ ಮಲ್ಯ ವಗೈರೇರು ನಮಗೆ ತಾ. 11—6—1932ಲ್ಲಿ ರಿಜಿಸ್ತ್ರಿ ನಿಶಿಂ ಬರಕೊಟ್ಟ ಕಂಪೋಜಿಶನ್ ಡೀಡ್ ಪ್ರಕಾರ ಸದ್ರಿಯವರ ಸ್ಥಿರಾಸ್ತಿಗಳನ್ನು ಮಾರಾಟ ಮಾಡಲಿಕ್ಕೆ ವಗೈರೆ ನಾವು ಸಂಪೂರ್ಣ ಹಕ್ಕುದಾರರಾದ ಮೇರೆಗೆ ಸದ್ರಿಯವರ ಬಾಬ್ತು ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಗಳನ್ನು ತಾ. 7—12—33ನೇ ದಿವಸ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನದ ಹೆಬ್ಬಾಗಿಲಿನಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತೇವೆ. ಖಾಹಿಸ್ ಉಳ್ಳವರು ಸದ್ರಿ ತಾರೀಕಿನ ದಿವಸ ಸದ್ರಿ ಏಲಂ ಸಮಯ ಹಾಜರಿದ್ದು ನಿಂತು ಮೂರು ನಾರು ಕಾಯಂ ಆದ ಕೂಡಲೇ ಏಲಮಿನ ಮೊಬಲಗನ್ನು ನಮಗೆ ವಸೂಲು ಕೊಟ್ಟು ನಮ್ಮಿಂದ ಕ್ರಮಪ್ರಕಾರ ರಿಜಿಸ್ತ್ರಿ ನಿಶಿಂ ಕ್ರಯ ಸಾಧನ ಬರಸಿಕೊಳ್ಳಬಹುದು ಸದ್ರಿ ಕ್ರಯಸಾಧನಗಳ ಸಂಬಂಧ ತಗಲುವ ಖರ್ಚನ್ನು ಅಖೈರ ದಂಬಾಸ್ತಿಗೆ ವಹಿಸಿಕೊಂಡವರೇ ಸಹಿಸಿಕೊಳ್ಳತಕ್ಕದ್ದು ಹೆಚ್ಚಿನ ಮಾಹಿತಿಗೆ ನಮ್ಮ ಕೂಡೆ ಸ್ವತಹ ಮಾತನಾಡಿ ಯಾ ಟಪ್ಪಾಲ ದ್ವಾರಾ ತಿಳಕೊಳ್ಳಬಹುದು

ಆಸ್ತಿಗಳ ವಿವರ

1 ಕಾರ್ಕಳ ತಾಲೂಕು ಕಡ್ತಲ ಗ್ರಾಮದ ನಂಬ್ರ 30ನೆ ಪಟ್ಟೆಗೆ ಒಪ್ಪಿದ ನಂಜ, ಪುಂಜ, ಬಾಗ್ಯಾತು ಕೂಡಾ ಒಟ್ಟು ಎಕ್ರೆ 40—30 ತೀರ್ವೆ ರೂ 127—13—0ರ ಆಸ್ತಿ ಇದರಲ್ಲಿರುವ ಕಟ್ಟೋಣಗಳು, ಮರಮಟ್ಟು, ಬಾಂವಿಗಳು ಮುಂತಾದ ಮೂಲಿ ಹಕ್ಕಿನ ಸರ್ವಾದಿ ಇದರ ಸಾಲಿಯಾನ್ ಹುಟ್ಟುವಳಿ ಸೇರು 44ರ ಹೊಲ್ಕೆಯ ಕಳ್ಳಿಗೆ ಅಕ್ಕಿ ಮುಡಿ 101, ದಕ್ಷಿಗೆ ಅಕ್ಕಿ ಮುಡಿ 8 ಮತ್ತು ನಗದು ರೂ 138—12—0 ಸಹಾ ಆಗಿರುತ್ತದೆ

2 (ಎ) ಸದ್ರಿ ಕಡ್ತಲ ಗ್ರಾಮದ ನಂ 54ನೇ ಪಟ್ಟೆಗೆ ಒಪ್ಪಿದ ನಂಜ ಎಕ್ರೆ 2—8, ಪುಂಜ ಸೆ. 16, ತೀರ್ವೆ ರೂಪಾಯಿ 4—4—0ರ ಆಸ್ತಿ ಇದರ ಸಾಲಿಯಾನ್ ಹುಟ್ಟುವಳಿ ಕಳ್ಳಿಗೆ ಅಕ್ಕಿ ಮುಡಿ 9 ಆಗಿರುತ್ತದೆ.

(b) ಸದ್ರಿ ಕಡ್ತಲ ಗ್ರಾಮದ ನಂ. 111ನೇ ಪಟ್ಟೆಗೆ ಒಪ್ಪಿದ ನಂಜ ಎ. 8—55, ಪುಂಜ ಸೆ. 71, ತೀರ್ವೆ ರೂ. 12—14ರ ಸ್ಥಿರಾಸ್ತಿ. ಇದು ಬಂಜರು ಇರುವುದರಿಂದ ಈಗ ಏನೂ ಹುಟ್ಟುವಳಿ ಇರುವುದಿಲ್ಲ.

3. ಉಡುಪಿ ತಾಲೂಕು ಪೆರ್ಡೂರು ಗ್ರಾಮದ ಸ ನಂ. 129/23 ಬಾಗ್ಯಾತು ಪೈಕಿ ತೆಂಕು ಪಡು ಬದಿ ಸೆ. 1ರ ಸಾಲಿಯಾನ್ ರೂ. 2ರಂತೆ ಒಳತೀರ್ವೆ ತೆರತಕ್ಕ ಒಳತೀರ್ವೆ ಹಕ್ಕಿನ ಆಸ್ತಿ

4, ಸದ್ರಿ ಪೆರ್ಡೂರು ಗ್ರಾಮದ ಸ. ನಂ. 129/23 ಬಾಗ್ಯಾತು ಪೈಕಿ ಪಡುಬಡಗು ಮೂಲೆಯ ಸೆ 1ರ ಸಾಲಿಯಾನ್ ರೂ 2ರಂತೆ ಒಳತೀರ್ವೆ ತೆರತಕ್ಕ ಒಳತೀರ್ವೆ ಹಕ್ಕಿನ ಆಸ್ತಿ.

5. ಸದ್ರಿ ಪೆರ್ಡೂರು ಗ್ರಾಮದ ಸ. ನಂ. 127/16 ಬಾಗ್ಯಾತು ಪೈಕಿ ಮೂಡುತೆಂಕು ಬದಿ ಸೆ. 1, ಸ. ನಂ. 129/41 ಪುಂಜ ಪೈಕಿ ಮೂಡು ಬದಿ ಎ. 1—25ರ ಸಾಲಿಯಾನ್ ಆಣೆ 14ರಂತೆ ಮೂಲಗೇಣಿ ತೆರತಕ್ಕ ಮೂಲಗೇಣಿ ಹಕ್ಕಿನ ಆಸ್ತಿ

6. ಸದ್ರಿ ಪೆರ್ಡೂರು ಗ್ರಾಮದ ಸ. ನಂ. 129/9 ಬಾಗ್ಯಾತು ಪೈಕಿ ಬಡಗು ಬದಿ ಯಾನೆ ಇಡೀ ಬಂದಸಾಲೆಯಲ್ಲಿ ಮೂಡು ಅಂಶದ ಸಾಲಿಯಾನ್ ರೂ 2—6ರಂತೆ ಮೂಲಗೇಣಿ ತೆರತಕ್ಕ ಮೂಲಗೇಣಿ ಹಕ್ಕಿನ ಆಸ್ತಿ.

7 ಸದ್ರಿ ಪೆರ್ಡೂರು ಗ್ರಾಮದ ಸ. ನಂ 155/19 ಪುಂಜ ಪೈಕಿ ಮಧ್ಯದ ಸೆ. 5ರ ಸಾಲಿಯಾನ್ ರೂ 1—7—4ರಂತೆ ಸ್ಥಳಗೇಣಿ ತೆರತಕ್ಕ ಸ್ಥಳಗೇಣಿ ಹಕ್ಕಿನ ಆಸ್ತಿ.

ಪೆರ್ಡೂರು } **ಪೆರ್ಡೂರು ವಾಮನ ಶೇಷಗಿರಿ ಮಲ್ಯ**
20—11—33 } **B Krishnaya Hegde**

++ ++

ಗರ್ಭಧಾರಣ ಮಾಡಲು ಭಯಗೊಳ್ಳುವ ಸ್ತ್ರೀಯರಿಗಾಗಿ

ಮೆನೆಸ್ಟ್ರಿನ್ ಕೆಪ್‌ಸಲ್ಸ್ (Menestrin Capsules) ಗಳನ್ನು ಬಾಯಿಯ ಮೂಲಕ ಸೇವಿಸುವುದರಿಂದ ಗರ್ಭವೇ ನಿಲ್ಲುವುದಿಲ್ಲ.

ಬಾಟ್ಲಿ ಒಂದಕ್ಕೆ ರೂ. 1—8—0 ಮಾತ್ರ

ದಿ. ಓರಿಯಂಟಲ್ ರಿಸರ್ಚ್ ಲೆಬೊರೇಟರಿ, ವೆಪೆರಿ ಮದ್ರಾಸು

The Oriental Research Laboratory,
Vapery, Madras.

ಗುಣ ಹೊಂದಲು ಒಂದು ಡೋಜು ಸಾಕು.

ಇದು ಏನೂ ದೋಷಕರವಲ್ಲ. ಎಲ್ಲಾ ಪ್ರಾಯಸ್ಥರಿಗೂ ಮಲೇರಿಯಾ, ಇನ್‌ಫ್ಲುಯೆಂಜಾ ಅಗ್ಯು, ಇತ್ಯಾದಿಗಳ ಪರಿಹಾರಾರ್ಥವಾಗಿ ಕೊಡಬಹುದು ಕೆಳಗೆ ಕೊಟ್ಟ ಶಿಫಾರಸಿನಿಂದ ಈ ಮದ್ದು ನಲ್ವತ್ತು ವರ್ಷಗಳಿಂದ ಎಷ್ಟು ಪ್ರಸಿದ್ಧವಾಗಿವೆಯೆಂಬುದನ್ನು ತೋರಿಸುವುದಕ್ಕೆ ಮುದ್ರಿಸಲಾಗಿದೆ ಈ ಸ್ಮಿತ್ಸ್ ಸ್ಪೆಸಿಫಿಕನ್ನು ಜ್ವರಪೀಡಿತರಾದ ಮಿಲಿಯಾವಧಿ ಜನರು ಕುಡಿದು ಗುಣ ಹೊಂದಿರುತ್ತಾರೆ

"ಎರಡು ವರ್ಷಗಳಿಂದ ನಮ್ಮ ಮಿಲ್ಲಿನಲ್ಲಿ ಈ ಔಷಧಿಯನ್ನುಪಯೋಗಿಸುತ್ತೇವೆ ಒಂದು ಡೋಜಿನಲ್ಲಿ ಜ್ವರ ನಿಂತಿದೆ ಎಲ್ಲಾ ಜ್ವರಗಳಿಗೂ ಇದು ಗುಣಕಾರಿ ಅದಕ್ಕೆ ಸಂದೇಹವಿಲ್ಲ" ಜಿ ಎಚ್ ಟೋಪ್, ಮೆನೇಜರ್—ಹತಿಸಿಂಗ್ ಮಿಲ್ ಅಹ್ಮದಾಬಾದ್

'ಸ್ಮಿತ್ಸರ ಅಗ್ ಸ್ಪೆಸಿಫಿಕ್' ಆಶ್ಚರ್ಯವನ್ನೇ ಉಂಟುಮಾಡುತ್ತಿದೆ ಅದನ್ನು ಉಪಯೋಗಿಸಿದವರಾಭಿಪ್ರಾಯವರ ಕೊಡುತ್ತಾರೆ

ಜಿ. ಜೆ ಫೇಟ, ಲೋಕೊ ಡಿಪೋ, ಎ ಎಂಡ್ ಬಿ ರೈಲ್ವೆ ಅಸ್ಸಾಮ್

ಮದನ್ ಸನ್ಸ್ ಎಂಡ್ ಕೋ, ಬೊಂಬಾಯಿ 2.

Madon Sons & Co, Bombay-2.

[illegible]

ಶ್ರೀ ಧರ್ಮಸ್ಥಳ ಕ್ಷೇತ್ರವು ಇಲ್ಲಿಯ ಮಂಜುನಾಥ ದೇವರು ಮತ್ತು ಅಣ್ಣಪ್ಪ ದೈವ ಮತ್ತು ಕನ್ಯಾಕುಮಾರಿ ಮುಂತಾದ ದೇವತೆಗಳ ಕಾರಣೀಕದಿಂದ ಪ್ರಸಿದ್ಧ ಪಟ್ಟ ಊರು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಸ್ಥಳಕ್ಕೆ ಕೊಡಲು ಕುದುಮಪುರವೆಂಬ ಹೆಸರಿತ್ತೆಂದು ಧರ್ಮಸ್ಥಳ ಅಪ್ಪಯ್ಯನವರೂ ಇತರ ಕವಿಗಳೂ ಬರೆದ ಗ್ರಂಥಗಳಿಂದ ತಿಳಿದು ಬರುತ್ತದೆ. ಈ ಸ್ಥಳವು ಧರ್ಮಸ್ಥಳ ಪ್ರಾಂತ್ಯನ ಕಾಲದಿಂದ, ಅಂದರೆ ಕ್ರಿ. ಶ. ೭೮೦ರಿಂದ ನೆಲ್ಯಾಡಿ ಹೆಗ್ಗಡೆಯವರ ಅಧೀನದಲ್ಲಿತ್ತು. ನಂತರ ಇದಕ್ಕೆ ಧರ್ಮಸ್ಥಳವೆಂದು ಹೆಸರಾಗಿ ಈಗಲೂ ಅದೇ ಹೆಸರು ನಡೆದು ಬರುತ್ತಿದೆ. ಪ್ರತಿ ವರುಷವೂ ಕಾರ್ತಿಕ ಬಹುಳ ದಶಮಿಯಿಂದ ಅಮಾವಾಸೆಯ ವರೆಗೆ ದೀಪೋತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತದೆ.

ಈ ಮಹತ್ಕಾರ್ಯ ಮತ್ತು ಮಹತ್ವಿಕೆಯನ್ನು ಕೂಡಿಸುವದಕ್ಕಾಗಿಯೂ ಹಗಲಲ್ಲಿ ಯಾವ ಉತ್ಸವಾದಿಗಳೂ ಇಲ್ಲದೆ ಇಂದಿನ ಯಾತ್ರಿಕರು ಸುಮ್ಮನೆ ಅಲೆದಾಡಿ ಕಾಲ ಹರಣಮಾಡದಂತೆಯೂ ಅವರ ಜ್ಞಾನವು ಮತ ಸಂಬಂಧವಾಗಿಯೂ ಕೈಗಾರಿಕೆ ಸಂಬಂಧವಾಗಿಯೂ, ಅಭಿವೃದ್ಧಿಯನ್ನು ಹೊಂದುವಂತೆಯೂ ಈ ವರುಷ ಶ್ರೀಮಾನ್ ಮಂಜಯ್ಯ ಹೆಗಡೆಯರು ಒಂದು ವಿವಿಧ ಮತ ಸಮ್ಮೇಳನವನ್ನೂ, ಒಂದು ವಸ್ತು ಪ್ರದರ್ಶನವನ್ನೂ ಜರಗಿಸಿರುವರು. ವಿವಿಧ ಮತ ಸಮ್ಮೇಳನವು ಮೈಸೂರು ರಾಜವಂಶದವರೂ, ಮೈಸೂರು ಜಿಲ್ಲೆಯ ಅಸಿಸ್ಟೆಂಟ ಕಮಿಶನರೂ ಆದ ಶ್ರೀಮಾನ್ ಕೆ ಬಸವರಾಜ ಅರಸಿನವರ (M A. L. L B) ಅಧ್ಯಕ್ಷತೆಯಲ್ಲಿ ಮೊದಲ ದಿವಸದಲ್ಲಿಯೂ ಜರಗಿತು. ವಿದ್ಯಾಬಲದ ಮತ್ತು ಸಹನಾಶಕ್ತಿಯ ಮತ್ತು ಸರ್ವಮತ ಜ್ಞಾನದ ತಿಳುವಳಿಕೆಯಿಂದಲೂ ಸಭಾಕಾರ್ಯ ಧುರೀಣತೆಯಿಂದಲೂ ಏನೊಂದೂ ಅಭ್ಯಂತರಗಳೂ ಇಲ್ಲದೆ ಸಮ್ಮೇಳನವು ನಡೆಯಿತು. ಯಾವ ತರದ ಅಸಮಾಧಾನಕ್ಕೂ, ಕಚಕ್ಕಟೆಗೂ ಎಡೆ ಕೊಡದೆ, ಇದ್ದುದು ಸಂತೋಷದಾಯಕವಾಗಿದೆ.

ವಸ್ತು ಪ್ರದರ್ಶನವು ಅಷ್ಟೊಂದು ಯಶಸ್ವಿಯಾಗಿ ನಡೆಯಲು ಸಾಧ್ಯವಾಗಲಿಲ್ಲ. ನೋಟಿಸು ಕೊಟ್ಟ ಸಮಯ ಸಂಕೋಚತೆಯಿಂದಲೂ, ಮಳೆಯ ದೆಸೆಯಿಂದಲೂ, ವಹಿವಾಟದ ತೊಂದರೆಗಳಿಂದಲೂ ವಸ್ತುಗಳನ್ನು ತಯಾರಿಸುವವರಿಗಿರುವ ಹಣದ ಅಭಾವದಿಂದಲೂ ಹೀಗಾಗಲು ಕಾರಣವೆನ್ನಬಹುದು. ಒಟ್ಟಾರೆ ಉಡುಪಿ ತಾಲೂಕು, ಪುತ್ತೂರು ತಾಲೂಕು, ಮಂಗಳೂರು ತಾಲೂಕುಗಳಿಂದಲೂ, ಉತ್ತರ ಕನ್ನಡದ ಹೊನ್ನಾವರದಿಂದಲೂ, ಮೈಸೂರು ಊರಿನಿಂದಲೂ ಮಾತ್ರವೇ ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದುವು. ಆರೋಗ್ಯ ಇಲಾಖೆಯ ಮತ್ತು ವ್ಯವಸಾಯ ಇಲಾಖೆಯವರು ತಮ್ಮ ವಸ್ತುಗಳನ್ನು ಎಲ್ಲಾ ಕಡೆಗಳಿಂದ ತಂದು ಪ್ರದರ್ಶಿಸಿದ್ದರು. ವ್ಯವಸಾಯ ಪ್ರದರ್ಶನವು ಜನರ ಮನಸ್ಸನ್ನು ಆಕರ್ಷಿಸುವಂತಿರಲಿಲ್ಲ. ೪ ನರ್ಸರಿ ಸ್ಟಾಲುಗಳು ಮಾತ್ರವೇ ಇದ್ದುವು. ಉಳಿದ ಸ್ಟಾಲುಗಳು ಖಾಲಿಯಾಗಿದ್ದುವು.

ತೆರೆಯುವ ಸಮಾರಂಭವನ್ನು ಜಿಲ್ಲಾ ಕಲೆಕ್ಟರ ದೊರೆಗಳು ಮಾಡಿದರು. ಅವರು ಬೀಳಿಸಿಕೆಯಸ್ಸಿರುವ ಸ್ಟಾಲುಗಳಲ್ಲಿ ಕೆಲವನ್ನು ಸಂದರ್ಶಿಸ ವಷ್ಟರಲ್ಲಿ ಮಳೆಯು ಬಂದುದರಿಂದ ಸ್ಟಾಲುಗಳಲ್ಲಿದ್ದ ವಸ್ತುಗಳು ಒದ್ದೆಯಾದವು. ಜೆನಿತ್ ಸೋಪ್ ಫೆಕ್ಟರಿಯವರಿಗೆ ನಮ್ಮ ವಿಶೇಷ ಪ್ರದರ್ಶನಕ್ಕೆ ಒಂದು ಚಿನ್ನದ ಪದಕವೂ [illegible] ಸ್ವರ್ಣ ಪ್ರಶಸ್ತಿಯ [illegible] ಪ್ರಾಂತದ ವಸ್ತುಗಳೂ, [illegible] ವರ್ಣನೆ ಗಳಿಸಿತು ಕುಸುಮಾ, ವಿ. ಸೋಮಪ್ಪನವರ ಚಿತ್ರಕೆಯು ಕನ್ನಡಕ್ಕೆ ಉರಿಯುವ ಸ್ಟವ. ಕಮಲದಲ್ಲಿ ನಿಂತ ಲಕ್ಷ್ಮಿಯ ಪ್ರತಿಮೆ, ಮೈಸೂರಿನ ನಾಜೂಕಾದ ಮಣ್ಣಿನ ನಾನಾ ತರದ ಪ್ರತಿಮೆಗಳೂ, ಹೊನ್ನಾವರದ ಗುಡಿಗಾರರ ಚಂತ್ಯ ಮತ್ತು ಗಂಧದ ಪ್ರತಿಮೆ ಮುಂತಾದುವುಗಳೂ, ಅರ್ಲ ಧರ್ಮಪಾಲರ ಕ್ರೆಯನ್ ಕೆಲಸದ ಚಿತ್ರಗಳೂ, ಬೇಕಾವರ ಶ್ರೀಧರರಾಯರ, ಕ್ರೇಯನ್ ಮತ್ತು ನೀರಿನ ಬಣ್ಣಗ ಚಿತ್ರಗಳೂ, ಶೇಷಗಿರಿ ಪೈಗಳ ಬಣ್ಣದ ಚಿತ್ರಗಳೂ ಪಕೀರ ಮಾಸ್ತರರ ಹ್ಯಾಡ್ರೊ ಇಲೆಕ್ಟ್ರಿಕ್ ಮೊಡೆಲ್ ಮತ್ತು ಭತ್ತ ಕುಟ್ಟುವ ಯಂತ್ರದ ಮೊಡಲ್, ಎಮ್. ವಿ. ಬಿಗಳಿರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯನ್ನು ಕ್ರಿ. ಶ. ೭೮೦ರಿಂದ ೧೬೨೦ರ ವರೆಗೆ ಆಳಿದ ಜೈನ ಅರಸರ ಪ್ರಾಂತಗಳ ಮತ್ತು ಹೆಗಡೆಯವರ ರಾಜ್ಯಗಳ ಪರ ಶ್ರೀನಿವಾಸ ಶೆಟ್ಟಿಯವರು ತಯಾರಿಸಿದ ೨೦೦ ಕೌಂಟ ವರೆಗಿನ ನೂಲು ತೆಗೆಯುವ ಹಿತ್ತಾಳೆಯ ಚರಕ, ಬೈಲೂರು ನಾರಾಯಣರಾಯರ ಜೇನುನೊಣಗಳನ್ನು ಸಾಕುವ ಸಾಧನ (ಪೆಟ್ಟಿಗೆ) ಪುತ್ತೂರು ಮಂಜುನಾಥ ಆಟಾನರ ಸ್ಟೀಮು ಎಂಜಿನ ಮೊಡೆಲ್ ಚಿತ್ತಾಕರ್ಷಕವಾಗಿದ್ದವು. ಇತರ ವಸ್ತುಗಳೂ ಬಹಳ ನಾಜೂಕಾಗಿದ್ದವು.

ಎರಡನೇ ದಿನ ವೈದ್ಯರು ನಾನಾ ತರದ ಮದ್ದು ತಯಾರಿಸುವ ಪ್ರದರ್ಶನವು ಶ್ರೀ ಎಂ ಎ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು.

ಕಡೆಯ ದಿನ ಸಾಯಂಕಾಲ ಶ್ರೀಮಾನ್ ಕೆ ಬಸವರಾಜ ಅರಸರವರು ವಸ್ತು ಪ್ರದರ್ಶನವನ್ನು ಸಂದರ್ಶಿಸಿ ಆನಂದಪಟ್ಟರು. ರಾತ್ರಿ ಗೌರಿಮಾರು ಗದ್ದೆಯ ಮಂಟಪದಲ್ಲಿ ದೇವರ ಪೂಜಾ ಕಾರ್ಯವು ಮುಗಿದ ಮೇಲೆ ಬೆಳ್ಳಿಯ ಬಟ್ಟಲು, ಭಂಗಾ

(೬ನೇ ಪುಟಕ್ಕೆ ಮುಂದುವರಿಯುವು)

ಬೆಳೆಯುತ್ತಿರುವ ಮಕ್ಕಳಿಗೆ ಸಮತೂಕವಾದ ಆಹಾರವು ಬೇಕು.

ಆರೋಗ್ಯಕರ ಬೆಳವಣಿಗೆಗೆ ಬೇಕಾದ ಚೈತನ್ಯದಾಯಕ ಶಕ್ತಿಯನ್ನು 'ಹರ್ಲಿಕ್ಸ್' ಕೊಡುತ್ತದೆ.

ಮಕ್ಕಳು ಹಾಸಿಗೆಯಿಂದೆದ್ದು ಮಲಗುವ ಸಮಯದ ವರೆಗೆ ಎಷ್ಟು ಚಟುವಟಿಕೆಯಿಂದ ದಿನಗಳೆಯುವುದಿಲ್ಲ. ಈಗ ಅವರು ಬೆಳೆಯುತ್ತಿರುವಾಗ ಅವರಿಗೆ ಸಮತೂಕದ ಆಹಾರವನ್ನು ಒದಗಿಸಿ ಕೊಡಬೇಕು. ಅವರು ಕಳೆದುಕೊಳ್ಳುತ್ತಿರುವ ಚೈತನ್ಯವನ್ನು ಪುನರುತ್ಪನ್ನಗೊಳಿಸುವ ಆಹಾರವನ್ನು ಅವರಿಗೆ ಕೊಡತಕ್ಕದ್ದು.

ಸಣ್ಣ ಮಕ್ಕಳ ಬೆಳವಣಿಗೆಗೆ ಸಾಧಕವಾದ ಆಹಾರವು ಸಾಧಾರಣವಾದ ತಿಂಡಿ ತಿನಸುಗಳಲ್ಲಿರದಿರುವುದರಿಂದ, ಹೆತ್ತವರು ಹೊರ್ಲಿಕ್ಸನ್ನು ಉಪಯೋಗಿಸುತ್ತಾರೆ. ದನದ ಕೆನೆ ಹಾಲಿನಿಂದಲೂ ಗೋಧಿ, ಬೆಳೆದ ಬಾರ್ಲಿಗಳ ಸಾರದಿಂದಲೂ ತಯಾರಿಸಲ್ಪಟ್ಟದ್ದು ಅದು ರಸಯುಕ್ತ ದೇಹವರ್ಧಕವಾಗಿರುತ್ತದೆ. ಇದು ಬೇಗನೇ ಜೀರ್ಣಿಸುತ್ತದೆ. ಎಷ್ಟು ಅಶಕ್ತರಿಗೂ ಜೀರ್ಣಗೊಳ್ಳುತ್ತದೆ.

ಕೆಲವು ನಿಮಿಷಗಳಲ್ಲಿ ರುಚಿಕರ ಪಾನೀಯವನ್ನು ತಯಾರಿಸಬೇಕೆಂದಾದರೆ ಹೊರ್ಲಿಕ್ಸ್ ಮಿಕ್ಸರನ್ನುಪಯೋಗಿಸಿರಿ. ಎಲ್ಲಾ ಸ್ಟೋರುಗಳಲ್ಲಿಯೂ ಅಥವಾ ಟ ಪೆ 2229 ಕಲ್ಕತ್ತಾದಿಂದ 14 ಅಣೆಗೆ ಸಿಗುತ್ತದೆ

ಹೊರ್ಲಿಕ್ಸ್

ಮೂಲಭೂತ ಮೊಲ್ಟೆಡ್ ಹಾಲು,

ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ.

ಟ ಪೆ 2229 ಕಲ್ಕತ್ತ
ಹೊರ್ಲಿಕ್ಸ್ ಇನ್ ಕನ್ವಲಸೆನ್ಸ ಎಂಬುದರ ಕುರಿತು ಧರ್ಮಾರ್ಥ ಸವಿವರ ಪತ್ರವನ್ನು ನನಗೆ ಕಳುಹಿಸಿರಿ
ಹೆಸರು . . . .
ವಿಳಾಸ . . . . .No. S. D 107. . .
ಹೊರ್ಲಿಕ್ಸ್ ಮಿಕ್ಸರ್ ಬೇಕಾಗಿದ್ದರೆ 14 ಅಣೆ ಅಂಚೆ ಚೀಟು ರವಾನಿಸಿ.

[illegible]ವರಿಗೆ ಮೊಟ್ಟೆಗಳನ್ನೆಸೆದರೇ?

ಹರಿಜನರ ಹಿರಿಯ ಸನಾತನಿಗಳಿಗೆ ಹಿತೋಪದೇಶ!

[illegible] ಅವರ ಬುದ್ಧಿಯನ್ನು [illegible] ಪತ್ರಿಕೆ ಪಾದನಮಾಗಿರುತ್ತದೆ [illegible] ಹೋದಾಗ ಅಲ್ಲಿಯ [illegible] ಅವರ ಮೇಲೆ ಮೊಟ್ಟೆಗಳನ್ನೆಸೆದರೆಂದೂ [illegible] ಅವರನ್ನು ಬಹಿಷ್ಕರಿಸಲು [illegible] ಟೈಮ್ಸ್ ಆಫ್ ಇಂಡಿಯಾ [illegible] ಇದನ್ನು ಓದಿದೊಡನೆ [illegible] ಗಾಂಧೀಜಿಯವರೊಡನೆ ಪ್ರಶ್ನಿಸಿದರು. [illegible] ಆಫ್ ಇಂಡಿಯಾ ಪ್ರತಿನಿಧಿಯೊಬ್ಬನು [illegible] ಈ ಕುರಿತು ಕೇಳಿದಾಗ ಮಹಾತ್ಮರು [illegible] ಹೀಗೆಂದು ಹೇಳಿದರು. "ನನ್ನ ಮೇಲೆ [illegible] ಎಸೆದರೆಂಬ ಸುದ್ದಿಯು ಟೈಮ್ಸ್ ಆಫ್ ಇಂಡಿಯಾ [illegible] ನಾನು ಕೇಳಿದೆನು. ಯಾರೇ [illegible] ನಾನು ಕಂಡಿರುವುದಿಲ್ಲ. [illegible] ಅವುಗಳನ್ನು ಎಸೆಯುವಾಗ ಏನಾದರೊಂದು [illegible] ನಾನು ತಿಳಿದಿರುವುದಿಲ್ಲ. ಒಂದು ವೇಳೆ [illegible] ಎಸೆಯಲ್ಪಟ್ಟಿರುವುದಾದರೂ, ಆ ಅನುಭವವು ನನಗೆ ಹೊಸದಲ್ಲವೆಂದು ತಿಳಿಯಬೇಕಾಗಿದೆ. ಆಫ್ರಿಕದಲ್ಲಿರುವಾಗ [illegible]ನಲ್ಲಿ ನನ್ನ ಮೇಲೆ ಗಲಭೆನೇ ಇಸವಿ ಜನವರಿ ೧೩ನೇ ದಿನ ಯುರೋಪಿಯರ ಜನತಂಡವು ಮೊಟ್ಟೆಗಳನ್ನೆಸೆದಿತ್ತು. ಅಂತಹ ಎಸೆಯುವಿಕೆಯಿಂದ ನಾನು ವ್ಯಸನಗೊಳ್ಳಲಿಲ್ಲ—, ಬದಲಿಗೆ ಆ ಮೊಟ್ಟೆಗಳನ್ನು ಸಂತೋಷ ಚಿತ್ತದಿಂದಲೇ ತೆಗೆದುಕೊಂಡೆನು. ದಕ್ಷಿಣಾಫ್ರಿಕದಲ್ಲಿನ ಸಾವಿರಾರು ಯುರೋಪಿಯನರು ನನ್ನನ್ನು ಪ್ರೀತಿಸುತ್ತಿದ್ದ ಆ ರೀತಿಯ ಪ್ರೇಮದಿಂದಲೇ ನಾನು ಅವರ ಮೊಟ್ಟೆಗಳ ಪೆಟ್ಟನ್ನು ಸಹಿಸಿಕೊಂಡೆನು. ನಾಗಪುರದಲ್ಲಿನ ವಿದ್ಯಾರ್ಥಿ ವೃಂದವು ಕನ್ವೆಕೇಶನ್ ಹಾಲಿನಲ್ಲಿ ಅಸಮ್ಮತವಾಗಿ ಸೇರಿದಾಗ ಹೊಂದಿದ ಆನಂದದಷ್ಟೆ ಆನಂದವನ್ನು, ಅವರು ಮೊಟ್ಟೆಗಳನ್ನೆಸೆಯುತ್ತಿದ್ದರೂ ನಾನು ಹೊಂದುತ್ತಿದ್ದೆನು. ಸಂಯುಕ್ತ ಪ್ರಾಂತ್ಯದ ಹರಿಜನರು ನನ್ನನ್ನು ಬಹಿಷ್ಕರಿಸಲು ಯೋಚಿಸಿರುವರೆಂಬ ವಿಷಯವು ನನ್ನ ತಿಳುವಳಿಕೆಗೆ ಬಂದಿರುವುದಿಲ್ಲ. ಒಂದು ವೇಳೆ ಅಂತಹ ಆಲೋಚನೆಯು ನಡೆದಿದ್ದರೂ, ಆ ರೀತಿಯ ಬಹಿಷ್ಕಾರವು ನನ್ನ ಅನುಭವದಲ್ಲಿ ಪ್ರಥಮದ್ದಲ್ಲ. ೧೯೩೧ರಲ್ಲಿ ನಾನು ಲಂಡನಿಗೆ ತೆರಳಿದಾಗಲೇ ಇಂತಹ ಬಹಿಷ್ಕಾರದ ಅನುಭವವನ್ನು ಪಡೆದಿದ್ದೇನೆ. ಇಷ್ಟು ಕಾಲದಿಂದಲೂ ಅಸ್ಪೃಶ್ಯರನ್ನು ದೂರೀಕರಿಸಿದ್ದುದಕ್ಕಾಗಿ ಸವರ್ಣ ಹಿಂದೂಗಳು ಪಶ್ಚಾತ್ತಾಪ ಪಡಬೇಕೆಂಬುದೇ ನನ್ನೀ ಸಂಚಾರದ ಮುಖ್ಯೋದ್ದೇಶ. ಧರ್ಮದ ಹೆಸರಿನಿಂದಲೂ, ಪವಿತ್ರೋದ್ದೇಶದಿಂದಲೂ, ಕೈಕೊಳ್ಳಲ್ಪಟ್ಟ ಈ ಕಾರ್ಯಕ್ಕೆ ಅಂತಹ ಬಹಿಷ್ಕಾರದ ಭಯವಿಲ್ಲ. ಆದರೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಅಸತ್ಯವೂ ಅಸಂಗತ್ಯವೂ ಆದ ಈ ರೀತಿಯ ವಾರ್ತೆಗಳ [illegible] ಶಿರೋನಾಮೆಯನ್ನು ಪ್ರಕಟಿಸಿ, ಇದಕ್ಕಿಂತಲೂ ವಿಶೇಷವಾಗಿರುವ ಸಾವಿರಗಟ್ಟಲೆ ಜನರು ನನಗೆ ತೋರಿಸಿದ ಆದರ ಮತ್ತು ಅವರು ಉದಾರ ಹೃದಯಗಳಾಗಿ ಕೊಟ್ಟ ವಂತಿಗೆ ವರದಿಗಳ ಸುದ್ದಿಗಳನ್ನು ಪ್ರಕಟಿಸಲು ಹಿಂಜರಿಯುತ್ತಿರುವುದು ಆಶ್ಚರ್ಯಕರವಲ್ಲವೇ? ಅಸ್ಪೃಶ್ಯತಾ ವಿರೋಧ ಚಳವಳಿಯನ್ನು ಕುರಿತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು [illegible]ವುದನ್ನು ನೋಡಿ, ಆಶ್ಚರ್ಯಗೊಳ್ಳಬೇಕಾಗಿದೆ. ಅಸ್ಪೃಶ್ಯತೆಯು ಸಾಯುತ್ತಿರುವುದೆಂಬುದಕ್ಕೆ ಮಹಾ ಮಹಾ [illegible]ಗಳಲ್ಲಿನ ಪ್ರದರ್ಶನಗಳು ಸಾಕ್ಷಿಗಳಾಗಿರುವಾಗ ಟೀಕೆಗಾರರ [illegible] ಕಣ್ಣನ್ನು ಮುಚ್ಚಿ ತುಲನೆ ಮಾಡಿಕೊಳ್ಳಬಹುದು. [illegible] ಜನ ಸಾಮಾನ್ಯರ ಮಾನಸಿಕತೆಯು ಸಂಪೂರ್ಣ ಬದಲಾಗುತ್ತದೆಂದು ನಾನು ಹೇಳಲಾರೆ. ಹೀಗಿದ್ದರೂ, ಕಳೆದ [illegible] ದಿನಗಳಿಂದ ನನಗೆ ಸಿಗುವ ಬೆಂಬಲವು ಈ ಸಂಚಾರವು [illegible] ಅಸ್ಪೃಶ್ಯತೆಯು [illegible] ಅದರ ಮೇಲೆ ಗೋರಿಯನ್ನು ಕಟ್ಟ[illegible] ಸಂದೇಹವಿಲ್ಲ." ಮಹಾತ್ಮರು [illegible]

ಮಹಾತ್ಮಾ ಗಾಂಧಿಯವರು ವಾರ್ಧಾ [illegible] ಸಮೊಲಿ ಮೊದಲಾದ ಪ್ರಾಂತ್ಯಗಳಿಗೆ ಸಂಚಾರ ಮಾಡಿದರು. ಅವರೊಡನೆ ಶ್ರೀಮತಿ ಜಾನಕಿ ದೇವಿ ಬಜಾಜ, ಶ್ರೀಮತಿ ಮೀರಾ ಬೆನ್ ಡಾ| ಶಾಸ್ತ್ರಿ, ಶ್ರೀ ತಕ್ಕರ್ ಮೊದಲಾದವರಿದ್ದರು. ಅವರು [illegible]ದಿಂದ ಸಮೊಲಿಗೆ ಹೋಗಿ ಅಲ್ಲೊಂದು ಮಹಾ ಸಭೆಯನ್ನು ಜರಗಿಸಿದರು. ೧೧,೦೦೦ ಜನರು ನೆರೆದಿದ್ದರು. ಅಲ್ಲಿಯ ಪುರನಿವಾಸಿಗಳು ಗಾಂಧೀಯವರಿಗೊಂದು ಮಾನ ಪತ್ರವನ್ನರ್ಪಿಸಿದರು. ಹಣದ ಥೈಲಿಯನ್ನೂ ಅರ್ಪಿಸಿದರು. ಅಲ್ಲಿ ಎರಡು ಹೊಸ ಬಾವಿಗಳನ್ನು ಹರಿಜನರಿಗಾಗಿ ತೆರೆಯಲಾಯಿತು. ಸಮೊಲಿಯಲ್ಲಿನ ಖಾದಿ ವಸ್ತ್ರಾಲಯವನ್ನೂ ಅಲ್ಲಿಯ ಹರಿಜನರು ಖಾದಿ ಸಿದ್ಧತೆಯ ಕೆಲಸಗಳಲ್ಲಿ ನಿರತರಾಗಿರುವುದನ್ನೂ ಕಂಡು ಗಾಂಧಿಜೀಯವರು ಅತ್ಯಾನಂದಗೊಂಡರು. ಈ ವಸ್ತ್ರಾಲಯದ ನೇತೃತ್ವದಲ್ಲೇ ಹರಿಜನ ಕೆಲಸವೂ ನಡೆಯುತ್ತಿದ್ದುದರಿಂದ ಮಹಾತ್ಮರು ಮತ್ತಷ್ಟು ಆನಂದಗೊಂಡರು. ಈ ಕೇಂದ್ರದಿಂದ ಅಲ್ಲಿಯ ೭೦೦ ಹಳ್ಳಿಗಳಿಗೆ ಖಾದಿಯು ಒದಗಿಸಲ್ಪಡುತ್ತದೆ. ೫೬೦೦ ಜನರು ಈ ಕೇಂದ್ರದಲ್ಲಿ ದುಡಿಯುತ್ತಾರೆ. ಹತ್ತಿ ಬಿಡಿಸುವವರಿಂದ ಮೊದಲುಗೊಂಡು ವಸ್ತ್ರ ತಯಾರಿಸುವ ಜನರ ವರೆಗಿನವರು ಖಾದಿ ಧರಿಸಿದ್ದರು. ಈ ಕೇಂದ್ರದ ಕೆಲಸಗಾರರಲ್ಲಿ ಹೆಚ್ಚಿನವರು ಹರಿಜನ ವರ್ಗದವರು. ಈ ಕೇಂದ್ರವು ಒಮ್ಮೆ ಅಲ್ಲಿ ಖಾದಿಯ ಪ್ರಭಾವವು ತಗ್ಗುತ್ತಾ ಬಂದಾಗ ೧೯೨೭ರಲ್ಲಿ ಈ ಕಾರ್ಯಕ್ಕೆ ಕೈಯಿಟ್ಟಿತು. ಮಹಾತ್ಮಾ ಗಾಂಧಿಯವರು ಅಲ್ಲಿ ೭೦೦೦೦ ಜನರ ಸಮ್ಮುಖದಲ್ಲಿ ಒಂದು ಭಾಷಣ ಮಾಡಿದರು. ಹರಿಜನರೂ ಸವರ್ಣ ಹಿಂದೂಗಳೂ ಮಹಾತ್ಮರಿಗೆ ದ್ರವ್ಯ ಸಹಾಯವನ್ನಿತ್ತರು.

ಕಳೆದವಾರ ಪಂಡಿತ ಜವಾಹರಲಾಲರು ಪತ್ರಿಕಾ ಪ್ರತಿನಿಧಿಗಳೊಬ್ಬರಿಗೆ ಹಿಂದೂ ಮಹಾಸಭೆಯ ಕುರಿತು ಕೆಲವು ಅಭಿಪ್ರಾಯಗಳನ್ನು ಸೂಚಿಸುತ್ತಾ ಹಿಂದೂ ಮಹಾಸಭೆಯನ್ನು ಬಹುವಾಗಿ ಖಂಡಿಸಿರುವರು. ಅವರ ಈ ವರ್ತನೆಯು ಹಿಂದೂ ಮಹಾ ಸಭೆಯವರ ಮಾನವನ್ನು ನೋಯಿಸಲು ಕಾರಣವಾಗಿದೆ. ಅವರು ಹೇಳಿದ್ದೇನೆಂದರೆ,—"ಹಿಂದೂ ಮಹಾ ಸಭೆಯೆಂಬುದು ಪಿತೂರಿಗಾರರ ಒಂದು ತಂಡವೆಂದು ನಾನು ಅನೇಕ ಸಮಯದಿಂದ ಭಾವಿಸಿಕೊಂಡಿದ್ದೆ. ಹಿಂದೂಗಳ ಪರವಾಗಿ ಮಾತನಾಡಲು ತಮ್ಮನ್ನುಳಿದು ಯಾರೂ ಇಲ್ಲವೆಂದು ಈ ಸಭೆಯವರು ತಿಳಿದುಕೊಂಡಿರುವರು. ಇದು ಕೇವಲ ಆತ್ಮವಂಚನೆ. ಈಗೀಗ ಅವರ ವರ್ತನೆಗಳೆಲ್ಲ ಬಯಲಾಗುತ್ತಿವೆ. ಅಜ್ಮೀರದಲ್ಲಿ ಅಂಗೀಕೃತವಾದ ನಿರ್ಣಯಗಳನ್ನು ಪರಿಶೀಲಿಸುವಾಗ ಎಂತಹವನಿಗೂ ವ್ಯಸನವಾಗದಿರದು. ಈ ಸಭೆಗೆ ಅಯೋಗ್ಯವಾದಂತಹ ಸಭೆಯೆಂಬ ಛಾಪೆಯೊಂದಿದೆ. ಪರದೇಶಿಗರನ್ನು ದೇಶದಿಂದ ಹೊರಗಟ್ಟಿ ಹಿಂದೂ ರಾಜ್ಯವನ್ನು ಇಲ್ಲಿ ಸ್ಥಾಪಿಸುವುದೇ ಈ ಸಭೆಯ ಧ್ಯೇಯವಾಗಿದೆ. ಇದರಿಂದಲೇ ಭರತ ಖಂಡಕ್ಕೂ ಹಿಂದೂ ಮಹಾಸಭೆಗೂ ಇರುವ ಸಂಬಂಧವೇನೆಂದು ತಿಳಿಯುವುದು. ಈ ಸಭೆಯು ದೂರ ದೃಷ್ಟಿ ವೃತ್ತಿವಂತರ ಮತ್ತು ರಾಜರ ಸ್ಥಾನಮಾನಗಳನ್ನೇ ಮುಖ್ಯವಾಗಿ ದೃಷ್ಟಿ ಪಥದಲ್ಲಿಟ್ಟುಕೊಂಡಿರುತ್ತದೆ. ಈ ಸಭೆಯವರ ಸ್ಥಿತಿಯು ಬದಲಾಗದಿದ್ದರೆ ದೇಶಕ್ಕೆ ಹಾನಿಯಿದೆ. ಇಲ್ಲದಿದ್ದರೆ ಇವರು ಭಾರತದ ವೈರಿಗಳಾಗುವರು"

ನೆಹರೂರವರ ಈ ರೀತಿಯ ಖಂಡನೆಯಿಂದಾಗಿ ಹಿಂದೂ ಮಹಾ ಸಭೆಯವರು ಉದ್ರೇಕಗೊಂಡಿರುವರು. ಇದರ ಸೆಕ್ರೆಟರಿಯವರಾದ ಶ್ರೀ ಅಶ್ವಿನೀ ಕುಮಾರ ಘೋಶರವರು ಪಂಡಿತರಿಗೊಂದು ಉತ್ತರವನ್ನು ಬರೆದು ಪಂಡಿತರ ಟೀಕೆಯು ವಿಷ್ಣುಕನ್ನೂ ಸಾಧುವಲ್ಲವೆಂದೂ ಅಂತಹ ಟೀಕೆಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಹೇಳಿರುವರು. ಕಲ್ಕತ್ತೆಯಲ್ಲೂ ಶ್ರೀ ಬಿ. ಸಿ. ಚಟರ್ಜಿಯವರ ಅಧ್ಯಕ್ಷತೆಯಲ್ಲೊಂದು ಮಹಾ ಸಭೆಯು ಜರಗಿ ಪಂಡಿತ ಜವಾಹರಲಾಲರ ಟೀಕೆಯು ಅಯೋಗ್ಯವೆಂದೂ ಅವರದನ್ನು ಹಿಂತೆಗೆಯಬೇಕೆಂದೂ ಠರಾವಾಯಿತು. ಪಂಡಿತರೇನೂ ಹಿಂದೂ ಮಹಾ ಸಭೆಯ ಠರಾವಿಗೆ ಹಿಮ್ಮೆಟ್ಟುವಂತಿಲ್ಲ.

ಮಹಾತ್ಮರಿಗೆ ವಿರೋಧ.

ಮಹಾತ್ಮಾ ಗಾಂಧಿಯವರ ಸಂಚಾರದ ಪ್ರತಿಭಟನೆಗಾಗಿ ಸನಾತನಿಗಳ ಪೇಚಾಟವು ನಡೆಯುತ್ತಲಿದೆ. ವರ್ಣಾಶ್ರಮ ಸ್ವರಾಜ್ಯ ಸಂಘದವರು ಗಾಂಧಿಜೀಯವರಿಗೆ ವಿಘ್ನವನ್ನುಂಟು ಮಾಡಲು ಹೆಣಗಾಡುತ್ತಿರುವರು. ಮಹಾರಾಷ್ಟ್ರ ಪ್ರಾಂತ್ಯದ ಸಂಗಡದ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ರಾವ್ ದಾವ್ರೆ ಎಂಬವರು ಗಾಂಧಿಜೀಯವರು ಹೋದ ಅಮರಾವತಿಗೆ ಹೋಗಿ ಸಭೆಗಳನ್ನು ಜರಗಿಸಿ ಗಾಂಧಿಜೀಯವರು ಹಿಂದೂಮತದ ನಾಶಕ್ಕೆ ತೊಡಗಿರುವರೆಂದೂ ಅವರ ಬೆಂಬಲವಾಗಿ ಹಿಂದೂಗಳಾರೂ ನಿಲ್ಲಬಾರದೆಂದೂ ಹೇಳಿ ಉಪದೇಶಿಸಿದರು. ದೇವಸ್ಥಾನ ಪ್ರವೇಶ ಬಿಲನ್ನು ಜನರು ಪ್ರತಿಭಟಿಸಿ ನಡೆಯಬೇಕೆಂದೇ ಅವರು ಜನರಿಗೆ ಬೋಧಿಸಿದರು. ಪಂಡಿತ ಧಾಂಡೇಕರ್ ಎಂಬುವರು ಈ ಮಾತುಗಾರರನ್ನು ಅನುಮೋದಿಸಿದರು.

ಸ್ವದೇಶಾಭಿಮಾನಿಗೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ

ಉತ್ಸಾಹೀ ಏಜಂಟರು

ಬೇಕು!

ಕೂಡಲೇ ಮೆನೇಜರರಿಗೆ ಬರೆಯಿರಿ.

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಔಷಧೀಯ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳು ದೊರೆತಿರುವ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸ್ವಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡತಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುವು ಬೀಳೋಣ ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಭೋವಳಿಕೆ ಬರೋಣ, ಹೊಟ್ಟೆಕ್ಕೆ ಸರಿಯಾಗಿ ಹಸಿವೆ ಆಗದೇ ಇರೋಣ, ಇಂಥಾದ ಎಲ್ಲಾ ವಿಕಾರಗಳು ನಷ್ಟವಾಗಿ ಜಠರಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಹೊಟ್ಟೆಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುತ್ರವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಕೂಡಲೆ ತಿಳಿಯುವದು.

ಬಾಟ್ಲಿ ಬೆಲೆ ರೂ. [illegible] ೩ ಬಾಟ್ಲಿಗೆ [illegible] ದರ್ಜನ ಬಾಟ್ಲಿಗೆ [illegible] ರೂಪಾಯಿ ಟಪ್ಪಾಲ ಖರ್ಚು ಹೊರತಾಗಿ ಬೇರೆ ಕೊಡುತ್ತದೆ. ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ಚಿಕ್ಕೋಡಿ, ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ವಿಚಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಕೈ ಫಾರ್ಮೆಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—[illegible] ರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು—

[illegible] [illegible] ಬಂಟವಾಳ—ಬಿ. ಎಸ್. ವಾಸುದೇವ ಪೈ.

Buy Indian

Be Indian

By Using

"LADCO"

Vegetable Toilet and Washing Soaps

FREE FROM ANIMAL FAT

Bath Soap, Glycerine Transparent Soap, Bar Soap Cubes, Cakes.

Agents for South Kanara, Malabar & Coorg—

PAI PHARMACY,

Car Street, MANGALORE.

Stockists:—

JAYAVANT SHANTARAM & BROS. *Merchants,*

Bunder, Mangalore, S. K

1—9—33

ಡಾ. ಗೋವಿಂದರಾವ್ ಕೇಶವ ಅಂಡ್ ಸನ್ಸ್,

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ತ್ರಿಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.

ರಥಬೀದಿ, ಮಂಗಳೂರು

'ಸ್ವದೇಶಾಭಿಮಾನಿ'ಗೆ ಇಂದೇ ಚಂದಾದಾರರಾಗಿರಿ!

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,

The South Indian General Assurance Co Ltd

64, 3rd Cross Road, Srirampur Extn ... Malleswaram Post, BANGALORE.

OR

The Managing Agents,

The S I. G. A Co. Ltd

55 Poonamallee High Road, Kilpauk MADRAS.

THE SOUTH INDIA

CO-OPERATIVE INSURANCE SOCIETY,

LIMITED MADRAS

LOCAL BOARD:—

THE SOUTH CANARA CENTRAL

CO OPERATIVE BANK LTD MANGALORE.

Applications are invited for 'Sub Agents' from capable and energetic persons and Co operative Institutions to canvass business on behalf of the Local Board of the Society at Mangalore

FOR TERMS APPLY TO—

The Secretary,

South Canara Central Co operative Bank, Ltd, KODIALBAIL P O (Mangalore)

SOUTH CANARA.

Hydrocele and Hernia

'ಹೈಡ್ರೊಸಿಲ್' ಮತ್ತು ಅಂಡವಾಯುವಿಗೆ ಅಮೋಘ ಔಷಧಿ.

Aksir—A. Fota ಎಂಬುದು ಹೈಡ್ರೊಸಿಲ್ ಮತ್ತು ಅಂಡವಾಯುವನ್ನು ಗುಣಪಡಿಸಲು ದಿವ್ಯೌಷಧ! ಒಪರೇಶನ್ ಅಗತ್ಯವಿಲ್ಲ. ಎಷ್ಟು ಕಾಲದ ರೋಗವೇ ಆಗಿರಲಿ ಎಷ್ಟು ವಿಷಮ ರೋಗವೇ ಆಗಿರಲಿ, ಅಂಡದಲ್ಲಿ ನೀರು ಗಟ್ಟಿ ಕಟ್ಟಿರಲಿ, ಯಾವ ಮದ್ದಿನಿಂದಲೂ ಗುಣಮುಖ ಹೊಂದದಿರಲಿ, ಈ ಔಷಧವನ್ನು ಪ್ರಯೋಗಿಸಿದೊಡನೆ ಅಂಡದಿಂದ ನೀರು ಹೊರಬಂದು ಹರ್ನಿಯಾವನ್ನು ಅದರ ಮೊದಲ ಸ್ಥಿತಿಯಲ್ಲಿ ನಿಲ್ಲಿಸುತ್ತದೆ. ಈ ಔಷಧಿಯನ್ನು ಒಮ್ಮೆ ಸರಿಯಾಗಿ ಉಪಯೋಗಿಸಿದಲ್ಲಿ ಈ ಮಹಾರೋಗವು ದೃಢವಾಗಿ ವಾಸಿಯಾಗುತ್ತದೆ. ಇನ್ನೊಮ್ಮೆ ಕಲೆದೋರುವುದೇ ಇಲ್ಲ. ಈ ಔಷಧವು ಒಂದು ಬಗೆಯ ಹುಡಿ (ಪೌಡರ್) ಯಂತಿದೆ. ಇದನ್ನು ನೀರಿನೊಡನೆ ಕಲಸಿ ಅಂಡಕ್ಕೆ ಹಾಗಿಸಬೇಕು. ಏಳೇ ಏಳು ದಿನಗಳೊಳಗೆ ಹೈಡ್ರೋಸೀಲನ್ನು ಗುಣಪಡಿಸುತ್ತದೆ. ಕ್ರಯ ಪೆಕೆಟಿಗೆ ರೂ 3 ಪೋ. 8 ಆಣೆ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Hamdard Dawakhana,

Kusbak, MUTTRA.

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರನ್ನು ... ಕಾಣಿಸಬೇಕು.

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಶಾಲೆ ಹುಡುಗರಿಗೂ, ಕೋಟಿದವರಿಗೂ ಬೇಕಾಗುವಂತಹ

ಚರ್ ರೋಲ್ ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ. ಕ್ರಯವನ್ನು, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,

ಶಾರದಾ ಪ್ರೆಸ್,

ರಥಬೀದಿ, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ಡೊಂಗರಕೇರಿ ರಸ್ತೆ, ಮಂಗಳೂರು

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಉತ್ತಾಯು ಊಚು ರೂಪಾಯಿ 3—0—0 Registered No. M. 198. ಟಪ್ಪಾಲು ಹಾಸಲು ಸೇರಿ ರೂಪಾಯಿ 3—18—0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಕಾರ್ಯಾರ್ಥಿನಸ್ತು ಕುರ್ವನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪಡೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ಕೊರಿದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಸಂಪುಟ ೨೭. ಮಂಗಳೂರು ತಾ ೧ನೇ ಶುಕ್ರವಾರ ದಶಂಬರ ೧೯೩೩ (1–12–'33) ಸಂಚಿಕೆ ೪೭

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ. 3,50,000. ಶೇರು ಹಣ ಪೂರ್ತಿ ಕೊಡಲ್ಪಟ್ಟ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST OCTOBER, 1933.

	CAPITAL AND LIABILITIES.	Rs.		PROPERTY AND ASSETS.	Rs.
1	Paid up Capital	2,25,000-0-0	1	Bank Premises, Buildings, Furniture etc.	66,920-0-4
2	Reserve and other funds	2,35,000-0-0	2	Investment on Gvt. securities	3,00,560-8-6
3	Deposits	21,91,744-5-8	3	Authorised Investments	23,02,701-4-1
4	Due to Bankers	21,649-2-3	4	Bills per contra	10,547-3-9
5	Sundries	84,330-2-6	5	Sundries	28,997-6-1
6	Bills per contra	10,547-3-9	6	Cash on hand & with bankers	58,544-7-5
	Total	27,68,270-14-2		Total	27,68,270-14-2

UDIPI, 6–11–'33.

N. ANANDA RAO,
Secretary & Manager.

(Regd.)

ಅಮೃತಾಂಜನ.

ಇದು ಕಟ್ಟಿ ಶಿರೋವೇದನೆ, ಕಷ್ಟಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಳಿಯು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೀ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 8—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪ್ಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ.
ಗಿರ್ಗಾಂವ್, ಮುಂಬಾಯಿ.
ಏಜಂಟರು— ಪೈ ಕಂಪೆನಿ, ಮಂಗಳೂರು.

ಓದಲಿಕ್ಕೂ, ಜಾಹೀರಾತು ಕೊಡಲಿಕ್ಕೂ
ಮಕ್ಕಳಿಗೂ, ದೊಡ್ಡವರಿಗೂ, ಹಳ್ಳಿಯವರಿಗೂ, ಪೇಟೆಯವರಿಗೂ, ವಿದ್ಯೆ ಇದ್ದವರಿಗೂ, ಇಲ್ಲದವರಿಗೂ
ಬೇಕಾದ,
ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ
ಪತ್ರಿಕೆ

'ಸ್ವದೇಶಾಭಿಮಾನಿ'

27 ವರ್ಷಗಳ ನವತರುಣ!

ಶಕ್ತಿಗೂ

ಚೈತನ್ಯಕ್ಕೂ

ಸುಖ ಪ್ರಾಪ್ತಿಯಾಗಬೇಕಾದರೆ ದೈಹಿಕ ಮತ್ತು ಮಾನಸಿಕ ದೃಢತೆಯು ಅತ್ಯವಶ್ಯ. ಸಾಕಷ್ಟು ಮತ್ತು ಯೋಗ್ಯ ಪೋಷಣೆಯ ಮೇಲೆಯೇ ನಿಮ್ಮ ದೇಹಾರೋಗ್ಯವು ಹೊಂದಿಕೊಂಡಿದೆ.

'ಓವಲ್ಟಿನ್' ಸ್ತ್ರೀಪುರುಷ ಬಾಲಕರಾದಿಗಳಿಗೆ ಒಳ್ಳೆ ಆರೋಗ್ಯ, ಶಕ್ತಿ ಮತ್ತು ಚೈತನ್ಯ ವರ್ಧನೆಗೆ ತಕ್ಕ ಪೋಷಣೆಯನ್ನೀಯುತ್ತದೆ. ಇದು ಎಲ್ಲರೂ ಮೆಚ್ಚುವ ರುಚಿಕರವಾದ ಪಾನೀಯ.

ಪ್ರಕೃತಿಯ ಟಾನಿಕ್ ಆಹಾರಗಳಿಂದಲೇ ಓವಲ್ಟಿನ್ನನ್ನು ತಯಾರಿಸಲಾಗಿದೆ. ಇದಕ್ಕೆ ಬೆಳೆದ ಬಾರ್ಲಿ ಮೋಲ್ಟ್, ದನದ ದಪ್ಪ ಹಾಲು, ಕೊಕ್ಕೊಗಳನ್ನುಪಯೋಗಿಸಿದೆ. ಇದು ಪ್ರಕೃತಿಸಿದ್ಧವಾದ ಒಳ್ಳೇ ಟಾನಿಕ್ ಆಹಾರ. ಇದನ್ನು ತಯಾರಿಸುವಾಗ ಹಸ್ತಸ್ಪರ್ಶವಾಗುವುದಿಲ್ಲ.

OVALTINE

TONIC FOOD BEVERAGE

ನೆಮದುಳು, ನರ, ದೇಹವನ್ನು ವೃದ್ಧಿಪಡಿಸುತ್ತದೆ. ಬಜಾರದ ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸಿಗುತ್ತದೆ.

ಜೇಮ್ಸ್-ಜೇಮ್ಸ್ ರೈಟ್ 85ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಬೊಂಬಾಯಿ, ಮದ್ರಾಸ್ ರಂಗೂನುಗಳಲ್ಲಿ

OV/163

ಪಂಡಿತ ಬಿ. ಆರ್. ಗೋವಿಂದ ರಾಜುಲು ನಾಯುಡುಯವರ

ಮೇಹ ಸಂಜೀವನಿ ಎಣ್ಣೆ.

ಪತಿವ್ರತೆಯಾದ ತನ್ನ ಹೆಂಡತಿಯಲ್ಲಿಯೇ ಅತಿಸಂಭೋಗ ಮಾಡುವುದರಿಂದ ಅನರ್ಥಕರವಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟಸ್ತ್ರೀಯರಲ್ಲಿ ತಮ್ಮ ಪ್ರಿಯ ವಂಟ ಅಮೋಘ ವಸ್ತುವನು ಧಾರೆಯೆರೆದು ಹಾಳುಮಾಡಿಕೊಂಡು ಮೇಹವ್ರಣ, ಬಿಳುಪು, ಭಗಂದರ, ತೊಡೆವಾಳ, ಟಾಕಿ, ಮುಸುಕು, ಪರಮ, ಪವಿತ್ರ ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ನಿರಂತರವೂ ಬಾಧೆ ಪಡುತ್ತಿರುವ ನಮ್ಮ ದೇಶೀ ಯುವಕರಿಗೆ ಈ ಔಷಧವು ಅವಶ್ಯಕವೆಂದು ನವಜೀವನವನ್ನೇ ಕಲ್ಪಿಸತಕ್ಕದ್ದಾಗಿರುವುದು. ತಕ್ಕ ಔಷಧ ಬೇಗ ದೊರೆಯದ್ದರಿಂದ ದೇಹಕ್ಕೆ ಮರಿಸಿರುವ ಮೇಹರೋಗವು ತಲೆತಲಾಂತರಗಳವರೆಗೂ ಹಬ್ಬುತ್ತಾ ತನ್ನ ಕ್ರೌರ್ಯವನ್ನು ಆ ವಂಶದಲ್ಲಿ ನೆಲೆಗೊಳಿಸುವುದೆಂಬುದೇ ವೈದ್ಯ ಶಾಸ್ತ್ರಜ್ಞರ ತಾತ್ಪರ್ಯವಾಗಿದೆ. ಇಂತಹ ಮಹಾ ಭಯಂಕರ ಮೇಹರೋಗವೆಂಬ ವೃಕ್ಷಕ್ಕೆ ಕುಠಾರಪ್ರಾಯವಾದ ಈ ಔಷಧವನ್ನು ವೈದ್ಯ ಶಾಸ್ತ್ರಗಳ ಆಧಾರದಿಂದ ಮಹಾ ಮೂಲಿಕೆಗಳ ಸಂಯೋಜನದಿಂದ ನಾವು ನಿರ್ಮಿಸಿ, ಸಾವಿರಾರು ಜನರನ್ನು ಗುಣಪಡಿಸಿರುವ ಸರ್ಟಿಫಿಕೇಟುಗಳು ನಮ್ಮ ವೈದ್ಯಶಾಲೆಯಲ್ಲಿ ಸರ್ವರ ಅವಗಾಹನೆಗಾಗಿ ಇಟ್ಟಿರುತ್ತೇವೆ. ಈ ಮೇಹಸಂಜೀವಿನಿ ಎಣ್ಣೆಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸಿರುವ ಬಿಳುಪು, ಕೆಂಪು, ಹಸರು ಮುಂತಾದ ೩೦ ವಿಧ ಪ್ರಮೇಹ ರೋಗಗಳು, ಉರಿ ಮೂತ್ರ, ಮುಸುಕು ಹುಣ್ಣು, ಮೇಹ ಚಳುಕು, ಮೇಹ ಹಟ್ಟೆಗಳು, ಸಾಧಾರಣ ಮೇಹ ವಾಯು, ತೊಡೆವಾಳ, ಭಗಂಧರ, ಬಿಸಿ ಪವಿತ್ರ ಮುಂತಾದ ದಾರ್ಢ್ಯಗಳು ಬುಡದೊಂದಿಗೆ ನಾಶವಾಗುವುದಲ್ಲದೆ, ಈ ಎಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಪ್ರಾಪ್ತವಾದ ಅಕ್ರಮ ಋತುವಾಗುವಿಕೆ, ಋತುಶೂಲೆ, ಪ್ರದರ ಮುಂತಾದ ರೋಗಗಳು ನಿರ್ನಾಮವಾಗುವುವು. ಕ್ರಯ ಸೀಸೆ ೧ಕ್ಕೆ ರೂ ೩-೦-೦. ಎಲ್ಲೆಲ್ಲಿಯೂ ಏಜೆಂಟರು ಬೇಕಾಗಿದ್ದಾರೆ.

ಯೋಗ್ಯತಾ ಪತ್ರಗಳು:—೧ ನಿಮ್ಮ ಮೇಹ ಸಂಜೀವಿನೀ ತೈಲವನ್ನು ತರಿಸಿ ಉಪಯೋಗಿಸಿ ನೋಡಿದಲ್ಲಿ ತುಂಬಾ ಪ್ರಯೋಜನವು ಕಂಡು ಬಂತು. ಕೆ. ಎಸ್. ಗೋವಿಂದ ಶಾಸ್ತ್ರಿ, ಆಯುರ್ವೇದ ಭೂಷಣ, ಆರೋಗ್ಯಾಶ್ರಮ, ಕೊಡಿಯಾಲ್‌ಬೈಲ್ ಪೋಸ್ಟ್, ಮಂಗಳೂರು. ೨ ನಿಮ್ಮ ಪ್ರಮೇಹ ಸಂಜೀವಿನೀ ಎಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಿಗಳ ಕೃತಜ್ಞತೆಗೆ ಪಾತ್ರನಾಗಿರುವೆನು. ಉಗ್ಗಪ್ಪ ಕೊಡಿ ಈಶ್ವರ ಭಟ್ಟ, ವೈದ್ಯ, ಕೆಬಂಟ ಗ್ರಾಮ, ವಿಟ್ಲ ಪೋಸ್ಟ್, ದಕ್ಷಿಣ ಕನ್ನಡ.

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು, ಆಂಗ್ಲೋ ಭಾರತೀ ವೈದ್ಯಶಾಲಾ, ೪೯ ಹಲಸೂರು ಪೇಟೆ, ಬೆಂಗಳೂರು ಸಿಟಿ.

[illegible] ಜಟಾಪಟಿ!

[illegible]
[illegible]
[illegible]
[illegible]
ಮೂಂಜೆಯ ಗಡ್ಡ [illegible]
ಹಿಂದೂ ಮಹಾ ಸಭೆ ಹಿಂದಾಯ್ತು.
ಜವಹರ ಪಕ್ಷವು ಮುಂದಾಯ್ತು
ಮುದುಕರ ಮೋರೆಗೆ ಹಳ್ಳದರು
ಯುವಕರು ಗುಸ್ಸನು ಹಿಡಿದರು!
ಸಾಯ್ಬನು ಎಲ್ಲವ ನೋಡುವನು.
ಇದ್ದುದನೆಲ್ಲವ ಬರೆಯುವನು.

× × ×

ಮಹಾ ಸ್ವಾಮೀ ವಾಚಕರೇ, ಪಂಡಿತ ಜವಾಹರಲಾಲರು ಡಾ। ಮೂಂಜೆಯವರ ಹಿಂದೂ ಮಹಾಸಭೆಯನ್ನು ಟೀಕಿಸಿದುದಕ್ಕಾಗಿ ಗಲಾಟೆಯಾರಂಭವಾಗಿದೆ ಎಂದು ಪ್ರಕಟವಾಗಿದೆಯಷ್ಟೆ! ಈಗ ಈ ಗಲಾಟೆಯು ಜಟಾಪಟಿಯ ರೂಪದಲ್ಲಿ ಬಂದು ನಿಂತಿದೆ. ಇದನ್ನು ನೋಡಿ ಸಾಯ್ಬನು ಈ ಮೇಲಿನ ಪದಾ ಹಾಡಿದನು.

× × × ×

"ಹಿಂದೂ ಮಹಾ ಸಭೆಯೆಂದರೆ ಹಿಂದೂ ಮುಸಲ್ಮಾನ ದ್ವೇಷವನ್ನು ಹುಟ್ಟಿಸುವ ಕುಂಪಣಿ. ಅದರ ಮುಖಂಡರೆಲ್ಲ ಅತ್ರಂ. ಮುದುಕರು" ಎಂದು ಜವಾಹರಲಾಲರು ಹೇಳಿರುವ ಮಾತುಗಳನ್ನು ಕೇಳಿ ಡಾ। ಮೂಂಜೆಯವರ ಸಣ್ಣ ಗಡ್ಡವು ಕೋಪದಿಂದ ಬಿದ್ದು ಹೋದಂತಾಗಿದೆ. ಪಂಡಿತ ಮಾಲವೀಯರ ಬಿಳಿ ತಲೆಯು ಕೆಂಪಗಾಗಿದೆ. ಮೂಂಜೆ ಜವಾಹರ ಕಟಾಕುಟಿ ಎಲ್ಲಿ ನಿಲ್ಲುತ್ತದೆಂದು ನೋಡೋಣ.

× × × ×

"ಈ ಜವಾಹರ್‌ಲಾಲ್ ನೋಡಿ ಮೌಲಾನಾ ಶೌಕತಾಲಿಯವರ ಮಾತು ಕೇಳಿ ಈ ಅಲಿಯಂತೆ ಹಿಂದೂ ಮಹಾಸಭೆಯ ಮೇಲೆ ಬಿದ್ದು ಅದನ್ನು ನಿಂದಿಸುತ್ತಾನೆ. ಜವಾಹರಲಾಲ ತರುಣ, ಅಲಿಯ ಮಾತಿನಂತೆ ಕುಣಿದ ಈ ಜವಹರಗೆ ನನ್ನ ಅನಂತ ವಂದನೆಗಳು. ಅವನ ಮಾತಿಗೆ ಬೆಲೆಯಿಲ್ಲ—ಬಿಡಿ" ಎಂದು ಡಾ। ಮೂಂಜೆಯವರು ನಾಗಪುರದಲ್ಲಿ ಹೇಳಿದರು.

× × × ×

ಈ ಮೂಂಜೆಗೆ ಉತ್ತರವಾಗಿ ಲಾಹೋರಿನ ೩೪ ಪ್ರಮುಖ ಕಾಂಗ್ರೆಸ್ ಮಂದಿಗಳು ಡಾ। ಸತ್ಯಪಾಲ, ಲಾಲಾ ಶ್ಯಾಮಲಾಲ, ಡಾ। ಗೋಪಿಚಂದ, ಲಾಲಾ ದುನಿಚಂದ್ ಮತ್ತು ಶ್ರೀ ಕೇದರ್‌ನಾಥ ಸೈಗಲ್ ಮೊದಲಾದವರ ಸಹಾಯದಲ್ಲಿ ಒಂದು ಸಭೆ ಸೇರಿ, "ಪಂಡಿತ ಜವಾಹರಲಾಲರು ಭಾರತ ಕಂಠಮಣಿ. ಅವರು ನಿಜವಾಗಿಯೂ ಸದ್ಗುಣಗಳ ಖನಿ. ಹಿಂದೂ ಮಹಾ ಸಭೆಯೆಂದರೆ ರಾಷ್ಟ್ರಪ್ರೇಮರಹಿತ ಮುದುಕರ ಗುಂಪು. ಯುವಕರೂ ಹುಟ್ಟದಿಲ್ಲದವರೂ ಇದನ್ನು ಖಂಡಿಸಬೇಕು. ಸ್ವಾರ್ಥದಿಂದ ತುಂಬಿದ್ದ ಸರಕಾರದ ಆಶ್ರಯವನ್ನು ಸೆರಗೊಡ್ಡಿ ಬೇಡುವ ಕಂಪಣಿ ಇದು" ಎಂದು ಠರಾವು ಮಾಡಿಕೊಂಡಿರುವರು. ಪಾಪ! ಮೂಂಜೆಗಳ ಮುಂದಾಳಿಗೆ ತಾಗುವ ಬಾಣ!

× × × ×

"ಎಲ್ಲಾ ಬಿಟ್ಟು ಮಗ ಬಂಗಿ ನೆಟ್ಟ" ಎಂಬ ಗಾದೆ ಕೇಳಿಲ್ಲವೇ ನೀವು? ಆ ಕಥೆಯಾಯಿತು ಕೇಳಿ ಈಗ! 'ಸ್ವರಾಜ್ಯ ಸ್ವರಾಜ್ಯ' ಎಂದು ಲಂಡನಿಗೆ ಹೋದ ಮೂಂಜೆಗಳೂ, "ಸ್ವಾತಂತ್ರ್ಯ ಸ್ವಾತಂತ್ರ್ಯ" ಎಂದು ಜೈಲಿಗೆ ಹೋದ ಜವಾಹರಲಾಲರೂ ಎಲ್ಲಾ ಮರೆತು ಕಲಿ ಕಾದಾಡಲಾರಂಭಿಸಿರುವರು. ಶಹಭಾಸ್ ಹಿರಿಯ ಮೂಂಜೆಗಳೇ, ಶಹಭಾಸ್! ಕಿರಿಯರ ಮೇಲೆ ಹಾಯ್ದುದು ಒಳ್ಳೆಯದೇ ಆಯಿತು. ಬ್ರಿಟಿಷರಾರ ಮೇಲಾದರೂ ಹಾಯಬೇಡಿ—ನಿಮ್ಮ ಕೊಂಬುಗಳು ಮುರಿದಾವು, ಜಾಗ್ರತೆ!

× × × ×

ಮನುಷ್ಯನು ಮುಪ್ಪಿನಲ್ಲಿ ಬಯಸುವುದು ವೈರಾಗ್ಯವಂತೆ! ಆದರೆ ನಮ್ಮ ಡಾಕ್ಟರ ಮೂಂಜೆಯವರು ಸೌಭಾಗ್ಯವನ್ನೇ ಬಯಸುವಂತಿದೆ! ಮುದುಕರಿಗೆ ಏಕಯ್ಯ ರಾಜಕೀಯ!

× × × ×

ಹಿಂದೂದೇಶದ ಗತಿ ನೋಡಿ!—ಒಂದು ಕಡೆಯಲ್ಲಿ ಕಾಂಗ್ರೆಸ್ಸಿಗರಿಗೂ ಕಾಂಗ್ರೆಸ್ ಸ್ವರಾಜ್ಯ ಪಾರ್ಟಿಯವರಿಗೂ ಜಟಾಪಟಿ! ಇನ್ನೊಂದು ಕಡೆಯಿಂದ ಹಿಂದೂ ಮಹಾಸಭೆಯ ಮುದುಕರಿಗೂ ತರುಣರಿಗೂ ಜಟಾಪಟಿ! ಮತ್ತೊಂದು ಕಡೆಯಿಂದ ಸನಾತನಿಗಳಿಗೂ ಸುಧಾರಕರಿಗೂ ಕಟಾಕುಟಿ! ಆದರೂ "ಒಗ್ಗಟ್ಟು! Unity" ಎಂಬ ಮಹಾ ಬೊಬ್ಬೆ! ಆಗಲಿ! ಹೋಗಲಿ! ಬೀಳಲಿ! ಬಾಳಲಿ! ಕೇಳಲಿ! ಕಾಳಲಿ! ನೀಳಲಿ—ಕೊನೆಗೆ ಬೀಳಲಿ!!!

×

ಜೈ ಹಿಂದೂ ಮಹಾಸಭೆಯ ಮುದುಕರ ಗುಂಪಿಗೇ!
ಜೈ ಹಿಂದೂ [illegible] ರಕ್ತ [illegible]!
ಜೈ [illegible]
ಜೈ [illegible] ಜೈ!
ಜೈ [illegible]

ಸಾಯ್ಬ.

Canara Bank Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office—**Bunder Mangalore** Local Office **City & Bunder.**

BRANCHES— Bombay, Cochin, Calicut Ernaculam, Alleppey, Chikmagalur, Ganguli, Coondapoor, Udipi, Karkal Puttur, Kasaragod, & Buntwal Out-agency.

Interest is allowed on Current Fixed and Saving Bank Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

ಮಂಗಳೂರು, 13—7—33

A Madhava Pal,
Secretary

East & West Insurance Company Ltd.,

(Incorporated in India 1913)

Head Office—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders
&
Wide popularity,
Economic Management,
Sound investment
That is why you should select 'East & West"
Ere you invest in the rest

Interim Bonus
Declared
Rs 15 Per 1000
On whole life &
Endowment Policies

For particulars and Agency terms apply to —
H S Nayak, *Organiser Secretary* for West Coast, Coorg & Mysore,
"Harbour View" Mangalore.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾ

1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಶುದ್ಧಿಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ ಕೊಚ್ಚಿಯ ಮಹಾ ರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ತೆಳುವಾದ ಚರ್ಮವೂ ಬಾಧಕ ಹೊಂದುವುದಿಲ್ಲ ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವ ತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖತ್ರಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ

ಈ ಜಿಲ್ಲೆಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U. N. & CO.

Choukhamba, Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ 5 ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಸೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾಲೀ ಸೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಸಾಲಿಗ್ರಾಮ ಮಿಶ್ರನ್, ಮಡಿ ಧಾವಳಿ ಶಾಲು ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು

ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬನಾರಸ್ (ಕಾಶೀ)

— ಗಡಿಯಾಳ ಪ್ರಕಟಿ —

ದದ್ರು ವಿನಾಶಕ ಮುಲಾಮು—ಗಜಕರ್ಣ, ಗಜ್ಜಿ, ಇಸಬ ನಾಯಟ ಮುಂತಾದ ಎಲ್ಲಾ ಕೃತಿರೋಗದ ಮೇಲೆ ವಂದೇ ರಾಮಬಾಣ ಔಷಧಿ, ೨೪ ತಾಸಿನಲ್ಲಿ ಗುಣಬರುತ್ತದೆ ಸಾವಿರಾರು ಜನರು ಶಿಫಾರಸು ಮಾಡಿರುತ್ತಾರೆ ಕಿಮ್ಮತ್ತು ಡಬ್ಬಿಗೆ ಆಣೆ ೧—೪—೦ ೧೨ರ ಮೇಲೆ ಟೈಂಪೀಸು ೧೮ರ ಮೇಲೆ ಅಲಾರ್ಮ್ ಟೈಂಪೀಸು, ೨೪ರ ಮೇಲೆ ರಾಸ್ಕೋಪ ೩೬ರ ಮೇಲೆ ರಿಸ್ಟ್‌ವಾಚ್ ಪ್ರಕ್ಟಿಸಿಗುವುದು ಕೂಡಲೇ ಬರೆಯಿರಿ ಪತ್ರವ್ಯವಹಾರ ಮುಂತಿ ಯಾ ಇಂಗ್ಲಿಷಿನಲ್ಲಿ

King George Coronation,
BOBMAY 4
16—6 33 (Head Office—Kotah Rajputana)

ಬೇಕಾಗಿದೆ!

ಇಂಗ್ಲಿಷ್ ಮತ್ತು ಕನ್ನಡ ಡಿಪಾರ್ಟ್‌ಮೆಂಟಿಗೆ ಕಂಪೋಜಿಟರು ಬೇಕಾಗಿದ್ದಾರೆ ಯೋಗ್ಯತೆಗೆ ತಕ್ಕ ಸಂಬಳವು ದೊರೆಯುವುದು

ಕೂಡಲೇ ಅರ್ಜಿಗಳನ್ನು ಬರೆದುಕೊಳ್ಳಿರಿ —

ಮೆನೇಜರ್
ಶಾರದಾ ಛಾಪಖಾನೆ ರಥಬೀದಿ ಮಂಗಳೂರು

1934

Sharada Diaries

Ready! Ready!

SMALL SIZE—BIG SIZE-

ಶಾರದಾ ಡೈರಿಗಳು ಸಿದ್ಧವಾಗಿವೆ!

ಸಣ್ಣ ಸೈಜು— —ದೊಡ್ಡ ಸೈಜು

Sharada Press Mangalore

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.

[illegible]

[illegible] ಭಂಡಾಯಗಾರರ ಭಯಂಕರ ಅತ್ಯಾಚಾರ

ರೈಚೂರಿನಲ್ಲಿ ಭೂಕಂಪ — ಪರ್ವತದ ತುಂಡು ಹಾರಿತು

[illegible] ತಾ. ೨೮ನೇ ದಿನ ೬೦೦ [illegible] ಯುನೈಟೆಡ್ ಎಕ್ಸ್‌ಪ್ರೆಸ್ ಹಡಗಿಗೆ [illegible] ಕಂದಿಗಳಿಂದ ಒಳಗೆ ಹಾರಿ [illegible] ಭೀಷಣವಾಗಿ ಭಿತ್ತಿ ಒಡೆದು ಹುಡಿ [illegible] ಎಂಬಲ್ಲಿ ೪೦ ಮೈಲು ದೂರದಲ್ಲಿ [illegible] ಹಡಗೂ ಹಾರಿತು. ವಿಚಾರಿಸಲಾಗಿ, ಭಂಡಾಯಗಾರರು ಕೈಲು ಕಂದಿಗಳ ಮೂಲೆಗೆಸೆದಿಟ್ಟು ಅವುಗಳನ್ನು [illegible] ಬಿಟ್ಟರೆಂದೂ, ಅದರಿಂದಾಗಿ ಕೈಲುಗಳು ಶಕ್ತಿಯಿಂದ ಹಾರಿ ಬಿದ್ದವೆಂದೂ ತಿಳಿದು ಬಂದಿತು. ಕೈಲು ಬಿದ್ದು ಅನೇಕರು ಕ್ಷಣ ಮಾತ್ರದಲ್ಲೇ ಮರಣ ಹೊಂದಿದರು. ಜೀವಂತವಾಗಿ ಉಳಿದ ಕೆಲಕೆಲವರು ಎದ್ದು ಪಟ್ಟಣ ಮಾರ್ಗವಾಗಿ ಹೊರಡುತ್ತಿದ್ದಾಗ ಭಂಡಾಯಗಾರರು ಅವರೆಲ್ಲರನ್ನು ಗುಂಡಿಕ್ಕಿ ಕೊಂದರು; ಅವರಲ್ಲಿದ್ದುದನ್ನೆಲ್ಲ ದೋಚಿಕೊಂಡು ಓಡಿದರು. ಅನೇಕ ಸ್ತ್ರೀಪುರುಷರನ್ನೆತ್ತಿಕೊಂಡು ಹೋಗಿ ಭಂಡಾಯಗಾರರು ಇರಿಸಿಕೊಂಡಿರುವರಾಗಿಯೂ ಗೊತ್ತಾಗಿದೆ. ಸವಿವರ ವಾರ್ತೆಯು ಇನ್ನೂ ಬಂದಿಲ್ಲವಾದರೂ ೬೦೦ ಜನರಲ್ಲಿ ಉಳಿದು ಹೊರ ಬರುವವರು ಬರೇ ಅಲ್ಪ ಮಂದಿಗಳಾಗಬಹುದೆಂದೂ ಊಹಿಸಲಾಗಿದೆ. ಸ್ಥಳೀಕ ಅಧಿಕಾರಿಗಳು ಅತ್ತ ತೆರಳಿದ್ದು ತನಿಖೆ ನಡೆಸುತ್ತಿರುವರು. ಈ ಭಂಡಾಯಗಾರರನ್ನು ಹಿಡಿಯಲು ಚೀನಾ ಸರಕಾರವು ಅವಸರದ ಏರ್ಪಾಡುಗಳನ್ನು ಮಾಡುತ್ತಲಿದೆ. ಚೀನೀಯ ಡಕಾಯಿತರೋ, ಕ್ರಾಂತಿಕಾರರೋ ಅಥವಾ ಅನ್ಯ ದೇಶಿಗರೋ ಯಾರು ಈ ಭಯಂಕರ ಅತ್ಯಾಚಾರವನ್ನು ಮಾಡಿರುವರೆಂದು ಇನ್ನೂ ತಿಳಿದಿಲ್ಲ.

ಚೀನಾದಲ್ಲಿ ಸಮುದ್ರ ಕಳ್ಳರು ಹಾವಳಿ ಮಾಡಲು ತೊಡಗಿರುವರು. ಇವರ ಹಾವಳಿಯನ್ನು ತಿಳಿದು ಚೀನಾ ಪೋಲೀಸರು ಸಮುದ್ರಗಳಲ್ಲಿನ ಎಲ್ಲಾ ಸ್ಟೀಮರುಗಳಿಗೆ ಬ್ರೋಡ್‌ಕಾಸ್ಟ್ ವಾರ್ತೆಯನ್ನು ಕಳುಹಿಸಿ ಎಚ್ಚರಿಸಿದರು. ಆದರೂ ಹೊಂಗ್‌ಕೊಂಗಿನಿಂದ ೩೦ ಮೈಲು ದೂರ ಚೀನಾ ಸಮುದ್ರ ಕಳ್ಳರು "ಕಮಾಂಡೆಂಟ್" ಎಂಬ ಸ್ಟೀಮರನ್ನು ಹಿಡಿದು ಹತ್ತಿ ೪ ಮಂದಿ ಐಶ್ವರ್ಯವಂತ ಚೀನೀಯರನ್ನು ಎಲ್ಲಿಗೋ ಎತ್ತಿ ಒಯ್ದರು. ೧೦೦೦ ಸ್ಟರ್ಲಿಂಗ್‌ಗಳನ್ನು ಲೂಟಿ ಮಾಡಿದರು. ಚಿಲಾಂಗ್ ಎಂಬಲ್ಲಿಗೆ ಸ್ಟೀಮರನ್ನು ಕೊಂಡೊಯ್ದು ಅದರ ಸಾಮಾನುಗಳನ್ನೆಲ್ಲ ಕೆಳಗಿಳಿಸಿ ಸ್ಟೀಮರನ್ನು ಜನರ ಸಮೇತವಾಗಿ ದಾರಿ ತಪ್ಪಿಸಿ ಯಾವುದೋ ಸಮುದ್ರದಲ್ಲಿ ಬಿಟ್ಟು ಬಿಟ್ಟರು. ಅಧಿಕಾರಿಗಳು ಈ ಬಗ್ಗೆ ಸಾಹಸಪೂರ್ವಕವಾಗಿ ವಿಚಾರಣೆ ನಡೆಸುತ್ತಿರುವರು.

ರೈಚೂರು ಜಿಲ್ಲೆಯ ಗಂಗಾವತಿಯಿಂದ ಬಂದಿರುವ ವಾರ್ತೆಯೊಂದರಿಂದ ಗೊತ್ತಾಗುವಂತೆ ತಾ. ೩೧ನೇ ದಿನ ಪಟ್ಟಣವೆಲ್ಲಾ ಭೂಕಂಪವಾಯಮಾನವಾಯಿತೆಂದೂ ಯಮಿಗುಡ್ಡ ಎಂಬ ಬಳಿಯ ಪರ್ವತ ಒಂದರಿಂದ ದೊಡ್ಡ ಪಾರ್ಶ್ವವೊಂದು ಹಾರಿ ಪೇಟೆಗೆ ಬಿದ್ದಿತೆಂದೂ ಗೊತ್ತಾಗಿದೆ. ಯಾರೂ ಜುಂಗೊಂಡಿರುವುದಿಲ್ಲ. ಇದಕ್ಕೆ ಕಾರಣವೇನೆಂದೂ ಗೊತ್ತಾಗಿರುವುದಿಲ್ಲ. ಸಂಪೂರ್ಣ ವಾರ್ತೆಯು ಹಸ್ತಗತವಾಗಿರುವುದಿಲ್ಲ.

ಶಾಂತಿ ನಿಕೇತನದಲ್ಲಿರುವ ತನ್ನ ವಿಶ್ವಭಾರತಿ ವಿದ್ಯಾಲಯಕ್ಕೆ ವಂತಿಗೆ ವರಾಡಗಳನ್ನು ಮುಂಬಾಯಿಯ ಜನತೆಯಿಂದ ಪಡೆಯುವುದಕ್ಕಾಗಿ ರವೀಂದ್ರನಾಥ ಠಾಗೂರರು ಕಳೆದ ವಾರ ಮುಂಬಾಯಿಗೆ ತಲಪಿದರು. ಅವರನ್ನು ಶ್ರೀಮತಿ ಸರೋಜಿನಿ ದೇವಿಯವರೇ ಮೊದಲಾದ ಸಾವಿರಾರು ವಿದ್ಯಾಪ್ರೇಮಿಗಳು ಸ್ವಾಗತೀಕರಿಸಿದರು. ಶ್ರೀ ರವೀಂದ್ರನಾಥರು ವಿಶ್ವಕವಿ, ವಿಶ್ವಪ್ರೇಮಿ, ನೋಬೆಲ್ ಪ್ರೈಸ್ ಪಡೆದವರು. ಹಿಂದೂಸ್ಥಾನದ ಅಗ್ರಗಣ್ಯರಲ್ಲಿ ಆದರ್ಶಪುರುಷರು. ರವೀಂದ್ರನಾಥರು ವಿಶ್ವದ ಜನಾಂಗವನ್ನು ಪ್ರೀತಿಸುವವರು. ಅವರು ವಿಶ್ವ ಕವಿಗಳೂ ಅಷ್ಟೇ ವಿದ್ಯಾಪ್ರೇಮಿಗಳು. ಅಂತರ್ರಾಷ್ಟ್ರೀಯ ವಿದ್ಯಾಶಾಲೆಯಾದ ವಿಶ್ವಭಾರತಿಯನ್ನು ಶಾಶ್ವತಗೊಳಿಸಬೇಕಾಗಿ ಅವರು ದ್ರವ್ಯ ಸಹಾಯವನ್ನು ಬೇಡುತ್ತಿರುವರು. ಅವರ ಈ ಸಾಧನೆಯು ಫಲಕಾರಿಯಾದೀತೆಂದು ತಿಳಿಯಲಾಗಿದೆ.

ತಾ. ೨೬ನೇ ದಿನ ಸಿಂಧಿಯ ಹೈದರಾಬಾದಿನಲ್ಲಿ ಡಾ| ಚೊಯಿತ್ರಾಮರವರ ಅಧ್ಯಕ್ಷತೆಯಲ್ಲಿ ಸಿಂಧ್ ಕಾಂಗ್ರೆಸ್ ಕಮಿಟಿಯ ಮಹಾಸಭೆಯೊಂದು ಜರಗಿತು. ಸುಮಾರು ೪೦ ಮಂದಿ ಸಿಂಧ್ ಪ್ರಮುಖರು ಸಭೆಗೆ ಬಿತ್ತೈಸಿದ್ದರು. ಅನೇಕರು ಅನೇಕಾನೇಕ ಕಾರಣಗಳಿಂದ ಸಭೆಗೆ ಬರಲಾರದಾದರು. ಸಭಾ ಕಾರ್ಯವು ಜರಗಿ ೧೨ ಮಂದಿಗಳು ಪ್ರತಿಕೂಲವಾಗಿ ೮ ಮಂದಿಗಳು ಅನುಕೂಲವಾಗಿ ಕಾಯಿದೆಭಂಗ ಚಳವಳಿ ಮುಂದರಿಸಲ್ಪಡಬಾರದೆಂದು ಠರಾವು ಮಂಜೂರಾಯಿತು. ಎರಡನೆಯದಾಗಿ ಸರ್ವ ಸಮ್ಮತದಿಂದ, ಅಖಿಲ ಭಾರತ ಕಾಂಗ್ರೆಸ್ ಸಭೆಯು ಜರಗಬೇಕೆಂಬ ಠರಾವಾಯಿತು. ಶಾಸನ ಭಂಗ ಚಳವಳದ ಕುರಿತಾಗಿ ಕಠಿಣ ವಾಗ್ಯುದ್ಧವಾಯಿತು. ಸಭೆಯು ಅಲ್ಲೇ ತೀರುವುದೆಂದು ಶಂಕೆಯಾಯಿತು. ಕೊನೆಗೆ ಶಾಂತತೆಯುಂಟಾಯಿತು. ಇನ್ನೊಂದು ಠರಾವು ಮಂಜೂರಾಗಿ ಗಾಂಧೀಜಿಯವರ ದೇಶ ಸೇವೆ ಜನ ಸೇವೆಯನ್ನು ಆ ಸಭೆಯು ಅಭಿನಂದಿಸುತ್ತದೆಂದೂ ಗಾಂಧೀಜಿಯವರು ಈಗಿನಂತೆ ಮುಂದಕ್ಕೆ ದೇಶದ ಧುರೀಣತ್ವದಿಂದಿರಬೇಕೆಂದೂ ಸರ್ವಾನುಮತದಿಂದ ಠರಾವಾಯಿತು.

ವಿಶ್ವಕವಿ ರವೀಂದ್ರನಾಥ ಠಾಗೂರರವರು.

ಈ ತಿಂಗಳ ಆದಿಯಲ್ಲಿ ಪೆಲೆಸ್ತೀನ, ಜೆರೂಸಲೇಮಿನಲ್ಲಿ ನಡೆದಂತೆ ಅತ್ಯಾಚಾರಗಳ ಸಂಬಂಧವಾಗಿ ಪೆಲೆಸ್ತೀನದಲ್ಲಿ ಹೈ ಕಮಿಶನರಿಗೆ ಜೆರೂಸಲೇಮಿನ ಮೇಯರರು ಒಂದು ಮನವಿಯನ್ನು ಮಾಡುತ್ತಾ ಅನ್ಯ ಜನಾಂಗಿಕರಾದ ಯಹೂದ್ಯರು ಜೆರೂಸಲೇಮ್ ಪೆಲೆಸ್ತೀನದಲ್ಲಿ ವಾಸಿಸುತ್ತಿರುವುದರಿಂದಲೂ ಬ್ರಿಟಿಷ ಆಳ್ವಿಕೆಯು ಸಮರ್ಪಕವಲ್ಲವಾದುದರಿಂದಲೂ ದೇಶದ ವಾತಾವರಣವು, ಅಪಾಯಕರವೂ, ಪ್ರಕ್ಷುಬ್ಧವೂ ಆಗಿದೆ ಎಂದು ತಿಳಿಸಿದರು. ಅಲ್ಲದೆ ದೇಶದ ಆರ್ಥಿಕ ಸ್ಥಿತಿಯು ಸುಧಾರಿತವಾಗುವಂತೆಯೂ ಜನರಲ್ಲಿನ ನಿರುದ್ಯೋಗತೆಯೂ ಹೋಗುವಂತೆಯೂ ಸರಕಾರವು ಸಹಕರಿಸಬೇಕೆಂದೂ ಕೇಳಿಕೊಂಡರು. ಈ ಮನವಿಗೆ ಹೈ ಕಮಿಶನರರು ಉತ್ತರ ಕೊಟ್ಟು, ಅರಬರ ಸಂಕಷ್ಟಗಳನ್ನು ಕಣ್ಣು ಮುಚ್ಚಿ ತೆರೆಯುವುದರೊಳಗೆ ಹೋಗಲಾಡಿಸಲು ತಾನು ಅಸಮರ್ಥನೆಂದೂ, ಆ ಬಗ್ಗೆ ಹೆಚ್ಚಿನ ಹಿಚ್ಚಿಯಾಗಿ ತಾನು ಪ್ರಯತ್ನಿಸುವನೆಂದೂ ಹೇಳಿದರು. ಸ್ಥಳೀಯ ದೇಶದ ಸ್ವತಂತ್ರ ಸರಕಾರವನ್ನು ಹೊಂದುವುದಕ್ಕೆ ತಾನು ಅದಮ್ಯ ಸ್ಥೈರ್ಯದಿಂದ ಯತ್ನ ಮಾಡುವೆನೆಂದೂ, ಹಾದಿ ಕೊಲೆ ದೊಂಬಿ ಅತ್ಯಾಚಾರಗಳ ತನಿಖೆಗಾಗಿ ಒಂದು ವಿಚಾರಣಾ ಸಮಿತಿಯ ವ್ಯವಸ್ಥೆಯನ್ನು ತಾನು ಮಾಡುವೆನೆಂದೂ ಹೈ ಕಮಿಶನರರು ಹೇಳಿರುವರು. ಸ್ಟ್ರೈಟ್ಸ್ ಸೆಟ್ಲ್‌ಮೆಂಟಿನ ಮಾಜಿ ಚೀಫ್ ಜಸ್ಟಿಸ್‌ರಾದ ಸರ್ ವಿಲಿಯಂ ಮುರಿಸನರು ಈ ವಿಚಾರಣಾ ಸಮಿತಿಗೆ ಅಧ್ಯಕ್ಷರಾಗುವರೆಂದು ಪ್ರಕಟವಾಗಿದೆ. ಎಲ್ಲಾ ತನಿಖೆಯಲ್ಲಿ ಜನರೂ ಪೋಲೀಸರೂ ಸಹಾಯವೀಯಬೇಕಾಗಿ ಕಮಿಶನರರು ಕೇಳಿಕೊಂಡಿರುವರು.

* * **

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 351/1931. R. E. P. 558/1933.

ದೇವಿದ್ಯಾ—ಲಕ್ಷ್ಮಣಯ್ಯನ ಹೆಂಡತಿ, [illegible] ಗ್ರಾಮು—ಅರ್ಜಿದಾರಳು.

ಮತ್ತು

1. ಪಾಂಡುರಂಗರಾವ್. 2. ಶಿವರಾಮ ರಾವ್— ಶೀರೂರು ವೆಂಕಟ್ರಾಯರ ಮಕ್ಕಳು. 3. ದುರ್ಗಾಬಾಯಿ— ನಾಡ್ಕರ್ಣಿ ಕೃಷ್ಣ ರಾಯರ ಹೆಂಡತಿ. 4. ರಾಧಮ್ಮ ಯಾನೆ ಪದ್ಮಾವತಿ—ಶೀರೂರು ವೆಂಕಟ್ರಾಯರ ವಿಧವೆ. 5. ಎಚ್ಚ ಹೇರ್ಳೆ—ಪಡಿಯಪ್ಪ ಹೇರ್ಳೆರ ಮಗ. 6. ಪಟ್ಟ ಸೆಟ್ಟಿ ಅಣ್ಣಪ್ಪ ಸೈ—ರಂಗ ಪೈ ಮಗ. 1, 2, 4, 6ನೇ ಎದ್ರಿರು ಬ್ರಹ್ಮಾವರ ಕಸಬೆಯಲ್ಲಿಯೂ, 3ನೇ ಎದ್ರಿಳು ಮೈಸೂರಲ್ಲಿ ನಂಬ್ರ 248 ಧಂಡಿ ಕೆರೆಯಲ್ಲಿಯೂ 5ನೇ ಎದ್ರಿಯು ಪಾರಂಪಳ್ಳಿ ಗ್ರಾಮದಲ್ಲಿಯೂ ಇರುತ್ತಾರೆ— ಎದ್ರಿರು.

ಇವರೊಳಗೆ

ಸದ್ರಿ ಕ್ರಮ ನಂಬ್ರ 351/1931ನೇ ಡಿಕ್ರಿಯಿಂದ ಕಾಣುವ ಸ್ಥಿರಾಸ್ತಿಗಳ ಪಾಲಾಟದ ಬಗ್ಗೆ ಅರ್ಜಿದಾರಳು ಹಾಜರು ಪಡಿಸಿರುವ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ಅಮಲ್‌ಜಾರಿಯನ್ನು ತಾರೀಕು 16–12–1933ಕ್ಕೆ 1 ಮತ್ತು 4ನೇ ಎದ್ರೀರಿಗೆ ಆಕ್ಸರು ನೋಟೀಸು ಬಗ್ಗೆ ಇಟ್ಟಿರುತ್ತದೆ. ಮತ್ತು ಸದ್ರಿ ಅಮಲ್‌ಜಾರಿಯಲ್ಲಿ ಅಗತ್ಯ ಸ್ಥಿರಾಸ್ತಿ ಏಲಂನಲ್ಲಿ ಅರ್ಜಿದಾರಳು ದರಖಾಸ್ತಿಗೆ ಹಿಡಿಯುವಂತೆಯೂ ಏಲಂ ಖಾಯಂ ಡಿಕ್ರಿ ಐವಜಿನಲ್ಲಿ ಮುಚ್ರೆ ಮಾಡುವಂತೆಯೂ ಪರ್ಮಿಶನ್ ಕೊಡಿಸಬೇಕಾಗಿ ಅರ್ಜಿದಾರಳು ದಾಖಲು ಮಾಡಿರುವ R. E. A. 642/1933ನೇ ಅರ್ಜಿಯು ತಾ. 5-1-1934ಕ್ಕೆ 1–3 ಮತ್ತು 4ನೇ ಎದ್ರಿರಿಗೆ ಆಕ್ಸರು ನೋಟೀಸು ಬಗ್ಗೆ ಇಟ್ಟಿರುತ್ತದೆ. ಸದ್ರಿ 1–3 ಮತ್ತು 4ನೇ ಎದ್ರಿರು ತಮಗೇನಾದರೂ ಆಕ್ಷೇಪಣೆಗಳಿದ್ದಲ್ಲಿ ಸದ್ರಿ ತಾರೀಕುಗಳಲ್ಲಿ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಹೇಳಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅವರ ಗೈರು ಹಾಜರಿಯಲ್ಲಿ ಸದರಿ ಅರ್ಜಿಗಳು ತೀರ್ಮಾನವಾದೀತೆಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತದೆ.

ಉಡುಪಿ
29–11–1933.

K. L. Narayan Rao,
Counsel for Petitioner.

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳ್ವಿಕೆ ಮತ್ತು ಪ್ರಾಶಸ್ತ್ಯದ ಕಡೆ ಗಮನವನ್ನೀಯುತ್ತೀರಿ. ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ಬಸವ ಒಳಗೆ ನೀರು ಹಾಳಾಗದೆ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರಲ್ಲಿನ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಏಜೆಂಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೇಡ್ಸ್ [illegible] ಮಂಗಳೂರು ದ. ಕ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಸುದ್ದಿವಿಚಾರಗಳು:—

ಜಮೀನುದಾರರಿಗೆ ಬುದ್ಧಿವಾದ, ಕನ್ನಡ ಪ್ರಾಂತ್ಯ, ವಿದ್ಯುಚ್ಛಕ್ತಿಯೂ ವಿದ್ಯಾಭ್ಯಾಸವೂ, ಕೀರ್ವೆ ಇಳಿಸಬೇಕು ಸ್ವಲ್ಪ ಕೆಳವರ್ಗ, ಕಚೇರಿಗಳಲ್ಲಿ ಹಿಂದೀ ಭಾಷೆ, ಬರ್ಮದಲ್ಲಿ ಘಾತಕಿಗಳು, ಮುಸ್ಲಿಂ ಲೀಗ್ ಸಭೆ.

ಜಮೀನುದಾರರಿಗೆ ಬುದ್ಧಿವಾದ

ಸಂಯುಕ್ತ ಪ್ರಾಂತದ ಗವರ್ನರರಾಗಿ ಬದಲಿ ಹೋಗುವ ಹೇಗ್‌ರವರು ಸವಾಬರದ ಜಮೀನುದಾರರ ಬಿನ್ನವತ್ತಳೆ ಕೇಳಿ ಅವರಿಗೆ ಕೆಲವು ಬುದ್ಧಿವಾದ ಹೇಳಿರುವರು. "ಇನ್ನು ಪ್ರಜಾಸತ್ತೆಯು ಹೆಚ್ಚುತ್ತ ಬರುವಂತೆ ಜಮೀನುದಾರರ ವಿನಾಶವಾಗುವುದು, ಅವರ ಹೆಸರೇ ಪುರಾಣಗಳಲ್ಲಿ ಸಿಗಬಹುದು ಎಂಬಂತೆ ಮಾತಾಡುವ ನಿರಾಶಾವಾದವನ್ನು ನಂಬಬಾರದು. ಜಮೀನುದಾರನ ಹಿಂದಣ ಗೌರವ, ಅವನ ಪರಂಪರೆಯು ಕ್ರಮಗಳು, ಅವನ ಯೋಗ್ಯತೆ ಮೊದಲಾದುವು ಮುಂದೂ ಇಂದಿಯ ಇತಿಹಾಸದಲ್ಲಿ ಉತ್ತಮ ಸ್ಥಾನವನ್ನು ಪಡೆಯಲೇಬೇಕು. ಆದರೆ, ಜಮೀನುದಾರರು ಪುರಾಣ ಪುರುಷರಂತಿರದೆ, ಈ ಯುಗಕ್ಕೊಪ್ಪುವ ಸುಧಾರಣೆಗಳಿಗೆ ಕೈಯಿಕ್ಕಿದರಾದರೆ, ಜನತೆಯೊಡನೆ ಸಮ್ಮಿಳಿತರಾಗಿ ಬಾಳಲು ಕಲಿತರೆ, ಅವರು ಯಾವ ಕಾಲಕ್ಕೂ ಬಾಳುವರೇ ಮಾತ್ರವಲ್ಲದೆ, ಸರ್ವದಾ ಅಗತ್ಯ ಅಂಗಗಳಾಗಿ ಸಮಾಜದೇಹಕ್ಕೆ ಅಲಂಕಾರರಾಗಿರುವರು."

ಕನ್ನಡ ಪ್ರಾಂತ್ಯ

ವೊಂದನ್ನು ರಚಿಸುವುದಕ್ಕಾಗಿ ಯೋಗ್ಯ ಅಭಿಪ್ರಾಯಗಳನ್ನು ಸಂಗ್ರಹಿಸಿ ವಿಮರ್ಶೆಯೊಡನೆ ಶಿಫಾರಸು ಮಾಡಬೇಕೆಂಬ ಸೂಚನೆಯು ಮದ್ರಾಸು ಕೌನ್ಸಿಲಿನಲ್ಲಿ ಮಂಜೂರಾಯಿತೆಂದು ತಿಳಿದುದೊಂದು; ಸೂಚನೆಯು ಹಾಗೆಯೆ ರಿಕಾರ್ಡು ಕಟ್ಟಿನಲ್ಲಿ ಇರಬಹುದಾಗಿ ತೋರುವ ಬೆದರಿಕೆಯೊಂದು; ಅತ್ತ ಕರ್ನಾಟಕ ಜಿಲ್ಲೆಗಳನ್ನು ಒಂದುಗೂಡಿಸುವ ಬಗೆಗೆ ಧಾರವಾಡದಿಂದ ಗವರ್ನರರಿಗೇ ಅರಿಕೆ ಮಾಡಿಕೊಂಡಾಗ ಅವರು ಸಾಧ್ಯವಾಗಿಲ್ಲೆಂದು ಹೇಳಿದ ಅಪ್ಪಣೆಯೊಂದು; ಇದ್ದ ಪ್ರಾಂತ್ಯಗಳೇ ಧಾರಾಳವಾದುವು. ಅವನ್ನು ಕಡಿಮೆ ಮಾಡುವುದುತ್ತಮವೆಂದು ಇಂಗ್ಲೆಂಡಿನಲ್ಲಿ ಪ್ರಕಟವಾಗುವ ಒಕ್ಕಣೆಯೊಂದು; ಇವನ್ನೆಲ್ಲ ಓದುವಾಗ ನಮ್ಮ ಕಡೆಗೆ ಬೀಸಿದ ಗಾಳಿಯಿಂದ ಮಳೆಯೇನೂ ಸುರಿಯದೆಂದೇ ಹೇಳಬೇಕಾಗುವುದು. ಬೊಂಬಾಯಿ ಗವರ್ನರರ ಅಭಿಪ್ರಾಯದಿಂದಂತೂ, ಏಕೀಕರಣಕ್ಕಾಗಿ ಪ್ರಯತ್ನ ಮಾಡಿದವರಲ್ಲಿ ಮುಂದಾಳುಗಳಾದ ಬೊಂಬಾಯಿ ಕರ್ನಾಟಕಸ್ಥರಿಗೆ ನಿರಾಶಾಸ್ಪದವಾಗಿದೆ. "ಭಾಷೆಯೊಂದು ಎಂದ ಮಾತ್ರಕ್ಕೆ ಪ್ರಾಂತ್ಯವೊಂದಾಗ ಬೇಕೆನ್ನಲಾಗದು" ಎಂದು ಗವರ್ನರರು ಹೇಳುವಾಗ,—ಸಿಂಧ ಒರಿಸ್ಸಗಳನ್ನು ನವೀನ ಪ್ರಾಂತ್ಯಗಳಾಗುವಂತೆ ಸೃಷ್ಟಿ ಮಾಡುವ ಬ್ರಹ್ಮರುಗಳೂ ಈ ಅಭಿಪ್ರಾಯವನ್ನು ಮನ್ನಿಸಿ ಬೊಂಬಾಯಿಯಿಂದ ಸಿಂಧವನ್ನೂ ತೆಲುಗರಿಂದ ಒರಿಸ್ಸವನ್ನೂ ಸೆಳೆವ ಉದ್ಯೋಗ ಮಾಡುತ್ತಿದ್ದಾರೆಯೆ ಇಲ್ಲವೆ ಎಂಬುದನ್ನು ಪರ್ಯಾಲೋಚಿಸಬಾರದೆ? ಸಾಮಂತ ರಾಜ್ಯಗಳಲ್ಲದೆ ೬೦ ಲಕ್ಷ ಪ್ರಜೆಗಳಿರುವ ಕರ್ನಾಟಕವು ಒಂದು ಪ್ರಾಂತ್ಯವಾಗಬಾರದೆಂದ ಮೇಲೆ, ಪ್ರಾಂತ್ಯಗಳಿಗೆ ಬೇರೆ ಆಧಾರ ಯಾವುದಂತೆ? ಚಿಕ್ಕಾಸಿನ ಸಾಲವೂ ಇಲ್ಲದೆ ತನ್ನ ರಾಜ್ಯಭಾರವನ್ನು ಸ್ವತಃ ಸಾಗಿಸುವ ಸಂಪನ್ನತೆಯು ಕರ್ನಾಟಕಕ್ಕಿರುವಾಗ, ಇತರ ಪ್ರಾಂತ್ಯಗಳ ಬಾಯಿಯಿಂದ ತುತ್ತನ್ನೆತ್ತಿ ಕೂಡಿಸಿ, ಸಿಂಧ–ಒರಿಸ್ಸಗಳನ್ನು ಸಾಕಿ ಬೆಳೆಸಬೇಕೆಂದಿದೆಯೆ? ಬೊಂಬಾಯಿಯ ಇತರರನ್ನು ಸಲಹಲು ಅಲ್ಲಿನ ಕನ್ನಡ ಜಿಲ್ಲೆಗಳು ಸ್ವಾಧೀನ ಪ್ರಾಂತ್ಯವಾಗಿ ಇರಬಾರದೆಂದು ತೋರುತ್ತಿದೆ, ಅಷ್ಟೆ. ಆದರೆ, ಮದ್ರಾಸಿನವರು ಏನು ಮಾಡಲಿರುವರೋ ನೋಡಬೇಕು.

ವಿದ್ಯುಚ್ಛಕ್ತಿಯೂ ವಿದ್ಯಾಭ್ಯಾಸವೂ

ಮೈಸೂರು ದಿವಾನ ಸಾಹೇಬರು ಚಿಂತಾಮಣಿಯಲ್ಲಿ ಒಂದು ಹೊಸ ಹೈಸ್ಕೂಲ್ ಕಟ್ಟೋಣವನ್ನು ತೆರೆವ ಸಮಾರಂಭದಲ್ಲಿ ಹಲವು ಆಲೋಚನೀಯ ವಿಷಯಗಳನ್ನು ಸಭಿಕರ ಮುಂದಿಟ್ಟಿರುವರು. ಅಂದೇ ಆ ಊರಿನಲ್ಲಿ ವಿದ್ಯುಚ್ಛಕ್ತಿಯನ್ನು ಊರವರಿಗೆ ಒದಗಿಸುವ ಏರ್ಪಾಡೂ ಆಗುವುದನ್ನು ಕುರಿತು ಸೂಚಿಸಿ, ವಿದ್ಯುಚ್ಛಕ್ತಿಯಿಂದಲೂ ವಿದ್ಯಾಭ್ಯಾಸದಿಂದಲೂ ದೊರೆವ ಪ್ರಯೋಜನವು ಸಮಾಜಕ್ಕೆ ಸಮಾನವಾಗಿಯೆ ಇದೆ ಎಂದೂ, ಮನೋಬಲ ಮತ್ತು ಜ್ಞಾನಗಳನ್ನು ಹಂಚುವ ಶಾಲೆಗಳು ಶತಮಾನಗಳಿಂದಲೂ ಬೆಳೆದು ಬಂದಿರುವ ಸಂಸ್ಕೃತಿಯ ಬೆಳಕನ್ನು ಬೀರುವ ಸಂಸ್ಥೆಗಳೆಂದೂ ಹೋಲಿಸಿದರು. ಆದರೆ ಅಲ್ಲಿನ ವಿದ್ಯುಚ್ಛಕ್ತಿಗೆ ಶಿವ ಸಮುದ್ರದ ಪ್ರವಾಹ ಬಲವೊಂದೇ ಮೂಲವಾಗಿರುವಾಗ, ಶಾಲೆಗೆ ಜ್ಞಾನವನ್ನು ಒದಗಿಸಿ ಕೊಡುವ ಮೂಲಗಳು ನೂರಾರು ಶತಮಾನಗಳ ನೂರಾರು ದೇಶಗಳ ಮಹಾಜ್ಞಾನಿಗಳ ತಪೋಬಲವೇ ಎಂಬುದನ್ನೂ ಅವರು ತಿಳಿಸಿ, ಒಂದು ವೇಳೆ ವಿದ್ಯುಚ್ಛಕ್ತಿಯು ಥಟ್ಟನೆ ಹರಿಯದೆ ಮಾಯವಾಗುವ ಸಂಭವಗಳುಂಟಾಗುವುದಾದರೂ, ಈ ಜ್ಞಾನಿಗಳ ತಪೋಬಲವು ಸರ್ವದಾ ಏಕಪ್ರಕಾರವಾಗಿದೆ ಎಂದರು.

ಕೀರ್ವೆ ಇಳಿಸಬೇಕು ಸ್ವಲ್ಪ ಕೆಳವರ್ಗ

ಕಳೆದ ವಾರ ಈ ಸಂಸ್ಥಾನದ ಹಲವು ಕಡೆಗಳಲ್ಲಿ, ಜನರು ಹಾಗೂ ಸರಕಾರದ ದೃಷ್ಟಿಯು ಕೀರ್ವೆಯ ಏರುಗೆಯಿಂದಾದ ಅಪಾರ ಸಂಕಷ್ಟದ ಕಡೆಗೆ ಹರಿಯುವ ಹಾಗೆ, ಸಭೆಗಳು ಸೇರಿ ಸದ್ಯ ಸ್ಥಿತಿಯನ್ನು ವಿಮರ್ಶಿಸಿವೆ. ಬೇಸಾಯಗಳಿಗೆ ಕೀರ್ವೆಯಿಂದಾಗಿ ಅತಿ ಹೆಚ್ಚಿನ ಸಂಕಷ್ಟವಾಗಿದೆ. ಹಲವು ವರ್ಷಗಳಿಂದ ಹಣವನ್ನು ಕೆಂಚಿತ್ತಾದರೂ ಕೂಡಿಸಿಟ್ಟ ಬೇಸಾಯಗಾರರು ಸಹ ಇವೆರಡು ವರ್ಷಗಳ ದುರವಸ್ಥೆಯಿಂದ ಎಲ್ಲವನ್ನು ಹೋಗಲಾಡಿಸಿಕೊಂಡಿದ್ದಾರೆ. ಖರ್ಚಿನ ಬಾಬುಗಳು ಹೆಚ್ಚುತ್ತ ಬರುತ್ತಲಿವೆ. ರೈತರು ಖರ್ಚನ್ನು ಕಡಿಮೆಮಾಡಬೇಕು; ಅದರೊಡನೆ ಸರಕಾರವೂ ಕೀರ್ವೆಯನ್ನು ಇಳಿಸುವ ಹಾಗೆ ತನ್ನ ಸಿಬ್ಬಂದಿಯ ಖರ್ಚನ್ನೂ ಕಡಿಮೆ ಮಾಡಬೇಕಾಗಿದೆ. ರೈತರ ಸಂಕಷ್ಟಗಳಿಗೆ, ಗ್ರಾಮಗಳಲ್ಲಿ ಎಲ್ಲೆಲ್ಲಿಯೂ ಜಗಳಗಳುಂಟಾಗಿ, ವ್ಯಾಜ್ಯಗಳು ಹೆಚ್ಚುತ್ತಿರುವುದೊಂದು ಕಾರಣವಾಗಿದೆ. ಪಂಚಾಯತಿಯ ಮೂಲಕ ಕಲಹಗಳನ್ನು ತೀರ್ಮಾನಿಸುವ ರೂಢಿಯು ಪ್ರಚಾರಕ್ಕೆ ಬರುವುದಾದಲ್ಲಿ, ರೈತರಿಗೆ ಪ್ರಯೋಜನವಿದೆ. ಶುಭಶೋಧನಾದಿಗಳಿಗೆ ಅಮಿತವಾಗಿ ವ್ಯಯಿಸುವುದೂ ಮತ್ತೊಂದು ಸಂಕಟ ಕಾರಣವಾಗಿದೆ. ಹುದ್ದೆದಾರರಿಗೆಲ್ಲ ಹೆಚ್ಚಿನ ಸಂಬಳವನ್ನು ಕೊಡುವುದರಲ್ಲಿ ಒಂದಂಶವನ್ನು ಸರಕಾರವು ಕತ್ತರಿಸಿದರೆ, ಕೀರ್ವೆಯನ್ನು ಸುಲಭವಾಗಿ ಇಳಿಸಬಹುದು. ಇವೇ ಮೊದಲಾಗಿ ಸೂಚಿಸುವ ಭಾಷಣಗಳು ಪ್ರತಿಯೊಂದು ಸಭೆಯಲ್ಲೂ ಆಗಿವೆ.

ಕಚೇರಿಗಳಲ್ಲಿ ಹಿಂದೀ ಭಾಷೆ

ಬರೋಡೆಯ ಗಾಯಕವಾಡ ಸರಕಾರವು ಹಿಂದೀಭಾಷೆಗೆ ಪ್ರೋತ್ಸಾಹ ಕೊಡುವ ನಿಮಿತ್ತವಾಗಿ, ಅದೇ ಭಾಷೆಯನ್ನು ಕೋರ್ಟು ಕಚೇರಿಗಳಲ್ಲಿ ವ್ಯವಹಾರಕ್ಕೆ ತರಬೇಕೆಂದು ಇಸ್ತಿಹಾರು ಪ್ರಕಟಿಸಿಯದೆ. ಸನ್ನದು ಪಡೆದಿರುವ ಸಮಸ್ತ ವಕೀಲರು, ಹಿಂದೀ ಭಾಷೆಯಲ್ಲಿ ತಮ್ಮ ಪ್ರವೀಣತೆಯನ್ನು ತೋರಿಸಲು ಒಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿದೆ. ಹಾಗೆ ಉತ್ತೀರ್ಣರಾಗದವರು, ಮುಂದಿನ ವರ್ಷ ಡಿಸೆಂಬರಿನೊಳಗೆ ಪರೀಕ್ಷೆ ಕೊಟ್ಟು ಸರ್ಟಿಫಿಕೇಟು ಹೊಂದಬೇಕಾಗಿದೆ. ಎರಡು ವರ್ಷಗಳ ಹಿಂದೆ ಸನ್ನದು ಪಡೆದವರಿಗೆ ಮುಂದೆ ಎರಡು ವರ್ಷಗಳ ಅವಧಿ ಕೊಡಲಾಗಿದೆ. ಉತ್ತಮ ತರಗತಿಯ ಶಾಲಾ ಶಿಕ್ಷಕನಾವನೂ ಬರೋಡಾ ಸರಕಾರವು ಗೊತ್ತು ಮಾಡಿರುವ ಪರೀಕ್ಷೆಯ ತರಗತಿಗೆ ಸಾಕನ್ನು ಜ್ಞಾನವು ಯಾವನೊಬ್ಬ ವಕೀಲನಿಗೆ ಇದೆ ಎಂದು ಸರ್ಟಿಫಿಕೇಟನ್ನು ಕೊಟ್ಟರೆ ಸಾಕಾಗುವುದು. ಹೀಗೆ ರಾಷ್ಟ್ರ ಭಾಷೆಯನ್ನು ವ್ಯವಹಾರದ ಭಾಷೆಯನ್ನಾಗಿ ಮಾಡಿರುವ ಸ್ಥಳೀಯ ಸರಕಾರಗಳಲ್ಲಿ ಬರೋಡೆಯೆ ಮೊದಲನೆಯದಾಗಿದೆ.

ಬರ್ಮದಲ್ಲಿ ಘಾತಕಿಗಳು

ಅಪ್ರೋರಿಕದ ಘಾತಕಿಗಳಿಗೆ ಅಣ್ಣಂದಿರು ಎನ್ನಿಸುವಂತೆ, ಸರಕಾರವು ವಿಮರ್ಶಿಸಿರುವ ಅಲ್ಲಿನ ಕಳೆದ ವರ್ಷದ ಪೋಲೀಸ್ ಇಲಾಖಾ ವರದಿಯಿಂದ ಸ್ಪಷ್ಟವಾಗಿದೆ. ಉದ್ದೇಶ ಪಟ್ಟು ಕೊಲೆ ಮಾಡುವ ಜನಗಳು ಹೆಚ್ಚುತ್ತಿರುವರು. ಪೋಲೀಸರು ಇಂಥವರನ್ನು ಅಡಗಿಸುವ ಮಾತಿರಲಿ, ಗೊತ್ತು ಹಚ್ಚುವುದೂ ಕಷ್ಟವಾಗಿ ಬಂದಿದೆ. ಗುಮಾನೆಯಿಂದ ಕೈದು ಮಾಡಿದರೂ, ಅವರ ತಕ್ಸೀರನ್ನು ರುಜು ಪಡಿಸುವುದು ಮತ್ತಷ್ಟು ಕಷ್ಟವಾಗಿದೆ. ಬರ್ಮದ ಜನರಲ್ಲಿ ಜಡತನವು ಹೆಚ್ಚುತ್ತಲಿದ್ದು ಅದರಿಂದ ಈಗ ತಕ್ಸೀರುಗಳೂ ವಿಶೇಷ ಬೆಳೆಯಲೂ ಕಾರಣ ದೊರೆತಿದೆ. ರಾಜಕೀಯ ಚಳವಳವೂ ಈ ತಕ್ಸೀರುಗಳನ್ನು ಬೆಳೆಸಿಯದೆ. ಈ ಮಧ್ಯೆ "ಹಳ್ಳಿ ಹಳ್ಳಿಗಳಲ್ಲೂ ಸ್ವರಾಜ್ಯಕ್ಕಾಗಿ ಹಾತೊರೆಯುವ ಜನಗಳಿಗೆ ರಾಜಕೀಯ ಸ್ವಾತಂತ್ರ್ಯದ ವಿಚಾರಗಳು ಸಂಪೂರ್ಣ ತಿಳಿದಿವೆ, ಎಂಬ ವಾಕ್ಯವೊಂದಿದೆ. ಆದರೆ ರಾಜಕೀಯ ಸ್ವಾತಂತ್ರ್ಯವನ್ನು ಬಲ್ಲ ಅಸಂಖ್ಯಾತರಾದ ಗ್ರಾಮಸ್ಥರು ಈ ತಕ್ಸೀರುಗಳನ್ನು ಅಡಗಿಸುವುದನ್ನು ಪೋಲೀಸರಿಗೆ ಏಕೆ ಸಹಾಯ ಮಾಡುತ್ತಿಲ್ಲ ಎಂಬುದನ್ನು ಸರಕಾರದ ರಿಪೋರ್ಟು ತಿಳಿಸಿಲ್ಲ.

ಮುಸ್ಲಿಂ ಲೀಗ್ ಸಭೆ

ಡಿಲ್ಲಿಯಲ್ಲಿ ಸೇರಿತು. ಶ್ವೇತಪತ್ರದಲ್ಲಿ ಕಾಣುವ ರಕ್ಷಾ ಸೂತ್ರಗಳನ್ನು ತೀರ ಸ್ಪಷ್ಟ ಪಡಿಸಿ, ಗವರ್ನರ ಜನರಲ್‌ರವರಿಗೆ ಕೊಡಲಿರುವ ಜಾದಾ ಅಧಿಕಾರಗಳನ್ನು ಮಿತಗೊಳಿಸಿ ಕೌನ್ಸಿಲುಗಳಿಗೆ ಸರಿಯಾವುದು ಸರಿಯಲ್ಲದಾವುದು ಎಂದು ನಿರ್ಧರಿಸಿ ಹೇಳುವಷ್ಟು ಸ್ಪಷ್ಟವಾಗಿ ನಮೂದಿಸತಕ್ಕುದು. ಲೀಗಿನ ಶಾಖೆಗಳನ್ನು ಪ್ರತಿಯೊಂದು ಊರಿನಲ್ಲಿ ಸ್ಥಾಪಿಸಿ, ಮುಸ್ಲಿಮರು ತಮಗೆ ಸಲ್ಲತಕ್ಕ ಹಕ್ಕುಗಳ ಕುರಿತು ತಿಳುವಳಿಕೆ ಪಡೆವಂತೆ ಮಾಡತಕ್ಕುದು. ಕನಿಷ್ಠ ಸಂಖ್ಯಾಕರ ವಿಷಯವಾದ ತೀರ್ಮಾನಗಳನ್ನು ಲೀಗ್ ಆಫ್ ನೇಷನ್ಸ್ ಸಭೆಯವರು ಮಾಡಿಕೊಡಬೇಕೆನ್ನುವುದು ತಪ್ಪು; ಆ ಸಂಘಕ್ಕೆ ಇಂತಹ ಅಧಿಕಾರಗಳಿಲ್ಲ. ಶ್ವೇತಪತ್ರವು ಸುಧಾರಣೆಗಳನ್ನು ಸೂಚಿಸುವುದಾದರೂ ನಿಜವಾಗಿಯೂ ಕೆಲವೆಡೆಗಳಲ್ಲಿ ತೀರ ಅತೃಪ್ತಿಕರವಾದ ಸೂಚನೆಗಳನ್ನು ಕೊಟ್ಟಿರುವುದು ಶೋಚನೀಯವಾಗಿದೆ.— ಪೋಲೀಸು ಫೌಜು ಮತ್ತು ಸೈನ್ಯಗಳಲ್ಲಿ ಮುಸ್ಲಿಮರಿಗೆ ಧಾರಾಳವಾದ ಹುದ್ದೆಗಳು ದೊರೆಯಬೇಕು ಎಂಬುವೇ ಮುಖ್ಯ ಠರಾವುಗಳು.

NOTES...
ನೋಟಗಳು.

ಶ್ರೀ ರಾಮಕೃಷ್ಣ ಮಠದ ಸನ್ಯಾಸಿಗಳು ಅಮೋಘವಾದ ತಪಸ್ಸಿನಿಂದ ವೇದಾಂತದ ಬೆಳಕನ್ನು ಬೀರಿ ಜಗತ್ತನ್ನೆ ಸೂರೆ ಮಾಡಿರುವಾಗ, ರಾಮಕೃಷ್ಣರ ಆರಾಧನೆಯ ದಕ್ಷಿಣೇಶ್ವರದ ಕಾಳೀ ದೇವಾಲಯದಿಂದ ಒಂದು ಲಕ್ಷ ರೂಪಾಯಿ ಬೆಲೆಯ ಆಭರಣಾದಿಗಳನ್ನು ಕಳ್ಳರು ಸೂರೆ ಮಾಡಿದರು.

* * * *

ರೇಷ್ಮೆಗೂ ಗಿರಾಕಿಗಳಿಲ್ಲ; ಬೆಲೆಯೂ ಕಡಿಮೆ. ಕಳೆದ ಏಳೇ ವರ್ಷಗಳಲ್ಲಿ ಮೈಸೂರು ರೇಷ್ಮೆಯು ತಯಾರಾದುದು ಅರ್ಧ; ಕ್ರಯವು ಐದಾಣೆ ಪಾಲು. ಹೀಗಾಗಿ ರೇಷ್ಮೆಯ ಹುಟ್ಟುವಳಿ ಎರಡರಷ್ಟಾಗಿ ಬಂದಿದೆ. ಹತ್ತು ವರ್ಷಗಳ ಹಿಂದೆ ೧೧೭ ಲಕ್ಷದ ರೇಷ್ಮೆ ಮೈಸೂರಿಂದ ರಫ್ತಾಗಿದ್ದಾಗ, ಕಳೆದ ವರ್ಷ ೨೦ ಲಕ್ಷವೂ ಆಗಿಲ್ಲ.

* * * *

ಇಷ್ಟಾದರೂ,—ಮೈಸೂರು ಮಾಲನ್ನು ಬಿಟ್ಟು ಜಪಾನೀ ಟೋಪಿ ಇಟ್ಟುಕೊಳ್ಳುವವರಿದ್ದಾರಲ್ಲ!

* * * *

ಇಮಿಟೇಶನ್ ರೇಷ್ಮೆ ಒಂದು ಕಡೆ,—ಜಪಾನು ರೇಷ್ಮೆ ಮತ್ತೊಂದು ಕಡೆಯಾಗಿ, ಇಂಡಿಯದ ರೇಷ್ಮೆಗೇ ಗತಿಗೆಟ್ಟಿದೆ.

* * * *

ಹಿಂದೆಯಾದರೆ, ಪ್ರತಿಯೊಂದು ಅನರ್ಥಕ್ಕೂ ಸತ್ಯಾಗ್ರಹ ಚಳವಳ ಕಾರಣವಾಗುತ್ತಿತ್ತು. ಈಗ ದೇಶವೆಲ್ಲ ಜಪಾನಿನ ವ್ಯಾಪಾರದ ಮೇಲೆ.

* * * *

ಇಡೀ ಭೂಲೋಕವೇ ಮೊನ್ನೆ ಇಡೀ ರಾತ್ರೆ ಕಂಪಿಸಿದ್ದಿತೆಂದು ಯಾವತ್ತೂ ಭೂಕಂಪ ಸೂಚಕ ಯಂತ್ರಗಳು ಸೂಚಿಸಿವೆ.

* * * *

ಎಲ್ಲಿ ಏನಾಯಿತೆಂದು ಮಾತ್ರ ಯಾವ ವಾರ್ತೆಯೂ ಇಲ್ಲ. ಭೂಕಂಪ ಸೂಚಕ ಯಂತ್ರಗಳ ಕಂಪವಾಗಿದ್ದಿರಬೇಕೆಂದಾದರೂ ವಿಜ್ಞಾನಿಗಳು ನಿರ್ಧರಿಸುವುದಕ್ಕೂ ವಿಳಂಬವೇಕೆ?

* * * *

ರೂಪಾಯಿಯ ಬೆಲೆ ೧೮ ಪೆನ್ಸ್ ಇದ್ದುದನ್ನು ಕೂಡಲೆ ೧೬—೧೬ ಪೆನ್ಸ್ ಆದರೂ ಇಳಿಸಬೇಕೆಂದು ಎಷ್ಟೋ ಶ್ರೀಮಂತ ವ್ಯಾಪಾರಿಗಳ ಚಳವಳ. ೧೮ ಹದಿನೆಂಟಾಗಿಯೆ ಇರಬೇಕೆಂದು ಖಜಾನಾಮಂತ್ರಿಗಳೂ, ಸರಕಾರವೂ, ಇಂಡಿಯಾ ಕಲೆಕ್ಟರೂ ಖಂಡಿತ ವಿವರಿಸಿ ನಿರ್ಧರಿಸಿ ತೀರ್ಮಾನಿಸಿದ್ದಾರೆ.

* * * *

ಭರತ ವರ್ಷಕ್ಕೆ ೧೮ರ ಪ್ರೀತಿ ಬಹಳ. ಪುರಾಣಗಳು ೧೮; ಮಹಾಭಾರತದ ಪರ್ವಗಳೂ ೧೮; ಆ ಯುದ್ಧವಾದುದೂ ೧೮ ದಿನ; ಅಮೋಘವಾದ ಗೀತೆಯ ಅಧ್ಯಾಯಗಳು ಹದಿನೆಂಟು. ಅವೆಲ್ಲ ೧೮ರ ಸಾಲಿನಲ್ಲಿ ರೂಪಾಯಿ ಪೆನ್ಸೂ ನಿಂತರೆ ಸರಿಯಾಗಿಲ್ಲವೆ?

* * * *

೧೮ ಆದರೂ ೧೬ ಆದರೂ ರೂಪಾಯಿ ಇದ್ದವರಿಗಲ್ಲವೆ ಅದರ ಲಾಭ ನಷ್ಟ? ಬೆಳ್ಳಿಯ ನಾಣ್ಯದ ರೂಪು ಕಾಣದವರಿಗೆ ರೂಪಾಯಿಯ ಬೆಲೆ ಎಷ್ಟಾದರೇನು? ಕುಬೇರನಲ್ಲಿ ಎಷ್ಟು ರತ್ನಗಳಿದ್ದರೇನು?

* * * *

ಪೆನ್ಶನುಗಳನ್ನು ವಿಮೆಗೊಳಿಸಬೇಕೆಂದು ನಿವೃತ್ತ ಆಫೀಸರರ ಗಲಾಟೆಗೆ ಪ್ರಾರಂಭವಾಗಿದೆ. ಯಾವ ವಿಮಾಕಂಪೆನಿಯೂ ಒಪ್ಪದ ವಹಿವಾಟು ಇದು.!!!

ಮುಂದಿನ ವಾರ
ಸಾಹಿತ್ಯ ಸಂಚಿಕೆ.

If you want FULL VALUE for your money insist on Swastik Products.

ನಿಮ್ಮ ಹಣಕ್ಕೆ ತಕ್ಕ ಬೆಲೆ ಬೇಕಾದರೆ ಸ್ವಸ್ತಿಕಾ ಮಿಲ್ಲಿನವರ ಸ್ವಸ್ತಿಕಾ ಸಾಮಾನುಗಳನ್ನೇ ಕೊಂಡುಕೊಳ್ಳಿರಿ.

Swastik 777 Bar soap & Swastik Cake & Cube Soaps best in washing Soaps.



ಕಸ, ಕೊಳೆ, ಕಲ್ಮಶ, ಮೊದಲಾದ ಕಶ್ಮಲಗಳು ಕಿಂಚಿತ್ತಾದರೂ ಉಳಿಯಬಾರದು—ಬಗೆ ಕಾನೇ ಲೋಕ ಕ್ಷೇಮ 777 ಇದರಿಂದಾಗಿ ಪ್ರಸನ್ನತೆ ನಂಬರಿನ ಸ್ವಸ್ತಿಕಾ ಅತ್ಯುತ್ತಮ ಸಾಬೂನು ಸ್ವದೇಶಿಗಳಲ್ಲಿ ಅಗ್ರಗಣ್ಯ, ಬಟ್ಟೆಗಳಿಗೆ, ಇತರ ಸಾಬೂನುಗಳಿಗೆ ಮೇಲ್ಪಂಗಿ ಶುಭ್ರತಮವಾಗಿ ಒಗೆಯುವುದು ಹೆಚ್ಚು ಕಾಲ ಬಾಳು ಯೋಗ್ಯತೆ ಮಿಗಿಲಾಗಿ ಬೆಲೆ ಕಡಿಮೆ—ವಿಲಾಯತಿಗೆ ಸಾಬೂನಿಗೆ ಪ್ರತಿಸ್ಪರ್ಧಿಯಾಗಿದೆ

Swastik Double boiled & Raw Linseed Oils

SWASTIK

THE MARK OF QUALITY

available in 5 gallon drums, 1 gallon tin

ಪೈಂಟ್ ಬಗ್ಗೆ ಸ್ವಸ್ತಿಕಾ ಬೇಯಿಸಿದ ಅತೀ ಉತ್ತಮವಾದ ಲೀನ್ ಸೀಡ್ ಎಣ್ಣೆ 5 ಗೆಲನ್ ಡ್ರಮ್ಮುಗಳಲ್ಲೂ, ಗೆಲನ್ ಟಿನ್ನುಗಳಲ್ಲೂ ದೊರೆಯುವುದು

ಕಾಫಿ ಗಿಡಗಳ ಮೇಲೆ ಕ್ರಿಮಿ ಹಿಡಿಯದಂತೆ ಚೆಲ್ಲುವರೆ ಸ್ವಸ್ತಿಕಾ ಹಸಿ ಲಿನ್ ಸೀಡ್ ಎಣ್ಣೆ 5 ಗೆಲನ್ ಡ್ರಮ್ಮುಗಳಲ್ಲಿ ದೊರೆಯುವುದು

ವಿಲಾಯತಿ ಎಣ್ಣೆಗಿಂತಲೂ ಶೇಕಡಾ 50ರಷ್ಟು ಹೆಚ್ಚಿನ ಫಲ ಪ್ರಯೋಜನ ಕೊಡುವುದಾಗಿ ಲಂಡನ್ ಬ್ಯೂರಿಚ್ ಲೆಬೋರೇಟರಿಯವರು ಸರ್ಟಿಫಿಕೇಟು ಕೊಟ್ಟಿದ್ದಾರೆ

Swastik CASTOR OIL (medicinal)

(Cold drawn)

Packed in gallon tins & 4 oz, 8 oz, 1 lb bottles

ಸ್ವಸ್ತಿಕಾ ಹರಳೆಣ್ಣೆ 4 ಔನ್ಸ್, 8 ಔನ್ಸ್, 1 ರಾತಲು ಬಾಟ್ಲಿಗಳಲ್ಲೂ ಗೆಲನ್ ಟಿನ್ನುಗಳಲ್ಲೂ ಸಿಗುವುದು

ಶಾಸ್ತ್ರೀಯ ರೀತಿಯಲ್ಲಿ ಸಿದ್ಧಗೊಳಿಸಿರುವ ಶುದ್ಧವಾದ ಈ ಹರಳೆಣ್ಣೆಯು ವಾಸನೆ ಇಲ್ಲದ್ದು ರುಚಿರಹಿತವಾದದ್ದು

ಹರಳೆಣ್ಣೆಯಿಂದಾಗುವ ಯಾವತ್ತೂ ಉಪಯೋಗಗಳು ನಾಲಗೆಗೂ, ಮನಸ್ಸಿಗೂ ಬೇಸರವಾವುದೂ ಇಲ್ಲದೆ ಈ ಸ್ವಸ್ತಿಕಾ ಹರಳೆಣ್ಣೆಯಿಂದ ದೊರೆಯುವುವು ಇವಲ್ಲದೆ—

ಸ್ವಸ್ತಿಕಾ ಕಣ್ಲೆಂಟ್, ಎಳ್ಳೆಂಣೆ, ವಾರ್ನಿಸು, ಮೈಗೆ ಹಾಕುವ ಸಾಬೂನು ವಗೈರೆ ಇವೆ

Swastik Oil Mills Ltd, Bombay.

Chairman—Seth Ambalal Sarabhai

Directors—Sir Purushothamdas Thakurdas

Mr F E Dinshaw

Mr C S Patel & others

ಮಲಬಾರ್ ಮತ್ತು ಕನ್ನಡ ಜಿಲ್ಲೆಗೆ ಏಜಂಟರು—ಸುಜೀರ ರಾಯಪ್ಪ ನಾಯಕ್ ನರಸಿಂಹ ವೆಂಕಟೇಶ ನಾಯಕ್ ಮತ್ತು ಕಂಪೆನಿ, ಮಂಗಳೂರು.

ಪಂಡಿತ ಜವಾಹಿರಲಾಲ ನೆಹರೂ ಭಂಡಾರ್ಗ್ಯ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಲು ದೊರೆತಿರುವ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮು) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣುಗಳಿಗೆ ಉರುವು ಬೀಳೋದು, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋದು, ನಡು ನೋಯೋದು, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋವಳಿ ಬರೋದು ಶೌಚಕ್ಕೆ ಸಾವು ಆಗದೇ ಇರೋದು, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು ಅಶಕ್ತ ಹುಡುಗರು ಬಲವಂತರಾಗುವರು ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು

ಬಾಟ್ಲಿ ಬೆಲೆ ೧—೪—೦ ೩ ಬಾಟ್ಲಿಗೆ ೩—೮—೦ ಹರ್ಯುನ ಬಾಟ್ಲಿಗೆ ೩ ರೂಪಾಯಿ ಟಪ್ಪಾಲ ಖರ್ಚು ಪೋಸ್ಟೇಜ ಬೇರೆ ಬೀಳುತ್ತದೆ

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು

ವ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ — ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಚಾಯೆಲ್‌ಕಾಂ ಬ್ರದರ್ಸ್, ಕಾರ್‌ಸ್ಟ್ರೀಟ್ ಕುಂದಾಪುರ—ಕೆ ಆರ್ ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ ಶೇಷಗಿರಿ ಪೈ ಕಾರ್ಕಳ—ವಿ ಎ. ಶೆಣೈ ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ ಕಾಸರಗೋಡು—ಕೆ ರಾಮ ನಾಯ್ಕ, ಕೋರ್ಟ ರಸ್ತೆ ಬಂಟವಾಳ—ಬಿ ಎಚ್ ವಾಸುದೇವ ಪೈ

2-6-38

ಬಹ್ವತ್ರೈಯ ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯವಾಗೂ ಬಹುಕಾಲ ಬಾಳುವ ಸರ್ವತರದ ಉಡುಪುಕೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್ ಬಾತ್ ಟುವಾಲುಗಳೂ ಧೋತಿ, ಸೀರೆ—ಬೈರವಾಸು—ಚಕ್ಕು—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗಪ್ಪೈ,

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು

Srinivasa Ranga Pai,

Representatives for South Canara and Malabar

For— A & F Harvey

Managers Madura Mills Co Ltd

For neat and nice Printing

Please call at

THE SHARADA PRESS,

Car Street, MANGALORE

ತೀರ್ಥಹಳ್ಳಿ ಸಮಾಚಾರ.

ಇಲ್ಲಿಯ ಹವಾಮಾನವು ಅನುಕೂಲವಾಗಿದೆ. ಯಾವ ವಿಧದಿಂದ ರೋಗರುಜಿಗಳೂ ಇಲ್ಲ. ಜೀನಸು ಬಟ್ಟೆಗಳ ಧಾರಣೆ ನಾಶಿ, ಇತರ ಕಡೆಗಳಂತೆಯೇ ಇದೆ. ಖಾದಿ ಸಪ್ಲೈ ಎಲ್ಲಾ ಕಡೆಯಲ್ಲಿಯೂ ಇಲ್ಲ. ಅಡಿಕೆಗೆ ದರವಿಲ್ಲ. ಗದ್ದೆಗಳು ಕೊಯಿಲೆಗೆ ಬರುತ್ತಾ ಇವೆ. ಅರ್ಥಿಕ ಮುಗ್ಗಟ್ಟು ದಿನೇ ದಿನೇ ಹೆಚ್ಚುತ್ತಾ ಇದೆ. ಸಾಲವಂದಿಗರ ಬಂಧನಗಳು ಪ್ರಬಲವಾಗುತ್ತದೆ.

ಶಿವಮೊಗ್ಗಾದಿ ಡಿ. ಡಿಪ್ಯುಟಿ ತಹಸಿಲ್ದಾರ್ ಸಾಹೇಬರವರು ಇಲ್ಲಿಗೆ ಬಂದಿದ್ದರು. ದೇವಂಗಿಗೂ ಹೋಗಿದ್ದರು ಟೌನ್ ಮ್ಯುನಿಸಿಪಾಲಿಟಿಯ ವಗೈರೆ ವ್ಯಾಪಾರವಾಗಿ ಪ್ರಶಂಸೆಗಳು ನಡೆದಂತೆ ತಿಳಿಯಬರುತ್ತದೆ ಬಂದೂಖು ಲೈಸನ್ಸು ಕೊಡುವ ಈ ವಿಷಯಗಳನ್ನು ಮ। ರಾ। ರಾ। ಶ್ರೀ R A ಮೆಂಬರ್ ಮತ್ತು ಮ್ಯುನಿಸಿಪಲ್ ಕೌನ್ಸಿಲರರಾದ ಕುಡುಪಿ ರಾಮಣ್ಣ ಗೌಡರು ಸವಿಸ್ತರವಾಗಿ ತಿಳಿಯ ಪಡಿಸಿದ್ದರ ಮೇಲೆ ವಿಮರ್ಶೆಗೆ ಬಂದು ಮುಜರಾಯಿ ರಿಕಾರ್ಡನ್ನು ಜಾಗ್ರತೆ ವ್ಯವಸ್ಥೆ ಮಾಡುವ ಬಗ್ಗೆ ಸಬ್ ಡಿವಿಜನ್ ಅಸಿಸ್ಟೆಂಟ್ ತಹಸಿಲ್‌ದಾರರವರಿಗೆ ವಹಿಸಿದ್ದರೆಂದೂ ಅವರಿರುವ ಜಮಾಬಂದಿ ಮೊಕ್ಕಾಮಿನೊಳಗಾಗಿ ಫೈಸಲಿ ನವರದಿ ಮಾಡುತ್ತಾರಾಗಿಯೂ ತಿಳಿಯಬರುತ್ತದೆ.

+ ++ +

ಉಡುಪಿ

ಉಡುಪಿಯ ಶ್ರೀಯುತ ಕೃಷ್ಣಭಟ್ಟರು ತಮ್ಮ ಕರಕುಶಲ ತುಗಳನ್ನು ಧರ್ಮಸ್ಥಳ ಜಾತ್ರೆಯ ವಸ್ತುಪ್ರದರ್ಶನಕ್ಕೆ ಕೊಂಡು ಹೋದಲ್ಲಿ ಪ್ರದರ್ಶನ ಕಮಿಟಿಯವರಿಂದ ಶ್ರೀಯುತರಿಗೆ ಅವರ ಕರಕುಶಲಗಳ ಉತ್ಕೃಷ್ಟತೆಗಾಗಿ ಬೆಳ್ಳಿಯ ಪದಕವನ್ನು ಶ್ರೀ ಮಂಜುನಾಥದೇವರ ಸನ್ನಿಧಿಯಲ್ಲಿ ಕೊಟ್ಟಿರುವರಾಗಿ ತಿಳಿಯ ಬರುತ್ತದೆ. ಇದು ಉಡುಪಿಯ ಮಹಾಜನರಿಗೂ ಕೃಷ್ಣ ಭಟ್ಟರಿಗೂ ತುಂಬಾ ಅಭಿನಂದನೀಯವಾಗಿದೆ. ಶ್ರೀಯುತರು ಮೈಸೂರಿಗೆ ಹೋಗಿ ಅಲ್ಲಿ ಈ ವಿದ್ಯೆಯನ್ನು ಚೆನ್ನಾಗಿ ಅಭ್ಯಾಸ ಮಾಡಿ ಬಂದಿರುವರೆಂಬುದು ಮತ್ತೂ ಸಂತೋಷಕರ

+ ++ +

ವಿಷಯಸೂಚಿ.

ಅಗ್ರಲೇಖ:
ಇವು ಯುದ್ಧದ ಸೂಚನೆಗಳೇ? ... ೩
ಸ್ವದೇಶವಾರ್ತೆಗಳು ... ೩
ಟೀಕೆಗಳು ... ,,
ವರ್ತಮಾನ ಸಂಗ್ರಹಗಳು
ಮಹಾ ಮಹಾ ಮೋಸ!! ... ೨
ಸ್ವದೇಶ ವರ್ತಮಾನ ವಿದೇಶ ವರ್ತಮಾನ, ... ೩
ವಿವಿಧ ಸಮಾಚಾರಗಳು ... ೧೧
[illegible], ಬೃಹಸ್ಪತಿ, [illegible], [illegible], [illegible] ... ೯
೬೦೦ ಪ್ರಯಾಣಿಕ ರೈಲು ಗಾಡಿಯನ್ನು ಕೆಡವಿ ಕೊಂದರು! ... ೮
ಪತ್ರವ್ಯವಹಾರ ... ೧೪
ಹಿಂದೂ ಮಹಾ ಸಭೆಯವರು ಕೋಪಗೊಂಡರು! ... ೧೫
ಶ್ರೀ ಧರ್ಮಸ್ಥಳ ಅಖಿಲ ಕರ್ನಾಟಕ ವಸ್ತು ಪ್ರದರ್ಶನ ಮತ್ತು ವಿವಿಧ

ಸ್ವದೇಶಾಭಿಮಾನಿ.

ತಾ. ೧ನೇ ಶುಕ್ರವಾರ ದೆಶಂಬರ ೧೯೩೩.

ಇವು ಯುದ್ಧದ ಸೂಚನೆಗಳೇ?

ಲೀಗ್ ಒಫ್ ನೇಶನ್ಸ್‌ನಲ್ಲಿ ಲೋಕ ಶಾಂತತೆಯ ಬಗ್ಗೂ, ಜನಾಂಗದ ಐಕ್ಯದ ಬಗ್ಗೂ ಸಾಧನೆಗಳು ನಡೆಯುತ್ತಿದ್ದಂತೆಯೇ ಜಪಾನು, ಜರ್ಮನಿಯು ಅದರಿಂದ ಹೊರಗೆ ಹೋದುವು. ಲೀಗ್ ಒಫ್ ನೇಶನ್ಸಿನ ಅಧೀನತೆಯಲ್ಲಿ ನಡೆಯುತ್ತಿದ್ದ ಶಸ್ತ್ರ ಸನ್ಯಾಸ (Disarmament)ದ ಪರಿಷತ್ತು, ಜರ್ಮನಿಯ ಹಿಂದೆಗೆಯುವಿಕೆಯಿಂದ ಮುರಿದು ಹೋಯಿತು. ಶಾಂತತೆಯು ನೆಲಸಬೇಕೆಂದು ಪ್ರಯತ್ನಗಳು ನಡೆಯುವಾಗ, ಆ ಪ್ರಯತ್ನಗಳೇ ಶಾಂತತೆಯ ಭಂಗಕ್ಕೆ ಕಾರಣವಾಗುವ ಸೂಚನೆಗಳು ತಲೆದೋರುತ್ತಿವೆ.

ಬರುವ ೧೯೩೪ನೇ ಇಸವಿಯಲ್ಲಿ ಕಳೆದ ಯುದ್ಧವು ಪ್ರಾರಂಭವಾದ ೨೦ ವರ್ಷಗಳು ಮುಗಿಯುತ್ತವೆ. ಈ ಅವಧಿಯಲ್ಲಿ ಮತ್ತೊಂದು ಯುದ್ಧವು ಪ್ರಾರಂಭವಾಗಲೇ ಬೇಕೆಂದು ಕಳೆದ ಯುದ್ಧಾಂತ್ಯದ ವರ್ಸಲೆ ಸಂಧಿಯನ್ನು ವಿಮರ್ಶಿಸಿ ಹಲವು ಅರ್ಥ ಶಾಸ್ತ್ರಜ್ಞರ ಅಭಿಪ್ರಾಯವಿತ್ತು; ರಾಜಕೀಯ ವಿಷಯಗಳಲ್ಲಿ ಸಮರ್ಥರಿರುವವರೂ ಇಂದಿನ ಘಟನೆಗಳನ್ನು ನೋಡಿ ಭವಿಷ್ಯವನ್ನು ಹೇಳಲು ತೊಡಗಿರುವರು; ಹಾಗೂ ಜೋಯಿಸರುಗಳೂ ತಾವೂ ಭವಿಷ್ಯವನ್ನು ಹೇಳುವುದರಲ್ಲಿ ಹಿಂದಿಲ್ಲವೆಂದು ತೋರಿಸಲೆಂಬಂತೆ ಗ್ರಹ ಕುಂಡಲವನ್ನು ಶೋಧಿಸಿ ಮುಂದಿನ ವರ್ಷ ಯುದ್ಧವಿದೆಯೆನ್ನುವರು.

ಹಾಗೂ ಪರಿಸ್ಥಿತಿಯು ಆಶಾಜನಕವಾಗಿಲ್ಲ. ಲೋಕದ ಸಾಂಪತ್ತಿಕ ದುರವಸ್ಥೆಯನ್ನು ನಾವು ಈ ಮೊದಲೇ ಹಲವು ಬಾರಿ ಚರ್ಚಿಸಿರುವೆವು. ಅದನ್ನು ಸುಧಾರಿಸುವ ಬಗ್ಗೆ ಒಂದು ಜನಾಂಗವು ಇನ್ನೊಂದು ಜನಾಂಗದ ವ್ಯಾಪಾರವನ್ನು ತನ್ನ ದ್ವೇಷದಿಂದ ಮುಚ್ಚಿಬಿಡುತ್ತದೆ; ಈ ಕಾರಣದಿಂದ ವ್ಯಾಪಾರವು ಮತ್ತೂ ಕೀಳು ಗತಿಯನ್ನು ಹೊಂದುತ್ತಿದೆ. ಈಗಿನ ದಿನಗಳಲ್ಲಿ ವ್ಯಾಪಾರದಲ್ಲಿ ಸ್ವಲ್ಪ ಚಡಪಡಿಸುವವರೆಂದರೆ ಜಪಾನೀಯರೇ ಸರಿ; ಉಳಿದ ಜನಾಂಗಗಳು ಮುಗ್ಗರಿಸುತ್ತಿವೆ.

ಪ್ರತಿ ಜನಾಂಗಗಳಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುತ್ತಿದೆ. ಕರ ವಸೂಲಿಯು ಹೆಚ್ಚುತ್ತಾ ಬರುತ್ತಿದೆ. ದೇಶದೊಳಗೇನೆ ಅಂತಃಕಲಹ (Civil War) ಕ್ರಾಂತಿ (Revolution)ಗಳನ್ನು ತಪ್ಪಿಸುವ ಬಗ್ಗೆಯಾದರೂ ಹೊರ ಯುದ್ಧಗಳನ್ನು ತಯಾರಿಸುವ ಆವಶ್ಯಕತೆಯು ರಾಜಕಾರಣ ಧುರೀಣರಿಗೆ ಅಗತ್ಯ ಬೀಳುತ್ತದೆ.

ಜನಾಂಗ ಸಂಘದಿಂದ ಜರ್ಮನಿಯ ವಿಚ್ಛೇದವು ಬಹಳ ಯೋಚನೆಗೆ ಕಾರಣವನ್ನು ಕೊಡುತ್ತಿದೆ. ಜರ್ಮನಿಗೂ ಫ್ರಾನ್ಸಿಗೂ ದ್ವೇಷವು ಬೆಳೆಯುತ್ತಿದೆ. ಫ್ರಾನ್ಸು ತನ್ನ ಜರ್ಮನ್ ಗಡಿಗಳನ್ನು ಭದ್ರ ಮಾಡಿ ಯುದ್ಧ ತಯಾರಿಯನ್ನು ಮಾಡಿಯುದೆ. ಫ್ರಾನ್ಸಿನ ವಾಯು ನೌಕೆಯು ಸಂಖ್ಯಾ ಬಲದಲ್ಲಿ ಇತರ ಜನಾಂಗಗಳಿಗಿಂತಲೂ ಹೆಚ್ಚು ಬಲಿಷ್ಠವಾಗಿದೆ. ದಿನ ದಿನವೂ ಫ್ರಾನ್ಸು ತನ್ನ ಸೈನ್ಯ ಸಂಗ್ರಹವನ್ನು ಹೆಚ್ಚಿಸುತ್ತಾ ಬರುತ್ತಿದೆ.

[illegible] ರಷ್ಯಾ [illegible] ಜಪಾನು ಮತ್ತು [illegible] ಬಹುದು. [illegible] ಜರ್ಮನಿಯು [illegible] ರಷ್ಯಾ [illegible] ರವನ್ನು, ಜಪಾನಿನೊಡನೆ ಮಿತ್ರತ್ವವನ್ನು ಕಲ್ಪಿಸಿದ್ದಾಳೆ. ರಷ್ಯಾ ದೇಶವು ಫ್ರಾನ್ಸಿನೊಡನೆಯು ಇತ್ತೀಚೆಗೆ ಅಮೇರಿಕದೊಡನೆಯೂ ಮಿತ್ರತ್ವವನ್ನು ಕಲ್ಪಿಸಿಯದೆ. ಇಟೇಲಿಯು ಜರ್ಮನಿಯ ಧೋರಣವನ್ನು ಪೂರಾ ಒಪ್ಪಲು ತಯಾರಿಲ್ಲವಾದರೂ, ಫ್ರಾನ್ಸಿನ ದ್ವೇಷದಿಂದ ಜರ್ಮನಿಯೊಡನೆ ಸೇರಲು ಕಾರಣವಿದೆ. ಆಸ್ಟ್ರಿಯ ದೇಶವು ಈಗ ಜರ್ಮನಿಯೊಡನೆ ಚಿಕ್ಕ ಕಲಹಗಳಲ್ಲಿದ್ದರೂ ಸಂದಿಗ್ಧ ಸಮಯದಲ್ಲಿ ಜರ್ಮನಿಯನ್ನು ಸೇರಲೂ ಬಹುದು, ಏಕೆಂದರೆ ರಾಷ್ಟ್ರೀಯದವರೆಲ್ಲರೂ ಜರ್ಮನ ಪಂಗಡದವರೇ ಆಗಿರುತ್ತಾರೆ.

ಪ್ರಾಯಶಃ ಈ ಬಾರಿಯ ಯುದ್ಧವಾದಲ್ಲಿ ಬಾಲ್ಕನ್ ರಾಜ್ಯಗಳು ಈ ಯುದ್ಧದಲ್ಲಿ ಸೇರಲಿಕ್ಕಿಲ್ಲ. ಒಂದು ಕಡೆ ರಶ್ಯಾ ದೇಶವೂ, ಇನ್ನೊಂದು ಕಡೆ ಫ್ರಾನ್ಸೂ ಜರ್ಮನಿಯನ್ನು ಮುತ್ತಬಹುದು. ಹಾಗೆಯೇ ಒಂದು ಕಡೆ ಜರ್ಮನಿಯೂ ಇನ್ನೊಂದು ಕಡೆ ಇಟೇಲಿಯೂ ಫ್ರಾನ್ಸನ್ನು ಬಿಗಿಯಬಹುದು. ರಶ್ಯಾ ಮತ್ತು ಅಮೇರಿಕಾವು ಈಗ ಸಂಧಿ ಮಾಡಿಕೊಂಡಿರುವುದರಿಂದಲೂ; ಇಬ್ಬರಿಗೂ ಜಪಾನಿನ ಮೇಲೆ ದ್ವೇಷವಿರುವುದರಿಂದಲೂ, ಜಪಾನನ್ನು ಇವರು ಮುತ್ತಬಹುದು. ಈ ಬಗ್ಗೆ ಚೀನಾ ದೇಶವೂ ಇವರನ್ನು ಕೂಡಬಹುದು. ಯುದ್ಧದಲ್ಲಿ ಅಮೇರಿಕವು ಗೆದ್ದರೆ ಇಂಗ್ಲೆಂಡಿನ ಭವಿಷ್ಯವೇ ಹೋಗುವುದೆಂದು ಇಂಗ್ಲೆಂಡು ಜರ್ಮನಿಯನ್ನು ಸೇರಲೂ ಬಹುದು.

ಈ ರೀತಿಯಲ್ಲಿ ಇಂಗ್ಲೆಂಡು, ಜಪಾನು, ಜರ್ಮನಿ, ಇಟೆಲಿ ಈ ನಾಲ್ಕು ರಾಷ್ಟ್ರಗಳು ಒಂದು ಕಡೆಯಲ್ಲಿಯೂ, ರಶ್ಯಾ, ಅಮೇರಿಕಾ, ಫ್ರಾನ್ಸು, ಚೀನಾ ಈ ರಾಷ್ಟ್ರಗಳು ಇನ್ನೊಂದು ಕಡೆಯಲ್ಲಿಯು ಇದ್ದು ಯುದ್ಧವಾಗಬಹುದು. ಹೀಗೆ ಯುದ್ಧವಾದಲ್ಲಿ, ಯುದ್ಧ ಭೂಮಿಯು ಚೀನಾದೇಶದಲ್ಲಿಯೂ, ಫೆಸಿಫಿಕ್ ಮತ್ತು ಅತ್ಲಾಂತಿಕ ಸಾಗರವೂ, ಆಗಬಹುದಾಗಿ ಕಂಡು ಬರುತ್ತಿದೆ.

ಇದು ನಿಜವಾಗಿ ನಡೆಯುವುದಾದರೆ ಯುದ್ಧವು ಎಷ್ಟು ಭಯಂಕರವೂ, ಹತ್ಯಾಕಾರಿಯೂ, ಧ್ವಂಸಕಾರಕವೂ ಆಗುತ್ತದೊ!—ಕಲ್ಪಿಸಲಿಕ್ಕೆ ಕೂಡಾ ಧೈರ್ಯ ಸಾಕಾಗುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಹಿಂದೂಸ್ಥಾನವು ತನ್ನ ಸ್ವರಾಜ್ಯದ ಚಳವಳವನ್ನು ಬಲಪಡಿಸಿದರೆ ಪ್ರಯೋಜನವಾಗಬಹುದು.

+ ++ +

ವಿದೇಶ ವರ್ತಮಾನ.

ಇಟೆಲಿಯ ವಿಮಾನ ರಚನಾ ಕಟ್ಟಡವು ಬಿರುಗಾಳಿಗೊಳಗಾಗಿ ಬೀಳಲಾಗಿರುವುದರಿಂದ ಕಾಲು ಮಿಲಿಯ ಸ್ಟರ್ಲಿಂಗು ವೆಚ್ಚ ಮಾಡಿ ಅದನ್ನು ಸರಿಗೊಳಿಸಲಿರುವರು.

ಮಂಚುಕೋವಿನಲ್ಲಿ ೯ ಮಂದಿ ಜಪಾನೀಯ ಸೈನಿಕರು ಚೀನೀಯ ಧಂಡಾಯಗಾರರಿಂದ ಕೊಲ್ಲಲ್ಪಟ್ಟರು. ೧೧ ಮಂದಿಗಳು ಜಖಂಗೊಂಡಿರುವರು.

"ಹೆನ್ರಿ VIII" ಎಂಬ ಚಲಚಿತ್ರವನ್ನು ತೋರಿಸುವುದರಿಂದ ಹಿಂದೀಯ ಜನರಲ್ಲಿ ಅಪಾಯಕರ ಮಾನಸಿಕತೆಯು ತಲೆದೋರುವುದರಿಂದ ಅದನ್ನು ಪ್ರದರ್ಶಿಸದಂತೆ ನಿರ್ಬಂಧಿಸಬೇಕೆಂದು ಸೆಂಡರ್ಸನ್ ಸಾಹೇಬರು ಉದಾರಿಗಳಾಗಿ ಹೋರ ದೊರೆಗಳೊಡನೆ ಅರಿಕೆ ಮಾಡಿದರು.

ದಕ್ಷಿಣಾಫ್ರಿಕದ ಜೋಹಾನ್ಸ್‌ಬರ್ಗ್‌ನಲ್ಲಿ ಭಂಗಾರದ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಕೆಲಸಗಾರನನ್ನು ತೆಗೆದುಹಾಕಿದುದಕ್ಕಾಗಿ ೨೦೦೦ ಮಂದಿಗಳು ಮುಷ್ಕರ ಹೂಡಿರುವರು.

ಫ್ರಾನ್ಸಿನಲ್ಲಿ ಶೈಲಕ್ ಭೂಮಿಕೆಯಿಂದ ಯೂರೋಪವನ್ನೇ ಬೆರಗುಗೊಳಿಸಿದ್ದ ಫಿರ್‌ಮಿನ್ ಗೆಮಿಯರ್ ಎಂಬ ಶೇಕ್ಸ್‌ಪಿಯರ್ ನಟನಾರನು ಹೃದ್ರೋಗದಿಂದ ಮೃತನಾದನು.

ಶಸ್ತ್ರವಿನ್ಯಾಸ ಸಭೆಯ ಸಬ್ ಕಮಿಟಿಗಳು ೯೨೦ ಆದುವೆಂದೂ, ೫೧ ಜನರಲ್ ಕಮಿಶನ್ ಸಭೆಗಳೂ, ೩೪ ಬ್ಯೂರೊ ಸಭೆಗಳೂ ಜರೆಗಿರುವುವೆಂದೂ, ಇವುಗಳಿಗೆ ಲೀಗ್ ಫಂಡಿನಿಂದ ೧೧,೩೪,೦೦೦ ಸ್ವಿಸ್ ಫ್ರಾಂಕ್ಸ್‌ಗಳನ್ನು ವೆಚ್ಚ ಮಾಡಲಾಯಿತೆಂದೂ ಸರ್ ಜೋನ್ ಸೈಮನರು ಹೇಳಿದರು.

ಚಳಿಗಾಲದ ಸಮಯದಲ್ಲಿ ಜರ್ಮನಿಯಲ್ಲಿ ಹೆಚ್ಚಿನ ನಿರುದ್ಯೋಗಿಗಳನ್ನು ಹೋಗಲಾಡಿಸುವುದಕ್ಕಾಗಿ ಹಣ ಸಹಾಯ ಬೇಕೆಂದು ಹರ್ ಹಿಟ್ಲರರು ಅರಿಕೆ ಮಾಡಿದ ಕೆಲವು ದಿನಗಳಲ್ಲೇ ೩೫ ಮಿಲ್ಲಿಯ ರೀಕಮಾರ್ಕುಗಳು ಜಮೆಯಾದುವು.

ಸ್ವದೇಶ ವರ್ತಮಾನ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ವಿವಾಹ ವಿಚ್ಛೇದ— ಶ್ರೀಮತಿಯವರ ಮತ್ತು ಶ್ರೀ. ಹರೀಂದ್ರನಾಥ ಚಟ್ಟೋಪಾಧ್ಯಾಯರ ವಿವಾಹ ವಿಚ್ಛೇದವಾಯಿತು. ಶ್ರೀಮತಿಯವರು ಈ ವಿಚ್ಛೇದವಾಗಬೇಕೆಂದು ಮುಂಬಾಯಿ ಹೈಕೋರ್ಟಿನಲ್ಲಿ ಅರ್ಜಿ ಮಾಡಿಕೊಂಡಿದ್ದರು. ಹೈಕೋರ್ಟಿನಲ್ಲಿ ವಿಚಾರಣೆಯಾಗಿ ಶ್ರೀ. ಹರೀಂದ್ರರು ಇಂಡಿಯನ್ ಕ್ರಿಶ್ಚನಳೊಬ್ಬಳೊಡನಿರುವರೆಂದೂ, ಪತ್ನಿಯನ್ನು ಕ್ರೂರವಾಗಿ ದಂಡಿಸುತ್ತಿದ್ದರೆಂದೂ ಕಂಡುಬಂದ ಮೇರೆಗೆ ಮುಂಬಾಯಿಯ ಚೀಫ್ ಜಸ್ಟೀಸರು ಈ ವಿವಾಹ ವಿಚ್ಛೇದವಾಗಬಹುದೆಂದೂ, ಮಗುವನ್ನು ಶ್ರೀಮತಿಯವರೇ ವಹಿಸಿಕೊಂಡಿರಬೇಕೆಂದೂ ತೀರ್ಪು ಆಯಿತು. ಅರ್ಜಿದಾರರು ಹೇಳಿಕೊಂಡಂತೆ ಹರೀಂದ್ರನಾಥರು ಕುಡಿತಕಡದ ಅಭ್ಯಾಸದಿಂದಿದ್ದು ಯಾವಾಗಲೂ ಪತ್ನಿಯನ್ನು ಪೀಡಿಸುತ್ತಿದ್ದರಾಗಿ ತಿಳಿದುಬಂದಿದೆ. ಅಲ್ಲದೆ ಅವರು ಆಯಾಕಾಗಿ ನೇಮಿಸಲ್ಪಟ್ಟಿರುವ ಇಂಡಿಯನ್ ಕ್ರಿಶ್ಚನಳೊಡನೆ ಬಹಿರಂಗವಾಗಿ ವಾಸಿಸುತ್ತಿರುವರೆಂದೂ ತಿಳಿದುಬಂದಿದೆ, ಮಗುವಿನ ಪಡೆಯುವಿಕೆ ಕುರಿತು ಗಂಡಹೆಂಡರಿಗೆ ಆಗಾಗ್ಗೆ ಜಗಳಗಳಾಗುತ್ತಿತ್ತು. ಈ ಅರ್ಜಿಯು ಕೋರ್ಟಿಗೆ ಹೋಗಿ ಹರೀಂದ್ರನಾಥರಿಗೆ ಕೋರ್ಟು ಸಮ್ಮನ್ಸ್ ಪೋಸ್ಟಿನ ಮೂಲಕ ಪೊಂಡಿಚೇರಿಗೆ ಹೋಯಿತು. ಆದರೆ ಅವರು ಕೋರ್ಟಿನಲ್ಲಿ ಹಾಜರಾಗಲೇ ಇಲ್ಲ.

ಪೊಲ್ಲಾಚಿಯಲ್ಲಿ ಅರ್ಮುಗಂ ಚೆಟ್ಟಿ ಎಂಬವನು ದ್ವೇಷದಿ ಮೂವರನ್ನು ಗುಂಡು ಹೊಡೆದು ಕೊಂದು ಸಿಕ್ಕಿಬಿದ್ದಿರುವನು.

ಲಕ್ನೋವಿನ ಶ್ರೀ ವೆಂಕಟೇಶ್ವರ ಫ್ಲೋರ್ ಮಿಲ್ಸ್‌ನಲ್ಲಿ ಬೆಂಕಿ ಬಿದ್ದು ಇಡೀ ಕಟ್ಟಡವೂ ಮಿಲ್ಲೂ ರಾತಾರಾತ್ರಿ ಸುಟ್ಟು ಭಸ್ಮೀಭೂತವಾಯಿತು.

ಕಲ್ಕತ್ತದ ಕೋರ್ಪರೇಶನ್‌ನಲ್ಲಿ ಶೇಕಡಾ ೩೩ರಷ್ಟು ನೌಕರರು ಮುಸ್ಲಿಮರೇ ಆಗುವ ವರೆಗೆ ಕೋರ್ಪರೇಶನ್, ಮುಸ್ಲಿಮರನ್ನೇ ಕೆಲಸಕ್ಕಿಟ್ಟುಕೊಳ್ಳಬೇಕೆಂದು ಮುಸ್ಲೀಮು ಕೌನ್ಸಿಲರರ ಆಗ್ರಹ!

ಪಂಡಿತ ಜವಾಹರಲಾಲರು ಅಖಿಲ ಭಾರತ ಕೊಂಗ್ರೆಸ್ ಮಹಾಸಭೆಯನ್ನು ಜರಗಿಸಲು ಅಡ್ಡಿಯಾಗಿಲ್ಲ, ಅವರ ಮೇಲೆ ದೂರು ಹಾಕುವುದು ಪ್ರಸಕ್ತವಲ್ಲವೆಂದು ಶ್ರೀ. ನರಿಮಾನರು ಮುಂಬಾಯಿಯಲ್ಲಿ ಹೇಳಿದರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಕೈರಾದಲ್ಲಿ ಕೈದು ಮಾಡಲ್ಪಟ್ಟರು.

ತಾ. ೨೬ನೇ ದಿನ ತಿರುಚಿನಾಪಳ್ಳಿ, ತಂಜಾವೂರು, ತಿರುವೂರು, ಕೊನೆಂರಾಜಪುರಂ ಮೊದಲಾದ ಅನೇಕ ಪ್ರಾಂತ್ಯಗಳಲ್ಲಿ ಕಂದಾಯ ಕಡಿಮೆ ಮಾಡುವ ದಿನವಾಚರಿಸಲ್ಪಟ್ಟಿತು.

ಮಧುರೆಯಲ್ಲಿ 'ವೇದಿಗುಂಡು' ಎಂಬ ತಮಿಳು ವಾರಪತ್ರಿಕೆಯು ೧೦೦೦ ರೂಪಾಯಿ ಜಾಮೀನು ಕೊಡಬೇಕೆಂದು ಅಪ್ಪಣೆಯಾಗಿರುತ್ತದೆ.

ರಾಮನ್ನಾಡಿನಲ್ಲಿ ಬಡತನವನ್ನು ಸಹಿಸಲಾರದೆ ಕ್ರಿಶ್ಚನ್ ಸ್ತ್ರೀಯೊಬ್ಬಳು ತನ್ನ ನಾಲ್ಕು ಮಕ್ಕಳನ್ನು ಬಾವಿಗೆಸೆದು, ತಾನೂ ಬಾವಿಗೆ ಹಾರಿ ಸಾಯದೆ ಜಖಂಗೊಂಡು ಮೇಲೆತ್ತೆಯಲ್ಪಟ್ಟಳು. ಮೂರು ಮಕ್ಕಳ ಶವಗಳು ದೊರೆತಿರುತ್ತವೆ. ಸ್ತ್ರೀಯ ಮೇಲೆ ದಾವೆ ಹೂಡಲಾಗಿದೆ.

ಸಂಯುಕ್ತ ಪ್ರಾಂತ್ಯದ ನ್ಯಾಯವಿಧಾಯಕ ಸಭೆಯಲ್ಲಿ ಆ ಪ್ರಾಂತ್ಯದ ಆರ್ಥಿಕ ಸುಧಾರಣೆಗಾಗಿ ೫ ವರ್ಷಗಳ ಯೋಜನೆಯೊಂದನ್ನು ಸರಕಾರವು ಹೂಡಬೇಕೆಂಬ ಠರಾವು ಬರಲಿದೆ.

ಕ್ಷಯರೋಗ ನಿವಾರಣೆಗೆ ಹಾವುಗಳ ವಿಷವು ಸದೌಷಧವಿರುವುದರಿಂದ ಆ ವಿಷವನ್ನು ತಯಾರಿಸುವುದಕ್ಕಾಗಿ ಪೆರಿಸಿನಿಂದ ರೋಟಬೋರ್ಗ್ ಎಂಬವರು ಮುಂಬಾಯಿಗೆ ಬಂದಿರುವರು. ೫೦೦೦ ಹಾವುಗಳು ಅವರಿಗೆ ಬೇಕಾಗಿವೆ.

ಕೊಲೊಂಬೊವಿನ ಗಾಂಪಹ ಪೋಲೀಸ್ ಕೋರ್ಟಿನಲ್ಲಿ ಮೆಜಿಸ್ಟ್ರೇಟರು ಆಸನವನ್ನೇರುವಾಗ ಆಪಾದಿತನು ಮೂವರು ಅರ್ಜಿದಾರ ಸ್ತ್ರೀಯರಿಗೆ ಕ್ಷಣಮಾತ್ರದಲ್ಲಿ ಚೂರಿ ಹಾಕಿ ಅವರನ್ನು ಕೆಡವಿದನು. ಅವನನ್ನು ಸೆರೆ ಹಿಡಿದಿರುತ್ತಾರೆ.

ನ್ಯೂಡಿಲ್ಲಿಯಲ್ಲಿ ಬಲಾತ್ಕಾರದಿಂದ ಅಬದ್ಧ ಒಪ್ಪಿಗೆಯನ್ನು ಮಾಡು ವಂತೆ ಮಾಡಿ ಸಂಶಯದ ಮೇಲೆ ಹಿಡಿದ ಜನರನ್ನು ಹೊಡೆದ ಅಬ್ದುಲ್ ಹಸಿಬ್ ಎಂಬ ಪೋಲೀಸ ಸಬ್ ಇನ್ಸ್‌ಪೆಕ್ಟರನಿಗೆ ೩೦೦ ರೂಪಾಯಿ ಜುಲ್ಮಾನೆ ಮಾಡಿ ಮತ್ತು ಒಂದು ದಿನದ ಶಿಕ್ಷೆಯಾಯಿತು.

ರಂಗೂನಿನಲ್ಲಿ 'ಸೆಗೇಂಗ' ಸ್ಟೀಮರಿನ ಸ್ಟುವಾರ್ಡನಾದ ಅಲಿ ಮಹಮ್ಮದ್ ಎಂಬವನು ಎರಡು ಪಿಸ್ತೂಲುಗಳನ್ನೂ ಮದ್ದು ಗುಂಡುಗಳನ್ನೂ ಚೀಲಿನಲ್ಲಿ ಹಾಕಿಕೊಂಡು ಮಾರ್ಗದಲ್ಲಿ ತಿರುಗಾಡಿ, ಸಂಶಯದ ಮೇಲೆ ಕೈದು ಮಾಡಲ್ಪಟ್ಟು ಎರಡು ವರ್ಷಗಳ ಕಠಿಣ ಸಜೆಗೊಳಗಾದನು.

ಸಂಯುಕ್ತ ಪ್ರಾಂತ್ಯದ ಗವರ್ನರರಾದ ಸರ್ ಮಾಲ್ಕಂ ಹೈಲಿಯವರು ಇಂಗ್ಲಾಂಡಿನಿಂದ ಹಿಂತಿರುಗಿ ಪದವಿಯನ್ನು ವಹಿಸಿದರು.

[illegible]ನಲ್ಲಿ [illegible] ಜನಾಂಗವನ್ನಗೆಯುತ್ತಿರುವಾಗ, ಎರಡು ಪ್ರಾಚೀನ ಶಿವನ ವಿಗ್ರಹಗಳು ದೊರೆತುವು. ಎರಡು ಅಡಿ ಎರಡಂಗುಲ ಎತ್ತರವಿರುವ [illegible]

ದಕ್ಷಿಣ ಕನ್ನಡ

ಮಂಗಳೂರು: ಮೆಸ್ಸರ್ಸ್ ಮೆಸೆಗಾಂಜ್ ಹಟೀಸಲ್ ಇಂಡಿಯಾ ಲಿಮಿಟೆಡ್ಸ್ ಇವರ ಕಂಪೆನಿಯು ವಿದ್ಯುದ್ದುಪಕರಣಗಳ ವಿಕ್ರಯ ಶಾಖೋದನ್ನು ಶ್ರೀಕೃಷ್ಣ ಸಿನೆಮದ ಪಕಾರದಲ್ಲಿ ಗುರುವಾರ ತೆರೆದರು.

ಕ್ರಿಕೆಟ್ ರಿಕಾರ್ಡ್ ಬಹುಮಾನವು ಶ್ರೀ ಎಮ್. ಜಿ. ಶಿವನಾಥ ರಾಯು ಸೈಂಟ್ ಎಲೋಸಿಯಸ್ ಕೋಲೇಜಿನ ವಿದ್ಯಾರ್ಥಿಗೆ ಸಿಕ್ಕಿದೆ.

ಇಲ್ಲಿಯ ಇಂಪೀರಿಯಲ್ ಬೇಂಕಿನ ಏಜಂಟರಾದ ಮಿ. ರೋಸ ರವರು ರಜೆಯ ಮೇಲೆ ಹೋದರು. ಅವರ ಬದಲಿಗೆ ಕೊಯಮುತ್ತೂರಿನ ಎಕೌಂಟೆಂಟರಾದ ಮಿ. ಮೊಸ್ಯಾರ್ಡ್‌ರೆಂಟವರು ಬಂದಿರುವರು.

ಒಲಿಂಫಿಯಾ ಸರ್ಕಸ್ ಟೆಂಟು ಕಟ್ಟಿ ತೆರೆದರು. "ಫನ್ ಫೇರ್" ಎಂಬ ಇನ್ನೊಂದು ವಿಚಿತ್ರ ಪ್ರದರ್ಶನ ಕಂಪೆನಿಯು ಮೈದಾನಿನಲ್ಲಿ ತಗಡು ಹೊಡೆದಿದೆ.

ತಾ. [illegible]ನೇ ದಿನ ಕೆನರಾ ಹೈಸ್ಕೂಲಿನಲ್ಲಿ ಗೀತಾ ಜಯಂತಿಯು ಜರಗಿಸಲ್ಪಡಲಿರುತ್ತದೆ. ಶಾಕುಂತಲ ನಾಟಕವೂ ಅಭಿನಯಿಸಲ್ಪಡುವುದು.

ಮಂಗಳೂರು ಮುನ್ಸಿಪಲ್ ಉಪಾಧ್ಯಾಯ ಉಪಾಧ್ಯಾಯಿನಿಯರ ಸಾಮಾನ್ಯ ಸಭೆಯು ತಾ. [illegible]ನೇ ಶನಿವಾರ ಅಪರಾಹ್ನ ಗಂಟೆ [illegible]ಕ್ಕೆ ಮಾರ್ಕೆಟ್ ವಾರ್ಡು ಮುನಿಸಿಪಲ್ ಶಾಲೆಯಲ್ಲಿ ಮುನಿಸಿಪಲ್ ಕೌನ್ಸಿಲರಾದ ಮ॥ ರಾ॥ ರಾ॥ ಜೆ. ಎ. ಪುತ್ರನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಸೆಕ್ರಿಟೆರಿಯವರಿಂದ ಸಭೆಯ ಮುಂದಿಡಿಸಿದ ಕೆಲವು ಠರಾವುಗಳು ನಿರ್ಣಯ ಹೊಂದಿದ ತರುವಾಯ ತಾ. [illegible]ರಲ್ಲಿ ಜರಗಿದ ಸಂಘದ ವಾರ್ಷಿಕೋತ್ಸವದ ಜಮಾ ಖರ್ಚಿನ ಲೆಕ್ಕಪತ್ರಗಳನ್ನು ಮಂಜೂರು ಮಾಡಲಾಯಿತು. ನಂತರ ಹೊಸ ವರ್ಷದ ಕಾರ್ಯ ನಿರ್ವಾಹಕರ ಬಗ್ಗೆ ಪ್ರತಿಯೊಂದು ಶಾಲೆಯಿಂದ [illegible] ಮಂದಿ ಡೈರೆಕ್ಟರರನ್ನು ಚುನಾಯಿಸಲಾಯಿತು. ಆ ದಿನ ಸಮಯ ಸಂಕೋಚದ ಪ್ರಯುಕ್ತ ಪ್ರೆಸಿಡೆಂಟ್, ಸೆಕ್ರಿಟರಿ ವಗೈರೆ ಚುನಾವಣೆ ಬಗ್ಗೆ ಈ ಸಭೆಯು ತಾ. [illegible]ನೇ ಶನಿವಾರ ಸದ್ರಿ ಶಾಲೆಯಲ್ಲಿ ಅಪರಾಹ್ನ ಗಂಟೆ [illegible]ಕ್ಕೆ ಮುನಿಸಿಪಲ್ ಕೌನ್ಸಿಲರಾದ ಜೆ. ಬಿ. ಮುಚಾದೋರವರ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ತಾ. [illegible]ರಿಂದ ಹಿಂದೂಸ್ಥಾನ ಸಿನೆಮದಲ್ಲಿ ಲೋಕವಿಖ್ಯಾತ ಸೂಸನ್ ಲೆನೋಕ್ಸ್ ಎಂಬ ಚಲಚಿತ್ರವು ಪ್ರದರ್ಶಿಸಲ್ಪಡುವುದು. ತಾ. [illegible]ರಿಂದ ದಿ ಸೈನ್ ಒಫ್ ದಿ ಕ್ರೋಸ್ ಎಂಬ ವಿಚಿತ್ರ ಚಿತ್ರವೂ ಪ್ರದರ್ಶಿಸಲ್ಪಡುವುದು.

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ. [illegible]ರಿಂದ ಟ್ರೈಲಿಂಗ್ ಒಫ್ ದಿ ಕಿಲ್ಲರ್ ಎಂಬ ಮಾತಾಡುವ ಚಿತ್ರವನ್ನು ಪ್ರದರ್ಶಿಸಲಾಗುವುದು. ಈ ಚಿತ್ರವು ಭಯಂಕರ ಕೌತುಕಗಳಿಂದಲೂ, ದೃಶ್ಯಾವಳಿಗಳಿಂದಲೂ, ಮನುಷ್ಯ ಬುದ್ಧಿಯುಳ್ಳ ನಾಯಿಯ ಮಹತ್ಕಾರ್ಯಗಳಿಂದಲೂ ಚಿತ್ರವು ಕಂಗೊಳಿಸುತ್ತಿದೆ. ತಾ. [illegible]ರಿಂದ "ಸಂತ ಸಖೂಬಾಯಿ" ಎಂಬ ಭಕ್ತಿರಸಪ್ರದಾಯಕವಾದ ಚಿತ್ರವು ಪ್ರದರ್ಶಿಸಲ್ಪಡುವುದು—ದರ ಅರ್ಧ.

ಎಪ್ರಿಲ್ ತಿಂಗಳಿನಿಂದ ಗಂಡಾಳಿಗೆ [illegible] ಆಣೆ ಕೂಲಿಯನ್ನೂ ಹೆಣ್ಣಾಳಿಗೆ ರೂ. [illegible]ನ್ನೂ ಕೊಡಬೇಕೆಂದು ಮೈಸೂರು ಇಂಡಿಯನ್ ಪ್ಲೇಂಟರರ ಎಸೋಸಿಯೇಶನಿನ ಮಹಾಸಭೆಯು ಚಿಕ್ಕಮಗಳೂರಲ್ಲಿ ಜರಗಿ ಮಂಜೂರಾಗಿದೆ ಎಂದು ತಿಳಿದುಬರುತ್ತದೆ.

ಮಂಗಳೂರಿನ ಲೇಬರ್ ಆಫೀಸರರಾಗಿ ಶ್ರೀ॥ ಜಿ. ಎಸ್. ಸುವರ್ಣ ಇವರು ನೇಮಕ ಹೊಂದಿರುತ್ತಾರೆ.

ಕಾರ್ಕಳ ತಹಶೀಲ್ದಾರರಾದ ಶ್ರೀ॥ ಪಿ. ಆನಂದರಾಯರು ರಿಟಾಯರ್ ಆಗುವುದಕ್ಕಾಗಿ ರಜೆ ಪಡೆದಿರುವರು.

ಪುತ್ತೂರು ತಹಶೀಲ್ದಾರರಾಗಿ ಶ್ರೀ॥ ಎಂ. ಅಪ್ಪುರಾವ್, ಬಿ. ಎ. ಇವರು ನೇಮಕಹೊಂದಿರುವರು.

ಅಜೆಕಾರು:— ಈ ವರ್ಷದ ಇಲ್ಲಿಯ ಸಾರ್ವಜನಿಕ ಬೆಡ್‌ಮಿಂಟನ್ ಪಂದ್ಯಾಟವು (Fives & Doubles) ಇದೇ ಬರುವ ತಾ. [illegible]ರಿಂದ ಮ॥ ರಾ॥ ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಎ. ಬಿ. ಶೆಟ್ಟಿ ಎಮ್. ಎಲ್. ಸಿಯವರ ನೇತೃತ್ವದಲ್ಲಿ ಅತಿ ವಿಜೃಂಭಣೆಯಿಂದ ಪ್ರಾರಂಭವಾಗಲಿರುವುದು. ಅನೇಕ ಸುವರ್ಣ ಮತ್ತು ರಜತ ಪದಕಗಳನ್ನೂ ಕಪ್‌ಗಳನ್ನೂ ಪುರಸ್ಕಾರವಾಗಿ ಕೊಡಲಾಗುವುದು. ಸಕಲರೂ ಈ ಪಂದ್ಯಾಟವನ್ನು ಪ್ರೋತ್ಸಾಹಿಸಬೇಕಾಗಿಯೂ, ಸ್ಪರ್ಧಿಸಲಿಚ್ಛಿಸುವವರು ರೂ. [illegible] ಮತ್ತು [illegible] ಪ್ರವೇಶ ಫೀಸಿನೊಂದಿಗೆ ಅರ್ಜಿಗಳನ್ನು ತಾ. [illegible] ಒಳಗೆ ಕೆ. ನಾರಾಯಣ ಅತಿಕಾರಿ, ಸೆಕ್ರಿಟರಿ, ಪಬ್ಲಿಕ್ ಬೆಡ್‌ಮಿಂಟನ್ ಟೋರ್ನಮೆಂಟ್, ಅಜೆಕಾರು, ದ. ಕ. ಇವರಿಗೆ ಕಳುಹಿಸಬೇಕಾಗಿಯೂ ಈ ಮೂಲಕ ಅಪೇಕ್ಷಿಸುತ್ತಾರೆ.

ಕ್ರಿಸ್‌ಮಸ್ ರಜೆಯಲ್ಲಿ ಜರಗುವ ಟೋರ್ನಮೆಂಟಿನ ಸಮಯ ಹರಿಕಥೆ, ಸಂಗೀತ, ಯಕ್ಷಗಾನ ಮೊದಲಾದ ವಿನೋದ ಕಾರ್ಯಕ್ರಮಗಳು ಪ್ರತಿ ದಿನ ರಾತ್ರಿ ಜರಗುವುವಾಗಿ ತಿಳಿದುಬರುತ್ತದೆ.

ಬಂಟ್ವಾಳ — ಈ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ನವಂಬರ ತಿಂಗಳ ತಾ. [illegible]ರಲ್ಲಿ ಬಂಟ್ವಾಳ ಬೋರ್ಡು ಹುಡುಗಿಯರ ಶಾಲೆಯಲ್ಲಿ ಜರಗಿತು. ಈ ಕೆಳಗಿನ ಠರಾವುಗಳು ಪಾಸಾದವು:—ತಾಲೂಕು ಬೋರ್ಡುಗಳನ್ನು ತೆಗೆದು ಹಾಕುವ ಆಲೋಚನೆಯು ಮದ್ರಾಸು ಸರಕಾರದಲ್ಲಿ ನಡೆಯುವುದರಿಂದ, ಇನ್ನುಮುಂದೆ ಬೋರ್ಡುಗಳ ಕೈಕೆಳಗಿರುವ ಶಾಲೆಗಳನ್ನು ನಡೆಸುವುದಕ್ಕಾಗಿ ಜಿಲ್ಲೆಗೆ ಒಂದು ಎಲಿಮೆಂಟರಿ ಎಜ್ಯುಕೇಶನ್ ಬೋರ್ಡನ್ನು ಸ್ಥಾಪಿಸಬೇಕೆಂದು ಶಾಲಾ ಸುಪರ್‌ವಿಜನ್ ಕೆಲಸವನ್ನು ಜಿಲ್ಲಾ ವಿದ್ಯಾಧಿಕಾರಿಗಳಿಗೆ ಕೊಡಬೇಕೆಂದೂ, ಶಾಲೆಗಳನ್ನು ನಡೆಸುವುದಕ್ಕಾಗಿ ಈಗ ತಾಲೂಕು ಬೋರ್ಡುಗಳಿಗೆ ಕೊಡುತ್ತಿರುವ ಹಣವನ್ನು ಎಜ್ಯುಕೇಶನ್ ಬೋರ್ಡಿಗೆ ಕೊಡಬೇಕೆಂದೂ ಹಣದ ಅಡಚಣೆಯಾಗದಂತೆ ಈ ಬೋರ್ಡಿನವರಿಗೆ ಎಜ್ಯುಕೇಶನ್ ಸೆಸ್ ವಿಧಿಸುವ ಅಧಿಕಾರವನ್ನು ಕೊಡಬೇಕೆಂದೂ, ಹೀಗೆ ಮಾಡಿದರೆ ಇಡೀ ಜಿಲ್ಲೆಯ ಬೋರ್ಡು ಶಾಲಾ ಉಪಾಧ್ಯಾಯರಿಗೆ ಒಂದೇ ಸ್ಕೇಲಿನ ಸಂಬಳ ಕೊಡಲಿಕ್ಕೆ ಸಾಧ್ಯವಾಗುವದೆಂದೂ ನಿರ್ಣಯವಾಯಿತು. ಈ ನಿರ್ಣಯವನ್ನು ಮೇಲಾಧಿಕಾರಿಗಳಿಗೆ ಕಳುಹಿಸಬೇಕೆಂದೂ ನಿರ್ಣಯವಾಯಿತು.

ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಇನ್‌ಸ್ಟ್ರೋಲಮೆಂಟ ಗ್ರಾಂಟು ಕೊಡುವಂತೆ ಲೋವರ್ ಎಲಿಮೆಂಟರಿ ಶಾಲೆಗಳಿಗೆ ಕೊಡುವಂತೆ ಮೇಲಾಧಿಕಾರಿಗಳಿಗೆ ಬರೆಯಬೇಕೆಂದೂ ನಿರ್ಣಯವಾಯಿತು.

ಉಡುಪಿ — ಇದೇ ತಾರೀಕು [illegible]ಕ್ಕೆ ಸ್ಥಳೀಯ ತಾಲೂಕು ಬೋರ್ಡು ಮೆಂಬರರ ಸಾಮಾನ್ಯ ಸಭೆಯು ಬಾರ್ಕೂರಿನಲ್ಲಿ ಕೂಡಲಿರುವದೆಂದು ನೋಟೀಸು ಕೊಡಲಾದ ಮೇರೆಗೆ ಸಭೆ ಸೇರಿದಾಗ್ಯೂ, ಸದರಿ ಸಭೆಯು ಮುಂದರಿಸಿಡಲ್ಪಡಬೇಕಾಗಿ ಸೂಚನೆಯೊಂದು ಬಹುಮತದಿಂದ ಪಾಸಾಯಿತು.

ಸದರಿ ತಾಲೂಕು ಬೋರ್ಡು ಪ್ರೆಸಿಡೆಂಟರ ಮೇಲೆ ಅವಿಶ್ವಾಸದ ಠರಾವಿನ ಅರ್ಜಿಯು ಈಚೆಗೆ ಕುಂದಾಪುರ ಡಿವಿಜನಲ್ ಆಫೀಸರರಲ್ಲಿ ದಾಖಲಾಗಿದ್ದ ಮೇರೆಗೆ, ಸದರಿ ತಾಲೂಕು ಬೋರ್ಡು ಮೆಂಬರರ ವಿಶೇಷ ಸಭೆಯೊಂದು ಇದೇ ದಶಂಬರ ತಾ. [illegible]ನೇ ದಿನ ತಾಲೂಕು ಬೋರ್ಡು ಆಫೀಸಿನಲ್ಲಿ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಸೇರಲಿದೆ.

ಮದ್ರಾಸ್ ಇಲಾಖಾ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಪೆಕ್ಷನ್ ಇವರು ತಾ. [illegible]ನೇ ಮಧ್ಯಾಹ್ನ ಇಲ್ಲಿಗೆ ಚಿತ್ತೈಸಿದ್ದು ಸ್ಥಳೀಯ ಬೋರ್ಡು ಹೈಸ್ಕೂಲ್, ಮಿಶನ್ ಹೈಸ್ಕೂಲ್, ಸೈಂಟ್ ಸಿಸಿಲಿಯಾ ಹೈಸ್ಕೂಲ್ (ಹುಡುಗಿಯರದ್ದು) ಮತ್ತು ಗವರ್ನಮೆಂಟ್ ಹ್ಯಾಯರ್ ಎಲಿಮೆಂಟರಿ ಸ್ಕೂಲ್, ಫಾರ್‌ವಿಮೆನ್ (ಹೆಮ್ಮಕ್ಕಳ ಟ್ರೈನಿಂಗ್ ಶಾಲೆ)ಗಳನ್ನೂ ಕಲ್ಯಾಣಪುರದ ಸೈಂಟ್ ಮಿಲಾಗ್ರಿಸ್ ಹೈಸ್ಕೂಲನ್ನೂ ಸಂದರ್ಶಿಸಿದರು.

ತಾ. [illegible]ನೆಯ ದಿನ ಇಲ್ಲಿನ ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಇದರ ಶಾಖೆಯೊಂದನ್ನು ಮುಂಬಾಯಿಯಲ್ಲಿ ತೆರೆಯುವ ಸಮಾರಂಭಕ್ಕೆ [illegible]ಕ್ಕೆ ಮಿಕ್ಕಿದ ಆಮಂತ್ರಣಗಳು ಕೊಡಲ್ಪಟ್ಟಲ್ಲಿ [illegible]ಕ್ಕೆ ಮಿಕ್ಕಿದ ಗೃಹಸ್ಥರು ಬಂದು, ತಾಂಬೂಲಾದಿ ಉಪಹಾರ ಸತ್ಕಾರಗಳಿಂದ ಮನ್ನಿಸಲ್ಪಟ್ಟರು. ಈ ರೀತಿಯಲ್ಲಿ ನಮ್ಮ ಊರಿನ ಸಂಸ್ಥೆಯ ಮೇಲೆ ಆದರವಿಟ್ಟು, ಅಖಿಲಭಾರತದಲ್ಲಿ ವ್ಯಾಪಾರಕ್ಕೆ ಕೇಂದ್ರಸ್ಥಾನವಾದ ಮುಂಬಾಯಿಯಲ್ಲಿ ಇದಕ್ಕೆ ದೊರೆತ ಸ್ವಾಗತಕ್ಕೆ ಅನುಗುಣವಾಗಿ "ಕರ್ನಾಟಕ ಕೆಮಿಕಲ್" ಎಂಬುದು ವೃದ್ಧಿಗತವಾದ ಶಾಶ್ವತ ಕೀರ್ತಿಯನ್ನು ಸಂಪಾದಿಸಲಿ!

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

I. P. 44/33

ಚನ್ನು ಶೆಟ್ಟಿ—ಅರ್ಜಿದಾರ.

ಮತ್ತು

ಪಂಜಿಮಹಾಲ್ ಕೃಷ್ಣ ಶ್ಯಾನುಭೋಗ ಕೂಡಾ ರೆಸ್ಪೊಂಡೆಂಟರು.

ಈ ಮೇಲ್ಕಂಡ ವ್ಯವಹಾರದಲ್ಲಿ ಅರ್ಜಿದಾರನು ತನ್ನನ್ನು ದಿವಾಳಿ ಮಾಡಬೇಕಾಗಿಯೂ [illegible] ಮತ್ತು ಸದ್ರಿ ಅರ್ಜಿಯನ್ನು ಸಮ್ಮರಿಯಾಗಿ ತೀರ್ಮಾನಿಸಬೇಕಾಗಿ ಕೂಡಾ ಅರ್ಜಿ ಹಾಕಿರುತ್ತಾನೆ. ಸದ್ರಿ ಅರ್ಜಿಗಳ ತನ್ನ ಬಗ್ಗೆ ಇದೇ ಬರುವ ತಿಂಗಳ ದಶಂಬರ ತಾ. 5ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಬೆಳಗ್ಗೆ ಘಂಟೆ 11ಕ್ಕೆ ಇಟ್ಟಿರುತ್ತದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಮಂಗಳೂರು,
30—11—'33

A. Shanker Alva,
ಅರ್ಜಿದಾರನ ಕಡೆ ವಕೀಲ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 435/1931. R. E. P. 728/1933.

ಉಡ್ಪಿ ಶ್ರೀ ಸೋದೆ ಮಠದ ಶ್ರೀ ವಿಶ್ವೇಂದ್ರ ತೀರ್ಥ ಸ್ವಾಮಿಯವರ ಜನರಲ್ ಏಜಂಟ್ "ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ" ಇದರ ಏಜಂಟ್ ತೋನ್ಸೆ ರಘುನಾಥ ಅನಂತ ಪೈ—ವಾದಿರು ಅರ್ಜಿದಾರರು.

ಮತ್ತು

ಆಲ್ಬರ್ಟ್ ಡಿ. ಸೋಜ ಕೂಡಾ—ಎದ್ರಿರು

ಇವರೊಳಗೆ

1ನೇ ಎದ್ರಿ—Albert D'Souza, son of Santhan D'Souza, C/o A. Stanby & Co. Soda Manufacturers.—Karachi, ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದ್ರಿ ಅಮಲ್‌ಜ್ಯಾರಿಯಲ್ಲಿ ಜಪ್ತಾದ ಸ್ಥಿರಾಸ್ತಿ ಮಾರಾಟದ ಬಗ್ಗೆ ಅರ್ಜಿದಾರರ ಕಡೆಯಿಂದ ಹಾಜರು ಪಡಿಸಿದ ಇಸ್ತಿಹಾರಿನ ಶರ್ತುಗಳನ್ನು ನಿರ್ಣಯಿಸಲಿಕ್ಕೆ 1933ನೇ ಇಸವಿ ದಶಂಬರ ತಿಂಗಳ 11ನೇ ತಾರೀಖಿನ ದಿನ ನಿಶ್ಚಯಿಸೋಣಾಗಿದೆ ಎಂದು ಸದ್ರಿ 1ನೇ ಎದ್ರಿಗೆ ಈ ಮೂಲಕ ಸೂಚಿಸೋಣಾಗುತ್ತದೆ.

Udipi
28—11—1933.

H. Keshava Pai,
Vakil for Petitioners.

+ + + +

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ).

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಿಂಟ್ಯಾನ್, ಇಂಕ್ಸ್,
ಚ್ಯವನಪ್ರಾಶ, ಸ್ನೋ, ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director:—**Venkatraya Annappa Baliga**

Jubilee year Jubilee year

The Bombay Life Assurance Co. Ltd.,

Bombay—Established 1908.

Chairman:—**Sir Lalubhai Samaldas**, Kt., C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply. Right opportunity to those who desire independant and respectable vocation.

Applications can be made to the undersigned giving full qualifications and whether they can guaranteed business.

Apply to:— **KOCHIKAR BROTHERS,**
Madras Branch Secretaries.

Vishveshwarapuram Circle, *Bangalore City.* — Udipi, *South India.* — *or* — Post Box No. 337, *Mount Road, Madras.*

N. B. Intending candidates may interview by previous appointment with our Organizing Secretary (now in Bombay) who will be touring.

(25—8—33.)

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ. 1-4-0. ಅಬಲಾಮೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 2. ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0. ಚವನಪ್ರಾಶಲೇಹ ೧ ರಾತಿಗೆ ರೂ. 2-8-0. ಅಭಯಾಮಲಕಿ ೧ ರಾತ್ಲಿಗೆ ರೂ. 2. ಚಂದ್ರಮಸ್ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ. 0-5-0. ದಂತಧಾವನ ಚೂರ್ಣ ಕೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ (ದದ್ದು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ. 0-4-0. ಕೃಷ್ಣಾರಕ ೧ ಔನ್ಸಿಗೆ ರೂ. 0-6-0. ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ಕೊಲೆ ೧ಕ್ಕೆ ರೂ. 0-8-0. ಮಹಾ ಚಿತ್ರಕ ಕೊಲೆ ೧ಕ್ಕೆ ರೂ. 1-0-0. ಪಿಂಡ ತೈಲ ೫ ಔನ್ಸ್ ಬಾಟಿ ೧ಕ್ಕೆ ರೂ. 0-10-0. ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-0-0. ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 3-8-0.

ನಮ್ಮ ಔಷಧಗಳು ದೊರೆಯುವ ಸ್ಥಳ:—ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲ್‌ಬೈಲ್. ಬೈಂದೂರು—ಕೆ. ಪುತ್ತು ಕಾಮತ್. ಗಂಗೊಳ್ಳಿ—ಜಿ. ಸುರೇಂದ್ರ ನಾಯ್ಕ. ಕುಂದಾಪುರ—ಕೆ. ರಾಮ ಭಟ್. ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ. ಜನಾರ್ದನ ನಾಯಕ್ ಎಂಡ್ ಕೊ., ಪೈ ಫಾರ್ಮೆಸಿ, ಆರ್. ಎಸ್. ಶೆಣೈ, ರಥಬೀದಿ. ಕಾರ್ಕಳ—ವಿ. ವಿ. ಶೆಣೈ. ಕಾಪು—ಡಾಕ್ಟರ್ ಬಿ. ಕೆ. ದೇಕಲ ಡಿಸ್ಪೆನ್ಸರಿ. ಬಟ್ಕಲ್—ವಾಮನ ನರಸಿಂಹ ನಾಯಕ್. ಬಾರ್ಕೂರು—ಬಿ. ಭಗವಂತ ಮಲ್ಯ, ಆರ್. ಪಿ. ಔಷಧಾಲಯ. ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಕೇಶವಗಿರಿ ನಾಗಪ್ಪ ಎಂಡ್ ಸನ್ಸ್. ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli. Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,00,000. Paid up Capital Rs. 20,000 Issued Capital Rs. 2,00,000.

STATEMENT OF AFFAIRS OF THE SYNDICATE AS ON 31ST October 1933.

Liabilities.			Assets.		
Paid up Capital	Rs.	20,000-0-0.	Loans on Land mortgage	Rs.	2,74,676—15—11.
Reserve & other funds	,,	20,250—0—0.	Loans on Valuable Securities	,,	2,34,925—12—4.
Deposits	,,	10,54,224—6—8.	Loans on Bills of Exchange, Hundis and Promissory Notes		4,75,518—6—3.
Due to Bankers	,,	85,557—13—10.	Investment on Shares of other Companies	,,	43,575—0—0.
			On Deposits with other Bankers	,,	1,15,000—0—0.
Bills for Collection	,,	29,202—0—1.	Bills for collection (per contra)	,,	29,202—0—1.
Sundries	,,	1,20,760—8—5.	Sundries	,,	1,22,147—6—3.
			Cash in hand & with Bankers	,,	34,949—4—2.
Total	Rs.	13,29,994-13-0	Total	Rs.	13,29,994-13-0.

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi, 8-11-1933. **P. A. Pal Bros.,** *Managing Agents.*

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ವಿವಾಹ ವಿಚ್ಛೇದ.

ಶಬ್ದ—ರೇಡಿಯೋ.

ಶಬ್ದವು ಹೇಗೆ ಚಲಿಸುತ್ತಿದೆಯೆಂದು ಈ ಚಿತ್ರವು ತೋರಿಸುವುದು. ಕೆಳಯ ಸ್ಥಳದಲ್ಲಿ ಎರಡು ಕಂಭಗಳಂತಿರುವ ದೇಶದಲ್ಲಿ ಶಬ್ದಧ್ವನಿಯಿದ್ದಂತೆ ಆ ಶಬ್ದವು ರೇಡಿಯೋ ಶಕ್ತಿಯ ಮೂಲಕ ಯಾವ ರೀತಿಯಿಂದ ತರಂಗ ತರಂಗವಾಗಿ ಪ್ರಪಂಚಕ್ಕೆಲ್ಲ ಹಬ್ಬುತ್ತದೆಂದು ಇದರಿಂದ ಕಂಡುಬರುತ್ತದೆ. ಶಾಂತವಾಗಿರುವ ನೀರಿನ ಹಳ್ಳದ ಮಧ್ಯೆ ಒಂದು ಕಲ್ಲನ್ನೆಸೆದರೆ ಯಾವ ತೆರನಾಗಿ ಚಕ್ರಾಕಾರವಾಗಿ ಅಲೆಗಳು ಕೇಲಾಡಿ ಸರಿಯುವವೋ ಅದೇ ರೀತಿ, ಶಬ್ದವೂ ಆಕಾಶದ ಸಮಸ್ತ ದೆಸೆಗಳಿಗೂ ಹರಡುತ್ತದೆ. ಈ ಚಿತ್ರದಲ್ಲಿನ ಮಧ್ಯೆಯಿರುವ ಕಂಭಗಳಂತೆ ಕಾಣುವ ಸ್ಟೇಶನಿನಲ್ಲಿ ಒಬ್ಬನು ಗಾಯನ ಮಾಡಿದರೆ, ಅವನ ಬಾಯಿಂದ ಹೊರಗಾದ ಶಬ್ದವು ರೇಡಿಯೋ ಮೂಲಕ ಆಕಾಶಕ್ಕೆ ಏರಲುವುದು. ಅದು ಸರಿಯುತ್ತ



(ಶಬ್ದ—ರೇಡಿಯೋ ಅಲೆಗಳ ವ್ಯಾಪಕತೆ)

ಹೋಗುವಾಗ ಅಗಲವಾಗುವುದು. ಎಲ್ಲೆಲ್ಲಿ ಈ ಶಬ್ದವನ್ನು ಕೇಳಲು ಏರ್ಪಾಡುಗಳಿವೆಯೋ ಅಲ್ಲಲ್ಲಿ ಆ ಗಾಯಕನ ರಾಗವು ಬರೀ ಸಮೀಪ ದಿಂದಲೇ ಕೇಳಿದಂತಾಗುವುದು. ಭೂಮಿಯ ಸುತ್ತಳತೆಯು ೨೫ ಸಾವಿರ ಮೈಲುಗಳು. ರೇಡಿಯೋ ಅಲೆಗಳು ಸೆಕೆಂಡಿಗೆ ೧೮೬ ಸಾವಿರ ಮೈಲು ದೂರ ಓಡುತ್ತವೆ. ಲಂಡನಿನಲ್ಲಿ ಗಾಯನ, ಅಥವಾ ಲೆಕ್ಚರ್ (ಭಾಷಣ) ಮಾಡುವವರಾರೆಂದು ನಮಗೆ ಕೇಳಬೇಕಾದರೆ ರೇಡಿಯೋ ರಿಸೀವಿಂಗ್ ಸೆಟ್ ಎಂಬ ಉಪಕರಣಗಳು ಬೇಕಾಗುತ್ತವೆ.

ರೇಡಿಯೋ ಅಂದರೇನು? ಅದರ ಕೆಲಸವೇನು? ಎಂದು ತಿಳಿಯಬೇಕಾದರೆ ಬರುವ ಸಂಚಿಕೆಯಲ್ಲಿ ಈ ಪುಟವನ್ನು ನೋಡುವುದು.

ಮುಂದಕ್ಕೆ?

ಅಮೇರಿಕಾದಲ್ಲಿ ರೋಬೋಟ್ ಎಂಬ ಯಂತ್ರವನ್ನು ಮನುಷ್ಯಾಕೃತಿಯಂತೆ ತಯಾರಿಸಿರುತ್ತಾರೆ. ಇದು ವಿದ್ಯುಚ್ಛಕ್ತಿಯಿಂದ ನಡೆಯುತ್ತದೆ. ಈ ಯಂತ್ರವು ಒಳಗಿನ ಅತಿ ಸೂಕ್ಷ್ಮವಾದ ಇಲೆಕ್ಟ್ರಿಕ್ ಉಪಕರಣಗಳ ಮೂಲಕ ಶಬ್ದವನ್ನೂ ಬೆಳಕನ್ನೂ ವಿದ್ಯುಚ್ಛಕ್ತಿಯನ್ನೂ ಪರಿಗ್ರಹಿಸಬಲ್ಲದು. ಈ ಮೊದಲು ಮನುಷ್ಯನಿಂದಲೇ ಆಗಬೇಕಾಗಿದ್ದ ಕೆಲಸಗಳನ್ನು ಈಗ ಈ ವಿದ್ಯುದ್ದೀಪದ ಮನುಷ್ಯನು ಮಾಡಬಲ್ಲನು. ಈ ರೋಬೋಟ್ ಅಥವಾ ವಿದ್ಯುಚ್ಛಕ್ತಿಯ ಮನುಷ್ಯನ ರಚನೆಯು ಎಲ್ಲಾ ರೀತಿಯಲ್ಲೂ ಜೀವಂತ ಮನುಷ್ಯನಂತೆಯೇ ಇದೆ. ಬ್ಯಾಂಕು ವ ಇತರ ಎಲ್ಲಾ ಆಫೀಸುಗಳಲ್ಲಿ ನಿತ್ಯ ವ್ಯವಹಾರ ಕೆಲಸಗಳನ್ನೂ, ಕ್ಲಾರ್ಕ್ ಕೆಲಸಗಳನ್ನೂ ಈ ಗೊಂಬೆಯು ಮಾಡುವುದು. ಯಾರಾದರೂ ಹೊರಗಿನಿಂದ ಬಂದರೆ ಅವರಿಗೆ ಬಾಗಿಲನ್ನು ತೆಗೆಯುವುದು, ಅವರಿಗೆ ಆಫೀಸು, ಕುರ್ಚಿ ಸಾಮಾನುಗಳನ್ನು ತೋರಿಸುವುದು ಇವೇ ಮೊದಲಾದ ಕೆಲಸಗಳನ್ನು ಇದು ಮಾಡುವುದು. ಈ ಗೊಂಬೆಯು ಸಾರ್ವತ್ರಿಕವಾಗಿ ಪ್ರಸಾರ ಹೊಂದಿದರೆ ಸಾವಿರಾರು ಜನರು ನಿರುದ್ಯೋಗಿಗಳಾಗಬಹುದೆಂದು ಊಹಿಸಿದ್ದಾರೆ. ರಾತ್ರಿ ಪಹರೆಗಾಗಿ ಈ ಯಂತ್ರಗಳನ್ನು ಅನೇಕ ಆಫೀಸುಗಳಲ್ಲಿ ಉಪಯೋಗಿಸುತ್ತಿರುವರು.

ಕಾಣದ ಪ್ರಕಾಶದ ಮಹಿಮೆ.

ಲಂಡನಿನ ಲಯನ್ಸ್ ಕೇಫ್ ಹಾಪಿನ ಬಾಗಿಲು ಯಾವಾಗಲೂ ತೆರೆದಿಲ್ಲದಿರುವುದು. ಆದರೆ ಹಾಪಿನವನು ಎದುರಲ್ಲಿರುವುದಿಲ್ಲ. ಅವನು ಇತರ ಕೋಣೆಯಲ್ಲಿರುವನು. ಅಂಗಡಿ ಬಾಗಿಲಿಗೆ ಯಾರಾದರೂ ಬಂದರೆ, ಒಡನೆ ಒಂದು ಘಂಟೆಯು ಒಳಗಿನಿಂದ ತಾನಾಗಿಯೇ ಬಡಿದುಕೊಳ್ಳುವುದು. ಈ ಶಬ್ದವನ್ನು ಕೇಳಿದೊಡನೆಯೇ ಯಜಮಾನನು ಹೊರಗೆ ಬರುವನು. ಈ ಶಬ್ದವಾಗಲು ಕಾರಣವೇನು?—ಅಂಗಡಿಯ ಬಾಗಿಲ ಬಳಿ ಕಾಣದ ಒಂದು ಪ್ರಕಾಶ (ray) ಇದೆ. ಬರುವವನು ಆ ಪ್ರಕಾಶವನ್ನು ದಾಟಿದೊಡನೆ, ಈ ಪ್ರಕಾಶವು ಒಳಗಿನ ಘಂಟೆಯು ಅರ್ಭಟಿಸುವಂತೆ ಮಾಡುವುದು. ಈ ಪ್ರಕಾಶವು ಯಾರಿಗೂ ಕಾಣುವುದಿಲ್ಲ. ಎಲ್ಲಿಂದ ಹೊರಡುತ್ತದೆಂದೂ ತಿಳಿಯುವುದಿಲ್ಲ—ಈಗೀಗ ಇದನ್ನು ಕಳ್ಳಕಾಕರಿರುವ ಸ್ಥಳಗಳಲ್ಲಿಟ್ಟು ಸಿ. ಐ. ಡಿ.ಗಳು ಕೆಲಸ ಮಾಡುತ್ತಿರುವರು.

ವಿಚಿತ್ರ ಮೊಟ್ಟೆ.

ಬರ್ಮುಡ, ಹ್ಯಾಮಿಂಗ್ಟನ್ ಸಿಟಿ, ಕೋಲ್ಸ್ ಸ್ಟ್ರೀಟಿನಲ್ಲಿ ಶಿಪ್ ಟೋಂಗ್‌ವೂ ಎಂಬವರಲ್ಲಿ ಒಂದು ಕೋಳಿಯ ಮೊಟ್ಟೆ ಇರುತ್ತದೆ. ಅದರ ಒಂದು ತುದಿಯಲ್ಲಿ ಒಂದು ಬಾಲವಿರುತ್ತದೆ. ಗೋಡೆ ಮೇಲೆ ಹಲ್ಲಿ ಸರಳನ್ನು ತುಂಬಿಸಿ ತುದಿ ಕಟ್ಟಿ ಇಟ್ಟರೆ ಹೇಗೆ ತೋರುತ್ತದೋ, ಹಾಗೆ ಈ ಮೊಟ್ಟೆಯು ಭಾವಚಿತ್ರವು ತೋರಿಬರುತ್ತದೆ. ಈ ಬಾಲವುಂಟಾಗಲು ಕಾರಣವೇನೆಂದು ಗೊತ್ತಾಗಿಲ್ಲ. ಇನ್ನು ಈ ಮೊಟ್ಟೆಯನ್ನು ಮರಿ ಮಾಡಿದರೆ ಮರಿಯು ಯಾವ ರೂಪದನ್ನು ತಾಳಿ ಹೊರಗೆ ಬರುವುದು ಎಂದು ಪರೀಕ್ಷಿಸಬೇಕೆಂದಿರುವರು. ಬಾಲವು ಮೊಟ್ಟೆಯ ಮೇಲಿನ ಸಿಪ್ಪೆಯಂತೆಯೇ ಗಟ್ಟಿಯಾಗಿರುತ್ತದೆ. ಕೂತು ಇರುವುದಿಲ್ಲ. ಮೊಟ್ಟೆಯು ಭಾರವಾಗಿಯೂ ಇದೆ.

ಕೇಪ್ ಕೊಮರಿನ್‌ನಲ್ಲಿ ಇಗರ್ಜಿಯು ಮುಚ್ಚಲ್ಪಟ್ಟಿತು!

ಮೆಜಿಸ್ಟ್ರೇಟರ ಅಪ್ಪಣೆ! ಜನರೊಳಗೆ ಕಲಹ!

ಕೇಪ್‌ಕೊಮರಿನ್‌ನ ನಗರ್‌ಕೊಯಿಲ್‌ನಿಂದ ಬಂದ ವಾರ್ತೆಯಿಂದಾಗಿ—ಧರ್ಮಾರೋಪಣ ಸಂಬಂಧ ಗಲಾಟೆಯ ದೆಸೆಯಿಂದ ಕೇಪ್ ಕೊಮರಿನ್‌ನ 'ಸೈಂಟ್ ಮೇರಿಸ್ ಚರ್ಚ್' ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಪ್ಪಣೆಯ ಮೇರೆಗೆ ಮುಚ್ಚಲ್ಪಟ್ಟಿದೆಯಾಗಿ ತಿಳಿದು ಬಂದಿದೆ. ಚರ್ಚಿನ ಪಹಾರವನ್ನು ಪೋಲೀಸರು ಪಹರೆ ಮಾಡುತ್ತಿರುವರು. ಗುರುಗಳಿಗೂ, ಜನರಿಗೂ ಉಂಟಾದ ಮನಃಕ್ಲೇಶವು ಇದಕ್ಕೆ ಕಾರಣವೆಂದು ತಿಳಿಯಲಾಗಿದೆ. ವಿರೋಧಿಗಳ ಪಕ್ಷದ ಎರಡು ವಿವಾಹಗಳನ್ನು ಇಗರ್ಜಿಯಲ್ಲಿ ರೆವೆರೆಂಡ್ ಫಾದರ್ ಅಂತೋನಿ ಎಂಬ ಆ ಇಗರ್ಜಿಯ ಗುರುಗಳು ಮಾಡದಿದ್ದುದಕ್ಕಾಗಿ ವಿರೋಧ ಪಕ್ಷದ ಜನರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿಕೊಂಡರು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ಪೋಲೀಸರೂ, ಅಧಿಕಾರಿಗಳೂ ಹೋಗಿ ಇಗರ್ಜಿಯವರು ಕೊಟ್ಟಾರದ ದಿವಸದೊಡನೆ ವಿಚಾರಿಸಿಕೊಂಡು ಒಂದು ನಿಶ್ಚಿತ ಏರ್ಪಾಡನ್ನು ಮಾಡಬೇಕೆಂದು ಗುರುಗಳಿಗೆ ಅಪ್ಪಣೆಕೊಟ್ಟರು. ಆದರೆ ಯಾವ ವ್ಯವಸ್ಥೆಯೂ ಆಗಲಿಲ್ಲ! ಕೂಡಲೇ ಮುಂದಕ್ಕೆ ಗಲಾಟೆಯಾಗುವ ಸಂದರ್ಭವನ್ನು ಕಂಡು, ಮೆಜಿಸ್ಟ್ರೇಟರು ಇಗರ್ಜಿಯನ್ನು ಮುಚ್ಚಲು ಅಪ್ಪಣೆ ಕೊಟ್ಟರು. ಎರಡು ಪಕ್ಷಗಳವರೂ ಇಗರ್ಜಿಯನ್ನು ಪ್ರವೇಶಿಸಬಾರದಾಗಿ ಅಪ್ಪಣೆಯಾಗಿರುತ್ತದೆ.

ಕುರುಡರ ಪುಣ್ಯ.

ಕುರುಡರ ಅದೃಷ್ಟವು ಚೆನ್ನಾಗುತ್ತಿದೆ—"ರೋಯಲ್ ಲಂಡನ್ ಐ ಹೊಸ್ಪಿಟಲ್"ನಲ್ಲಿ ಕುರುಡರನ್ನು ಮದ್ದಿನ ಮೂಲಕ ಗುಣಪಡಿಸಿ ಅವರಿಗೆ ಕಣ್ಣು ನನ್ನುಂಟು ಮಾಡುವ ಪರೀಕ್ಷೆಯು ನಡೆದು ಯಶಸ್ವಿಗಳಾಗಿದ್ದಾರೆ. ಕುರುಡರ ಕಣ್ಣುಗಳನ್ನು ಒಂದು ವಿದ್ಯುದ್ದೀಪ ಸಾಧನದ ಮೂಲಕ ಗುಣಪಡಿಸಿ ಕಣ್ಣಿನ Retina ಎಂಬ ಭಾಗಕ್ಕೆ ಪ್ರಕಾಶ ಶಕ್ತಿಯನ್ನು ಕೊಡುವರು. ಇದರಿಂದಾಗಿ ಕೆಲವು ದಿನಗಳಲ್ಲೇ ಕುರುಡರ ಕಣ್ಣಿನ ಶಕ್ತಿಯು ವೃದ್ಧಿಗೊಂಡು ಅವರಿಗೆ ಕಣ್ಣು ಕಾಣಿಸುವುದು. ಕೆಲವು ಸಂದರ್ಭಗಳಲ್ಲಿ ಈ ಯತ್ನವು ಫಲಕಾರಿಯಾಗಿದೆ. ಇನ್ನೂ ಕೆಲವು ಪರೀಕ್ಷೆ ನಡೆಸಿ ಸಂಪೂರ್ಣ ಜಯಗೊಂಡರೆ, ಈ ಯೋಜನೆಯನ್ನು ಎಲ್ಲಾ ಕುರುಡರಿಗೂ ಉಪಯೋಗಿಸಿ ನೋಡಲಾಗುವುದು.

ಆತ್ಮಹತ್ಯೆಗೆ ಕಾರಣವೇನು?

ಪ್ರಾಣಿಗಳೆಂಬೆಣಿಸುವುವುಗಳಲ್ಲಿ ಮನುಷ್ಯನು ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುವನೆಂದು ಕಂಡು ಹಿಡಿಯಲಾಗಿದೆ. ನಾಗರೀಕತೆಯು ಎಷ್ಟು ಹೆಚ್ಚಿತೋ, ಅಷ್ಟು ಆತ್ಮಹತ್ಯೆಗಳೂ ಅಧಿಕವಾಗುತ್ತಿವೆ. ಯುರೋಪು ಅಮೇರಿಕಾಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಆತ್ಮಹತ್ಯೆಗಳ ಸಂಖ್ಯೆಯು ಬಹಳವಾಗಿ ಹೆಚ್ಚಿತು. ೧೯೩೦ರಲ್ಲಿ ಇಂಗ್ಲಾಂಡ್ ವೇಲ್ಸ್‌ಗಳಲ್ಲಿ ಒಟ್ಟು ೩೯೪೦ ಪುರುಷರೂ, ೧೫೦೦ ಸ್ತ್ರೀಯರೂ ಪ್ರಾಣತ್ಯಾಗ ಮಾಡಿದರು. ಕಳೆದ ವರ್ಷ ಹಟ್ಟಿ ಕೆಗೆದಾಗ ಪ್ರತಿಯೊಂದು ದಿವಿಯಲ್ಲಿ ೧೩೦ ಜನರು ಪ್ರಾಣಹತ್ಯೆ ಮಾಡಿಕೊಂಡರೆಂದು ತಿಳಿದುಬಂದಿತು. ೧೯೩೩ರಲ್ಲಿ ೧೩೦ ಜನರು ಇದ್ದಿಲ ಗೇಸಿನ ಮೂಲಕ ಆತ್ಮಹತ್ಯೆ ಮಾಡಿಕೊಂಡರು. ೧೯೩೨ರ ಪಟ್ಟಿಯಂತೆ ೯೯೪ ಜನರು ಹೀಗೆ ಪ್ರಾಣಗಳನ್ನು ಕಳೆದುಕೊಂಡರು. ವರ್ಷಗಳು ದಾಟಿದಷ್ಟಕ್ಕೆ ಪ್ರಾಣತ್ಯಾಗದ ಸಂಖ್ಯೆಯು ಹೆಚ್ಚುತ್ತಾ ಇದೆ. ಹೆಚ್ಚಾಗಿ ವಿದ್ಯಾವಂತರೇ ಈ ಹಾದಿಗೆ ಬಲಿಬೀಳುತ್ತಾರೆ. ಯುರೋಪಿನ ಎಲ್ಲಾ ದೇಶಗಳಲ್ಲಿ ಡೆನ್‌ಮಾರ್ಕ್ ಬಂದರಲ್ಲೇ ಹೆಚ್ಚು ಆತ್ಮಹತ್ಯೆಗಳಾಗಿವೆ. ಆತ್ಮಹತ್ಯೆಗೆ ಹೆಚ್ಚಾಗಿ ಕೆಳಗಿನ ಮನುಷ್ಯರು ಶೇಕಡಾ ೩೦ರಷ್ಟು ಬಲಿಯಾಗಿಯೂ ತೋರಬರುವವರು ಮನಶ್ಶಾಸ್ತ್ರಜ್ಞರು ಈ ಅಭ್ಯಾಸದಿಂದ ಪಾರಾಗುವರೆಂದೂ ಪರಿಶೋಧಿಸಿದ್ದಾರೆ. ಕೆಳಗಿನವರ ನರಗಳ ನಿರ್ಬಲತೆಯೇ ಈ ಆತ್ಮಹತ್ಯೆ ಪ್ರೇರೇಪಣೆಗೆ ಮೂಲ. ಜನವರಿ ಫೆಬ್ರವರಿಗಳಲ್ಲದೆ ವಸಂತ ಕಾಲದಲ್ಲೂ ಹೆಚ್ಚು ಆತ್ಮಹತ್ಯೆಗಳಾಗುತ್ತಿವೆ. ಹೆಚ್ಚಾಗಿ ಜೂನ್ ೧೧ಕ್ಕೆ ಮುತ್ತಾದ ತಿಂಗಳಿಗಿಂತಲೂ ಹೆಚ್ಚಿನ ಆತ್ಮಹತ್ಯೆಗಳಾಗುತ್ತವೆ. ನಾಲ್ಕು ವರ್ಷಗಳ ಪಟ್ಟಿ ತೆಗೆದಲ್ಲಿ ಜೂನ್ ೧೧ನೇ ದಿನ ಮಂಗಳವಾರ ಅನೇಕ ಪ್ರಾಣಹತ್ಯೆಗಳಾಗಿವೆ ಎಂದು ತಿಳಿದುಬಂದಿದೆ. ಮಳೆಗಾಲದ ಮಹಾ ಮಬ್ಬಿನ ದೆಸೆಯಿಂದಾಗಿಯೂ ಆತ್ಮಹತ್ಯೆಯು ಹೆಚ್ಚುತ್ತದೆ. ಬಡತನದಿಂದ ಪ್ರಾಣಹತ್ಯೆಯಾಗುವುದು ಬಹಳ ಕಡಿಮೆಯೆಂದೇ ಶೋಧನೆಯಿಂದ ತಿಳಿದು ಬರುತ್ತದೆ.

೭೪ ಘಂಟೆ ೨೪ ಮಿನಿಟು ಈಜಿ ವಿಶ್ವವಿಖ್ಯಾತರಾದ ಶ್ರೀ ಪಿ. ಕೆ. ಘೋಸರು.

ರಂಗೂನಿನ ರೋಯಲ್ ಸರೋವರದಲ್ಲಿ ೭೪ ಘಂಟೆ ೨೪ ಮಿನಿಟುಗಳ ತನಕ ಈಜಾಡಿ ಬಂಗಾಳೀ ತರುಣರಾದ ಶ್ರೀ॥ ಪಿ. ಕೆ. ಘೋಸರೆಂಬವರು ವಿಶ್ವದ ಈಜಾಟ ಮೇರೆ (World's Endurance Swimming Record) ಯನ್ನು ಮೀರಿದರು. ಇವರು ಬರುವ ವರ್ಷ ಯೂರೋಪಿಗೆ ಹೋಗಿ ಅಲ್ಲಿಯೂ ಇಂಗ್ಲಿಷ್ ಚೆನಲನ್ನು ಈಜಲಿರುವರು. ಮಾಲ್ಟಾದಿಂದ ಸಿಸಿಲಿಗೆ ೬೪ ಮೈಲು ಈಜಲಿರುವರು. ಜಪಾನ ಅಮೇರಿಕಾಗಳಿಗೆ ಹೋಗಿ ಈಜಾಟದ ಶಾಸ್ತ್ರವನ್ನು ಅಧ್ಯಯನಮಾಡಲಿರುವರು. ಶ್ರೀ ಘೋಸರು ಹಿಂದೂದೇಶಕ್ಕೆ ಹೊಸ ಹೆಸರನ್ನು ತಂದವರು. ಒಳ್ಳೇ ದೇಹಧಾರ್ಢ್ಯವುಳ್ಳವರು, ಹಟವಾದಿಗಳು, ಭಯರಹಿತರು. ಇವರು ಈಜಾಟದಲ್ಲಿ ಇನ್ನೂ ಹೆಚ್ಚಿನ ಹೆಸರನ್ನು ಪಡೆಯುವರೆಂದು ಹಾರೈಸಲಾಗಿದೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನಲ್ಲಿ.

ಸ್ಮಾಲ ನಂಬ್ರ 537/1933.

ಸರಾಫ ಯು. ವೆಂಕಟೇಶ ಭಟ್ಟ—ವಾದಿ

ಮತ್ತು

ಮಾತ್ರಯ್ಯ ಶೆಟ್ಟಿ—ಪ್ರತಿವಾದಿ.

ವಾದಿಯ ಬಾಬ್ತು ಉಡುಪಿ ಕಸಬೆಯಲ್ಲಿರುವ ಸರಾಫ ಕಟ್ಟೆಯಲ್ಲಿ ಪ್ರತಿವಾದಿಯು ನಡಿಸಿದ ಚಿನ್ನಾಭರಣಗಳ ಲೇವಾದೇವಿ ಬಾಬ್ತು ಪ್ರತಿವಾದಿಯ ಮೇಲೆ ಅಸಲು ಬಡ್ಡಿಯಿಂದ ಬಾಕಿಯಾದ ರೂಪಾಯಿ 161—1—8ನ್ನು ಕೇಳಿ ದಾಖಲು ಮಾಡಿದ ಮೇಲೆ ಕಾಣಿಸಿದ ದಾವೆಯು ತಾ. 5-1-1934ಕ್ಕೆ ಜಡ್ಜರು ತನಿಕೆಗೆ ಇಡೋಣಾಗಿದೆಂತ ಈ ಮೂಲಕ ತಿಳಿಸೋಣವಾಗುತ್ತದೆ.

ಉಡುಪಿ, }
24—11—33. }

K. Vittal Nayak,
Vakil for Plff.

ಗರ್ಭಧಾರಣ ಮಾಡಲು ಭಯಗೊಳ್ಳುವ ಸ್ತ್ರೀಯರಿಗಾಗಿ

ಮೆನೆಸ್ಟ್ರಿನ್ ಕೆಪ್‌ಸಲ್ಸ್ (Menestrin Capsules) ಗಳನ್ನು

ಬಾಯಿಯ ಮೂಲಕ ಸೇವಿಸುವುದರಿಂದ

ಗರ್ಭವೇ ನಿಲ್ಲುವುದಿಲ್ಲ.

ಬಾಟ್ಲಿ ಒಂದಕ್ಕೆ ರೂ 1—8—0 ಮಾತ್ರ.

ದಿ ಓರಿಯಂಟಲ್ ರಿಸರ್ಚ್ ಲೆಬೋರೆಟರಿ, ವೆಪೇರಿ, ಮದ್ರಾಸು.

The Oriental Research Laboratory.

Vapery, Madras.

ಗಾಂಧಿವಾಹನ ಶಕ ... ನೆಯ ಶ್ರೀಮುಖ ಸಂವತ್ಸರದ ಮಾರ್ಗಶಿರ ಶು ೧ನೇ ಶನಿವಾರದಿಂದ ಶ್ರೀಮುಖ ಸಂವತ್ಸರದ ಮಾರ್ಗಶಿರ ಶು ೭ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಹಣದ ವೃಶ್ಚಿಕ — ಮಾರ್ಚ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉದಯ	ಸೂರ್ಯ ಅಸ್ತ
2	ಶನಿ	೧೫	೧	ರೇವತೀ	೩೩	೧೭	6.33	6. 0
3	ರವಿ	೧	೩೭	ಮೃಗಶಿರಾ	೪೩	೧೯	6.33	6. 0
4	ಸೋಮ	೨	೧೪	ಆರ್ದ್ರಾ	೫೦	೧೯	6 34	6 0
5	ಮಂಗಳ	೩	೦೯	ಪುನರ್ವಸು	೫೫	೨೦	6 34	6. 0
6	ಬುಧ	೪	೨೩	ಪುಷ್ಯ	೩೦	೨೧	6 30	6 0
7	ಗುರು	೫	೩೨	ಪುಷ್ಯಾ	೫	೨೨	6.35	6. 0
8	ಶುಕ್ರ	೬	೩೭	ಆಶ್ಲೇಷಾ	೧೨	೨೪	6 36	6 0

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದುದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮ್ಲಾ ಮಳೆ.
23	89— 2	73— 2	—	—
24	90— 1	70— 5	—	—
25	87— 3	69— 2	—	—
26	89— 4	68— 5	—	—
27	90— 0	73— 4	—	—
28	88— 6	70— 2	—	—
29	89— 4	66— 2	—	160-25

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ	ವರೆಗೆ ರೂ ಆ
ಹೊಸ ರಾಶಿ ಅಕ್ಕಿ	3— 6	3—12
ಹಳೆ ಮುಕ್ಕತಿ	5— 4	5—12
ಗುಡ್ಡು	4— 4	5— 0
ಸುಗ್ಗಿ	4— 4	4—10
ಊರ ಅವ್ವಲ್ ಬೆಳ್ತಿಗೆ	4—10	5— 4
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	5—10	6— 2
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4— 4	4— 8
ಗೋದಿ ಗೋಣಿ ೧ಕ್ಕೆ	11— 8	12— 8
ತೊಗರಿ ಗೋಣಿ ೧ಕ್ಕೆ	9— 4	11— 0
ಹುರುಳಿ ಗೋಣಿ ೧ಕ್ಕೆ	5—10	5—15
ಕಡಲೆ ಗೋಣಿ ೧ಕ್ಕೆ	9— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	10— 8	18— 0
ಉದ್ದು ಗೋಣಿ ೧ಕ್ಕೆ	8— 8	9— 6
ಹೆಸರು ಗೋಣಿ ೧ಕ್ಕೆ	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	35— 0	36— 4
ಉಪ್ಪು ಗೋಣಿ ೧ಕ್ಕೆ	5— 4	5—12
ಕೊಬ್ರಿ ಖಂಡಿ ೧ಕ್ಕೆ	45— 0	55— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	16— 8	17— 0
ಎಳ್ಳೆಂಡಿ ಖಂಡಿ ೧ಕ್ಕೆ	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	3— 4	4— 4
ಎಳ್ಳೆಣ್ಣೆ ಮಣ ೧ಕ್ಕೆ	5— 0	6— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	7— 4	8—12
ಮಾರಿಶ ಸಕ್ಕರೆ ಮಣ ೧ಕ್ಕೆ	3—14	4— 0
ಹೊಸ ಮೆಣಸು	6—14	8— 0
ಸಾಸಿವೆ ಮುಡಿ ೧ಕ್ಕೆ	5— 0	4— 8
ಕಾಳುಮೆಣಸು ಖಂಡಿ ೧ಕ್ಕೆ	130— 0	0 0
ಯೇಲಕ್ಕಿ ಮಣ ೧ಕ್ಕೆ	20— 0	0
ಗೇರುಬೀಜ ಮುಡಿ ೧ಕ್ಕೆ	2— 8	2—10
ಕಬ್ಬಿಣ ಖಂಡಿ ೧ಕ್ಕೆ	42— 0	44— 0
ತಾಂಬ್ರ ತಗಡು ಮಣ ೧ಕ್ಕೆ	9—[illegible]	9—12
ತಾಂಬ್ರ ಪಾತ್ರಗಳು ಮಣ ೧ಕ್ಕೆ	13— 8	14— 8
ಬೇಟೆಬೆಳ್ಳಿ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮಣ ೧ಕ್ಕೆ	9— 0	9— 8
ಸತುವು ೧ಕ್ಕೆ	20— 0	20— 8
ಹುಣಿಸೆ ಹುಳಿ ಖಂಡಿ ೧ಕ್ಕೆ	35— 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ	200— 0	250— 0
ಫಿಟೇರಿ ಕಾಫಿ ಖಂಡಿ ೧ಕ್ಕೆ	250— 0	260— 0
ಹಳೆ ಅಡಿಕೆ	105— 0	110— 0
ಹೊಸ ಅಡಿಕೆ	70— 0	75— 0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ, ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು,

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರ್ಭಯವಾದ ಪ್ರಯಾಣ! **ಉತ್ತಮವಾದ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

[illegible]

ಉಡುಪಿ ನಿವಾಸಿಗಳೋ ವನವಾಸಿಗಳೋ?

ಶ್ರೀ ನಾರಾಯಣಾಚಾರ್ಯರು ಉಡುಪಿಯಲ್ಲಿ ಶ್ರೀ ಕಾಶೀ ಗಂಗಾಭವನವೆಂಬ ಮನೆ ಕಟ್ಟಿಸಿ ನಮ್ಮ ಊರಿನ ಬ್ರಾಹ್ಮಣ ವಿದ್ವಾಂಸ ಶಿರೋಮಣಿಗಳನ್ನು ಊಟ ಉಪಚಾರಗಳಿಂದ ಸಂತೋಷಪಡಿಸಿದ್ದಲ್ಲದೆ ಶ್ರೀ ಶ್ರೀ ಸ್ವಾಮಿಗಳವರನ್ನೂ ಕರೆಸಿ ಪಾದಪೂಜಾದಿಗಳನ್ನೂ ನಡೆಸಿ ಆ ಸಂಭ್ರಮದಿಂದ ಕಳುಹಿಸಿದ್ದು ನೋಡಿ ಕೆಲವು ವನವಾಸಿಗಳಿಗೆ ಮನಸ್ಸಿಗೆ ಕರೆಕರೆಯೂ ಅಸೂಯೆಯೂ ಆಗಿದ್ದರಿಂದ ನವಯುಗದಲ್ಲಿ ಪ್ರಕಟಿಸಿದ ಲೇಖನವನ್ನು ನೋಡಿ ಅವರು ಉಡುಪಿ ವಾಸಿಗಳೋ ಅಥವಾ ವನವಾಸಿಗಳೋ ಎಂದು ತಿಳಿಯಬೇಕಾಗಿದೆ. ಏಕೆಂದರೆ ಪರ್ಯಾಯ ಸ್ವಾಮಿಗಳು ಮೊದಲಿನಿಂದಲು ಕಡ್ಯ ಕೊಪ್ಪಲ, ಲಕ್ಷ್ಮೀ ಕೊಪ್ಪಲ, ಶ್ರೀಬಿಡು ಕೊಪ್ಪಲ ಮುಂತಾದ ಕೊಪ್ಪಲುಗಳಿಗೆ ಹೋಗಿ ಬರುವ ವಾಡಿಕೆ ಇರುವುದರಿಂದ ಈ ಸಂಗತಿಯೆಲ್ಲಾ ರಜತಪೀಠವಾಸಿಗಳಿಗೆ ತಿಳಿದ ವಿಷಯವೇ ಸರಿ. ಹೀಗಾಗಿ ವನವಾಸಿಗಳಿಗೆ ಹೇಗೆ ತಿಳಿಯುವುದು? ಆದ್ದರಿಂದ ಇನ್ನಾದರೂ ಉಡುಪಿಯಲ್ಲಾದ ಸಂಗತಿಗಳನ್ನು ತಿಳಿದು ಇರುವುದಲ್ಲದೆ ಇನ್ನಾದರೂ ಅಸೂಯಾಪರರಾಗಿ ಇರಬಾರದೆಂದು ವಿನಂತಿ.

ಉಡುಪಿ ನಿವಾಸಿಕ.

ಸರ್ಕಿಲಾರು.

ಪುತ್ತೂರು ತಾಲೂಕಿನ ಎಲ್ಲಾ ಪಂಚಾಯತ ಬೋರ್ಡುಗಳಿಗೆ— ಇದೇ ಬರುವ ಡಿಸೆಂಬರ ತಾ. 3ನೇ ಆದಿತ್ಯವಾರ ಸಾಯಂಕಾಲ 4 ಘಂಟೆಗೆ ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಯಾನೆ ಭೂಪಾಲಕರ ಪ್ರಚಂಡ ಮಹಾಸಭೆಯು ಪುತ್ತೂರು ಹುಡುಗರ ಬೋರ್ಡು ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಜರಗುವುದು. [illegible] ಎಂದು ನಿರೂಪಿಸಿಕೊಳ್ಳುವುದೇ ಈ ಸಭೆಯ ಉದ್ದೇಶವಾಗಿದೆ. ಕಾರ್ಯ ಮಹತ್ವದ್ದಾದುದರಿಂದಲೂ ಇಡೀ ಜಿಲ್ಲೆಯ ಸಭೆಯೇ ಇಲ್ಲಿ ಸೇರುವುದಾದುದರಿಂದಲೂ ಇಲ್ಲಿಗೆ ಇಡೀ ಜಿಲ್ಲೆಯ ಎಲ್ಲಾ ಭಾಗಗಳಿಂದ ಅನೇಕ ಪ್ರಮುಖರು ಇಲ್ಲಿಗೆ ಬರಲಿರುವರು. ಈ ತಾಲೂಕಿನ ಜನರಂತೂ ಸಂತೋಷಪೂರ್ವಕವಾಗಿ ಹೇಗೂ ಬರುವರಷ್ಟೇ. ಈ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಲು ಮದ್ರಾಸು ನ್ಯಾಯವಿಧಾಯಕ ಸಭೆಯ ಸುಪ್ರಸಿದ್ಧ ಮೆಂಬರರಾದ ಸ್ವಾಮಿ ವೆಂಕಟಾಚಲಂ ಚೆಟ್ಟಿಗಾರರು ಮದ್ರಾಸಿನಿಂದ ಇಲ್ಲಿಗೆ ಮುದ್ದಾಂ ಬರುವರು.

[illegible]

[illegible]

ಮುಂಬಾಯಿಯಲ್ಲಿ ನಮ್ಮವರ ಸಂಖ್ಯೆಯು ಸುಮಾರು ಮೂರು ಸಾವಿರಕ್ಕೆ ಮಿಕ್ಕಿದ್ದರೂ, ನಮ್ಮ ಸಮಾಜದ ಸಂಘಟನೆಗೂ ಮೇಲ್ಮೆಗೂ ಯೋಗ್ಯ ವ್ಯವಸ್ಥೆಯಿಲ್ಲದಿರಲು, 1926ನೇ ಇಸವಿಯಲ್ಲಿ ಸಮಾಜದ ಧುರೀಣರಲ್ಲನೇಕರ ಉದಾರ ಪ್ರೋತ್ಸಾಹದಿಂದ ಸಂಘವೊಂದು ಜನ್ಮವೆತ್ತಿತು. ಯಾವ ಸಂಸ್ಥೆಯು ಸಮಾಜ ಸಂಘಟನೆ, ಸ್ವಜಾತಿಯ ಮೇಲ್ಮೆ ಇವೇ ಮೊದಲಾದ ಉಚ್ಚ ಆದರ್ಶ ಧ್ಯೇಯಗಳನ್ನು ಮುಂದಿಟ್ಟುಕೊಂಡು ಜನ್ಮವೆತ್ತಿತೋ, ಆ ಸಂಘವು ಒಂದೆರಡು ವರ್ಷಗಳಲ್ಲೇ ಕೇವಲ ಕಲಹಪ್ರಿಯರಾದ ಸಂಕುಚಿತ ಮನಸ್ಸಿನ ವ್ಯಕ್ತಿಗಳ ವಿನೋದ ಕೂಟವಾಗಿ ಮಾರ್ಪಾಟು ಹೊಂದಿತು. ಸಂಘದ ಸಭೆಗಳಲ್ಲಿ ಸೂತ್ರಚಾಲಕರನ್ನು ಟೀಕಿಸಿದ ಹಲವರು ಬಹಿಷ್ಕೃತರಾದರು. ಇದರಿಂದುಂಟಾದ ಮನಃಕ್ಲೇಶಗಳನ್ನು ನಿವಾರಿಸಲು ನಮ್ಮ ದಕ್ಷಿಣ ಕನ್ನಡದ ಸ್ವಜಾತಿ ಗೃಹಸ್ಥರು ಮಾಡಿದ ಭಗೀರಥ ಯತ್ನವು ಸ್ವಾರ್ಥಪರರಾದ ಆಗಿನ ಸಂಘದ ಸೂತ್ರಚಾಲಕರ ಮುಂದೆ ಫಲಿಸಲಿಲ್ಲ. ಇದೇ 'ಮೂಲ' ಸಂಘದ ನಿರ್ಮೂಲ ಸ್ಥಿತಿಗೆ ಮುಖ್ಯ ಕಾರಣ. ಇದರಿಂದ ಹತಾಶರಾದ ಅನೇಕ ಸದಸ್ಯರು ಸಂಘದಿಂದ ಹೊರಬಿದ್ದರಲ್ಲದೆ, ಸಂಘವು ನಾಮಾವಶೇಷವಾಯಿತು. ಇದರಿಂದ ತೃಪ್ತರಾಗದ ಗತಸಂಘದ ಸೂತ್ರಚಾಲಕರಲ್ಲಿ ಹಲವರು ಸ್ವಪ್ರತಿಷ್ಠಾ ಕಾಂಕ್ಷೆಯನ್ನು ನೆರವೇರಿಸಲು ಜೀವನ್ಮೃತ ಸ್ಥಿತಿಯಲ್ಲಿರುವ ಸಂಘವೊಂದರ ಜೀರ್ಣೋದ್ಧಾರ ಕಾರ್ಯಕ್ಕೆ ಕೈ ಹಚ್ಚಿದರು. ಈ ಮಹಾಕಾರ್ಯದಲ್ಲಿ ಮುಂಬಾಯಿಗೆ ಹೊಸದಾಗಿ ಬಂದ ಹಲವು ತರುಣೋತ್ಸಾಹಿಗಳ ಬೆಂಬಲವೂ ದೊರಕಿತು. ಬಾಲ್ಯಮೃತ್ಯುವಿಗೆ ತುತ್ತಾದ 'ಸಂಘ'ವನ್ನು ಮೃತಸಂಜೀವಿನಿ ಮಂತ್ರದಿಂದ ಪುನರ್ಜನ್ಮಕ್ಕೆ ತರಬೇಕಾದರೆ 'ಸಂಘ'ಕ್ಕೊದಗಿದ ಬಾಲಮೃತ್ಯುವಿಗೆ ಕಾರಣವೇನೆಂದು ತಿಳಿದು ಅದಕ್ಕೆ ತಕ್ಕ ಶಮನ ಮಾಡಬೇಕಲ್ಲವೇ? ಆದರೆ ಪತ್ರಿಕೆಗಳಲ್ಲಿ ಜೂನು ತಿಂಗಳ ತಾ. 4ರಂದು ಸಾರ್ವಜನಿಕ ಸಭೆಯೊಂದು ಜರಗಲಿಕ್ಕಿದೆಯೆಂದು ಪ್ರಕಟವಾಯಿತು. ಸಮಾಜದ ಸದ್ಗೃಹಸ್ಥರಿಗೆಲ್ಲಾ ಆಮಂತ್ರಣವಿತ್ತು ಸಭೆಯ ಕಾರ್ಯಕಲಾಪಗಳು ಸಭಾಕರ್ತರ ಸ್ವಕಪೋಲಕಲ್ಪಿತವಾದ ಉದ್ದೇಶ ನಿಬಂಧನೆಗಳಿಗೆ ವಿರೋಧವಾಗಿ ಅದೊಂದು ಪ್ರಹಸನ ರೂಪದಿಂದ ಕೊನೆಗೊಂಡಿತೆಂದು ವಾಚಕರಿಗೆ ಈ ಮೊದಲೇ ಗೊತ್ತಿರಬಹುದು. ಸಭೆಯಲ್ಲಿ ಹಲವು ಸದ್ಗೃಹಸ್ಥರು ಸಭೆಯನ್ನು ಮುಂದರಿಸಬೇಕೆಂದೂ, ಸಮಾಜದ ಪ್ರತಿಷ್ಠಿತ ಪಕ್ಷವೊಂದು ಸಂಘಕ್ಕೆ ಸೇರದಿರುವುದು ಸರಿಯಲ್ಲವೆಂದೂ ಅವರನ್ನು ಸದಸ್ಯರನ್ನಾಗಿ ಸೇರಿಸುತ್ತೇವೆಂಬ ಆಶ್ವಾಸನೆಯಿತ್ತರೂ, ಹಠಬದ್ಧರಾದ ಸಭಾಧಿಕಾರಿಗಳ ಮುಂದೆ, ಬಡ ಸಮಾಜಸೇವಕರ ಮಾತು ನಡೆಯಲಿಲ್ಲ. ಯಾವ ಸಭೆಯಲ್ಲಿ ಸಮಾಜಾಭಿಮಾನಿಗಳ ಸಮಾಜ ಸಂಘಟನೆಯ ಯೋಗ್ಯ ಸೂಚನೆಗೆ ಮನ್ನಣೆಯಿಲ್ಲವೋ ಆ ಸಭೆಯಲ್ಲಿ ಸ್ವಾಭಿಮಾನಿಗಳಿಗೆ ಸ್ಥಳವಿಲ್ಲ. ಹೀಗೆ ಸಭೆಯನ್ನು ಬೇಸರದಿಂದ ಬಿಟ್ಟುಬಂದ ಸದ್ಗೃಹಸ್ಥರು ಸಭೆಯಲ್ಲಿ ನಡೆದ ಅಸಭ್ಯ ವರ್ತನಗಳಲ್ಲಿ ಹಲವನ್ನು ನಮೂದಿಸಿ ಸಭಾಧ್ಯಕ್ಷರಿಗೆ ಬರೆದ ಪತ್ರಕ್ಕೆ ಇನ್ನೂ ಉತ್ತರವಿಲ್ಲ. ಸಮಾಜಸೇವೆಯು ಪ್ರತಿ ಒಬ್ಬನ ಜನ್ಮ ಹಕ್ಕೆಂಬ ನಾಣ್ಣುಡಿಯನ್ನನುಸರಿಸಿ ಸಮಾಜದ ಧುರೀಣರಲ್ಲನೇಕರು ಸಭೆ ಸೇರಿ ವ್ಯಕ್ತಿದ್ವೇಷಗಳಿಗೆಡೆಗೊಡದೆ ಸಮಾಜದ ಮೇಲ್ಮೆಯೇ ಧ್ಯೇಯವೆನಿಸಿ ಮುಂಬಾಯಿಯಲ್ಲಿರುವ ಎಲ್ಲಾ ಸ್ವಜಾತಿ ಬಾಂಧವರನ್ನು ಒಂದುಗೂಡಿಸಲು ಸಂಘ ಒಂದನ್ನು ಸ್ಥಾಪಿಸಬೇಕೆಂದು, ಸರ್ವಾನುಮತದಿಂದ ನಿರ್ಣಯಿಸಿದರು. ಇದೇ 'ಅಖಿಲ ಬಂಟರ ಯಾನೆ ನಾಡವರ ಸಂಘ'ದ ಹುಟ್ಟಿದ ಜನ್ಮ ಚರಿತ್ರೆ. ಸಮಾಜದ ಸೇವೆ ಮತ್ತು ಏಕೀಕರಣವೇ ನಮ್ಮ ಧೋರಣೆ ಧ್ಯೇಯಗಳು. ನಮ್ಮ ಸಂಘವು ಸ್ಥಾಪಿಸಲ್ಪಟ್ಟು ಮೂರು ತಿಂಗಳೊಳಗಾಗಿಯೇ ಸಮಾಜದ ಜನತೆಯ ಉದಾರ ವಿಶ್ವಾಸ ಪ್ರೋತ್ಸಾಹಗಳಿಂದ ನಮ್ಮ ಸದಸ್ಯರ ಸಂಖ್ಯೆಯು ಮುನ್ನೂರಕ್ಕೆ ಏರಿರುವುದು ಮಾತ್ರವಲ್ಲ, ಇಷ್ಟರಲ್ಲೇ ಸ್ವಾರ್ಥಪರ ಸಂಘದ ಅಸ್ತಿವಾರವು ಕಂಪಿಸತೊಡಗಿ, ಅದು ಪತ್ರಿಕೆಗಳಲ್ಲಿ ಪ್ರತಿಧ್ವನಿ ಎಬ್ಬಿಸತೊಡಗಿದೆ. ಭಗ್ನ ಮನೋರಥರಾದ ಅಶಾವಾದಿಗಳ ಆಟವು ಸಮಾಜ ಸೇವೆಯೇ ಸರ್ವಸ್ವವೆನ್ನುವ ನಮ್ಮ ಸಂಘದ ಮುಂದೆ ಎಂದಿಗೂ ನಡೆಯದು. ಆದರೆ ಸಮಾಜ ಸೇವೆ ಸಂಘಟನೆಗಾಗಿ ಪರಿಶ್ರಮಿಸುವ ಯಾವ ವ್ಯಕ್ತಿಯ ಜತೆಯನ್ನೂ ನಮ್ಮ ಸಂಘವು ಸಂತೋಷದಿಂದ ಸ್ವಾಗತಿಸಲು ಎಂದೂ ಅಪೇಕ್ಷಿಸುವುದು.

ಸಮಾಜಸಂಘಟನೆಯ ಉಚ್ಚ ಉದ್ದೇಶಗಳಿಂದ ಪ್ರೇರಿತರಾದ [illegible]

[illegible]

ಪಂಚಾಯತಗಳ ಮೂಲಕ ಗ್ರಾಮಾಭಿವೃದ್ಧಿ

[illegible]

ಗ್ರಾಮಗಳನ್ನು ಪಂಚಾಯತ ಬೋರ್ಡುಗಳು ವಹಿಸಿಕೊಂಡು ದುಡಿಯುತ್ತಿವೆ. ಬೆಳ್ತಂಗಡಿ ವಿಭಾಗದಲ್ಲಿ ಗ್ರಾಮಗಳು [illegible] ಪಂಚಾಯತುಗಳಿರುವುದು [illegible] ಗ್ರಾಮಗಳಲ್ಲಿ.

ಪಂಚಾಯತಗಳ ದಿಗ್ಬಂಧನವು ಎಷ್ಟೇ ಭದ್ರವಾಗಿದ್ದರೂ, ಕರ್ತವ್ಯದ ಹೊಣೆಯಿಂದ ತನ್ನ ವ್ಯಾಪ್ತಿಯೊಳಗೇ ಎಷ್ಟೋ ಸುಧಾರಣೆಗಳನ್ನು ಸಾಧಿಸಿಕೊಳ್ಳಬಹುದು. ಮಲೆನಾಡಿನ ಹಳ್ಳಿಗಳಲ್ಲಿ ಯಾವ ಸುಧಾರಣೆಗಳು ಅಗತ್ಯ ಎನ್ನುವುದನ್ನು ಲೆಕ್ಕ ಹಾಕುವುದಕ್ಕಿಂತ, ಯಾವುದು ಅಗಿಯದ ಎಂಬುದನ್ನು ಹೇಳಿ ಮುಗಿಸುವುದೇ ಸುಲಭ. ಪಂಚಾಯತ ಬೋರ್ಡುಗಳು ಈ ತರದ ಸಂಚಾರಸೌಕರ್ಯವನ್ನು ಕಲ್ಪಿಸುವುದರಲ್ಲಿ—ಎಷ್ಟೋ ಕಷ್ಟನಿಷ್ಠುರ, ಧನ ಮಾನ ಹಾನಿಗಳನ್ನು ಸಹಿಸಿಯಾದರೂ ಹೆಚ್ಚಿನ ಸಾಹಸವನ್ನು ತೋರಿಸಿದ್ದಾರೆನ್ನಬಹುದು. ಪ್ರಕೃತ 31 ಪಂಚಾಯತ ಬೋರ್ಡುಗಳು ಇರುವುವಾದರೂ, ಒಂದೇ ಸಾರಿ ಎಲ್ಲದಕ್ಕೂ ಸರಕಾರ ಸಹಾಯ ಸಿಗುವುದಿಲ್ಲ. ಅಥವಾ ಕಾರ್ಯಕರ್ತರುಗಳಿಗೆ ಕೆಲಸದ ಕಲ್ಪನೆ ಇಲ್ಲ ಯಾ ಮನಸ್ಸಿಲ್ಲ; ಹೀಗೆಲ್ಲ ಅವಾಂತರಗಳಿಂದ ಸರಿಯಾಗಿ ಕೆಲಸವನ್ನು ಮುಂದುವರಿಸಿರುವ ಪಂಚಾಯತ ಬೋರ್ಡುಗಳು 10 ಎನ್ನಬಹುದು. ಈ ಪಂಚಾಯತುಗಳು ಈ ತರದ ಕೆಲಸಗಳನ್ನು ಮಾಡಿ ಪಡೆದ ಅರ್ಥ ಸಹಾಯದ ವಿವರವನ್ನು ನೋಡಿರಿ.

ಕೆಲಸ ಪೂರೈಸಿ ಪಡೆದ ಗ್ರೇಂಟು ರೂ. [illegible] ಉದ್ದ ಮೈಲು 19—0. ಕೆಲಸ ನಡೆಯುತ್ತಿರುವುದರ ರೂ. [illegible] ಉದ್ದ ಮೈಲು 7—6. ಬೇಗನೇ ಪೂರೈಸುವುದು ರೂ. [illegible] ಉದ್ದ ಮೈಲು [illegible]. ಅಂತೂ ಈ ಹತ್ತು ಹಳ್ಳಿಗಳಲ್ಲಿ [illegible] ಮೈಲು [illegible] ಫರ್ಲಾಂಗಿನಷ್ಟು ರಸ್ತೆಯು ಆದಂತಾಯಿತು. ಇಷ್ಟು ಬೇಗನೇ ಆಗಬೇಕಾಗಿದ್ದು—ಎಷ್ಟಿಮೇಟಿಗಾಗಿ ಕೇಳಿರುವ ರಸ್ತೆಗಳ ವಿವರವನ್ನು ನೋಡಿರಿ. ಎಷ್ಟು ಪಂಚಾಯತುಗಳಿಂದ ಕೇಳಿದ್ದಾರೆ: [illegible] ಪಂಚಾಯತುಗಳಿಂದ. ರಸ್ತೆ ಉದ್ದ ಎಷ್ಟು? [illegible] ಮೈಲು [illegible] ಫರ್ಲಾಂಗು. ಅಂದಾಜು ಮೌಲ್ಯ ಎಷ್ಟು? ರೂ. [illegible],000—0—0.

ಪಂಚಾಯತಗಳು ಕೈಗೊಂಡಿರುವ ಕಾರ್ಯಕ್ರಮದಲ್ಲಿ ವಿದ್ಯಾಪ್ರಚಾರವೂ ಒಂದು. ಗ್ರಾಮಕ್ಕೊಂದು ಶಾಲೆ ಬೇಕೆಂಬುದು ಶಾಸ್ತ್ರೀಯ ಸಿದ್ಧಾಂತ. ಇದು ಕಾರ್ಯತಃ ನಮ್ಮ ಜಿಲ್ಲೆಯಲ್ಲಾದರೂ ಮುಂದೆ ಬಂದುದು (ಸ್ವಲ್ಪ ಬಿಟ್ಟಿರಬಹುದು) ಪುತ್ತೂರು ತಾಲೂಕಿನಲ್ಲಿಯೇ ಇದಕ್ಕಾಗಿ ನಾವೆಲ್ಲರೂ ಹೆಮ್ಮೆ ಪಡಬೇಕಾದ್ದೇ. ಪ್ರಕೃತ ಪಂಚಾಯತಗಳ ಆಡಳಿತೆಯಲ್ಲಿ [illegible] ಶಾಲೆಗಳಿವೆ. ಹೊಸ ಸುಧಾರಣೆಯಂತೆ, ತಾಲೂಕು ಬೋರ್ಡಿನಿಂದ [illegible]ನೇ ಇಸವಿಯಲ್ಲಿ ಪಂಚಾಯತ ಬೋರ್ಡುಗಳಿಗೆ ಬಿಟ್ಟುಕೊಟ್ಟಿರುವ ಶಾಲೆಗಳು [illegible] ಅದರಲ್ಲೇ ಸೇರಿವೆ. ಪಂಚಾಯತ ಶಾಲಾ ಕಟ್ಟೋಣಗಳಿಗೆ ರೂ. [illegible]/ದಷ್ಟು ಸಹಾಯವನ್ನು ಸರಕಾರವೂ ಕೊಟ್ಟಿದೆ. ಆದರೆ ಇದೇನೂ ಪೂರ್ಣತಃ ತೃಪ್ತಿಕರವಾಗಿಲ್ಲ.

(ಬರುವ ಸಂಚಿಕೆಯನ್ನು ನೋಡುವುದು).

ಪಂಚಾಯತರು ನಮ್ಮ ಸಂಘದ ಪ್ರತಿನಿಧಿಗಳನ್ನೂ 'ಸಂಘ'ದ ಸೂತ್ರಚಾಲಕರನ್ನೂ ಬರಮಾಡಿ ಉಭಯ ಪಕ್ಷದವರ ಹೇಳಿಕೆಗಳನ್ನು ಕೇಳಿ ತಮ್ಮೊಳಗೆ ಚರ್ಚಿಸಿಕೊಂಡು ಅದರಿಗೆ ನಿಷ್ಪಕ್ಷಪಾತವೆಂದು ತೋರಿದ ತೀರ್ಮಾನವನ್ನು ಕೊಟ್ಟರು. ಸಮಾಜ ಹಿತದೃಷ್ಟಿಯಿಂದ ಮೇಲಿನ ತೀರ್ಮಾನದ ಕುರಿತು ಏನೂ ಆಲೋಚಿಸದೆ ನಮ್ಮ ಸಂಘವು ತನ್ನ ಸಮ್ಮತಿಯನ್ನು ಸೂಚಿಸಿತು. ಆದರೆ 'ಸಂಘ'ದ ಸೂತ್ರಚಾಲಕರು ಈ ಕುರಿತು ಪರ್ಯಾಲೋಚಿಸಿ ಪಂಚಾಯತರ ತೀರ್ಮಾನವನ್ನು ಧಿಕ್ಕರಿಸಿಬಿಟ್ಟರು. ಸಂಘದ ಚಾಲಕರು ಪಂಚಾಯತರ ತೀರ್ಮಾನಕ್ಕೆ ಒಪ್ಪದಿರಲು ಕಾರಣವೇನು? ಸ್ವಪ್ರತಿಷ್ಠಾಕಾಮಿಗಳಾರು? ಸಂಕುಚಿತ ಮನಸ್ಸಿನವರಾರು? ಎಂಬುದನ್ನು ಸಮಾಜದ ಜನತೆಯೇ ಆಲೋಚಿಸಿಕೊಳ್ಳಲಿ! ಕ್ಷೀರಸಾಗರದಲ್ಲೂ ಹಾಲಾಹಲ ವಿಷವಿದ್ದ ಮೇಲೆ ನಮ್ಮ ಸಮಾಜದಲ್ಲೊಂದು ವಿಷ ಬೀಜವಿರುವುದು ವಿಚಿತ್ರವೇ!

ಸಮಾಜ ಬಂಧುಗಳೇ! ನಿಮ್ಮ ಸೇವೆಯೇ ನಮ್ಮ ಧೋರಣೆ; ಜಾತಿಯ ಮೇಲ್ಮೆಯೇ ನಮ್ಮ ಧ್ಯೇಯ. ನಮ್ಮ ಸಂಘವು ತನ್ನ ಧೋರಣೆಯನ್ನು ಮುಂದಿಟ್ಟುಕೊಂಡು ಏಳಿಗೆಯ ಸೋಪಾನವನ್ನೇರ ಬೇಕಾದರೆ ನಿಮ್ಮ ಉದಾರ ಪ್ರೋತ್ಸಾಹವೂ, ಬೆಂಬಲವೂ, ಆಶೀರ್ವಾದವೂ ನಿಮ್ಮೆಲ್ಲರ ವರದ ಹಸ್ತವೂ ಸದಾ ನಮ್ಮ ಸಂಘದ ಮೇಲಿರಬೇಕೆಂದೇ ನಮ್ಮ ಹಾರೈಕೆ.

ಎಮ್. ಎಸ್. ಭಂಡಾರಿ. ಬಿ. ಎಸ್. ರೈ.
ಗೌರವ ಕಾರ್ಯದರ್ಶಿಗಳು.

Tender Notice.

Sealed tenders are invited by the undersigned up to 2 P. M. on the 8th of December 1933 for the work of reconstruction of the Collapsed bridge at Punjalcutta in 27/8 of Mangalore-Mysore Trunk road No. A. 22 (one span of 40'0") 28 miles from Mangalore. Approximate cost excluding girders Rs. 19784. Conditions of contract, plan specifications etc., will be supplied at a cost of Rs. 5 per set. These documents can be seen in the District Board Engineer's office on working days between 11 a. m. and 4 p. m.

Mangalore, 13–11–33. — **N. Krishna Pillai,** *District Board Engineer, S. K.*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No 55/1933.

ರಾಘವೇಂದ್ರಾಚಾರ್ಯ—ಅರ್ಜಿದಾರ.

ಇವರೊಳಗೆ

ಮೇಲ್ಕಂಡ ವ್ಯವಹರಣೆಯ ಅರ್ಜಿದಾರನ ತಂದೆ ಮೃತ ಕರಂಬಳ್ಳಿ ಪದ್ಮನಾಭಚಾರ್ಯರು ಅವರ ಜೀವದಶೆಯಲ್ಲಿ ತಾ. 11–12–23ರಲ್ಲು ರಿಜಿಸ್ಟ್ರೆ ನಿಶಿಂ ಬರದಿಟ್ಟ ವೀಲುನಾಮೆ ಪ್ರಕಾರ ಸದ್ರಿ ಮೃತಗೆ ಎನ್. ಭೋಜರಾವ್ 1, ಎಚ್. ಶೇಷಗಿರಿ ನಾವಡ 1 ಕೂಡಾ 2 ಜನರು ತಾ. 18–8–32ರಲ್ಲಿ ರೂಪಾಯಿ 550/—ಕ್ಕೆ ಬರಕೊಟ್ಟ ಪ್ರೊಮಿಸರಿ ನೋಟು ಮೇರೆಗೆ ಬರತಕ್ಕ ಅಸಲು ಬಡ್ಡಿ ಐವಜಿಗೆ ಸದ್ರಿ ಅರ್ಜಿದಾರನು ಉಡುಪಿ ಡಿ. ಮು. ಕೋರ್ಟಿನಲ್ಲಿ ಮಾಡಿದ ಕ್ರಮ ನಂಬ್ರ 397/33ನೇ ವ್ಯಾಜ್ಯದಲ್ಲಿ ಕೇಳಿದ ಪ್ರಕಾರ ಅಸಲು ಬಡ್ಡಿ ಕೂಡಾ ರೂಪಾಯಿ 617–10–0 ತಾನು ವಸೂಲಿ ಪಡೆಯುವುದಕ್ಕೆ ಹಕ್ಕುದಾರನಾಗಿ ಆ ಬಗ್ಗೆ ಸಕ್ಸೆಶನ್ ಸರ್ಟಿಫಿಕೆಟು ಕೊಡಿಸುವಂತೆ ಕೊಟ್ಟ ಸದ್ರಿ ಅರ್ಜಿ ತನ್ನಿಯು ತಾರೀಕು 9–12–33ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳತಕ್ಕವರು ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರ್ರಾಗಿ ಜಾಹಿರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಉಡುಪಿ, ೨೧—೧೧—೩೩. — **P. Padmanabha Rao,** Vakil for Petitioner.

Notice.

Seald tenders in duplicate for the supply of diet and other Hospital necessaries for one year from 1st April 1934 for the Government Hospital Puttur, South Kanara will be received by the undersigned up to 2 p. m. on Thursday the 4th January 1934.

Full particulars may be obtained from the Hospital, during the Hospital hours.

ಸೂಚನೆ.

ಸಂ 1934ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 1ರಿಂದ ಒಂದು ವರುಷದ ವರೇಗೆ ಪುತ್ತೂರು ಗವರ್ನ್ಮೆಂಟು ಆಸ್ಪತ್ರೆಯ ಒಳರೋಗಿಗಳಿಗೆ ಆಹಾರದ ಮತ್ತು ಸದ್ರಿ ಆಸ್ಪತ್ರೆಗೆ ಬೇಕಾದ ಸಾಮಾನುಗಳನ್ನು ಒದಗಿಸಿ ಕೊಡುವರೆ ಉಮೇದ್ವಾರರು ಮೊಹರು ಹಾಕಿದ ಕವರಿನಲ್ಲಿ ಟೆಂಡರಿನ 2 ನಕಲನ್ನು 1934ನೇ ಇಸವಿ ಜನವರಿ ತಿಂಗಳ ತಾರೀಕು 4ನೇ ಗುರುವಾರ ಮಧ್ಯಾಹ್ನ 2 ಗಂಟೆಯ ವಳಗೆ ಈ ಕೆಳಗೆ ದಸ್ಕತು ಹಾಕಿದವರಿಗೆ ಕೊಡತಕ್ಕದ್ದು.

ಸಾಮಾನುಗಳ ಅನುಭೋಗದ ಬಗ್ಗೆ ಆಸ್ಪತ್ರೆಯ ಸಮಯದಲ್ಲೇ ಬಂದು ತಿಳಿಯತಕ್ಕದ್ದು.

Puttur, 24–11–33. — **Miss. A. P. Mathai** *Lady Sub Assistant Surgeon,* i/c Gov. Hospital Puttur.

ಸ್ವದೇಶಾಭಿಮಾನಿಗೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಉತ್ಸಾಹೀ ಏಜಂಟರು

ಬೇಕು!

ಕೂಡಲೇ ಮ್ಯಾನೇಜರಿಗೆ ಬರೆಯಿರಿ.

ಒಂದು ಸುಂದರ ಕೂಸು

ಸೆನಿಟರಿ ಇನ್ಸ್‌ಪೆಕ್ಟರರು

"ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದೆನು. ಅದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,
ಸೆನಿಟರಿ ಇನ್ಸ್‌ಪೆಕ್ಟರ್,
ಮಾಲೂರು, ಮದುರಾ.

ನಿಮ್ಮ ಕೆಮಿಸ್ಟರರ ಹತ್ತಿರ ಕೇಳಿರಿ.

ಅಥವಾ

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿಕೊಡುವಂತಹ	ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.
ಸುಮಧುರ **ಝಂಡು ದ್ರಾಕ್ಷಾಸವ** ಜರೂರು ಉಪಯೋಗಿಸಿರಿ.	ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ. **ಝಂಡು ಅಶೋಕಾರಿಷ್ಟ** ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬಯಿ.

ಬೆಂಗಳೂರು ಏಜಂಟ್:— ಬಿ. ಪ್ರೊಸಟ್ ಲಾಲ್ ಕಂಪೆನಿ, ೫೧ ಅರ್ಕಾಟ್ ಶ್ರೀನಿವಾಸಾಚಾರ ಸ್ಟ್ರೀಟ್.
ಮದ್ರಾಸು ಸಂಸ್ಥಾನದ ಏಜಂಟರು:— ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್,
ಮಂಗಳೂರು „ ದಿ ಉಲನ್ ಮಾರ್ಟ್. ಧಾರವಾಡ ಏಜಂಟ್— ದಿ ಧಾರವಾಡ ಫಾರ್ಮಸಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ| ವಿ. ಬಿ. ರಾಮನ್, ಎಂ. ಆರ್., ಸಿ.ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಧಾರಣವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ವ್ಯಾಪಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಈವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೦೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ಹಿಂದೂ ಮಹಾಸಭೆಯವರು ಕೋಪಗೊಂಡರು!!!
ಜವಾಹರಲಾಲರ ಮೇಲೆ ಸಿಟ್ಟು!
'ಮಾಲವೀಯರು ಜವಾಹರಲಾಲನ ಕಿವಿ ಹಿಂಡಲಿಲ್ಲವೇಕೆ?'

ಹಿಂದೂ ಮಹಾಸಭೆಯವರು ಬರೀ ಹಿಂದೂಗಳ ಹಿತವನ್ನೇ ಬಯಸಿ ಠರಾವು ಟಿಪ್ಪಣಿಗಳನ್ನು ಮಂಜೂರು ಮಾಡಿ ದೇಶದಲ್ಲಿ ಹಿಂದೂ ಮುಸಲ್ಮಾನ ಕ್ರೈಸ್ತ ಮೊದಲಾದ ಭೇದಗಳನ್ನೆಬ್ಬಿಸುವರು, ಸರಕಾರದವರ ಒಳಕೈಯವರಾಗಿ ವರ್ತಿಸಿ ದೇಶಕ್ಕೆ ಹಾನಿಯನ್ನುಂಟು ಮಾಡುತ್ತಾರಾದುದರಿಂದ ಆ ಸಭೆಯನ್ನು ಹಿಂದೀಯರಾರೂ ಸೇರ್ಪಡೆ ವಿಶಾಲ ಬುದ್ಧಿಯಿಂದ ವಿಕಸಿತ ಭಾವದಿಂದ ಎಲ್ಲಾ ಪಂಗಡಗಳನ್ನು ಒಂದಾಗುವಂತೆ ಮಾಡಿ, ಒಗ್ಗಟ್ಟನಿಂದಿದ್ದು ಸ್ವರಾಜ್ಯ ಸ್ಥಾಪನೆಯನ್ನು ಮಾಡಬೇಕೆಂದು ಶ್ರೀ ಜವಾಹರಲಾಲರು ಮಾಡಿದ ಪ್ರಕಟಣೆಯ ಪ್ರಕರಣವು ಎಲ್ಲಾ ಪತ್ರಿಕೆಗಳಲ್ಲಿಯೂ ಪ್ರಕಟವಾಗಿದ್ದಿತ್ತಷ್ಟೆ! ಜವಾಹರಲಾಲರ ಈ ಅಭಿಪ್ರಾಯವು ಹಿಂದೂ ಮಹಾಸಭೆಯವರೆಲ್ಲರ ಖಂಡನೆಗೆ ಪಾತ್ರವಾಯಿತು. ಒಬ್ಬೊಬ್ಬರು ಒಂದೊಂದು ರೀತಿಯಿಂದ ಜವಾಹರಲಾಲರನ್ನು ನಿಂದಿಸಿದರು. ಈ ಕುರಿತು ಹಿಂದೂ ಮಹಾಸಭೆಯ ಕಾರ್ಯಕಾರೀ ಅಧ್ಯಕ್ಷರಾದ ಡಾಕ್ಟರ್ ಬಿ. ಎಸ್. ಮೂಂಜೆಯವರು ಒಂದು ಪ್ರಕಟಣೆಯನ್ನು ಹೊರಪಡಿಸಿ ಹೀಗೆಂದಿರುವರು:—

"ತರುಣರಾದ ಪಂಡಿತ ಜವಾಹರಲಾಲರು ಮತವಾದವನ್ನು ಖಂಡಿಸುತ್ತಾ ಹಿಂದೂ ಮಹಾಸಭೆಯನ್ನು ಧಿಕ್ಕರಿಸಿರುವರು. ಆದರೆ ಇವರ ಈ ಮಾತುಗಳು ಹೊರಬರುವ ಮೊದಲು ನಡೆದ ಘಟನೆಗಳು ಕೆಲವು ಮನನೀಯವಿವೆ. ಪಂಡಿತ ಜವಾಹರಲಾಲರು ದೊಡ್ಡಣ್ಣನಾದ ಮೌಲಾನಾ ಶೌಕತಾಲಿಯವರ ಬೆಂಬಲದಿಂದ ಅವರು ಹೇಳಿದಂತೆ, ಈ ಪ್ರಕಟಣೆಯನ್ನು ಮಾಡಿರುತ್ತಾರೆಂದು ತೋರಿಬರುತ್ತದೆ. ಮುಸಲ್ಮಾನರ ಮೇಲೆ ಜವಾಹರಲಾಲರಿಗೆ ಎಷ್ಟು ಮಮತೆಯಿದೆಯೆಂದು ಇದರಿಂದ ವ್ಯಕ್ತವಾಗುತ್ತಿದೆ. ಲಕ್ನೋವಿನಲ್ಲಿ ಜರಗಿದ ಮುಸಲ್ಮಾನ ಧುರೀಣ ಪರಿಷತ್ತಿಗೆ ಮುಂಬಯಿಯಿಂದ ತೆರಳುವ ಸಮಯದಲ್ಲಿ ಶೌಕತಾಲಿಯವರು ಒಂದು ಸ್ಟೇಟ್‌ಮೆಂಟನ್ನು ಮಾಡುತ್ತಾ, ಭಾಯಿ ಪರಮಾನಂದರನ್ನು ಚೆನ್ನಾಗಿ ತಿಕ್ಕಿ ತೊಳೆದಿದ್ದರು. ಅದಲ್ಲದೆ ಕೊಂಗ್ರೆಸ್ಸಿನವರೂ, ರಾಷ್ಟ್ರೀಯವಾದಿಗಳಾದ ಹಿಂದೂಗಳೂ ಕೂಡಾ ಹಾಗೆಯೇ ಆಚರಿಸುವಂತೆ ಮಾಡಿದರು. ಶೌಕತಾಲಿಯವರ ಹೇಳಿಕೆಯಂತೆ ಕುಣಿದಾಡಿದ ಈ ಪಂಡಿತ ಜವಾಹರಲಾಲರನ್ನು ನಾನು ಮನಃಪೂರ್ವಕವಾಗಿ ಅಭಿವಂದಿಸುತ್ತೇನೆ. ಮಹಾತ್ಮಾ ಗಾಂಧಿಯವರಿಂದ ಬಗ್ಗಿಸಲ್ಪಟ್ಟ ಈ ಜವಾಹರಲಾಲರು ಹಿಂದೂ ಮಹಾಸಭೆಯ ವಿಚಾರವಾಗಿ, ಚೆನ್ನಾಗಿ ತಿಳಿದಿರುವ ಅವರೊಡನೆ ಕೇಳಿಕೊಂಡರೆ, ಹಿಂದೂ ಮಹಾಸಭೆಯ ಮೇಲೆ ಜವಾಹರಲಾಲರು ಎಸೆದ ಅಪ್ರಸಕ್ತ ನುಡಿಗಳಿಗೆ ಎಡೆಯೇ ಇಲ್ಲವೆಂದು ತಿಳಿದುಬರುವುದು. ಪಂಡಿತ ಜವಾಹರಲಾಲರಿಗೆ ಪರ್ಶಿಯಾನ್ ಭಾಷೆಯ ಮೇಲೆ ಅಗಾಧವಾದ ಮಮತೆಯೂ ಅಭಿಮಾನವೂ ಇಂಬಹುದು. ಇದರಿಂದಾಗಿ ಅವರು ತಮ್ಮ ಹಿರಿಯರ ಆಚಾರ ವಿಚಾರಗಳನ್ನು ತ್ಯಜಿಸಿ ಬಿಡುವುದರಲ್ಲೂ ಗೌರವಪಾತ್ರರಾಗಿ ಮತವಾದವನ್ನು ತಾಂಡರಿಸಬಹುದು. ಆದರೆ ತನ್ನ ಮತವನ್ನೂ ವಿಸ್ತೃತಿಯನ್ನೂ ಹಿಡಿದೆತ್ತಿ ಲೋಕವನ್ನೇ ಎದುರಾಡಿಸುವ ಶಕ್ತಿಯುತವಾದ ಹಿಂದೂವಿನ ಕಾಳ್ಗೂ ಒಂದು ಮೇರೆಯಿದೆಯೆಂದು ಪಂಡಿತರು ತಿಳಿಯತಕ್ಕದ್ದು. ಪಂಡಿತ ಮಾಲವೀಯರು ಮೊನ್ನಿನ ಸಭೆಯಲ್ಲಿ ಜವಾಹರಲಾಲರ ಕಿವಿಯನ್ನು ಚೆನ್ನಾಗಿ ಏಕೆ ಹಿಂಡಲಿಲ್ಲವೋ ಆಶ್ಚರ್ಯಕರವಿದೆ. ಪಂಡಿತ ಜವಾಹರಲಾಲರ ಹೇಳಿಕೆಯನ್ನು ಹಿಂದೂ ಮಹಾಸಭೆಯ ಸೆಕ್ರೆಟರಿಯವರಾದ ಶ್ರೀ ಗಣಪತಿ ರೈರವರು ಪ್ರತಿಭಟಿಸಿರುತ್ತಾರೆ. ಆದುದರಿಂದ ಪಂಡಿತ ಜವಾಹರಲಾಲರ ಕ್ರೂರ ಮಾತುಗಳಿಗೆ ಯಾವ ಹಿಂದೂವೂ ಚಿತ್ತವಿಡಬಾರದಾಗಿ ನನ್ನ ಅರಿಕೆ; ಅಲ್ಲದೆ, ಹಿಂದೂ ಮಹಾ ಸಭೆಯ ಕೆಲಸವನ್ನು ಸರ್ವ ಸಮ್ಮತದಿಂದ ನೆರವೇರಿಸುತ್ತ ದೇಶದ ದಶದಿಕ್ಕುಗಳಲ್ಲೂ ಅದರ ಪ್ರತಿಭೆಯನ್ನು ಹರಡಿಸಬೇಕೆಂದೂ ನನ್ನ ವಿನಂತಿ" ಡಾ| ಮೂಂಜೆಯವರ ಅರಿಕೆಯು ಇತ್ತಲಾಗೆ ಹೀಗಾಗಿರುವಾಗ ಅತ್ತಲಾಗೆ ಲಾಹೋರಿನಲ್ಲಿ ಡಾ| ಸತ್ಯಪಾಲ್, ಲಾಲಾ ಶಾಮಲಾಲ್, ಡಾ| ಗೋಪೀಚಂದ್, ಲಾಲಾ ದುನಿಚಂದ್ ಮತ್ತು ಶ್ರೀ ಕೇದಾರನಾಥ ಸೈಗಲ್‌ರವರೇ ಮೊದಲಾದ ಲಾಹೋರಿನ ಆ ಕೊಂಗ್ರೆಸ್ ಪಕ್ಷೀಯರು ಸಭೆ ಸೇರಿ "ರಾಷ್ಟ್ರ ಸೇವಾಸಕ್ತರಾದ ಲಾಹೋರಿನ ಎಲ್ಲಾ ಸ್ತ್ರೀ ಪುರುಷರು ತಮ್ಮ ರಾಷ್ಟ್ರೀಯ ಐಕ್ಯಮತದಿಂದ ಒಗ್ಗಟ್ಟಾಗಿ ರಾಷ್ಟ್ರ ಘಾತುಕವಾದ ಮತ್ತು ಅರಾಷ್ಟ್ರೀಯ ಭಾವವುಳ್ಳ ಹಿಂದೂ ಮಹಾಸಭೆ, ಮುಸ್ಲಿಮ್ ಲೀಗ್ ಸಿಖ್ ಲೀಗ್ ಮೊದಲಾದ ಸಂಸ್ಥೆಗಳನ್ನು ಮನಃಪೂರ್ವಕವಾಗಿ ಖಂಡಿಸತಕ್ಕದ್ದು, ಮತ್ತು ನಮ್ಮ ಸತ್ಸಂಘ ಧುರೀಣರಾದ ಪಂಡಿತ ಜವಾಹರಲಾಲರಿಗೆ ನಮ್ಮ ಬೆಂಬಲವನ್ನೀಯಬೇಕು. ಮತವಾದಿಗಳಾದ ಹಿಂದೂ ಮಹಾಸಭೆ, ಮುಸ್ಲಿಮ ಪರಿಷತ್ತುಗಳನ್ನು ಜವಾಹರಲಾಲರು ಖಂಡಿಸಿರುವುದು ನ್ಯಾಯ ಸಮ್ಮತವೇ ಆಗಿದೆ" ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಲಾಹೋರಿನ ಈ ಮುಖಂಡರು ಮುಂದರಿಸಿ ಹೇಳುತ್ತ "ಈ ಸಂಸ್ಥೆಗಳು ಸರಕಾರದೊಡನೆ ಸೇರಿಕೊಂಡು ತಾನು ಮುಂದು ತಾನು ಮುಂದು ಎಂದು ಹೇಳಿಕೊಂಡು ಸ್ವರಾಜ್ಯ ಸ್ಥಾಪನೆಗಾಗಿ ನಾವು ಇಳಿದಿರುವ ಈ ಯುದ್ಧದ ವೇಳೆ ದೇಶಕ್ಕೆ ಅನಿರ್ವಚನೀಯ ಹಾನಿಯನ್ನುಂಟು ಮಾಡುತ್ತಾರೆ" ಎಂದು ಹೇಳಿರುವರು.

ಪಂಡಿತ ಜವಾಹರಲಾಲರು ಹಿಂದೂ ಮಹಾಸಭೆಯವರಿಗೆ ಪುನಃ ಉತ್ತರಕೊಟ್ಟು ಒಂದು ಮತವನ್ನು ಮಾತ್ರ ಕಟ್ಟಿಕೊಂಡು ಸ್ವಾರ್ಥಿಗಳಾಗಿ ಹೆಣಗಾಡುವ ಸಂಸ್ಥೆಗಳನ್ನೆಲ್ಲ ತಾನು ಖಂಡಿಸಿದುದು ಹೌದೆಂದೂ, ಅಂತಹವುಗಳನ್ನು ತಾನು ಕಂಡ ಕಂಡಲ್ಲಿ ಇನ್ನೂ ಖಂಡಿಸುವೆನೆಂದೂ ಹೇಳಿರುವರು. ಹಿಂದೀಯರೊಳಗೆ ಈ ರೀತಿ ವಾಗ್ಯುದ್ಧವಾಗುತ್ತಿರುವುದರಿಂದ ಪ್ರಕೃತದ ವಾತಾವರಣವು ಪ್ರಕ್ಷುಬ್ಧವಾಗಿ ದೇಶಕ್ಕೆ ಮಹಾಘಾತವಾಗಿದೆಯೆಂದು ರಾಷ್ಟ್ರ ಪಕ್ಷೀಯರು ಅಭಿಮತ ಕೊಡುತ್ತಿರುವರು. ಪ್ರಕೃತದ ರಾಜಕೀಯ ಸ್ಥಿತಿಗೆ ಹಿಂದೂ ಮಹಾಸಭೆಯರಂತಹ ಸಂಕುಚಿತ ಭಾವವಾದಿಗಳಿಂದ ದೇಶದ ಸರ್ವ ಮತಗಳ ಒಗ್ಗಟ್ಟಿಗೆ ಏನೂ ಫಲವಾಗದೆಂದು ನಿಶ್ಚೈಸಿದ್ದಾರೆ. ಪಂಡಿತ ಜವಾಹರಲಾಲರ ಉದಾರ ಮತ್ತು ವಿಶಾಲ ಭಾವನಾಪರತೆಯೇ ಈಗಿನ ಬಿಕ್ಕಟ್ಟಿ ದಿನಗಳಲ್ಲಿ ಆಗತ್ಯವಿರುವುದರಿಂದ ಅವರನ್ನು ಹಿಂಬಾಲಿಸುವುದೇ ಯೋಗ್ಯವೆಂದು ಹೆಚ್ಚಿನ ಕೊಂಗ್ರೆಸ್ಸಿನವರ ಮತ್ತು ರಾಷ್ಟ್ರೀಯವಾದಿಗಳ ಹೇಳಿಕೆಯಿರುತ್ತದೆ.

ಶ್ರೀ ಪಂಡಿತ ಜವಾಹರಲಾಲ ನೆಹರೂರವರು.

ಸರಿಯಾದ ಮುಖಂಡನಿಲ್ಲದೆ ಒಬ್ಬೊಬ್ಬ ಧುರೀಣನೆಂಬವನು ಒಂದೊಂದು ರೀತಿಯ ಕಾರ್ಯಕಮವನ್ನನುಸರಿಸುತ್ತ ನಡೆಯುತ್ತಿರುವ ಆಚಾರವನ್ನು ನಿಲ್ಲಿಸುವುದಕ್ಕೆ ಕೊಂಗ್ರೆಸ್ಸಿನ ಮಹಾಸಭೆಯನ್ನು ಜರಗಿಸುವುದೊಂದೇ ಮುಖ್ಯೋಪಾಯವು ಎಂದು ಅನೇಕ ಕಡೆಗಳಿಂದೆದ್ದ ಅರಿಕೆಯ ಪರಿಣಾಮವಾಗಿ ಬರುವ ತಿಂಗಳಲ್ಲಿ ಅಖಿಲಭಾರತ ಕೊಂಗ್ರೆಸ್ ಕಮಿಟಿಯ ಒಂದು ಸಭೆಯು ಜರಗುವುದೆಂದು ತಿಳಿದುಬರುತ್ತದೆ. ಪಂಡಿತ ಜವಾಹರಲಾಲರು ಈ ಕುರಿತು ಒಂದು ಸರ್ಕ್ಯುಲರನ್ನು ಹೊರಡಿಸಿ ಕೊಂಗ್ರೆಸ್ಸಿನ ಪ್ರಕೃತದ ಸ್ಥಿತಿಗತಿ ಸಭೆ ಜರಗೋಣದ ಅವಶ್ಯಕತೆ ಮೊದಲಾದುವನ್ನು ಬರೆದಿರುವರು. ಎಲ್ಲಾ ಸದಸ್ಯರು ಆಶಿಸುವುದಾದರೆ ಸಭೆಯನ್ನು ಜರಗಿಸುವುದರಲ್ಲಿ ತನ್ನ ಆಕ್ಷೇಪ ಇರಲಾರದೆಂದೂ, ಸಭೆ ಜರಗಬೇಕೆಂದು ತನ್ನ ಆಶೆಯಾಗಿರುವುದಾದರೂ ಕೊಂಗ್ರೆಸ್ಸು ವಿಶಿಷ್ಟ ಸ್ಥಿತಿಗೊಳಗಾಗಿರುವುದರಿಂದ ಅದು ತನ್ನಿಂದೊಬ್ಬನಿಂದಲೇ ಸಾಧ್ಯವಲ್ಲವೆಂದೂ ಪಂಡಿತರು ಹೇಳಿರುವರು. ಎಲ್ಲಾ ಸದಸ್ಯರ ಉತ್ತರವನ್ನು ನಿರೀಕ್ಷಿಸಲಾಗಿದೆ. ಬಹು ಮಂದಿಯರು ಸಮ್ಮತಿಸಿದರೆ ಸಾಂಗವಾಗಿ ಕೊಂಗ್ರೆಸ್ಸು ಜರಗುವುದು. ಈ ಮಧ್ಯೆ ಸಿಂಧ್ ಪ್ರಾಂತ್ಯದ ಕೊಂಗ್ರೆಸ್ ಪಕ್ಷೀಯರು ಡಾ| ಚಿತೋರಾಮರ ಮುಂದಾಳುತ್ವದಲ್ಲಿ ಬರುವ ಆದಿತ್ಯವಾರ ಹೈದರಾಬಾದಿನಲ್ಲಿ ಸಭೆ ಸೇರಿ ಸಿಂಧ್ ಕೊಂಗ್ರೆಸ್ ಕೆಲಸಗಾರರ ಪರಿಷತ್ತನ್ನು ಜರಗಿಸಿ ಕೊಂಗ್ರೆಸ್ಸಿನವರು ಮುಂದಕ್ಕೆ ಅನುಸರಿಸುವ ಕಾರ್ಯಕ್ರಮವು ಹೇಗಿರಬೇಕೆಂದು ನಿರ್ಧರಿಸಬೇಕೆಂದಿರುವರು. ಇತ್ತ ಪಟಿಯಲಿ ಜರಗಿದ ಠರಾವುಗಳನುಗುಣವಾಗಿ ಪಂಡಿತ ಜವಾಹರಲಾಲರು ನಡೆದು ಕೊಂಗ್ರೆಸ್ಸಿನ ಹೆಜ್ಜೆಯನ್ನು ತಿದ್ದಿಕೊಳ್ಳಬೇಕೆಂದು ಆಲೋಚಿಸಿರುವರು. ಈ ಪರಿಷತ್ತಿನವರು ಅಹಿಂಸಾಪರತೆ, ಅಸಹಕಾರಗಳು ಸ್ವಾತಂತ್ರ್ಯ ಸ್ಥಾಪನೆಗೆ ಮುಖ್ಯಾಂಗಗಳೆಂದು ಭಾವಿಸುವರಾದರೂ, ಪ್ರಸ್ತುತ ಸ್ಥಿತಿಯಲ್ಲಿ ಅವುಗಳಿಗೆ ಸಂಬಂಧಪಟ್ಟ ಇನ್ನು ಕೆಲವು ಕಾರ್ಯಕ್ರಮಗಳು ಆಗತ್ಯವಿವೆ ಎಂದೂ ಅಭಿಪ್ರಾಯ ಪಡುತ್ತಿರುವರು.

ಕೊಂಗ್ರೆಸ್ ಪಕ್ಷೀಯರೊಳಗೆ ಸುಧಾರಣೆಗಾಗಿ ಚಳವಳಿ ನಡೆಯುತ್ತಿರುವಾಗ, ಮತ್ತೊಂದು ಕಡೆಯಿಂದ ಮಿ| ಎಚ್. ಕೆ. ಹೇಲ್ಸ್‌ರವರು ಸರಕಾರ ಮತ್ತು ಹಿಂದೀಯ ಜನತೆಯೊಳಗೆ ಸತಪ್ರಯತ್ನ ಮಾಡಿ ಶಾಂತಿಸ್ಥಾಪನೆಯನ್ನು ಮಾಡಬೇಕೆಂದು ಪ್ರಯತ್ನಿಸುತ್ತಿರುವರು. ಅವರು, ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ ನೆಹರು ಮೌಲಾನಾ ಶೌಕತಾಲಿ ಶ್ರೀ ವಿ. ಶ್ರೀನಿವಾಸ ಶಾಸ್ತ್ರಿ, ಪಂಡಿತ ಮಾಲವೀಯ ಮೊದಲಾದ ಹಿಂದೀಯ ಧುರೀಣರುಗಳಿಗೆಲ್ಲ ಪತ್ರ ಬರೆದು, ಹಿಂದೂಸ್ಥಾನ ಇಂಗ್ಲೆಂಡುಗಳೊಳಗೆ ಶಾಂತಿಯನ್ನು ಸ್ಥಾಪಿಸಲು ತನ್ನ ಕೈಲಾದುದನ್ನು ಮಾಡುವೆನು—ತನಗೆ ಎಲ್ಲರೂ ಸಹಾಯವನ್ನು ಕೊಡಬೇಕು ಎಂದು ತಿಳುಹಿಸಿರುವರು. ಅವರ ಪತ್ರಗಳಿಗೆ ಎಲ್ಲಾ ಧುರೀಣರಿಂದಲೂ ಸದುತ್ತರವು ಬಂದಿದ್ದು ಹಿಂದೂಸ್ಥಾನದ ಸ್ವಾತಂತ್ರ್ಯ ಸಾಧನೆಯ ಉದ್ಯಮದಲ್ಲಿ ತಾವು ಶಕ್ತಿ ಮೀರಿ ಸಹಾಯ ಮಾಡುವೆವು ಎಂದಿರುವರು. ಹೇಲ್ಸ್‌ರವರ ಯತ್ನವು ಫಲಪ್ರದವಾದೀತೆಂದು ಹೆಚ್ಚಿನವರು ತಿಳಿಯುವುದಿಲ್ಲ. ಶ್ವೇತಪತ್ರ ಶಿಫಾರಸುಗಳನ್ನು ಹಿಂದೀಯರ ತಲೆಯ ಮೇಲೆ ಹೇರಿಸಲು ಬ್ರಿಟಿಷ ಸರಕಾರವು ನಿರ್ಧಾರ ಮಾಡಿ ಮುಕ್ಕಾಲು ಅಂಶ ಕೆಲಸವನ್ನು ನೆರವೇರಿಸಿರುವಾಗ, ಹೇಲ್ಸರು ತನ್ನ ಸಾಧನೆಯಲ್ಲಿ ಯಶಸ್ವಿಯಾಗುವುದಾದರೂ ಹೇಗೆಂದು ಅನೇಕರ ವೈಯಕ್ತಿಕ ಅಭಿಪ್ರಾಯವಿರುತ್ತದೆ. ಹೇಲ್ಸರು ಹೇಳುವುದೇನೆಂದರೆ:—"ಇಂಡಿಯದ ಅದೃಷ್ಟವು ತಕ್ಕಡಿಯಲ್ಲಿ ಕಂಪಿಸುತ್ತಿದೆ. ನವೀನ ರಾಜ್ಯದಾನವಾಗಲಿರುತ್ತದೆ. ಆದರೆ ಅದರ ಸೂತ್ರಗಳೆಲ್ಲ ಒಂದು ಪಕ್ಷದಿಂದಲೂ ಸ್ವೀಕೃತವಾಗಿರುವುದಿಲ್ಲ. ಹಿಂದೀಯರು ತಮ್ಮೊಳಗೆ ಒಂದು ಒಪ್ಪಂದ ಮಾಡಿ ನಿರ್ಧಾರಕ್ಕೆ ಬಾರದಿದ್ದುದರ ಪರಿಣಾಮವಾಗಿ ಮೂರನೇ ಪಕ್ಷೀಯರಾದ ಬ್ರಿಟಿಷರು ಅವರಿಗೆ ಶ್ವೇತಪತ್ರ ಸುಧಾರಣೆಯನ್ನು ಕೊಡಲುದ್ಯುಕ್ತರಾಗಿರುವರು. ಈ ಸುಧಾರಣಾ ರಾಜ್ಯವು ವಿಪ್ಲವವನ್ನೇ ಉಂಟು ಮಾಡುವುದು. ನಾನು ಪತ್ರವ್ಯವಹಾರ ನಡೆಸಿದ ಧುರೀಣರ ಮನೋಭಾವವು ಅಂತಃಕರಣಪೂರಿತವಾಗಿ ಶಾಂತಿಯನ್ನೇ ಕಾಂಕ್ಷಿಸುತ್ತಿದೆ. ಅವರ ಮತ್ತು ಇನ್ನಿತರ ಪ್ರಮುಖರ ಪ್ರೋತ್ಸಾಹದಿಂದಾಗಿ ನಾನು ಸರಕಾರ ಮತ್ತು ಜನತೆಗಳೊಳಗೆ ಶಾಂತಿ ಸ್ಥಾಪನೆಯನ್ನು ಮಾಡಬೇಕೆಂದಿರುವೆನು. ಬ್ರಿಟನು ಮತ್ತು ಹಿಂದೂಸ್ಥಾನಗಳು ಎರಡಾಗಿರಲು ಹಲವು ಯುಗಗಳಿಗೆ ಸಾಧ್ಯವಿರುವುದಿಲ್ಲ. ಆದರೆ ಹಿಂದೂಸ್ಥಾನವು—ತನ್ನ ಸ್ವಾತಂತ್ರ್ಯವನ್ನು ತಾನೇ ಪಡೆಯಲು ಶಕ್ತವಿರತಕ್ಕುದು. ಅದರ ಅದೃಷ್ಟವನ್ನು ಹೊರಗಿನ—ಜನಾಂಗವು ರೂಪಿಸುವಷ್ಟು ಅದು ನಿರ್ಭಾಗ್ಯವಾಗಿರಬಾರದು. ಈ ಸಂದಿಗ್ಧ ಸಮಯದಲ್ಲಿ ನಾನು ಈ ವಿಷಯವಾಗಿ ದುಡಿದು ಜಗಳಾಡುವ ಪಂಗಡಗಳನ್ನು ಐಕ್ಯವಾಗುವಂತೆ ಮಾಡಬೇಕಂದಿದ್ದೇನೆ."

++ + +

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ.)

ಮಂಗಳೂರಿನ ನೂತನ ಉಪಹಾರ ಗೃಹ:

ಶುದ್ಧ ಜೀನಸುಗಳಿಂದ, ತಾಜಾ ತುಪ್ಪದಿಂದ ತಯಾರಿಸಲ್ಪಡುವ ಮಿಠಾಯಿಗಳು ಇನ್ನೆಷ್ಟೋ ಬಗೆಯ ತಿಂಡಿ ತಿನಸುಗಳು—ಚಹಾ, ಕಾಫಿ, ಕೊಕ್ಕೋ ಇತ್ಯಾದಿ ಎಲ್ಲ ತರದ ಪಾನೀಯಗಳು

ಅನುಭವಸ್ಥರಿಂದ ತಯಾರಿಸಲ್ಪಡುವುವು.

ಆಯಾಯಾ ತರಗತಿಯವರಿಗನುಕೂಲವಾಗುವಂತೆ ಸ್ಥಳವಿದೆ.

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ ತೃಪ್ತಿ ಪಡೆಯಿರಿ.

[ಟಿ ಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿ ತಿನಸು—ಪಾನೀಯಗಳನ್ನು ಒದಗಿಸಲಾಗುವುದು. ವಿಶೇಷ ಮಾಹಿತಿಗೆ ಖುದ್ದಾಗಿ ಯಾ ಪತ್ರದ್ವಾರಾ ವಿಚಾರಿಸಿಕೊಳ್ಳುವುದು]

Buy Indian
Be Indian
By Using

"LADCO"

Vegetable Toilet and Washing Soaps
FREE FROM ANIMAL FAT
Bath Soap, Glycerine Transparent Soap, Bar Soap
Cubes, Cakes.

Agents for South Kanara, Malabar & Coorg—

PAI PHARMACY,
Car Street, MANGALORE.

Stockists:—
JAYAVANT SHANTARAM & BROS. *Merchants,*
Bunder, Mangalore, S. K

1—9—33.

ಡಾಕ್ಟರ್ ಗೌತಮರಾವ್ ಕೇಶವರವರ
ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
[ಮಂಗಳೂರು]

ಕೊ-ಒಪರೇಟಿವ್ ಸೊಸ್ಯಾಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ರಥಬೀದಿ, ಮಂಗಳೂರು

'ಸ್ವದೇಶಾಭಿಮಾನಿ'ಗೆ ಇಂದೇ ಚಂದಾದಾರರಾಗಿರಿ!

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd. Cross Road, Srirampur Extn,
Malleswaram Post, BANGALORE.
OR
The Managing Agents,
The S. I. G. A. Co. Ltd.
55. Poonamallee High Road, Kilpauk, MADRAS.

THE SOUTH INDIA
CO-OPERATIVE INSURANCE SOCIETY,
LIMITED, MADRAS.

LOCAL BOARD:—
THE SOUTH CANARA CENTRAL
CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

FOR TERMS APPLY TO:—

The Secretary,
South Canara Central Co-operative
Bank, Ltd., KODIALBAIL P. O. (Mangalore)
SOUTH CANARA.

Hydrocele and Hernia

'ಹೈಡ್ರೊಸಿಲ್' ಮತ್ತು ಅಂಡವಾಯುವಿಗೆ
ಅಮೋಘ ಔಷಧಿ.

Aksir—A. Fota ಎಂಬುದು ಹೈಡ್ರೊಸಿಲ್ ಮತ್ತು ಅಂಡವಾಯುವನ್ನು ಗುಣಪಡಿಸಲು ದಿವ್ಯೌಷಧ! ಒಪರೇಶನ್ ಅಗತ್ಯವಿಲ್ಲ. ಎಷ್ಟು ಕಾಲದ ರೋಗವೇ ಆಗಿರಲಿ, ಎಷ್ಟು ವಿಷಮ ರೋಗವೇ ಆಗಿರಲಿ, ಅಂಡದಲ್ಲಿ ನೀರು ಗಟ್ಟಿ ಕಟ್ಟಿರಲಿ, ಯಾವ ಮದ್ದಿನಿಂದಲೂ ಗುಣಮುಖ ಹೊಂದದಿರಲಿ, ಈ ಔಷಧವನ್ನುಪಯೋಗಿಸಿದೊಡನೆ ಅಂಡದಿಂದ ನೀರು ಹೊರಬಂದು ಹರ್ನಿಯಾವನ್ನು ಅದರ ಮೊದಲ ಸ್ಥಿತಿಯಲ್ಲಿ ನಿಲ್ಲಿಸುತ್ತದೆ. ಈ ಔಷಧಿಯನ್ನು ಒಮ್ಮೆ ಸರಿಯಾಗಿ ಉಪಯೋಗಿಸಿದ್ದಲ್ಲಿ ಈ ಮಹಾರೋಗವು ದೃಢವಾಗಿ ಮಾಯವಾಗುತ್ತದೆ. ಇನ್ನೊಮ್ಮೆ ಕಲಿದೋರುವುದೇ ಇಲ್ಲ. ಈ ಔಷಧವು ಒಂದು ಬಗೆಯ ಹುಡಿ (ಪೌಡರ್) ಯಂತಿದೆ. ಇದನ್ನು ನೀರಿನೊಡನೆ ಕಲಸಿ ಅಂಡಕ್ಕೆ ಹಾಗಬೇಕು. ಏಳೇ ಏಳು ದಿನಗಳೊಳಗೆ ಹೈಡ್ರೋಸಿಲನ್ನು ಗುಣಪಡಿಸುತ್ತದೆ. ಕ್ರಯ ಶೀಶೆಗೆ ರೂ. 3- ಪೋ. 8 ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ.

Hamdard Dawakhana,
Kushak, MUTTRA.

ಸ್ವದೇಶಾಭಿಮಾನಿ

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಸೈಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯತಿ ದರವಿದೆ
ವಿವರಕ್ಕೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ [illegible] ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಶಾಲಾ ಸಂಘ,
ಡೊಂಗರಕೇರಿ ರಸ್ತೆ, ಮಂಗಳೂರು.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರದಂದು ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

... ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ... । ಗರಲ ಮಥಿಸಲು ಸುರರಿಗೆದರಿಂ । ಹರುಷವಾಯಿತೆ ಮತ್ತೆ ವಿಶ್ವವ ಸುಡುತ ಬರುತಿರುವ ॥

ಗರಲಭಯದಿಂ ... ಸುಧೆಯನು । ಮರೆತು ... । ... ಧೀರರು ನಿಶ್ಚಿತಾರ್ಥವನು ॥ ೨ ॥

(Oldest Kanarese Weekly in South Kanara)

... ಮಂಗಳೂರು ತಾ ೮ನೇ ಶುಕ್ರವಾರ ದಶಂಬರ ೧೯೩೩ (8 – 12 – '33) ಸಂಚಿಕೆ ೪೮

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

ಹೆಡ್ ಆಫೀಸು:—ಉಡುಪಿ. ಶಾಖೆ – ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ 3,50,000- ಅಂದಾ ಕಾಳಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST OCTOBER, 1933.

	Capital and Liabilities			Property and Assets	
1	Paid up Capital	Rs. 2,25,000-0-0	1	Bank Premises Buildings, Furniture etc Rs	66 920-0 4
2	Reserve and other funds	„ 2,35,000-0-0	2	Investment on Gvt. securities	„ 3,00 560 8 6
3	Deposits	21 91 744 5-8	3	Authorised Investments	, 23 02,701- 4 1
4	Due to Bankers	„ 21,649- 2-3	4	Bills per contra	10 547 3 9
5	Sundries	„ 84 330 2 6	5	Sundries	„ 28,997 6 1
6	Bills per contra	10,547-3 9	6	Cash on hand & with bankers	, 58,544 7 5
	Total	27,68,270 14 2		Total	27,68,270-14 2

UDIPI 6–11–'33.

N. ANANDA RAO,
Secretary & Manager

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಣ್ಣುಕಟ್ಟುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿಯನ್ನು ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

(Regd.)

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 8–8–0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.
ಕೆ. ಟಿ. ಡೋಂಗರೆ ಕಂಪೆನಿ.

ಓದಲಿಕ್ಕೂ, ಜಾಹೀರಾತು ಕೊಡಲಿಕ್ಕೂ
ಮಕ್ಕಳಿಗೂ, ದೊಡ್ಡವರಿಗೂ, ಹಳ್ಳಿಯವರಿಗೂ, ಪೇಟೆಯವರಿಗೂ, ವಿದ್ಯೆ ಇದ್ದವರಿಗೂ, ಇಲ್ಲದವರಿಗೂ
ಬೇಕಾದ,
ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ
ಪತ್ರಿಕೆ

'ಸ್ವದೇಶಾಭಿಮಾನಿ'

ಈ 27 ವರ್ಷಗಳ ನವತರುಣ!

ಅಸ್ವಸ್ಥದ ನಂತರ ನವ ಶಕ್ತಿ

ಅಸ್ವಸ್ಥವು ನಿಮ್ಮನ್ನು ನಿಶ್ಶಕ್ತರನ್ನಾಗಿ ಮಾಡಿ ಬಿಡುತ್ತದೆ. ನಿರಾಮಯ ಸಮಯವನ್ನು ನೀವು ನಿರೀಕ್ಷಿಸುತ್ತಾ ಕುಳಿತಿರಬೇಕಾಗುತ್ತದೆ. ಆದರೆ ಪ್ರಕೃತಿ ಸಿದ್ಧವಾದ ಟೋನಿಕ್ ಆಹಾರವೂ, ಪ್ರಪಂಚದ ಎಲ್ಲಾ ಕಡೆಗಳಲ್ಲಿ ವೈದ್ಯರಿಂದ ಶಿಫಾರಸು ಮಾಡಲ್ಪಟ್ಟಿರುವಂತಹ ರುಚಿಕರವಾದ ಓವಲ್ಟಿನ್ನನ್ನು ನೀವು ಪಾನ ಮಾಡಿದರೆ ನಿಮ್ಮ ಅಶಕ್ತತೆಯು ಶೀಘ್ರವಾಗಿಯೇ ಕಳೆದು ಹೋಗಿ ನವಶಕ್ತಿಯುಂಟಾಗುತ್ತದೆ.

ಓವಲ್ಟಿನ್ನನ್ನು ಬೆಳೆದ ಬಾರ್ಲಿ ಮೋಲ್ಟ್, ದನದ ದಪ್ಪ ಕೆನೆ ಹಾಲು, ಮತ್ತು ಕೋಕ್ಕೋಗಳಿಂದ ತಯಾರಿಸಲಾಗಿದೆ. ಅದು ಶೀಘ್ರವಾಗಿ ಜೀರ್ಣಿಸುತ್ತದೆ. ಪರಿಪೂರ್ಣವಾದ ಪೋಷಣ ಶಕ್ತಿಯನ್ನೊಳಗೊಂಡಿದ್ದು, ಶರೀರ ಶಕ್ತಿಯನ್ನು ಕೂಡಲೇ ವೃದ್ಧಿಸಿ ಬೆಳೆಸುತ್ತದೆ. ತಯಾರಿಸುವಾಗ ಅದಕ್ಕೆ ಹಸ್ತಸ್ಪರ್ಶವಾಗುವುದಿಲ್ಲ.

OVALTINE

TONIC FOOD BEVERAGE

ಮೆದುಳು, ನರ ಮತ್ತು ದೇಹಗಳನ್ನು ಪೋಷಿಸುತ್ತದೆ

ಎಲ್ಲಾ ಕಡೆಗಳ ಕೆಮಿಸ್ಟರಲ್ಲಿಯೂ ಬಜಾರಗಳಲ್ಲಿಯೂ ದೊರೆಯುತ್ತದೆ.

ಏಜಂಟರು ಜೇಮ್ಸ್ ರೈಟ್ 85ಎ ರಿಪನ್ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ, ಮದ್ರಾಸ್, ರಂಗೂನುಗಳಲ್ಲಿ

ಗರ್ಭಧಾರಣ ಮಾಡಲು ಭಯಗೊಳ್ಳುವ ಸ್ತ್ರೀಯರಿಗಾಗಿ

ಮೆನೆಸ್ಟ್ರಿನ್ ಕೆಪ್‌ಸಲ್ಸ್ (Menestrin Capsules) ಗಳನ್ನು ಬಾಯಿಯ ಮೂಲಕ ಸೇವಿಸುವುದರಿಂದ ಗರ್ಭವೇ ನಿಲ್ಲುವುದಿಲ್ಲ.

ಬಾಟ್ಲೆ ಒಂದಕ್ಕೆ ರೂ. 1-8-0 ಮಾತ್ರ.

ದಿ ಓರಿಯಂಟಲ್ ರಿಸರ್ಚ್ ಲೆಬೊರೆಟರಿ, ವೆಪೆರಿ, ಮದ್ರಾಸು.

The Oriental Research Laboratory.
Vapery, Madras.

For neat and nice Printing
Please call at
THE SHARADA PRESS,
Car Street, MANGALORE.

[illegible]

× × × ×

[illegible]

× × × ×

ಗಾಂಧೀ ಕಂಪೆನಿಯವರ ಸತ್ಯಾಗ್ರಹ ... ಗವರ್ನಮೆಂಟ್ ಕಂಪೆನಿಯವರ ... ಪೆಟ್ಟಿಗೆಗಳೂ ಒಡೆದು ... ಯಾರಿಗೆ ಲಾಭವೋ ಸ್ವಾಮಿಗೆ ತಿಳಿಯದು

× × × ×

'ಗಾಂಧೀ' ಪೆಟ್ಟಿಗೆ ಕಡೆಯವರು ಹಾಲುಗಾರರಲ್ಲಿ ... ಲೋಕದ ದಾರಿ ಹಿಡಿದರು. ... ಲಾದವರ ಕಾಲುಗಳು ಮುಳುಗಿದುವು, ಗವರ್ನಮೆಂಟ್ ಕಂಪೆನಿಯ ಪಾರ್ಲಿಮೆಂಟ್ ಸದಸ್ಯರು ಕೂಡಾ ಕೆಲವರು ಊರು ಬಿಟ್ಟು ... ದರು. ಯಾವ ಕಂಪೆನಿ ಉಳಿಯುತ್ತದೆಂದು ಅವರವರಿಗೇ ಗೊತ್ತು!

× × × ×

ಎರಡು ಕಂಪೆನಿಗಳ ಪೆಟ್ಟಿಗೆಗಳೂ ಹೋಪ್‌ಲೆಸ್! ಗಾಂಧಿ ಕಂಪೆನಿಯು ಯಾವ ಪೆಟ್ಟಿಗೆಯೂ ಒಡೆದು ದೇಶಕ್ಕೆ ಸ್ವರಾಜ್ಯ ತರಲಿಲ್ಲ. ಗವರ್ನಮೆಂಟ್ ಕಂಪೆನಿಯವರ ಯಾವ ಪ್ರಿಕಡೂ ಹಿಂದೀಯರಿಗೆ ಮುಕ್ತಿ ಕೊಡಲಿಲ್ಲ. ಬರೇ ಶಬ್ದ ಮಾತ್ರ ಎದ್ದಿದೆ!!

× × × ×

ಗವರ್ನಮೆಂಟ್ ಪಟಾಕಿ ಕಂಪೆನಿಯ ಮೆನೆಜಿಂಗ್ ಡೈರೆಕ್ಟರರಾದ ಮೆಕ್ಡೊನಾಲ್ಡರಿಗೂ ಶೇರ್ ಹೋಲ್ಡರರಾದ ಚರ್ಚಿಲ್ ಮೊದಲಾದವರಿಗೂ ಕಂಪೆನಿಯ ಆಡಳಿತೆಯ ವಿಷಯವಾಗಿ ಬಹಳ ಚರ್ಚೆ ಎದ್ದಿದೆ. ಪಾಪ! ಮೆಕ್‌ಡೊನಾಲ್ಡ ದೊರೆಗಳ ಹವಾಲ್ ಕಷ್ಟ!

× × × ×

ಗಾಂಧೀ ಕಂಪೆನಿಯು ಈ ಪಟಾಕಿ ವ್ಯಾಪಾರವನ್ನು ಬಿಟ್ಟು ಎಲ್ಲಾ ತರದ ವ್ಯಾಪಾರಗಳನ್ನು ಸ್ವದೇಶೀ ಮಾಡಿದರೆ ಪ್ರಯೋಜನವಿದೆಯೆಂದು ನಮ್ಮ ಮತ

× × × ×

ಸರಕಾರೀ ಕಂಪೆನಿಯು ಗಾಂಧೀ ಕಂಪೆನಿಯವರನ್ನು ಕರೆದು ರಾಜಿ ಮಾಡಿಕೊಳ್ಳುವಂತೆ ಯೋಚನೆ ಮಾಡುವುದು ಲೇಸು.

× × × ×

ಇಲ್ಲದಿದ್ದರೆ ಆ ಕಂಪೆನಿಯ ... ಈ ಕಂಪೆನಿಯ ಪೆಟ್ಟಿಗೆಗಳಾಗಲೀ ಟಿಕ್ಕಾಸಿನ ಪ್ರಯೋಜನಕ್ಕೆ ಬಾರವು!

× × × ×

ಹೀಗೆಯೇ ಆದರೆ ಗಾಂಧೀ ಕಡೆಯವರ ... ಸರಕಾರಿ ಕಡೆಯವರ ... ಆದರೆ, ಕ್ರಮೇಣ ಎರಡು ಕಡೆಗಳೂ ಗೆದ್ದ ನೋಟ ಬೇಕಾಗುವುದು!

× × × ×

(ಭಾರತೀಯರೆ ನಮ್ಮ ಭಾಗ್ಯ ಸಂಪನ್ನು) ಎಂಬಂತೆ ...

[illegible]

Canara Bank, Limited.

Established 1906

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—Bunder, Mangalore Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Saving Banks Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bank intends opening a Branch at Bangalore very shortly.

Mangalore 12—7—33.

A. Madhava Pai,
Secretary.

S U N & CO.

Choukhamba Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ ಶಾಲುಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಖದ್ದರ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀತಾರೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳಿ ಸ್ವಾಮಿಗೆ ಮಿಶ್ಶನ್, ಮಡಿ ಧೋವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ, ಬೆನಾರಿಸ್ (ಕಾಶೀ)

— East & West Insurance Company Ltd.,

(Incorporated in India 1913).

Head Office:—EAST & WEST BUILDINGS, FORT, BOMBAY.

Eastern Company with striking features
Attractive plans,
Sympathetic & Liberal
Treatment to Policy Holders,
&
Wide popularity,
Economic Management
Sound investment
That is why you should select "East & West"
Ere you invest in the rest

Interim Bonus Declared Rs. 15 Per 1000 On whole life & Endowment Policies.

For particulars and Agency terms apply to:—

H. S. Nayak, *Organiser, Secretary,* for West Coast, Coorg & Mysore,
"Harbour View" Mangalore.

— ಗಡಿಯಾಳ ಪ್ರಕಟಣೆ —

ದದುವಿನಾಶಕ ಮುಲಾಮು:—ಗಜಕರ್ಣ, ಕಜ್ಜಿ, ತುರಿ, ನಾಯಿಟುಮುಂತಾದ ಎಲ್ಲಾ ಚರ್ಮರೋಗದ ಮೇಲೆ ಒಂದೇ ರಾಮಬಾಣ ಔಷಧಿ; ೨೪ ತಾಸಿನಲ್ಲಿ ಗುಣಬರುತ್ತದೆ. ಸಾವಿರಾರು ಜನರು ಶಿಫಾರಸು ಮಾಡಿರುತ್ತಾರೆ. ಕಿಮ್ಮತ್ತು ಡಬ್ಬಿ ೧ರ ಆಣೆ ೦—೪—೦. ೧೨ರ ಮೇಲೆ ಟೈಂಪೀಸು, ೧೮ರ ಮೇಲೆ ಅಲಾರ್ಮ್ ಟೈಂಪೀಸು, ೨೪ರ ಮೇಲೆ ರಾಸ್ಕೋಪ, ೩೬ರ ಮೇಲೆ ರಿಸ್ಟ್‌ವಾಚ್ ಪ್ರಕಟಿ ಸಿಗುವುದು. ಕೂಡಲೇ ಬರೆಕೊಳ್ಳಿರಿ. ಪತ್ರವ್ಯವಹಾರ ಮರಾಠಿ ಯಾ ಇಂಗ್ಲಿಷಿನಲ್ಲಿ.

King George Coronation,
BOMBAY 4.

16—6—33. (Head Office—Kotah, Rajputana)

ಬೇಕಾಗಿದೆ!

ಇಂಗ್ಲಿಷ್ ಮತ್ತು ಕನ್ನಡ ಡಿಪಾರ್ಟ್‌ಮೆಂಟಿಗೆ ಕಂಪ್ಪೋಜಿಟರರು ಬೇಕಾಗಿದ್ದಾರೆ. ಯೋಗ್ಯತೆಗೆ ತಕ್ಕ ಸಂಬಳವು ದೊರೆಯುವುದು.

ಕೂಡಲೇ ಅರ್ಜಿಗಳನ್ನು ಬರೆದುಕೊಳ್ಳಿರಿ:—

ಮೆನೇಜರ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ **1000** ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಅವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿಗೆ ದುಡ್ಡು ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ...ಯ ಮಹಾರಾಜರ ಪರ್ಯಾಪ್ತ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಶ್ರೇಷ್ಠತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಲ್ಲಿಯೂ ಆರೋಗ್ಯ ದೃಷ್ಟಿಯಿಂದಲೂ ತಯಾರಿಸುತ್ತಿದರಿಂದ ಎಷ್ಟು ಕೆಳುವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶೀಯ ಸಕಲ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿಯಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು

ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರತಿನಿಧಿ:—ಶ್ರೀ ... ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರತಿನಿಧಿಯು—

ರಾಘವೇಂದ್ರ ರಂಗಪ್ಪ, ರಥಬೀದಿ, ಮಂಗಳೂರು.

1934

Sharada Diaries

Ready! Ready!

SMALL SIZE—BIG SIZE.

ಶಾರದಾ ಡೈರಿಗಳು ಸಿದ್ಧವಾಗಿವೆ!

ಸಣ್ಣ ಸೈಜು— —ದೊಡ್ಡ ಸೈಜು.

Sharada Press, Mangalore.

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.

ಚಿಂತಾಮಣಿಯಲ್ಲಿ ತರುಣಿಯನ್ನು ಕದ್ದವರಿಗೆ ಶಿಕ್ಷೆ!

ಪೋಲೀಸ್ ಅಧಿಕಾರಿಗಳು ಈ ಭೀಷಣಾಚಾರದ ಪ್ರೋತ್ಸಾಹಕರು!

ಮಂಗಳೂರಿಗೆ ಗಾಂಧೀಜೀಯವರ ಆಗಮನ!

ಕೋಲಾರ ಜಿಲ್ಲಾ ಚಿಂತಾಮಣಿ ನಗರದ ಶ್ರೀಮತಿ ಮಹಾಲಕ್ಷ್ಮಮ್ಮ ಎಂಬ ಕನ್ನಿಕೆಯನ್ನು ತಾ. ೨೩-೮-೩೩ ನೆಯ ರಾತ್ರಿ ಮುಸಲ್ಮಾನರು ಅಪಹರಿಸಿ, ಜಾತಿ ಕೆಡಿಸಿ, ಬಲಾತ್ಕಾರದಿಂದ ಆಕೆಗೆ ಮದುವೆ ಮಾಡಿ, ಅತ್ಯಾಚಾರ ನಡೆಸಿದರು. ತಾ. ೧-೧೦-೩೩ರಲ್ಲಿ ಪೋಲೀಸಿನವರು ಕೋಲಾರದ ಮೊದಲನೇ ವರ್ಗದ ಮೆಜಿಸ್ಟ್ರೇಟ್ ಶ್ರೀ ಟಿ. ಪರಮಶಿವಯ್ಯನವರ ಮುಂದೆ ಆರು ಮಂದಿ ಮುಸಲ್ಮಾನರ ಮೇಲೆ ಕನ್ಯಾಪಹಾರದ ಮೊಕದ್ದಮೆ ಹೂಡಿದರು. ೨೬—೧೦—೩೩ರಲ್ಲಿ ಮೆಜಿಸ್ಟ್ರೇಟರು ಪ್ರಕಾಶ್ ಮತ್ತು ದಸ್ತಗಿರ್ ಎಂಬಿಬ್ಬರನ್ನು ಬಿಟ್ಟು ಬಿಟ್ಟರು. ನಾಲ್ವರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದರು. ೧-೧೧-೩೩ರಲ್ಲಿ ವಿಚಾರಣೆಯು ನಡೆದು ೨೭ ದಿನಗಳ ತನಕ ನಡೆಯಿತು. ನ್ಯಾಯಾಧೀಶರು ಕೋರ್ಟಿನ ಮುಂದೆ ಬಂದ ಸಾಕ್ಷ್ಯವನ್ನೆಲ್ಲ ವಿಮರ್ಶೆ ಮಾಡಿ, ಮಹಾಲಕ್ಷ್ಮಮ್ಮಳು, ಕೃತ್ಯ ನಡೆದಾಗ ೧೬ ವಯಸ್ಸಿನೊಳಗೇ ಇದ್ದಳು. ಆಕೆಯು ತನ್ನ ಪೋಷಕರ ವಶದಿಂದ ಅಪಹರಿಸಲ್ಪಟ್ಟಳು. ಪೋಲೀಸು ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನೆರವೇರಿಸಲಿಲ್ಲ. ಅಪರಾಧಿಗಳನ್ನೆಲ್ಲ ಅವರೇ ಪ್ರೋತ್ಸಾಹಿಸಿದರು. ಈ ಕೋರ್ಟಿನ ಮುಂದಿರುವ ನಾಲ್ಕು ಮಂದಿಗಳು ಈ ಕ್ರೂರ ಕೃತ್ಯ ಮಾಡಿದ್ದಾರೆ. ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸುವುದು ಅತ್ಯಾವಶ್ಯಕ. ಮಹಾಲಕ್ಷ್ಮಮ್ಮಗೆ ಆದ ಅಪಮಾನ, ಆಜೀವ ದುಃಖವನ್ನು ಹೇಗೆ ಪರಿಹಾರಗೊಳಿಸಬೇಕೋ ಗೊತ್ತಿಲ್ಲವೆಂದೆನ್ನುತ್ತ ಅಪರಾಧಿಗಳಿಗೆ ವಿಧಿಸಿರುವ ದಂಡವು ವಸೂಲಾದರೆ ಆಕೆಗೆ ರೂ ೫೦೦ರ ಪರಿಹಾರ ಕೊಡಬೇಕೆಂದೂ, ಸಿವಿಲ್ ಕೋರ್ಟಿನಲ್ಲಿ ಪ್ರತ್ಯೇಕ ವ್ಯವಹಾರ ಮಾಡಿ ಆಕೆಯು ನಷ್ಟ ಪರಿಹಾರವನ್ನು ಕೇಳಬಹುದೆಂದೂ ಸೂಚಿಸಿದರು. ಅಲ್ಲದೆ, ಗಂಡನು ಮೃತನಾದ ನಂತರ ಈ ಬಾಲ ವಿಧವೆಯು ತನ್ನ ಪೋಷಕರ ವಶದಲ್ಲಿದ್ದಳು. ತಾ. ೨೩-೧೦-೩೩ನೇ ದಿನ ಆಕೆಯು ಬೆಂಗಳೂರಿಗೆ ಹೋಗಿ [illegible] ಸಮಾಜವನ್ನೋ ಆರ್ಯಸಮಾಜವನ್ನೋ ಸೇರಿ ಸುಖಜೀವನ ಮಾಡಲು ಮನೆ ಬಿಟ್ಟಳು. ಮುಂದೆ ಈ ದುರ್ಘಟನೆಗಳೆಲ್ಲ ನಡೆದುವು. ಅಂದು ಮೇಲಿನ ಅಪರಾಧಿಗಳು ಈ ಕನ್ಯೆಯನ್ನು ಆಕೆಯ ಪೋಷಕರ ವಶದಿಂದ ಅಪಹಾರ ಮಾಡಿದರೆಂಬುದು ಸಿದ್ಧವಾಯಿತೆಂದೂ ತಿಳಿಸಿದರು. ಅಪರಾಧಿಗಳು ತಾವು ನಿರಪರಾಧಿಗಳೆಂದು ಸಾಕ್ಷ್ಯ ಸಾಹಿತ್ಯವನ್ನು ಮುಂದಿಡುತ್ತ, 'ಮಹಾಲಕ್ಷ್ಮಮ್ಮಳು ಮನೆ ಬಿಟ್ಟು ಸುಂಕದ ಬಾಗಿಲಲ್ಲಿ ದಿನವೆಲ್ಲ ಕುಳಿತು 'ನನ್ನನ್ನು ಯಾರಾದರೂ ಮುಸಲ್ಮಾನ ಮತಕ್ಕೆ ಸೇರಿಸಿ' ಎಂಬುದಾಗಿ ಗೋಳಾಡುತ್ತಿದ್ದಳು. ಮತ್ತು ಆಕೆಯು ಸ್ವಬುದ್ಧಿಯಿಂದ ಮುಸಲ್ಮಾನ ಮತವನ್ನು ಸ್ವೀಕರಿಸಿ ಸಲೀಮನನ್ನು ಮದುವೆಯಾದಳು' ಎಂಬುದಾಗಿ ವಾದಿಸಿದರು. ನ್ಯಾಯಾಧೀಶರು ಈ ವಿಷಯವಾಗಿ ತಮ್ಮ ಮುಂದೆ ಬಂದ ಸಾಹಿತ್ಯವನ್ನೆಲ್ಲ ವಿವರಿಸಿ ಮಹಾಲಕ್ಷ್ಮಮ್ಮಳು ಮುಸಲ್ಮಾನ್ ಮತಕ್ಕೆ ಸೇರಬೇಕೆಂದು ಬಯಸಿದ್ದರೆ ಸುಂಕದ ಕಟ್ಟೆಯಲ್ಲೇಕೆ ಹೋಗಿ ಕುಳಿತುಕೊಳ್ಳುತ್ತಿದ್ದಳು? ಆ ಉದ್ದಿಶ್ಯವಿದ್ದರೆ ಅವಳು ನೆಟ್ಟಗೆ ಮಸೀದಿ ಬಾಗಿಲಿಗೆ ಹೋಗುತ್ತಿದ್ದಳು. ಇಲ್ಲದಿದ್ದರೆ ಯಾವನಾದರೊಬ್ಬ ಮೌಲ್ವಿಯ ಮನೆಗೆ ಹೋಗುತ್ತಿದ್ದಳು. ಈ ವಾದದಲ್ಲಿ ತಿರುಳಿಲ್ಲವೆಂದು ಸ್ಪಷ್ಟೀಕರಿಸಿದರು. ಮೆಜಿಸ್ಟ್ರೇಟರು ತೀರ್ಮಾನ [illegible] ಮಹಾಲಕ್ಷ್ಮಮ್ಮಳಿಗೆ ಆಜೀವ ವಿಪತ್ತು ಉಂಟಾಗಿದೆ. ಇದಕ್ಕೆ ಪರಿಹಾರವು ಸಾಧ್ಯವಲ್ಲ. ಇದು ಹೇಳ[illegible]ವಾದುದು. ಆಕೆಯ ಹೆಸರಿಗೆ ಬಂದ ಕಳಂಕವನ್ನು ನೆನೆಸಿಕೊಂಡು ಆಕೆಯ ಭವಿಷ್ಯ ಜೀವನವು ಎಷ್ಟು ದುಸ್ಸಹವೂ, ದುರ್ಭರವೂ ಆದುದೆಂಬುದನ್ನು ಸುಲಭವಾಗಿ ಊಹಿಸಬಹುದು. ಹೀಗಾದ ಕಾರಣ ಈ ಮೊಕದ್ದಮೆಯಲ್ಲಿ ಅಪರಾಧಿಗಳಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸುವುದು ನ್ಯಾಯ ಸಮ್ಮತವೆಂದು ಹೇಳಿದರು. ಮೊದಲನೆ ಅಪರಾಧಿ ಲಾಲ್ ಬಾಬಾ ಸೇಟ್ ಎಂಬವನಿಗೆ ೭ ವರ್ಷಗಳ ಕಠಿಣ ಶಿಕ್ಷೆ ಮತ್ತು ೫೦೦ ರೂಪಾಯಿಗಳ ದಂಡ, ದಂಡ ಕೊಡದಿದ್ದರೆ ಮತ್ತೊಂದು ವರ್ಷ ಕಠಿಣ ಶಿಕ್ಷೆ, ೨ನೇ ಅಪರಾಧಿ ಸಲೀಮನಿಗೆ ೪ ವರ್ಷಗಳ ಕಠಿಣ ಸಜೆ, ೩೦೦ ರೂಪಾಯಿಗಳ ದಂಡ, ದಂಡ ಕೊಡದಿದ್ದರೆ ೬ ತಿಂಗಳು ಮತ್ತೆ ಕಠಿಣ ಸಜೆ. ೩ ಮತ್ತು ೪ನೇ ಅಪರಾಧಿಗಳಾದ ಮಹಮ್ಮದ್ ಹುಸೇನ್ ಮೌಲ್ವಿ ಮತ್ತು ಅಬ್ದುಲ್ ಖಾದರ್ ಎಂಬವರಿಗೆ ಒಬ್ಬೊಬ್ಬರಿಗೆ ೩ ವರ್ಷಗಳ ಕಠಿಣ ಸಜೆ ಮತ್ತು ೧೦೦ ರೂಪಾಯಿಗಳ ದಂಡ, ದಂಡ ಕೊಡದಿದ್ದರೆ ಮತ್ತು ೩ ತಿಂಗಳುಗಳ ಕಠಿಣ ಸಜೆ ವಿಧಿಸಿದರು. ಪೋಲೀಸ ಅಧಿಕಾರಿಗಳ ತಪ್ಪನ್ನು ಮೆಜಿಸ್ಟ್ರೇಟರು ಬಹಿರಂಗಪಡಿಸಿ "ಈ ಘೋರ ಕೃತ್ಯವು ನಡೆಯಲು ಪ್ರೋತ್ಸಾಹಿಸಿದ ಮುಖ್ಯ ಜವಾಬ್ದಾರಿಯು ಇನ್ಸ್‌ಪೆಕ್ಟರ್ ಜಮಾಯದ್ದೀನರಿಗೆ ಸೇರಿದೆ. ಸಬ್ ಇನ್ಸ್‌ಪೆಕ್ಟರ್ ಲಕ್ಷ್ಮೀನಾರಾಯಣಪ್ಪನು ತನ್ನ ಮೇಲಿನ ಅಧಿಕಾರಿಯ ಪ್ರೀತಿ ಸಂಪಾದನೆಗಾಗಿ ಅಪರಾಧಿಗಳನ್ನು ಪ್ರೋತ್ಸಾಹಿಸಿದ್ದನು. ಜಿಲ್ಲಾ ಸುಪರಿಂಟೆಂಡೆಂಟರಾದ ಅಬ್ದುಲ್ ರಜಾಕ್‌ರಂತಹವರು ಇಂತಹ ಮೊಕದ್ದಮೆಯಲ್ಲಿ ಅಪರಾಧಿಗಳ ಪರ ಸಾಕ್ಷ್ಯ ನುಡಿಯುವುದು ಅಸಾಧಾರಣ ವಿದ್ಯಮಾನ, ಹೀಗೆ ನಡೆಯುವುದು ವಿಚಿತ್ರ ಮತ್ತು ಬಹಳ ಅಪೂರ್ವ" ಎಂದರು.

ಈ ಅನಾಹುತಗಳಿಗೆಲ್ಲ ಹಿಂದೂ ಸಮಾಜವೇ ಕಾರಣವೆಂದು ಪತ್ರಿಕೆಗಳೆಲ್ಲ ಹೇಳುತ್ತವೆ. ಗಂಡನು ತೀರಿಕೊಂಡ ಮೇಲೆ ಮಹಾಲಕ್ಷ್ಮಮ್ಮಳು ಸಮಾಜದ ಆಚಾರಕ್ಕೆ ಹೆದರಿದಳು. ವಿಧವೆಯ ತಲೆಬೋಳಿಸುವರಲ್ಲ ಎಂಬ ಚಿಂತೆಯು ಅವಳಲ್ಲಿ ಹುಟ್ಟಿ, ಅದನ್ನು ತಪ್ಪಿಸುವುದಕ್ಕಾಗಿ ಅವಳು ಮನೆಯಿಂದ ಹೊರಬಿದ್ದಳೆಂದು ವಿಚಾರಣೆಯಲ್ಲಿ ಗೊತ್ತಾಗಿದೆ. ಈ ವಿಚಾರವಾಗಿ 'ವಿಶ್ವಕರ್ನಾಟಕ'ದ ಅಭಿಪ್ರಾಯವು "ಹೀಗಿದೆ — ಚಿಂತಾಮಣಿ ಮೊಕದ್ದಮೆ ಹಿಂದೂ ಸಮಾಜಕ್ಕೊಂದು ಎಚ್ಚರಿಕೆ. ಬಾಲ ವಿಧವೆ ಮಹಾಲಕ್ಷ್ಮಮ್ಮಳಿಗೆ 'ನನ್ನವರು ನನ್ನ ತಲೆಬೋಳಿಸುವರಲ್ಲ' ಎಂಬ ಭಯವೂ ಮತ್ತು ರೋಷವೂ ಉಂಟಾಯಿತು. ಅದು ಆಕೆಯನ್ನು ಮನೆಯಿಂದೋಡಿಸಿತು. ಹೊರಗೆ ಒದಗುತ್ತಲೇ ಘೋರ ವಿಪತ್ತಿಗೊಳಗಾದಳು. ವಿಚಾರಶೀಲರೂ ಸನಾತನ ಧರ್ಮಗಳಲ್ಲಿ ಶ್ರದ್ಧೆಯುಳ್ಳವರೂ ಇನ್ನು ಮೇಲೆ ಕೊಂಚ ತೀವ್ರವಾಗಿ ಆಲೋಚನೆ ಮಾಡಬೇಕು. ಇಂತಹ ನಾಚಿಕೆಗೇಡಿನ

ಪರಿಸ್ಥಿತಿಯಿಂದ ಹಿಂದೂ ಸಮಾಜವನ್ನೂ ಬ್ರಾಹ್ಮಣ ಕುಲವನ್ನೂ ಉದ್ಧಾರ ಮಾಡಬೇಕು. ಇದು ದೊಡ್ಡ ಪ್ರಶ್ನೆ" ಎಂತ ಮೊದಲಾಗಿ ವಿಚಾರಪೂರ್ಣವಾಗಿ ಬರೆದಿರುತ್ತದೆ.

ಗಾಂಧೀಜೀಯವರ ಸಂಚಾರ.

ಮಹಾತ್ಮ ಗಾಂಧಿಯವರು ಸಂಯುಕ್ತ ಪ್ರಾಂತ್ಯದಲ್ಲಿ ಸಂಚರಿಸುತ್ತಿರುವರು. ಕಳೆದ ವಾರ ಅವರು ಸಿಯೋನಿ ಎಂಬಲ್ಲಿಂದ ಬೇತಲ್ ಎಂಬಲ್ಲಿಗೆ ಹೋದರು. ಹೋದ ಹೋದಲ್ಲಿ ಜನರು ಅವರಿಗೆ ದುಡ್ಡಿನ ಥೈಲಿಯನ್ನರ್ಪಿಸಿದರು. ತನಗೆ ಅರ್ಪಿಸಲ್ಪಟ್ಟ ಹೂಮಾಲೆ, ಬಾಸ್ಕೆಟ್ ಮೊದಲಾದ ಎಲ್ಲ ವಸ್ತುಗಳನ್ನೂ ಅವರು ಏಲಂ ಮಾಡಿ ಹರಿಜನ ಸೇವೆಗಾಗಿ ಹಣ ಕೂಡಿಸುತ್ತಿರುವರು. ಜನ ಸಮೂಹವು ಎಲ್ಲೆಲ್ಲೂ ಅವರ ಸಂಚಾರಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ. ಅವರನ್ನು ಕಾಣುವ ತವಕದಿಂದ ಜನರು ಛಾವಣಿಗಳಲ್ಲೋ ತೋಡುಗಳಲ್ಲೋ ಬಿದ್ದು ಜಖಂಗೊಳ್ಳುತ್ತಿರುವರು. ಗಾಂಧೀಜೀಯರಿಗೆ ನಿದ್ರಿಸಲೂ ಕೂಡಾ ಸಮಯ ಸಿಗುವುದಿಲ್ಲ. ಮೋಟಾರ್ ಕಾರಿನಲ್ಲೂ ರೈಲಿನಲ್ಲೂ ಪ್ರಯಾಣ ಮಾಡುತ್ತಿರುವಾಗಲೇ ಅವರು ಸ್ವಲ್ಪ ಸ್ವಲ್ಪ ಮಲಗುವ ಅಭ್ಯಾಸ ಮಾಡಿರುತ್ತಾರೆ. ಬಂದು ಕೂಡುವ ಜನ ಸಮೂಹದೊಡನೆ ಗಾಂಧೀಜೀಯವರು ಹರಿಜನ ಸೇವಾರ್ಥವಾಗಿ ದುಡ್ಡು ಕೊಡಿರೆಂದು ಕೇಳುವರು. ಒಡನೆ ಜನರು ತಮ್ಮಲ್ಲಿರುವ ಆಭರಣಗಳನ್ನು ಅವರ ಸಂಗಿಗೆ ಹಾಕುವರು. ಅನೇಕರು ತಮ್ಮಲ್ಲೇನೂ ಇಲ್ಲದೆ ತಾಮ್ರದ ನಾಣ್ಯಗಳನ್ನು ಕೊಡಲು ಹಿಂಜರಿದರೂ, ಗಾಂಧೀಜೀಯವರು ಹಾಗೆ ಸುಮ್ಮಗೆ ನಿಂತವರಿಗೆ 'ಪೈಯಾದರೂ ಸರಿ—ಕೊಡಿರಿ' ಎಂದು ಅವನ್ನು ತಟ್ಟಿ ಕೇಳುವರು. ಅವರಿಗೆ ಅರ್ಪಿಸಲಾಗುವ ಹೂಮಾಲೆಗಳಿಗೆ [illegible] ಹತ್ತು ಸಿಕ್ಕುವ ಸಂದರ್ಭಗಳೂ ಇವೆ. ಅವರು ಏಲಂ ಮಾಡುವ ಸಾಮಗ್ರಿಗಳನ್ನು ಕೊಳ್ಳುವುದರಲ್ಲಿ ಜನರು ವಿಶಿಷ್ಟ ಆತುರವನ್ನೇ ತೋರಿಸುವರು. ಬೇಲಾರಿಗೆ ಹೋಗುತ್ತಿದ್ದಾಗ ಗಾಂಧೀಜೀಯವರು ಓಡುವ ರೈಲಿನಲ್ಲೇ ಕುಳಿತು ಕಾಗದ ಬರೆದರು. ಬೇಲಾರಿನ ಹರಿಜನ ಕೇರಿಗೆ ಗಾಂಧೀಜೀಯವರು ನಿಯಮಿತ ವೇಳೆಗಿಂತಲೂ ಅರ್ಧ ತಾಸು ಮೊದಲೇ ಹೋದರು. ಅಲ್ಲಿ ಜನರು ಅಷ್ಟರ ತನಕ ಕೂಡದೆ ಯಾವ ವ್ಯವಸ್ಥೆಯನ್ನೂ ಮಾಡಿರಲಿಲ್ಲ. ಎರಡು ಜಮಖಾನೆಗಳನ್ನು ಮಾತ್ರ ಒಂದು ಮರದಡಿಯಲ್ಲಿ ಹಾಸಿದ್ದರು. ಗಾಂಧೀಜೀಯವರು ಸಂಗಾತಿಗಳೊಡನೆ ಹೋಗಿ ಅಲ್ಲಿ ಕುಳಿತರು. ೧೫ ನಿಮಿಷಗಳೊಳಗೆ ಸುತ್ತುಮುತ್ತಿಂದ ನೂರುಗಟ್ಟಳೆಯಾಗಿ ಜನರು ಧಾವಿಸಿ ಬಂದು ಅವರ ಪಾದಸ್ಪರ್ಶ ಮಾಡಿದರು. ಅವರನ್ನು ಆಶೀರ್ವಾದಿಸಿ ಮುಗಿಸುವುದು ಕೂಡಾ ಗಾಂಧೀಜೀಯವರಿಗೆ ಕಷ್ಟವೆನಿಸುತ್ತಿತ್ತು. ಗಾಂಧೀಜೀಯವರು ಅಲ್ಲಿಯ ಹರಿಜನರಿಗೆ ಬೋಧಿಸುತ್ತಾ ಅವರು ದನದ ಮಾಂಸ ತಿನ್ನುವುದನ್ನೂ, ಕುಡುಕತನವನ್ನೂ ಬಿಡಬೇಕೆಂದು ಹೇಳಿದರು. ಅವರು ಒಡ್ಡಿದ [illegible] ೧೫ ನಿಮಿಷಗಳೊಳಗೆ ತಾಮ್ರ ಬೆಳ್ಳಿಯ ನಾಣ್ಯಗಳು ತುಂಬಿದುವು. ಕೊನೆಗೆ ಅವರು ಹೊರಡುವಾಗ ಒಬ್ಬ ವೃದ್ಧನು ಒಂದು ಹೂಮಾಲೆಯನ್ನು ಅವಸರ ಅವಸರವಾಗಿ ತರಿಸಿ ಗಾಂಧೀಜೀಯವರಿಗೆ ಅರ್ಪಿಸಿ ಅವರನ್ನು ಚುಂಬಿಸಿದನು. ಗಾಂಧೀಜೀಯವರು ಐದು ನಿಮಿಷ ತಡೆಯಿರೆಂದು ಹೇಳಿ ಆ ಮಾಲೆಯನ್ನು ಏಲಂ ಮಾಡಲು, ಅದಕ್ಕೆ ಏಳು ರೂಪಾಯಿ ಬೆಲೆ ದೊರೆಯಿತು.

ಡಾ| ಪಟ್ವರ್ಧನರ ವ್ಯಾಯಾಮ ಶಾಲೆಗೆ ಹೋಗುವುದಕ್ಕಾಗಿ [illegible] ಹೊರಟಾಗ ಗೇಟಿನ ಬಳಿ ೨೦ ವರ್ಷ ಪ್ರಾಯದ ಒಬ್ಬಳು ಮರಾಠಿ ತರುಣಿಯು ನಿಂತಿದ್ದಳು. ಅವಳ ಮುಖವು ಗಾಂಧೀಜೀಯವರನ್ನು ಆಕರ್ಷಿಸಿತು. ಅವರು ಅವಳನ್ನು ಸಮೀಪಿಸಲು, ಒಡನೆ ಅವಳು ತನ್ನಲ್ಲಿದ್ದ ಉಂಗುರವನ್ನು ಗಾಂಧೀಜೀಯವರಿಗೆ ಅರ್ಪಿಸಿ ಅವರ ಪಾದಸ್ಪರ್ಶ ಮಾಡಿದಳು. ಅಮರಾವತಿಯಲ್ಲಿ ಗಾಂಧೀಜೀಯವರು [illegible] ಮೇಲೆ [illegible] ಊಟವೊಂದರಲ್ಲಿ ತನಗೆ ಕೊಡಲ್ಪಟ್ಟ ಒಂದು ಬೆಳ್ಳಿಯ ಚಿಕ್ಕ ಪೆಟ್ಟಿಗೆಯನ್ನು ಏಲಂ ಹಾಕಿದರು. ೨೫ ರೂಪಾಯಿ ಎನ್ನುವಷ್ಟರಲ್ಲಿ ಅಲ್ಲಿಯ ವಾಲ್ಕಾರ್ಟ್ ಬ್ರದರ್ಸ್ ಕಂಪೆನಿಯ ಮೆನೇಜರಾದ ಎ| ಬರ್ಸ್ಟನ್ ಎಂಬವರು ಅದರ ಬೆಲೆಯನ್ನು ೩೦ಕ್ಕೇರಿಸಿದರು. ಅದರ ಬೆಲೆಯು ರೂ ೩೫ ಆಗುವಾಗ ಬರ್ಸ್ಟನವರು ಪುನಃ ಅದಕ್ಕೆ ೪೦ರಿಂದ ೫೫ ರೂಪಾಯಿ ಕ್ರಯ ಏರಿಸಿ ಗಾಂಧೀಜೀಯವರಿಂದ ಪಡೆದರು. ಮುನಿಸಿಪಲ್ ಮಾನ ಪತ್ರವನ್ನು ಗಾಂಧೀಜೀಯವರು ಏಲಂ ಮಾಡಿದಾಗ ಬರ್ಸ್ಟನರೇ ಅದನ್ನು ಪಡೆಯಲು ಯತ್ನಿಸಿದರು. ಆದರೆ ಅದನ್ನು ಇತರರು ಥಟ್ಟನೆ ಪಡೆದುದರಿಂದ ಅವರಿಗೆ ಪಡೆಯಲು ಅಸಾಧ್ಯವಾಯಿತು. ಬರ್ಸ್ಟನರು ಗಾಂಧೀಜೀಯವರ ಹಸ್ತಾಕ್ಷರಗಳನ್ನು ಕೇಳಿದರು. ಇದನ್ನು ಗಾಂಧೀಜೀಯವರ ಸೆಕ್ರೆಟರಿಯವರು ಅವರಿಗೆ ತಿಳಿಸಿದೊಡನೆ ಗಾಂಧೀಜೀಯವರು 'ಪ್ರೀತಿ ಪೂರ್ವಕ ನಮಸ್ಕಾರಗಳು' ಎಂದು ಬರೆದು ಬರ್ಸ್ಟನರಿಗೆ ಒಪ್ಪಿಸಿದರು. ಬರ್ಸ್ಟನರು ಅತ್ಯಾನಂದತುಂದಿಲರಾದರು. ಅವರು ಗಾಂಧೀಜೀಯವರನ್ನು ತನ್ನ ಪತ್ನಿಗೆ ತೋರಿಸಿ "ನೀನೂ ಹೋಗಿ ಏನನ್ನಾದರೂ ಕೇಳು" ಎನ್ನುತ್ತಿದ್ದರು. ಕೊನೆಗೆ ಬರ್ಸ್ಟನರು ಗಾಂಧೀಜೀಯವರಿಗೆ ಪುನಃ ೨೫ ರೂಪಾಯಿಗಳನ್ನು ಅರ್ಪಿಸಿ ಗಾಂಧೀಜೀಯವರಿಗೆ ತಾನು ಅತ್ಯಂತ ಋಣಿಯಾಗಿರುವೆನೆಂದರು.

ಶಹಾ ಶಿವಾಜಿ ಹಿಂದೂ ರೆಸ್ಟೋರೆಂಟ್

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು (ದ. ಕ)

ಮಂಗಳೂರಿನ ನೂತನ ಉಪಹಾರ ಗೃಹ.

ಶುದ್ಧ ಜಿನಸುಗಳಿಂದ, [illegible] ತಯಾರಿಸಲ್ಪಡುವ ಮಿಠಾಯಿಗಳು ಇನ್ನಿತರ ಬಗೆಯ ತಿಂಡಿ ತಿನಸುಗಳು—ಚಹಾ, ಕಾಫಿ, ಕೋಕೋ ಇತ್ಯಾದಿ ಎಲ್ಲ ತರದ ಪಾನೀಯಗಳು

ಅನುಭವಸ್ಥರಿಂದ ತಯಾರಿಸಲ್ಪಡುವುವು

ಆಯಾಯಾ ತರಗತಿಯವರಿಗನುಕೂಲವಾಗುವಂತೆ ಸ್ಥಳವಿದೆ.

ಒಮ್ಮೆ ದಯಮಾಡಿಸಿ, ಪರೀಕ್ಷಿಸಿ ತೃಪ್ತಿ ಪಡೆಯಿರಿ.

[ವಿ. ಸೂ.—ಟೀಪಾರ್ಟಿ, ವಿವಾಹ ಉಪನಯನಾದಿ ಸಮಾರಂಭಗಳಲ್ಲಿ ಸುಲಭ ದರಗಳಲ್ಲಿ ತಿಂಡಿ ತಿನಸು ಪಾನೀಯಗಳನ್ನು ಒದಗಿಸಲಾಗುವುದು. ವಿಶೇಷ ಮಾಹಿತಿಗಾಗಿ ಪತ್ರವ್ಯವಹಾರ ಮಾಡಿಕೊಳ್ಳುವುದು]

FRESH CONSIGNMENT ARRIVED.

UNEQUAL QUALITY——————EXCEPTIONAL PRICE

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಸ್ಫುಟವಿಚಾರಗಳು:—

ಜಾಯಿಂಟ್ ಸೆಲೆಕ್ಟ್ ಕಮಿಟಿಯ ಶಿಫಾರಸ್ಸುಗಳು.

ಹಾಗಿದ್ದಂತೆಯೇ ಸರಿ. ಇದರ ರಿಪೋರ್ಟು ಬಹಳ ದೊಡ್ಡದು. ನವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಅಸಾಧಾರಣ ಪರಾಕ್ರಮದಿಂದ ಸಾಕ್ಷಿ ನುಡಿದರು. ಇದುವರೆಗೆ ಜಂಟ್ ಪಾರ್ಲಿಮೆಂಟರಿ ಕಮಿಟಿಯ ವಿಚಾರಣೆಯಲ್ಲಿ ನಡೆದುದೆಲ್ಲವನ್ನು ೨೪೬೧ ಪುಟದ ಪುಸ್ತಕವಾಗಿ ಪ್ರಕಟಿಸಲಾಗಿದೆ. ೧೯೫೫೪ ಪ್ರಶ್ನೆಗಳೂ ಉತ್ತರಗಳೂ ಇವೆ. ಇವನ್ನೆಲ್ಲ ಓದಿ ಬರೆದ ಒಂದು ವಿಮರ್ಶೆಯು ಹೇಳಿದೆ— "ಹಿಂದೀಯರು ಈ ಶ್ವೇತ ಪುಸ್ತಕವನ್ನೋದಿ ಬೇಸರಗೊಂಡು ಈಗ ಸೈಮನ್ ವರದಿಯನ್ನು ನೋಡಿ ಅದರಲ್ಲಿ ಭವಿಷ್ಯವೇನು ಇರುವುದೆಂದು ಊಹಿಸಲು ಕಾದಿರುವರು. ಇದರಿಂದ ಭಾರತವರ್ಷಕ್ಕೆ ಅದರ ಆತ್ಮ ತೃಪ್ತಿಗಾಗಿ ದೊರೆತುದೇನೂ ಇಲ್ಲವೆನ್ನಬಹುದು." ಈ ವಿಮರ್ಶೆಯು ಬ್ರಿಟಿಷ ಪತ್ರಿಕೆಗಳಲ್ಲೇ ಬಂದಿರುವಾಗ, ಸರ್ವರಿಗೂ 'ಸಮಾಧಾನ'ವೆ!

ಮೆಂಚೆಸ್ಟರಿನ ದುರ್ಭಾಗ್ಯ.

ಜಪಾನಿನಿಂದ ಇಮಿಟೇಶನ್ ರೇಶ್ಮೆಯನ್ನು ಮೆಂಚೆಸ್ಟರು ಕಾನೂನಾಗಿ ಕ್ರಯಕ್ಕೆ ಕೊಡುತ್ತಿದೆ; ಏಕೆ,— ಜಪಾನಿನ ರೇಶ್ಮೆಯು ಪ್ರತಿಯೊಂದು ದೇಶದಲ್ಲೂ ಧಾರಾಳವಾಗಿ ತುಂಬಿದುದರಿಂದ, ಮೆಂಚೆಸ್ಟರಿನ ಇಮಿಟೇಶನ್ ರೇಶ್ಮೆಗೆ ಗಿರಾಕಿಗಳು ಕಡಿಮೆಯಾದಾರು ಎಂದು ಬೆದರಿಕೆ! ಜಪಾನು ತನ್ನ ಬಟ್ಟೆಯನ್ನು ಗಜಕ್ಕೆ ೧॥ ಅಣೆಗೆ ಮೆಂಚೆಸ್ಟರಿಗೆ ಕೊಡಬಲ್ಲದು, ಅದೇ ಮೆಂಚೆಸ್ಟರಿನ ಬಟ್ಟೆಗೆ ರೂ. ೧—೭—೦. ಪ್ರತಿ ಗಜಕ್ಕೆ ಖರೀದಿ ಬೀಳುವುದು. ಲಂಡನಿನಲ್ಲಿ ಕೆಲಸಗಾರರಿಗೆ ಕೂಲಿಯೂ ಕಡಿಮೆ, ಕೆಲಸವೂ ಸಿಗುವುದು ಕಡಿಮೆಯಾಗಿರುವ ಕಾರಣ, ಅವರು ಜಪಾನು ಬಟ್ಟೆಯನ್ನು ಬಹಳವಾಗಿ ಕೊಂಡುಕೊಳ್ಳುತ್ತಾರಂತೆ. ಅಲ್ಲೇನು ಬಹಿಷ್ಕಾರ ಮಾಡಬೇಕೆಂದು ತಡೆವವರಿಲ್ಲವೇ? ಬ್ರಿಟಿಷ ಸರಕನ್ನೇ ಕೊಂಡುಕೊಳ್ಳಬೇಕೆಂಬ ಆ ಚಟುವಟಿಕೆ ತಡೆಯಿತೆ?

ಜಪಾನಿನ ಸರಕು ರಾಶಿ

ಪುನಃ ಮತ್ತೊಂದು ದೂರು ಮೆಂಚೆಸ್ಟರಿನಿಂದ! ಇಜಿಪ್ತದಲ್ಲಿ ಅಲ್ಲಿನ ಬಟ್ಟೆ ಮಾರುವುದಿಲ್ಲ! ೧೯೩೧ರಲ್ಲಿ ಆ ದೇಶಕ್ಕೆ ಬಂದ ಜಪಾನು ಬಟ್ಟೆಗಿಂತ ಕಳೆದ ವರ್ಷ ಬಂದುದು ಒಂದೂವರೆ ಪಾಲು ಹೆಚ್ಚಾಗಿದೆ. ಇಜಿಪ್ತದವರಿಗೆ ಬೇಕಾಗಿರುವ ಎಲ್ಲ ಬಟ್ಟೆಯಲ್ಲಿ ಸುಮಾರು ರೂಪಾಯಿಯಲ್ಲಿ ೬ ಅಣೆಗಳಷ್ಟು ಜಪಾನಿಗೇ ಸಲ್ಲುತ್ತಿದೆ. ಜಪಾನಿನವರು ಅಲ್ಲಿಗೆ ಹತ್ತಿರವಾದ ಅಬಿಸೀನಿಯ ರಾಜ್ಯದ ಅರಸರಿಂದ ಬೇಕಷ್ಟು (೧೦೦೦ ಎಕ್ರೆ) ಜಮೀನನ್ನು ಹತ್ತೀ ಸಾಗುವಳಿಗೆ ಪಡೆದು, ಅಲ್ಲಿನ ಹತ್ತಿಯಿಂದ ಪ್ರತಿಯೊಂದು ದೇಶದ ಜನರಿಗೆ ಅಕ್ಷರದಲ್ಲಿ ಪಟ್ಟೆ ತಯಾರಿಸಿ ಕೊಡಬೇಕಾಗಿ ನಿರ್ಧಾರ ಮಾಡಿರುವರು. ಇದೂ ಬ್ರಿಟಿಷರಿಗೆ ವಿರುದ್ಧವಾಗಿದೆ. ಏಕೆಂದರೆ, ಇಜಿಪ್ತದಲ್ಲಿಯೂ ಸುದಾನದಲ್ಲಿಯೂ ಬ್ರಿಟಿಷರು ವಿಶೇಷವಾಗಿ ಹತ್ತಿ ಬೆಳೆಯಿಸಿ ಲಂಕೇಶಯರಿಗೆ ಕಳುಹಿಸುತ್ತಾರೆ. ಬ್ರಿಟಿಷರ ಆಳಿಕೆಯಲ್ಲಿರುವ ಜೆಂಜಿಬಾರದಲ್ಲಿಯೂ, ಕಳೆದ ವರ್ಷ ಖರ್ಚಾದುದಕ್ಕಿಂತ ಈ ವರ್ಷ ಮೂರು ಲಕ್ಷ ಗಜ ಹೆಚ್ಚಿಗೆ ಜಪಾನು ಬಟ್ಟೆಯೇ ವಿಕ್ರಿತವಾಗಿದೆ. ಲಂಕೇಶಯರ ಬಟ್ಟೆಯು ಅಲ್ಲಿ ಈ ವರ್ಷದಲ್ಲಿ ಖರ್ಚಾದುದು ಕಳೆದ ವರ್ಷದಲ್ಲಾದುದರ ಮೂರರಲ್ಲೊಂದು ಅಂಶ. ಪಾರ್ಲಿಮೆಂಟಿನಲ್ಲಿರುವ ಲಂಕೇಶಯರು ಮೆಂಬರರು "ನಮ್ಮ ಬಟ್ಟೆಗೆ ಎದುರಾಗಿ ಜಪಾನು ಬಟ್ಟೆ ಇರುವ ವರೆಗೆ ಶಾಂತಿ ಸಮಾಧಾನಗಳು ಸರಕಾರಕ್ಕೆ ಉಂಟಾಗಲಾರವು" ಎಂದು ತಿಳಿಸಿರುವರು.

ಗ್ರಾಮಗಳ ಅಭ್ಯುದಯಕ್ಕಾಗಿ

ಸರಕಾರವು ಏನು ಮಾಡಬಹುದು? ಅಗತ್ಯವಾಗಿಯೂ ಪ್ರಚಾರ ಕಾರ್ಯವು ಬೇಕಾಗಿದೆ. ಗ್ರಾಮಸ್ಥರಿಗೆ ಅಭ್ಯುದಯವೆಂಬುದು ಯಾವ ಯಾವ ದಿಕ್ಕುಗಳಲ್ಲಿ ಎಂದು ತಿಳಿಯದೆ, ಅಭ್ಯುದಯ ಸಾಧನೆ ಮಾಡುವುದೆಂದರೆ ಅರ್ಥವಾಗದು. ಗ್ರಾಮಸ್ಥರಿಗೆ ತಿಳಿಯುವ ಭಾಷೆಯಲ್ಲಿ ತಿಳಿಯುವ ರೀತಿಯಲ್ಲಿ ಅವರ ಶಿಕ್ಷಣವಾಗತಕ್ಕದು. ಅವರ ಹಿತಕ್ಕಾಗಿ ಸರಕಾರವು ಈ ಪ್ರಯತ್ನಗಳನ್ನು ಮಾಡುವುದಾಗಿ ಅವರು ತಿಳಿಯಲಾರರಾದರೆ, ಅಭ್ಯುದಯವೆಂಬುದು ಕಷ್ಟ ಸಾಧ್ಯವಾಗುವುದು. ಕೃಷಿ ಇಲಾಖೆಯೂ ಸಹಕಾರೀ ಸಂಘಗಳೂ ಗ್ರಾಮಸ್ಥರಿಗಾಗಿ ಏನು ಮಾಡಿವೆ? ಏನು ಸಾಧಿಸಬಹುದಾಗಿತ್ತು? ಪ್ರತಿಯೊಬ್ಬ ಗ್ರಾಮಸ್ಥನಿಗೂ ಮನಸ್ಸಿಗೆ ಮುಟ್ಟುವ ರೀತಿಯ ಪ್ರಚಾರ ಕಾರ್ಯವನ್ನು ಮಾಡುವುದಕ್ಕೆ ಬಲು ಚೆನ್ನಾಗಿ ವ್ಯವಸ್ಥೆಯೂ ಆಗಬೇಕು; ಕಾರ್ಯ ಕ್ರಮವೂ ಅಂಥದ್ದೇ ಇರಬೇಕು. ಅವರಿಗೆ ಇಷ್ಟು ತಿಳುವಳಿಕೆ; ಇಷ್ಟು ಸೌಖ್ಯ ಉಂಟಾಗುವ ಹಾಗೆ ಮಾಡುವುದಕ್ಕೆ ಪ್ರಯತ್ನಗಳ ಫಲವಾದರೆ ಅದೇ ಅಭ್ಯುದಯದ ಮೂಲವಾಗುವುದು. ವಿದ್ಯಾದಾನಗಳನ್ನು ಗದ್ದು ಬಾಳಲು ಗ್ರಾಮಸ್ಥನಿಗೆ ಸ್ವಾತಂತ್ರ್ಯ ತಿಳಿವು ಉಂಟಾದರೆ, ಅವನು ಗ್ರಾಮಾಭ್ಯುದಯ ಸಾಧಕನಾಗುವನು. ಸರಕಾರವು ಬಹು ದಿನಗಳಿಂದ ಸಾರುತ್ತಿರುವ ತತ್ವಗಳೂ ಸಫಲವಾದಾವು.

ಹೈಸ್ಕೂಲುಗಳ ಕನ್ನಡನೇ.

ಶಿಕ್ಷಣದ ಭಾಷೆಯಾಗುವ ಹಾಗೆ ಪ್ರಯತ್ನವಾಗಲೆಂದು ಎಲ್ಲರೂ ಮಾತಾಡುತ್ತ ಇರುವಾಗ, ಮೈಸೂರಲ್ಲಿ ಚರಿತ್ರ ಮತ್ತು ಭೂಗೋಳ ಶಾಸ್ತ್ರವನ್ನು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕನ್ನಡದಲ್ಲಿ ಕಲಿತು ಒಪ್ಪಿಸಿದ ವಿದ್ಯಾರ್ಥಿಗಳು ಅವೇ ವಿಷಯಗಳನ್ನು ಇಂಗ್ಲಿಷಿನಲ್ಲಿ ಕಲಿತರೆ ಅಷ್ಟು ಚೆನ್ನಾಗಿ ವಿವರಿಸಿ ಬರೆಯುತ್ತಲೂ ಇರಲಿಲ್ಲ, ಅಷ್ಟು ಹೆಚ್ಚು ಕೂಲಂಕಷವಾಗಿ ತಿಳಿದುಕೊಳ್ಳುತ್ತಲೂ ಇರಲಿಲ್ಲ ಎಂದು ವಿದ್ಯಾ ಇಲಾಖೆ ಡೈರೆಕ್ಟರರು ಅಭಿಪ್ರಾಯ ಪಟ್ಟು ಈಗ ಗಣಿತವನ್ನೂ ಕನ್ನಡದಲ್ಲೇ ಕಲಿಸುವಂತಾಗಲೆಂದೂ ಆದರೆ ಒಂದು ಡಿವಿಜನಿನಲ್ಲಿ ಇಂಗ್ಲಿಷಿನಲ್ಲೇ ಕಲಿಯಬೇಕೆನ್ನುವವರು ಕಲಿಯುವಂತೆ ಸೌಕರ್ಯ ಮಾಡಿಕೊಡಬೇಕೆಂದೂ ಅಪ್ಪಣೆ ಕೊಟ್ಟಿರುವರು. ಮೈಸೂರು ಸರಕಾರವೂ ಇದೇ ಅಪ್ಪಣೆಯನ್ನು ತಾನೂ ಮಂಜೂರು ಮಾಡಿರುವುದು. ಮೈಸೂರಿನ ಶಿಕ್ಷಣ ಖಾತೆಯಲ್ಲಿ ಇದು ನೂತನ ಯುಗವನ್ನು ಕಲ್ಪಿಸುವುದು.

ತೀರ್ವೆಯನ್ನು ವಿಧಾಯಿಸುವಲ್ಲಿ

ಜಮೀನುದಾರರಲ್ಲಿ ಹೆಚ್ಚಿನ ಸಂಖ್ಯೆಯವರು ಒರೇ ಚಿಕ್ಕ ಹಿಡುವಳಿದಾರರು ಎಂಬುದನ್ನು ಸರಕಾರವು ಮನಸ್ಸಿಗೆ ತಂದುಕೊಳ್ಳುವುದೇ ಇಲ್ಲ. ಇಂಥವರು ರೂ. ೫೦ಕ್ಕಿಂತ ಕಡಿಮೆ ತೀರ್ವೆ ಕೊಡುವರು; ಇಂಥವರ ವಾರ್ಷಿಕ ವಿಸ ಹುಟ್ಟುವಳಿಯು ರೂ. ೨೦೦ ಎಂದು ಸರಕಾರವು ನಿರ್ಧರಿಸುವುದು,—ಎಂದರೆ ತಿಂಗಳಿಗೆ ರೂ. ೧೫. ಈ ಅಲ್ಪ ಹುಟ್ಟು ಒಂದು ಕುಟುಂಬಕ್ಕೆ ಸಾಕಾಗುವುದೆ? ರೂ. ೫೦ ಅಥವಾ ಅದಕ್ಕಿಂತ ಹೆಚ್ಚಿನ ಮೊಬಲಗನ್ನು ತೀರ್ವೆಯಾಗಿ ತೆರುವ ರೈತರು ಯಾವತ್ತು ರೈತರಲ್ಲಿ ನೂರಕ್ಕೆ ೫ರಂತೆ ಮಾತ್ರ ಇರುವರು. ಹೀಗಿರುವಾಗ ನೂರರಲ್ಲಿ ೯೫ ಮಂದಿ ರೈತರಿಗೆ "ತೀರ್ವೆ" ಎಂದರೆ ಯಾವ ಬಗೆಯ ಸಂಕಟವೆಂದು ತಿಳಿಯದೆ ಇದ್ದೀತೆ? ತೀರ್ವೆಯ ಭಾರ ಹೊರಲು ಇವರು ಅನರ್ಹರು, ಅಬಲರು. ಇಂಥವರ ಮೇಲೆ ತೀರ್ವೆಯ ಭಾರವೆಲ್ಲ ಬಿದ್ದಿದೆ—ಎಂದು ಶ್ರೀ ಸ್ವಾಮಿ ವೆಂಕಟಾಚಲಂಚೆಟ್ಟಿಯವರು ಪುತ್ತೂರಲ್ಲಿ ಸೇರಿದ ರೈತರ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಹೇಳಿರುವ ಭಾಷಣದಲ್ಲಿದೆ.

ಮದ್ರಾಸಿನ ಯುವಕರ ಸಂಘವು.

ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರನ್ನು ಅಭಿನಂದಿಸುವುದಕ್ಕಾಗಿ ಮೇ| ಡಿ. ಎಚ್. ಬುಲ್ಲನ್, ವಾ. ಸಿ. ಎಸ್‌ರವರ ಅಧ್ಯಕ್ಷತೆಯಲ್ಲಿ ಸೇರಿದಾಗ, ಅಧ್ಯಕ್ಷರು,— ಯುವಕರ ಕೈಯಲ್ಲಿ ದೇಶದ ಭವಿತವ್ಯತೆಯು ಇರುವುದು ಎಂಬುದು ಸತ್ಯವಾದರೂ, ಅದು ಈ ದೇಶದ ಯುವಕರ ವಿಚಾರದಲ್ಲಿ ಸತ್ಯವಾಗಿರುವಷ್ಟು ಪೂರ್ಣವಾಗಿ ಮತ್ತೆಲ್ಲಿಯೂ ಇರಲಾರದು. ಜಾತಿಯ ಮಾತೇತ್ತದೆ, ಸರ್ವ ಯುವಕರನ್ನು ಈ ಸಂಘವು ಸೇರಿಸಿಕೊಂಡಿರುವುದು ಉಚಿತವಾಗಿದೆ. ಇಂಡಿಯವು ಕೆನಡಾ ಡಮಿನ್ಯನುಗಳಂತೆಯೆ ಬ್ರಿಟಿಷ ಸಾಮ್ರಾಜ್ಯದ ಒಂದು ಅಂಗವಾಗಿ ಇರಬೇಕೆಂದು ನನ್ನ ಅಭಿಪ್ರಾಯ. ಆದರೆ, ಇತರ ಅಂಗಗಳೊಡನೆ ಈ ದೇಶಕ್ಕೆ ಸಮಾನತೆಯು ದೊರೆಯಬೇಕಾದರೆ, ಈ ದೇಶವಾಸಿಗಳೆಲ್ಲರೂ ಸಮಾನವಾಗಿ ಗಣನೆಗೆ ಬರುವಂತೆ ಇಲ್ಲೇ ಸಮಸ್ತರ ಅಭಿಪ್ರಾಯವಾಗಬೇಕು. ಮುಖ್ಯವಾಗಿ ಶಿಕ್ಷಣವು ಬಹಳ ಅಭಿವೃದ್ಧಿಗೆ ಬಂದು ಸರ್ವತ್ರವೂ ಹರಡಬೇಕು. ಗ್ರಾಮಗಳಲ್ಲಿ ಸಹ ಎಲ್ಲ ಜಾತಿಯವರಿಗೂ ಒಂದೇ ಶಾಲೆ ಎಂದಿದ್ದರೆ ಎಷ್ಟು ಉಪಕಾರವಾಗುವುದು! ಎಂದರು." "ಜಾತಿಗಳಿದ್ದರೆ ಇರಲಿ; ಅವುಗಳೊಳಗೆ ವೈಷಮ್ಯ ಅಥವಾ ತಾರತಮ್ಯ ಭಾವವು ಮಾತ್ರ ಅಳಿದು ಹೋಗಲೇಬೇಕು" ಎಂದು ಶ್ರೀ| ಅಯ್ಯರರು ಎಂದರು.

+ + + +

ಉಪಯೋಗವಾಗುವುದೆಂದೂ ಬ್ರಿಟಿಷ ಪತ್ರಿಕೆಯ ಸೂಚನೆ. ಜರ್ಮನಿಯೂ ಶಾಂತಿಪ್ರಿಯ ರಾಜ್ಯ.

* * * *

ಆದರೆ, ಜರ್ಮನಿಗೆ ಈ ರೀತಿಯಾಗಿ ಹೋಗುವ ಲೋಹಗಳಲ್ಲಿ ಮೊದಲು ೪೬ ಸಾವಿರ ಮಣ ಕಬ್ಬಿಣವು ಇಂಗ್ಲೆಂಡಿನಿಂದ ಹೋಗುತ್ತಿದ್ದರೆ, ಈಗ ೨೩೩ ಸಾವಿರ ಮಣ ಹೋಗಿದೆಯೆಂದೂ ಪ್ರಕಟವಾಗಿದೆ. ಇಂಗ್ಲೆಂಡು ಯುದ್ಧಶಸ್ತ್ರಗಳಿಗಾಗಿ ಬಹಳವಾಗ ಬೇಡಾಡುವ ದೇಶವೆಂದೂ ಜಗತ್ತೇ ತಿಳಿದಿದೆ.

NOTES...
ನೋಟಗಳು

ಮದ್ರಾಸಿನ ಪೋಲೀಸ್ ಕಮಿಶನರರು, ರಸ್ತೆಯ ಬಳಿ ಕೂತು ತಿಂಡಿ ಪದಾರ್ಥಗಳನ್ನು ಮಾರುವವರನ್ನು ಕೂಡಲೆ ಎಚ್ಚರಿಸಿ ಆಗತ್ಯ ಕಂಡಂತೆ ಮೊಕದ್ದಮೆ ಮಾಡಲಾಗುವುದಾಗಿ ಇಸ್ತಿಹಾರು ಕೊಟ್ಟಿರುವುದು ಮಂಗಳೂರಿಗೆ ಮಾದರಿಯಾಗದಾರದೆ?

* * * *

ಮುಖ್ಯವಾಗಿ ಶಾಲೆಗಳ ಸುತ್ತಲೂ ರಸ್ತೆ ಭಾವಿಗೆ ಬದಿ ಕುಳಿತು ಬಸ್ಸುಗಳ ಓಡಾಟದಿಂದ ದೂಳು ಮುಚ್ಚಿರುವ ತಿಂಡಿಯನ್ನು, ಮಕ್ಕಳನ್ನು ಆಕರ್ಷಿಸಿ ಸೋಡ್ತಿ ಮೂಲಕ ಮಾರುವುದರಿಂದ ಪ್ರಜಾಹಾನಿ ಎಷ್ಟಾಗುವುದಾಗಿ ಮ್ಯುನಿಸಿಪಲ್ ವೆಂಬರುಗಳಾಗಲಿ, ಶಾಲಾಧಿಕಾರಿಗಳಾಗಲಿ, ಪೋಲಿಸರಾಗಲಿ, ಹೆಲ್ತ್ ಡಿಪಾರ್ಟುಮೆಂಟಿನವರಾಗಲಿ ಕಣ್ಣೆತ್ತಿಯೂ ನೋಡಬಾರದೆಂಬ ಶಾಸನವಿರುವುದೇ?

* * * *

ಊಟ ಮಾಡಿ ಬರುವಾಗಲೇ, ಬೀಡಿ ಅಥವಾ ಹೇಗೂ ಮಾಡಿ ದುಡ್ಡು ದುಗ್ಗಾಣಿ ತಂದು ಈ ತಿಂಡಿಯನ್ನು ಮಕ್ಕಳು ಕೊಳ್ಳುವರು. ಸುಲಭವಾದ ಅಜೀರ್ಣತೆಗೂ, ಅನವಶ್ಯಕ ಹಣ ವ್ಯಯಕ್ಕೂ, (ಅದರಂತೆ ಹಣ ಗಳಿಸಿ ತರಲೂ) ಇದೊಂದು ಮುಖ್ಯ ಕಾರಣ.

* * * *

ತಿಂಡಿಯಾದರೂ ದುಡ್ಡಿಗೆ ಇಷ್ಟೇ ಎಂದಿಲ್ಲ. ಅದೃಷ್ಟ ಪ್ರಕಾರ, ಚೀಟು ಬಂದಂತೆ ದೊರೆವುದು. ಮಾರುವವನು ನಷ್ಟವಾಗದಂತೆ ಚೀಟುಗಳ ಮೇಲೆ ಸುಲಭವಾಗಿ ಕಾಣಿಸದ ಅಂಕೆ ಹಾಕಿರುವನು. ಮಕ್ಕಳು ಚೀಟಿತ್ತುವವರು ಸರಿ, ಜುಗಾರಿನ ಮೇಲೆ ಅವಶ್ಯವಾಗಿ ಪ್ರೇಮ ಬೀರುವ ಹಾಗೆ ಎಳೆಯುವವರಿಗೆ ಒಂದು ಪಾಠ ಕಲಿಯುವಂತಾಯಿತು.

* * * *

ಸೋಡ್ತಿಯಲ್ಲಿ ತಿಂಡಿ ಸಿಕ್ಕಿದುದನ್ನು ಮಾರುವವನು ಕೊಡುವಾಗ,—ಅವನಿಟ್ಟ ಸ್ಥಳ, ಅವನ ಉಡುಪು, ಅವರ ಮೇಲೆ ನೆಲೆಗೊಂಡ ದೂಳು, ಅವನ ಅಪೂರ್ವ ಕಜ್ಜಿ ವ ಇತರ ಎಂಜಲು ಹಿಂಬಳ ವೀಳ್ಯದ ರಸ ಇತ್ಯಾದಿ ತಗಲಿದ ವಿಶುದ್ಧವಾದ ಬೆರಳುಗಳು ಇವನ್ನು ನೋಡದೆಯೆ ಆತುರವಾಗಿ ಮಕ್ಕಳು ಅದನ್ನು ಕಸುಕೊಂಡು, ತಿಂದು ನೀರು ಕುಡಿಯುವವು. ಇಷ್ಟು ಚೆನ್ನಾಗಿ ಆರೋಗ್ಯ ಪಾಲನೆಯಾಗುವ ಏರ್ಪಾಡನ್ನು ಇತರ ಊರುಗಳಲ್ಲಿ ಕಣ್ಣಿದ್ದವರು ಮರೆತಾರೆಯೆ?

* * * *

ನೆಲಗಡಲೆಯ ಸಿಪ್ಪೆಗಳ ರಾಶಿಯು ಶಾಲಾವಠಾರಗಳಲ್ಲಿ ಮಾತ್ರವಲ್ಲದೆ, ಶಾಲೆಗಳ ಪ್ರತಿ ಕೋಣೆಯಲ್ಲೂ ಕಂಗೊಳಿಸುತ್ತಿದೆ. ಈ ತೆರದ ಮಾರಾಟವನ್ನು ಮ್ಯುನಿಸಿಪಾಲಿಟಿಯವರು ಅನವಶ್ಯಕವಾಗಿ ನಿರಪೇಕ್ಷಕರವಾಗಿ ಬಿಟ್ಟುದರಿಂದ, ಶಾಲಾ ಕೋಣೆಗಳನ್ನು ಮ್ಯುನಿಸಿಪಾಲಿಟಿಯವರೇ ಗುಡಿಸುವ ಏರ್ಪಾಡನ್ನು ಮಾಡಿಸುವುದುತ್ತಮ ಎನಿಸುವಷ್ಟು ಜೋರಾಗಿ ಈ ಕಸದ ರಾಶಿಗಳು ಬೆಳೆಯುತ್ತಿವೆ.

* * * *

ಈ ನ್ಯೂಸೆನ್ಸನ್ನು ತಡೆವುದಕ್ಕೆ,—ಆರೋಗ್ಯ ಭಂಗ ಧನ ವ್ಯಯ, ನಿರ್ಮಲತಾ ನಿಷ್ಪೂರ್ಣತನ ಇವು ನ್ಯೂಸೆನ್ಸ್ ಆಗುವುವೇ ಇಲ್ಲವೇ?—ಯಾವ ಅಧಿಕಾರಿಗಳಾದರೂ ಇರುವರೇ? ಅಥವಾ ಹೊಸ ಸೇಫ್ ಗಾರ್ಡುಗಳಲ್ಲಿ ಸರ್ ಹೋರರೇ ಇವನ್ನು ಸೇರಿಸುವ ಹಾಗೆ ಚರ್ಚಿಹಿಲ್ಲರು ಅಥವಾ ಜಯಕಾರರು ಪ್ರೇರೇಪಿಸಬೇಕೆ? ಲಂಡನಿಗೆ ಬರೆದು ತಿಳಿಯಬೇಕು.

* * * *

ಜಪಾನು ತನ್ನ ಸರಕನ್ನು ಇಂಗ್ಲಿಷ ಸಾಮಾನುಗಳು ಮಾರುವ ಪ್ರಾಂತ್ಯಗಳಲ್ಲೆಲ್ಲ ಬಹಳ ಅಗ್ಗವಾಗಿ (ಉದಾಹರಣೆ:— ಮುತ್ತಿನ ಚಿಪ್ಪಿನ ಹಿಡಿಯ ಚೂರಿ, ೨ ಅಣೆ) ರಾಶಿಯಾಗಿ ಮಾರುವುದಾಗಿ ವಿಶೇಷ ದೂರುಗಳು ಪ್ರಕಟವಾಗುತ್ತಲಿವೆ.

* * * *

ಜಪಾನಿನಂತಹ ಶಾಂತಿಪ್ರಿಯ ಬ್ರಿಟಿಷ ಮಿತ್ರ ರಾಷ್ಟ್ರವು ಹೀಗೆ ಮಾಡುವುದೆಂದು ಇಷ್ಟು ವರ್ಷ, ಕಳೆದ ಎರಡು ತಿಂಗಳ ವರೆಗೆ ಯಾರೂ ಪ್ರಕಟಿಸಲು ಧೈರ್ಯ ಪಟ್ಟುದಿಲ್ಲ.

* * * *

ಅದಿರಲಿ, ಜರ್ಮನಿಯು ಯಾವ ವರ್ಷಕ್ಕಿಂತಲೂ ೬ ಪಾಲು ಹೆಚ್ಚಿಗೆಯಾಗಿ ಈ ವರ್ಷ ಹಳೇ ಕಬ್ಬಿಣ, ನಿಕ್ಕಲ್ ಮೊದಲಾದವುಗಳನ್ನು ಕೊಂಡುಕೊಂಡಿದೆ ಎಂದೂ ಪ್ರಕಟವಾಗಿದೆ. ಇದು ಯುದ್ಧ ಸನ್ನಾಹಕ್ಕಾಗಿ ನಡೆಗುತ್ತಿರುವುದೂ ಇಲ್ಲ

ಛಳಿಯನ್ನೂ ಜ್ವರವನ್ನೂ ಹೋಗಲಾಡಿಸಿರಿ.



ಹೊರ್ಲಿಕ್ಸ್ ಸೇವನೆಯಿಂದ ಅಂಟುರೋಗವು ಬರುವುದಿಲ್ಲ, ದೇಹವನ್ನು ದೃಢವಾಗಿಯೂ ಚೈತನ್ಯಯುಕ್ತವಾಗಿಯೂ ಇಡುತ್ತದೆ.

ನೀವು ಅತಿರೇಕವಾಗಿ ಬಳಲಿದ್ದು, ನಿರ್ಬಲರಾಗಿದ್ದಾಗ ಛಳಿ ಜ್ವರಗಳು ನಿಮ್ಮನ್ನು ಹಿಡಿಯುತ್ತವೆ. ಚಟುವಟಿಕೆಯವರಿಗೆ ಅತಿರೇಕ ಬಳಲಲು ಆಗುವುದಿಲ್ಲ. ಮನಸ್ಸಿನ ಚಟುವಟಿಕೆಯಿಂದಾಗಿಯೂ, ದೇಹದ ಚಟುವಟಿಕೆಯಿಂದಾಗಿಯೂ ಹೆಚ್ಚಿನ ಬಲವು ಕಡಿಮೆಯಾಗುತ್ತದೆ

ಬಿಸಿ ಅಥವಾ ತಣ್ಣಗಿನ ಒಂದು ಗ್ಲಾಸು ಹೊರ್ಲಿಕ್ಸನ್ನು ತೆಗೆದುಕೊಂಡರೆ ದೇಹವು ಆರೋಗ್ಯದಿಂದಿರುತ್ತದೆ. ದನದ ಕೆನೆ ಹಾಲಿನಿಂದಲೂ, ಬೆಳೆದ ಬಾರ್ಲಿ ಮತ್ತು ಗೋಧಿಯ ಸಾರದಿಂದಲೂ ತಯಾರಿಸಲ್ಪಟ್ಟಿರುವುದರಿಂದ ಅದರಲ್ಲಿ ದೇಹವರ್ಧಕ ಸಾರವಿದ್ದು ಆರೋಗ್ಯದಾಯಕವಾಗಿದೆ ದೇಹವು ಕ್ಷೀಣಿಸಲು ಬಿಡುವುದಿಲ್ಲ.

ಹೊರ್ಲಿಕ್ಸ್

ಮೂಲಭೂತ ಮೋಲ್ಟೆಡ್ ಹಾಲು,

ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ.

ರವೆಯುಕ್ತ ಪಾನೀಯ ಬೇಕಾದರೆ ಹೊರ್ಲಿಕ್ಸ್ ಮಿಕ್ಸರನ್ನು ಕುಡಿಯಿರಿ. ಸ್ಟೋರುಗಳಲ್ಲಾಗಲೀ ಟಿ. ಪೆ 2299 ಕಲ್ಕತ್ತದಲ್ಲಾಗಲೀ ಸಿಗುತ್ತೆ.

ಟಿ. ಪೆ. 2229 ಕಲ್ಕತ್ತ
ಹೊರ್ಲಿಕ್ಸ್ ಇನ್ ಕನ್ವಲೆಸೆನ್ಸ್ ಎಂಬುದರ ಕುಂಕು ಧರ್ಮಾರ್ಥ
ಸವಿವರ ಪತ್ರವನ್ನು ನನಗೆ ಕಳುಹಿಸಿರಿ.

ಹೆಸರು..

ವಿಳಾಸ.......................................No. S. D. 137......

ಹೊರ್ಲಿಕ್ಸ್ ಮಿಕ್ಸರ್ ಬೇಕಾಗಿದ್ದರೆ 14 ಆಣೆ ಅಂಚೆ ಚೀಟು ರವಾನಿಸಿರಿ.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರಕಿತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಹೊಸ್ತಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಹುಮಾನ ದೊರಕಿರುವ ಸ್ವದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಾವು (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನ [illegible] ಅಥವಾ ಬೇರೆ ಯಾವುದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು; ಕಣ್ಣೊಳಗೆ ಉರುಪು ಬೀಳೋಣ, [illegible] ಎಲುಬಿನಲ್ಲಿ ಜ್ವರ ಇರೋಣ, ತಲೆ ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಘೋರಿ ಬರೋಣ, [illegible] ಎಲ್ಲಾ ವಿಕಾರಗಳು ನಷ್ಟವಾಗಿ ಸ್ಮೃತಿ ಶಕ್ತಿಯು ಬೆಳೆಯುತ್ತದೆ. ಮತ್ತು ಅನ್ನ [illegible] ಸಾಧ್ಯವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ [illegible] ಅದು ಹೋಗಿ ಪುನಃ ಯುವನವಂತರಾಗಿ ಶರೀರ ಬಲವಾಗಿ ಮಕ್ಕಳು [illegible] ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಾಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲ [illegible] ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು,

ಬಾಟ್ಲಿ ಬೆಲೆ [illegible] ಬಾಟ್ಲಿಗೆ [illegible] ಬಾಟ್ಲಿಗೆ [illegible] ಟಪಾಲು ಖರ್ಚು [illegible] ಬೇರೆ [illegible] ಪ್ರಸಿದ್ಧ [illegible] ಮತ್ತು [illegible] ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, [illegible] ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ವಿಜಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ದೈ ಫಾರ್ಮೆಸಿ, ಮತ್ತು ಕೆ. ಶೇಷಗಿರಿ ಶೈ. ಕಾರ್ಕಳ— [illegible] ನಾರಾಯಣ ಶೈ ಮತ್ತು ಶೈ ಫಾರ್ಮೆಸಿ. ಕಾಸರಗೋಡು— ಕೆ. [illegible] ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಶೈ.

3—6—38

Seventyseven Years!

Two generations of approved service enables us to pick and choose what is cheap lasting & good to suit the pockets & the tastes of our longstanding wide circle of



CUSTOMERS

who know our

Premier House for Swadeshi

Mill Yarns—Handloom Cloths, Dhoties – Saries—Cintzesh etc

Shrinivas Ranga Pai,

Sawkar Mahal,

Car Street, MANGALORE.

[illegible]

ಒಳಪುಟದಲ್ಲಿ

ಅಗ್ರಲೇಖ [illegible]
[illegible]
ವರ್ತಮಾನ ಸಂಗ್ರಹಗಳು
ಮಹಾತ್ಮಾ ಗಾಂಧೀಜೀ [illegible]
[illegible] ೧೧
[illegible] ಸಮಾಚಾರಗಳು
[illegible] ಮಂಗಳೂರು, ಪುರಂಗಿಪೇಟೆ, ಉಡುಪಿ, ಮೂಡಬಿದ್ರೆ,
[illegible]
[illegible] ೪
ಪತ್ರವ್ಯವಹಾರ ೧೩
ಯುರೋಪಿನಲ್ಲಿ ಯುದ್ಧದ ಭಯವಿದ್ದದ್ದು! ೧೫

ಸ್ವದೇಶಾಭಿಮಾನಿ.

೨೯. ೮ನೇ ಶುಕ್ರವಾರ ದೆಶಂಬರ ೧೯೩೩.

ಭೂಮ್ಯಾಲೀಕರ ಸಂಘ

ನಮ್ಮ ಜಿಲ್ಲೆಯ ಭೂಮ್ಯಾಲೀಕರ ಸಂಘದ ಅಧಿವೇಶನವು ಕಳೆದ ಕಾರ್ತೀಕ ೩ರಲ್ಲು ಪುತ್ತೂರಲ್ಲಿ ಜರಗಿತು. ಮದ್ರಾಸ ನ್ಯಾಯ ವಿಧಾಯಕ ಸಭೆಯ ಮೆಂಬರರಾಗಿರುವ ಶ್ರೀ ವೆಂಕಟಾಚಲ ಚೆಟ್ಟಿಯವರು ಅಧಿವೇಶನದ ಅಧ್ಯಕ್ಷರಾಗಿದ್ದರು. ಸಂಘದ ಅಧ್ಯಕ್ಷರಾಗಿರುವ ದಿವಾನ್ ಬಹದ್ದೂರು ಮಹಾಬಲ ಹೆಗ್ಡೆಯವರು ಸ್ವಾಗತ ಭಾಷಣವನ್ನು ಕೊಟ್ಟರು. ಆ ಮೇಲೆ ಅಧಿವೇಶನದ ಅಧ್ಯಕ್ಷರು ತಮ್ಮ ಭಾಷಣವನ್ನು ಕೊಟ್ಟರು. ಆ ಮೇಲೆ ಹಲವು ಠರಾವುಗಳು, ಜಿಲ್ಲೆಯ ಹಲವು ಪ್ರಮುಖರಿಂದ ಸೂಚಿಸಲ್ಪಟ್ಟೂ, ಪುಷ್ಟೀಕರಿಸಲ್ಪಟ್ಟೂ ಸರ್ವಾನುಮತದಿಂದ ಮಂಜೂರು ಹೊಂದಿದುವು.

ಅಧಿವೇಶನದ ಒಂದು ಮುಖ್ಯ ವಿಷಯವನ್ನು ಇಲ್ಲಿ ಸೂಚಿಸಬೇಕಾಗಿದೆ. ಭೂಮ್ಯಾಲೀಕರ ಸಂಘವು ಅಷ್ಟೊಂದು ವಿಶಾಲವಾಗಿ ವ್ಯವಸ್ಥೆಗೊಳಿಸಲ್ಪಟ್ಟದೆಂದು ಹೇಳಲು ಬರುವುದಿಲ್ಲವಾದರೂ, ಇಡೀ ಜಿಲ್ಲೆಯ ಎಲ್ಲ ಕಡೆಗಳಿಂದಲೂ ಪ್ರತಿನಿಧಿಗಳು ಬಂದು ಸೇರಿದ್ದರು. ಉತ್ತರದ ಕುಂದಾಪುರದಿಂದಲೂ, ದಕ್ಷಿಣದ ಕಾಸರಗೋಡಿನಿಂದಲೂ ಪ್ರಮುಖರು ನೆರೆದಿದ್ದರು. ಮೂಡು ಪ್ರಾಂತ್ಯವನ್ನು ಚೆನ್ನಾಗಿ ಪ್ರತಿನಿಧಿಸಬಲ್ಲ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರೂ ಠರಾವುಗಳನ್ನು ಮಂಡಿಸುವುದರಲ್ಲಿ ಮುಂದಾಳುಗಳಾಗಿದ್ದರು -ಅನ್ಯಾಯವಾಗಿ ಭೂಮ್ಯಾಲೀಕರಿಗೆ ಸಂಬಂಧಪಡುವ ಈಗಿನ ಸರ್ವೆ (Servey) ಸೆಟ್ಲ್ಮೆಂಟುಗಳು ಅವರಲ್ಲಿ ಎಷ್ಟು ತರದ ಹೆದರಿಕೆಯನ್ನುಂಟು ಮಾಡಿವೆಯೆಂದು ಸ್ಪಷ್ಟವಾಗುವುದು.

ರಾ| ಮಹಾಬಲ ಹೆಗ್ಡೆಯವರ ಭಾಷಣವು ಸ್ವಲ್ಪ ಮಟ್ಟಿಗೆ ದೀರ್ಘವಿತ್ತು. ಅದರಲ್ಲಿ ಹಲವು ಉಪಯುಕ್ತ ವಿಷಯಗಳಿದ್ದುವು. ಸರಕಾರದ ಧೋರಣೆಯು ಚೆನ್ನಾಗಿ ಖಂಡಿಸಲ್ಪಟ್ಟಿದ್ದಿತು. ಜಿಲ್ಲೆಯ ಭೂಮ್ಯಾಲೀಕರು ಈಗಲೇ ಅನುಭವಿಸುವ ಅನ್ಯಾಯಗಳನ್ನು ರಾ| ಹೆಗ್ಡೆಯವರು ಸ್ಪಷ್ಟಪಡಿಸಿ, ರಿಸರ್ವೆ (Reserve) ಯಿಂದ ತೀರ್ವೆ ಹೆಚ್ಚು ಮಾಡಲಿಕ್ಕೆ ಯಾವ ಆಸ್ಪದವೂ ಇಲ್ಲವೆಂದೂ, ಹಾಗೆ ಮಾಡಿದ್ದಲ್ಲಿ ಭೂಮ್ಯಾಲೀಕರು ಅಗಾಧ ಅನ್ಯಾಯಕ್ಕೆ ಪಾತ್ರರಾಗುವರೆಂದೂ ತೋರಿಸಿರುವರು. ಆದರೆ ರಾ| ಹೆಗ್ಡೆಯವರು ಲೊ ಮೆಂಬರರ ಮೇಲೂ ಸರಕಾರದ ಮೇಲೂ ತುಂಬಾ ವಿಶ್ವಾಸವನ್ನಿಟ್ಟಂತೆ ತೋರುತ್ತಿದೆಯಲ್ಲದೆ ಮಂಗಳೂರು—ಮದ್ರಾಸಿನ ಕೆಲವು ಘರ್ಷಣೆಗಳಿಂದ ಈಗೊದಗಿದ ಸಂಕಟಗಳು ನಿವಾರಣೆಯಾಗುವವೆಂದು ನಿರೀಕ್ಷಿಸುತ್ತಾರೆ. ಈ ನಿರೀಕ್ಷಣೆಯಲ್ಲಿ ಎಷ್ಟು ಸಾಧ್ಯತೆಯಿದೆಯೆಂಬುದು ಸರಕಾರದ ಮುಂದಿನ ವರ್ತನೆಗಳಿಂದ ತಿಳಕೊಳ್ಳಬೇಕು.

ಆದರೆ ಶ್ರೀ ವೆಂಕಟಾಚಲಂ ಚೆಟ್ಟಿಯವರ ಭಾಷಣದಲ್ಲಿ ದಲ್ಲಿ ಸ್ಫೂರ್ತಿಯೂ ಶಕ್ತಿಯೂ ಇದ್ದಿತು. ಸರಕಾರದ ಶಾಸ್ತ್ರೀಯತೆ (Scientific)ಯ ಸೋಗನ್ನು ಅವರು ಹರಿದೊಗೆದರು. ಸರಕಾರವು ಶ್ಲಾಘ್ಯನೀಯವಾದ ತತ್ವಗಳ ಮುಸುಕಿನೊಳಗೆ ರೈತರನ್ನು ಯಾವ ರೀತಿಯಲ್ಲಿ ದಣಿಸುತ್ತಿದೆಯೆಂಬು [illegible] ವೆಂದೂ, ಸರಕಾರದ ಆ [illegible] ಭೂಮ್ಯಾಲೀಕರ ಸುಲಿಗೆಯಿಂದ ಆದಷ್ಟು ಭರ್ತಿ ಮಾಡುವದಲ್ಲವೆಂದೂ, ವ್ಯಯವನ್ನು ಮಿತಗೊಳಿಸುವುದು, ಅನಾವಶ್ಯಕ ಖರ್ಚುಗಳನ್ನು ನಿಲ್ಲಿಸುವುದು [illegible] ಸರಕಾರದ [illegible] ಖರ್ಚನ್ನು ತಗ್ಗಿಸುವುದು, ದೇಶದ [illegible]ಗಳನ್ನು ಬುದ್ಧಿವಂತಿಕೆಯಿಂದ ಸದುಪಯೋಗ [illegible] ದೇಶದ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಗೆ [illegible] ಮೊದಲಾದ ಉಪಾಯಗಳಿಂದ ಆಯ [illegible] ಸಲು ಅನುಕೂಲವಿದೆಯೆಂದೂ, ಭೂಮ್ಯಾ [illegible] ಕೆಯುವುದು ಯೋಗ್ಯವಲ್ಲವೆಂದೂ ಶ್ರೀ ಚೆಟ್ಟಿಯಾರರು [illegible] ಕೊಟ್ಟರು.

ಹಿಂದೂದೇಶವು ಮುಖ್ಯವಾಗಿ ಕೃಷಿ ವ್ಯವಸಾಯದ ದೇಶವಾಗಿರುತ್ತದೆ. ಆದುದರಿಂದ, ನಾಗರಿಕವಾದ ಯಾವ ಸರಕಾರವೂ, ಜನತೆಯ ಹಿತವನ್ನೇ ಲಕ್ಷಿಸುತ್ತಿದ್ದುದಾದರೆ ಭೂ ವ್ಯವಸಾಯಗಳ ಸಂಕಷ್ಟಗಳನ್ನು ಅಲಕ್ಷಿಸುತ್ತಿರಲಿಲ್ಲ. ಆದರೆ ಹಿಂದೂಸ್ಥಾನದ ಕಥೆಯೇ ಬೇರೆ. ರೈತಾಪಿ ಜನರ ಗೋಳಿಗೆ ಬೆಲೆಯೇ ಕಡಿಮೆ, ತೀರ್ವೆ ವಸೂಲಾಗಿಲ್ಲವೆಂದು ಜಿಲ್ಲಾ ಕಲೆಕ್ಟರರು ಡಿವಿಜನಲ್ ಆಫೀಸರರನ್ನೂ, ಡಿವಿಜನಲ್ ಆಫೀಸರರು ತಹಶೀಲ್ದಾರರನ್ನೂ, ತಹಶೀಲ್ದಾರರು ಪಟೇಲರನ್ನೂ, ಪಟೇಲರು ಬಡಪಾಯಿಗಳಾದ ಭೂಮ್ಯಾಲೀಕರನ್ನೂ ಪೀಡಿಸುವುದೇ ಕಂಡು ಬರುತ್ತದಲ್ಲದೆ, ಏಕೆ ವಸೂಲಿ ಬಾಕಿ ಬಿದ್ದದೆಯೆಂದು ಪರೀಕ್ಷಿಸುವವರಿಲ್ಲ. ನಮ್ಮ ಪ್ರಾಂತ್ಯಗಳಲ್ಲಿ ತೀರ್ವೆ ಬಗ್ಗೆ ಹಲವು ಆಸ್ತಿಗಳು ಹರಾಜು ಆದುವು ಎಂದೂ ಕಂಡು ಬರುತ್ತದೆ. ಸತ್ಯಾಗ್ರಹವೇ ಇಲ್ಲದ ಈ ದಿನಗಳಲ್ಲಿ ತೀರ್ವೆ ಬಗ್ಗೆ ಆಸ್ತಿ ಹರಾಜಾಗಬೇಕಾದರೆ, ಪರಿಸ್ಥಿತಿಯು ಎಷ್ಟರ ಮಟ್ಟಿನದ್ದಿರಬಹುದೆಂದು ಬೇರೆ ಹೇಳಬೇಕಾಗಿಲ್ಲ. ಆದಾಗ್ಯೂ ಜನರ ಗೋಳು ಸರಕಾರಕ್ಕೆ ಮುಟ್ಟದಿರುವುದು ಜನತೆಯ ದೌರ್ಭಾಗ್ಯವೆನ್ನಬೇಕು!

ಭೂಮ್ಯಾಲೀಕರ ಸಂಘವು ಕೂಡಿ ಕೆಲವೇನೂ ಠರಾವುಗಳು ಮಂಜೂರಾದುವು. ಆದರೆ ಅಲ್ಲಿಗೇನೆ ಕೆಲಸವು ಮುಗಿಯಿತೇ? ಈ ಮೊದಲು ಭೂಮ್ಯಾಲೀಕರ ಸಂಘವು ತುಂಬಾ ಕೆಲಸ ಮಾಡಿಯದೆಂದೂ, ಅದರ ಸದಸ್ಯರು ರೆವೆನ್ಯು ಮೆಂಬರರನ್ನು ಕಾಣುವುದು, ಊ ಮೆಂಬರರನ್ನು ಕಾಣುವುದು, ಹಳ್ಳಿಗಳ ಗೋಳನ್ನು ತಿಳಕೊಳ್ಳುವುದು ಇತ್ಯಾದಿ ಕೆಲಸಗಳನ್ನು ಮಾಡಿರುವರು ನಿಜ. ಆದರೆ M L C ಗಳಾದ ಮಿ| ಜಿವಾಜಿರಾವ್ ತಮ್ಮ ಭಾಷಣದಲ್ಲಿ ಹೇಳಿದಂತೆ, ಚಳವಳವು ತೀವ್ರವೂ, ಜನಜನಿತವೂ, ಆಗಬೇಕು. ಸ್ಥಳೀಯ ಅಧಿಕಾರಿಗಳಿಗೆ ಅದರ ಮಹತ್ವವು ತಿಳಿಯಬೇಕು. ಪ್ರಾಂತಿ ಸರಕಾರಕ್ಕೆ ಪ್ರಚಲಿತ ಪರಿಸ್ಥಿತಿಯು ಸರಿಯಾಗಿ ಮನವರಿಕೆಯಾಗಬೇಕು. ಹಾಗಾಗಬೇಕಾದರೆ ಭೂಮ್ಯಾಲೀಕರ ಸಂಘವು ಇನ್ನಷ್ಟು ಸ್ಫೂರ್ತಿಯನ್ನು ತೋರಿಸಿ ಕೆಲಸಮಾಡಬೇಕ?

ಲೋಕದ ಎಲ್ಲಾ ದೇಶಗಳಲ್ಲಿಯೂ ಆಯಾ ದೇಶದ ಸರಕಾರಗಳು ಜನತೆಯ ಸಾಂಪತ್ತಿಕ ದುರವಸ್ಥೆಯನ್ನು ನೋಡಿ ಸಹಾಯದ ಉಪಾಯಗಳನ್ನು ಹುಡುಕುತ್ತಿವೆ. ಇಂಗ್ಲೆಂಡು ಕೂಡ ತನ್ನ ದೇಶದ ಜನತೆಯ ಕೃಷಿ ಕೈಗಾರಿಕೆಗಳ ಅಭಿವೃದ್ಧಿಗೆ ಕೈ ಹಾಕಿಯದೆ. ಆದರೆ ನಮ್ಮ ದೇಶದಲ್ಲಿ ಮಾತ್ರ ಸರಕಾರವು ಯಾವ ಯೋಜನೆಯನ್ನೂ ಇಟ್ಟುಕೊಂಡಂತೆ ಕಂಡುಬರುವುದಿಲ್ಲ. ದಿನದಿಂದ ದಿನಕ್ಕೆ ದವಸಗಳ ಬೆಲೆ ಇಳಿಯುತ್ತದೆ, ಪೇಟೆಯ ಬಲ ಏರುತ್ತಿದೆ, ಕೊಳ್ಳುವ (purchasing) ಶಕ್ತಿಯು ಕುಂದುತ್ತಿದೆ, ಜನರು ಬಡವಾಗಿ ಬರುತ್ತಾರೆ. ರಾಷ್ಟ್ರೀಯ ಅರ್ಥಶಾಸ್ತ್ರದಲ್ಲಿ ಭೂಮ್ಯಾಲೀಕರು ಪ್ರಥಮ ಸ್ಥಾನದವರಾಗಿದ್ದಾರೆ. ಅವರನ್ನು ಸರಕಾರವು ಸಂಭಾಳಿಸಿಕೊಂಡು ಹೋಗದಿದ್ದರೆ ದೇಶಕ್ಕೇನೆ ಕೆಡುಕು ಇರುತ್ತದೆ.

-+-+-+-

ವಿದೇಶ ವರ್ತಮಾನ

ಬ್ರಿಟಿಷ್ ಫ್ರೀಸ್ಟೇಟ್ ಕೊಸುಸ್‌ಬಿಲ್ಲನ್ನು ಬಿಟ್ಟರೆ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳಿಗೆ ಕೊಡಲ್ಪಟ್ಟಿರುವ ಪಕ್ಕು ದಾಕ್ಷಿಣ್ಯಗಳು ಐರ್ಲೆಂಡಿಗೆ ಸಿಗಲಾರವೆಂದೂ ಬ್ರಿಟನಿನಲ್ಲಿರುವ ಫ್ರೀಸ್ಟೇಟಿನ ಜನರು ಐರ್ಲೆಂಡಿನ ತಮ್ಮ ಹಕ್ಕುಗಳನ್ನು ಬಿಡುವಂತೆ ಕೇಳಲಾಗುವುದೆಂದೂ ಡಿ'ವೆಲರಿಗೆ ಬ್ರಿಟಿಷರ ಎಚ್ಚರವು ಹೋಗಿದೆ.

ಕೆಪ್ಟನ್ ಬರ್ನಾರ್ಡ್ ಎಂಬವನು ಲಂಡನಿನಿಂದ [illegible] ಸಹಿತ ಹಿಂದುಸ್ಥಾನಕ್ಕೆ ಇಂಡಿಯಕ್ಕೆ ಹೊರಟಿರುವರು.

[illegible]

ಕಲ್ಕತ್ತದ 'ಡಿ.ರಾ' ಸ್ಟೇಷನಿನಲ್ಲಿ ಬೆಂಕಿಯಿದ್ದು ಅರ್ಧ [illegible] ಬೆಂಕಿಯನ್ನಾರಿಸಲಾಗಲಿಲ್ಲ. ನಾಲ್ವರು ಗಾಯಗೊಂಡು ಆಸ್ಪತ್ರೆಗೆ ಒಯ್ಯಲ್ಪಟ್ಟಿರುವರು.

ಆಂಧ್ರದೇಶದ ಸುಪ್ರಸಿದ್ಧ ಗಾಯಕರಾದ ಶ್ರೀ ಎಸ್. ಜಿ. ಕಿಟ್ಟಪ್ಪನವರು ತನ್ನ ೨೬ನೇ ವಯಸ್ಸಿನಲ್ಲಿ ತಿನ್ನವೆಲ್ಲಿಯಲ್ಲಿ ಕಾಲವಾದರು.

ವೈಸರಾಯರೂ ಅವರ ಪತ್ನಿಯವರೂ ಮೈಸೂರಿಗೆ ಹೋಗಿರುವರು.

ಬರೋಡೆಯಲ್ಲಿ ಆರ್ಥಿಕ ದುರವಸ್ಥೆಯುಂಟಾಗಿ ಮಹಾರಾಜ ಸ್ಕೂಲ್ ಮತ್ತು ಮಹಾರಾಣೀ ಮಿಲ್ಲುಗಳು ಒಟ್ಟಿಗೆ ಕಮ್ಮಿಯಾದುವು.

ಮೈಸೂರಿನ ಹೈಸ್ಕೂಲುಗಳಲ್ಲಿ ಚರಿತ್ರೆ ಭೂಗೋಳಗಳನ್ನಲ್ಲದೆ ಗಣಿತವನ್ನೂ ಕನ್ನಡದಲ್ಲಿ ಕಲಿಸಬೇಕೆಂದು ಒಂದು ಪತ್ರದಲ್ಲಿ ಅಭಿಪ್ರಾಯಪಟ್ಟು ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್‌ರವರಿಗೆ ತಿಳಿಸಿರುವರು.

ರಾವಲ್ಪಿಂಡಿನ ಮಸೀದಿಯಲ್ಲಿ ಎರಡು ಭಿನ್ನಪಕ್ಷಗಳ ಮಹಮ್ಮದೀಯರೊಳಗೆ ಜಗಳ ನಡೆದು ೧೩ ಜನರು ಆಸ್ಪತ್ರೆಪಾಲಾದರು.

ಮಧುರೆಯಲ್ಲಿ ದೇವಸ್ಥಾನಕ್ಕೆ ಹೋಗುತ್ತಿದ್ದಾಗ ತಿರುಮಲ ಸ್ವಾಮಿ ಎಂಬವನ ಮೇಲೆ ಬಸ್ಸು ನಡೆದು ಅವನು ದೈವಾಧೀನನಾದನು.

ಎಪ್ರಿಲ್ ತಿಂಗಳಿಂದ ಗಂಡಾಳಿಗೆ ೪ ಆಣೆ ಕೂಲಿಯನ್ನೂ ಹೆಣ್ಣಾಳಿಗೆ ೩ ಆಣೆಯನ್ನೂ ಕೊಡಬೇಕೆಂದು ಮೈಸೂರು ಇಂಡಿಯನ್ ಪ್ಲೇಂಟರರ ಎಸೋಸಿಯೇಶನಿನ ಮಹಾಸಭೆಯು ಚಿಕ್ಕಮಗಳೂರಲ್ಲಿ ಜರಗಿ ಮಂಜೂರಾಗಿದೆಯೆಂದು ತಿಳಿದುಬರುತ್ತದೆ.

ಅಹ್ಮದಾಬಾದಿನಲ್ಲಿ ಮಿಲ್ ಏಜಂಟರಾದ ಶ್ರೀ ಅಂಬಾಲಾಲ್ ಸಾರಾಭಾಯಿಯವರ ಪುತ್ರಿಯವರನ್ನು ಸ್ಪೆಶಲ್ ಪವರ್ಸ್ ಪ್ರಕಾರ ಕೈದು ಮಾಡಿರುವರು.

ಮಿಸ್ ಶ್ರೀಂಕುಳ್ ಅಥವಾ ನೀಲನಾಗಿನಿ ದೇವಿಯು ದುಷ್ಟಳಾಗಿರುವಳೆಂದು ಕಲ್ಕತ್ತದಿಂದ ಬಂದ ವಾರ್ತೆಯಿಂದಾಗಿ ಗೊತ್ತಾಯಿತು. ಕಲ್ಕತ್ತದಲ್ಲಿ ೧ನೇ ತರಗತಿಯಲ್ಲಿ ಟಿಕೇಟು ಇಲ್ಲದೆ ಕುಳಿತಾಗ ಪೋಲೀಸರು ಪ್ರಶ್ನಿಸಿದಾಗ ಅವಳು ಬೈದು ಸತ್ರವನ್ನು ಹರಿದಳು.

ಜಬ್ಬಲಪುರದಲ್ಲಿ ಗಾಂಧಿಜೀ ಅಬ್ದುಲ್ ಕಲಂ ಆಜದ್ ಶ್ರೀ ಸರದಾರ್ ಡಾ। ಅನ್ಸಾರಿ ಜವಾಹರಲಾಲ ಮೊದಲಾದ ಧುರೀಣರು ಕೂಡಿ ಕೊಂಗ್ರೆಸ್ಸಿನ ಮುನ್ನಡತೆಯ ಕುರಿತಾಗಿ ನಿರ್ಧರಿಸಿಕೊಂಡರು.

Stop Press.

ವಿಶೇಷ ವರ್ತಮಾನ

ಲಾಹೋರು ಸೆಂಟ್ರಲ್ ಜೈಲಿನಲ್ಲಿ ನವಂಬರ ೨೧ನೇ ದಿನ ಅಪರಾಧಿಕನೊಬ್ಬನನ್ನು ಫಾಸಿಗೆ ಕೊಡಬೇಕೆಂದು ನಿರ್ಧರಿಸಿದ್ದರು. ತನ್ನಷ್ಟೆ ಅವನ ತಂದೆಯು ತಾನು ಪ್ರಿವಿ ಕೌನ್ಸಿಲಿಗೆ ಅಪೀಲು ಮಾಡುವೆನೆಂದು ತಾ ೧೮ರಲ್ಲಿ ತಂತಿ ಕೊಟ್ಟನು. ತಾ ೧೯ನೇ ದಿನ ಆದಿತ್ಯವಾರ ರಜೆಯಾದುದರಿಂದ ಅಧಿಕಾರಿಗಳು ಸೆಂಟ್ರಲ್ ಜೈಲಿನಲ್ಲಿರುವ ಅಪರಾಧಿಯನ್ನು ಫಾಸಿಗೆ ಕೊಡಬಾರದೆಂದು ಅಪ್ಪಣೆ ಬರೆದು ತಾ. ೨೦ನೇ ಬೆಳಗ್ಗೆ ಸೆಂಟ್ರಲ್ ಜೈಲಿಗೆ ಬಟ್ಟಸೊಡನೆ ಕಳುಹಿಸಿಕೊಟ್ಟರು. ಆದರೆ ಈ ಕಪರು ನಿಯಮಿತ ವೇಳೆಯಲ್ಲಿ ಸುಪರಿಂಟೆಂಡೆಂಟರ ಆಫೀಸಿಗೆ ತಲಪಿದ್ದರೂ, ಇದನ್ನು ಸುಪರಿಂಟೆಂಡೆಂಟರು ತಾ ೨೧ರ ತರನೆ ಬಿಡಿಸಿ ನೋಡಲೇ ಇಲ್ಲ. ತನ್ನಷ್ಟೆ ಅಪರಾಧಿಕನನ್ನು ತಾ ೨೧ನೇ ಬೆಳಗ್ಗೆ ಗಲ್ಲಿಗೇರಿಸಿದರು. ಈಗ ಸರಕಾರವು ಪಶ್ಚಾತ್ತಾಪ ಸೂಚಿಸಿ ವಿಚಾರಣೆಗೆ ತೊಡಗಿದೆ.

ಕಂಪೆನಿಯ ಬೋಟಿನ ಯಾಸ್‌ಫ್ ಅಲಿ-ಟಸ್ ಕಾರ್ಖಾನೆಯಲ್ಲಿ ಮುಷ್ಕರವೆದ್ದು, ಶ್ರೀ ನಾರಾಯಣದಾಸ್ ಆನಂದ ದೇಬಾರ್ ಬಗಳಿ ಎಂ ಎಲ್ ಸಿ ಮೊದಲಾದ ಕೆಲವು ಮುಖ್ಯಸ್ಥರು ಕೂಡಾ ಕೆಲವು ಜನರನ್ನು ಪೋಲೀಸರು ಹಿಡಿದಿದ್ದರು.

ರಷ್ಯದಿಂದ [illegible] ಎಂಬ ಪ್ರೊಫೆಸರರು ಅಭ್ಯಾಸ ನಿಮಿತ್ತ ಹಿಂದೂದೇಶಕ್ಕೆ ಬಂದುದಕ್ಕಾಗಿ ಕಲ್ಕತ್ತದಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ಸಾಗುವೆ ನೇತ್ರಾವತಿ! ನೀ ಮೆಲ್ಲನೆ
ಹರಿಯುತ ಕಡಲೆಡೆಯ.
ಉದಯಾದಿತ್ಯನು ಬೀರುವ ಕಿರಣವು
ನೀರಿನ ತೆರೆಯಲ್ಲಿ
ಉದಿಸಲು, ತಳ ತಳ ಹೊಳೆಯುತ ಪೋಗುವೆ.
ನದಿ! ನೀ ಮುದದಲ್ಲಿ
ನೇಸರ ಬಿಂಬವು ನೇತ್ರದ ತೆರದಲಿ
ತೋರಲು ನೀರಿನಲಿ
ಹೆಸರನ್ವರ್ಥವದಾದುದೆ? ನಿನಗೆ ತೋರಲು ನೀರಿನಲಿ
'ನೇತ್ರಾವತಿ'ಯೊರೀತಿಯಲಿ.
ಎಂದೂ ಈ ಪರಿಯಿಂದಲಿ, ನಿಲ್ಲದೆ
ಹರಿಯುತ ನೀ ಹೊಳೆಯೆ!
ಮುಂದಿಗೆ ಕಾಲನನಂತತೆಯಂದವ
ಕ್ಷುಂದದೆ ಪೇಳುವೆಯೆ?

ಶಂಕರನಾರಾಯಣ.

ಬ್ರಹ್ಮನ ಬೊಚ್ಚಲ ಮಕ್ಕಳು.

ಸಂಜೆಗೆ ಹೊಳೆಯ ದಂಡೆಯಲ್ಲಿ ಕೂತು, ಆತುರದಿಂದ ನನ್ನಿಯ ಗೂಡಿಗೆ ಹಾರುವ ಹಕ್ಕಿಗಳನ್ನೂ, ಮಕ್ಕಳನ್ನು ನೆನೆದು ಓಡುವ ದನಗಳನ್ನೂ ಅವಲೋಕಿಸುತ್ತಿರಲು, ಅನಾಥ ಭಾರತದ ನೆನಪಾಗಿ ಎದೆ ಕೊಯ್ದು ಹೊಂಟ ಹಾಡಿದು.

ತಣ್ಣನ ಗಾಳಿಯ ಓಟ
ಸುಳಿ ಸುಳಿದೋಡುವ ಓಟ
ಪಡುವಣ ಕೆಂಪಿನ ಚಂದ
ಹೂವಿನ ಗಮಗಮ ಗಂಧ
ಇರುಳ ತೆರೆಳಿನ ಹೆಣಿಕೆಯು ಸಡಿಲ
ಹಗಲಿನ ಮುಖವನು ಹೊಚ್ಚುವದು
ಮುಡಿದಿಹ ಮಲ್ಲಿಗೆ ಬಿಡಿಬಿಡಿ ಸಿಡಿದು
ರೂಪದ ರೂಪೆಯ ಕೆಚ್ಚುವದು
ಜೀವದಿ ಗಡಿಬಿಡಿ ಪ್ರವಾಹ ಹೊರಟು
ಒಡಲಿನ ಧಡವನು ಚುಚ್ಚುವದು

೨

ಹಕ್ಕಿಗೆ ಬೆಚ್ಚನ ಗೂಡು
ಗಿಡಪೊಳು ಕೊನೆವವು ನೋಡು
ಪಾಳಕೂ ಮಲಗಲು ಮನೆಯು
ಗುಡ್ಡದಿ ಕಾದಿಹ ಗವಿಯು
ಕಕ್ಕೆಗು ಹುಳಿನ ಗೊಡಚಿಯ ಹಾಟು
ತಿನ್ನಲು ಬೀದಿಯ್ಗು ಬುಡಿಚಿಹವು
ಬ್ರಹ್ಮನ ಬೊಚ್ಚಲ ಮಕ್ಕಳು ಅಕಟ
ವಳ ವಳ ಬಾಯನು ಬಿಡುತಿಹವು
ತೊರೆಯುವ ಚಳಿಯೊಳು ಬಯಲೊಳು ಬಿದ್ದು
ಹುಳದೊಲು ಪಟ ಪಟ ಮಡಿಯುವವು

೩

ಹೊಲೆಯರ ಒಲೆಯನ ಕಿಚ್ಚು
ಹೋಳಿಯ ಮಾಡಲು ಮೆಚ್ಚು
ಗೆದ್ದಲು ಕೋರಿದ ಗುಡ್ಡು
ಹಾವಿನ ವಾಸಕೆ ಘುಡ್ಡು
ಮುಪ್ಪತ್ತೈದು ಕೋಟಿ ಕಾಲಕೆ ಬಗ್ಗಿದ
ಭಾರತ ಜೀವದ ಗೋರಿಹುದು!
ಯುಗ ಯುಗದಿಂದಲಿ ಬಿದ್ದತಿಬಿದ್ದು
ಡುಬ್ಬಕೆ ಲೋಳೆಯು ಕೋರಿಹುದು
ಭಾರತ ಜೀವನ ರಸಗಿಯ ಕಳಕಿಗೆ
ವಿಶ್ವವೆ ಮೂಗನು ಹಿಡಿದಿಹುದು!

ಕನ್ನಡ ಕಂದ-

ಸಾದರ ಸ್ವೀಕಾರ.

ಕನ್ನಡ ಒಗಟುಗಳು— ಬೆಲೆ ೧ ಆಣೆ. ಪ್ರಕಾಶಕರು ಶ್ರೀ. ವೆಂಕಟೇಶ ಕೊರಗಲ್ಲ, ನಾಡನರಿಗಳ ಕಛೇರಿ, ಬೆಳಗಾಂವಿ. ಇದು ಹೊಸ ರೀತಿಯ ಒಗಟು ಪುಸ್ತಕ.

ಭಯಂಕರ ಕೊಲೆ— ನವನೀತನ ಗ್ರಂಥಮಾಲಾ, ಮಂಗಳೂರು ಕುಸುಮ ೩. ಲೇಖಕರು ಶ್ರೀ. ಕಟೀಲು ಗಣಪತಿ ಶರ್ಮ, ಬೆಲೆ ೨ ಆಣೆ. ಇತಿಹಾಸಿಕ ಪತ್ತೇದಾರಿಯ ಕಥೆ ನೆಲಿಯು...

ಶಾರದಾ ಛಾಪಖಾನೆ, ಮಂಗಳೂರು.

ಸಾಹಿತ್ಯ **ಸ್ವದೇಶಾಭಿಮಾನಿ** ಸಂಚಿಕೆ

ಸಂಪುಟ ೨ ದಶಂಬರ ೮—೧೨—೧೯೩೩. ಸಂಚಿಕೆ ೧೦

— ಅ ನು ಕ್ರ ಮ ಣಿ ಕೆ —

	ಪುಟ
ಸಣ್ಣ ಕತೆಗಳ ಸ್ಪರ್ಧೆ	1
ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?	2
ಸಮಾಧಾನ	3
ಸಾಯ್ಮಲೀ ಆರೋಹಣ	4
ಬಾಡಿದ ತಾವರೆಗೆ	5
ವಿಧಿ ವಿಲಾಸ	6
ನೇತ್ರಾವತಿ	7
ಬ್ರಹ್ಮನ ಬೊಚ್ಚಲ ಮಕ್ಕಳು	8

ದಶಂಬರ ತಾರೀಕು ೮ನೇ ಶುಕ್ರವಾರ ೧೯೩೩.

ಸಣ್ಣ ಕತೆಗಳ ಸ್ಪರ್ಧೆ.

ಕಾವ್ಯದಲ್ಲಿ ಭಾವ ಗೀತೆಗಳು ಇರುವಂತೆ ಗದ್ಯ ಸಾಹಿತ್ಯದಲ್ಲಿ ಸಣ್ಣ ಕತೆಗಳು. ಭಾವಗೀತೆಗಳಂತೆ ಸಣ್ಣ ಕತೆಗಳಲ್ಲೂ ಏಕ ಸೂತ್ರೀ ರೀತಿ ಇರಬೇಕೆಂಬುದೇ ಇವು ಎರಡರ ಮುಖ್ಯ ಗುಣವಾಗಿದೆ. ರಚನೆಯ ನಿಯಮವನ್ನು ಅನುಸರಿಸಿದರೆ ಭಾವ ಗೀತಗಳು ಉಜ್ವಲವಾಗುವಂತೆಯೆ, ಸಣ್ಣ ಕತೆಗಳ ರಚನೆಯ ಮೇಲೆ ಅವುಗಳ ರಮಣೀಯತೆಯೂ ಅವಲಂಬಿಸಿಕೊಂಡಿರುವುದು.

ಸಣ್ಣ ಕತೆಗಳ ಉದ್ದಿಷ್ಟ ಪರಿಣಾಮವು ಒಂದೇ ಒಂದಾಗಿರಬೇಕು; ಅದನ್ನು ಪೂರ್ಣತ್ವದಿಂದಲೂ ಪರಿಪಕ್ವತೆಯಿಂದಲೂ ಸಾಧಿಸಬೇಕು. ಸಣ್ಣ ಕತೆಗಳಲ್ಲಿ ಕಥಾ ಪ್ರವಾಹವು ತಡೆಯಿಲ್ಲದ್ದಾಗಿರಬೇಕು ಹೊರತು, ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಧಾವಿಸಬಾರದು. ಸಣ್ಣ ಕತೆಗಳೊಳಗಣ ಘಟನೆಯು, ನಿರೂಪಣ ಮಾಡುವವನ ವೃತ್ತಿ, ಕತೆಯೊಳಗಣ ರಸ ಮತ್ತು ವಾತಾವರಣ ಇವೆಲ್ಲವು ಓದುವವನ ಅಥವಾ ಕೇಳುವವನ ಮನಸ್ಸಿನ ಮೇಲೆ ಒಂದೇ ಪರಿಣಾಮವನ್ನು ಮಾತ್ರ ಉಂಟು ಮಾಡುವುದಾಗಿರ ತಕ್ಕುವಾದ ಕಾರಣ, ಉದ್ದಿಷ್ಟ ಪರಿಣಾಮವು ಅಸಂಗತವಾಗುವಂತೆ ಮಾಡುವ ಯಾವುದೊಂದೂ ಕತೆಯೊಳಗೆ ಸಿಲುಕಬಾರದಾಗಿದೆ. ಲೇಖಕನ ದೃಷ್ಟಿಯು ಈ ಕಡೆಗೆ ಚೆನ್ನಾಗಿ ಹರಿಯಬೇಕು.

ಒಬ್ಬ ಕುಶಲನಾದ ಲೇಖಕನು ಒಂದು ಕತೆಯನ್ನು ರಚಿಸುವನೆನ್ನುವ. ಆತನು ಪ್ರವೀಣನಾಗಿರುವಲ್ಲಿ, ತನ್ನ ವಾಚಕರ ಮೇಲೆ ಅಪೂರ್ಣವಾದ ಹಾಗೂ ಒಂದೇ ಬಗೆಯ ಪರಿಣಾಮಗಳನ್ನು ಹೇಗೆ ಉಂಟು ಮಾಡಬಹುದು ಎಂಬುದನ್ನು ಮೊದಲಾಗಿ ವಿಚಾರ ಮಾಡಿ ತಿಳಿಯದೆ, ತನ್ನ ಕತೆಯ ರಚನೆಗೆ ಕೈಹಚ್ಚುವವನಲ್ಲ. ಪ್ರಸಂಗಗಳನ್ನು ಯೋಚಿಸುವುದರಲ್ಲೂ ತನ್ನ ಉದ್ದೇಶವನ್ನು ಮರೆತು ಬರೆಯಲಾರನು. ಆತನು ಬರೆಯುವ ಒಂದೇ ಒಂದು ಶಬ್ದವೂ ತನ್ನ ಉದ್ದೇಶವನ್ನು ಕುಂದಿಸುವುದಾದರೆ, ಆತನು ಅದನ್ನು ಕಿತ್ತು ಹಾಕುವನು.

ಲಘು ಕತೆಗಳ ವಿಷಯವೂ ರಚನೆಯೂ ನಾವಿನ್ಯಪೂರ್ಣವಾದುವಾಗಬೇಕಾಗುವುದು. ಕತೆಯ ನಿವೇದನೆಯು ಸೂತ್ರಬದ್ಧವಾಗಿರಬೇಕು, ಸೂಕ್ಷ್ಮವಾಗಿದ್ದು ತೀವ್ರ ಪರಿಣಾಮವನ್ನು ಹುಟ್ಟಿಸುವುದಾಗಿರಬೇಕು. ಆರಂಭದಲ್ಲಿ ಹೇಗೋ ಕೊನೆಯಲ್ಲೂ ಅದು ಚಿತ್ತಾಕರ್ಷಕವಾಗಬೇಕಾಗುವುದು. ರಚನೆ ಸಾಗುತ್ತ ಬರುವಂತೆ, ರಸೋತ್ಕರ್ಷತೆಗೂ ಲೇಖಕನು ಗಮನ ಕೊಡುತ್ತ ಬರುವನು.

ಮರಾಠಿ ವೃತ್ತ ಪತ್ರಿಕೆಯೊಂದು ಇತ್ತೀಚೆಗೆ ಸಣ್ಣ ಕತೆಗಳ ಸ್ಪರ್ಧೆಯನ್ನು ಏರ್ಪಡಿಸಿ, ರೂ. 100, 50, 25ರ ಬಹುಮಾನಗಳನ್ನು ಉತ್ತಮ ಲೇಖಕರಿಗೆ ಒಪ್ಪಿಸಿತು. ಬೇರೆ ಬೇರೆ ಹೂಗಳನ್ನು ಒಂದು ಕಡೆ ಕೂಡಿಸಿಟ್ಟರೆ, ಅವುಗಳಲ್ಲಿ ಅತ್ಯುತ್ತಮವಾದುದೆಂದು ಆರಿಸುವುದು ಕಷ್ಟವಾಗುವುದಕ್ಕಿಂತಲೂ, ಈ ಕತೆಗಳಲ್ಲಿ ಅತ್ಯುತ್ತಮವಾದುದನ್ನು ಆರಿಸಿ ತೆಗೆವುದು ಸಂಪಾದಕರಿಗೆ ಕಷ್ಟವಾಯಿತು. ಹೂಗಳನ್ನು ಹೇಗೆ ಗಂಧ, ರೂಪ, ಕೋಮಲತೆ, ಬಣ್ಣ ಮೊದಲಾದ ಹಲವು ಬಗೆಗಳಿಂದಲೂ ವಿಮರ್ಶಿಸಿ ಉತ್ತಮವೆನುವುದನ್ನು ನಿಷ್ಕರ್ಷಿಸಬೇಕಾಗುವುದೋ ಹಾಗೆಯೆ, ಈ ಸಣ್ಣ ಕತೆಗಳನ್ನು ವಾಚಕರೇ ಓದಿ, ಇತ್ಯರ್ಥಿಸಬೇಕಾಗಿ' ತಿಳಿಸಿ, ವಾಚಕರು ಯೋಗ್ಯತೆ ತಿಳಿಸುವಂತೆ ಅವರು ಏರ್ಪಡಿಸಿದರು. ವಾಚಕರು ಯಾವ ದೃಷ್ಟಿಯಿಂದ ಸಣ್ಣ ಕತೆಗಳ ಯೋಗ್ಯತೆಯನ್ನು ಗೊತ್ತು ಹಚ್ಚಬಹುದೆಂದು ಅವರು ಕೆಳಗಣ ಆರು ಗುಣಗಳನ್ನು ಪ್ರತಿಯೊಂದು ಕತೆಯಲ್ಲೂ ಶೋಧಿಸುವ ಹಾಗೆ ವಿವರಿಸಿದರು:—

೧. ಕತೆಯ ಹೆಸರು, ಅದರೊಳಗಣ ವಿಷಯದಿಂದ ಸ್ಪಷ್ಟ ಸೂಚಕವಾಗಿದೆಯೆ? ಹಾಗಿದ್ದರೂ, ಕಥಾ ಸಾರವು ಅದರಲ್ಲಿ ತಿಳಿದುಬರಬಾರದು. ಔಚಿತ್ಯವೂ, ಚಾತು

[illegible] ಕತೆಯು [illegible]ಲ್ಲಿಯೇ ಇದೆಯೋ ಇಲ್ಲವೋ [illegible].

[illegible] ಕತೆಯಲ್ಲಿ [illegible] ಕಲ್ಪನೆಯು ಕೊನೆಯ [illegible]. ಮೊದಲಿನ ವಾಕ್ಯಗಳಲ್ಲಿ ವಾಚಕರ [illegible] ಆಕರ್ಷಿಸುವ ಗುಣವಿರತಕ್ಕದು.

• [illegible] ವಿಷಯವನ್ನು ದರ್ಶಿಸುವುದೇ ಮಾತ್ರವಲ್ಲದೆ, [illegible]ಯಲ್ಲಿ ರಸವೂ ಚಾತುರ್ಯವೂ ಇರಬೇಕು.

• [illegible] ವಿಷಯವು ಮುಗಿಯುತ್ತಲೆ ಕತೆಯೂ ಮುಗಿಯ[illegible].

• [illegible] ವಿಷಯಕ್ಕೆ ಅನುರೂಪವಾಗಿದ್ದು ಕಲಾಯುಕ್ತ [illegible].

• [illegible] ಮುಗಿದೊಡನೆ, ಕತೆಯು ಮನಸ್ಸಿನ ಮೇಲೆ [illegible] ಪರಿಣಾಮವು ಎಲ್ಲ ಗುಣಗಳಲ್ಲಿ [illegible] ಯೋಗ್ಯವಾದ ಗುಣವಾಗಿರತಕ್ಕದು.

[illegible] ಇವೇ [illegible]ಗಳಿಲ್ಲದೆ ಯಾವ ಕತೆಯೂ [illegible] ವಾಚಕರು ಸಣ್ಣ ಕತೆಗಳನ್ನೋದುವಾಗ, [illegible] ಲಕ್ಷ್ಯಗಳನ್ನು ತಿಳಿದುಕೊಂಡರೆ, ಕನ್ನಡ [illegible]ವಾಗಲಿಕ್ಕಾದಲ್ಲವೆ?

[illegible]ಮಾನ ಪತ್ರಿಕೆಗಳನ್ನೇಕೆ ಓದಬೇಕು?

೨

[illegible] ಪತ್ರಿಕೆಗಳು ಜನನ ಹೊಂದಲಿಲ್ಲ! [illegible] ಕನ್ನಡ ವಾಙ್ಮಯ ಸೇವೆಯನ್ನು [illegible] ಪತ್ರಿಕಾ ಸಂಪಾದಕರು [illegible] ಸಂಕಲನೆಯು ಕಾರ್ಯಕ್ಕೆ ಕೈಹಾಕಲು [illegible] ಭಾವನೆಯಿಂದ ಮುಂದಾಗಿ [illegible] ಸಂಪಾದಕರು ಯಶಸ್ವಿ [illegible] ಆಗುವದು [illegible]! ಇದಕ್ಕೆ [illegible] ಪತ್ರಿಕೆಗಳ [illegible] ಅರಿಯುವುದಿಲ್ಲ [illegible].

[illegible] ಮಾಡಬೇಕೆಂದು ಎದುರು [illegible] ಸಂಪಾ[illegible] ಬಂದರೆ ಸಾಮಾನ್ಯನ [illegible] ನೋಡುವುದಿಲ್ಲ. [illegible] ಲೇಖನಗಳನ್ನು ಪ್ರಕಟಿಸಿದರೆ [illegible] ಸಂಪಾದಕನ ಮೇಲೆ ಸಾಹಿತಿಗಳ ಜುಗುಪ್ಸೆಯ ಬಾಣಗಳೇ ಬೀಳುವವು, ಎಂದಾಗ ಸಂಪಾದಕನು ಮೆಚ್ಚಿಸಬೇಕಾದರೂ ಯಾರನ್ನು? ಹೀಗಾಗಿ ಕನ್ನಡ ಪತ್ರಿಕಾವಾಚನಾಭಿರುಚಿಗೆ ಕುಂದೊದಗಿದೆ. ಇದರಿಂದಾಗಿ ಕನ್ನಡದ ಬೆಳವಣಿಗೆಯು ಕಷ್ಟತರವಾಗಿದೆ.

'ಜಯಕರ್ನಾಟಕ'ವೆಂದರೆ ಸಾಹಿತಿಗಳ ನೆಲೆಯೂರೆಂದು ಕನ್ನಡ ಬಲ್ಲವರ ಬಹುಮತ. ಇಂಗ್ಲೀಷು ತಿಳಿಯದ ಕನ್ನಡಿಗರಲ್ಲಿ ಎಷ್ಟು ಜನರು ಅದಕ್ಕೆ ಚಂದಾದಾರರಿರುವರೆಂದು ನಾವೇ ಊಹಿಸಿಕೊಳ್ಳಬಹುದು. ಜನಸಾಮಾನ್ಯರನ್ನು ರಂಜಿಸುವುದಕ್ಕಾಗಿ 'ವಿಕಟವಿನೋದಿನಿ' ಇದೆ. ಅದನ್ನು ಸಾಹಿತಿಗಳು ಎಷ್ಟು ಆದರದಿಂದ ಸ್ವೀಕರಿಸುವರೆಂದೂ ಊಹಿಸಲು ಸುಲಭವಿದೆ. ಜಯಕರ್ನಾಟಕಕ್ಕೆ ಸಾಹಿತಿಗಳ ೧೦,೦೦೦ ಚಂದಾದಾರರಿದ್ದರೆ ವಿಕಟವಿನೋದಿನಿಗೆ ಸಾಹಿತಿಗಳಲ್ಲದ ೨೦,೦೩೦ ಚಂದಾದಾರರಿರುವರು. ಅಂತೂ ಕನ್ನಡ ಪತ್ರಿಕೆಗಳಿಗೆ ಬೆಂಬಲವಾಗಿ, ಚಂದಾದಾರರಾಗಿ ಇರುವುದು ತಿಳಿಯದ ಜನಸಾಮಾನ್ಯರೇ ಹೊರತು ಸಾಹಿತಿಗಳಲ್ಲ. ಸಾವಿರದಲ್ಲಿ ಹತ್ತು ಮಂದಿ ಸಾಹಿತಿಗಳಿದ್ದರೆ ಪತ್ರಿಕೆಗೆ ಎಲ್ಲಿ ಭಾಗ್ಯ ಬಂತು? ಚಂದಾದಾರರಾಗಿ ಪ್ರೋತ್ಸಾಹಿಸದ ಸಾಹಿತಿಗಳಿದ್ದರೂ ಕನ್ನಡ ನಾಡಿನಲ್ಲಿ ಅವರು ಇಲ್ಲದಂತೆಯೇ ಎಂದು ನಮ್ಮ ಮತ.

ಕನ್ನಡನಾಡಿನ ಪತ್ರಿಕೆಗಳ ಚಂದಾದಾರರ ತುಲನೆಯನ್ನು ಮಾಡುವುದಾದರೆ, ರುಚಿಯರಿತು ಪತ್ರಿಕೆಯನ್ನು ಓದುವವರು ಬಹು ವಿರಳವೆಂದೇ ತಿಳಿದು ಬರುವುದು. ಒಬ್ಬ ಚಂದಾದಾರನನ್ನು ಸಂಪಾದಿಸಬೇಕಾದರೆ ಕನಿಷ್ಠಪಕ್ಷ ಅಂಚೆ ಖಾತೆಯವರಿಗೆ ಎರಡು ಕಾರ್ಡುಗಳಂತೂ ವೆಚ್ಚವಾಗುವುವು. ಹಾಗೆ ಕಾರ್ಡು ಬರೆದೂ ಚಂದಾದಾರರಾಗಿರೆಂದು, ಮೇಲಿಟ್ಟು ಪ್ರಾರ್ಥಿಸಿದರೂ ೧೦೦ರಲ್ಲಿ ೧೦ ಜನರು ಅರಿಮನಸ್ಸಿನಿಂದೊಪ್ಪುವರು. ಎರಡೆರಡು ಕಾರ್ಡುಗಳನ್ನು ಹಾಕಿದರೂ ಬರೆಯಲು ತಿಳಿದೋ ತಿಳಿಯದೆಯೋ ಉತ್ತರವನ್ನೇ ಕೊಡದ ಕೊನೆಗೆ ವಿ. ಪಿ. ಕಳುಹಿಸಿದರೆ ಅದನ್ನು ಆನಂದದಿಂದ ಹಿಂದೆ ಬಿಡುವವರೆಷ್ಟಿಲ್ಲ! ಊರಲ್ಲಿನ ಆಟ ನೋಟ, ನಾಟಕ ಸಿನೆಮಾಗಳಿಗೆ ಸೀಟುಗಳನ್ನು ರಿಜರ್ವ್ ಮಾಡಿಸುವಷ್ಟು ಉದಾರಿಗಳು ಕನ್ನಡದಲ್ಲಿರುವರಾದರೂ, ಒಂದು ವರ್ಷಕ್ಕೆ ಬೇಕಾಗುವ ವಾರ್ತಾ ಪತ್ರಿಕೆಗಳ ವಿ. ಪಿ. ಗಳನ್ನು ಸ್ವೀಕರಿಸಲು ನಮ್ಮವರಲ್ಲಿ ಹಣವೇ ಇರುವುದಿಲ್ಲ! ಕೆಲವರಂತೂ ದಾಕ್ಷಿಣ್ಯಕ್ಕಾಗಿ ಪತ್ರಿಕೆಗಳ ವಿ. ಪಿ. ಗಳನ್ನು ಸ್ವೀಕರಿಸಿ ಬಿಡುವರು. ಒಂದೆರಡು ಸಲದ ಪತ್ರಿಕೆಗಳು ಬಂದರೆ ಅವುಗಳನ್ನು ಬಿಡಿಸುವುದು ಸ್ವಾಭಾವಿಕ. ಆ ಮೇಲೆಯೋ?—ಪೋಸ್ಟ್‌ಮೇನನು ತಂದಿತ್ತ ಪತ್ರಿಕೆಯ ಮುಚ್ಚಳವನ್ನಾದರೂ ಒಡೆದು ನೋಡುವ ಭಾಗ್ಯಶಾಲಿಗಳೂ ಕಡಿಮೆಯೇ ಎಂದು ಹೇಳಿದರೆ ಅತ್ಯುಕ್ತಿಯಲ್ಲ. ಇದೇ ರೀತಿ ಹಲವು ಚಂದಾದಾರರು ಹಲವು ರೀತಿಯ ಭಾವನೆಗಳಿಗೆ ಕಟ್ಟು ಬಿದ್ದು ಕನ್ನಡ ಪತ್ರಿಕೆಗಳನ್ನು ತಮ್ಮ ಕೈಲಾದಷ್ಟು ಪ್ರೋತ್ಸಾಹಿಸುವರು, ಅಲ್ಲದೆ ವಾಚನದ ಪ್ರಾಮುಖ್ಯತೆಯನ್ನರಿತು ಪತ್ರಿಕೆಗಳನ್ನು ಕೈಲೆತ್ತುವವರು ತೀರಾ ವಿರಳ. ಇಂತಹ ದುರಾವಸ್ಥೆಯಿಂದಾಗಿ ಕನ್ನಡ ವಾರಪತ್ರಿಕೆ, ಪಕ್ಷಪತ್ರಿಕೆ, ಮಾಸಪತ್ರಿಕೆಗಳ ಸಂಪಾದಕರು ತಂತಮ್ಮ ಪತ್ರಿಕೆಗಳ

ಬಳಸಿದಾ ಭೀಕರಾರಣ್ಯದೊಳು—ಬಳಿಕ ದಶಕಂಠ ನಾಕೆಯ
ನೊಯ್ಯುತಾ ॥

ಒಲವಿನಿಂ ತನ್ನರಸಿಯಾಗಬೇಕೆಂದತುಲ ।
ಬಲ–ತನಗೆ ಮೇಲ್ಮೆಯುಂ—ರಾಮನಿಗೆ ಕೀಳ್ಮೆಯುಂ ।
ಬಲು ವಿಧದಿ ವಿವರಿಸಿದ–ಕೊಡುವೆ ಸಕಲವನೆಂದ—ಬೆದರಿಸಿದನ
ಬಲಿಯಳನು ॥ ೪ ॥

ಛಲನೊರೆದ ಬಿರುನುಡಿಗೆ ಕಿವಿಗೊಡದೆ ನಿರ್ಧರಿಸಿ ।
ದಳು ತನ್ನ ಪತಿ ರಾಘವನೆ ತನಗೆ ಗತಿಯೆನು ।
ತ್ತಲುಗದೆಯೆ–ಧೂರ್ತ ಲಂಕಾಧಿಪನ ನೋಡದೆ–ಯಲಂಕಾರ
ಗಳ ನೊಲ್ಲದೆ—॥

ಉಳಿದು ನಿದ್ರಾಹಾರಗಳನಶೋಕಾ ವನದೊ ।
ಳಳುತ ಶೋಕದೊಳೊಮ್ಮೆ—ಧೈರ್ಯಗೊಳುತಿನ್ನೊಮ್ಮೆ ।
ಖಳವೈರಿಯಂ ಮನದೆ ನೆನೆನೆನೆದು, ಕಳವಳಿಸಿ, ಕಷ್ಟದಿಂದಿರು
ತಿರ್ದಳು ॥ ೫ ॥

"ರಾಮ ಬಾ! ರಾರಾಜಿಸುವ ರವಿಕುಲಾಂಭೋಧಿ ।
ಸೋಮ ಬಾ! ಸಕಲ ಸದ್ಗುಣ ಸತ್ವ ಸಂಪನ್ನ ।
ಧಾಮ ಬಾ! ಮಾನಿನಿಯ ಮಾನಮಂ ರಕ್ಷಿಸೈ! ರಕ್ಕಸರ ಸೊಕ್ಕ
ಮುರಿವ—॥

ಭೀಮ ಬಾ! ವೀರ್ಯಶೌರ್ಯೌದಾರ್ಯಭರಿತ ನಿ।
ಸ್ಸೀಮ ಬಾ! ದಯದೋರು! ಮೊಗದೋರು! ಮನದಸು ।
ಪ್ರೇಮ ಬಾ! ಬಾರೆ"ನುತ ರಾಮನಾಗಮನಮಂ ಹಾರೈಸಿಕೊಂಡಿ
ರ್ದಳು ॥ ೬ ॥

ಇಂತು ಪೂರ್ಣೇಂದುಮುಖಿ–ಹರಿಣಾಕ್ಷಿ—ಕಳೆಗುಂದಿ ।
ಯೆಂತಿರ್ದಳೋ ರಾಕ್ಷಸೀ ಚಿರತೆಗಳ ಸುಳಿಯೊ ।
ಳೆಂತು ಬಣ್ಣಿಪೆ ಕಠಿಣ ಹೃದಯ ವಲ್ಮೀಕ ಭವನಂತೆ ಭೂಸುತೆಯ
ಕಥೆಯ ॥

ಮುಂತೆ ದಶರಥ ಸುತಂ ಖಳರೊಡನೆ ದಶವದನ ।
ಗಂತ್ಯಮನ್ನೆಸಗಿ, ಶರಣಗೆ ಲಂಕೆಯನ್ನಿತ್ತು ।
ಕಾಂತೆಯಂ ಲೋಕಾಪವಾದದಾ ಭಯದಿಂದ ಕರೆತರಲು ಹಿಂಜರಿ
ದನು ॥ ೭ ॥

ಕ್ಷಿತಿಯ ನಂಬಿಗೆಗಾಗಿ ಪ್ರಜ್ವಲಿಸುವಗ್ನಿಯೊಳಂ ।
ಪತಿಯಾಜ್ಞೆಯಿಂ ಸೀತೆ ಪೊಗಲು ಶೀತಲಮಾಯ್ತು! ।
ಸತಿಯ ಪಾತಿವ್ರತ್ಯದಾ ಮಹಿಮೆಯನು ಪೊಗಳೆ ಶೇಷಗಸದಳ
ವಲ್ಲವೇ? ॥

ಅತಿ ಪತಿವ್ರತೆ ಲೋಕಮಾತೆಯವಳೆಂಬ ಸಂ ।
ಸ್ಥಿತಿಯನರಿತಿರ್ದೊಡುಂ—ಮೂರ್ಖ ರಜಕನದೋರ್ವ ।
ಮತಿಗೇಡಿಯಾಡಿದನು—ಮಿಥ್ಯಾಪವಾದವನು! "ಜಗದ ಬಾಯ್ಮುಚ್ಚ
ಬಹುದೇ? ॥ ೮ ॥

"ದುರುಳ ದಶಕಂಧರನ ಬಂಧನದ ಬಲೆಯನುಂ ।
ಹರಿದು ತಂದಿರ್ದ ರಘುರಾಮನಾ ಕಾಮಿನಿಯ ।
ವರಪತಿವ್ರತೆಯೆಂದು—ಮರಳಿ ಭೋಗಿಪನೆಂದು"—ಯೆಂದು [illegible]
ನಿಂದಿಸಿದ [illegible]

ಚರನೋರ್ವ ಬಂದು—ರಾಜಂಗೊರೆಯೆ ಲಕ್ಷ್ಮಣನ ।
ಕರೆದು—ಗರ್ಭಿಣಿ–ರಮಣಿಯನು ಕಾಡಿಗಟ್ಟುವರೆ ।
ಪರಿಕಿಸದೆ ಕೊಟ್ಟಿರ್ದ ಕಟ್ಟಾಜ್ಞೆಯಿದು ಸರಿಯೆ? ಸಾಧ್ವಿಗೀ
ವಿಧಿಯೆ ವಿಧಿಯೆ!

ಆರಾಮಭದ್ರ ಕಲ್ಪದ್ರುಮಾಶ್ರಿತ ಧರಣಿ ।
ಜಾರಮ್ಯಲಲಿತಲತಿಕೆಯು ಸಹಿಸಲಾರದಾ ।
ಕ್ರೂರ ರಜಕೋಕ್ತಿ ಝಂಝಾಮಾರುತಪ್ರಹರಕೀಡಾಗಿ—[illegible]

ಘೋರ ಕಾನನದೊಳಗೆ ಬಿದ್ದು ತಾನುದಿಸಿದಾ ।
ಧಾರಿಣಿಯ ಗತಿಯೆಂದು ಹೊರಳುವಂತಾಯ್ತು! ಅ ।
ಕ್ಷೀರಮಣನಾನೆಂದು ವರ್ಣಿಸುವುದೀ ಮಹಾ "ವಿಧಿವಿಲಾಸ"
ಮಹಿಮೆಯ ॥

ನೇತ್ರಾವತಿ!

ಪಶ್ಚಿಮ ಪರ್ವತ ಮಾಲೆಯೊಳಿಳಿಯುತ
'ಕುದುರೆಯ ಮುಖ'ದಿಂದ,
ಉಚ್ಚ ಮಹೀರುಹ ನಿಬಿಡಿತ ಘೋರಾ–
ರಣ್ಯದ ಎಡೆಯಿಂದ,
ನೇತ್ರಾವತಿ! ನೀ ಹರಿಯುತ, ಹಾರುತ,
ಇಳಿಯೊಳು ಸುಳಿಯುತ್ತ,
ಎತ್ತರ ಬೆಟ್ಟವ ಸುತ್ತುತ, ಮಣ್ಣನು
ಕಲ್ಲನು ಕೊರೆಯುತ್ತ,
ಸಾಗುವುದೆಲ್ಲಿಗೆ? ಮೆಲ್ನಡೆಯಿಂದತಿ
ಸಂತಸದೇಳ್ಗೆಯಲೀ
ಹೊಗುವುದಾರನು ನೋಡಲು? ಕೂಡಲು?
ಹಾಡುತ ನಲಿವಿನಲೀ.
ವಿಶ್ವ ವಿಶಾಲ ಮಹೋದಧಿಯೊಂದಿಗೆ
ಬೆರಸುತ ಜೀವನವ
ವಿಶ್ವಾತ್ಮನ ಪದ ಕಮಲದ ಐಕ್ಯವ–
ದಾಗಿಪೆಯೊ? ತನ್ನಾ[illegible]
ಸಾಗರ ನಾದದೊಳೇಕೀಭವಿಸಲು
ತನ್ನಯ ಮೆಲ್ನುಲಿಯು.

ನಕ್ಷತ್ರಲೋಕವಿಲ್ಲ. ಕವಿದ ಗಾಢಾಂಧಕಾರದ ಮಬ್ಬು ಸ್ವಲ್ಪ ಹಾರಿದೆ. ಉಷಃಕಾಲದ ಬ್ರಾಹ್ಮೀ ಮುಹೂರ್ತವು ಸನ್ನಿಹಿತವಾಗುತ್ತಲಿದೆ. ಮುಂದಿನ ಅಭ್ಯುದಯದ ಅರುಣೋದಯವಾಗಿದೆ. ಸತ್ಯ ಪ್ರಕಾಶದ ಸುಂದರ ಸುಖ ಸೂಚನಾ ರೂಪವಾದ ಮುಂಬೆಳಗಿನ ಮುಂಜಾಗ್ರತೆಯು ತಲೆದೋರಿದೆ. ಕೋಮಲ ಕಿರಣವು ಹೊರ ಹೊಮ್ಮಲಿದೆ. ಹೊಂಬಿಸಿಲು ಬಯಲಿನಲ್ಲಿ ಬಿದ್ದು ನಲಿದಾಡಲಿದೆ.

ತಾವರೆ! ಈ ಸ್ವಾತಂತ್ರ್ಯ ಸೂರ್ಯೋದಯದ ಉಷಃಕಾಲವು ಏತರಿಂದಾಯಿತು? ನಿನ್ನ ಈ ಹಠಯೋಗದಿಂದಲೇ? ಪಂಚಾಗ್ನಿ ಮಧ್ಯದಲ್ಲಿ—ಅಂದರೆ, ಸುತ್ತಲೂ ತೀವ್ರಾಗ್ನಿ ಜ್ವಾಲೆಯು ಜ್ವಲಿಸಿ ಧಗಧಗನೆ ದಹಿಸುತ್ತಿರಲು, ಮೇಲೆ ಪ್ರಚಂಡ ಕಿರಣನು ಪ್ರಕೋಪವಾಗಿ ಪ್ರಕಾಶಿಸಿ ಸುಡುತ್ತಿರಲು, ಆ ಸ್ಥಿತಿಯಲ್ಲಿ—ತಪವನ್ನಾಚರಿಸುವ ತಾಪಸನಂತೆ, ನೀನು ಪಂಚೋದಕ ಮಧ್ಯದಲ್ಲಿ ಕುಳಿತು ತಪವೆಸಗಿದೆಯಲ್ಲವೇ? ಮೂರು ಕಡೆಯಲ್ಲಿಯೂ ಅಪಾರವಾದ ಅಗಾಧ ಜಲವು ಸುತ್ತಿದೆ. ಮತ್ತೊಂದೆಡೆಯಲ್ಲಿ (ಉತ್ತರದಲ್ಲಿ) ನೀರಿಗಿಂತಲೂ ಅತಿ ಶೀತಲವಾದ ಹಿಮದ ಹನಿಯು ಮುತ್ತಿ ಮುತ್ತಿಡುವ ಎತ್ತರವಾದ ತವರಿಯು (ದಂಡೆ) ಸಮೀಪದಲ್ಲಿದೆ. ಮೇಲೆ ನಡು ನೆತ್ತಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಹರಡಿದ ಧಾವಳ್ಯ ಪ್ರತಾಪದಿಂದ ಲೋಕವನ್ನೆಲ್ಲಾ ತನ್ನ ವಶವಾಗಿರಿಸಿ, ನಿನ್ನನ್ನು ಮಾತ್ರ ಅತ್ಯಂತ ತಪ್ಪುಗೊಳಿಸಿ ಪಾರತಂತ್ರ್ಯ ಶೃಂಖಲೆಯಿಂದ ಬಂಧಿಸಿದವನು ಮೂಡುತ್ತಾ ತನ್ನ ತುಹಿನ ಕಿರಣವನ್ನು ಬೀರಿರುವನು. ಹೀಗೆ ಪಂಚೋದಕ ಮಧ್ಯದಲ್ಲಿ ತೀವ್ರ ತಪದಿಂದ ತಪಿಸುವೆ. ಈ ಹಠಯೋಗದಿಂದಲೇ ಭಾವೀ ಸ್ವಾತಂತ್ರ್ಯ ಸೂರ್ಯನ ಅರುಣ ಕಿರಣವು ತಲೆದೋರಿತೇನು?

ಅಥವಾ—, ತಾವರೆ! ನೀನು ಸ್ತೋತ್ರ ನೋಂಪಿಯಿಂದಲೇ ಯಾರೊಡನೆಯೂ ತನ್ನ ದುರ್ಧರ ದುಃಖದ ದುಃಸ್ಥಿತಿಯನ್ನು ದೂರದೆ, ಶಾಂತವಾದ ಸ್ವಾಂತದಿಂದಿದ್ದು,—ಮೌನಿಯಂತೆ ಮೌನದಲ್ಲಿ, ಯೋಗಿನಿಯಂತೆ ಯೋಗದಲ್ಲಿ, ಬೆರೆತಿದ್ದು—ಕ್ಷಮಾ ವ್ರತವನ್ನೇ ಪಾಲಿಸಿದ ಆ ಸತ್ಯದ ಸಾಮರ್ಥ್ಯದ ಪುಣ್ಯ ಫಲದಿಂದಲೇ? ಏತರಿಂದೀ ಸ್ವಾತಂತ್ರ್ಯ ಸೂರ್ಯನ ಪುಣ್ಯೋದಯ ಸೂಚನೆಯು? ವಿಧಿಯ ಅನತಿಕ್ರಮ ನಿಯೋಗದಿಂದಾಗಿರಬಹುದೇ?

ಅದೋ ನೋಡು! ತಾವರೆ! ಅಲ್ಲಿ—ಪೂರ್ವದ ದಿಗಂತದಲ್ಲಿ ಮಹಾತ್ಮಾ ಅರುಣನ ಕೋಮಲ ಅಹಿಂಸಾ ಕಿರಣವು ಸತ್ಯದ ಸತ್ಪಥದಲ್ಲಿ ಸುಳಿಯುತ್ತಾ ಮುನ್ನಡೆಯುತ್ತಿದೆ. ಅರುಣನ ರಾಗ ರಸಪೂರ್ಣವಾದ ಮೊಗವನ್ನು ನೋಡಿ ಎಷ್ಟೋ ಹಕ್ಕಿಗಳು ಅಕ್ಕ ಪಕ್ಕದ ರೆಕ್ಕೆಯನ್ನು ನಿಗುರಿಸುತ್ತಾ ಎಚ್ಚತ್ತು ಕುಳಿತಿವೆ. ಮೋಹನ ಉದಯ ಗಾನವನ್ನು ಹಾಡುತ್ತಾ ಭುವನ ಜನವನ್ನೆಲ್ಲಾ ಕರ್ಮರಂಗಕ್ಕೆಳಸಿವೆ. ತಾವೂ ಬಯಲಿಗಿಳಿದು ಅಪೂರ್ವ ಉತ್ಸಾಹದಿಂದ ಕರ್ಮವೆಸಗುತ್ತಿವೆ.

ಏಳು. ತಾವರೆ! ದುಃಖವನ್ನು ದೂಡು. ಸುಖವನ್ನು ಸವಿ. ಆನಂದವನ್ನು ಹೊಂದು. ತನ್ನ ಒಂದೊಂದೇ ಎಸಳುಗಳನ್ನು ಬಿಡಿಸಿಕೊಳ್ಳುತ್ತಾ ಹಿಂದಿನಂತೆ ವಿಕಸಿತವಾಗು. ಹಿಂದಿನ ಆ ವೈಭವ ಶಿಖರವನ್ನೇ ಏರಲಿರುವಿ. ಹೆದರುವೆ ಏಕೆ? ಸ್ವಪ್ನದಲ್ಲಿ ಮಾತ್ರ ಸವಿದ ಆ ಸತ್ಯ ಸ್ವಾತಂತ್ರ್ಯ ಸುಖಾಮೃತಾಸುಧವವು ಈಗ ನಿನಗೊದಗಲಿದೆ. ಕನಸೇ ನೆನಪಾಗಲಿದೆ. ಆದ್ದರಿಂದ ತಾವರೆ! ಕಂಬನಿಯನ್ನು ಕೊಡೆ! ಮುಖದಲ್ಲಿ ಕಾಂತಿಯನ್ನು ತಳೆ! ಬಾಡಿದ ಮೊಗದಲ್ಲಿ ಹರ್ಷದ ಸುಕೋಮಲ ಚಿಹ್ನೆಯ ಅಂಕುರವು ಮೊಳೆಯಲಿ. ಹೆಚ್ಚೇನು? ತಾವರೆ! ನೀನಿನ್ನು ಮುಂದೆ 'ವಿಕಾಸ' ಹೊಂದಿ ನಗು!

ಸ್ವಾತಂತ್ರ್ಯ ಸೂರ್ಯೋದಯವಾಗಲಿ! ನಗು ಬೆಳಗಲಿ! ಸೊಗ ಸೊದಗಲಿ!!! ಒಲವೊಲಿಯಲಿ!!!

ಶಂಕರನಾರಾಯಣ.

ವಿಧಿವಿಲಾಸ.

(ಲೇಖಕರು:—ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು)

"ಮಾನಿನಿಯೆ! ಜನಕಾಜ್ಞೆಯಂ ಪಾಲಿಸಲ್ಕೀಗ ।
ಕಾನನಕೆ ಪೋರಮಡುವೆ—ವಿಮಲೆ! ಕೋಮಲೆ! ಕಾಂತೆ! ।
ನೀನಿಲ್ಲಿ ಜನನಿಯರನುಪಚರಿಸುತಿಹುದೆ"ನಲು ಜನಕಜಾತೆಯು
ನುಡಿದಳು—॥

"ಪ್ರಾಣೇಶ ಪಾದಮಂ ನಂಬಿದರ್ಧಾಂಗಿಯಂ ।
ಮಾನನಿಧಿ! ತೊರೆದಡವಿಗೈದುವೆಯ? ಹೇ ಪ್ರಿಯಾ! ।
ಪ್ರಾಣದಿಂದಿಹುದೆಂತು ತವಸನ್ನಿಧಿಯನುಳಿದು ಧಾರಿಣಿಯೊಳಿರ
ಲಾರೆನು—॥ ೧ ॥

ಕಾಡುತಾ ನಾಡಹುದು, ನರಕ—ಸುರಪುರವಹುದು ।
ಕೂಡಿರಲು ಕಾಂತನಂ ಮರಳು ನೆಲ—ಫಲಭೂಮಿ, ।
ನೋಡದಿರೆ ಪತಿಪದವನರಮನೆಯು—ಸೆರೆಮನೆಯು, ಸತಿಗೆ ಪತಿಯೇ
ಸಕಲವೂ—॥

ಭಾಡಿದರೆ ಪ್ರಿಯಳ ವದನವನೊಲಿದು ವಿಕಸಿತವ ।
ಮಾಡುವವ—ಮನಸಿನಲಿ—ಕನಸಿನಲಿ—ನೆನೆಸಿನಲಿ ।
ಮೂಡಿರುವ ಕಮಲಬಾಂಧವನಂತೆ ಬೆಳಗುತಿರುವಾರ್ಯನನ್ನಗ
ಲಿರುವನೆ?" ॥ ೨ ॥

ಎಂದು ಬಹು ದೈನ್ಯದಿಂ ನಳಿನಮುಖಿ ಬಿನ್ನೈಸು ।
ತಂದು ನಿಜಸುಖಭವನಭೋಗದಲ್ಲಾಸೆಯ ।
ಸ್ಪಿಂದುವದನೆಯು ಬಿಟ್ಟು—ನಿಷ್ಕಳಂಕಿಯು ಪತಿಯ ಪದಿ ನೆಳಲಿ
ನಂತೆ ಸರಿದು—।

ಹಿಂದೆ—ಗಂಡನಗೂಡಿ ಭಕ್ಷ್ಯಭೋಜ್ಯಂಗಳಂ ।
ತಿಂದು ಬಳೆದವಳಿಂದು—ಕಂದಮೂಲಂಗಳಂ ।
ತಿಂದು—ನುಣುಪಾದ ಹಾಸಿಗೆಯ ಬಿಡದ ಲತಾಂಗಿ—ಕಲ್ನೆಲದ
ಮೇಲೆಸೆದಳು ॥ ೩ ॥

ಬಳಲುತಿದಸಳು ದಿವಾರಾತ್ರಿ ಧವನೊಡನೆ ನಿಮಿ।
ಕುಲಜಾತೆ ಸೀತೆ ಪುಲಿ ಕರಡಿ ಹೆಬ್ಬಾವುಗಳು ।

ಅವಸಾನವನ್ನು ನಿರೀಕ್ಷಿಸುತ್ತಲೇ ಇರಬೇಕಾಗುತ್ತದೆ. ಈಗ ಉಳಿವಿನಲ್ಲಿರುವ ಕರ್ಣಾಟಕ ಪತ್ರಿಕೆಗಳಲ್ಲಿ ಯಾವುದರ ಆರ್ಥಿಕ ಸ್ಥಿತಿಯು ನೆಟ್ಟಗಿದೆ? ಯಾವ ಪತ್ರಿಕೆಯ ವಾರ್ಷಿಕ ವರದಿ ಅಗ್ರಲೇಖಗಳನ್ನು ನೋಡಿದರೂ "ವಾಙ್ಮಯ ಸೇವೆಯನ್ನು ಮಾಡಬೇಕೆಂದು ಸಾಹಸಗೈಯುತ್ತಿರುವೆವು. ಆದರೆ ಚಂದಾದಾರರ ಬೆಂಬಲದ ಅಭಾವ ಬಹಳ—ದುಡ್ಡಿನ ತುಟ್ಟಿ ಸಾಕಾಗುವಷ್ಟು" ಎಂದೇ ಬರೆಯಲ್ಪಟ್ಟಿರುವುದು ಕಂಡು ಬರುವುದು. ಇಂಗ್ಲಾಂಡಿನ 'ಡೈಲಿ ಹೆರೊಲ್ಡ್' ಪತ್ರಿಕೆಗೆ ೨ ಮಿಲ್ಲಿಯ ಚಂದಾದಾರರಿರುವರೆಂದು ಮೊನ್ನೆ ಮೊನ್ನಿನ ಲೆಕ್ಕಪ್ರಕಾರ ಮಿ। ಲಿಯೊ ನಾರ್ಡ್ ಮೆಟರ್ಸ್‌ರವರು ತಿಳುಹಿಸಿರುವರು. ಇಂಗ್ಲೆಂಡಿನ ಮಿಲಿಯ ಚಂದಾದಾರರೆಲ್ಲಿ? ಕರ್ಣಾಟಕದ ಕೆಲವು ನೂರು ಚಂದಾದಾರರೆಲ್ಲಿ? ಹೀಗಿರುವಾಗ ಕನ್ನಡ ವಾಙ್ಮಯ ವೃಕ್ಷವು ಬೆಳೆಯುವುದು ಹೇಗೆ? ಕನ್ನಡ ಪತ್ರಿಕೆಗಳು ಬಾಳುವುದು ಎಂತು? ಕನ್ನಡ ಪತ್ರಿಕೆಗಳ ಸಂಪಾದಕರು ಯಶಸ್ವಿಗಳಾಗುವುದಾದರೂ ಯಾವ ವಿಧದಿಂದ?

ಕರ್ನಾಟಕ ಏಕೀಕರಣವು ಮೊದಲಾಗ ಬೇಕೋ ಅಥವಾ ಕರ್ನಾಟ ಭಾಷೆಯು ಮೊದಲು ಬೆಳೆಯ ಬೇಕೋ ಎಂಬುದೀಗ ಪ್ರಶ್ನೆ, ಮೊದಲಿನದಿಲ್ಲದಿದ್ದರೆ ಎರಡನೆಯದಿಲ್ಲ, ಎರಡನೆಯದಿಲ್ಲದಿದ್ದರೆ ಮೊದಲನೆಯದಿಲ್ಲ, ಸ್ವರಾಜ್ಯ ಸಿಗದೆ ಬಡತನಹೋಗದು ಬಡತನ ಹೋಗದೆ ಸ್ವರಾಜ್ಯ ಸಿಗದು ಎಂಬಂತೆಯೇ ಈ ಸಮಸ್ಯೆಯು ಗಡಚಾಗಿದೆ. ಇದಕ್ಕೆ ಸದುಪಾಯವಾಗಿ ಎರಡೂ ಏಕ ಸಮಯದಲ್ಲಿ ಕೈಗೂಡುವಂತೆ ಮಾಡುವುದೇ ಸದ್ದಾರಿಯು—ಹೆದ್ದಾರಿಯು. ಅಲ್ಲದೆ "ಪ್ರತ್ಯೇಕ ರಾಷ್ಟ್ರ ನಿರ್ಮಾಣವು ಮೊದಲಾಗಬೇಕು. ಆಮೇಲೆ ವಾಙ್ಮಯ ಪ್ರಚಾರವೆಂಬುದೂ; ಅಥವಾ ವಾಙ್ಮಯ ಪ್ರಚಾರವಾಗಲಿ, ತದನಂತರ ಪ್ರತ್ಯೇಕ ರಾಷ್ಟ್ರ ನಿರ್ಮಾಣಕ್ಕಾಗಿ ಯತ್ನಿಸೋಣ" ಎಂಬುದೂ ಸಾಧುವಾಗುವುದಿಲ್ಲ. ಕರ್ನಾಟಕ ಏಕೀಕರಣವಾಗಬೇಕಾದರೆ ಅದಕ್ಕೆ ಜನಸಾಮಾನ್ಯರ ಬೆಂಬಲ ಬೇಕು. 'ಏಕೀಕರಣ' ಎಂಬ ಭಯಾನಕ ಶಬ್ದದ ಅರ್ಥವು ಅವರಿಗಾಗಬೇಕು. ಆ ಅರ್ಥದಿಂದಾಗಿ ಅವರಲ್ಲಿ ಸೇವೆಯ ಸ್ಫೂರ್ತಿಯು ಹುಟ್ಟಬೇಕು. ಆ ಸ್ಫೂರ್ತಿಯು ನಿಶ್ಚಲವಾಗಬೇಕು. ಆ ನಿಶ್ಚಲತೆಯ ಪರಿಣಾಮವಾಗಿ ಸರಕಾರವು ನಡುಗಬೇಕು, ಆ ನಡುಗಾಟವು ಕರ್ನಾಟಕ ಏಕೀಕರಣದಲ್ಲಿ ಕೊನೆಗಾಣಬೇಕು. ಮೊನ್ನೆ ಮುಂಬಾಯಿಯಲ್ಲಿ ಗವರ್ನರ ಸರ್ ಫ್ರೆಡರಿಕ್ ಸೈಕ್ಸರವರು ಭಾಷಣ ಮಾಡುತ್ತಾ "ಕರ್ಣಾಟಕ ಏಕೀಕರಣ ಪ್ರಶ್ನೆಯು ಸರಕಾರದಿಂದ ಥಕ್ಕನೆ ಸ್ವೀಕೃತವಾಗಲಾರದು" ಎಂಬ ಸೂಚನೆಯನ್ನು ಕೇಳಿ ನಮ್ಮ ಎಷ್ಟು ಪತ್ರಿಕೆಗಳು ಚಳವಳಿಸಿರುವುವು? ತನ್ನಡಿಯು ತನಗಿಲ್ಲದ ಪತ್ರಿಕೆಯು ಚಳವಳಿಸಿದರೂ ಆಗುವುದಾದರೂ ಏನು?

ಸಂಕ್ಷೇಪವಾಗಿ ಹೇಳುವುದಾದರೆ, ಜನಸಾಮಾನ್ಯರು ಕನ್ನಡವನ್ನು ಕಲಿಯಬೇಕು. ಕನ್ನಡವು ತನ್ನ, ಬಳಗದ ಮತ್ತು ದೇಶದ ಭಾಷೆಯಾಗುವಂತೆ ಪತ್ರಿಕೆಗಳಿಗೆ ಪ್ರೋತ್ಸಾಹವನ್ನೀಯಬೇಕು. ಅಂತಹ ಪ್ರೋತ್ಸಾಹಪೂರ್ವಕ ವಾಚನದಿಂದ ಪ್ರಾಂತಿಕ ಸಮಸ್ಯೆಯನ್ನರಿಯಬೇಕು. ಪ್ರಾಂತಿಕ ವ್ಯವಹಾರ ಜ್ಞಾನದಿಂದ ದೃಷ್ಟಿವೈಶಾಲ್ಯತೆಯಾಗ ಬೇಕು. ತಾನಾರು, ತನ್ನ ಭಾಷೆ ಯಾವುದು? ತನ್ನ ಪ್ರಾಂತದ ಇತಿಹಾಸ ಕರ್ತವ್ಯವೇನೆಂದು ಅರಿತುಕೊಳ್ಳಬೇಕು. ಎಂದರೆ ಕನ್ನಡ ನಾಡು ಹೊನ್ನಿನ ನಾಡಾಗುವುದು. ತಪ್ಪಿದರೆ ಕನ್ನಡ ನಾಡು ಮಣ್ಣಿನ ನಾಡಾಗುವುದು.

ಮ. ಶಾ.

ಸಮಾಧಾನ.

ರಾಯರ ಮನೆಯಲ್ಲಿ ಸೋಮನು ಸರ್ವಾಂತರ್ಯಾಮಿ. ರಾಯರು ಪೆನ್ಶನಿನ ಬುತ್ತಿ ಕಟ್ಟಿಕೊಂಡು ಸುಖಜೀವನ ಮಾಡುತ್ತಿರುವ ತಾತಯ್ಯ. ಸೋಮ ಸಣ್ಣ ಪೋರ. ರಾಯರಿಗೆ 'ಚಾ' ಕಟ್ಟಿಯನ್ನು ವೇಳೆಗೆ ಸರಿಯಾಗಿ ತಂದೊಪ್ಪಿಸುವವನು ಸೋಮ; ಕಾಯಿಪಲ್ಲೆಗಳನ್ನು ಸಂತೆಯಿಂದ ತಂದು ಕೊಡುವವನೂ ಸೋಮನು; ರಾಯರ ಮನೆಯ ತೊತ್ತಿ ಎಮ್ಮೆ ಕರೆಯುವಾಗ ಬೆತ್ತ ಹಿಡಿದು (ಎಮ್ಮೆಗಾಗಿ—ತೊತ್ತಿಗಾಗಿ ಅಲ್ಲ) ನಿಲ್ಲಬೇಕಾದವನೂ ಸೋಮನೇ.

ಆದರೆ, ಪ್ರತಿ ದಿನವೂ ಅವನು ತಡವಾಗಿಯೇ ಮನೆಯಿಂದ ರಾಯರಲ್ಲಿಗೆ ಬರುವನು!

ರಾಯರು ಇಂಥ ಸಮಯಕ್ಕೆ ಬರಬೇಕೆಂದು ಹೇಳಿದರೆ, ಆ ಹೊತ್ತಿಗೇ ಸೋಮನು ಅದೇಕೋ ಬರಲಾರನು!

ಹುದ್ದೇದಾರರಾಗಿದ್ದ ನೆನಪನ್ನು ಪೆನ್ಶನು ಕಟ್ಟಿಕೊಂಡ ರಾಯರು ಮರೆಯುವರೆ? ಸೋಮನು ನಾಳೆಯಿಂದ ಬರುವುದೇ ಬೇಡ ಎಂದು ಹಲವು ನಾಳೆಗಳ ವಾಯಿದೆ ಇಟ್ಟು ಬೆದರಿಸಿದರೂ, ಪ್ರತಿ ಸಲ—'ಸ್ವಾಮಿ,' ಎಂದು ಅವರ ಕಾಲುಗಳನ್ನು ಒತ್ತುವ ವೇಳೆ, ಅವರಿಗಿರುವ ವಾತ ರೋಗಕ್ಕೆ ಶಮನವಾಗುವ ಹಾಗೆ ಕಣ್ಣೀರು ಸುರಿಸುತ್ತ ಎರಡೂ ಕಾಲು ಒತ್ತುವನು, ವಾತಕ್ಕೂ ಹಾಯಾಗುವುದು; ರಾಯರ ಬಾಯಿಗೆ ಬೀಗವೂ ಬೀಳುವುದು.

"ಸ್ವಾಮೀ, ಸಿಟ್ಟಾಗಬೇಡಿರಿ. ನನ್ನಲ್ಲಿ ಸಿಟ್ಟೇ? ನನ್ನನ್ನು ಕೆಲಸದಿಂದ ಬಿಟ್ಟರೆ, ಮುದಿ ಅಜ್ಜಿ ಈ ಲೋಕವನ್ನೆ ಬಿಟ್ಟಾಳು. ಊಟಕ್ಕಿಲ್ಲದೆ ಸತ್ತಾಳು. ಅವಳ ಹಿಂದೆ ನಾನೂ ಸತ್ತೇನು. ಹೀಗೆ ಮಾಡಲಾಗದಯ್ಯ" ಎಂದು ರಾಯರ ಕಾಲೊತ್ತುವಾಗ, ಅವೇ ಚರಣ ಕಮಲಗಳಲ್ಲಿ ಅವನ ಪ್ರಾರ್ಥನೆ.

ಪ್ರಾರ್ಥನೆ ನೆರವೇರಿತೋ ಎಂದು ಕೇಳಿಸುವ ಮೊದಲು, ರಾಯರು ಗೊರಕೆ ಹೊಡೆಯುವರು. ಸೋಮನು "ಸನ್ಮತಿ ಚರಣ ಚರಣರಹೇ ಹನುಮಾನ್ ವೀರಾ" ಎಂಬ ನಿತ್ಯದ ಭಜನೆಯ ಆರತಿಯ ಪದ್ಯದ ನೆನಪು ಹುಟ್ಟಿಸುವಂತೆ ಅಲ್ಲೇ ಒರಗುವನು.

ರಾಯರು ಪೆನ್ಶನರರಾದರೂ ಮನುಷ್ಯರೇ ಆಗಿದ್ದುದರಿಂದ, ಅವರ ವೃದ್ಧಾಪ್ಯವು ವಾತ ರೋಗವೂ ಪೆನ್ಶನಿನ ಜತೆಯಲ್ಲೇ ಹುಟ್ಟಿದುದಾದುದರಿಂದ, ಮುದಿ ಅಜ್ಜಿಯು ಸತ್ತಾಳೆಂಬುದನ್ನು ಕೇಳುತ್ತಲೆ

[illegible] ಅಲ್ಲಿ ಅವರಿಗೆ ಯೋಗ ನಿದ್ರೆ [illegible] ಸೋಮನಿಗೆ [illegible]

[illegible] ಸೋಮನ ಉತ್ತರ ಈಗ ಬೇರೆ— [illegible] ಸ್ನಾನ ಮಾಡದೆ ಹೋಗುವವನಲ್ಲ [illegible]

[illegible] "ಇಷ್ಟು ಚಿಕ್ಕ ಪೋರನು ದೇವಾ[illegible]" ಎನ್ನುವಷ್ಟರಲ್ಲಿ, ಊರಲ್ಲಿ [illegible] ಇಲ್ಲವೋ ಎಂಬುದನ್ನು ಕೂಡ ಮರೆತ [illegible] ದಿನದಿಂದ ಇಷ್ಟರಲ್ಲೇ ತಾನೂ [illegible] ಹೋಗುವದೆಂಬುದರ ನೆನಪಾಗಿ, ಅವರು [illegible] ಸೋಮಾ! ನೀನೇನು ಪುರೋಹಿತನೆ, ಹಳೆ [illegible] ದೇವಾಲಯಕ್ಕೆ ಹೋಗುವುದಕ್ಕೆ? [illegible] ಹೋಗುವುದಕ್ಕೆ ಅಗತ್ಯವಾದ ಸಂಕಟವಾದರೂ [illegible]

[illegible] ಎಂಬಾ ಗಾದೆಯನ್ನು [illegible] ಪುರೋಹಿತರು ಪುರೋಹಿತ [illegible] ಹೋಗುವವರೆಂದೂ ಡಂಭಾಚಾರದ ಕಪಟ [illegible] ದೇವಾಲಯಕ್ಕೆ ಹೋಗುವರೆಂದೂ ಸೋಮನು [illegible]

[illegible] ಮಾಡುವವನಲ್ಲ ಎಂದು ತಿಳಿದಿದ್ದರು; [illegible] ಅವರು ಎಣಿಸುತ್ತಿರಲಿಲ್ಲ. ಆ [illegible] ಅವನ ಅಪರಾಧಗಳಿಗೆ [illegible] ರಾಯರು ಸೋಮನ ನೆವಗಳನ್ನು ಅವಶ್ಯ [illegible] ವಾಗಿ ನುಂಗುತ್ತಿದ್ದರು.

[illegible] ದಿನಗಳು ಕಳೆದುವು.

[illegible] ಹುಚ್ಚರು ಎಂದು ಜನರು ಹೇಳುವು [illegible]

[illegible] ತಡವಾಗಲೂ ತಡವಾಗು [illegible] ತಡವಾಗಿ ಊಟವೂ ತಡವಾಗು [illegible] ರಾಯರ ಮನೆಯಲ್ಲಿ ನಿತ್ಯ ಕ್ರಮವಾಯಿತು.

[illegible] ಹಿಡಿದನು. ಕೆಲಸ [illegible] ಧ್ಯಾನ ಮಾಡುತ್ತ [illegible] ಎಂದರು ರಾಯರು. ಅವನ ಸಮೀಪಕ್ಕೆ [illegible] ಹಿಡಿದ ಎಂದು; [illegible]

[illegible] ದಿನ ಸಹಿಸಬಹುದು? ಇನ್ನು [illegible] ಮುಗಿದುವು. ರಾಯರ [illegible] ಯುವರೆಗೆ ಬಂತು.

ಏಕಾಲವಾದ ಈ ಜಗತ್ತಿನಲ್ಲಿ ಸೋಮನು ಅನಾಥನಾದನು. ಮುದಿ ಅಜ್ಜಿಯು ಇವನಿಗಾಗಿ ಶೋಕಿಸಿ ಕಣ್ಣೀರು ಸುರಿಸಿದಳು. ಅದರಿಂದ ಅವರಿಬ್ಬರ ಹೊಟ್ಟೆ ತುಂಬುವುದೆ?

ಹೊಟ್ಟೆಯಲ್ಲಿ ಅನ್ನವಿಲ್ಲ; ಹೆಸರಿಗೂ ಬಟ್ಟೆಯಿಲ್ಲ; ನಡುಹಗಲ ಸೂರ್ಯನ ತಾಪ ಬೇರೆ, ಸೋಮನು ಹೆದ್ದಾರಿಯಲ್ಲಿ ಹೆಣದಂತೆ ಕಾಣುವನು. ಅವನ ಮೈಯಿಂದ ಬೆವರು ಒಸರುತ್ತಿರುವುದರಿಂದಲೇ ಅವನಲ್ಲಿ ಇನ್ನೂ ಜೀವವಿದೆಯೆಂದು ತಿಳಿಯಬಹುದೇ ವಿನಾ, ಸೋಮನು ಪ್ರೇತವೆ.

ಈ ಜೀವಂತ ಪ್ರೇತವು ಕರುಣೇಶ್ವರ ದೇವಾಲಯದ ಹೆಬ್ಬಾಗಿಲಿಗೆ ನಡೆಯಿತು. ಎಂದಾದರೂ ಅವನು ದೇವಮಂದಿರದೊಳಗೆ ಕಾಲಿಟ್ಟಿರಲಿಲ್ಲ. ಈಗ ತಲೆಗೆಟ್ಟಿದೆ. ಆವೇಶ ಹಿಡಿದವನಂತೆ, ದೇವರ ಬಳಿಗೆ ನಡೆದು ಅಲ್ಲಿ ಮಲಗಿದನು.

ಅಂದೇ, ಅಗಲೇ, ಆ ಮಾರ್ಗವಾಗಿ ರಾಯರು ತಿಂಗಳ ಪೆನ್ಶನು ಪಡೆದು; ಮನೆಗೆ ತಿಂಗಳ ಸಾಮಾನು ಕಳುಹ ಹೇಳಲು ಅಂಗಡಿಗೆ ಹೋಗುತಿದ್ದರು. ಅವರಿಗೆ, ಅದೊಂದು ತಿಂಗಳ ಅನ್ನಬಟ್ಟೆಗೆ ಕಷ್ಟ ವಿರದೆಂಬ ಸಮಾಧಾನವು ಸಂತೋಷವನ್ನುಂಟು ಮಾಡಿದ್ದಿತು.

ದೇವಾಲಯದಲ್ಲಿ ದೇವರ ಬಳಿ, ಈ ಜನ್ಮಕ್ಕೆ ಅನ್ನಬಟ್ಟೆಗಳ ಕಷ್ಟವೇನೂ ಇಲ್ಲದೆ ಬಿದ್ದಿದ್ದ ಸೋಮನ ಸಮಾಧಾನವು ಅವನ ಮುಖದ ಮೇಲೆ ಸಂತೋಷವನ್ನು ಮೂಡಿದ್ದಿತು.

ಕರುಣೇಶ್ವರ ದೇವರ ವಿಗ್ರಹವೂ ಸಮಾಧಾನ ಸೂಚಕವಾಗಿ ನಗುತಿದ್ದಿತು!

ಸಾಯ್ಕಲ್ ಆರೋಹಣ.

ಸಾಯಿಕಲನ್ನೇರಿ ಸವಾರಿ ಮಾಡುವುದೊಂದು ನವೀನ ವಿದ್ಯೆಯೆಂದು ಹೇಳಲಾಗುವುದಿಲ್ಲ; ಏಕೆಂದರೆ ಈ ವಿದ್ಯೆಯನ್ನರಿಯದಿರುವ ಜನರು ತೀರಾ ವಿರಳ. ಮುದುಕರು, ಯುವಕರು, ಶಾಲೆಯ ಹುಡುಗರು, ಆರೇಳು ವರ್ಷ ಪ್ರಾಯದ ಮಕ್ಕಳು ಕೂಡ ಈ ವಿದ್ಯೆಯಲ್ಲಿ ಬಿ. ಎ. ಪರೀಕ್ಷೆ ಇರುತ್ತಿದ್ದರೆ ಸುಲಭವಾಗಿ ಅದರಲ್ಲಿ ತೇರ್ಗಡೆ ಹೊಂದದಿರರೆಂಬುದು ಖಂಡಿತ; ಕೆಲವರು, ಎಂದರೆ, ಸಾಯ್ಕಲ್ ಫೀಟ್ಸ್ ಮಾಡುವವರು ಎಂ. ಎ. ಡಿಗ್ರಿಯನ್ನು ಸಹ ಪಡೆಕೊಳ್ಳಬಹುದು. ಸ್ತ್ರೀಯರು ಪುರುಷರಿಗೆ ಸರ್ವ ವಿಧದಲ್ಲಿಯೂ ಸಮಾನರು ಅಥವಾ ಅವರಿಗಿಂತ ಮಿಗಿಲು ಎಂಬುದನ್ನು ಕಾರ್ಯದಲ್ಲಿ ತೋರಿಸಬೇಕೆಂಬ ಹಾಗೆ, ಈ ಸಾಯಿಕಲ್ ಆರೋಹಣದಲ್ಲಿ ಕೆಲವು ಹೆಂಗುಸರೂ ಪ್ರವೀಣರಾಗಿರುವುದನ್ನು ಕಂಡು ಮನಸ್ಸಿನಲ್ಲಿ ಸಂತೋಷವೂ ಆಶ್ಚರ್ಯವೂ ಸಹಜವಾಗಿ ಉದ್ಭವಿಸುವುವು.

ಇಪ್ಪತ್ತನೆಯ ಶತಮಾನದ ದಿವ್ಯವಾದ ಯಂತ್ರ; ಬೆಲೆಯು ಕೂಡ ಇಪ್ಪತ್ತೇ ರೂಪಾಯಿ; ಎರಡು ತಿಂಗಳ ಕಾಫಿ ತಿಂಡಿಯ ಖರ್ಚು. ವೇಗದಿಂದ ನಡೆಯುವುದು; ಬೇಗನೆ ಮುರಿಯುವುದು; ಕೆಲವು ಸಾರಿ

ಕೈಕಾಲುಗಳನ್ನು ಮುರಿಯುವುದೂ ಉಂಟು. ಸಾಯ್ಕಲ್ ಸವಾರರ ಕಾಲುಗಳನ್ನು ಸ್ವಲ್ಪ ಪರೀಕ್ಷಿಸಿದರೆ ತಿಳಿಯುವುದು; ವಸ್ತ್ರದ ಚಿಂದಿಯನ್ನು ಸುತ್ತಿಕೊಂಡಿರದ ಕಾಲುಗಳಿಲ್ಲ! ಹೇಗೆ ಬೀಳದೆ ನಡೆಯಲಿಕ್ಕೆ ಕಲಿತ ಮಕ್ಕಳಿರುವುದಿಲ್ಲವೋ, ಹಾಗೆಯೇ ಸಾಯಿಕಲ್ ಸವಾರಿಯನ್ನು, ಬಿದ್ದು ಪೆಟ್ಟು ತಿನ್ನದೆ ಕಲಿತವರಿಲ್ಲ.

ಈ ವಿದ್ಯಾಭ್ಯಾಸದಿಂದ ನಮ್ಮ ಹುಡುಗರ ಉಡುಪಿನಲ್ಲಿ ಸಹ ಕೆಲವು ಮಾರ್ಪಾಟುಗಳು ಬಂದಿರುತ್ತವೆ. ಮೊದಲನೆಯದು, ಸಾಯ್ಕಲ್ ಕಚ್ಚೆ; ಇದೇಕೆಂದರೆ ಸಾಯ್ಕಲ್ ಯಂತ್ರವು ಸವಾರರನ್ನು ಕಚ್ಚದ ಹಾಗೆ; ಸಾಯ್ಕಲ್ ಶರ್ಟ್; ಗಿಡ್ಡವಾದ ಕೈಗಳಿರುವ ಅಂಗಿ; ಸಾಯ್ಕಲಿನ ಹಿಡಿಯು ಇವರ ಕೈಗಳನ್ನು ಹಿಡಿಯದ ಹಾಗೆ; ಕೈಗಳು ಉದ್ದವಾಗಿರ ಕೂಡದು; ಕೈಗಿರುವ ರಿಸ್ಟ್‌ವಾಚ್ ಹೊರಗೆ ಕಾಣಬೇಕು; ಕಾಲುಗಳಿಗೆ ಸಾಯ್ಕಲ್ ಶೂಸ್; ಇವೆಲ್ಲಾ ಸಾಯ್ಕಲ್ ಸವಾರರ ಭೂಷಣಗಳು.

ಇಪ್ಪತ್ತನೆಯ ಶತಮಾನವು, ಸಾಯ್ಕಲ್ ಯಂತ್ರದ ಯುಗ; ಚಿಕ್ಕ ಮಕ್ಕಳಿಗೆ ಮೂರುಗಾಲಿಯ ಯಂತ್ರ; ದೊಡ್ಡವರಿಗೆಲ್ಲಾ ಎರಡು ಗಾಲಿಯ ಯಂತ್ರ. ಕ್ರಯಕ್ಕೆ ಪಡೆಕೊಳ್ಳಬೇಕೆಂಬ ಅವಶ್ಯವೂ ಇರುವುದಿಲ್ಲ; ಸಾವಿರಾರು ಅಂಗಡಿಗಳು ಈ ಯಂತ್ರಗಳನ್ನು ಗಂಟೆಗೆ ನಾಲ್ಕು ಪಾವಾಣೆ ಪ್ರಕಾರ ಬಾಡಿಗೆಗೆ ಕೊಡುವುವು. ಒಂದು ಕಪ್ ಕಾಫಿಯನ್ನು ಕುಡಿಯುವುದನ್ನು ನಿಲ್ಲಿಸಿದರೆ,ಒಂದು ಗಂಟೆಯ ಸಮಯ ವಾಯುವೇಗದಿಂದ ಈ ಯಂತ್ರವನ್ನು ಬೀದಿಗಳಲ್ಲೆಲ್ಲಾ ಓಡಿಸಬಹುದು. ಇದರಿಂದ ಸಾಯ್ಕಲ್ ವಿದ್ಯೆಯು ಎಲ್ಲಾ ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ವಿಸ್ತಾರವಾಗಿ ಹಬ್ಬಿರುತ್ತದೆ.

ಸಾಯ್ಕಲ್ ಆರೋಹಣವೆಂಬುದು ಗುರುವಿಲ್ಲದ ವಿದ್ಯೆಯೆಂದು ತಿಳಿಯಬಾರದು; ಇದರಲ್ಲಿ ವಿಶೇಷವಾದ ಮಾಹಿತಿಯೂ, ಚಾತುರ್ಯವೂ ಇರುವ ಉಪದೇಶಿಯರು ಅಥವಾ ಉಪಾಧ್ಯಾಯರು ಇದ್ದೇ ಇರುವರು. ವಿದ್ಯಾರ್ಥಿಗಳನ್ನು ಇಕ್ಕೆಡೆಯಲ್ಲಿ ಎರಡು ಯಂತ್ರಗಳಿಗೆ ಕಟ್ಟಿಹಾಕಿ, ತನ್ನ ಸ್ವಂತ ಯಂತ್ರವನ್ನು ನಡುವಿನಲ್ಲಿರಿಸಿ, ಎರಡು ಕೈಗಳಿಂದ ಇಬ್ಬರು ಸವಾರರನ್ನೂ ಹಿಡಿದು, ಅವರ ಯಂತ್ರಗಳನ್ನೂ, ತನ್ನ ಯಂತ್ರದ ಬಲದಿಂದ ನಡೆಯಿಸಿ, ಈ ವಿದ್ಯೆಯ ಅಭ್ಯಾಸವನ್ನು ಮಾಡಿಸುವ ಸಾಯ್ಕಲ್ ಗುರುಗಳನ್ನು ನೀವು ನೋಡಿರುವಿರೋ ಏನೋ! ಈ ವಿದ್ಯಾಭ್ಯಾಸದ ಕೊಲೇಜ್ ಮೈದಾನಿನಲ್ಲಿ; ಪರೀಕ್ಷೆಯು ಬೀದಿಗಳಲ್ಲಿ; ಇಡೀ ಕೋರ್ಸ್ ಎರಡುವರೆ ದಿನಗಳಲ್ಲಿ.

ಮೂರನೆಯ ದಿನದಲ್ಲಿ ಬೀದಿಯಲ್ಲಿ ಬಂದೇ ಬಿಡಬೇಕು; ಮತ್ತು ಯಾರಾದರೂ ಒಬ್ಬಿಬ್ಬರ ಮೈಮೇಲೆ ಬೀಳಲೇ ಬೇಕು; ಅವರ ಬೈಗಳನ್ನು ತಿಂದು ಪರೀಕ್ಷೆ ಪಾಸಾಗಬೇಕು. ನಾಲ್ಕನೆಯ ದಿವಸ ಫೀಟ್ಸ್ ಮಾಡುವುದು; ಎಂದರೆ ಕೈಯಿಂದ ಹಿಡಿಯದೆ, ಕಾಲಿನಿಂದ ಮುಟ್ಟದೆ ಸಾಯ್ಕಲ್ ಯಂತ್ರವನ್ನು ಓಡಿಸುವುದು. ಇಷ್ಟನ್ನು ಸಾಧಿಸದಿದ್ದರೆ ಅವನು ಮನುಷ್ಯನೆಂದೆಣಿಸಲ್ಪಡಲಾರನು.

ನೋಡುವವರಿಗೆ ಒಂದು ನೋಟ, ಸವಾರರ ಓಟ. ಮುಖ್ಯವಾಗಿ ಒಂದು ಯಂತ್ರವು ಇನ್ನೊಂದನ್ನು ಬಹು ರಭಸದಿಂದ ಎದುರ್ಗೊಂಡು, ಒಂದರ ಮೇಲೊಂದು ಹತ್ತಿ, ಸವಾರರಿಂದ ಗಾಳಿಯಲ್ಲಿ ಲಾಗ ಹೊಡಿಯುವುದನ್ನು ಪ್ರದರ್ಶಿಸುವಾಗ, ಇದೇ ಒಂದು ಸರ್ಕಸ್ ಆಗಿ ಪರಿಣಮಿಸುತ್ತದೆ. ಟಿಕೇಟು ತೆಗೆದುಕೊಳ್ಳದೆ, ಹಾದಿಯಲ್ಲಿ ಹೋಗುವವರೆಲ್ಲಾ ನೋಡುವ ನೋಟ! ಟಿಕೇಟ್ ತೆಗೆದುಕೊಂಡವರು ಸವಾರರಲ್ಲದೆ ನೋಡುವವರಲ್ಲ, ಎಲ್ಲಿಗೆ ಆಸ್ಪತ್ರೆಗೆ!

ಕಾಲು ನೋವು, ಸೊಂಟ ನೋವು, [illegible] ಸಾಯ್ಕಲ್ ಆರೋಹಿಗಳಿಗೆ ಹೊಸತಲ್ಲ [illegible] ವುಗಳು. ಇವುಗಳಿಂದ ಪ್ರಯೋಜನವು ಯಾರಿಗೆ? [illegible]

ಈ ಯಂತ್ರಗಳಲ್ಲಿ ಅನೇಕವುಗಳಿಗೆ ಒಂದು ತರದ [illegible] ಆಸೆಯು ಇತ್ತೀಚೆಗೆ ಉಂಟಾಗಿರುತ್ತದೆ. ಅದಾವುದೆಂದರೆ— [illegible] ಮಾಡುವ ಆಶೆ. ಜನರನ್ನು ಹೊತ್ತು ಹೊತ್ತು [illegible] ಈ ಯಂತ್ರಗಳು ಕೆಲವು ಸಾರಿ ಎತ್ತಿನ ಗಾಡಿಯನ್ನೇರಿ [illegible] ವಿಶ್ರಾಂತಿಯನ್ನು ಪಡೆಯುವುದುಂಟು. ಇವುಗಳಿಗೆ ಈ ತರದ ವಿಶ್ರಾಂತಿ ಅಥವಾ ಸವಾರಿಯು ಅವಶ್ಯವೆಂಬುದನ್ನು ಕಂಡುಹಿಡಿಯುವವರು ನಮ್ಮ ಪೋಲಿಸಿನವರು. ಹಾದಿಯಲ್ಲಿ ಬರುವೇಗದಿಂದ [illegible] ಯಂತ್ರಗಳನ್ನು ಹಿಡಿದು ಕಟ್ಟಿಹಾಕಿ ಅವುಗಳಿಗೆ ಅವಶ್ಯವಾದ ವಿಶ್ರಾಂತಿಯನ್ನು ಒದಗಿಸಿ ಕೊಡುವವರು ಈ ಪೋಲಿಸ್ ಡಾಕ್ಟರರು. ಇದರಿಂದ 'ಎತ್ತಿಲ್ಲದಾ ಗಾಡಿಯನು ಬತ್ತಿ ನಡೆಸುವರು' ಎಂಬ ಕವಿಯ ಮಾತು ಸುಳ್ಳಾಗಿ ಮಾಡಿದಂತಾಯಿತು. ಎಷ್ಟು [illegible] ಯಂತ್ರವನ್ನು 'ಕೈಯಿಂದೆತ್ತಿ' ಎತ್ತಿನ ಗಾಡಿನ ಮೇಲೆ ಸ್ವಲ್ಪ ಸಮಯದವರೆಗೆ ಅದನ್ನಿರಿಸಿ, ಅದಕ್ಕೆ ವಿಶ್ರಾಂತಿದಾನವನ್ನು ಕೈಯಿತ್ತು ಕೊಡುವವರಿರುವಾಗ, ಸಾಯ್ಕಲ್ ಸವಾರರಿಗೆ ಯೋಚನೆ ಏಕೆ?

ಎಂ. ವಿ. ಪ್ರಭು. ಎಂ. ಎ. ಎಲ್. ಟಿ.

ಬಾಡಿದ ತಾವರೆಗೆ—

ಉಷಃಕಾಲವು ಸನ್ನಿಹಿತವಾಗುತ್ತಿರಲು

ತಾವರೆ! ನೀನೇಕಿಂತು ಬಾಡಿ ಬಡವಾಗಿರುವೆ? ಬಸವಳಿದು ಬಿಸುಸುಯ್ದು ಬಳಲುವೆಯೇಕೆ? ನಿನ್ನನ್ನು ಗೌರವಿಸಿ ಮನ್ನಿಸುವವರಿಲ್ಲವೇ? ಸೇವಿಸಿ ಸೊಗಗೊಳಿಸುವವರಿಲ್ಲವೇ? ವೈಭವಶಿಖರಕ್ಕೇರಿದ ಅಂದಿನ ಆದೊಂದು ಆನಂದಮಯ ಪ್ರಶಾಂತ ದಿವಸದಲ್ಲಿ—ಸ್ವಾತಂತ್ರ್ಯ ಸೂರ್ಯನು ತನ್ನ ಪ್ರಖರವಾದ ಕಿರಣಗಳನ್ನು ಪಸರಿಸಿ ಅತ್ಯುಜ್ವಲವಾಗಿ ಹೊಳೆದು ಬೆಳಗುತ್ತಿದ್ದ ಆ ಸುಸ್ನಿಗ್ಧ ಸಮಯದಲ್ಲಿ—ನೀನೆನಿತೊಂದು ಆನಂದದಿಂದ ಪ್ರಫುಲ್ಲ ಮುಖದಿಂದ ಶೋಭಿಸಿದೆ.

ಆ ಸಮಯದಲ್ಲಿ ಎಷ್ಟೋ ರಾಜಹಂಸಗಳು ನಿನ್ನನ್ನೋಲೈಸಿ ಸೇವಿಸುತ್ತಿರಲಿಲ್ಲವೇ? ಇಂದು, ಈ ದುಃಖ ದಗ್ಧ ದುಸ್ಥಾಲದಲ್ಲಿ ಅವೆಲ್ಲಾ ಎತ್ತ ಹೋದುವು? ಕರಾಳ ಕಾಲನ ದವಡೆಯಲ್ಲಿ ಸಿಲುಕಿ ನಷ್ಟವಾಗಿರಬೇಕು. ಇದ್ದ ಕೆಲವಾದರೂ ಎಲ್ಲೋ ಕಾಲರಾತ್ರಿಯ ತಮೋಮಯ ವಾತಾವರಣದಲ್ಲಿ ಕುಳಿತು, ನಿದ್ರಿಸಿರಬೇಕು. ನಿನ್ನನ್ನುಪೇಕ್ಷಿಸಿ ಅಡಗಿರಬೇಕು. ಅಲ್ಲವಾದರೆ, ಇಷ್ಟೊಂದು ದುಃಖದಿಂದ ಸೊರಗಿ ಮರುಗುವ, ಬಳಲಿ ಬೆಂಡಾಗುವ, ನಿನ್ನನ್ನು ಕಂಡಾದರೂ ಸಂತೈಸಿ ಮಾತಾಡಿಸುವುದಿಲ್ಲವೇಕೆ? ಹತ್ತಿರವಾದರೂ ಸುಳಿಯುವುದಿಲ್ಲವೇಕೆ?

ದಕ್ಷಿಣ ಕನ್ನಡ

ಮಂಗಳೂರು — [illegible] ಬಿ. ಎ. ಬಿ. [illegible]

[illegible] ಎಂ. ಸಿ. [illegible] ಕಂದಿತು.

[illegible] ಜಿಲ್ಲಾ ಹರಿಜನ ಸೇವಾ ಸಂಘದ ಮಹಾ ಸಭೆಯು [illegible] ಇನೇ ಆದಿತ್ಯವಾರ ಅಪರಾಹ್ನ ಘಂಟೆ ಗಳ್ಳೆ [illegible] ಮಿಷನ್ ಶಾಲೆಯಲ್ಲಿ ಜರಗುವುದು. [illegible] ಸೆಕ್ರೆಟರಿಯವರ [illegible].

[illegible] ಕೆಲಸದಲ್ಲಿ [illegible] ಬುಡಾನ್ [illegible] ಇಲ್ಲ [illegible] ಹಣ ತೆರೆದುಕೊಂಡಿರುವ [illegible] ಮುಂದಕ್ಕೆ ಯಾರಾದರೂ ಅವನೊಡನೆ [illegible] ಹಣವನ್ನು ಕೊಡದವರಾಗಿಯೂ ಈ ಬಗ್ಗೆ [illegible] ಎಚ್ಚರವು ಬಂದಿದ್ದರೂ, [illegible] ಅವರ ಮಾಲೀಕರು ಜವಾಬ್ದಾರರಲ್ಲವೆಂದೂ ತಿಳಿಸಲಾಗಿದೆ.

ಇಲ್ಲಿಯ ಬಲ್ಮಠ ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಕಳೆದ ವಾರದಿಂದ [illegible] ಕೆಲಸಗಾರರ ಮುಷ್ಕರವು ಕಲೆದ್ದೋರಿದೆ. ಮೆನೇಜರರಾದ [illegible] ಕೆಲವರಿಗೆ ಫೈನ್ ಹಾಕಿದುದೇ ಇದಕ್ಕೆ ಕಾರಣವೆಂದೂ, [illegible] ಕೆಲಸಕ್ಕೆ ಹೋಗುವವರಿಗೆ ಮುಷ್ಕರಗಾರರು ಪಿಕೆಟ್ ಮಾಡುತ್ತಿ [illegible] ಗೊತ್ತಾಗಿದೆ. [illegible] ಗಲಭೆಯಾಗುವಂತೆ ಪೋಲೀಸ [illegible] ಹೆಡ್ ಆಫೀಸಿಗೆ ಕೆಲಸಗಾರರು ಅಟ್ಟ [illegible] ಉತ್ತರವನ್ನು ನಿರೀಕ್ಷಿಸುತ್ತಿರುವರು ಶ್ರೀ ಯು ಸಿ ಎಸ್ ಭಟ್ [illegible] ರಾಜಿ [illegible] ಮಾಡುತ್ತಿರು ವರು.

ಮಂಗಳೂರು ಸ್ವದೇಶಿ [illegible] ನಡೆಸಲ್ಪಡುವ [illegible] ಬಟ್ಟೆ ಫೆರಿದ [illegible] ಎತ್ತಲಾಗಿ ಈ ತಿಂಗಳ ಬಹುಮಾನವು ಎನ್ ಎಲ್ ಬಂಟ್ವಾಳಕಾರ್ ಇವರಿಗೆ ಸಿಕ್ಕಿರುತ್ತದೆ

ಬರುವ ವಾರದಲ್ಲಿ ಇಲ್ಲಿ ಹೆಲ್ತ್ ಎಂಡ್ ಬೇಬಿ ವೀಕ್ ಆಚರಿಸಲ್ಪಡುವುದು. ನಗರ ಸಭೆಯು ಇದಕ್ಕಾಗಿ ರೂ [illegible] ನ್ನು ಪ್ರತ್ಯೇಕಿಸಿಟ್ಟಿರುವುದು.

ಕಲ್ಲಿಕೋಟೆ ಮತ್ತು ಮೈಸೂರನ್ನು ಸಂಚರಿಸಿ ಮುಗಿದ ನಂತರ ಗಾಂಧಿಯವರು ಬೇಗನೇ ಮಂಗಳೂರಿಗೆ ಬರುವಂತಾದರೆ ಬರುವ ಜುಲೈ ತಿಂಗಳ ಮಳೆಯ ಬಾಧಕವನ್ನು ತಪ್ಪಿಸಿಕೊಳ್ಳಬಹುದೆಂದು ಸ್ಥಳೀಕ ಹರಿಜನ ಸೇವಾ ಸಂಘದವರು ಗಾಂಧೀಜಿಯವರಿಗೆ ತಿಳಿಸಿರುವರು.

ರೆವೆನ್ಯೂ ಆಫೀಸರರಾದ ರಾ। ಎಂ. ರಾಮಕೃಷ್ಣನವರು ಒಂದು ತಿಂಗಳ ರಜೆಯ ಮೇಲಿರುವರೆಂದು ತಿಳಿದುಬಂದಿದೆ.

ವರ್ಗದಾರರ ಪರಿಷತ್ತು ಪುತ್ತೂರಿನಲ್ಲಿ ತಾ [illegible] ನೇ ದಿನ ಸಂಜೆ ಜರಗಿತು. ಸುಮಾರು ೩೦೦೦ ಸಭಿಕರಿದ್ದರು. ರೈತರು ಎಲ್ಲಾ ತಾಲೂಕುಗಳಿಂದಲೂ ಬಂದಿದ್ದರು. ಸ್ವಾಗತಾಧ್ಯಕ್ಷರಾದ ದಿವಾನ್ ಬಹದ್ದೂರ್ ಮುಳಿಯ [illegible] ಹೆಗ್ಡೆಯವರ ಭಾಷಣ ನಂತರ ಸ್ವಾಮಿ ವೆಂಕಟಾಚಲ ಚೆಟ್ಟಿಯಾರ ಇಂಗ್ಲಿಷ ಭಾಷಣವನ್ನು ಶ್ರೀ ಎಂ. ಶಿವರಾಯರು ಕನ್ನಡದಲ್ಲಿ ಭಾಷಾಂತರಿಸಿ ಹೇಳಿದರು. ರಿಸೆಟ್ಲ್ ಮೆಂಟನ್ನು ನಿಲ್ಲಿಸಬೇಕೆಂದು ಠರಾವು ಮಾಡಿತು. ರೈವರ್ [illegible] ಕಷ್ಟನಷ್ಟಗಳನ್ನು ಪರಿಹರಿಸಬೇಕೆಂದು ಠರಾವಾಯಿತು. ಈ ವೇಳೆ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಪಂಚಾಯತ ಪರಿಷತ್ತು ಸೇರಿ ಕೆಲವು ಅಗತ್ಯ ಠರಾವುಗಳಾದುವು.

[illegible] ಹೈಸ್ಕೂಲ್ [illegible] ಗ್ರಾಮಸ್ಥರು [illegible] ಮಂಗಳೂರು [illegible] ಮಂಗಳೂರು ಸಿ. [illegible] ರೂ. [illegible] ಮೊಬಲಗು [illegible] ತಿಳಿದುಬರುತ್ತದೆ.

ಕಳೆದ [illegible] ಪತ್ರಿಕೆಗಳಲ್ಲಿ [illegible] ತಿಂಗಳ ತಾ. ೨೮ ವರೆಗೆ ಮುಸ್ಲಿಂ [illegible] ವಿದ್ಯಾಭ್ಯಾಸದ ಮತ್ತು [illegible] ಅಭಿವೃದ್ಧಿಗೋಸ್ಕರ ಜನಾಬ್ ಕೆ ಎಚ್ ಕೇಲ್ ಫರೀದ್ ಸಾಹೇಬ್ ಮತ್ತು ಅವರ ಮಿತ್ರರು [illegible] ರೂ. [illegible] ಆಗುತ್ತದೆಂದೂ, ಇನ್ನು [illegible] ಸರ್ವರೂ ಉತ್ತೇಜನ ಕೊಟ್ಟು ಈ ಫಂಡನ್ನು ಅಭಿವೃದ್ಧಿಪಡಿಸುವುದರಲ್ಲಿ ಪ್ರೋತ್ಸಾಹವನ್ನು ಕೊಡಬೇಕೆಂದೂ ಕಾರ್ಯದರ್ಶಿಯವರ [illegible].

ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ಟೂರ್ನಮೆಂಟಿನ ಕುರಿತು ಈ ಮೊದಲು ಪ್ರಕಟಿಸಿದ ಕಾರ್ಯಕ್ರಮಗಳಲ್ಲದೆ ಹಳೆ ಮತ್ತು ಈಗಿನ ವಿದ್ಯಾರ್ಥಿಗಳೊಳಗೆ ಕೆರಮ್ಸ್ ಟೂರ್ನಮೆಂಟನ್ನು ಆರಿಸಬೇಕೆಂದು ನಿರ್ಧರಿಸಲಾಗಿದೆ. ಡಬಲ್ಸ್ ಗೆ ಪ್ರವೇಶ ಫೀಸು ತಲಾ ಎರಡಾಣೆ, ಸಿಂಗ್ಲ್ಸ್ ಗೆ ೪ ಆಣೆ ಇದೇ ತಾ. ೧೨ನೇ ದಿನ ಪ್ರವೇಶ ಪುಸ್ತಕವು ಮುಚ್ಚಲ್ಪಡುವುದು ಸಂಚಾಲಕರು ಪೊಟ್ಸ್ ಎತ್ತಿ [illegible] ಆಟಗಾರರನ್ನು ಜುನಾಯಿಸುವರು. ಎಲ್ಲಾ ಎಂಟ್ರಿಗಳನ್ನೂ ಶ್ರೀ ಯು ಕೇಶವರಾವ್ ಬಿ. ಎ. ಎಲ್ ಟಿ ಉಪಾಧ್ಯಾಯ, ಕೆನರಾ ಹೈಸ್ಕೂಲ್ ಇಲ್ಲಿಗೆ ಕಳುಹಿಸತಕ್ಕದು

ಮೂಡಬಿದ್ರೆ — ಇಲ್ಲಿಯ ಶ್ರೀ ಚಂದ್ರನಾಥ ಸ್ವಾಮಿ ರೋವರ್ ಸ್ಕೌಟ್ ಕ್ರೂ ಇವರ ಆಶ್ರಯದಲ್ಲಿ ನಡೆಯುವ 'ಎಲ್ಲ್ಯ ಫ್ರೀ ಸ್ಕೌಟ್ ಸ್ಕೂಲ್ " ಅಥವಾ ದೊಡ್ಡವರ ಧರ್ಮಾರ್ಥ ರಾತ್ರಿ ಶಾಲೆಯ ವಾರ್ಷಿಕೋತ್ಸವವು ದಶಂಬರ ೧ನೇ ತಾರೀಕಿನ ದಿನ ೭ ಘಂಟೆಗೆ ಇಲ್ಲಿನ ಬೋರ್ಡ್ ಮಿಡ್ಲ್ ಸ್ಕೂಲಿನ ಮುಖ್ಯೋಪಾಧ್ಯಾಯರಾದ ರಾ ಉದ್ಯಾವರ ಭವಾನಿಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರುಗಿತು

ಇದೇ ತಾ ೧೩ನೇ ಬುಧವಾರ ಈಗ ಸರಸ್ವತೀ ಭವನಕ್ಕಾಗಿ ಹೊಸತಾಗಿ ನಿರ್ಮಿತವಾಗಿರುವ ಭವನದ ಉದ್ಘಾಟನ ಸಮಾರಂಭವು ಮತ್ತು ಅದೇ ದಿನ ಘಂಟೆ ೭ಕ್ಕೆ ಜೈನ ವ ಹಾಸಭೆಯೂ ಸೋಲಾಪುರದ ಶ್ರೀ ಧರ್ಮವೀರ ರಾವಜೀ ಸಖಾರಾಮ ದೋಶಿಯವರ ಅಧ್ಯಕ್ಷತೆಯಲ್ಲಿ ಜರುಗಲಿರುವುದು

ಕಿನ್ನಿಗೋಳಿ: — ದಿ ನೇಶನಲ್ ಕ್ಲಬ್ಬಿಗೆ ತಾ. ೧-೯-೩೩ ರಿಂದ ಧನಸಹಾಯ ಮಾಡಿದವರ ಹೆಸರು ಮತ್ತು ಮೊಬಲಗು ರೂಪಾಯಿ ೫ರಂತೆ ಶ್ರೀಗಳಾದ ಸದಾಶಿವ ಶೆಟ್ಟಿ ವಕೀಲ್ ಉಡುಪಿ ಕೆ ಶ್ಯಾಮರಾಯ ಶೆಟ್ಟಿ ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಉಡುಪಿ ರೂ ೩ರಂತೆ—ಎಚ್ ರಾಮಯಸೆಟ್ಟಿ ಉಡುಪಿ ತಾ ಬೋ ಪ್ರೆಸಿಡೆಂಟ್, ಕೆ ದೇಜಸೆಟ್ಟಿ ಪಟೇಲ್, ಕಡಂದಲೆ ಗುತ್ತು ಬ್ರಹ್ಮರ ಹಿರಿಮನೆ ಬೊಮ್ಮಯ ಸೆಟ್ಟಿ, ರೂಪಾಯಿ ೧ರಂತೆ—ಜಿ ಎಸ್ ಗಣಪತಿ, ಲೋಕಲ್ ಫಂಡ್ ಅಸಿಸ್ಟಂಟ್ ಇಂಜೀನಿಯರ್ ಮಂಗಳೂರು ಕೆ ಜಗನ್ನಾಥಶೆಟ್ಟಿ, ಡಿಸ್ಟ್ರಿಕ್ಟ್ ಬೋರ್ಡ್ ಆಫೀಸ್ ಕ್ಲಾರ್ಕ್, ಮಂಗಳೂರು ರಾಮಣ್ಣ ರೈ ಎಗ್ರಿಕಲ್ಚರಲ್ ಡೆಮನ್ಸ್ಟ್ರೇಟರ್ ಮಂಗಳೂರು ಡಾ। ಕೆ ಸಂಜೀವ ಹೆಗ್ಡೆ ಕೊಡಿಯಾಲಗುತ್ತು, ಮಂಗಳೂರು ಕೆದಿಂಜೆ ಸುಬ್ಬಯ ಹೆಗ್ಡೆ, ಜೆ ದಾಸಗ ಹೆಗ್ಡೆ ಮರ್ಚೆಂಟ್ ಉಡುಪಿ, ಟಿ ಎಸ್ ಕೇಳುನಂಬಿಯಾರ್, ಉಡುಪಿ ಕೆ ಅನಂತ ಸೆಟ್ಟಿ ಡೈರೆಕ್ಟರ್ ದಿ ಎಚ್ ಟಿ ಪಿ. ಸಿ. ಲಿಮಿಟೆಡ್ ಉಡುಪಿ, ಡಾ। ಕೆ. ವಿಟ್ಠಲ ಸೆಟ್ಟಿ ಕಾಪು, ಕೆ ದೇಜಪ್ಪಸೆಟ್ಟಿ, ಪಟೇಲ್ ಏಳಿಂಜೆ ಗ್ರಾಮ, ಮೇಲಿನ ಮಹನೀಯರು ಕ್ಲಬ್ಬಿನ ಮೇಲೆ ಪ್ರೀತಿಯಿಟ್ಟು ಸಹಾಯ ಮಾಡಿದ್ದಕ್ಕೆ ಕ್ಲಬ್ಬಿನ ಪರವಾಗಿ ಸೆಕ್ರೆಟರಿಯವರು ಸಂತೋಷಪಡುವುದಲ್ಲದೆ, ಈ ರೀತಿ ವಿದ್ಯಾಭಿಮಾನಿಗಳ ಪ್ರೋತ್ಸಾಹವು ಸಿಗುವಂತೆ ಹಾರೈಸುತ್ತಾರೆ

ಕಾರ್ಕಳ — ವಿದ್ಯಾಭಾಸೆಯ ಡೈರೆಕ್ಟರರು ತಾ. ೨೮ರ [illegible] ಕಾರ್ಕಳ ಬೋರ್ಡ್ ಹೈಸ್ಕೂಲನ್ನೂ ಗೋಮಟನನ್ನೂ ಸಂದರ್ಶಿಸಿ ಉಡುಪಿಯ ಕಡೆಗೆ ತೆರಳಿದರು. ಅವರ ಸ್ವಾಗತಕ್ಕಾಗಿ ಹೈಸ್ಕೂಲಿನಲ್ಲಿ [illegible] ವಿಧಾನಗಳಾಗಿದ್ದುವು.

[illegible] ಸಪ್ತಾಹವು ತಾ. ೧೮ ರ ದಿನ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಇವರಿಂದ ಆರಂಭಿಸಲ್ಪಟ್ಟದ್ದು ಪ್ರತಿ ದಿನವೂ ಪ್ರದರ್ಶನ ಭಾಷಣ ಮೊದಲಾದ ಕಾರ್ಯಕ್ರಮಗಳಿಂದಾಗಿ ವಿಜೃಂಭಣೆಯಿಂದ ನಡೆಯುತ್ತಲಿರುವುದು

ಶ್ರೀಯುತ ಕಟಪಾಡಿ ಶ್ರೀನಿವಾಸ ಶೆಣೈಯವರು ಸ್ಥಳೀಯ ವಿದ್ಯಾರ್ಥಿಗಳಿಗಾಗಿಯೇ ಏರ್ಪಡಿಸಿದ ಹಿಂದೀ ತರಗತಿಗಳಲ್ಲಿ ಕಾರ್ಕಳ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿಗಳೂ ಅಧ್ಯಾಪಕ ವರ್ಗವೂ ಒಳ್ಳೇ ಉತ್ಸಾಹವನ್ನು ತೋರಿಸುತ್ತಿರುವರು

ಫರಂಗಿಪೇಟೆ — ಕಳೆದ ತಾ. ೨೫ರಲ್ಲು ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಹರೇಕಳ ದಿ ಇ ಎಂ. ಶಾಲೆಯಲ್ಲಿ ಮೇರಮಜಲು ಶಾಲ ಉಪಾಧ್ಯಾಯ ಮಿ। ಜೆ ಎ ಡಿ ಸೋಜ ಇವರ ಅಧ್ಯಕ್ಷತೆಯಲ್ಲಿ ಜರಗಿತು

ಕಂಬ್ಯಾನ್ಸ್ ಮೋಟರ್ ಸರ್ವಿಸಿನಲ್ಲಿ—ಟಪ್ಪಾಲು ದ್ವಾರಾ ಕಳುಹಿಸಲಿಕ್ಕೆ ಆಗದ ಹಣ್ಣು ಹಂಪಲುಗಳು ಇತ್ಯಾದಿ ಪಾರ್ಸೆಲುಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಈ ವರೆಗೆ ಒಯ್ಯಲ್ಪಡುತ್ತಿದ್ದುವು ಈಗ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ನಿರಾಕರಿಸಿದ್ದಾರೆ ಇದರಿಂದ ಜನರಿಗೆ ಬಹಳ ತೊಂದರೆ ಅದನ್ನು ಸರಿಪಡಿಸಿ ಎಂದಿನಂತೆ ಪಾರ್ಸೆಲುಗಳನ್ನು ಸ್ವೀಕರಿಸುವ ಏರ್ಪಾಡು ಮಾಡುವರಾಗಿ ನಿರೀಕ್ಷಿಸಲಾಗಿದೆ.

ಉಡುಪಿ — ತಾ ೨ನೇ ಶನಿವಾರ ತಾ. ಬೋ ಆಫೀಸಿನಲ್ಲಿ ಅಪರಾಹ್ನ ೩ ಗಂಟೆಗೆ ಕುಂದಾಪುರ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಸದರಿ ಬೋರ್ಡಿನ ಸಭೆಯು ಸೇರಿತು ತಾ. ಬೋ ಅಧ್ಯಕ್ಷರ ಮೇಲೆ ತರಲಾದ ಅವಿಶ್ವಾಸದ ಠರಾವಿಗೆ ದಸ್ಕತು ಹಾಕಿದ ಹತ್ತು ಮಂದಿಯಲ್ಲಿ ೬ ಮಂದಿ ಮಾತ್ರವೂ ಇನ್ನೊಬ್ಬರೂ ಸೇರಿ ಬರೇ ಏಳು ಮಂದಿ ಸದಸ್ಯರು ಹಾಜರಿದ್ದರು ಇತರ ಸದಸ್ಯರ ಗೈರುಹಾಜರಿಯಲ್ಲಿ ಶ್ರೀ ಎಂ. ವಿ ಕಾಮತರು ಠರಾವನ್ನು ಮುಂದೊತ್ತಿದರು ಮತ ಕೇಳಿಯಲಾಗಿ ೬ ಮಂದಿ ಅನುಕೂಲರಾಗಿ ಒಬ್ಬರು ಮಾತ್ರ ನಿಷ್ಪಕ್ಷ (ನ್ಯೂಟ್ರಲ್)ರಾಗಿದ್ದರೂ ೧೨ ಮಂದಿಯ ಮತಗಳಿಲ್ಲದುದರಿಂದ ಸದ್ರಿ ಠರಾವು ನಾಮಂಜೂರಾಯಿತು.

ಉಡುಪಿಯಲ್ಲಿ ಹಿಂದೀ ಕಾನ್ವಕೇಶನ್ ಬಗ್ಗೆ ಸಂಗ್ರಹವಾದ ಹಣದ ಜಮಾ ಖರ್ಚಿನ ವಿವರ—ಸಂಗ್ರಹವಾದ ಹಣ [illegible] ಖರ್ಚು—ನಾಟಕದ ಬಗ್ಗೆ [illegible] ಮಂಟಪಕ್ಕೆ [illegible] ಮುದ್ರಣ [illegible] ಇನಾಮಕ್ಕೆ [illegible] ಇತರ ಖರ್ಚು [illegible] ಒಟ್ಟು ಖರ್ಚು [illegible] ಶಿಲ್ಕು [illegible] ಆನೆ ಜನಾಬ್ ಖಾನ್ ಬಹದೂರ್ ಹಾಜೀ ಅಬ್ದುಲ್ಲಾ ಹಾಜೀ ಕಾಸಿಮ್ ಸಾಹೇಬ್ ಬಹದೂರ್ ಮತ್ತು ಶ್ರೀ ವಿಟ್ಠಲ ಕಾಮತರು ಎರಡು ಬೆಳ್ಳಿಯ ಪದಕಗಳನ್ನು ದಯಪಾಲಿಸಿರುವರು. ಕಾನ್ವಕೇಶನ್ ಜಯಶೀಲವಾಗುವಂತೆ ನಮಗೆ ನೆರವಾದ ಹಿಂದೀ ಪ್ರೇಮಿ ಮತ್ತು ಸಮಸ್ತ ಬಂಧುಭಗಿನಿಯರಿಗೆ ಈ ಮೂಲಕ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆಂದು ಕೆ [illegible] ಚಾರ್ ಇವರು ತಿಳಿಸುತ್ತಾರೆ

ಕಾಸರಗೋಡ — ಕಳೆದ ತಾ ೨೯ರಲ್ಲಿ ಇಲ್ಲಿಯ ಮಿಷನ್ ಸೆಕೆಂಡರಿ ಶಾಲೆಯ ಕರ್ನಾಟಕ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಶ್ರೀ ಎಂ. ಉಮೇಶರಾವ್, ಬಿ ಎ ಎಲ್ ಎಲ್ ಬಿ ಇವರು ಸಹಾನುಭೂತಿಯ ವಿಷಯವಾಗಿ ಸರಳವೂ ಬೋಧಕವೂ ಚಿತ್ತಾಕರ್ಷಕವೂ ಆದ ಭಾಷಣವಿತ್ತರು.

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ಯಾಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯಾಗರ್ ಸ್ನೋ,

ಕ್ಷೀರಬಲಾ, ಕಾರ್ಪೋಫ್ಲೋಜಿಸ್ಟಿನ್, ಯುಟೆರೀನಾ ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ

ಹೆಡ್ ಆಫೀಸು. — ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು — ದೇವಕಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಮುಖ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

Jubilee year! Jubilee year!

The Bombay Life Assurance Co. Ltd.,

Bombay.—Established 1908.

Chairman:—Sir Lalubhai Samaldas, Kt. C. I. E., J. P.

Wanted

ONE LADY ORGANISOR FOR EACH OF THE DISTRICTS OF SOUTH KANARA, COORG, BELLARY AND TWO FOR MYSORE STATE.

Either on pay or commission or both with reasonable Travelling Allowance. Only educated ladies need apply. Right opportunity to those who desire independant and respectable vocation.

Applications can be made to the undersigned giving full qualifications and whether they can guarantee business.

Apply to:— **KOCHIKAR BROTHERS,** Madras Branch Secretaries.

Vishveshwarapuram Circle, *Bangalore City* *or* Udipi, *South India.* *or* Post Box No. 337, *Mount Road, Madras.*

N B Intending candidates may interview by previous appointment with our Organizing Secretary (now in Bombay) who will be touring.

(25-8-33)

ಶ್ರೀಮಧ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0 ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1 ಅಶ್ವಗಂಧಾರಿಷ್ಟ ೧೬ಂ. ಔನ್ಸ್ ಬಾಟ್ಲಿ ಒಂದಕ್ಕೆ ರೂ 1-4-0 ಅಬಲಾಪ್ಯಾಯಕ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0 ಚ್ಯವನಪ್ರಾಶಲೇಹ ೧ ರಾತಲಿಗೆ ರೂ 2-8-0 ಅಭಯಾಮಲಕಿ ೧ ರಾತ್ಲಿಗೆ ರೂ 2 ಚಂದ್ರಮುಖ (ವಿಶೂಚಿಕೆಗೆ ರಾಮಬಾಣ) ನಾಲ್ಕು ಔನ್ಸಿಗೆ ರೂ 0-5-0 ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0 ಕ್ರಿಮಿಘಾತಿನಿ (ದದ್ರು, ತದ್ದಿಗೆ) ಡಬ್ಬಿ ೧ಕ್ಕೆ ರೂ 0-4-0 [illegible] ೧ ಔನ್ಸಿಗೆ ರೂ 0-6-0, ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ 0-8-0 ಮಹಾ ಚಿತ್ರಕ ತೊಲೆ ೧ಕ್ಕೆ ರೂ 1-0-0 ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 0-10-0 ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0. ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-0-0 ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 3-8-0

ನಮ್ಮ ಔಷಧಗಳು ದೊರೆಯುವ ಸ್ಥಳ:— ಮಂಗಳೂರು—ರಾಘವೇಂದ್ರ ರಂಗ ಪೈ ರಥಬೀದಿ, [illegible] ಕೊಡಿಯಾಲ್‌ಬೈಲ್ ಬೈಂದೂರು—ಕೆ ಪುತ್ತು ಕಾಮತ್ [illegible] ಗಂಗೊಳ್ಳಿ—ಬಿ ಸುರೇಂದ್ರ ನಾಯಕ್ ಕುಂದಾಪುರ—ಕೆ ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್ ಉಡುಪಿ—ಪಿ ಜನಾರ್ದನ ನಾಯಕ್ ಎಂಡ್ ಕೊ, ಪೈ ಫಾರ್ಮಸಿ, ಆರ್ ಎಸ್ ಶೆಣೈ, ರಥಬೀದಿ ಕಾರ್ಕಳ—ಎ ಪಿ ಶೆಣೈ ಕಾಪು—ಡಾಕ್ಟರ್ ಬಿ ಕೆ [illegible] ಭಟ್ಕಳ—ವಾಮನ ನರಸಿಂಹ ನಾಯಕ್. [illegible] ಭಗವಂತ ಮಲ್ಯ, ಆರ್ ಪಿ [illegible] ಕೆ [illegible] ಪೈ ಎಂಡ್ ಸನ್ಸ್, ಕೆ [illegible] ಎಂಡ್ ಸನ್ಸ್ ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, [illegible] ಕಟಪಾಡಿ, ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas, UDIPI.**

Branches Mangalore, Payyanur, Brahmavar, Kumta, Karwar, Hubli Honnavar, Bangalore & Cannanore

Authorised Capital Rs 5,00,000 Subscribed Capital Rs 1,00,000 Paid up Capital Rs. 30,000 Issued Capital Rs. 2,00,000

STATEMENT OF AFFAIRS OF THE SYNDICATE AS ON 31ST October 1933

LIABILITIES			ASSETS		
Paid up Capital	Rs	30,000-0-0	Loans on Land mortgage	Rs.	2,74,676-15-11.
Reserve & other funds	,,	20,250-5-0	Loans on Valuable Securities	,,	2,34,925-12-4,
Deposits		10,54,224-6-8,	Loans on Bills of Exchange Hundis and Pronissory Notes		4,75,518-6-3.
Due to Bankers	,	85,557-13-10	Investment on Shares of other Companies	,	43,575-0-0.
			On Deposits with other Bankers	,	1,15,000-0-0
Bills for Collection		29,202-0-1	Bills for collection (per contra)	,,	29,202-0-1
Sundries	,	1,20,760-8-5	Sundries	,	1,22,147-6-3.
			Cash in hand & with Bankers	,,	34,949-4-2.
Total Rs		13,29,994 13-0		Total Rs.	13,29,994 13-0.

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 8-11-1933.

P. A. Pai Bros.,
Managing Agents.

[illegible] ಮಾಡುವ ಅಭ್ಯಾಸವನ್ನು ನಿಲ್ಲಿಸಲಿಕ್ಕಾಗಿ—

[illegible] ಪ್ರಾಣತ್ಯಾಗದ [illegible] ಬರುತ್ತದೆ. [illegible] ಪ್ರಾಣತ್ಯಾಗಗಳಾದುವು. [illegible] ಪ್ರಾಣತ್ಯಾಗ ಯತ್ನಗಳಾದುವು. ಹೀಗೆ ಬೆಳೆಯುತ್ತಾ [illegible] ಪ್ರಾಣತ್ಯಾಗ ಯತ್ನಗಳಾದುವು [illegible] ಪ್ರಾಣತ್ಯಾಗಗಳಾದುವೆಂದು [illegible] ಬರುತ್ತದೆ. ಇವರಲ್ಲಿ [illegible] ಪುರುಷರು, [illegible] ಸ್ತ್ರೀಯರು. ಇಂತಹ ಪ್ರಾಣತ್ಯಾಗಗಳಿಗೆ ಕಾರಣವೇನು? ವಿಮರ್ಶಿಸಿದ್ದಲ್ಲಿ [illegible] ಇಲ್ಲವೆಂದೂ, ಜನರ ನಿಶ್ಶಕ್ತಿಯೇ ಇದಕ್ಕೆ ಕಾರಣವೆಂದೂ [illegible] ಬಂದಿದೆ. ಇಂಗ್ಲೆಂಡಿನಲ್ಲಿ ಆರೋಗ್ಯ ಖಾತೆಯ ಮಂತ್ರಿಯವ [illegible] ಸರ್. [illegible] ಸ್ಮಿತ್‌ವಿಕ್‌ರವರು ಈ ವಿಚಾರವಾಗಿ ದೀರ್ಘವಾಗಿ ವಿಚಾರಿಸುತ್ತಾ ಇಂತಹ ಪ್ರಾಣನಾಶವು ಅನಾವಶ್ಯಕವಾಗಿ ದೇಶದಲ್ಲಿ ನಡೆಯುತ್ತಿರುವುದನ್ನು ತಡೆಯಲು ಪ್ರಚಾರ ಕಾರ್ಯವನ್ನು ನಡೆಸಬೇಕಾಗಿಯೂ ಜನರ ರೋಗ, ಉದ್ವಿಗ್ನತೆ, ಜಿಗುಪ್ಸೆ, ಜೀವನ [illegible] ವಾದಗಳನ್ನು ಹೋಗಲಾಡಿಸುವುದಕ್ಕಾಗಿ ಹಲವು ವೈದ್ಯಕೀಯ [illegible] ಲಯಗಳನ್ನು ಸ್ಥಾಪಿಸಬೇಕೆಂದೂ ಯೋಚಿಸಿರುವರು.

ತಗಡಿಗೆ ಪೈಂಟ್ ಹಚ್ಚುವುದಾವಾಗ?

ಕೆಲವು ಪೈಂಟರರು ತಗಡಿಗೆ ಸಮಯ ಸ್ವಾರಸ್ಯದ ಪೈಂಟ್ ಕೊಡುವರು. ಹೀಗೆ ಅನುಚಿತ ಕಾಲದಲ್ಲಿ ಕೊಡಲ್ಪಟ್ಟ ರಂಗು, ತಗಡಿನ ಮೇಲೆ ಹೆಚ್ಚು ದಿನಗಳ ವರೆಗೆ ನಿಲ್ಲಲಾರದು. ಕೇಂಬ್ರಿಜ್‌ನ ಯು. ಆರ್. ಇವಾನ್ಸ್ ಎಂಬವರು ಹೇಳುವಂತೆ—ತಗಡಿಗೆ ಪೈಂಟ್ ಹಚ್ಚಲು ಬಿಸಿಲೇರಿದ ಸಮಯವೇ ಉಚಿತವೆಂದು ಗೊತ್ತಾಗಿದೆ. ಪೈಂಟ್ ಕೊಡಲ್ಪಟ್ಟಿರುವ ತಗಡು ರಾತ್ರಿಯಲ್ಲಿ ತಣ್ಣಗಾಗಿ ಅದರ ಮೇಲೆ ಅಗೋಚರವಾದ ಒಂದು ಬಗೆಯ ತೇವವು ಬಂದು ನಿಲ್ಲುತ್ತದೆ. ಈ ತೇವವು ಸೂರ್ಯನ ಬಿಸಿಲಿನಲ್ಲಿ ಮಾತ್ರ ಆರಿಹೋಗುತ್ತದೆ. ಈ ಪ್ರಾಥಃಕಾಲ ಪೈಂಟನ್ನು ಬಳಿದುಕೊಂಡರೆ ತಗಡಿನಲ್ಲಿ ಪೈಂಟ್ ನಿಲ್ಲುವುದಿಲ್ಲ. ಆದುದರಿಂದ ಪೈಂಟರರು ಮಧ್ಯಾಹ್ನ ಸಮಯದಲ್ಲೇ ತಗಡುಗಳಿಗೆ ಪೈಂಟ್ ಹಚ್ಚಬೇಕು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. 43/1933

ಫಾಸ್ಟಿನ್ ನೊರೊಂಞ—ಪೀಟರ್ ನೊರೊಂಞನ ಮಗ—ಉಡುಪಿ ತಾಲೂಕು ಕುಕ್ಕೆಹಳ್ಳಿ ಗ್ರಾಮ—ಅರ್ಜಿದಾರ.

ಮತ್ತು

1. ಮನುವೇಲ್ ಡೊಮೆಲೊ—ಅಲೆಕ್ಸ್ ಡೆಮೆಲೊ ಮಗ. 2. ಸೋಬಿನ ಮೆಂಡೋನ್ಸ ಬಾ—1ನೇಯ ಎದ್ರಿಯ ಹೆಂಡತಿ—ಎದ್ರಿರು.

1ನೇ ಎದ್ರಿ ಬೊಂಬಾಯಿ ಶಹರಿನಲ್ಲಿಯೂ, 2ನೇ ಎದ್ರಿಯು ಉಡುಪಿ ತಾಲೂಕು ಇನ್ನಂಜೆ ಗ್ರಾಮದಲ್ಲಿಯೂ ಇರುವವರು.

ಅರ್ಜಿದಾರನು ವಾದಿಯಾಗಿ ಎದ್ರಿರ ಮೇಲೆ ಇನ್ನಂಜೆ ಗ್ರಾಮ ಮುನ್ಸಿಫ್ ಕೋರ್ಟಿನಲ್ಲಿ ಹಾಕಿದ ಸಿ. ವ್ಯಾ. 9/33ನೇ ವ್ಯಾಜ್ಯದ ತೀರ್ಪಿನ ಮೇಲೆ ಅರ್ಜಿದಾರನು ಹಾಕಿದ ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಮೇಲ್ಕಂಡ ರಿವಿಜನ್ ಅರ್ಜಿಯು ತನಿಖೆಗೆ ತಾ. 11—12—1933ಕ್ಕೆ ಇಟ್ಟಿರುತ್ತದೆ. ಸದ್ರಿ 1ನೇ ಎದ್ರಿಯು ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಸದ್ರಿ ಅರ್ಜಿಗೆ ಆಕ್ಷೇಪಣೆಗಳೇನಾದರೂ ಇದ್ದರೆ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಆತನನ್ನು (Exparte) ಎಕ್ಸ್‌ಪಾರ್ಟಿ ಮಾಡಿ ಅರ್ಜಿ ತನಿಖೆ ನಡಿಸಲಾದೀತು.

ಉಡುಪಿ, [illegible] } T. Venkappa Hegde,
Vakil for Pititioner.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O. P. 19/1933.

ಸಿದ್ದಪ್ಪ ಹೆಗ್ಗಡೆ ಆದಿರಾಜ ಹೆಗ್ಗಡೆ ಅಳಿಯ ಶಿಶಿಲಗ್ರಾಮ ಪುತ್ತೂರು ತಾಲೂಕು—ಅರ್ಜಿದಾರ.

1. ದುಗ್ಗಮ್ಮ ಚೆಂಡಯ್ಯ ಹೆಗ್ಗಡೆ ಸೂಳೆ ಶಿಶಿಲಗ್ರಾಮ. 2. ಕುಸುಮಾಡಿ ವಿಮಲು ಹೆಂಗಸು ಮಗಳು, ಪುತ್ತೂರು ತಾಲೂಕು ಪಟ್ರಮೆ ಗ್ರಾಮದ ಉಳಿಯ—ಎದ್ರಿರು.

ಅರ್ಜಿದಾರನು, ಹಾಲಿವರ್ತಿತಹಟ್ಟೆ ಆದಿರಾಜ ಹೆಗ್ಗಡೆಯ ಬಾಬ್ತು ಬಾಕಿ ಹಣವು ವಸೂಲಿ ಕುರಿತು ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಬರೆದುಕೊಂಡ ಅರ್ಜಿಯು ತಾರೀಕು 11—12—1933ಕ್ಕೆ ತನಿಖೆಗೆ ಇಟ್ಟಿರುತ್ತದೆಂತಲೂ, ಆ ಕುರಿತು ಆಕ್ಷೇಪಣೆಗಳಿದ್ದಲ್ಲಿ ಸದ್ರಿ ತಾರೀಕಿಗೆ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದೆಂತಲೂ ತಿಳಿಯಪಡಿಸಲಾಗಿಯದೆ.

Puttur, 5—12—33 | B. Chidananda Rao,
Vakil for Pititioner.

ನೋಟೀಸು.

ಕದ್ರಿಯಲ್ಲಿರುವ ಮಿಜಾರ ತಿಮ್ಮಶೆಟ್ಟಿಯು ತಿಳಿಸುವುದೇನಂದರೆ—ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಆಭರಣಗಳ ಪಟ್ಟಿ ಬಂಗಾರಟ್ಟು ಕೊಟ್ಟನ ಮೇಲೆ ಪಡಕೊಂಡ ಸಾಲದ ಬಾಬ್ತು ಅಸಲು ಬಡ್ಡಿ ಏನೂ ವ್ಯಾದಿಗೆ ಕೊಡದೆ ಇದ್ದ ಕಾರಣ ರಿಜಿಸ್ಟ್ರಿ ನೋಟೀಸು ಬಿಟ್ಟಾಗ್ಯೂ ಅಸಲು ಬಡ್ಡಿ ಕೊಡದೆ ಇದ್ದ ಕಾರಣ ಸದರಿಯವರ ಆಭರಣಗಳು ಇದೇ 1933ನೇ ಇಸವಿ ದಶಂಬರ ತಾ. 20ರ ವರೆಗೆ ಅಸಲು ಬಡ್ಡಿ ತಂದುಕೊಟ್ಟು ಪಟ್ಟಿಯಲ್ಲಿ ತೋರುವ ಆಭರಣಗಳು ಬಿಡಿಸಿಕೊಂಡು ಹೋಗತಕ್ಕದ್ದು. ಇದಕ್ಕೆ ತಪ್ಪಿದರೆ ಉಳಿಯುವ ಎಲ್ಲಾ ಆಭರಣಗಳು ಇದೇ ತಿಂಗಳ ತಾ. 31ನೇ ದಿವಸ ಮಧ್ಯಾಹ್ನ ಗಂಟೆ 12ರ ಸಮಯಕ್ಕೆ ಕೋರ್ಟು ರಸ್ತೆಯಲ್ಲಿರುವ ವಕೀಲ್ ಗಣೇಶಶೆಟ್ಟಿಗಳ ಆಫೀಸಿನ ಎದುರು ಏಲಂ ಮಾಡಲಾದೀತು.

ಗುರ್ಪೂರ ಪೇಟೆಯಲ್ಲಿರುವ ಮುಡ್ಡ ರಾಘವೇಂದ್ರ ಪ್ರಭುಗಳ ಮಗ ರಾಮನ ಪ್ರಭು ಅಡವಿಟ್ಟ ತಾರೀಕು 15—1—1932 ಸಾಲದ ಮೊಬಲಗು ರೂ. 100. ಏಲಂ ತಾರೀಕು ವರೆಗೆ ಬಡ್ಡಿ ರೂ. 36.

ಗೋಳಿಕಟ್ಟೆ ಬಜಾರ ಕುಂಞಾರಳ ಮನೆಯಲ್ಲಿರುವ ಮರವೂರ ಸಯ್ಯದ್ ಬ್ಯಾರಿಯ ಮಗ ಹಮ್ಮಬ್ಬ ಬ್ಯಾರಿ, ಯಾನೆ ಉಂಞಾಬ್ಯಾರಿ (ಈ ಆಸಾಮಿ ಮೃತಪಟ್ಟಿದ್ದಾರೆ). ಅಡವಿಟ್ಟ ತಾರೀಕು 3—10—1928 ಸಾಲದ ಮೊಬಲಗು ರೂ. 105 ಏಲಂ ತಾರೀಕು ವರೆಗೆ ಬಡ್ಡಿ ರೂ. 100.

ಸಾಲೆ ಉಳ್ಯಾಟಿಟ್ಟು ಗ್ರಾಮದಲ್ಲಿರುವ ಚಯ್ಯಾಬ ಬ್ಯಾರಿಯ ಮಗ ಮಾಸ್ಟರ್ ಸುಲೆಮಾನ್ ಬ್ಯಾರಿ ಅಡವಿಟ್ಟ ತಾರೀಕು 12—2—1927 ಸಾಲದ ಮೊಬಲಗು ರೂ. 55. ಏಲಂ ತಾರೀಕು ವರೆಗೆ ಬಡ್ಡಿ ರೂ. 50.

ಸಾಲೆ ಉಳ್ಯಾಟಿಟ್ಟು ಗ್ರಾಮದಲ್ಲಿರುವ ಚಯ್ಯಾಬ ಬ್ಯಾರಿಯ ಮಗ ಮಾಸ್ಟರ್ ಸುಲೆಮಾನ್ ಬ್ಯಾರಿ ಅಡವಿಟ್ಟ ತಾರೀಕು 2—11—1927 ಸಾಲದ ಮೊಬಲಗು ರೂ. 52. ಏಲಂ ತಾರೀಕು ವರೆಗೆ ಬಡ್ಡಿ ರೂ. 46.

ಸಾಲೆ ಉಳ್ಯಾಟಿಟ್ಟು ಗ್ರಾಮದಲ್ಲಿರುವ ಚಯ್ಯಾಬ ಬ್ಯಾರಿಯ ಮಗ ಮಾಸ್ಟರ್ ಸುಲೆಮಾನ್ ಬ್ಯಾರಿ ಅಡವಿಟ್ಟ ತಾರೀಕು 20—7—1929 ಸಾಲದ ಮೊಬಲಗು ರೂ. 40. ಏಲಂ ತಾರೀಕು ವರೆಗೆ ಬಡ್ಡಿ ರೂ. 23.

ಗೋಳಿಕಟ್ಟೆ ಬಜಾರ ಪಳ್ಳಿ ಇದ್ದಿಬ್ಯಾರಿ ಮಗ ಪಳ್ಳಿ ಅಬ್ಬುಬ್ಯಾರಿ ಅಡವಿಟ್ಟ ತಾರೀಕು 2—1—1932 ಸಾಲದ ಮೊಬಲಗು ರೂ. 53. ಏಲಂ ತಾರೀಕು ವರೆಗೆ ಬಡ್ಡಿ ರೂ. 24.

ಬೈಲಕೊಳಂಬೆ ಗ್ರಾಮದಲ್ಲಿರುವ ತಲೆಕಳ ರಾಮಯ್ಯ ಅಳಿಯ ಚಾರುಕ್ಕಯ್ಯ (ಈ ಆಸಾಮಿ ಮೃತಪಟ್ಟಿದ್ದಾರೆ) ಅಡವಿಟ್ಟ ತಾರೀಕು 22—5—1929 ಸಾಲದ ಮೊಬಲಗು ರೂ. 110. ಏಲಂ ತಾರೀಕು ವರೆಗೆ ಬಡ್ಡಿ ರೂ. 95 ಆಗಿರುತ್ತದೆ.

ಮಿಜಾರ ತಿಮ್ಮಶೆಟ್ಟಿಯ ರುಜು.

ನೋಟೀಸು

ದಿ. ಕೆನರಾ ಬ್ಯಾಂಕ್ ಲಿಮಿಟೆಡ್, ಪುತ್ತೂರು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಿಂದ ಆಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಯಾ ಅದರ ಬಡ್ಡಿಯನ್ನು ವಾಯಿದೆಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರು ಮೃತಪಟ್ಟುದರಿಂದ ಹಿಂತಿರುಗಿ ಬಂದುದರಿಂದಲೂ ಈ ಮೂಲಕ ತಿಳಿಸುವುದೇನಂದರೆ:—ಸದ್ರಿಯವರಿಂದ ಬ್ಯಾಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ ವ ಬಡ್ಡಿಗೆ ಬಡ್ಡಿ, ರಿಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ಕೂಡಿಸಿ ಬರಬಹುದಾದ ಏವೇಜಿಗೆ ಅಡವಿಟ್ಟ ನಗಗಳನ್ನು ಇದೇ 1933ನೇ ಇಸವಿ ದಶಂಬರ 15ನೇ ಶುಕ್ರವಾರ ಮಧ್ಯಾಹ್ನ 2 ಘಂಟೆಗೆ ಬಹಿರಂಗವಾಗಿ ಬ್ಯಾಂಕಿನ ಆಫಿಸಿನಲ್ಲಿ ಏಲಂ ಮಾಡಲಾಗುವುದು.

L. 219/32 Kalle Poovani Hegde N/o Ammu Hegde Kabaka Village puttur Rs. 40/

Office of the Canara Bank Ltd., Puttur. Date 5—12—'33 } M. Krishnaraya Kamath
Agent.

Proclamation

In the Court of the Subordinate Judge of South Kanara.

O. S. NO. 87/1933

Between:—

1. Parameshwara Bhatta, 2. Anantha Padmanabha Bhatta—miners by next friend—3rd Plaintiff. 3. Radhamma Plaintiffs.

and

1. Mardithaya Mukyaprana Bhatta. 2. Padmavathi alias Krishnaveni, minor by guardian ad-litem Hatwar Nagappaya 3. The Official Receiver of South Kanara —Defendants.

Is hereby given that the above Suit has been filed by the Plaintiffs for division of the properties and that the suit is posted to 19—12—33 at 11 a. m. for hearing before the above Court. The creditors of the family of plaintiffs and defendants 1 & 2 are heareby informed that they may appear and urge their claims on or before the said date so that they may be provided for before the partition of the properties. Failing which the suit will be heard and decided in their absence.

Mangalore 4—12—1933 } **B. Vaikunta Baliga,**
Vakil for 3rd defendant.

ಪ್ರಕಟಣೆ.

1934ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 1ರಿಂದ 1935ನೇ ಮಾರ್ಚಿ ತಾ. 31ರ ವರೆಗೆ ಕಾಸರಗೋಡು ಸರಕಾರಿ ಆಸ್ಪತ್ರೆಗೆ ಆಹಾರ ಪದಾರ್ಥ ಮತ್ತು ಇನ್ನಿತರ ಆವಶ್ಯಕತೆಗಳನ್ನು ಒದಗಿಸಿ ಕೊಡುವರೆ ಡುಪ್ಲಿಕೇಟು ಸೀಲ್ಡ್ ಟೆಂಡರುಗಳನ್ನು 1934ನೇ ಇಸವಿ ಜನವರಿ ತಾರೀಕು 4ನೇ ಗುರುವಾರ ಅಪರಾಹ್ನ ಗಂಟೆ 2ರ ವರೆಗೆ ಕಾಸರಗೋಡು ಸರಕಾರಿ ಆಸ್ಪತ್ರೆಯ ಡಾಕ್ಟರರು ಸ್ವೀಕರಿಸುವರು.

ಟೆಂಡರಿನ ಶರ್ತಗಳ ಖಾಸ ಪ್ರತಿ, ಬೇಕಾದ ಸಾಮಾನುಗಳ ಪಟ್ಟಿ, ಟೆಂಡರುಗಳ ಫೋರ್ಮುಗಳನ್ನೆಲ್ಲಾ ಆಸ್ಪತ್ರೆಯ ಸಮಯದಲ್ಲಿ ಸದ್ರಿ ಆಸ್ಪತ್ರೆಯ ಡಾಕ್ಟರರವರಿಂದ ಪಡಕೊಳ್ಳಬಹುದು.

ಕಾಸರಗೋಡು [illegible] } P. V. S. Nair,
Civil Assistant Surgeon,

ಪ್ರಕಟಣೆ.

ಉಪ್ಪಿನಂಗಡಿ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನಕ್ಕೆ ಸಮ್ಮಂಧಪಟ್ಟ ಹತ್ತು ಸಮಸ್ತರ ವ ಸದರಿ ದೇವಸ್ಥಾನದ ಮೊಕ್ತೇಸರರ ತಿಳುವಳಿಕೆ ಬಗ್ಗೆ ಸದರಿ ದೇವಸ್ಥಾನದ 2ನೇ ಆಡಳಿತೆದಾರ ಯು. ನರಸಿಂಹ ಪೈಗಳ ಮಗ ಯು. ಪಾಂಡುರಂಗ ಪೈಯು ಈ ಮೂಲಕ ಪ್ರಕಟಿಸುವುದೇನಂದರೆ—ನನ್ನ ಖಾಸಗಿ ಅನಾನುಕೂಲತೆಗಳ ಸಮ್ಮಂಧ ಮುಂದಿನ ಆಡಳಿತೆ ನಡಿಸುವರೆ ನನ್ನಿಂದ ಅಸಾಧ್ಯವಾದ್ದರಿಂದ ಸದರಿ ನನ್ನ ಆಡಳಿತೆಸ್ಥಾನಕ್ಕೆ ನಾನು ಇದೇ ತಾ. 24-11—1933ರಲ್ಲು ಸದರಿ ದೇವಸ್ಥಾನದ 1ನೇ ಆಡಳಿತೆದಾರ ಸರಾಫ ವೆಂಕಟ್ರಾಯ ನಾಯ್ಕರ ವಶಾ ನನ್ನ ರಾಜಿ ಅರ್ಜಿ ರವಾನಿಸಿರುತ್ತೇನೆ ಎಂಬ ಸಂಗತಿಯು ತಿಳಿದಿರುವದು.

ಉಪ್ಪಿನಂಗಡಿ, ತಾ. 24—11—33 } ಯು. ಪಾಂಡುರಂಗ ಪೈ

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ **[ಹಣ ವಾಪಾಸು**

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಟುದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಪಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಪಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವಾಮಾಡುವ ಕಾಣೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವು ಆಗುವುದಿಲ್ಲ.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ನಿರಜಿ, S. M. C.

ಶುಕ್ರವಾರದಿಂದ ಶ್ರೀಮುಖ ಸಂವತ್ಸರದ ... ತಾರೀಖು ೭ ಶನಿವಾರದಿಂದ ಶ್ರೀಮುಖ ಸಂವತ್ಸರದ ... ತಾರೀಖು ೧೩ ಶುಕ್ರವಾರದ ವರೆಗಿನ ಪಂಚಾಂಗ.
(ಗ್ರಹಣದ ... — ಹಾರ್ಪ್ಪ್ಪ).

	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ		ಸೂರ್ಯ ಉ	ಸೂರ್ಯ ಅಸ್ತ
9	ಶನಿ	೭	೪೧||	ಮೂಲ	೧೭೬	೨೪	6 43	6. 2
೧	ರವಿ	೮	೪೩|	ಪೂರ್ವಾಷಾಢ	೨೦||	೨೫	6 44	6. 3
೧	ಸೋಮ	೯	೪೩|	ಉತ್ತರಾ	೨೩|	೨೬	6 44	6 3
೭	ಮಂಗಳ	೧೦	೪೦	ಶ್ರವಣ	೨೩|	೨೪	6 44	6. 9
3	ಬುಧ	೧೧	೩೬|	ಧನಿಷ್ಠಾ	೨೦	೨೮	6 40	6 4
4	ಗುರು	೧೨	೩೦	ಶತಭಿಷ	೧೬	೨೯	6 45	6. 4
5	ಶುಕ್ರ	೧೩	೨೩|	ಪೂರ್ವಾಭಾದ್ರ	೯೧	೨೯	6 6	6 0

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನ		Minimum ಕಡಿಮೆ		Rainfall ಮಳೆ ದಿನದ ಮಳೆ	ಒಟ್ಟು ಮಳೆ.
23	89—	2	73—	2	—	—
24	90—	1	70—	5	—	—
25	87—	3	69—	2	—	—
26	89—	4	68—	5	—	—
27	90—	0	73—	4	—	—
28	88—	6	70—	2	—	—
29	89—	4	66—	2	—	160-25

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಆ	ವರೆಗೆ ರೂ	ಆ
ಹೊಸ ರಾಶಿ ಅಕ್ಕಿ	3—	6	3—	12
ಹಳೆ ಮುಕ್ತಿ	5—	4	5	12
ಉದ್ದು	4 —	4	5—	0
ಹುಗ್ಗಿ	4—	4	4—	10
ಊರ ಅವ್ವಲ್ ಬೆಲ್ಲ	4—	10	—	4
ರಂಗೂನು ಬೆಲ್ಲ ಗೋಣಿ ಗಳ್ಳೆ	5—	10	6—	2
ಎಲ್ಲೂರು ಬೆಲ್ಲ ಮುಡಿ ಗಳ್ಳೆ	4	4	4—	8
ಗೋಧಿ ಗೋಣಿ ಗಳ್ಳೆ	11—	8	12—	8
ಹೊಗಂ ಗೋಣಿ ಗಳ್ಳೆ	9—	4	11—	0
ಹುರುಳಿ ಗೋಣಿ ಗಳ್ಳೆ	5—	10	5	5
ಕಡಲೆ ಗೋಣಿ ಗಳ್ಳೆ	9—	8	12	8
ತೊಗರಿಬೇಳೆ ಗೋಣಿ ಗಳ್ಳೆ	10—	8	1[illegible] —	0
ಉದ್ದು ಗೋಣಿ ಗಳ್ಳೆ	8	8	9—	0
ಹೆಸರು ಗೋಣಿ ಗಳ್ಳೆ	8	0	9—	0
ಊರುಬೆಲ್ಲ ಖಂಡಿ ಗಳ್ಳೆ	35—	0	36—	4
ಉಪ್ಪು ಗೋಣಿ ಗಳ್ಳೆ	5—	4	5—	12
ಕೊಬ್ರಿ ಖಂಡಿ ಗಳ್ಳೆ	4[illegible]—	0	55—	0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	6—	8	17—	0
ಎಳ್ಳೆಂಡ ಖಂಡಿ ಗಳ್ಳೆ	20—	0	21—	4
ಕೊಬ್ರಿ ಎಣ್ಣೆ ಮಣ ಗಳ್ಳೆ	3—	4	4—	4
ಎಳ್ಳೆಣ್ಣೆ ಮಣ ಗಳ್ಳೆ	5—	0	6—	0
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳೆ	7—	4	8—	12
ಸೋರಿನ ಸಕ್ಕರೆ ಮಣ ಗಳ್ಳೆ	3—	14	4—	0
ಹೊಸ ಮೆಣಸು	6	14	8—	0
ಸಾಸಿವೆ ಮುಡಿ ಗಳ್ಳೆ	5—	0	4—	8
ಕಾಳುಮೆಣಸು ಖಂಡಿ ಗಳ್ಳೆ	120—	0	0—	0
ಮೆಂತ್ಯೆ ಮಣ ಗಳ್ಳೆ	20—	0	23—	0
ಗೇರುಬೀಜ ಮುಡಿ ಗಳ್ಳೆ	3—	8	2—	10
ಕಟ್ಟಿಗ ಖಂಡಿ ಗಳ್ಳೆ	42—	0	44—	0
ಸಾಂಬ್ರಾಣಿ ತಗಡು ಮಣ ಗಳ್ಳೆ	9—	10	9—	12
ಸಾಂಬ್ರಾಣಿ ಪಾತ್ರೆಗಳು ಮಣ ಗಳ್ಳೆ	13—	8	14—	8
ಚೀಪಟ್ಟೆ ಸೇರು ಗಳ್ಳೆ	14—	12	15—	0
ಹಿತ್ತಾಳೆ ತಗಡು ಮಣ ಗಳ್ಳೆ	9—	0	9—	8
ಶಿವನು ಗಳ್ಳೆ	20—	0	20—	8
ಹುಣಿಸೆ ಹುಳಿ ಹಿಂಡಿ ಗಳ್ಳೆ	35—	0	40—	0
ನೇಟಿವ್ ಕಾಫಿ ಖಂಡಿ ಗಳ್ಳೆ	200—	0	250—	0
ಫಿಟೇಂ ಕಾಫಿ ಖಂಡಿ ಗಳ್ಳೆ	250—	0	260—	0
ಹಳೆ ಅಡಿಕೆ.	105—	0	110—	0
ಹೊಸ ಅಡಿಕೆ	70—	0	75—	0

THE CANARA PUBLIC CONVEYANCE CO., LTD. MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಂತಹರ ಪ್ರತಿದಿನವೂ ನಾಲ್ಕು ಸಾರಿ ಕಂಕನಾಡಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ, ಒಂದೇ ಶಿಲೆಯಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನ ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧|| ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆ ತಲಪಬಹುದು

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,
The Canara Public Conveyance Company Ltd Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ
ಮಂಗಳೂರಿನಿಂದ — ಮುಂಬಾಯಿಗೆ
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು — ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ದರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರಪ್ರಪಂಚ

(ಪ್ರಕಟಿತ ಪತ್ರಗಳಲ್ಲಿ [illegible] ಎಲ್ಲಾ [illegible] ಕೊಡಲ್ಪಡುವುದು. [illegible] ಲೇಖಕರಿಗೆ [illegible] ಲೇಖನಗಳು [illegible] ಯುಕ್ತ ರೀತಿಯಲ್ಲಿ ಬರೆಯಲ್ಪಡಬೇಕು. (ಸಂ. ಸ್ವ.)

ಶ್ರೀಂಗೇರಿ ಪುರವಾಸಿಗೆ ಉತ್ತರ.

ತಾ. ೧೫—೧೧—೩೩ನೆ ರಾಷ್ಟ್ರಬಂಧು ಪತ್ರಿಕೆಯಲ್ಲಿ ಶ್ರೀಯುತ ಅಂಬುರಾಯ ಶರ್ಮರ ಶಿರಚ್ಛೇದ ದೀಕ್ಷೆಯ ಆಂದೋಳನ ಎಂಬ ಶಿರೋನಾಮೆಯ ಮೇಲೆ ಬರೆದ ಲೇಖನವನ್ನು ನೋಡಿದೆನು. ನಾನು ಶ್ರೀ ಶರ್ಮರ ಆಂದೋಳನದ ಪತ್ರವ್ಯವಹಾರ ಮೊದಲಾದ್ದನ್ನು ಪ್ರತ್ಯಕ್ಷವಾಗಿ ನೋಡಿದವನಾಗಿದ್ದೇನೆ. ಪುರವಾಸಿಯು ಶರ್ಮರ ಮೇಲೆ ಹೊರಿಸಿದ ಅಪವಾದಗಳಿಗೆ ಬುಡವಿಲ್ಲವೆಂದು ಹೇಳಬಹುದಾಗಿದೆ. ಈ ಲೇಖಕರು ತಮ್ಮ ವಿಳಾಸವನ್ನು ಕೊಡಲು ಅಂಜುವುದು ಮತ್ತು ಸಿರಚ್ಛೇದ ದೀಕ್ಷೆಯ ಆಂದೋಳನ ಎಂಬ ಶಿರೋನಾಮೆಗೆ ತಕ್ಕ ಉತ್ತರವನ್ನು ಬರೆಯದೆ ಶ್ರೀ ವಿದ್ವಾನ್ ಕೆ. ಕೇಶವಶಾಸ್ತ್ರಿಗಳ ಹೇಳಿಕೆಯಂತೆ ಈ ಲೇಖನವನ್ನು ಬರೆದಿದ್ದಾಗಿದೆ ಎಂಬು ಈ ಲೇಖಕರ ಲೇಖನವೇ ಸಾರುತ್ತದೆ. ಶ್ರೀ ಶಾಸ್ತ್ರಿಗಳ ಮತ್ತು ಶರ್ಮರ ಪತ್ರವ್ಯವಹಾರವು ಹೊರ ಬಿದ್ದಲ್ಲಿ ಈ ಲೇಖಕರು ತುಟಿ ಪಿಟಕ್ಕೆನ್ನದಿರಲಾರರು. ಶ್ರೀ ಶರ್ಮರ ಆಂದೋಳನವನ್ನು ನ್ಯಾಯವಾದ ರೀತಿಯಲ್ಲಿ ಬಗೆಹರಿಸಲು ಹಿಂಜರಿದ ಮತ್ತು ಲೇಖನ, ಬೆದರಿಕೆ ಮೊದಲಾದ ಅಡ್ಡ ಹಾದಿಯ ಈ ನಡವಳಿಕೆಗಳಿಂದ ಜಗದ್ಗುರು ಮಹಾಪೀಠವಾದ ಈ ಶ್ರೀಂಗೇರಿ ಸಂಸ್ಥಾನಕ್ಕೆ ಅಪಯಶಸ್ಸನ್ನು ಉಂಟುಮಾಡುವುದು ಸಾಧುವಾದದ್ದಲ್ಲವೆಂದು ಒತ್ತಿ ಹೇಳುತ್ತೇನೆ.

ಸಂಸ್ಥಾನದಲ್ಲಿ ಆಡುತ್ತಿರುವುದು ಕನ್ನಡ ಭಾಷೆ. ಅದು ಮಾತೃಭಾಷೆಯು. ಅಲ್ಲಿ ಸೇರಿಯಬಹುದಾದ ಮಹಾಜನಗಳೂ ಸಹ ಕನ್ನಡಿಗರೇ. ಅಂದಮೇಲೆ ಸಂಸ್ಕೃತದಲ್ಲಿ ಶ್ರೀ ಶರ್ಮರ ಸಂಶಯ ನಿವಾರಣೆಗೆ ಪ್ರಯತ್ನಮಾಡುತ್ತಿರ. ಪುದರ ಮರ್ಮವು ಅಬಲತೆಯ ಭೀತಿ ಎಂದು ಧಾರಾಳವಾಗಿ ಊಹಿಸಬಹುದಾಗಿದೆ. ಈಗಲೂ ಈ ಕುಂಟಾಟದ ಮಾರ್ಗವನ್ನು ಬಿಟ್ಟು, ಶರ್ಮರ ಸಂಶಯನಿವಾರಣೆ ಮಾಡಿ ಸಂಸ್ಥಾನದ ಉತ್ತರೋತ್ತರಾಭಿವೃದ್ಧಿಯನ್ನು ಬಯಸುವುದು ಮೇಲು.

ಪ್ರತ್ಯಕ್ಷದರ್ಶಿ, ಟಿ. ಹಾಲಪ್ಪ.

ಮೂಲ್ಕಿ ಶ್ರೀ ಬಪ್ಪನಾಡು ದುರ್ಗಾದೇವಿ ದೇವಳಕ್ಕೆ.

"ಯಾರೇ ಆಗಲೀ ಒಳ ಬರಲು ಆಕ್ಷೇಪವಿಲ್ಲ" ಎಂಬುದರ ಕುರಿತು ಆಕ್ಷೇಪವಿದೆಯೊ ಏನೆಂದು ಭಕ್ತರೊಡನೆ ಚರ್ಚಿಸಿ ಇತ್ಯರ್ಥಪಡಿಸಲಾಗಬಹುದೆಂದು ಮೊಕ್ತೇಸರರಿಗೆ ತಾ. ೨೪-೯-೩೩ರಲ್ಲಿ ಕಾಗದ ಬರೆದೊಂದು ವಿನಂತಿಸಿದಂತೆ ಮೊಕ್ತೇಸರರು ತಾ. ೧೫—೧೧—೩೩ರಲ್ಲಿ ಮುಲ್ಕಿ ಸೀಮೆಯ ೯ ಮಾಗಣೆಗಳಿಗೆ ಸೇರಿದ ಭಕ್ತರನ್ನು ಅಷ್ಟಾಂತ್ರಿ ಸೀಮೆಯ ಕೂಟದ ಸಾಂಪ್ರದಾಯದಂತೆ ರಾಜೇಶ್ರಿ ತಾಪೋತರು ಕೂಡಾ, ಇದ್ದು ವಿಷಯವನ್ನು ಕೆಲವು ಮಟ್ಟಿಗೆ ಮಾತ್ರ ಚರ್ಚಿಸಲಾಗಿ, ಎಲ್ಲವರನ್ನೂ ಪ್ರವೇಶಿಸ ಬಿಡುವುದು ಸರಿಯೆಂದು ಪರ ಊರಿನಿಂದ ಬಂದಿದ್ದ ರಾ। ಪಣಿಯಾಡಿ, ನಾರಾಯಣ ಕಿಲ್ಲೆ ಮತ್ತು ಪುರೋಹಿತ್ಯಾಯರುಗಳ ಭಾಷಣವಾಗಿ, ಅಕೃರ್ಥಕ್ಕೆ ಬರುವ ಮೊದಲು ಇಷ್ಟಷ್ಟು ಎರಡು ಕಡೆಯ ಅಭಿಪ್ರಾಯಗಳನ್ನು ಕೇಳುವುದು ನ್ಯಾಯ ವಿರುದ್ಧವೆಂಬುದರಿಂದ ಇದೇ ಬರುವ ಸಂಕ್ರಮಣ, ದಶಂಬರ ೩೧ನೇ ತಾರೀಕು ಮಧ್ಯಾಹ್ನ ೧ ಘಂಟೆಗೆ ಕೂಡಿಬರಬೇಕಾಗಿ ಸಭೆಯನ್ನು ಮುಂದರಿಸಿದ್ದಾರೆ.

ನ್ಯಾಯವಾದ ಒಂದು ಇತ್ಯರ್ಥಕ್ಕೆ ಬರುವಂತೆ ಸೀಮೆಯವರಿಗೆ ಕೃಷ್ಣಪಕ್ಷದ ಹೆಚ್ಚಿನ ಅನುಭವಗಳನ್ನು ತಿಳಿಸುವ ಬಗ್ಗೆ ಊರಿನ ಪರ ಊರಿನವರ ಮಹನೀಯರು ಬರುವುದರಲ್ಲಿ ಯಾ ಸಂಕೋಚವಿರುವುದು. ಅಭಿಪ್ರಾಯಗಳನ್ನು ಕಾಗದದ ಮುಖಾಂತರ ತಿಳಿಸುವುದೂ ಸ್ವೀಕಾರ್ಯವಾಗುವುದು.

ಬಪ್ಪಬ್ಯಾರಿ ಎಂಬವರು ಹಡಗಿನ ವ್ಯಾಪಾರ ಮಾಡುವಾಗ ಈ ಪ್ರಾಂತ್ಯದಲ್ಲಿ ದೇವಿವಿಗ್ರಹವು ಹಡಗಿಗೆ ತಾಗಿ ರಕ್ತಮಯವಾದುದಾಗಿಯೂ, ಬಪ್ಪಬ್ಯಾರಿಗಳು ಈ ದೇವಸ್ಥಾನವನ್ನು ಸ್ಥಾಪಿಸಿದರಾಗಿಯೂ [illegible] ಮಾತುಗಳೂ, ದೀಪಟಿಗೆ ಅರತಿಯಲ್ಲಿ ಬಪ್ಪಬ್ಯಾರಿಗಳ ಹೆಸರನ್ನು ಹೇಳುವುದೂ ಉತ್ಸವಾದಿಗಳಲ್ಲಿ ದೇವರ ಮೆರವಣಿಗೆಯ ಕಾಲ ಮಹಮ್ಮದೀಯರ ಜೊತೆ ಮನೆ ಬಳಿ ಸದರಿ ಜಾತಿಯ ಮುಖ್ಯಸ್ಥರಿಗೆ ಪ್ರಸಾದವನ್ನು ಕೊಡುವುದೂ ಈಗಲೂ ಸಾಂಪ್ರದಾಯವಾಗಿ ನಡೆಯುತ್ತದೆ.

ದೇವಸ್ಥಾನದ ಒಳ ಅಂಗಣಗಳಿಗೆ ಮಹಮ್ಮದೀಯ, ಕ್ರೈಸ್ತ ಮತ್ತಿತರ ಬಂಧುಗಳು ಬಂದುಹೋಗುವರೆ ಆಕ್ಷೇಪವಿರಲಾರದು. ಹಿಂದು ಬಂಧುಗಳೆಲ್ಲರೂ ಅದೇ ರೀತಿಯ ಅನುಕೂಲತೆ ಯಾಕೆ ಪಡೆಯ [illegible] ಯ ವಿಚಾರ ಮಾತ್ರ ಸಭೆಯ ಮುಂದಿರುವುದಲ್ಲವೆ [illegible] ಮಹಾಯುದ್ಧ ಪ್ರವೇಶದ ಅಲೋಚನೆಯು [illegible]

M. R. Pania.

ಪಂಚಾಯಿತಿಗಳ ಮೂಲಕ ಗ್ರಾಮಾಭಿವೃದ್ಧಿ!

ಲೇಖ—೨

ಕಳೆದ ಸಂಚಿಕೆಯಿಂದ ಮುಂದುವರಿಸಿದುದು.

ಕಟ್ಟೋಣಗಳ ಅಭಾವವೂ ಗ್ರಾಮಸ್ಥರ ಸೌಖ್ಯವನ್ನೇ ಅವಲಂಬಿಸಿರುತ್ತದೆ. ಕೆಲ ಕಡೆಯ ಶಾಲೆ ಕಟ್ಟೋಣಗಳನ್ನು ನೋಡಿದರೆ ನಮ್ಮವರ ದಾರಿದ್ರ್ಯದ "ನಗ್ನಚಿತ್ರ"ವೇ ಕಣ್ಣೆದುರಿಗೆ ಸುಳಿದಂತಾಗುತ್ತದೆ. ಹಳ್ಳಿಗಳಲ್ಲಿ ಎಳೆ ವಯಸ್ಸಿನ ಬಾಲಕ ಬಾಲಿಕಿಯರ ಸಂಖ್ಯೆಯಲ್ಲಿ ಕಾಲಂಶದಷ್ಟು ಶಾಲೆಗೆ ಬರುವುದಿಲ್ಲ. ಬಡತನ, ಅನಾರೋಗ್ಯ ಇವೇ ಮೊದಲಾದ ನೆಲೆಗಳನ್ನು ಹೇಳುತ್ತಾರೆ. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ಬಡತನ, ಅನಾರೋಗ್ಯವು ಆ ಕಾರಣಗಳಲ್ಲೊಂದಾಗಬಹುದೇ ವಿನಹಾ ಅದೇ ಅಲ್ಲ. ಮುಂಡಾಜೆಯಲ್ಲಿ ಪಂಚಾಯತ ಬೋರ್ಡು ಶಾಲೆಯಿದೆ. ಎರಡು ಜನ ಉಪಾಧ್ಯಾಯರಿದ್ದಾರೆ. ಸುಂದರವಾದ ಕಟ್ಟಡವಿದೆ. ಗ್ರಾಮದಲ್ಲಿ ಶಾಲೆಗೆ ಬರಲ್ಪಡುವಾದ ಮಕ್ಕಳ ಸಂಖ್ಯೆ ೨೦೦ರಷ್ಟಿದೆ. ಆದರೆ, ಸರಾಸರಿ ಹಾಜರಿ ೨೫ ಮಾತ್ರ. ಇದರ ಅರ್ಥವೇನು? ಬಡತನವೆನ್ನುತ್ತಾರಾದುದರಿಂದ ಶಾಲೆಗೆ ಬರುವ ಮಕ್ಕಳಿಗೆ ಊಟದ ಸೌಕರ್ಯ, ಸ್ಲೇಟು ಪುಸ್ತಕಗಳಿಗೆ ಸಹಾಯ, ಶಾಲಾ ಸಂಬಳ ಮಾಫಿ, ಇಷ್ಟೆಲ್ಲ ಒದಗಿಸಿಕೊಟ್ಟು, ಶಾಲೆಗೆ ಮಕ್ಕಳನ್ನು ಕಳುಹಿಸಿರಯ್ಯಾ! ಎಂದರೆ 'ಊಹುಂ' ಎನ್ನುತ್ತಾರಲ್ಲ! ಇದರ ಕಾರಣವು ಬೇರೇನೂ ಅಲ್ಲ, ಪರಿಸ್ಥಿತಿಯ ಅಜ್ಞಾನ! ಮುಂಡಾಜೆಯಲ್ಲೇ ನೋಡಿ—ಉತ್ಸಾಹಿಗಳ ಪ್ರಯತ್ನದಿಂದ ಕೆಲವು ಆದಿದ್ರಾವಿಡರ ಮಕ್ಕಳು ಶಾಲೆಗೆ ಬಂದರು. ಮರುದಿನಕ್ಕೇ ಎಲ್ಲ ಹುಡುಗರೂ ಹೊರಕ್ಕೆ! ಹಾಗೆಂದು ಬೇರೆ ಸಂದರ್ಭಗಳಲ್ಲಿ ಆದಿದ್ರಾವಿಡರ ಸ್ಪರ್ಶವು ಅವರಿಗೆ ಬಾಧಿಸುವುದಿಲ್ಲ. ಆದರೆ ಶಾಲೆಯಲ್ಲಿ ಮಾತ್ರ—ಅದೂ ಎಳೆ ಮಕ್ಕಳ ಜೊತೆಗೆ! ಸಹವಾಸದ ದುಷ್ಫಲವು ಆಗದೆ ಇರಲಾರದು. ಇದು ಅವರ ವಾದ ಶೈಲಿ. 'ಅಂತೂ ಇಂತೂ' ಎಂಟ ಈಗಿನೋ ಸ್ವಲ್ಪಮಟ್ಟಿನ 'ಗೋಡೆ—ಭೇದ'ದಿಂದ ಎಲ್ಲ ಮಕ್ಕಳೂ ಬರತೊಡಗಿದ್ದಾರೆ. ಆದರೂ ಸರಾಸರಿ ಹಾಜರಿ ೨೫ ದಾಟುವುದಿಲ್ಲ. ಇದರಂತೆಯೇ ನಮ್ಮ ಜನಾಂಗವು ಅಭಿವೃದ್ಧಿಗೊಳ್ಳುವುದಾದರೆ, ಅದಕ್ಕಿಂತ ಮೊದಲು ಸ್ವಪ್ನದ ಹಿಂದೀಕರಣವು ಆದಿತೆನ್ನಬಹುದು. ಈ ತೊಂದರೆಯ ಪರಿಹಾರಕ್ಕೆ, ಹಳ್ಳಿಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಬೇಕು. ಆದರ ವ್ಯವಸ್ಥೆಯನ್ನು ಯುಕ್ತ ಕಂಡಂತೆ ಯೋಗ್ಯ ಪಂಚಾಯತ ಬೋರ್ಡುಗಳಿಗೆ ವಹಿಸಿ ಕೆಲಸವನ್ನು ಪ್ರಾರಂಭಿಸುವುದು ಅತೀ ಅಗತ್ಯವಾಗಿದೆ.

ಪಂಚಾಯತ ಬೋರ್ಡುಗಳ ವಿದ್ಯಾ ಪ್ರಚಾರದ ಇನ್ನೊಂದು ಸಾಧನ—ಪುಸ್ತಕ ಭಂಡಾರ! ಸರಕಾರದ ಸಹಾಯದಿಂದಲೇ ಹೆಚ್ಚಿನ ಪುಸ್ತಕಗಳನ್ನು ಪಡೆದು ಸ್ಥಾಪಿಸಿದ ಪುಸ್ತಕ ಭಂಡಾರಗಳು ಹತ್ತು ಇವೆ. ಜುಮ್ಲಾ ಪುಸ್ತಕಗಳ ಸಂಖ್ಯೆ ೧೦೦೦ದಷ್ಟು ಇರಬಹುದು ಪಟ್ಟಿಯಲ್ಲಿ! ಹಳ್ಳಿಗರಿಗೆ ಬೇಕಾದ ಪುಸ್ತಕಗಳ ಬದಲು ಯಾವ್ಯಾವುದೇ ಪುಸ್ತಕಗಳ ಸಂಖ್ಯೆಯೇ ಹೆಚ್ಚು. ಕೃಷಿ, ಆರೋಗ್ಯ, ವಿದ್ಯೆ, ಸಹಕಾರದ ವಿಷಯವನ್ನೊಳಗೊಂಡ ಪುಸ್ತಕಗಳೇ ಇಂತಹ ಪುಸ್ತಕಾಲಯಗಳಲ್ಲಿ ಬೇಕಾದುವು. ಈ ಲೈಬ್ರರಿಗಳು ಇದ್ದಲ್ಲಿಯೇ ಇರುವುದಕ್ಕಿಂತ ಪ್ರತ್ಯೇಕ ನಮ್ಮ ತಾಲೂಕಿನ ಮುಖ್ಯ ಕೇಂದ್ರಗಳಲ್ಲಿ ಸಂಚರಿಸುತ್ತಿರುವ ಚರ ವಾಚನಾಲಯದಂತೆ, ಆಸಪಾಸಿನ ಹಳ್ಳಿಗಳಲ್ಲಿ ತಿರುಗುವಂತೆ ಮಾಡಿದರೆ ಹೊಂಚ ಹೆಚ್ಚಿನ ಲಾಭವಾದೀತು.

ಈ ಪ್ರಾಂತ್ಯದ ಹಳ್ಳಿಗಳಲ್ಲಿ ಹೆಚ್ಚಿನ ಬಡಜನರು ಹೊಳೆ, ಹಳ್ಳ, ಕೊಳ, ತೋಡುಗಳಿಂದಲೇ ನೀರು ಕುಡಿಯುವುದು ರೂಢಿ. ಇದರಿಂದ ಅರೋಗ್ಯವು ಕೆಡುವುದಲ್ಲದೆ ಹೆಚ್ಚಿನ ಅನಾರೋಗ್ಯಕ್ಕೆ ಕಾರಣವಾಗುತ್ತಿದೆ. ಆದುದರಿಂದ ಪ್ರತಿಯೊಂದು ಹಳ್ಳಿಗೂ ಸಾರ್ವಜನಿಕವಾದ ಬಾವಿಯು ಬೇಕಾಗಿದೆ. ಪ್ರತ್ಯೇಕ ಮೂರು ಪಂಚಾಯತುಗಳು ರೂ. ೧೪೧೧—೨—೦ ಸರಕಾರೀ ಸಹಾಯ ಪಡೆದು (ಇದು ಅರ್ಧ ಸಹಾಯ) ಮೂರು ಬಾವಿಗಳನ್ನು ಏರ್ಪಡಿಸಿಯವೆ. ಮತ್ತು ಇನ್ನು ಮೂರು ಪಂಚಾಯತುಗಳಲ್ಲಿ ೩೮೦—೧೧—೦ ಖರ್ಚಿನ ೩ ಬಾವಿಗಳ ಕಾಮಗಾರಿಯು ನಡೆಯುತ್ತಿದೆ. ಅಲ್ಲದೆ, ಎಸ್ಟಿಮೇಟಾಗಿ ಕೆಲಸಕ್ಕೆ ಪ್ರಾರಂಭಿಸಲಿಕ್ಕಿರುವ ಬಾವಿಗಳ ವಿವರ ನೋಡಿರಿ. ಧರ್ಮಸ್ಥಳ, ಮುಂಡಾಜೆ ಕಳಿಯ, ಬಂಗಾಡಿ, ಕಡಿರುದ್ಯಾವರ ಈ ಐದು ಗ್ರಾಮಗಳಲ್ಲಿ ೫೭೫೦/- ರೂಪಾಯಿ ಖರ್ಚಿನ ಐದು ಬಾವಿಗಳು. ಎಸ್ಟಿಮೇಟಿನ ಬಗ್ಗೆ ೯ ಗ್ರಾಮಗಳಿಂದ ೧೦ ಬಾವಿಗಳ ಬಗ್ಗೆ ಕೇಳಿಯದೆ. ಇದರ ಅಂದಾಜು ಖರ್ಚು ೮೩೦೦/- ರೂಪಾಯಿ ಆದೀತು.

ಆರೋಗ್ಯ ವಿಭಾಗದಲ್ಲಿ ಮುಂಡಾಜೆಯಲ್ಲಿ ಮಾತ್ರ ಸ್ವಲ್ಪ ಮಟ್ಟಿನ ಕೆಲಸ ಮಾಡಿದ್ದು ತೋರುತ್ತದೆ. ಅಲ್ಲದೆ, ಸರಕಾರದಿಂದ ವರ್ಷ ೧೮ ೫೦೦/, ರೂಪಾಯಿ ಸಹಾಯವನ್ನು ವೈದ್ಯರ ವೇತನಕ್ಕಾಗಿ ಪಡೆದು, ಔಷಧಿ ಖರ್ಚನ್ನು ಗ್ರಾಮಸ್ಥರ ಔದಾರ್ಯದಿಂದ ಸಂಗ್ರಹಿಸಿ ನಡೆಯುತ್ತಿರುವ 'ರೂರಲ್ ಡಿಸ್ಪೆನ್ಸರಿ' ಒಂದು ಉಂಟು. (ರೂ. ೫೦೦/ರಷ್ಟು ಖರ್ಚಾಗುವ ಸ್ವಂತ ಕಟ್ಟಡವು ತಯಾರಾಗುತ್ತಿದೆ) ಬಂಗಾಡಿ ಮತ್ತು ಧರ್ಮಸ್ಥಳದಲ್ಲೂ ರೂರಲ್ ಡಿಸ್ಪೆನ್ಸರಿಗಾಗಿ ಕೇಳಿದ್ದಾರೆ.

ಗ್ರಾಮ ಸ್ವರಾಜ್ಯ, ದೀಪಸ್ತಂಭ ಪ್ರಚಾರದಲ್ಲಿ ಈ—೩ ಪಂಚಾಯತಗಳು ವ್ಯವಸ್ಥೆ ಮಾಡಿವೆ. 4 ಪಂಚಾಯತಗಳ ಸ್ವಾಧೀನ ೯ ಗಾಡಿಚೌಕಗಳೂ, ಬೆಳ್ತಂಗಡಿಯಲ್ಲಿ ಸಂತೆಕಟ್ಟೆಯೂ ಇವೆ. ಪಂಚಾಯತ ಬೋರ್ಡುಗಳಿಗೆ ಬೆಳ್ತಂಗಡಿಯ ಹೊರತು ಬೇರಾವ ಬೋರ್ಡಿಗೂ ಸ್ವಂತದ ಕಟ್ಟಡವಿಲ್ಲ. ಸತ್ಯಪ್ರದರ್ಶನದಲ್ಲಿ ಇದೇ ಕೊರತೆಯೆಂದು ತೋರಬಹುದು. ಆದರೆ, ಸಿಗುವ ಕಾಸು ದುಗ್ಗಾಣಿಗಳನ್ನು ಕೂಡಿಸಿ ಇಟ್ಟು ಬಾಡಿಗೆ ಗ್ರಾಮಗೇಟಿನ ಹೋಗುವುದೇ ಪ್ರಸ್ತುತ ಸ್ಥಿತಿಯಲ್ಲಿ ಇಷ್ಟವಲ್ಲದ ದೊಡ್ಡ ಭವನವನ್ನು ಕಟ್ಟಿಸಿಯಲ್ಲವೆಂದು ಧೈರ್ಯವಾಗಿ ಹೇಳಬಹುದು.

ಪಂಚಾಯತ ಬೋರ್ಡುಗಳ ಸದ್ಯದ ಕಾರ್ಯಕಲಾಪವು ಇದಕ್ಕಿಂತ ಮೇಲ್ಪಟ್ಟಿರುವುದಿಲ್ಲ. ಈ ಪಂಚಾಯತಗಳ (ಬೆಳತಂಗಡಿ ಡಿವಿಜನಿನ) ಸೂಪರ್‌ವೈಸರರಾದ ಶ್ರೀ ಯು. ರಾಘವೇಂದ್ರರಾಯರು ತಮ್ಮ ಸ್ವಾಭಾವಿಕ ಸ್ಫೂರ್ತಿಯಿಂದ ಪಂಚಾಯತಗಳ ಸುಧಾರಣೆಗಾಗಿ ದುಡಿಯುತ್ತಿರುವುದು ಹೆಚ್ಚಿನ ಆಶೆಗೆ ಕಾರಣವಾಗಿದೆ. ಈ ಪ್ರಾಂತ್ಯದ ಹಳ್ಳಿಗರಿಗೆ ತೀರ ಅಪರಿಚಿತವಾಗಿದ್ದ ಕಸಿ ಮಾಡಿದ ಗಿಡಗಳ ಉಪಯೋಗವನ್ನು ಕಲಿಸಿದುದರ ಶ್ರೇಯವು ಇವರಿಗೇ ಸಲ್ಲಬೇಕು. ಸ್ವಂತ ಜವಾಬ್ದಾರಿಯ ಮೇಲೆ ಬೇರೆ ಬೇರೆ ಕಸಿ ಶಾಲೆಗಳಿಂದ ತರಿಸಿ ಹಂಚಿದ ಗಿಡಗಳ ವಿವರವನ್ನು ನೋಡಿರಿ (ಯಥಾರ್ಥವಾದ ಪ್ರಯತ್ನಂದೇ ನನ್ನ ತಿಳುವಳಿಕೆ) ೨೧ ಗ್ರಾಮಗಳಲ್ಲಿ ಮಾವು ೨೫೧, ಚಿಕ್ಕು ೨೧, ತೆಂಗು ೨೨೩, ಅನನಾಸು ೫೦. ಈ ವಿಭಾಗದಲ್ಲಿ ಅವರು ಇನ್ನಷ್ಟು ಶ್ರದ್ಧೆಯಿಂದ ದುಡಿದರೆ ಹಳ್ಳಿಗರಿಗೆ ಇನ್ನಷ್ಟು ಉಪಕಾರವಾಗಲಹುದಾಗಿ ಹೇಳಬಹುದು.

೧೯೩೩ನೇ ಇಸವಿಯಿಂದ ಈ ತನಕದ ಪಂಚಾಯತಗಳ ಸಂಕ್ಷಿಪ್ತ ಅವಲೋಕನವನ್ನು ಮಾಡಿದುದಾಯಿತು. ವಾಚಕರು ಸಹಜವಾಗಿಯೇ ಇದರಿಂದ ಇಷ್ಟವಾದ ಬೋಧವನ್ನು ಪಡೆಯದೆ ಇರಲಿಕ್ಕಿಲ್ಲ. ನಾನೀವರೆಗೇನೊ ಏನು ಮಾಡಿದರೆಂಬುದಿಷ್ಟನ್ನೇ ಹೇಳಿದೆ. ಆದರೆ, ಇದರ ಜೊತೆಗೆ ಪಂಚಾಯತ ಬೋರ್ಡುಗಳು ಮತ್ತು ಅದರ ಹಿತಚಿಂತಕರು ಯಾವ ರೀತಿಯಲ್ಲಿ ಇನ್ನಷ್ಟು ಕಾರ್ಯಭಾರವನ್ನು ಹೆಚ್ಚಿಸಿಯಾದರೂ ಸುಶಿಕ್ಷಿತರ ಲಕ್ಷ್ಯವನ್ನು ಈ ಕಡೆಗೆಳೆದು ತಮ್ಮ ಸ್ಥಾನವನ್ನು ಭದ್ರಪಡಿಸಬೇಕೆಂಬುದನ್ನು ವಿವರಿಸುವುದು ಪ್ರಸ್ತುತ ಅಗತ್ಯವಿಲ್ಲ. ಆದರೆ ಪಂಚಾಯತ ಬೋರ್ಡುಗಳ ಕೆಲಸವೆಂದರೆ 'ಎಡಿಷನಲ್ ಡ್ಯೂಟಿ'ಯೆಂದು ತಿಳಿದು ಡಿಸ್ಟ್ರಿಕ್ಟ್ ಬೋರ್ಡು ನೌಕರರು ಪಂಚಾಯತಗಳನ್ನು ಕೆಲವೊಮ್ಮೆ ಅಲಕ್ಷಿಸಿ ಬಿಡುತ್ತಾರೆ. ಇದರಿಂದ ಪಕ್ಕನೆ ಅವರ ಇಂಗ್ಲಿಷ್ ಮರ್ಜಿಯು ಹಳ್ಳಿಗರನ್ನು ದುರುಕಗೊಳಿಸುತ್ತದಾದರೂ, ಅವಶ್ಯಕವಾದ ಗ್ರಾಮಾಭಿವೃದ್ಧಿಯು ಅಲ್ಲೇ ಕಡೆಯಲ್ಪಡುತ್ತದೆ. ಪಂಚಾಯತದ ಯಜಮಾನರಿಗೆ ಇಂಗ್ಲೀಷ್ ಬಾರದಿರುವುದು ದೊಡ್ಡ ಅವಾಂತರ. ಇದಕ್ಕಾಗಿ ಮೇಲಧಿಕಾರಿಗಳು ದೇಶಭಾಷೆಯಲ್ಲೇ ಪಂಚಾಯತಗಳೊಡನೆ ವ್ಯವಹಾರವಿಡಬೇಕು. ಇಲ್ಲದಿದ್ದರೆ ವಿನಾ ಸಾಧ್ಯವಿಲ್ಲವೆಂದೇ ಫಲಶ್ರುತಿ ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಹಲವು ಜವಾಬ್ದಾರ ಪತ್ರಕಾರರಿದ್ದಾರೆ. ಆದರೆ ಅವರ ಪತ್ರಿಕೆಯ ಪುಟಗಳೆಲ್ಲವೂ ನಾಗರಿಕ ವೃತ್ತಾಂತಕ್ಕಾಗಿಯೇ ಉಪಯೋಗಿಸಲ್ಪಡುತ್ತವಲ್ಲದೆ, ಈ ಕಡೆಗೆ ಗಮನ ಕೊಡುವುದಿಲ್ಲ. ನೆರೆನಾಡಿನ ಅಥವಾ ಬೇರೆ ದೇಶದ ಜವಾಬ್ದಾರ ಪತ್ರಿಕೆಗಳನ್ನು ನೋಡಿರಿ—ಗ್ರಾಮ ಪಂಚಾಯತದಂತಹ ಗ್ರಾಮಾಭಿವರ್ಧಕ ಸಂಸ್ಥೆಗಳ ಕುರಿತು, ಸೂಚನೆಗಳೋ, ಅವುಗಳ ವಿಮರ್ಶೆಗಳೋ ಕಂಡು ಬರುತ್ತವೆ. ನಮ್ಮೂರಿನ ಪತ್ರಿಕೆಗಳೂ ಈ ಹಳ್ಳಿ ಹರಟೆಯ ಕಡೆಗೆ ದೃಷ್ಟಿಯಿಡಬೇಕು. ಅವುಗಳ ಇಷ್ಟಾನಿಷ್ಟಗಳನ್ನು ನಾಗರಿಕ ಪ್ರಪಂಚದೆದುರು ತಂದು ತೋರಿಸಬೇಕು. ಸುಶಿಕ್ಷಿತರ ಮನಸ್ಸಿಗೆ ಹಳ್ಳಿಗಳ ಸ್ಥಿತಿಯು ಗೊತ್ತಾಗುವಂತೆ ಮಾಡಲು, ಸರಕಾರದ ಗಮನವನ್ನು ಹಳ್ಳಿಗಳ ಕಡೆಗೆಳೆಯಲು ಪತ್ರಿಕಾ ಸಾಧನಕ್ಕಿಂತ ಬೇರೊಂದಿಲ್ಲವೆಂಬುದನ್ನು ಎಲ್ಲರೂ ಬಲ್ಲರು.

ಸಾಂಖ್ಯತ

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No 614/32. R. I. A. 704/33

ವಾದಿರಾಜಾಚಾರ್ಯ—ವಾದಿ.

ಮತ್ತು

ಕುಂಜಿಬೆಟ್ಟು ವ್ಯಾಸಾಚಾರ್ಯರ ಕೂಡ್ಯ-ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ 1-2-3-4ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಸದರಿ ವಾದಿಯು ಸದರಿ ಪ್ರತಿವಾದಿರ ಮೇಲೆ ಪಡೆದ ಸದರಿ ಕ್ರಮ ನಂಬ್ರ 614/32ನೇ ಡಿಕ್ರಿಯನ್ನು ಫೈನಲ್ ಮಾಡಬೇಕಾಗಿ ಸದ್ರಿ ವಾದಿಯು ಕೊಟ್ಟ ಸದರಿ ಕೋರ್ಟಿನ R. I. A. 704/33ನೇ ಅರ್ಜಿಯು ತಾ. 11—1—1934ಕ್ಕೆ ತನ್ನಿಗೆ ಇಟ್ಟಿದೆ. ಈ ಕುರಿತು ಆಕ್ಷೇಪ ಇದ್ದರೆ ಸದ್ರಿ 1ನೆ ಪ್ರತಿವಾದಿ ವ್ಯಾಸಾಚಾರ್ಯ, 2ನೆ ಪ್ರತಿವಾದಿ ರಾಮಚಂದ್ರಾಚಾರ್ಯ, 3ನೆ ಪ್ರತಿವಾದಿ ಪದ್ಮನಾಭಾಚಾರ್ಯ, 4ನೆ ಪ್ರತಿವಾದಿ ವೆಂಕಟಕೃಷ್ಣಾಚಾರ್ಯ ಕೂಡಾ ತಾ. 11—1—34ನೆ ದಿವಸ ಹಗಲು 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದರಿಯವರ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ಪ್ರಕಟಿಸೋಣಾಗಿದೆ.

ಉಡುಪಿ, 4—12—33

M. Vittal Kamath, B.A. B.L.
Vakil for Plaintiff

ನೋಟೀಸು

[illegible]

O. P. 104/33

[illegible] 10-12-33 [illegible] 10 [illegible]

ಆಗುವುದು.

ಕುಂದಾಪುರ } K Vittaldas Shenai.
1-12-33 } Advocate for Petitioners

ನೋಟೀಸು

ಕಾರ್ಕಳ ತಾಲೂಕು ಕಡಂದಲೆ ಗ್ರಾಮದ, ಕುಲ್ಯಾಡಿ ಬಿಳ್ಳ ಪೈಗಳವರ ಮಗ ಸಂಜೀವ ಪೈಯು ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ಬಂಟ್ವಾಳಪೇಟೆ ಕಮ್ಮಾರ ಓಣಿಯಲ್ಲಿರುವ ಅರ್ಲ ಕೃಷ್ಣ ನಾಯ್ಕರ ಮಗಳು ನನ್ನ ಹೆಂಡತಿಯಾಗಿದ್ದ ಮೋಹಿನಿ ಎಂಬವಳನ್ನು ನಾನು ಸಂಪೂರ್ಣ ಬಿಟ್ಟುಬಿಟ್ಟ ವಿಷಯವು ಕಳೆದ ತಾ. 8-11-33ನೇ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ನೋಟೀಸು ಮೂಲಕ ತಿಳಿಸಿರುತ್ತೇನೆ. ಸದರಿ ಮೋಹಿನಿಯಲ್ಲಿ ಕಳೆದ ತಾ 15—3—33ರಲ್ಲಿ ನನಗೆ ಹುಟ್ಟಿದ ಬಾಲಕೃಷ್ಣ ಎಂಬ ಗಂಡು ಮಗುವಿಗೆ ನಾನು ಸಂಪೂರ್ಣ ವಾರಿಸುದಾರನೂ ವ ಹಕ್ಕುದಾರನೂ ಆಗಿರುತ್ತೇನೆ. ಸದರಿ ಬಾಲಕೃಷ್ಣಗೆ ನನ್ನ ಸ್ವಾಧೀನತೆಗೆ ಕಳುಹಿಸಿಕೊಡಬೇಕಾಗಿಯೂ ಆ ಮಗುವಿಗೆ ಸರಿಯಾದ ಅನುಕೂಲತೆಗಳಿಂದ ಯೋಗ್ಯ ರೀತಿಯಲ್ಲಿ ಪೋಷಿಸಲು ನಾನು ಸಿದ್ಧನಿದ್ದೇನೆ ಎಂತ ವಗೈರೆ ಕಾಣಿಸಿ ಕಳೆದ ತಾ. 22-11-33 ರಲ್ಲಿ ಸದರಿ ಮೋಹಿನಿಗೂ ವ ಇವಳ ತಂದೆ ಅರ್ಲ ಕೃಷ್ಣ ನಾಯ್ಕರಿಗೂ ಬೇರೆ ಬೇರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ತಿಳಿಸಿದರೂ ಸದರಿ ಬಾಲಕೃಷ್ಣ ಎಂಬ ಮಗುವನ್ನು ಕಳುಹಿಸಿ ಕೊಡದೆ ಇದ್ದುದರಿಂದ ಸದರಿ ಬಾಲಕೃಷ್ಣನನ್ನು ದಾವಾ ಮೂಲಕ ನಾನು ಸ್ವಾಧೀನ ಪಡಿಸಿಕೊಳ್ಳುವ ತನಕ ತನ್ನ ಸ್ವಇಚ್ಛೆಯಂತೆ ದುರ್ನಡತೆ ವಿಷಯ ತನ್ನ ಸ್ನೇಹಿತರ ದುರ್ಬೋಧನೆಗೆ ಒಳಪಟ್ಟು ಸದರಿ ಮೋಹಿನಿಯಿಂದಾಗಲೀ ಅಥವಾ ಬೇರೆ ಯಾರಿಂದಾಗಲೀ ಸದರಿ ಬಾಲಕೃಷ್ಣಗೆ ಉಂಟಾಗಬಹುದಾದ ತೊಂದರೆಗಳಿಂದ ಯಾವ ವಿಧದ ಅಪಾಯಗಳು ಬಂದು ಸಂಭವಿಸಿದ್ದಾದರೆಯೂ, ಅಥವಾ ಮತ ಧರ್ಮಕ್ಕೆ ವಿರುದ್ಧವಾಗಿ ಜಾತಿಭಿನ್ನತೆಯಾಗಗೊಟ್ಟರೆ ಸಹ ಸದರಿ ಬಾಲಕೃಷ್ಣನನ್ನು ಮೋಹಿನಿಯಿಂದಾಗಲೀ ಅಥವಾ ಬೇರೆ ಯಾರಿಂದಾಗಲೀ ಯಾರಾದರೂ ಯಾವ ವಿಧದಿಂದಲೂ ಪಡಕೊಳ್ಳಕೂಡದಾಗಿಯೂ, ಇದಕ್ಕೆ ವಿರುದ್ಧವಾಗಿ ನಡಕೊಂಡರೆ ಸದರಿ ಮೋಹಿನಿಯು ವ ಇವಳಿಗೆ ದುರ್ಬೋಧಿಸಿ ನಮ್ಮಲ್ಲಿಂದ ಮಗು ಸಮೇತ ಹೊರಡಿಸಿಕೊಂಡು ಹೋಗಿರುವ ಸದ್ರಿ ಮೋಹಿನಿಯ ತಂದೆ ಅರ್ಲ ಕೃಷ್ಣ ನಾಯ್ಕರೂ, ಅಕ್ಕ ಅವಳಾ ಬಾ ಮತ್ತು ಸದರಿ ಮಗುವನ್ನು ಯಾರಾದರೂ ಪಡಕೊಂಡರೆ ಅವರೂ ಸಹ ಸದರಿ ಮಗುವಿನ ಸಂಬಂಧ ನಾನು ಮಾಡುವ ಕ್ರಿಮಿನಲ್ ವ್ಯವಹರಣೆಯ ಶಿಕ್ಷೆಗೆ ಒಳಪಡಬೇಕಾಗಿ ದೀತು ಎಂತಲೂ, ಸದರಿ ಮಗುವಿನ ಬಾಬ್ತು ಸಹ ಯಾವ ವಿಧದ ಜೀವನಾಂಶ ನನ್ನಿಂದ ಸಿಕ್ಕದೀತೆಂತ ಹೇಳುವರೆ ಸದರಿ ಮೋಹಿನಿಗೆ ಯಾವ ವಿಧದ ಹಕ್ಕು ಸಂಬಂಧಗಳು ಇರುವುದಿಲ್ಲ ಎಂತ ಸಹಾ ಈ ಮೂಲಕ ತಿಳಿಸಿರುತ್ತೇನೆ.

ಕಡಂದಲೆ, } ಸಂಜೀವ ಪೈ ರುಜು
೧-೧೨-೧೯೩೩ }

ಸ್ವದೇಶಾಭಿಮಾನಿಗೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ

ಉತ್ಸಾಹೀ ಏಜಂಟರು

ಬೇಕು!

ಕೂಡಲೇ ಮೆನೇಜರರಿಗೆ ಬರೆಯಿರಿ.

ಒಂದು ಸುಂದರ ಕೂಸು

[illegible]

ಲೋಧ್ರಾ [illegible]

ನನ್ನ ಪತ್ನಿಗೆ ಉಪಯೋಗಿಸಿದೆನು. ಅದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು.

ವಿ. ನಟರಾಜ ಮೊದಲಿಯಾರ್,
ಸ್ಯಾನಿಟರಿ ಇನ್ಸ್‌ಪೆಕ್ಟರ್,
ನಾಮಕ್ಕಲ್ [illegible], ಮದುರಾ.

ನಿಮ್ಮ ಕೆಮಿಸ್ಟರರ ಹತ್ತಿರ ಕೇಳಿರಿ.

ಅಥವಾ

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್, ಮದರಾಸು.

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,

ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರ ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬಯಿ.

ಬೆಂಗಳೂರು ಏಜಂಟ್ — ದಿ ಪ್ರೊಪರ್ [illegible] ಕಂಪೆನಿ [illegible] ಶ್ರೀನಿವಾಸಾಚಾರ ಸ್ಟ್ರೀಟ್
ಮದ್ರಾಸ್ ಸಂಸ್ಥಾನದ ಏಜಂಟ್ — ದಾಮೋದರ ಮತ್ತು ಕಂಪೆನಿ 78 [illegible] ರೋಡ್
ಮಂಗಳೂರು ,, ದಿ ಯುಲಿನ್ ವಾರ್ಟ್ [illegible] ಧಾರವಾಡ ಏಜಂಟ್ — ದಿ ಧಾರವಾಡ ಫಾರ್ಮಸಿ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ನಮ್ಮ ಕಲಹೆಯೇ ಸ್ವಾಧಾನ್ಯವಾಡದ್ದೆಂದು ತಿಳಿಯಬೇಡಿ.

[illegible]

ಜೀವಾಮೃತವು

[illegible]

ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

[illegible]

ಆಯುರ್ವೇದ ಔಷಧಾಶ್ರಮ [illegible] ಮದ್ರಾಸು.

[illegible] ಬೆಂಗಳೂರು.

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P No 104

ಯುರೋಪಿನಲ್ಲಿ ಯುದ್ಧದ ಭಯವಿದ್ದಿದೆ!!!

ಬ್ರಿಟನು 1000 ವಿಮಾನಗಳನ್ನು ರಚಿಸಲಿದೆ!

ಶ್ರೀಮತಿ ಕಸ್ತೂರಿಬಾಯಿಯವರಿಗೆ ಶಿಕ್ಷೆ

[illegible] ತೋರುತ್ತಿದೆ. [illegible] ತೋರುವದಿಲ್ಲ. [illegible] ಯುದ್ಧದ ಭಯವು ಯುರೋಪಿನಲ್ಲೆಲ್ಲ [illegible] ಮುಂದಾಗಿ ಎದ್ದು [illegible] ತಾ. ೨೩ನೇ ನವಂಬರದಲ್ಲಿ [illegible] ಸಭೆಯಲ್ಲಿ ಬ್ರಿಟನ ಗತಿಯನ್ನು [illegible] ವಿಮಾನ ಬಲದಲ್ಲಿ ಬ್ರಿಟನು ಎಲ್ಲಾ [illegible] ಹಿಂದಿರುವದರಿಂದ ತನಗೆ ಅಪಾಯ [illegible] ಯುದ್ಧೋಪಕರಣಗಳನ್ನು [illegible] ಅಗತ್ಯವೆಂದೂ ಸದಸ್ಯರು ಹೇಳಿದರು. [illegible] ಎಂಬವರು ಈ ವಿಷಯಕವಾಗಿ ದೀರ್ಘ [illegible] ಭಯ ಮತ್ತು ಸಂಶಯಗಳೇ [illegible] ಅವರು ಹೇಳಿರುವದೇ ನೆಂದರೆ [illegible] ಸಮಯದಲ್ಲಿ ವಿಮಾನ ಬಲದಲ್ಲಿ ಬ್ರಿಟನು ಎಲ್ಲರಿಗಿಂತಲೂ ಮುಂದಾಗಿದ್ದಿತು. ಆದರೆ ಈಗ [illegible] ಹಿಂದಾಗಿ ಐದನೇ ತರಗತಿಯಲ್ಲಿ ನಿಂತಿದೆ. ಫ್ರಾನ್ಸಿನಲ್ಲಿ ೧೫೦೦ ವಿಮಾನಗಳಿವೆ. ರಷ್ಯಾದಲ್ಲಿ ೧೩೦೦ರಿಂದ ೧೫೦೦ ವಿಮಾನಗಳಿವೆ. ಅಮೆರಿಕಾದಲ್ಲಿ ೧೦೦೦ದಿಂದ ೧೨೦೦ರ ವರೆಗೆ. ಇಟೆಲಿಯಲ್ಲಿ ೧೦೦೦ ವಿಮಾನಗಳಿವೆ. ಆದರೆ ಬ್ರಿಟನಿನಲ್ಲಿ ಬರೇ ೭೫೦ ವಿಮಾನಗಳಿವೆ. ಈ ರೀತಿಯ [illegible]ವನ್ನು ಬ್ರಿಟನು ಕೂಡಲೇ ತೊರೆದು ತನ್ನ ರಕ್ಷಣೆಗಾಗಿ ಸಾಕಷ್ಟು ವಿಮಾನಗಳನ್ನು ತಯಾರಿಸಬೇಕು. ಎಲ್ಲಾ ರಾಷ್ಟ್ರಗಳು ಸಮ್ಮತಿಸಿದರೆ ಮಾತ್ರ ಶಸ್ತ್ರತ್ಯಾಗ ಪರಿಪತ್ತು ಫಲಕಾರಿಯಾದೀತು. ಅದು ಹಾಗಿರದರೆ, ಸಮಸ್ತ ಪ್ರಪಂಚಕ್ಕೆ ಘೋರವಾದ ಹಾನಿಯಾಗಲಿದೆ.” ಲಂಡನ್‌ಡೆರಿಯವರು ಮುಂದುವರಿಸುತ್ತ “ಶಸ್ತ್ರಸನ್ಯಾಸ ಸಭೆಯ ಆಶಯಗಳು ನೆರವೇರಿ ಲೋಕದಲ್ಲಿ ಶಾಂತತೆಯು ನೆಲೆಗೊಳ್ಳಬೇಕೆಂದೇ ಬ್ರಿಟನಿನ ಆಶೆ. ಆದರೆ ಈಗಿನ ಪರಿಸ್ಥಿತಿಯನ್ನು ವಿಮರ್ಶಿಸುವಾಗ ಅಂತಹ ಆಶಯವು ನೆರವೇರುವದಿಲ್ಲವೆಂದೇ ತೋರಬರುತ್ತದೆ. ಬ್ರಿಟನಿನ ಸ್ಥಿತಿಯು ಇದೇ ರೀತಿಯಿಂದಿರಲು ಸರ್ವಥಾ ಬಿಡಬಾರದು” ಎಂದರು. ಡ್ಯೂಕ್ ಒಫ್ ಸದರ್‌ಲೇಂಡ್ “ಇವರು ಯುರೋಪಿನ ವಿಮಾನ ಬಲಕ್ಕೂ ಬ್ರಿಟನಿನ ವಿಮಾನ ಬಲಕ್ಕೂ ತಾರತಮ್ಯವುಂಟೇ?” ಎಂದು ಲಂಡನ್‌ಡೆರಿಯವರೊಡನೆ ಪ್ರಶ್ನಿಸಿದರು. ಇದಕ್ಕೆ ಉತ್ತರವಾಗಿ ಲಂಡನ್‌ಡೆರಿಯವರು ಪುನಃ ಹೇಳುತ್ತಾ “ಯುರೋಪಿನ ಎಲ್ಲಾ ರಾಷ್ಟ್ರಗಳು ವಿಮಾನ ನೌಕೆಗಳಲ್ಲಿ ಮುಂದರಿಯುತ್ತಿವೆ. ಆದರೆ ಬ್ರಿಟನ್ನು ಎಲ್ಲರಿಗಿಂತಲೂ ಹಿಂದಾಗಿ ನಿಂತಿದೆ. ರಾಷ್ಟ್ರಗಳೊಳಗೆ ಶಸ್ತ್ರಸಿದ್ಧತೆಯ ಸ್ಪರ್ಧೆಯು ನಡೆಯುತ್ತಿದೆ. ಈ ಅಭ್ಯಾಸವನ್ನು ನಿಲ್ಲಿಸಬೇಕು. ಇದು ಮಹಾ ಅಪಾಯಕರವಾಗಿರುತ್ತದೆ. ಬ್ರಿಟನಿನ ಮನಸ್ಸಿಲ್ಲ ಈಗ ಶಸ್ತ್ರತ್ಯಾಗ ಪರಿಷತ್ತಿನ ಕಡೆಗಿದೆ. ಯಾವ ಜನಾಂಗವೂ ತನ್ನ ಶಸ್ತ್ರ ಬಲದ ಕುರಿತು ಬಹಿರಂಗ ಪ್ರಕಟಣೆಯನ್ನು ಮಾಡಿರುವದಿಲ್ಲ. ಆದರೆ ಫ್ರಾನ್ಸ್ ಮತ್ತು ಬ್ರಿಟನುಗಳ [illegible] ಸಂಖ್ಯೆಯು ಸಿಗುತ್ತಿವೆ. ಈಗ ಬ್ರಿಟನಿನಲ್ಲಿ [illegible] ವಿಮಾನಗಳಿವೆ. ಫ್ರಾನ್ಸಿನಲ್ಲಿ ೧೫೦೦ ವಿಮಾನಗಳಿವೆ. ಮತ್ತೆಲ್ಲಾ ರಾಷ್ಟ್ರಗಳು ಈ ಸಂಖ್ಯೆಗಿಂತ ಮೇಲೆಯೇ ಇವೆ. ಎಂದರು. ಶಸ್ತ್ರಗಳನ್ನು ತ್ಯಾಗ ಮಾಡಿ ಬ್ರಿಟನು [illegible] ರಾಷ್ಟ್ರಗಳಿಗೆ ಮಾದರಿಯಾಗಿ ನಡೆದರೂ ಯಾವ ರಾಷ್ಟ್ರವೂ [illegible] ಗಮನಿಸದೆ, ತನ್ನ ಸ್ವೇಚ್ಛಾನುಸಾರವಾಗಿ ಯುದ್ಧ[illegible]ಗಳನ್ನು ಹೆಚ್ಚಿಸಿಕೊಂಡು ಹೋಗಿರುವದು. ಯುದ್ಧದ [illegible]ದಾಗಿಯೇ ಎಂದು ಲಂಡನ್ ಡೆರಿಯವರ ಹೇಳಿಕೆ. [illegible] ರಾಷ್ಟ್ರಗಳು ಹಾಗೆಯೇ ಮಾಡುತ್ತಿದ್ದರೆ ಬ್ರಿಟನು ತನ್ನ [illegible] ವಿಮಾನ ಬಲವನ್ನು [illegible] ಹೇಳಿದರು. [illegible] ಯುದ್ಧದ ಭಯ[illegible] [illegible]

ಶ್ರೀದಿದ್ದಾನೆ. ಸರಕಾರಿ ಪಕ್ಷೀಯರೆಲ್ಲ ನಾಜಿಗಳ ಪಾರ್ಟಿಗೆ ಸೇರಿರುತ್ತಾರೆ. ಹೆರ್ ಹಿಟ್ಲರನ ಪ್ರತಿನಿಧಿಯಾಗಿ ಹೆರ್ ರೂಡೋಲ್ಫ್ ಎಂಬವನಿದ್ದು ಎಲ್ಲಾ ಕೂಲಿಗಾರ ಸಂಘಗಳನ್ನೂ ಕೈಗಾರಿಕಾ ಸಂಸ್ಥೆಗಳ ಕೆಲಸಗಾರರನ್ನೂ ಒಂದುಗೂಡಿಸಿ, ಎಲ್ಲರೂ ನಾಜಿಗಳಾಗಬೇಕೆಂದೂ ಲೇಬರ್ ಫ್ರಂಟ್ ಎಂಬ ಮಹಾಸಭೆಗೆ ಸೇರಬೇಕೆಂದೂ ಆಜ್ಞಾಪಿಸಿರುತ್ತಾನೆ. ಹೀಗಾಗಿ ಅಲ್ಲಿಯ ಕೆಲಸಗಾರರು ಹೆರ್ ಹಿಟ್ಲರನ ಕೈ ವಶರಾಗುತ್ತಿದ್ದಾರೆ. ಲಂಡನಿನ ರೋಯಲ್ ಏಯರ್ ಪೋರ್ಸ್‌ನಲ್ಲಿ ಸೈನಿಕರಿಗೆ ರಾತ್ರಿಯಲ್ಲಿ ಗುಂಡು ಹಾರಿಸುವ ತರಬೇತಿಯನ್ನು ಕೊಡಲಾರಂಭಿಸಿರುತ್ತಾರೆ. ಹಲವು ಫರ್ಲಂಗುಗಳಲ್ಲಿ ದೂರ ನಿಂತು ರಾತ್ರಿ ವಿದ್ಯುತ್ ಶಕ್ತಿಯಿಂದ ಬೆಳಗುತ್ತಿರುವ ಗುಡಾಣಕ್ಕೆ ವೈಮಾನಿಕ ಬಲದ ಸೈನಿಕರು ಗುಂಡು ಹಾರಿಸಿ ತಮ್ಮ ಸಾಮರ್ಥ್ಯವನ್ನು ತೋರಿಸುತ್ತಿರುವರು. ಆಕಾಶದಲ್ಲಿ ಹಾರುವ ವಿಮಾನಗಳಿಗೂ ಬೆಳಕು ಹಾರಿಸಿ ಅವುಗಳಿಗೆ ಗುರಿಯಿಟ್ಟು ತರಬೇತಿ ಪಡೆಯುತ್ತಿರುವರು.

ಶ್ರೀಮತಿ ಕಸ್ತೂರಿಬಾಯಿಯವರಿಗೆ ಶಿಕ್ಷೆ.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು, ಶ್ರೀ ವಲ್ಲಭಬಾಯಿ ಪಟೇಲರ ಪುತ್ರಿ ಕುಮಾರಿ ಮಣಿ ಬೆನ್ ಪಟೇಲರೊಡನೆ ಕೆಲವರನ್ನು ಕೂಡಿಕೊಂಡು ಅಹ್ಮದಾಬಾದಿಗೆ ತೆರಳುತ್ತಿದ್ದಾಗ ಕೈದು ಮಾಡಲ್ಪಟ್ಟರು. ನದಿಯಾದ್ ಸ್ಟೇಶನಿಗೆ ರೈಲು ತಲಪುತ್ತಲೇ ಆರೇಳು ಜನ ಪೋಲೀಸರು ಅವರ ಬಳಿಗೆ ಹೋಗಿ ಅವರನ್ನು ಕೈದು ಮಾಡಿ ಒಂದು ಬಸ್ಸಿನಲ್ಲಿ ಅವರನ್ನು ಕುಳ್ಳಿರಿಸಿ ಆನಂದ ಎಂಬಲ್ಲಿಗೆ ಕೊಂಡೊಯ್ದರು. ಅವರನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೆದುರು ನಿಲ್ಲಿಸಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಅವರ ವರ್ತನೆಯ ಕುರಿತು ವಿಚಾರಿಸಿದಾಗ, ಅವರು ತಾವು ಕೊಂಗ್ರೆಸ್ಸಿನ ಕೆಲಸಕ್ಕಾಗಿ ರಾಸ್ ಜಿಲ್ಲೆಗೆ ಹೋಗಬೇಕೆಂದು ಹೊರಟಿದ್ದೇವೆ ಎಂದರು. ಇದನ್ನು ಕೇಳಿ ಅವರೆಲ್ಲರೂ ಒಂದು ತಿಂಗಳು ಮಟ್ಟಿಗೆ ಖೈರಾ ಜಿಲ್ಲೆಗೆ ಹೋಗಬಾರದೆಂಬ ಆಜ್ಞೆಯನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಮುಂದಿಟ್ಟರು. ಇದನ್ನುಲಂಘಿಸಿದುದಕ್ಕಾಗಿ ಅವರೆಲ್ಲರನ್ನೂ ಪುನಃ ಕೈದು ಮಾಡಿ ಸೆರೆಯಲ್ಲಿಟ್ಟರು.

ತಾ. ೫—೧೧—೧೯೩೩ನೇ ದಿನ ಶ್ರೀ ಕುಮಾರಿ ಮಣಿ ಬೆನ್ನರ ವಿಚಾರಣೆಯು ಖೈರಾದ ಮೆಜಿಸ್ಟ್ರೇಟರಲ್ಲಿ ನಡೆಯಿತು. ವಿಚಾರಣೆಯಲ್ಲಿ ಅವರು ಭಾಗವಹಿಸಲಿಲ್ಲ. ಅವರನ್ನು ಮುಂಬಾಯಿ ಸ್ಪೆಶಲ್ ಅಧಿಕಾರ ಶಾಸನದ ಮೇರೆಗೆ ೧೫ ತಿಂಗಳ ಕಠಿಣ ಸಜೆಗೆ ಗುರಿ ಪಡಿಸಿದರು. ಬಿ. ಕ್ಲಾಸಿಗೆ ಅವರನ್ನು ವರ್ಗಾಯಿಸಿ ಸಬರ್ಮತಿ ಆಶ್ರಮಕ್ಕೆ ಕೊಂಡೊಯ್ದರು. ಶ್ರೀಮತಿ ಗಾಂಧಿಯವರು ಕಳೆದ ಆಗೋಸ್ತು ತಿಂಗಳಲ್ಲಿ ೬ ತಿಂಗಳುಗಳ ಶಿಕ್ಷೆಗೆ ಗುರಿಯಾಗಿದ್ದರೂ, ಆ ಶಿಕ್ಷೆಯಲ್ಲಿ ೧೫ ದಿನಗಳನ್ನು ಮಾತ್ರ ಅನುಭವಿಸಿರುವುದರಿಂದ ಮಿಕ್ಕುಳಿದ ೫½ ತಿಂಗಳುಗಳ ಶಿಕ್ಷೆಯನ್ನು ಈ ಸಲ ಅನುಭವಿಸಬೇಕೆಂದು ಆಜ್ಞೆಯಾಗಿದೆ. ಆದುದರಿಂದ ಅವರ ವಿಚಾರಣೆಯಾಗದೆ, ಅವರ ಮೊದಲಿನ ತಕ್ಷೀರಿನ ೫½ ತಿಂಗಳುಗಳನ್ನೇ ಅನುಭವಿಸಿದರೆ ಸಾಕೆಂದು ಮುಂಬಾಯಿ ಸರಕಾರವು ಅಭಿಪ್ರಾಯ ಪಟ್ಟಿದೆ. ಅವರನ್ನು ಸಬರ್ಮತಿ ಜೈಲಿಗೆ ಕೊಂಡೊಯ್ದರು. ಈ ವಿಚಾರವಾಗಿ ಹಿಂದೂ ಪತ್ರಿಕೆಯು ತನ್ನ ಅಗ್ರ ಲೇಖನದಲ್ಲಿ ಬರೆಯುತ್ತಾ “ಶ್ರೀಮತಿ ಗಾಂಧಿಯವರ ವಿಷಯದಲ್ಲಿ ಮುಂಬಾಯಿ ಸರಕಾರದ ಆಚರಣೆಯು ನಿಜವಾಗಿಯೂ ಸ್ವೇಚ್ಛಾ ರೀತಿಯದಾಗಿದೆ. ಶ್ರೀಮತಿ ಗಾಂಧಿ ಮತ್ತು ಮಣಿ ಬೆನ್ ಪಟೇಲರು ಖೈರಾ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಪ್ಪಣೆಯನ್ನುಲ್ಲಂಘಿಸಿದುದಕ್ಕಾಗಿ ಕೈದು ಮಾಡಲ್ಪಟ್ಟರು. ಮಣಿ ಬೆನ್ನರನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ವಿಚಾರಣೆಗೊಳಗು ಮಾಡಿ ಅವರಿಗೆ ೧೫ ತಿಂಗಳುಗಳ ಕಠಿಣ ಸಜೆಯನ್ನು ವಿಧಿಸಿದರು. ಶ್ರೀಮತಿ ಗಾಂಧಿಯವರನ್ನು ಯಾವ ತಕ್ಷೀರಿಗೂ ಗುರಿಪಡಿಸದೆ, ಅವರ, ಮೊದಲಿನ ಬಾಕಿ ಶಿಕ್ಷಾವಧಿಯನ್ನು ಅವರು ಅನುಭವಿಸಬೇಕೆಂದು ಆಜ್ಞೆಯಾಗಿದೆ. ಗಾಂಧಿಜೀಯವರ ೨೧ ದಿನಗಳ ಉಪವಾಸ ವೇಳೆ ಶ್ರೀಮತಿಯವರು ೧೫ ದಿನಗಳ ಶಿಕ್ಷೆಯ ಅವಧಿ ಅನುಭವ ಮೇಲೆ ಅವರನ್ನು ಬಿಡುಗಡೆ ಹೊಂದುವಾಗ ಬಾಕಿಯುರುವ ಪಾದ ೫½ ತಿಂಗಳುಗಳ ಶಿಕ್ಷೆಯನ್ನು ಪುನರುಜ್ಜೀವಿಸಲಾಗುವುದೆಂದು ಸರಕಾರವು ಹೇಳಿದ್ದಿಲ್ಲ. ಅಂತಹ ಹಕ್ಕನ್ನು ತಾನು ಇಟ್ಟುಕೊಳ್ಳುವೆನೆಂದೂ ಅದು ಹೇಳಿರುವುದಿಲ್ಲ. ಈಗ ಮಾತ್ರ ಅವರನ್ನು ಕೋರ್ಟಿನ ಮುಂದೆ ಹಾಜರು ಪಡಿಸದೆ ಶಿಕ್ಷೆಗೆ ಗುರಿಪಡಿಸಿರುವರು. ಅವರು ತಪ್ಪು ಮಾಡಿರುವರೆಂದ ಮೇಲೆ ಅವರನ್ನು ಕೋರ್ಟಿಗೆ ತರದೆ ಮೊದಲಿನ ಸವನದ ಮೇಲೆ ಶಿಕ್ಷೆಗೊಳಗು ಮಾಡುವುದೆಂದರೆ ಇದಕ್ಕೇನೆನ್ನುವುದು? ಹೀಗೆ ಮಾಡಿರುವುದರಿಂದ ಸರಕಾರವು ನ್ಯಾಯ ಹಾದಿಯಲ್ಲಿದ್ದರೂ ಕಾನೂನು ಪ್ರಕಾರವಿರುವ ಕೋರ್ಟನ್ನು ಅವರು ಅಲ್ಲಗಳೆದು ಸಾರ್ವಜನಿಕರಿಗೆ ಸಂಶಯದೋರುವಂತೆ ಮಾಡುವುದು ಹಿತವಲ್ಲ” ಎಂದು ಬರೆದಿದೆ.

ಮುಂಬಾಯಿಯಲ್ಲಿ ಇದೇ ತಿಂಗಳಲ್ಲಿ ಅಖಿಳ ಪಕ್ಷೀಯರ ಸಭೆಯೊಂದು ಶ್ರೀ ದೇವಧರ ಮತ್ತು ಶ್ರೀ ಎನ್ ಸಿ. ಕೇಳ್ಕರವರ ಮುಂದಾಳುತ್ವದಲ್ಲಿ ಜರಗಲಿದೆ. ಹಿಂದೂಸ್ಥಾನದ ದುರ್ಗತಿಯು ಎದ್ದು ಕಾಣುವುದರಿಂದ ಅದನ್ನು ಹೋಗಲಾಡಿಸುವುದಕ್ಕಾಗಿ ಎಲ್ಲರೂ ದುಡಿಯಬೇಕೆಂದು ಇವರ ಹೇಳಿಕೆ. ಸರಕಾರದೊಡನೆ ಇವರ ಕೇಳಿಕೆಗಳೇನೆಂದರೆ—“ಹಿಂದೂಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸ್ ಸಿಗುವಂತಾಗಬೇಕು. ಅದು ಹಿಂದೀಯರಿಗೆ ಯಾವಾಗ ಸಿಕ್ಕೀತೆಂದು ನಿರ್ಧಾರಪೂರ್ವಕ ಸಮಯಕೊಟ್ಟು ತಿಳಿಸಬೇಕು. ಸಂಸ್ಥಾನಿಕ ಮತ್ತು ಬ್ರಿಟಿಷ ಇಂಡಿಯದವರಿಗೆ ಸಮಾನ ರೂಪದ ಹಕ್ಕು ಬಾಧ್ಯತೆಗಳು ಸಿಗಬೇಕು. ಫೆಡರೇಶನ್ ಇದ್ದು ಅಥವಾ ಇಲ್ಲದೆ ಕೇಂದ್ರ ಜವಾಬ್ದಾರಿಕೆಯನ್ನು ಕೊಡಬೇಕು. ಗವರ್ನರ್ಸ್ ಮತ್ತು ಗವರ್ನರ್ ಜನರಲ್ ಅಧಿಕಾರವನ್ನು ಆದಷ್ಟು ನಿರ್ಬಂಧಿಸಬೇಕು. ಹಿಂದೀಸೈನ್ಯವನ್ನು ತರಬೇತುಗೊಳಿಸಬೇಕು. ರಾಜ್ಯದ ಆಡಳಿತದ ಅಧಿಕಾರವು ಹಿಂದೀಯ ನ್ಯಾಯ ವಿಧಾಯಕ ಸಭೆಗಳಲ್ಲಿರಬೇಕು.”

+ ++ +

ಬಹು ಕಾಲದ ಆವಶ್ಯಕತೆಗೆ

ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶಗುರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಧಂಧೆವಾದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್—ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಏಜೆಂಟ್ಸ್:—[illegible] ಕೊ., ಮಂಗಳೂರು.

Buy Indian

Be Indian

By Using

"LADCO"

Vegetable Toilet and Washing Soaps

FREE FROM ANIMAL FAT

Bath Soap, Glycerine Transparent Soap, Bar Soap Cubes, Cakes.

Agents for South Kanara, Malabar & Coorg—

PAI PHARMACY,

Car Street, MANGALORE.

Stockists:—

JAYAVANT SHANTARAM & BROS *Merchants*

Bunder, Mangalore, S K

1—9—33

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟ್ರಿಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ರಥಬೀದಿ, ಮಂಗಳೂರು

'ಸ್ವದೇಶಾಭಿಮಾನಿ'ಗೆ ಇಂದೇ ಚಂದಾದಾರರಾಗಿರಿ'

WANTED.

Four Organisers to organise the work of the South Indian General Assurance Society, Ltd, in the following places noted below Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur (4) Mangalore, Kolar

For terms and other particulars please apply to—

The Divisional Manager

The South Indian General Assurance Co Ltd

64 3rd Cross Road Srirampur Extn

Malleswaram Post BANGALORE

OR

The Managing Agents

The S I G A Co Ltd

55 Poonamallee High Road Kilpauk MADRAS

THE SOUTH INDIA CO-OPERATIVE INSURANCE SOCIETY LIMITED MADRAS

LOCAL BOARD.—

THE SOUTH CANARA CENTRAL CO OPERATIVE BANK LTD., MANGALORE

Applications are invited for Sub Agents from capable and energetic persons and Co-operative Institutions to canvass business on behalf of the Local Board of the Society at Mangalore

FOR TERMS APPLY TO—

The Secretary,

South Canara Central Co-operative Bank Ltd KODIALBAIL P O (Mangalore)

SOUTH CANARA.

Hydrocele and Hernia

'ಹೈಡ್ರೊಸಿಲ್' ಮತ್ತು ಅಂಡವಾಯುವಿಗೆ ಅಮೋಘ ಔಷಧಿ.

Akslr – A Fota ಎಂಬುದು ಹೈಡ್ರೊಸಿಲ್ ಮತ್ತು ಅಂಡವಾಯುವನ್ನು ಗುಣಪಡಿಸಲು ದಿವ್ಯೌಷಧ! ಒಪರೇಶನ್ ಅಗತ್ಯವಿಲ್ಲ. ಎಷ್ಟು ಕಾಲದ ರೋಗವೇ ಆಗಲಿ ಎಷ್ಟು ವಿಷಮರೋಗವೇ ಆಗಲಿ, ಅಂಡದಲ್ಲಿ ನೀರು ಗಟ್ಟಿ ಕಟ್ಟಲಿ, ಯಾವ ಮದ್ದಿನಿಂದಲೂ ಗುಣಮುಖ ಹೊಂದದಿರಲಿ, ಈ ಔಷಧವನ್ನು ಉಪಯೋಗಿಸಿದೊಡನೆ ಅಂಡದೊಳ ನೀರು ಹೊರಬಂದು ಹರ್ನಿಯಾವನ್ನು ಅದರ ಮೂಲ ಸ್ಥಿತಿಯಲ್ಲಿ ನಿಲ್ಲಿಸುತ್ತದೆ. ಈ ಔಷಧಿಯನ್ನು ಒಮ್ಮೆ ಸರಿಯಾಗಿ ಉಪಯೋಗಿಸಿದಲ್ಲಿ ಈ ಮಹಾರೋಗವು ದೃಢವಾಗಿ ಮಾಯವಾಗುತ್ತದೆ, ಇನ್ನೆಂದಿಗೂ ಕಾಣಿಸಿಕೊಳ್ಳುವುದೇ ಇಲ್ಲ. ಈ ಔಷಧವು ಒಂದು ಬಗೆಯ ಹುಡಿ (ಪೌಡರ್) ಯಾಗಿದೆ. ಅದನ್ನು ನೀರಿನೊಡನೆ ಕಲಸಿ ಅಂಡಕ್ಕೆ ಹಚ್ಚಬೇಕು. ಏಳೇ ಏಳು ದಿವಸಗಳೊಳಗೆ ಹೈಡ್ರೊಸೀಲನ್ನು ಗುಣಪಡಿಸುತ್ತದೆ. ಕ್ರಯ ಪಕೆಟಿಗೆ ರೂ 3 ಪೋ. 8 ಆಣೆ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Hamdard Dawakhana,

Kushak, MUTTRA.

ಸ್ವದೇಶಾಭಿಮಾನಿ

ಪತ್ರಿಕೆಯ ಚಂದಾದಾರರು ...

ಮಾರಾಟಕ್ಕಿವೆ ಮಾರಾಟಕ್ಕಿವೆ!

ಶಾಲೆ ಕ್ಲಾರ್ಕರಿಗೂ, ಕೋರ್ಟಿನವರಿಗೂ ಬೇಕಾಗುವಂತಹ

ಚರ್ ರೋಲ್ ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯ್ತಿ ದರವಿದೆ

ಕ್ರಯಕ್ಕು ಇತ್ಯಾದಿ ವಿವರಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮಾರ್ಥ ವೈದ್ಯ ಸಂಸ್ಥೆ,

ಡೊಂಗರಕೇರಿ ರಸ್ತೆ, ಮಂಗಳೂರು.

EDITED, PRINTED & PUBLISHED BY V S. KUDVA AT THE SHARADA PRESS, MANGALORE.

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ನ ಭೀಷಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲು ಸುರರಿಗೆ ಗರಳ ಮಥಿಸಲು ಸುರರಿಗದರಿಂ ಹೆದರುಹವಾಯಿತೆ ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಳವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ತುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

ಮಂಗಳೂರು ತಾ ೧೫ನೇ ಶುಕ್ರವಾರ ದಶೆಂಬರ ೧೯೩೩ (I5 – 12 – '33) ಸಂಚಿಕೆ ೪೯

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

ಹೆಡ್ ಆಫೀಸು: — ಉಡುಪಿ. ಶಾಖೆ – ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ 3,50,000- ಹಂಚಿ ಪಾಲಿಕೊಳ್ಳಲು ಅರ್ಪಿಸಿದ ವ ವಸೂಲಾದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST OCTOBER 1933.

	CAPITAL AND LIABILITIES.			PROPERTY AND ASSETS	
1	Paid up Capital	Rs. 2,25,000-0-0	1	Bank Premises, Buildings, Furniture etc.	Rs 66 920
2	Reserve and other funds	" 2,35,000-0-0	2	Investment on Gvt securities	" 3,00,560
3	Deposits	" 21,91,744 5-8	3	Authorised Investments	" 23,02 701
4	Due to Bankers	" 21,649- 2-3	4	Bills per contra	10 547
5	Sundries	" 84,330 2 6	5	Sundries	" 28,997
6	~~Bills per contra~~	" 10,547-3-9	6	Cash on hand & with bankers.	58 544
	Total	27,68,270-14 2		Total	27 68 270

UDIPI 6 – 11 – '33.

N. ANANDA RAO,
Secretary & Manager

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನ, ಕಷ್ಟಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಪಡಿಸುತ್ತದೆ ಎಲ್ಲಿಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಊರು ದೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ.

ಮದರಾಸು **ಮತ್ತು** **ಬೊಂಬಾಯಿ.**

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪನಿ.

ಓದಲಿಕ್ಕೂ, ಜಾಹೀರಾತು ಕೊಡುವುದಕ್ಕೂ
ಮಕ್ಕಳಿಗೂ, ದೊಡ್ಡವರಿಗೂ,
ರಿಗೂ, ಹೇಟಿಯವರಿಗೂ
ಇದ್ದವರಿಗೂ, ಇಲ್ಲದವರಿ
ಬೇಕಾದ,
ನಮ್ಮ, ನಿಮ್ಮ, ಎಲ್ಲರ, ಮತ್ತು
ಪತ್ರಿಕೆ
'ಸ್ವದೇಶಾಭಿಮಾನಿ'
27 ವರ್ಷಗಳ ನವತರು

REEL-12

SWADESHA BHIMANI

CONTD FROM:

10, SEPTEMBER-1932

TO

8 DECEMBER 1933

CONTD IN NEXT REEL

D.V.
28.3.80

MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI